GOVERNMENT OF TAMILNADU

ಕನ್ನಡ ಸಿರಿ

KANNADA READER

ಹತ್ತನೆಯ ತರಗತಿ

X STANDARD

Bcn_prkclr md Qafmmj Cbsa_rgml

Slrmsaf_`gjgrw gq Glfsk_l _lb _Apgkc

10th_Kannada_Reader1-5.indd 1 03-04-2019 14:07:49

Government of Tamil Nadu

First Edition - 2019

Reprint - 2020, 2021, 2022
2023, 2024

(Published under New Syllabus)

Content Creation

State Council of Educational
Research and Training

© SCERT 2019

Printing & Publishing

Tamil NaduTextbook and Educational
Services Corporation

www.textbooksonline.tn.nic.in

10th_Kannada_Reader1-5.indd 2 03-04-2019 14:07:49

ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ಪುಟಾಣಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.

10th_Kannada_Reader1-5.indd 3 03-04-2019 14:07:49

ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧೂ ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ.
ತವಶುಭ ನಾಮೆ ಜಾಗೇ
ತವಶುಭ ಆಶಿಷಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ !

– ರವೀಂದ್ರನಾಥ ಠಾಗೂರ್

ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮ ಪಂಚಾಬ್, ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ(ಒರಿಸ್ಸಾ), ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರ ಅಲೆಗಳಲ್ಲಿ ನಮನಗೊಳ್ಳುತ್ತದೆ. ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ

ಜಯಹೇ! ಜಯಹೇ! ಜಯಹೇ!



kannada 3rd-std_reader.indd 4 09-07-2019 15:56:24

ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿ–
ರುವ ದಕ್ಷನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ
ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ
ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ
ಮೈಮರೆತು ಹಾಡಿ ಹೊಗಳುತ್ತೇನೆ.

10th_Kannada_Reader1-5.indd 5 03-04-2019 14:07:49



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.



10th_Kannada_Reader1-5.indd 6 03-04-2019 14:07:49

ನಾಡ ಗೀತೆ

ಜಯ ಹೇ ಕರ್ನಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು

10th_Kannada_Reader1-5.indd 7 03-04-2019 14:07:49

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಹಿರಿಮೆ ಗರಿಮೆಗಳನ್ನು ಇಂದಿನ ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಉದ್ದೇಶದಿಂದ ಈ ಪಠ್ಯ ಪುಸ್ತಕ ವಿನ್ಯಾಸಗೊಳಿಸಲಾಗಿದೆ.



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ ಆಲಿಸಲು ಗದ್ಯಲೋಕ, ಕಾವ್ಯ ಕಣಜ ಮುಂತಾದ ಉಪ ಪಠ್ಯ ಶೀರ್ಷಿಕೆ.



ಕಾಲದ ವೇಗಕ್ಕೆ ಹೊಂದಾಣಿಕೆಯಾಗುವಂತೆ ಅಂತರ್ಜಾಲದ ಮೂಲಕ



ಪಠ್ಯ ವಿಷಯದ ಅರ್ಥವನ್ನು ವಿವರಿಸುವ ಅಮೂಲ್ಯವಾದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲು ಜ್ಞಾನ ಸಂಪಾದನೆ



ವಿಷಯಕ್ಕೆ ಪೂರಕವಾದ ಘಟಕದ ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

ಸೃಜನಶೀಲ ಅಧ್ಯಾಪಕರಿಗೂ, ಕ್ರಿಯಾ ಶೀಲ ಮನಸ್ಸಿನ ವಿದ್ಯಾರ್ಥಿಗಳಿಗೂ...



ಕಲಿತ ವಿಷಯಗಳ ಕುರಿತಾದ ಚಿಂತನೆಗಳನ್ನು ಕಲಿಕಾ ಚಟುವಟಿಕೆಗಳ ಮೂಲಕ



ಘಟಕದ ಕೊನೆಯಲ್ಲಿ ಇನ್ನೂ ಹೆಚ್ಚು ಕಲಿಯಬೇಕೆಂಬ ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ ಮೌಲ್ಯಮಾಪನಕ್ಕೆ ಪೂರಕವಾಗುವಂತೆ ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು, ಚಟುವಟಿಕೆಯ ಮಾರ್ಗದಲ್ಲಿ ಜೀವಿನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು, ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ, ತಾಂತ್ರಿಕವಾಗಿ ಮನನ ಮಾಡಲು ಭಾಷಾ ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು... ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ ಈ ಪಠ್ಯ ಪುಸ್ತಕವು ನಿಮ್ಮ ಕೈಗಳಲ್ಲಿ....

10th_Kannada_Reader1-5.indd 8 03-04-2019 14:07:49

ಹತ್ತನೆಯ ತರಗತಿ

ಪರಿವಿಡಿ

ಘಟಕ	ಶೀರ್ಷಿಕೆ		ಪುಟ ಸಂಖ್ಯೆ
1. ಭಾಷೆ			
ಕಾವ್ಯ ಕಣಜ :	ವೇಣೀ ಸಂಹಾರ	– ರನ್ನ	02
ಗದ್ಯ ವಿಹಾರ :	ನಮ್ಮ ಭಾಷೆ, ಸಂಸ್ಕೃತಿ ಬಗ್ಗೆ ನಮ್ಮ ಅಭಿಮಾನ	– ಡಾ. ಶ್ರೀಕೃಷ್ಣಭಟ್ ಅರ್ತಿಕಜೆ	11
ಉಪಪಠ್ಯ :	ಮೃಗ ಮತ್ತು ಸುಂದರಿ	– ಪಿ.ಲಂಕೇಶ್	16
ವ್ಯಾಕರಣ :	ಅಕ್ಷರ ಪ್ರಕರಣ		20
2. ಪ್ರಕೃತಿ			
ಕಾವ್ಯ ಕಣಜ :	ಗಹ್ವರದ ಮಾರ್ದನಿಗಳು	– ರಾಘವಾಂಕ	26
ಗದ್ಯ ವಿಹಾರ :	ಬಾರದಿದ್ದ ಮಳೆ ಬಂದಾಗ	– ಜ್ಯೋತಿ ಹೊಸೂರ	32
ಉಪಪಠ್ಯ :	ಕಲಕಿದ ಕೊಳ	– ಅ.ರಾ.ಮಿತ್ರ	37
ವ್ಯಾಕರಣ :	ನಾಮಪದಗಳು		41
3. ಸಂಸ್ಕೃತಿ			
ಕಾವ್ಯ ಕಣಜ :	ಹೇಮಂತ *	– ಎಸ್.ವಿ.ಪರಮೇಶ್ವರ ಭಟ್ಟ	45
ಗದ್ಯ ವಿಹಾರ :	ನಮ್ಮ ಪರಂಪರೆ ಮತ್ತು ಸಂಸ್ಕೃತಿ	– ಎನ್. ಬಸವರಾಜು	48
ಉಪಪಠ್ಯ :	ಐತಿಹಾಸಿಕ ತಾಣ ತಲಕಾಡು	– ಡಾ. ತಮಿಳ್ ಸೆಲ್ವಿ	54
ವ್ಯಾಕರಣ :	ಲಿಂಗ–ವಚನ– ವಿಭಕ್ತಿ–ವಾಕ್ಯರಚನೆ		60
4. ನಾಗರಿಕತೆ			
ಕಾವ್ಯ ಕಣಜ :	ಹುತ್ತರಿ ಹಾಡು	– ಪಂಜೆ ಮಂಗೇಶರಾಯ	64
ಗದ್ಯ ವಿಹಾರ :	ನಾಗರಿಕ	– ಎಂ.ಆರ್. ಶ್ರೀ.	67
ಉಪಪಠ್ಯ :	ಕನಸಿನ ಹುಡುಕಾಟ	– ಎ.ಕೆ.ರಾಮಾನುಜಂ	73
ವ್ಯಾಕರಣ :	ಕಾಲಸೂಚಕಗಳು		78

10th_Kannada_Reader1-5.indd 9 03-04-2019 14:07:49

5. ಶಿಕ್ಷಣ			
ಕಾವ್ಯ ಕಣಜ :	ಅನುಭಾವ ವಚನ ಮಾಲೆ *		81
ಗದ್ಯ ವಿಹಾರ :	ವ್ಯಾಸಂಗದ ಹವ್ಯಾಸ	– ಡಿ.ಎಲ್. ನರಸಿಂಹಾಚಾರ್	87
ಉಪಪಠ್ಯ :	ಜಾತ್ರೆ	– ದ.ರಾ.ಬೇಂದ್ರೆ	92
ವ್ಯಾಕರಣ :	ಸಂಧಿಗಳು		101
6. ವಿಜ್ಞಾನ ಮತ್ತು ತಂತ್ರಜ್ಞಾನ			
ಕಾವ್ಯ ಕಣಜ :	ಬೀಜ–ಮರ	– ಕೆ.ಎಸ್.ನಿಸಾರ್ ಅಹಮದ್	106
ಗದ್ಯ ವಿಹಾರ :	ರೇಷ್ಮೆ ಕೈಗಾರಿಕೆ	– ರಾ. ಗೋಪಾಲರೆಡ್ಡಿ	110
ಉಪಪಠ್ಯ :	ಇಟಲಿಯ ವಿಹಂಗಮ ನೋಟ	– ಡಾ. ಕೆ. ಶಿವರಾಮ ಕಾರಂತ	115
ವ್ಯಾಕರಣ :	ಸಮಾಸಗಳು		121
7. ಕಲೆ			
ಕಾವ್ಯ ಕಣಜ :	ನೊಂದು ತಲೆವಾಗಿದೆನು ಲಜ್ಜೆಯಲಿ	– ಕುಮಾರವ್ಯಾಸ	125
ಗದ್ಯ ವಿಹಾರ :	ನಿರ್ಮಲ ಧರ್ಮದಿ ಪಾಲಿಸು ಧರೆಯಂ	– ಜಾನ್‌ಸನ್ ಸುಕುಮಾರ್	132
ಉಪಪಠ್ಯ :	ಅಮ್ಮ	– ಡಾ. ಯು.ಆರ್. ಅನಂತಮೂರ್ತಿ	140
ವ್ಯಾಕರಣ :	ಛಂದಸ್ಸು		145

10th_Kannada_Reader1-5.indd 10 03-04-2019 14:07:49

8. ನಾಡು–ನುಡಿ			
ಕಾವ್ಯ ಕಣಜ :	ಕನ್ನಡಿಗರ ತಾಯಿ *	– ಎಂ.ಗೋವಿಂದ ಪೈ	160
ಗದ್ಯ ವಿಹಾರ :	ಹೊಯ್ಸಳ	– ಆಲೂರು ವೆಂಕಟರಾಯರು	165
ಉಪಪಠ್ಯ :	ರಾಗಿ ಮುದ್ದೆ	– ಚಾ.ಹ. ರಘುನಾಥ	169
ವ್ಯಾಕರಣ :	ಅಲಂಕಾರ		173
9. ಧರ್ಮ/ತತ್ವ/ಚಿಂತನೆ			
ಕಾವ್ಯ ಕಣಜ :	ಧವಳ ಗಂಗೆಯ ಗಂಗಾಧರ *	– ವಾದಿರಾಜರು	179
ಗದ್ಯ ವಿಹಾರ :	ಬಸವಣ್ಣನವರು ಕಟ್ಟ ಬಯಸಿದ ಸಮಾಜ	– ಸಿ.ಪಿ.ಕೆ	183
ಉಪಪಠ್ಯ :	ಮನಸೂರದಲ್ಲಿಯ ದಿನಗಳು	– ಮಲ್ಲಿಕಾರ್ಜುನ ಮನಸೂರ	189
ವ್ಯಾಕರಣ :	ಗಾದೆಗಳು – ಒಗಟುಗಳು – ಭಾವಾರ್ಥ		193
10. ಮಾನವೀಯತೆ			
ಕಾವ್ಯ ಕಣಜ :	ನಾವೆಲ್ಲರೂ ಒಂದೇ ಜಾತಿ	– ಎಂ. ಗೋಪಾಲಕೃಷ್ಣ ಅಡಿಗ	200
ಗದ್ಯ ವಿಹಾರ :	ಬೂಟ್ ಪಾಲಿಷ್	– ಬಸವರಾಜ ಕಟ್ಟೀಮನಿ	205
ಉಪಪಠ್ಯ :	ತ್ಯಾಗಮಯಿ	– ಎಚ್.ಜೆ. ಲಕ್ಕಪ್ಪಗೌಡ	211
ವ್ಯಾಕರಣ :	ಪತ್ರಲೇಖನ – ಪ್ರಬಂಧ ರಚನೆ		216

*** ಈ ಚಿಹ್ನೆಯು ಕಂಠಪಾಠ ಮಾಡಬೇಕಾದ ಪದ್ಯಗಳನ್ನು ಸೂಚಿಸುತ್ತದೆ.**

10th_Kannada_Reader1-5.indd 11 03-04-2019 14:07:49

ಕನ್ನಡ ಸಿರಿ

ಹತ್ತನೆಯ ತರಗತಿ

10th_Kannada_Reader1-5.indd 12 03-04-2019 14:07:49

ಘಟಕ ಒಂದು

ಭಾಷೆ



ಕಾವ್ಯ ಕಣಜ	: ವೇಣೀ ಸಂಹಾರ	– ರನ್ನ
ಗದ್ಯ ವಿಹಾರ	: ನಮ್ಮ ಭಾಷೆ, ಸಂಸ್ಕೃತಿ ಬಗ್ಗೆ ನಮ್ಮ ಅಭಿಮಾನ	– ಡಾ. ಶ್ರೀಕೃಷ್ಣಭಟ್ ಅರ್ತಿಕಜೆ
ಉಪಪಠ್ಯ	: ಮೃಗ ಮತ್ತು ಸುಂದರಿ	– ಪಿ.ಲಂಕೇಶ್
ವ್ಯಾಕರಣ	: ಅಕ್ಷರ ಪ್ರಕರಣ	

10th_Kannada_Reader1-5.indd 1 03-04-2019 14:07:52

ಕಾವ್ಯ ಕಣಜ

ಘಟಕ ಒಂದು

ವೇಣೀ ಸಂಹಾರ

– ರನ್ನ



ಪಂಪ ಕವಿಯ ನಂತರ ಕಾಣ ಬರುವ ಶಕ್ತಿ ಕವಿ ಎಂದರೆ ರನ್ನ. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ. ಯುದ್ಧಕ್ಕೆ ಕಾರಣ ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಪಾಂಡವರು ಮಹಾಭಾರತದಲ್ಲಿ ಶಕುನಿಯ ತಂತ್ರಗಾರಿಕೆಯಿಂದ ತಮ್ಮ ಎಲ್ಲಾ ಆಸ್ತಿಯನ್ನೂ ಸೋತು, ತಮ್ಮನ್ನೂ ಸೋತು, ಕೊನೆಗೆ ದ್ರೌಪದಿಯನ್ನು ಕೂಡ ಜೂಜಿನಲ್ಲಿ ಪಣವಿಟ್ಟು ಸೋಲುತ್ತಾರೆ. ಆಗ ದುಶ್ಶಾಸನನು ದ್ರೌಪದಿಯ ಜಡೆ ಹಿಡಿದು ಬಲವಂತವಾಗಿ ತುಂಬಿದ ಸಭೆಗೆ ಎಳೆದು ತರುವಾಗ ಅವಳ ಜಡೆ ಬಿಚ್ಚಿ ಹೋಗುತ್ತದೆ. ಆ ಸಂದರ್ಭದಲ್ಲಿ ದ್ರೌಪದಿಯು, 'ದುಶ್ಶಾಸನನ ನೆತ್ತರನ್ನು ಹಚ್ಚಿ ನನ್ನ ಜಡೆಯನ್ನು ಕಟ್ಟುವೆ. ಅಲ್ಲಿಯವರೆಗೆ ನಾನು ನನ್ನ ಈ ಕೂದಲನ್ನು ಕಟ್ಟುವುದಿಲ್ಲ' ಎಂದು ಶಪಥ ಮಾಡುತ್ತಾಳೆ. ಮುಂದಿನ ದಿನಗಳಲ್ಲಿ ನಡೆದ ಕುರುಕ್ಷೇತ್ರ ಯುದ್ಧದ ಗದಾಯುದ್ಧದ ಸಂದರ್ಭದಲ್ಲಿ ಭೀಮ ದುರ್ಯೋಧನರಿಗೆ ಭಯಂಕರವಾದ ಯುದ್ಧ ನಡೆಯುವ ಸಂದರ್ಭವೇ ಮುಂದಿನ ಭಾಗವಾಗಿದೆ.



10th_Kannada_Reader1-5.indd 2 03-04-2019 14:07:52

ಆ ಪ್ರಸ್ತಾವದೊಳ್ ಧಾತುನಿರ್ಜರಗಿರಿ ಕೆಡೆವಂತು ಕೆಡೆದಿರ್ದ ಪಗೆಯಂ ನೋಡಿ –

ಕೆಡೆದೊಡೆ ಪವನಜನಾಹವ
ದೆಡೆಯೊಳ್ ಬಿಟ್ಟಿವನನಿರಿಯಲಾಗದುವೆಂಬರ್ ।
ಗಡಮೆಂದಂಬರತಳದೊಳ್
ಪೊಡವೀಶಂ ಗದೆಯನೆತ್ತಿ ತಿರಿಪಿದನಾಗಳ್ ॥1॥

ಆ ಪ್ರಸ್ತಾವದೊಳ್ ಧರ್ಮಯುದ್ಧಮಂ ನೆನೆದು –

ಇಜೆಯೆಂ ಬಿಟ್ಟನೆಂಬೀ
ಬಿರುಬಿಂದಂ ಬೀಸೆ ಗದೆಯ ಗಾಳಿಯ ಕೋಲ್ಗೆ ।
ಟ್ಟಿರಿಸಿದುದು ಭೀಮನಂ ಮೆ
ಯ್ಮಱೆದವನಂ ತಂದೆಸುತರ್ಗೆ ಕೂರದರೊಳರೇ ॥2॥

ಅಂತು ಮೂರ್ಛೆಯಿಂ ಮಾರುತಿಯೆಟ್ಟರ್ತಾಗಳ್ –

ಪೊಡೆಯೆಲರಾತಂ ರಾಗದೆ
ತೊಡೆಯಂ ಪೊಯ್ದಾರ್ವ ನೆವದೆ ನೆಱನೀತಂಗೀ ।
ಯೆಡೆಯೆಂದು ತೋಜೆಕುಡೆ ಪೊಲ
ಗಿಡದಜೆದಂ ಪರಮಪಂಡಿತಂ ಪವನಸುತಂ ॥3॥

ತಿಳಿದಾಗಳ್ ನೆನೆದಿಂತುಂಟೆಂದು ನೆಲನಂ ಮಾಱುದ್ದಿ ಕಯ್ಯಂ ಧರಾ
ತಳದೊಳ್ ಸೂಸಿದ ತನ್ನ ಚಿತ್ರಗದೆಯಂ ಕಂಡೆತ್ತಿಕೊಂಡಂಬರ ।
ಸ್ಥಳದಿಂದಂ ಸಿಡಿಲೇಱ್ಗೆಯಿಂದೆಱಗಿ ಪೊಯ್ವಾಗಳ್ ಗದಾದಂಡದಿಂ
ಮುಳಿದಿಟ್ಟಂ ಕಲಿ ಸತ್ತಿಗಂ ಕುರುಕುಭೃಚ್ಚಂಡೋರುದಂಡಂಗಳಂ ॥4॥

ಇಡೆ ತೊಡೆಯನುಡಿದು ನೆಟ್ಟನೆ
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ ।
ಬಿಡೆನೆಂಬ ತೆಱದೆ ಕುಲಗಿರಿ
ಕೆಡೆವಂದದೆ ಕೌರವೇಂದ್ರನಾಗಳ್ ಕೆಡೆದಂ ॥5॥

ಅಂತು ದಿಕ್ಕರಿವರಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಂ ಕುರುಕುಲಮಹೀಶನ
ಬಾಳಕದಳೀಸ್ತಂಭಂಗಳನನುಕರಿಸುವ ತೊಡೆಗಳನುಡಿದು ಅಶ್ರಮದೊಳ್ ಪುಡಿಯೊಳ್
ಪೊರಳ್ಚಿ ತನ್ನ ಮುನ್ನೆ ನುಡಿದೂರುಭಂಗ ಪ್ರತಿಜ್ಞೆಯಂ ತೀರ್ಚಿ ಮಕುಟಭಂಗ

10th_Kannada_Reader1-5.indd 3 03-04-2019 14:07:52

ಪ್ರತಿಜ್ಞೆಯಂ ತೀರ್ಚಲೆಂದು ಕುರುಕುಲಾಂತಕಂ ಮಾಮಸಕಂ ಮಸಗಿ –

ಇದು ಭುವನಾಧಿಪತ್ಯಸವನೋದಕದಿಂ ಗಡ ಪೂತಮಾದುದಿಂ
ತಿದು ಧವಳಾತಪತ್ರದ ನೆಟಿಲ್ಗೆ ಗಡಂ ಗುಜಿಯಾದುದಾರ್ಗಮಿಂ ।
ತಿದು ಗಡ ಬಾಗದೀ ತಲೆಗೆ ತಕ್ಕುದನೀಗಳೆ ಮಾಟ್ಪಿನೆಂದು ಕೋ
ಪದಿನೊದೆಯಲ್ಕೆ ಸಾರ್ತರೆ ಸಪತ್ನ ಹ[ತೋರು]ಕಿರೀಟ ಶೃಂಗಮಂ ॥6॥

ಬಲದೇವಾದಿಗಳಾಗದಾಗದೊದೆಯಲ್ಕೇಕಾದಶಾಕ್ಷೋಹಿಣೀ
ಬಲಲಕ್ಷ್ಮೀಪತಿಯಂ ಪರಾಭವಿಸದಿರ್ ಚಿಃ ತಕ್ಕುದಲ್ಲೆಂದು ಮಾ।
ರ್ಕೊಳೆಯಂ ಮಾಣದೆ ಭೀಮಸೇನನೊದೆದಂ ವಾಮಾಂಘ್ರಿಯಿಂ ರತ್ನಮಂ
ಡಲರಶ್ಮಿಪ್ರಕಟಜ್ವಲನ್ಮಕುಟಮಂ ಕೌರವ್ಯರಾಜೇಂದ್ರನಾ ॥7॥

ಒದೆದ ಭರದಿಂದಮುಚ್ಚಳಿ
ಸಿದ ದುರ್ಯೋಧನನ ಮಕುಟಮಣಿಗಳವೆತ್ತಂ ।
ಕೆದಜಿದುವಿಜೆವಬೆಡಂಗನ
ಪೊದಟ್ಟಿ ಕೋಪಾಗ್ನಿದಹನದಾಳ್ಕಿಡಿಗಳವೋಲ್ ॥8॥

ಅಂತು ಗುಣರತ್ನಾರ್ಣವಂ ಪ್ರತಿಜ್ಞಾಪೂರ್ಣನುಮಾಗೆ –

ತ್ರಿದಶೇಂದ್ರಂ ಜಂಭನೊಳ್ ತಟ್ಟಿಜೆದ ಸಮರಮಂ ನೋಡಿದೆಂ ರಾಮಚಂದ್ರಂ
ತ್ರಿದಶೇಂದ್ರಾರಾತಿಯೊಳ್ ತಟ್ಟಿಜೆದ ಸಮರಮಂ ನೋಡಿದೆಂ ಕಂಡೆ(ವಿ)ಲ್ಲಂ।
ಕದ ಗಂಡಂ ಸಾಹಸಾಂಕಂ ಸುಭಟರ ಜವನಿಂ ಮುನ್ನಮೆಂದುಂ ನಭೋಭಾ
ಗದೊಳಂ ತದ್ದೇವತೂರ್ಯಸ್ವನಘನರವದಿಂದಾಡಿದರ್ ನಾರದಾದ್ಯರ್ ॥9॥

ಧಾತ್ರೀಪತಿಗಜೆಪಿ ಮರು
ತ್ಪುತ್ರಂ ಬಟಿಯಟ್ಟಿ ಕರೆಸಿ ತೋಱಲ್ಕೇಕ ।
ಚ್ಛತ್ರೀಕೃತ ಜಗದಹಿತ
ಕ್ಷತ್ರಿಯಕುಳಕಾಳರಾತ್ರಿಯಂ ದ್ರೌಪದಿಯಂ ॥10॥

ಮುಳಿಸಿಂ ನಂಜಿಕ್ಕಿ ಕೊಲ್ವಂದಿನ ಜತುಗೃಹದೊಳ್ ಸುಟ್ಟು ಕೊಲ್ವಂದಿನುರ್ವೀ
ತಳಮಂ ಜೂದಾಡಿ ಗೆಲ್ವಂದಿನ ನಿಜಕಬರೀ ಬಂಧಮಂ ತನ್ನ ಸತ್ತೊ್ವೀ ।
ಜ್ವಳದಿಂದಂ ತಮ್ಮನಿಂದಂ ತೆಗೆಯಿಸಿ ನಡೆದಾ ನೀಚನಾ ದ್ರೋಹನಾ ಸಂ
ಚಳನಾ ಚಂಡಾಲನಾ ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ ॥11॥

10th_Kannada_Reader1-5.indd 4 03-04-2019 14:07:52

ಅರಸಂ ದೀಕ್ಷಿತನಿಲ್ಲಿ ಋತ್ವಿಜರುಮೆಮ್ಮೀ ನಾಲ್ವರುಂ ಸಂಗರಾ
ಧ್ವರದೊಳ್ ತಾನುಪದೇಶಕಂ ಮುರಹರಂ ನೀನುಂ ಗೃಹೀತವ್ರತಾ ।
ಚರಣವ್ಯಾಪಿಕೆಯುಂ ಭವತ್ಪರಿಭವಂ ಸಂಚಾರಕಂ ಕೌರವೇ
ಶ್ವರನೀತಂ ಪಶುವಾಗೆ ಬೇಳ್ವೆನಿವನಂ ಕೋಪಾಗ್ನಿಯಿಂದಗ್ನಿಜೇ ॥12॥

ಸುಹುತಂ ಕೌರವ್ಯಕ್ರ
ವ್ಯಹವ್ಯದಿಂದೆನ್ನ ಕೋಪಹವ್ಯವಹಂ ದು ।
ರ್ವಹದುರ್ಯೋಧನದೇಹ
ಪ್ರಹರಣಲೋಹಿತದಿನಾದುದವಭೃಥಸವನಂ ॥13॥

ಎಂದು ಭೀಮಸೇನಂ ಯಾಜ್ಞಸೇನಿಗಾದಿತ್ಯನ ಸಾರಥಿಯಿರ್ಪಂತೆ
ನಿಜೋರುಯುಗಳವಿಕಳನಾಗಿರ್ದ ದುರ್ಯೋಧನನಂ ತೋಱೆ –

ಪಗೆ ಮಡಿದುದು ಮುಡಿಯೆನೆ ನಗೆ
ಮೊಗದಿಂ ಪಾಂಚಾಲೆ ಮಱೆದೆನಾಂ ಪಲಕಾಲಂ ।
ವಿಗತಾಭ್ಯಾಸದೆ ಸತ್ತಿಗ
ಪಗೆಯಂ ಮಡಿಯಿಸಿದೆ ನೀನೆ ಮುಡಿಯಲ್ವೇಟ್ಕುಂ ॥14॥

ಎಂದು ತನ್ನ ಕಯ್ಯಂ ಪಿಡಿದು ತೆಗೆವುದಮಂತೆ ಗೆಯ್ವೆನೆಂದುಮಾಕೆಯ ವೇಣೀ
ಸಂಹಾರಮಂ ತಾನೆ ಮಾಡಿ –

ಇದರೊಟ್ ಬಾಹಾಬಳಾಗ್ರ್ಯರ್ ಮಣಿಮಕುಟಧರರ್ ಕೃಷ್ಣೆ ಮೂರ್ಧಾಭಿಷಿಕ್ತರ್
ಕದನ ಪ್ರೋಚ್ಛಂಡದಂಡಕ್ರಮವಿಜಿತರಿಪು ಕ್ಷತ್ರಿಯರ್ ವೀರಲಕ್ಷ್ಮೀ ।
ಸದನರ್ ಸೋಮಾಮೃತಾಸ್ವಾದನಶುಭವಚನರ್ ಮುನ್ನಮಟ್ಟಾಡಿದರ್ ನೋ
ಡಿದು ನಿನ್ನೀ ಕೇಶಪಾಶಂ ಕುರುಕುಲಪತಿಗಾಯ್ತಲ್ತೆ ಕೀನಾಶಪಾಶಂ ॥15॥

ಎಂದು ಪೊಗಟ್ಟು ಮಾಂಗಲ್ಯ ಮಾಲಾಲಂಕೃತಂ ಮಾಡೆ –

ಸ್ಮರಸಂಜೀವನೆ ಕೃಷ್ಣೆ ಪೂಮುಡಿದಳಾ ಶೃಂಗಾರಮಾ ಭಾವಮಾ
ಪರಿಜಾ ವಿಭ್ರಮಮಾ ಬೆಡಂಗು ನೆಗಟ್ದಾ ಸೌಂದರ್ಯಮಾ ಬಿಂಕಮಾ ।
ತರಳಾಪಾಂಗ ವಿಲಾಸಮಾ ಲಟಹಮಾ ಲಾವಣ್ಯಮಾ ಪುಣ್ಯಮಾ
ದರಹಾಸಾಮೃತಮೇನ್ ಮನಂಗೊಳಿಸಿತೋ ಚಾಳುಕ್ಯ ಕಂದರ್ಪನಾ ॥16॥

10th_Kannada_Reader1-5.indd 5 03-04-2019 14:07:52

ಕವಿ ಕಾವ್ಯ ವಿಚಾರ



ರನ್ನ

ಕವಿ ರನ್ನನು ಕ್ರಿ.ಶ. ಸುಮಾರು 949 (ಹತ್ತನೆಯ ಶತಮಾನ)ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಇವನ ತಂದೆ : ಜಿನವಲ್ಲಭ; ತಾಯಿ : ಅಬ್ಬಲಬ್ಬೆ. ಬಳೆ ಮಾರುವುದು ಇವರ ವೃತ್ತಿಯಾಗಿತ್ತು. ಈತನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು 'ಸಾಹಸ ಭೀಮ ವಿಜಯಂ'(ಗದಾಯುದ್ಧಂ) ಎನ್ನುವ ಶ್ರೇಷ್ಠ ಕಾವ್ಯವನ್ನು ರಚಿಸಿದ್ದಾನೆ. ಈ ಕಾವ್ಯವು ಸಿಂಹಾವಲೋಕನ ಕ್ರಮದಲ್ಲಿ ರಚನೆಗೊಂಡಿದೆ. ಇದೊಂದು ಚಂಪೂ ಗ್ರಂಥ. ಇದರ ಜೊತೆಗೆ ಅಜಿತ ತೀರ್ಥಂಕರ ಪುರಾಣ ತಿಲಕಂ, ಪರಶುರಾಮ ಚರಿತಂ, ಚಕ್ರೇಶ್ವರ ಚರಿತಂ ಎಂಬ ಕಾವ್ಯಗಳನ್ನೂ ಇವನು ಬರೆದಿದ್ದಾನೆ. 'ರನ್ನ ಕಂದ' ಎಂಬ ನಿಘಂಟನ್ನೂ ಬರೆದಿರುವುದಾಗಿ ತಿಳಿದು ಬಂದಿದೆ. ಇವನಿಗೆ ತೈಲಪನು 'ಕವಿ ಚಕ್ರವರ್ತಿ' ಎನ್ನುವ ಬಿರುದನ್ನು ನೀಡಿದ್ದನು. ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. ಇವನು ಜೈನ ಕವಿ.

ಪದಗಳ ಅರ್ಥ

ವಚನ: ಧಾತು–ಕೆಂಪು ಬಣ್ಣದ ಕಲ್ಲು; ಗಿರಿ–ಪರ್ವತ; ಧಾತು ನಿರ್ಜರಗಿರಿ–ಕೆಂಪುಕಲ್ಲಿನಿಂದ ಕೂಡಿದ ಮೇರುಪರ್ವತ; ಕೆಡೆ–ಬೀಳು; ಪಗೆ–ಶತ್ರು, ವೈರಿ.

1. ಪವನಜ – ಪವನ=ವಾಯು; ಜ=ಜನಿಸಿದವನು, ವಾಯುಪುತ್ರ, ಭೀಮ; ಆಹವ–ಯುದ್ಧ, ಕದನ; ಬಿಟ್ಟಿವನ್–ಕೆಳಗೆ ಬಿದ್ದವನು; ಇರಿಯಲಾಗದು–ಕೊಲ್ಲಬಾರದು; ಅಂಬರ–ಆಕಾಶ; ಪೊಡವೀಶ–ಪೊಡವಿ=ಭೂಮಿ, ಈಶ–ಒಡೆಯ, ಆಳುವವ; ಪೊಡವೀಶ–ಅರಸ; ತಿರಿಪಿದ–ತಿರುಗಿಸಿದ; ಪ್ರಸ್ತಾವ–ಸಮಯ.
2. ಇಜೆಯೆಂ–ಕೊಲ್ಲುವುದಿಲ್ಲ, ಹೋರಾಡುವುದಿಲ್ಲ; ಕೋಟಿ್–ತಂಪು; ಎಟ್ಟಿರು–ಎಚ್ಚರವಾಗು; ಮೆಯ್ಮಱೆದವನು–ಪ್ರಜ್ಞೆ ತಪ್ಪಿದವನು; ಕೂರ್–ಪ್ರೀತಿ; ಮಾರುತಿ–ಭೀಮ, ವಾಯುಪುತ್ರ.
3. ಪೊಡೆಯೆಲರಾತಂ–ಕೃಷ್ಣ; ರಾಗದೆ–ಪ್ರೀತಿಯಿಂದ; ಪೊಯ್ದು–ಹೊಡೆದು; ಆರ್ವ–ಆವೇಶ; ಪವನಸುತ–ವಾಯುಪುತ್ರ, ಭೀಮ.
4. ಕೃಭೃಚ್ಛಂಡೋರು ದಂಡಂಗಳು–ತೋರು ತೊಡೆಗಳು.
5. ಉಡಿದು–ಒಡೆದು; ಕರ್ಚಿ–ಬಿಗಿಯಾಗಿ ಹಿಡಿದುಕೊಂಡು; ಎಂತುಂ–ಏನೇ ಆದರೂ; ಕುಲಗಿರಿ–ಕುಲಪರ್ವತ; ಕೆಡೆದಂ–ಬಿದ್ದನು.

   ವಚನ: ದಿಕ್ಕರಿ–ದಿಗ್ಗಜ, ಕರಿ–ಆನೆ; ಕದಳೀ ಸ್ತಂಭ–ಬಾಳೆ ಕಂಬ; ಅಶ್ರಮ–ನಿರಾಯಾಸವಾಗಿ, ಕಷ್ಟವಿಲ್ಲದೆ; ಪುಡಿ–ಧೂಳು; ಪೊರಳ್ಚಿ–ಹೊರಳಾಡಿಸಿ; ಮುನ್ನೆ–ಈ ಮೊದಲಿನ, ಹಿಂದಿನ; ಊರು–ತೊಡೆ; ಭಂಗ–ಮುರಿ; ತೀರ್ಚಿ–ಪೂರೈಸಿ; ಮಕುಟ–ಕಿರೀಟ, ತೀರ್ಚಲ್–ಪೂರೈಸಲು; ಮಸಗಿ–ಕೆರಳಿ.
6. ಭುವನ–ಭೂಮಿ; ಅಧಿಪತ್ಯ–ಒಡೆತನ; ಉದಕ–ಜಲ; ಪೂತ–ಪವಿತ್ರ; ಧವಳಾತಪತ್ರ–ಬಿಳಿಯ ಬಣ್ಣದ ಚಾಮರ; ಸಾರ್ತರೆ–ಹತ್ತಿರ ಬರಲು.

10th_Kannada_Reader1-5.indd 6 03-04-2019 14:07:52

7. ಆಗದಾಗದು–ಬೇಡಬೇಡ; ಏಕಾದಶಾಕ್ಷೋಹಿಣಿ–ಹನ್ನೊಂದು ಅಕ್ಷೋಹಿಣಿ ಸೇನೆ, ಒಂದು ಅಕ್ಷೋಹಿಣಿ=21870 ಆನೆಗಳು, 21870 ರಥಗಳು, 65610 ಕುದುರೆಗಳು, 109350 ಕಾಲಾಳುಗಳಿರುವ ಸೈನ್ಯದ ಗುಂಪು; ಪರಾಭವಿಸು–ಅವಮಾನಿಸು, ಸೋಲಿಸು; ಮಾರ್ಕೊಳೆ–ಕೂಗಲು, ವಾಮಾಂಘ್ರಿ–ಎಡಗಾಲು; ರತ್ನಮಂಡಲ ರಶ್ಮಿಪ್ರಕಟಜ್ವಲ–ಹೊಳೆಯುವ ರತ್ನಗಳ ಕಾಂತಿಯಿಂದ ಪ್ರಜ್ವಲಿಸುವ.

8. ಭರ–ರಭಸ; ಉಚ್ಚಳಿಸಿದ–ಹೊರಗೆ ಹಾರಿದ; ಕೆದಱಿದುವು–ಚೆದುರಿದವು; ಪೊದಟ್ಟಿ–ಉಕ್ಕಿದ, ಹೊಮ್ಮಿದ; ದಹನ–ಬೆಂಕಿಯ ಜ್ವಾಲೆ.

9. ತ್ರಿದಶೇಂದ್ರ–ದೇವೇಂದ್ರ; ಜಂಭ–ಒಬ್ಬ ರಾಕ್ಷಸನ ಹೆಸರು; ಸಮರ–ಯುದ್ಧ; ಆರಾತಿ–ಗುಂಪು; ಅಂಕ–ಯುದ್ಧ; ಸುಭಟರು–ವೀರರು, ಸೈನಿಕರು; ಜವ–ಯಮ; ಮುನ್ನಂ–ಈ ಹಿಂದೆ; ನಭ–ಆಕಾಶ; ತೂರ್ಯಸ್ವನ–ಮಂಗಳ ವಾದ್ಯಗಳ ಧ್ವನಿ; ಆಡಿದರ್–ಮಾತನಾಡಿಕೊಂಡರು; ನಾರದಾದ್ಯರ್–ಆಕಾಶದಲ್ಲಿ ನೆರೆದಿದ್ದ ನಾರದನೇ ಮೊದಲಾದವರು.

10. ಧಾತ್ರೀಪತಿ–ಅರಸ, ರಾಜ, ಧರ್ಮರಾಯ; ಬಟೆ–ದೂತ, ರಾಯಭಾರಿ.

11. ನಂಜು–ವಿಷ; ಜತು–ಅರಗು; ಗೃಹ–ಮನೆ; ಉರ್ವಿ–ಭೂಮಿ; ಕಬರಿ–ಕೂದಲು; ಕಬರೀಬಂಧ–ಜಡೆ; ಪಾತಕ–ಪಾಪಿ; ಪಂಕೇಜವಕ್ತ್ರೆ–ಕಮಲದಂತಹ ಮುಖವುಳ್ಳವಳು.

12. ದೀಕ್ಷಿತ–ಯಜಮಾನ; ಋತ್ವಿಜರು–ಯಾಗ ನಡೆಸುವವರು; ಸಂಗರ–ಯುದ್ಧ; ಮುರಹರ–ಕೃಷ್ಣ; ಬೇಳ್ಪೆ–ಬೇಯಿಸುವೆ; ಅಗ್ನಿಜೆ–ಅಗ್ನಿಪುತ್ರಿ, ದ್ರೌಪದಿ.

13. ಲೋಹಿತ–ರಕ್ತ; ಅವಭೃತ–ಯಜ್ಞ; ಸವನಂ–ಸ್ನಾನ.

ವಚನ: ಯಾಜ್ಞಸೇನಿ–ದ್ರೌಪದಿ; ಆದಿತ್ಯ–ಸೂರ್ಯ; ಸಾರಥಿ–ರಥ ಓಡಿಸುವವನು, ಸೂರ್ಯನ ಸಾರಥಿಯಾದ ಅರುಣ; ನಿಜ–ತನ್ನ; ಊರು–ತೊಡೆ; ಯುಗಳ–ಜೋಡಿ, ವಿಕಳ–ಮುರಿದು ಹೋದ.

14. ಪಾಂಚಾಲೆ–ದ್ರೌಪದಿ; ಮಱೆದೆ–ಮರೆತುಹೋದೆ; ವಿಗತಾಭ್ಯಾಸ–ಅಭ್ಯಾಸವಿಲ್ಲದೆ; ಮಡಿಯಿಸಿದೆ–ಸಾಯಿಸಿದೆ.

ವಚನ: ಅಂತೆಗೆಯ್ವೆಂ–ಹಾಗೆಯೇ ಮಾಡುತ್ತೇನೆ; ವೇಣಿ–ಕೂದಲು, ಜಡೆ; ಸಂಹಾರ–ಕಟ್ಟುವಿಕೆ.

15. ಬಾಹಾಬಳಾಗ್ರ್ಯರ್–ತೋಳಿನಲ್ಲಿ ಬಲವುಳ್ಳವರು; ಮಕುಟಧರರ್–ಕಿರೀಟವನ್ನು ಧರಿಸಿದವರು; ಕೃಷ್ಣೆ–ದ್ರೌಪದಿ; ಮೂರ್ಧಾಭಿಷಿಕ್ತ–ತಲೆಯ ಮೇಲೆ ಅಭಿಷೇಕ ಮಾಡಿಸಿಕೊಂಡ; ಕದನ–ಯುದ್ಧ; ರಿಪು–ವೈರಿ; ಸೋಮಾಮೃತ–ಸೋಮರಸ; ಆಸ್ವಾದನ–ಸೇವನೆ; ಕೀನಾಶ–ಯಮ.

16. ನೆಗಳ್ದ–ಪ್ರಸಿದ್ಧವಾದ; ತರಳೆ–ಯುವತಿ; ಅಪಾಂಗ–ಕಡೆಗಣ್ಣೋಟ; ಹಾಸಾಮೃತ–ನಗೆಯೆನ್ನುವ ಅಮೃತ, ಸುಂದರವಾದ ನಗೆ.

ಸಾರಾಂಶ

ವಚನ: ಆ ಸಮಯದಲ್ಲಿ ಕೆಂಪುಗಲ್ಲಿನಿಂದ ಕೂಡಿದ ಮೇರು ಪರ್ವತವು ಕೆಳಗೆ ಬಿದ್ದಂತೆ(ನೆತ್ತರು ಬಳಿದು) ಬಿದ್ದ ವೈರಿಯನ್ನು ನೋಡಿ –

1. 'ಯುದ್ಧರಂಗದಲ್ಲಿ ಭೀಮನು ಬಿದ್ದಿದ್ದಾನೆ. ಬಿದ್ದವನನ್ನು ಹೊಡೆಯಲಾಗದೆಂದು ಹೇಳುತ್ತಾರೆ' ಎಂದು ದುರ್ಯೋಧನನು ಗದೆಯನ್ನು ಎತ್ತಿ ಆಕಾಶದಲ್ಲಿ ತಿರುಗಿಸಿದನು.

ವಚನ: ಆ ಸಮಯದಲ್ಲಿ ಧರ್ಮಯುದ್ಧವನ್ನು ಅನುಲಕ್ಷಿಸಿ(ದುರ್ಯೋಧನನು),

2. 'ಬಿದ್ದವನನ್ನು ಹೊಡೆಯೆನು' ಎಂದು ರಭಸದಿಂದ ಗದೆಯನ್ನು ಬೀಸಲಾಗಿ, ಆ ಗಾಳಿಯ ತಂಪು ಮೂರ್ಛಾಗತನಾಗಿ ಬಿದ್ದಿದ್ದ ಭೀಮನನ್ನು ಎಚ್ಚರಿಸಿತು. ಮಕ್ಕಳ ಮೇಲೆ ಪ್ರೀತಿ ತೋರದ ತಂದೆ ಇರಲು ಸಾಧ್ಯವೇ?

ವಚನ: ಹೀಗೆ ಭೀಮನು ಮೂರ್ಛೆಯಿಂದ ಎಚ್ಚೆತ್ತಾಗ,

3. ಕೃಷ್ಣನು ಉತ್ಸಾಹದಿಂದ ತೊಡೆ ತಟ್ಟಿಕೊಂಡು ಅಬ್ಬರಿಸುವ ನೆವದಿಂದ ದುರ್ಯೋಧನನಿಗೆ ಇದೇ ಮರ್ಮಸ್ಥಾನವೆಂದು ಸೂಚಿಸಿದನು.

10th_Kannada_Reader1-5.indd 7 03-04-2019 14:07:52

ಬಲು ಜಾಣನಾದ ಭೀಮನು ಅದನ್ನು ಕೂಡಲೇ ಅರಿತುಕೊಂಡನು.

4. ಹೀಗೆಂದು ತಿಳಿದುಕೊಂಡು ನೆಲಕ್ಕೆ ಕೈಗುದ್ದಿ, ಆಚೆಗೆ ಬಿದ್ದಿದ್ದ ತನ್ನ ಗದೆಯನ್ನು ಎತ್ತಿಕೊಂಡು ಆಕಾಶ ಸ್ಥಳದಿಂದ ಸಿಡಿಲೆರಗುವಂತೆ ಎರಗಿ ಪರಾಕ್ರಮಿ ಭೀಮಸೇನನು ಕೌರವನ ತೋರ ತೊಡೆಗಳನ್ನು ಗದೆಯಿಂದ ಹೊಡೆದನು.

5. ಹೀಗೆ ಭೀಮನು ತೊಡೆಗಳನ್ನು ಮುರಿದಿಡಲಾಗಿ ಕುರುರಾಜನು ಕುಲ ಪರ್ವತದಂತೆ ಧೊಪ್ಪನೆ ಬಿದ್ದು, 'ಏನಾದರೂ ನಾನು ಇದನ್ನು ಬಿಡೆ'ನೆಂಬಂತೆ ನೆಲವನ್ನು ಕಚ್ಚಿಕೊಂಡನು.

ವಚನ: ದಿಗ್ಗಜದ ಸೊಂಡಿಲಂತಿರುವ ತನ್ನ ತೋಳುಗಳಿಂದ ಭೀಮನು ಬಾಳೆಕಂಬಗಳಂತಿದ್ದ ದುರ್ಯೋಧನನ ತೊಡೆಗಳನ್ನು ಮುರಿದು, ಸಲೀಲವಾಗಿ ಹುಡಿಯಲ್ಲಿ ಹೊರಳಾಡಿಸಿ, ತಾನು ಈ ಪೂರ್ವದಲ್ಲಿ ಮಾಡಿದ್ದ ಊರು ಭಂಗ ಪ್ರತಿಜ್ಞೆಯನ್ನು ನೆರವೇರಿಸಿದನು. ನಂತರ, ಕಿರೀಟ ಭಂಗ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳಲೆಂದು ಅತ್ಯಂತ ಕೋಪಾವೇಶದಿಂದ,

6. 'ಇದು ಚಕ್ರಾಧಿಪತ್ಯದ ಅಭಿಷೇಕ ಜಲದಿಂದ ಪವಿತ್ರವಾದುದಂತೆ! ಶ್ವೇತಚ್ಛತ್ರದ ನೆಳಲಲ್ಲೇ ಇದ್ದುದಂತೆ! ಇದು ಯಾರಿಗೂ ಬಾಗುವುದಿಲ್ಲವಂತೆ! ಅಲ್ಲವೇ? ಈ ತಲೆಗೆ ತಕ್ಕುದನ್ನು ಈಗಲೇ ಮಾಡುವೆನು' ಎಂದು ಕೋಪದಿಂದ ದುರ್ಯೋಧನನ ಶಿರವನ್ನು ಒದೆಯಲು ಮುಂದೆ ಬಂದನು.

7. ಆಗ, ಬಲರಾಮನೇ ಮೊದಲಾದವರು 'ಛೇ! ಕೂಡದು. ಒದೆಯ ಕೂಡದು. ಹನ್ನೊಂದು ಅಕ್ಷೋಹಿಣೀ ಸೇನಾಧಿಪತಿಯಾದ ರಾಜನನ್ನು ಅವಮಾನಗೊಳಿಸಬೇಡ. ಛೀ! ಅದು ಯೋಗ್ಯವಲ್ಲ' ಎಂದು ಪ್ರತಿಭಟಿಸಿದರೂ ಹಿಂದೆಗೆಯದೆ ಭೀಮಸೇನನು ರತ್ನಕಾಂತಿಯಿಂದ ಥಳಥಳಿಸುವ ಕುರುರಾಜನ ಕಿರೀಟವನ್ನು ಎಡಗಾಲಿನಿಂದ ಒದೆದನು.

8. ಒದೆದ ರಭಸಕ್ಕೆ ದುರ್ಯೋಧನನ ಕಿರೀಟದ ರತ್ನಗಳೆಲ್ಲವೂ, ಭೀಮಸೇನನ ಪ್ರಜ್ವಲ ಕೋಪಾಗ್ನಿ ಕಿಡಿಗಳಂತೆ ಎತ್ತೆತ್ತಲೂ ಹರಡಿದವು.

9. 'ದೇವೇಂದ್ರನು ಜಂಭನೆಂಬ ರಾಕ್ಷಸನೊಂದಿಗೆ ಮಾಡಿದ ಯುದ್ಧವನ್ನೂ ನೋಡಿದೆವು; ರಾಮಚಂದ್ರನು ರಾವಣಾಸುರನೊಂದಿಗೆ ಮಾಡಿದ ಯುದ್ಧವನ್ನೂ ನೋಡಿದೆವು. ಆದರೆ ಮಹಾವೀರನಾದ, ಮಹಾವೀರರಿಗೆ ಯಮನಾದ ಈ ಭೀಮನಂತೆ ಯುದ್ಧ ಮಾಡಿದವರನ್ನು ಈ ಮೊದಲು ನಾವೆಲ್ಲಿಯೂ ಕಂಡಿರಲಿಲ್ಲ' ಎಂದು ನಾರದಾದಿಗಳು ದೇವದುಂದುಭಿಗಳ ಧ್ವನಿಯೊಡನೆ ಕುಣಿದಾಡಿದರು.

10. ರಾಜನಾದ ಧರ್ಮರಾಯನಿಗೆ ತಿಳಿಸಿ, ಚಕ್ರವರ್ತಿಯಾಗಿದ್ದ ಕುರುರಾಜನ ವಂಶಕ್ಕೆ ಕಾಳರಾತ್ರಿಯೆನಿಸಿದ ದ್ರೌಪದಿಗೂ ಹೇಳಿ ಕಳುಹಿಸಿ ಬರ ಮಾಡಿಕೊಂಡು, ಭೀಮಸೇನನು –

11. 'ಎಲೌ ಕಮಲಮುಖೀ, ನೋಡು! ಕೋಪದಿಂದ ನನ್ನನ್ನು ನಂಜಿಕ್ಕಿ ಕೊಲ್ಲ ಬಯಸಿದವನನ್ನು ಅರಗಿನ ಮನೆಯಲ್ಲಿಟ್ಟು ನಮ್ಮನ್ನು ಸುಟ್ಟು ಹಾಕಲು ಹವಣಿಸಿದವನನ್ನು, ಜೂಜಾಟದಲ್ಲಿ ಭೂಮಿಯನ್ನೆಲ್ಲ ಗೆದ್ದುಕೊಂಡಿದ್ದವನನ್ನು, ಬಲುದರ್ಪವೇರಿ ನಿನ್ನ ಮುಡಿಯನ್ನು ತನ್ನ ತಮ್ಮನಿಂದ ಹಿಡಿದೆಳೆಯಿಸಿದ ನೀಚ, ದ್ರೋಹಿ, ಚಂಚಲ, ಚಾಂಡಾಲ, ಪಾತಕಿಯು ಈಗ ಹೊಂದಿರುವ ಅವಸ್ಥೆಯನ್ನು ನೋಡು'.

12. 'ಎಲೌ ಅಗ್ನಿಪುತ್ರಿಯೇ, ಧರ್ಮರಾಜನೇ ಯಜಮಾನನಾಗಿ, (ಅವನ ತಮ್ಮಂದಿರಾದ) ನಾವು ನಾಲ್ವರೂ ಋತ್ವಿಜರಾಗಿ, ಶ್ರೀಕೃಷ್ಣನು ಉಪದೇಶಕನಾಗಿ ನೀನು ವ್ರತಧಾರಿಣಿಯಾಗಿ, ನಿನಗಾಗಿದ್ದ ಅವಮಾನವೇ ಪ್ರೇರಕವಾಗಿ, ನನ್ನ ಕೋಪಾಗ್ನಿಯೇ ಬೆಂಕಿಯಾಗಿ, ಯುದ್ಧವೆಂಬ ಯಜ್ಞದಲ್ಲಿ ಕುರುರಾಜನೆಂಬ ಈ ಯಜ್ಞಪಶುವನ್ನು ಬಲಿಕೊಟ್ಟೆನು' ಎಂದು ಕಾಲು ಮುರಿದುಕೊಂಡು ಸೂರ್ಯನ ಸಾರಥಿಯಾದ ಅರುಣನಂತೆ ಕಾಣುತ್ತಿದ್ದ ದುರ್ಯೋಧನನನ್ನು ದ್ರೌಪದಿಗೆ ತೋರಿ,

13. 'ಕೌರವನ ಮಾಂಸಾಹುತಿಯಿಂದ ನನ್ನ ಕೋಪಾಗ್ನಿಗೆ ತೃಪ್ತಿಯಾಯಿತು. ದುಸ್ಸಾಧ್ಯನಾದ

10th_Kannada_Reader1-5.indd 8 03-04-2019 14:07:52

ದುರ್ಯೋಧನನ ದೇಹವನ್ನು ಹೊಡೆದು ಚಿಮ್ಮಿಸಿದ ರಕ್ತದಿಂದ ನನಗೆ ಅವಭೃತ ಸ್ನಾನವಾಯಿತು'.

14. 'ಶತ್ರುಸಂಹಾರವಾಯಿತು. ಇನ್ನು ನಿನ್ನ ಮುಡಿಯನ್ನು ಕಟ್ಟಿಕೋ' ಎಂದು ಭೀಮನು ನುಡಿದನು. ಆಗ ದ್ರೌಪದಿಯು ನಗುಮುಖದಿಂದ, 'ಸತ್ಯಾಶ್ರಯನೇ, ಮುಡಿ ಕಟ್ಟಿಕೊಳ್ಳುವ ಅಭ್ಯಾಸವು ಹಲವಾರು ವರ್ಷಗಳಿಂದ ತಪ್ಪಿ ಹೋಗಿರುವುದರಿಂದ ಹೇಗೆ ಕಟ್ಟುವುದೆಂಬುದೇ ನನಗೆ ಮರೆತು ಹೋಗಿದೆ. ಆದುದರಿಂದ ಶತ್ರುವನ್ನು ಸಂಹರಿಸಿದ ನೀನೇ ನನ್ನ ಮುಡಿಯನ್ನು ಕಟ್ಟು'

ವಚನ: ಎಂದು ನುಡಿದು ಅವನ ಕೈಯ್ಯನ್ನು ಹಿಡಿದೆತ್ತಲಾಗಿ, 'ಆಗಲಿ, ಹಾಗೆಯೇ ಮಾಡುವೆನು' ಎಂದ ಭೀಮನು ಅವಳ ಕೂದಲನ್ನು ಹೆಣೆದು ಕಟ್ಟಿ,

15. 'ತೋಳ್ಬಲದಲ್ಲಿ ಮಿಗಿಲಾದವರು, ರತ್ನಕಿರೀಟಧಾರಿಗಳು, ಪಟ್ಟಾಭಿಷಿಕ್ತರು, ಯುದ್ಧದಲ್ಲಿ ಪ್ರಚಂಡವಾಗಿ ಹೋರಾಡಿ ಶತ್ರುಗಳನ್ನು ಗೆದ್ದ ಕ್ಷತ್ರಿಯರು, ವಿಜಯಶ್ರೀಗೆ ನೆಲೆಯಾದವರು, (ಯಜ್ಞ ಮಾಡಿ) ಸೋಮರಸಪಾನದಿಂದ ಪವಿತ್ರರಾದವರು – ಈ ಎಲ್ಲರೂ ಇದರಲ್ಲಿ ನಿರ್ನಾಮವಾಗಿ ಹೋದರು. ಕಂಡೆಯಾ, ನಿನ್ನ ಈ ಕೇಶಪಾಶವು ಕುರುರಾಜನಿಗೆ ಯಮಪಾಶವಾಯಿತು?'

ವಚನ: ಎಂದು ಹೊಗಳಿ ಅವಳ ಮುಡಿಯನ್ನು ಮಂಗಳವಾದ ಮಾಲೆಯಿಂದ ಅಲಂಕರಿಸಲಾಗಿ,

16. ಮನ್ಮಥನಿಗೇ ಜೀವ ನೀಡುವ ಸಂಜೀವನದಂತಿದ್ದ ದ್ರೌಪದಿಯು ಹೂ ಮುಡಿದುಕೊಂಡಳು. ಆಗ ಆಕೆಯ ಶೃಂಗಾರ, ಆ ಭಾವ, ಆ ರೂಪ, ಆ ವಿಭ್ರಮ, ಆ ಬೆಡಗು, ಅತಿಶಯವಾದ ಆ ಸೌಂದರ್ಯ, ಆ ಬಿಂಕ, ಚಂಚಲವಾದ ಆ ಕುಡಿನೋಟ, ಆ ವಿಲಾಸ, ಆ ಸೊಬಗು, ಆ ಲಾವಣ್ಯ, ಆ ಪುಣ್ಯ, ಆ ಮಂದಹಾಸದ ಅಮೃತ – ಇವು ಒಂದೊಂದೂ ಭೀಮನಿಗೆ ಎಷ್ಟೊಂದು ಆನಂದವನ್ನು ಉಂಟು ಮಾಡಿದವು!

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಭೀಮನು ಹೇಗೆ ಬಿದ್ದಿದ್ದನು ?
2. ಮೂರ್ಛೆಗೊಂಡು ಬಿದ್ದಿದ್ದ ಭೀಮನನ್ನು ಕಂಡು ದುರ್ಯೋಧನನು ಏನು ಮಾಡಿದನು ?
3. ಭೀಮನು ಹೇಗೆ ಎಚ್ಚರಗೊಂಡನು ?
4. ಕೃಷ್ಣನು ಭೀಮನಿಗೆ ಹೇಗೆ ಸೂಚನೆ ಕೊಟ್ಟನು ?
5. ಭೀಮನು ದ್ರೌಪದಿಯನ್ನು ಬರಹೇಳಿ, ಅವಳಿಗೆ ಏನೆಂದನು ?
6. ದ್ರೌಪದಿಯು ಭೀಮನಿಗೆ ಏನೆಂದಳು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. 'ಬಿದ್ದವನನ್ನು ಹೊಡೆಯೆನು' ಎಂದು ದುರ್ಯೋಧನನು ಏನು ಮಾಡಿದನು?
2. ಕೃಷ್ಣನ ಸೂಚನೆಯನ್ನರಿತ ಭೀಮನು ಏನು ಮಾಡಿದನು ?
3. ದುರ್ಯೋಧನನು ಹೇಗೆ ಬಿದ್ದನು ?
4. ನಾರದ ಹಾಗೂ ದೇವಾನುದೇವತೆಗಳು ಭೀಮ–ದುರ್ಯೋಧನರ ಯುದ್ಧವನ್ನು ಕಂಡು ಏನೆಂದು ಮಾತನಾಡಿಕೊಂಡರು ?
5. ದುರ್ಯೋಧನನು ಬಿದ್ದಿರುವುದನ್ನು ಕಂಡು ಭೀಮನು ದ್ರೌಪದಿಗೆ ಏನೆಂದು ಹೇಳಿದನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭೀಮ ದುರ್ಯೋಧನರ ಗದಾಯುದ್ಧವನ್ನು ವರ್ಣಿಸಿ.
2. ಸೋತು ಬಿದ್ದಿರುವ ದುರ್ಯೋಧನನನ್ನು ಕಂಡು ಭೀಮನು ಏನು ಮಾಡಿದನು?
3. ದ್ರೌಪದಿ ಹಾಗೂ ಭೀಮನ ನಡುವೆ ನಡೆದ ಮಾತುಗಳನ್ನು ವಿವರಿಸಿ.
4. ದ್ರೌಪದಿಯ ಕೂದಲನ್ನು ಕಟ್ಟಿದವರು ಯಾರು? ಹೇಗೆ ? ಕಾರಣ ಸಹಿತ ವಿವರಿಸಿ.

10th_Kannada_Reader1-5.indd 9 03-04-2019 14:07:52

ಭಾಷಾಭ್ಯಾಸ

1. ಈ ಕೆಳಕಂಡ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಪಗೆ

ಪವನ

ಅಂಬರ

ಕೃಷ್ಣೆ

ಪೂ

2. ಈ ಕೆಳಕಂಡ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಪಗೆ

ಜವ

ಪ್ರತಿಜ್ಞೆ

ಅಗ್ನಿ

ಶೃಂಗಾರ

ಮೊಗ

3. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಭುವನಾಧಿಪತ್ಯ

ಸುರಾಂಗನೆ

ಕೋಪಾಗ್ನಿ

ನೋಡದು

4. ಸಮಾಸ ಬಿಡಿಸಿ, ಹೆಸರಿಸಿ.

ಪವನಜ

ಧರ್ಮಯುದ್ಧ

ಮಕುಟ ಮಣಿ

ಪಾಂಚಾಲೆ

ಮುರಹರ

ಚಟುವಟಿಕೆ

1. ಗದಾಯುದ್ಧ ನಾಟಕವನ್ನು ಅಭಿನಯಿಸಿ ಆನಂದಿಸಿ.
2. ಮಹಾಭಾರತದ ಕಥೆಗಳನ್ನು ಓದಿ ತಿಳಿದುಕೊಳ್ಳಿರಿ.



10th_Kannada_Reader1-5.indd 10 03-04-2019 14:07:53

ಘಟಕ ಒಂದು

ನಮ್ಮ ಭಾಷೆ, ಸಂಸ್ಕೃತಿ ಬಗ್ಗೆ ನಮ್ಮ ಅಭಿಮಾನ

–ಡಾ. ಶ್ರೀಕೃಷ್ಣಭಟ್ ಅರ್ತಿಕಜೆ



ಮಾನವ ತನ್ನ ಭಾವನೆಗಳನ್ನು ವ್ಯಕ್ತ ಪಡಿಸಲು ಇರುವ ಮಾಧ್ಯಮ ಭಾಷೆ. ಅದರಲ್ಲೂ ಮಾತೃಭಾಷೆಯು ಅವರವರ ಹೃದಯಕ್ಕೆ ಸನಿಹವಾದದ್ದು. ನಮ್ಮ ಭಾರತ ವಿವಿಧ ಭಾಷೆ–ಸಂಸ್ಕೃತಿ, ಮತ–ಧರ್ಮಗಳ ಬೀಡು. ಪ್ರತಿಯೊಬ್ಬರಿಗೂ ಅವರವರ ಮಾತೃಭಾಷೆಯ ಬಗ್ಗೆ ಹೆಮ್ಮೆ, ಗೌರವ, ಅಭಿಮಾನವಿರಬೇಕು ಹಾಗೂ ಅದನ್ನು ಉಳಿಸಿ ಬೆಳೆಸಬೇಕಾದದ್ದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿರುತ್ತದೆ. ಕನ್ನಡ ನಮ್ಮ ಮಾತೃಭಾಷೆ. ಈ ಭಾಷೆಯ ಹಿರಿಮೆ ಗರಿಮೆಗಳು ನಡೆದು ಬಂದ ದಾರಿ, ಸೇವೆಗೈದ ಕವಿಗಳು, ಅವರ ಕವನಗಳ ವಿವರಣೆಯ ಜೊತೆಗೆ ಇಂದಿನವರಾದ ನಾವು ಕನ್ನಡವನ್ನು ಹೇಗೆ ಉಳಿಸಿ ಬೆಳೆಸಬೇಕು ಎಂಬ ಕರೆಯನ್ನು ಲೇಖಕರು ಈ ಲೇಖನದಲ್ಲಿ ವಿವರಿಸಿದ್ದಾರೆ.



10th_Kannada_Reader1-5.indd 11 03-04-2019 14:07:54

'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪೀ ಗರೀಯಸೀ' ಎಂದರೆ ತಾಯಿ ಹಾಗೂ ತಾಯಿ ನಾಡು ಸ್ವರ್ಗಕ್ಕಿಂತಲೂ ಮೇಲು ಎಂದು ಅರ್ಥ. ಹಾಗಾದರೆ ತಾಯಿನುಡಿ ಆ ದೇವಭಾಷೆಗಿಂತಲೂ ಮಿಗಿಲು ಎಂದ ಹಾಗಾಯಿತಲ್ಲವೇ? ಪ್ರತಿಯೊಬ್ಬ ವ್ಯಕ್ತಿಗೂ ತಾನು ತನ್ನದು ಎಂಬ ಅಭಿಮಾನ, ಮಮತೆ ಇದ್ದೇ ಇರುತ್ತದೆ. ಅಂತಹ ಗುಣವಿಲ್ಲದವನು ಮಾನವನಾಗಲು ಸಾಧ್ಯವಿಲ್ಲ. ಆದರೆ ಅದು ಅಭಿಮಾನವಾಗಿರಬೇಕೇ ಹೊರತು ಎಲ್ಲೆ ಮೀರಿ ದುರಭಿಮಾನವಾದಾಗ ಅನರ್ಥಕ್ಕೆ, ವಿನಾಶಕ್ಕೆ ಕಾರಣವಾಗುತ್ತದೆ. ಸ್ವಾಭಿಮಾನವೆಂಬುದು ಎಲ್ಲರಲ್ಲೂ ಇರಬೇಕಾದ ಗುಣ. ಸ್ವಾಭಿಮಾನವೆಂದರೆ ಅಹಂಕಾರವೆಂದು ಅರ್ಥವಲ್ಲ. ತನ್ನ ಬಗ್ಗೆ ಮತ್ತು ತನ್ನತನದ ಬಗ್ಗೆ ಇರುವ ಪೂರ್ಣ ಅರಿವು ಮತ್ತು ವಿಶ್ವಾಸ ಎಂದರ್ಥ. ಸ್ವಾಭಿಮಾನದಿಂದ ನಮ್ಮ ವ್ಯಕ್ತಿತ್ವ ವಿಕಾಸವಾಗುತ್ತದೆ. ನಮ್ಮಲ್ಲಿರಬೇಕಾದ ಇನ್ನೊಂದು ಗುಣ ಸಮನ್ವಯ ದೃಷ್ಟಿ. ಅದು ನಮ್ಮ ವ್ಯಕ್ತಿತ್ವ ಬೆಳೆಯುವುದಕ್ಕಾಗಿ ಎಲ್ಲಾ ಕಡೆಗಳಿಂದ ಎಲ್ಲ ಬಗೆಯ ಉತ್ತಮ ಅಂಶಗಳನ್ನೂ ಸ್ವಾಗತಿಸುವ ಗುಣ. ಒಳ್ಳೆಯ ಅಂಶಗಳನ್ನು ಸ್ವೀಕರಿಸುವ ಗುಣ.

ಪ್ರತಿಯೊಂದು ಮಾನವ ಜನಾಂಗಕ್ಕೂ ಅದರದ್ದೇ ಆದ ಭಾಷೆ ಹಾಗೂ ಸಂಸ್ಕೃತಿ ಇರುತ್ತದೆ. ಸಂಸ್ಕೃತಿಯು ಆ ಜನತೆಯ ಸಮಗ್ರ ಜೀವನ ವಿಧಾನವನ್ನು ಪ್ರತಿಬಿಂಬಿಸುತ್ತದೆ. ಸಂಸ್ಕೃತಿಯ ಅರ್ಥ ಬಹಳ ವಿಶಾಲವಾದುದು. ಸಂಸ್ಕೃತಿಯಲ್ಲಿ ಜನತೆಯ ಧರ್ಮ, ಮೌಲ್ಯ, ಕಲೆಗಳು, ಸಾಹಿತ್ಯ, ರಾಜಕೀಯ, ಸಾಮಾಜಿಕ, ಆರ್ಥಿಕ ವಿಧಾನಗಳು, ಉಡುಗೆ–ತೊಡುಗೆ, ಆಹಾರ ವಿಧಾನಗಳು, ಆಚಾರ–ಪದ್ಧತಿ, ಉದ್ಯೋಗ, ಮತ–ಧರ್ಮ, ಕಾನೂನು ಎಲ್ಲವೂ ಒಳಗೊಳ್ಳುತ್ತವೆ. ತಮ್ಮ ತಮ್ಮ ಭಾಷೆ, ಸಾಹಿತ್ಯ, ಕಲೆ ಮುಂತಾದವುಗಳನ್ನು ಉಳಿಸಿ ಬೆಳೆಸುವುದರ ಮೂಲಕ ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರಬೇಕಾದ್ದು ಪ್ರತಿಯೊಂದು ಜನಾಂಗದ ಜೀವನ ಧರ್ಮವಾಗಿದೆ. ಅಂತೆಯೇ ನಾವೂ ನಮ್ಮ ಭಾಷೆ, ಸಂಸ್ಕೃತಿಗಳ ಬಗ್ಗೆ ಅಭಿಮಾನ ಹೊಂದಿ ಅವನ್ನು ಸಂರಕ್ಷಿಸಲು ಮುಂದಾಗಬೇಕು.

ಕರ್ನಾಟಕಕ್ಕೆ ಭಾರತದಲ್ಲೇ ಅತ್ಯುಜ್ವಲವಾದ ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆ ಇದೆ. ಕನ್ನಡ ಭಾಷೆ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದು. ಅದಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ನಮ್ಮ ಆಳಿ ಹೋದ ರಾಜ ಮನೆತನಗಳೇ ಕರ್ನಾಟಕ ಸಂಸ್ಕೃತಿಯ ಭವ್ಯ ಪರಂಪರೆಗೆ ಸಾಕ್ಷಿ. ಚೀನೀ ಪ್ರವಾಸಿಯಾದ ಹ್ಯೂಯೆನ್‌ತ್ಸಾಂಗನು ಕನ್ನಡಿಗರ ಧೈರ್ಯ ಶೌರ್ಯ ಸ್ವಾಭಿಮಾನ ನಿಷ್ಠಾವಂತ ಗುಣಗಳನ್ನು ಮುಕ್ತಕಂಠದಿಂದ ಹೊಗಳಿದ್ದಾನೆ. ಸ್ವಾಭಿಮಾನ, ಸ್ವಂತಿಕೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿಕೊಂಡ ಕರ್ನಾಟಕ ಸಂಸ್ಕೃತಿಯು ಸಮನ್ವಯವನ್ನು ಸಾಧಿಸಿದೆ. ನಮ್ಮ ಹಿಂದಿನ ಅನೇಕ ಕವಿಗಳ ಕೃತಿಗಳಲ್ಲಿ ಕರ್ನಾಟಕ ಸಂಸ್ಕೃತಿಯ ಸಾರ ಒಳಗೊಂಡಿರುವುದನ್ನು ನಾವು ಗಮನಿಸಬಹುದು. ಕರ್ನಾಟಕ ಸಂಸ್ಕೃತಿಯು ಇಟ್ಟುಕೊಂಡಿದ್ದ ಮೇಲ್ಪಂಕ್ತಿಯ ಆದರ್ಶವನ್ನೂ, ಕನ್ನಡ ಸಂಸ್ಕೃತಿಯ ಸಮನ್ವಯ ಗುಣಗಳನ್ನೂ ಕನ್ನಡದ ಮೊದಲ ಉಪಲಬ್ಧ ಕೃತಿಯಾದ ಕವಿರಾಜ ಮಾರ್ಗದಲ್ಲಿ ಬರುವ 'ಅನ್ಯರ ವಿಚಾರಗಳನ್ನೂ, ಅನ್ಯರ ಧರ್ಮವನ್ನೂ ಸಹನೆಯಿಂದ ನೋಡುವುದೇ ನಿಜವಾದ ಐಶ್ವರ್ಯ' ಎಂಬ ಮಾತಿನಲ್ಲಿ ಕಾಣಬಹುದು. ಕನ್ನಡದ ಕವಿಗಳಿಗೆ ತಮ್ಮ ನಾಡುನುಡಿಯ ಮೇಲೆ ಅಪಾರ ಅಭಿಮಾನ, ಪ್ರೇಮ ಇತ್ತು. ಕನ್ನಡ ನಾಡಿನ ಜನರು ಚತುರರಾಗಿದ್ದು, 'ಕುರಿತೋದದೆಯುಂ ಕಾವ್ಯ ಪರಿಣತಮತಿಗಳ್' ಆಗಿದ್ದರೆಂದು ಕವಿರಾಜಮಾರ್ಗಕಾರ ಹೇಳುತ್ತಾನೆ. ಕನ್ನಡದ ಆದಿಕವಿ ಪಂಪನಿಗೆ ತನ್ನ ಹುಟ್ಟೂರಾದ ಬನವಾಸಿಯ ಬಗ್ಗೆ ಇದ್ದ ಪ್ರೇಮ ಅಪಾರ. ತನ್ನ ಕೃತಿಯಾದ ಪಂಪಭಾರತದಲ್ಲಿ ಅವನು, 'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್' ಎಂದೂ, 'ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದೂ ಹೇಳಿದ್ದಾನೆ. ಅಚ್ಚಗನ್ನಡದ ಅಭಿಮಾನಿ ಕವಿ ಆಂಡಯ್ಯನು, 'ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು' ಎಂಬ ಮಾತಿನಲ್ಲಿ ತನ್ನ ನಾಡ ಪ್ರೇಮವನ್ನು ಪ್ರಕಟಿಸಿದ್ದಾನೆ. ಹಿಂದಿನ ಕನ್ನಡ ಜನ ಸ್ವಾಭಿಮಾನಿಗಳೂ, ಸಮನ್ವಯ ದೃಷ್ಟಿಯವರೂ ಆಗಿದ್ದು ವಿಶಿಷ್ಟವಾದ ಕರ್ನಾಟಕ ಸಂಸ್ಕೃತಿಯೊಂದನ್ನು ಬೆಳೆಸಿದರು.

ಕನ್ನಡದ ಹಿರಿಮೆ–ಗರಿಮೆಗಳನ್ನು ಕುರಿತು ಹಿಂದಿನ ಕವಿಗಳಂತೆ ಆಧುನಿಕ ಕವಿಗಳೂ ಮುಕ್ತ ಕಂಠದಿಂದ ಕೊಂಡಾಡಿದ್ದಾರೆ. ದೇಶ–ಭಾಷೆಯ ಬಗ್ಗೆ ಅವರಿಗಿದ್ದ ಆದರ ಅಭಿಮಾನ ಅವರ ಮಾತುಗಳಲ್ಲಿ ಅಭಿವ್ಯಕ್ತವಾಗಿದೆ. ಕೆಲವರಲ್ಲಿ ಅದು ಅತಿ ಭಾವುಕತೆಗೂ ದಾರಿ ಮಾಡಿದೆಯೆಂದರೆ ತಪ್ಪಾಗದು. ನವೋದಯ ಕಾಲದ ಶ್ರೇಷ್ಠ ಕವಿಗಳಾದ ಬಿ.ಎಂ.ಶ್ರೀಕಂಠಯ್ಯನವರು 'ಕನ್ನಡದ ಬಾವುಟ' ಎನ್ನುವ ಕವನದಲ್ಲಿ, 'ಬಾಳ್ ಕನ್ನಡ ತಾಯ್, ಏಳ್ ಕನ್ನಡ ತಾಯ್, ಆಳ್ ಕನ್ನಡ ತಾಯ್, ಕನ್ನಡಿಗರೊಡತಿ, ಓ! ರಾಜೇಶ್ವರಿ' ಎಂದು ಅಭಿಮಾನದಿಂದ ನುಡಿದಿದ್ದಾರೆ. ಅಂತೆಯೇ, 'ಕಾಣಿಕೆ' ಎಂಬ ತಮ್ಮ

10th_Kannada_Reader1-5.indd 12 03-04-2019 14:07:54

ಕವನದಲ್ಲಿ ಅವರು, 'ಕನ್ನಡ ನುಡಿ ನಮ್ಮ ಹೆಣ್ಣು, ನಮ್ಮ ತೋಟದಿನಿಯ ಹಣ್ಣು' ಎಂದು ಹೇಳಿದ್ದಾರೆ. ಬಿ.ಎಂ.ಶ್ರೀ. ಅವರಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಮೇಲೆ ಸಮಾನ ರೀತಿಯ ಅಭಿಮಾನವಿತ್ತು. ಹುಯಿಲಗೋಳ ನಾರಾಯಣರಾಯರು ಬಹಳ ಹಿಂದೆಯೇ, 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದಿದ್ದಾರೆ. ಕರ್ನಾಟಕ ರಾಜ್ಯ ಉದಯವಾಯಿತು. ಆದರೆ ಕನ್ನಡಿಗರ ಅಭಿಮಾನ ಆ ಬಳಿಕ ಎತ್ತ ಸಾಗಿತು ಎಂಬುದೇ ತಿಳಿಯದು! 'ಸ್ವಾಗತ' ಎನ್ನುವ ಕವನದಲ್ಲಿ ತೀ.ನಂ.ಶ್ರೀಕಂಠಯ್ಯನವರು ಹೇಳಿದ ಮಾತುಗಳು ಗಮನಾರ್ಹವಾದವು. ಅವರು ತಮ್ಮ ಕವನದಲ್ಲಿ,

'ನಾವೆಲ್ಲರೊಡಗೂಡಿ ಒಡನಾಡಿ ಕಲೆತು
ಕನ್ನಡದ ಸೇವೆಯಲ್ಲಿ ನಮ್ಮ ಮೈಮರೆತು
ಕುಂದು ಕೊರತೆಗಳೊಂದಕಿಂಬಿಲ್ಲದಂತೆ
ನಮ್ಮ ಸಖ್ಯದ ಮೊಗ್ಗು ಬಿರಿದರಳುವಂತೆ
ದೇವಿ ಕರುಣಿಸಲಿ ವರವ!
ಕನ್ನಡದ ದೇವಿ ಕೈಗೊಳಲಿ ಫಲವ !' – ಎಂದಿದ್ದಾರೆ.

'ಆನಂದ ಕಂದ' ಎಂಬ ಕಾವ್ಯ ನಾಮದಲ್ಲಿ ಬರೆಯುತ್ತಿದ್ದ 'ಬೆಟಗೇರಿ ಕೃಷ್ಣಶರ್ಮ'ರು, 'ಕನ್ನಡ ನುಡಿ' ಎಂಬ ಕವನದಲ್ಲಿ, 'ಎನಿತು ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು' ಎಂದು ಕನ್ನಡ ನುಡಿ ಎಷ್ಟೊಂದು ಮಧುರ ಎಂದು ಕೊಂಡಾಡಿದ್ದಾರೆ. 'ಬಾರಿಸು ಕನ್ನಡ ಡಿಂಡಿಮವ, ಓ! ಕರ್ನಾಟಕ ಹೃದಯ ಶಿವ' ಎಂದು ಹಾಡಿದ ರಾಷ್ಟ್ರಕವಿ ಕುವೆಂಪು ಅವರ ಕನ್ನಡಾಭಿಮಾನದ ಆಳ ಅಗಲಗಳನ್ನರಿಯುವುದು ಸಾಧ್ಯವಿಲ್ಲ. 'ಮೆಟ್ಟುವ ನೆಲ ಕರ್ನಾಟಕ' ಎಂಬ ಕವನದಲ್ಲಿ ಅವರು,

'ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು'

'ನೀ ಮೆಟ್ಟುವ ನೆಲ ಅದೆ ಕರ್ನಾಟಕ' ಎಂಬ ಅಭಿಪ್ರಾಯವನ್ನು ತಳೆದು ಕೊನೆಗೆ, 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎನ್ನುತ್ತಾರೆ. ಕನ್ನಡಾಂಬೆಯ ಹಿರಿಮೆಯನ್ನು ವರ್ಣಿಸುತ್ತಾ 'ಬೆನಗಲ್ ರಾಮರಾಯ'ರು, 'ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ. ಕನ್ನಡವೆ ಎನ್ನುಸಿರು, ಪೆತ್ತೆನ್ನ ತಾಯಿ' ಎಂಬ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. 'ಹನುಮಂತ ರಂಗೋಕಟ್ಟಿ' ಎಂಬುವರು, 'ಕನ್ನಡ' ಎಂಬ ತಮ್ಮ ಕವನದಲ್ಲಿ, 'ಕನ್ನಡಿಗರ ಕರ ವೀರರವು, ಕನ್ನಡಿಗರ ಶಿರ ಚದುರರವು, ಕನ್ನಡಿಗರ ಉರ ಭಕ್ತರವು, ಕನ್ನಡ ಕತ್ತುರಿ ಕಂಪಲ್ಲೆ, ಕನ್ನಡಿಗರ ಸಿರಿ ಮೆರೆದಿಲ್ಲೆ' ಎಂದು ಕನ್ನಡಿಗರ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ. ರಾಷ್ಟ್ರಕವಿ 'ಮಂಜೇಶ್ವರ ಗೋವಿಂದ ಪೈ'ಗಳು, 'ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು' ಎಂದು 'ಕನ್ನಡಿಗರ ತಾಯಿ' ಎಂಬ ಕವನದಲ್ಲಿ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಕನ್ನಡದ ಪ್ರಸಿದ್ಧ ಕವಿಯಾದ 'ಜಿ.ಪಿ.ರಾಜರತ್ನಂ' ಅವರು 'ಕನ್ನಡ್ ಪದಗೊಳ್' ಎಂಬ ಕವನದಲ್ಲಿ 'ಯೆಂಡ ಓಗ್ಲಿ, ಯೆಡ್ತಿ ಓಗ್ಲಿ! ಎಲ್ಲಾ ಕೊಚ್ಕೊಂಡ್ ಓಗ್ಲಿ, ಪರ್ಪಂಚ್ ಇರೋತನ್ಕ ಮುಂದೆ ಕನ್ನಡ್ ಪದಗೊಳ್ ನುಗ್ಲಿ' ಎಂದು ಹೇಳುತ್ತಾ, 'ನರಕಕ್ಕ್ ಇಳ್ಸಿ, ನಾಲ್ಗೆ ಸೀಳ್ಸಿ, ಬಾಯೊಲ್ಸಾಕುದ್ರೂವೆ ಮೂಗ್ನಲ್ ಕನ್ನಡ್ ಪದವಾಡ್ತೀನಿ, ನನ್ ಮನಸನ್ ನೀ ಕಾಣೆ' ಎಂದಿದ್ದಾರೆ. ಎಂತಹ ಅಪೂರ್ವವಾದ ಕನ್ನಡ ಅಭಿಮಾನ ಅವರದು.

ಅನೇಕರಿಗೆ ಕನ್ನಡ ಮಾತನಾಡುವುದೇ ತಮ್ಮ ಅಂತಸ್ತಿಗೆ, ಅಭಿಮಾನಕ್ಕೆ ಕೀಳೆಂಬ ಭಾವನೆಯಿದೆ. ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಘನತೆ ಗೌರವ ಎಂಬ ನಂಬಿಕೆಯಿದೆ. ಕನ್ನಡ ಕಲಿಯುವವರ ಬಗ್ಗೆ, ಕನ್ನಡ ಮಾತನಾಡುವವರ ಬಗ್ಗೆ ಹೆಚ್ಚೇಕೆ, ಕೆಲವೊಮ್ಮೆ ಕನ್ನಡ ಅಧ್ಯಾಪಕರ ಬಗ್ಗೆ ತಿರಸ್ಕಾರದ ಮನೋಭಾವವಿದೆ. ಕನ್ನಡ ನಾಡಿನಲ್ಲಿಯೇ ಹಲವರಿಗೆ ಕನ್ನಡದ ಬಗೆಗೆ ಈ ರೀತಿಯ ದೃಷ್ಟಿಕೋನವಿರುವಾಗ ಹೊರನಾಡಿನಲ್ಲಿರುವ ಕನ್ನಡಿಗರ ಸ್ಥಿತಿಯೇನು? ಇನ್ನು ಕೆಲವರು ಭಾಷಣದಲ್ಲಿ ಎಂತಹ ಕಟ್ಟಾ ಕನ್ನಡಾಭಿಮಾನಿಗಳೇ ಆಗಿದ್ದರೂ ತಮ್ಮ ಮಕ್ಕಳನ್ನು ಕನ್ನಡ ಕಲಿಸುವ ಸೌಲಭ್ಯವಿದ್ದರೂ ಇಂಗ್ಲಿಷ್ ಶಾಲೆಗೇ ಕಳುಹಿಸುತ್ತಾರೆ. ಕರ್ನಾಟಕದ ಹೊರಗೆ ಕನ್ನಡದ ಶಾಲೆಗಳು ಇಲ್ಲದಂತಹ ಸ್ಥಳಗಳಲ್ಲಿ ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಕಳುಹಿಸಬೇಕಾಗುತ್ತದೆ. ಆದರೆ ಕನ್ನಡಿಗರು ತಮ್ಮ ಮಕ್ಕಳಿಗೆ ಖಾಸಗಿಯಾದರೂ ಕನ್ನಡ ಕಲಿಸುವ ವ್ಯವಸ್ಥೆ ಮಾಡಿ, ಮಕ್ಕಳಲ್ಲಿ ಮಾತೃಭಾಷೆಯ ಮೇಲೆ ಅಭಿಮಾನ ಹುಟ್ಟುವಂತೆ ಮಾಡಬೇಕು. ಕಾನ್ವೆಂಟ್‌ನಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಕಲಿತ ಹಾಗೂ ಕಲಿಯುತ್ತಿರುವ ಇಂದಿನ ಹದಿಹರೆಯದ ತರುಣ ತರುಣಿಯರು, 'ಕನ್ನಡದಲ್ಲೇ ಯಾಕೆ ಮಾತನಾಡಬೇಕು? ಯಾವ ಭಾಷೆಯಲ್ಲಿ ಮಾತನಾಡಿದರೆ ಏನು?' ಎಂದು ಸವಾಲು ಹಾಕುತ್ತಾರೆ. ಭಾಷೆ, ವೇಷ–ಭೂಷಣ, ನಡೆ–ನುಡಿ, ಎಲ್ಲದರಲ್ಲೂ ವಿದೇಶೀಯರನ್ನು ನಾವು ಅನುಕರಿಸುತ್ತಿದ್ದೇವೆ. ನಮ್ಮತನ, ನಮ್ಮ ಭಾಷೆ, ಸಂಸ್ಕೃತಿಗಳನ್ನು ಮರೆಯುತ್ತಿದ್ದೇವೆ.

10th_Kannada_Reader1-5.indd 13 03-04-2019 14:07:54

ಕೆಲವೊಂದು ವಿಷಮ ಸನ್ನಿವೇಶಗಳಲ್ಲಿ ಹೊರನಾಡಿನಲ್ಲಿರುವ ಕನ್ನಡಿಗರ ಕನ್ನಡಾಭಿಮಾನಕ್ಕೆ ಧಕ್ಕೆ ಬರುತ್ತದೆ. ಕಾವೇರಿ ನೀರಿನ ವಿವಾದದಿಂದ ಉಂಟಾದ ಕಾವೇರಿದ ವಾತಾವರಣ ಇದಕ್ಕೊಂದು ಉದಾಹರಣೆ. ಭಾಷಾವಾರು ಪ್ರಾಂತ ರಚನೆಯೇ ಇಂತಹ ಅನಾಹುತಗಳಿಗೆ ಮುಖ್ಯ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಕರ್ನಾಟಕದಿಂದ ತಮಿಳುನಾಡಿಗೆ ಬಂದು ನೆಲೆಸಿದ ತಮ್ಮ ಮಾತೃಭಾಷೆ ಬೇರೆಯಾದ ಕನ್ನಡಿಗರು ತಮಿಳನ್ನು ಕಲಿತು, ತಮಿಳಿನಲ್ಲೇ ವ್ಯವಹರಿಸುತ್ತಾರೆ. ಕನ್ನಡ ಗೊತ್ತಿದ್ದರೂ ಅವರು ಇತರ ಕನ್ನಡಿಗರೊಡನೆ ತಮಿಳಿನಲ್ಲೇ ಮಾತನಾಡುವುದೂ ಇದೆ. ಅಂತಹ ಕನ್ನಡಿಗರ ಮಕ್ಕಳಿಗೆ ಕನ್ನಡವೇ ಬಾರದು. ಕೆಲವೊಮ್ಮೆ ಇದೆಲ್ಲಾ ಸಹಜ, ಅನ್ನಿಸುತ್ತದೆ. ಆದರೂ ಕನ್ನಡಿಗರಾದ ನಾವು, ಕನ್ನಡವನ್ನು ಮರೆಯಬಾರದು. ಕಷ್ಟಪಟ್ಟಾದರೂ ನಮ್ಮ ಮಕ್ಕಳಿಗೆ ಮಾತನಾಡಲು, ಓದಲು, ಬರೆಯಲು ಬರುವಷ್ಟು ಕನ್ನಡವನ್ನು ಕಲಿಸಬೇಕಾದ್ದು ನಮ್ಮ ಧರ್ಮ. ಅಲ್ಪಸಂಖ್ಯಾತ ಭಾಷಾ ಜನಾಂಗವು ಬಹುಸಂಖ್ಯಾತ ಜನಾಂಗದ ಮಧ್ಯೆ ಸೇರಿಕೊಂಡಾಗ ತನ್ನ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನುಳಿಸಲು ಹೋರಾಡಬೇಕಾಗುತ್ತದೆ. ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರು ಬಹಳ ಹಿಂದೆಯೇ ಹೇಳಿದ ಮಾತುಗಳು ಗಮನಾರ್ಹವಾದವುಗಳು : 'ಕನ್ನಡಿಗರೇ, ನಾವು ನಮ್ಮ ಆಲಸ್ಯವನ್ನು ತಳ್ಳೋಣ; ಭ್ರಾಮಕ ಕಲ್ಪನೆಗಳನ್ನು ಬಿಟ್ಟುಬಿಡೋಣ; ಮತ್ತು ಮುಂದಿನ ಮಾರ್ಗಕ್ಕೆ ಹತ್ತೋಣ; ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಆರ್ಯ ಸಂಸ್ಕೃತಿಯನ್ನು ನಾವು ಉದ್ಧರಿಸದೆ ಇನ್ನಾರು ಉದ್ಧರಿಸುವವರು? ಕನ್ನಡಿಗರು ಹೇಡಿಗಳು, ಹಿಂದುಳಿದವರು, ಅಭಿಮಾನ ಶೂನ್ಯರು ಎಂದು ಮೊದಲಾಗಿ ಕಟುವಾದ ನುಡಿಗಳಿಂದ ನಮ್ಮನ್ನು ಚುಚ್ಚುವವರಿಗೆ ನಾವು ನಮ್ಮ ಕ್ರಿಯಾಶಕ್ತಿಯಿಂದ ಉತ್ತರ ಕೊಡೋಣ... ಕರ್ನಾಟಕ ಸಂಸ್ಕೃತಿ ಎಂಬ ಗುಪ್ತಗಾಮಿನಿಯಾದ ಗಂಗೆಯನ್ನು ಮೇಲಕ್ಕೆ ಎತ್ತಿ ತರೋಣ; ಏಳಿರಿ! ಇದೀಗ ನಮ್ಮ ಮುಖ್ಯ ಕರ್ತವ್ಯವು'

ಆಲೂರು ವೆಂಕಟರಾಯರ ಈ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ.

'ಸಿರಿಗನ್ನಡಂ ಗೆಲ್ಗೆ!
ಹಿರಿಗನ್ನಡಂ ಗೆಲ್ಗೆ!
ಸಿರಿಗನ್ನಡಂ ಗೆಲ್ಗೆ, ಬಾಳ್ಗೆ!
ಕನ್ನಡ ತಾಯ್ ಗೆಲ್ಗೆ, ಬಾಳ್ಗೆ!'

(ಬಿ.ಎಂ.ಶ್ರೀ).

ಕೃತಿ–ಕರ್ತೃ ಪರಿಚಯ



ಡಾ.ಶ್ರೀಕೃಷ್ಣಭಟ್ ಅರ್ತಿಕಜೆ

ಚೆನ್ನೈ ಕನ್ನಡ ವಲಯದಲ್ಲಿ ಚಿರಪರಿಚಿತರಾಗಿರುವ ಇವರು ದಕ್ಷಿಣ ಕನ್ನಡದ ಪುತ್ತೂರಿನವರು. ಇವರು ತಮ್ಮ ಶಿಕ್ಷಣವನ್ನು ಪುತ್ತೂರು ಹಾಗೂ ಕಾಸರಗೋಡಿನಲ್ಲಿ ಮುಗಿಸಿ, ಮದರಾಸು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ.

ಬೋಧನೆ, ಸಂಶೋಧನೆ, ಸಾಹಿತ್ಯ ರಚನೆ, ಅನುವಾದ ಹೀಗೆ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕನ್ನಡ, ತಮಿಳು, ಮಲಯಾಳಂ, ತೆಲುಗು, ತುಳು, ಹಿಂದಿ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳನ್ನು ತಿಳಿದವರು. ಪಡಿದನಿ, ಚಿಂತನ ಚತುರ್ಮುಖ, ಸಾಹಿತ್ಯ ಸಂಬಂಧ, ಸಾಹಿತ್ಯ ಸ್ಪಂದನ ಮುಂತಾದ ಕೃತಿಗಳನ್ನೂ, ಅಯ್ಯಪ್ಪ, ರಾಮರಾಜ ಬಹದ್ದೂರ, ವಿಷಕನ್ನಿಕೆ ಮೊದಲಾದ ಮಲೆಯಾಳಂ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿರುತ್ತಾರೆ. 'ಅನನ್ಯ' ಎಂಬುದು ಇವರ ಅಭಿನಂದನ ಗ್ರಂಥ.

ಪದಗಳ ಅರ್ಥ

ಉಪಲಬ್ಧ–ದೊರೆತ, ಲಭಿಸಿದ; ಪುಟ್ಟುವುದು–ಹುಟ್ಟುವುದು; ಮಮತೆ–ಪ್ರೀತಿ; ಅಂಕುಶ–ಆನೆಯನ್ನು ಪಳಗಿಸುವ ಒಂದು ಆಯುಧ; ಉರ–ಎದೆ; ಶಿರ–ತಲೆ, ತುದಿ; ಅಪೂರ್ವ–ಹಿಂದೆಂದೂ ಇರದ; ಭ್ರಾಮಕ–ಭ್ರಮೆ, ಭ್ರಮೆಗೊಳಿಸುವ; ಒಡನಾಡಿ–ಸ್ನೇಹಿತ; ಗುಪ್ತಗಾಮಿನಿ–ಹೊರಕ್ಕೆ ತೋರದೆ ಹರಿಯುವುದು; ಹೇಡಿ–ಅಂಜುಕುಳಿ; ಸುಧೆ–ಅಮೃತ; ಕಲೆತು–ಸೇರಿಸಿಕೊಂಡು; ಆಲಸ್ಯ–ದಣಿವು; ಕಲ್ಪತರು–ಕೇಳಿದ್ದನ್ನು ಕೊಡುವಂತ ಮರ; ಸಮನ್ವಯ–ಹೊಂದಾಣಿಕೆ; ಧಕ್ಕೆ–ತೊಂದರೆ, ಅನಾಹುತ.

10th_Kannada_Reader1-5.indd 14 03-04-2019 14:07:54

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸ್ವಾಭಿಮಾನ ಎಂದರೇನು ?
2. ಹ್ಯೂಯೆನ್‌ತ್ಸಾಂಗ್ ಯಾರು ? ಆತ ಕನ್ನಡಿಗರ ಬಗ್ಗೆ ಏನು ಹೇಳಿದ್ದಾನೆ ?
3. ಕವಿರಾಜಮಾರ್ಗಕಾರನ ಪ್ರಕಾರ ಐಶ್ವರ್ಯ ಎಂದರೇನು ?
4. ಬೆನಗಲ್ ರಾಮರಾಯರು ಕನ್ನಡದ ಬಗ್ಗೆ ಏನು ಹೇಳಿದ್ದಾರೆ ?
5. ಕನ್ನಡದ ಕುಲ ಪುರೋಹಿತ ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ತಾಯ್ನಾಡಿನ ಬಗ್ಗೆ ಲೇಖಕರು ಏನೆಂದಿದ್ದಾರೆ ?
2. ಕವಿರಾಜಮಾರ್ಗಕಾರ ಕನ್ನಡ ನಾಡು ನುಡಿಯ ಬಗ್ಗೆ ಏನು ಹೇಳಿದ್ದಾನೆ ?
3. ಕುವೆಂಪುರವರು ಕನ್ನಡ ಪ್ರೇಮವನ್ನು ಹೇಗೆ ಮೆರೆದಿದ್ದಾರೆ ?
4. ಜಿ.ಪಿ.ರಾಜರತ್ನಂ ಅವರು ಕನ್ನಡವನ್ನು ಹೇಗೆ ವರ್ಣಿಸಿದ್ದಾರೆ ?
5. ಆಲೂರು ವೆಂಕಟರಾಯರ ಮಾತುಗಳೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸಂಸ್ಕೃತಿ ಎಂದರೇನು ? ವಿವರಿಸಿ.
2. ಕವಿ ಪಂಪನು ತನ್ನ ದೇಶಾಭಿಮಾನವನ್ನು ಹೇಗೆ ವರ್ಣಿಸಿದ್ದಾನೆ ?
3. ಬಿ.ಎಂ.ಶ್ರೀ.ಯವರು ಕನ್ನಡ ನಾಡು ನುಡಿಯ ಬಗ್ಗೆ ಹೇಗೆ ವಿವರಿಸಿದ್ದಾರೆ ?
4. ಇತ್ತೀಚಿನ ದಿನಗಳಲ್ಲಿ ಕನ್ನಡದ ಬಗ್ಗೆ ನಮ್ಮ ಭಾವನೆ ಏನಾಗಿದೆ ?
5. ಕನ್ನಡಿಗರಾದ ನಾವು ಇಂದು ನಮ್ಮ ಭಾಷೆಯನ್ನು ಉಳಿಸಿ ಬೆಳೆಸಲು ಏನು ಮಾಡಬೇಕು?

ಭಾಷಾಭ್ಯಾಸ

1. ಈ ಕೆಳಕಂಡ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಸ್ವಾಭಿಮಾನ, ಅನರ್ಥ, ಅಹಂಕಾರ, ಪೂರ್ಣ, ಸ್ವೀಕರಿಸು, ಧರ್ಮ, ಪ್ರಾಚೀನ, ಸಹನೆ, ವಿದೇಶಿ, ತರುಣ.

2. ಕೆಳಗಿನ ಪದಗಳಿಗೆ ತತ್ಸಮ–ತದ್ಭವ ಪದಗಳನ್ನು ಬರೆಯಿರಿ.

ಜನ್ಮ, ಸ್ವರ್ಗ, ಉದ್ಯೋಗ, ಕಾವ್ಯ, ಕವಿ, ಕತ್ತುರಿ.

3. ಈ ಪದಗಳಿಗೆ ಸ್ವಂತ ವಾಕ್ಯಗಳನ್ನು ರಚಿಸಿ.

ಸ್ವಾಗತಿಸು, ಸ್ವಂತಿಕೆ, ಆದರ್ಶ, ಅಭಿಮಾನ, ತಿರಸ್ಕಾರ, ಕರ್ತವ್ಯ, ಅನಿವಾರ್ಯ.

4. ಈ ಕೆಳಗಿನ ಪದಗಳ ಲಿಂಗ–ವಚನ–ವಿಭಕ್ತಿ ಪ್ರತ್ಯಯಗಳನ್ನು ತಿಳಿಸಿ.

ಗಂಗೆಯನ್ನು, ವಿದೇಶೀಯರಲ್ಲಿ, ಕನ್ನಡಿಗರ, ಕನ್ನಡಾಂಬೆಗೆ, ಅಭಿಮಾನಿಗಳಿಂದ, ತರುಣಿಯರ.

5. ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಪ್ರತಿಯೊಬ್ಬ, ನೂರಾರು, ಹುಟ್ಟೂರು, ನವೋದಯ, ಕೀಳೆಂಬ, ಕೆಲವೊಮ್ಮೆ, ರಾಜೇಶ್ವರಿ.

ಚಟುವಟಿಕೆ

1. ಈ ಲೇಖನದಲ್ಲಿ ಬಂದಿರುವ ಕವಿಗಳ ಭಾವಚಿತ್ರವನ್ನು ಸಂಗ್ರಹಿಸಿ, ಅವರ ಬಗ್ಗೆ ತಿಳಿದುಕೊಳ್ಳಿರಿ.
2. ಮಾತೃಭಾಷೆಯನ್ನು ಉಳಿಸಲು ನೀವು ಹೇಗೆ ಕಾರ್ಯ ಮಾಡುವಿರಿ ಎಂಬುದರ ಬಗ್ಗೆ ಪ್ರಬಂಧ ಬರೆದು ವಿದ್ಯಾರ್ಥಿಗಳೊಡನೆ ಚರ್ಚಿಸಿ.

10th_Kannada_Reader1-5.indd 15 03-04-2019 14:07:54

ಘಟಕ ಒಂದು

ಉಪಪಠ್ಯ

ಮೃಗ ಮತ್ತು ಸುಂದರಿ

–ಪಿ.ಲಂಕೇಶ್



'ತಾಳಿದವನು ಬಾಳಿಯಾನು' ಎಂಬ ಸೂಕ್ತಿಯಂತೆ ಜೀವನದಲ್ಲಿ ಅನೇಕ ಕಷ್ಟ, ಸಮಸ್ಯೆಗಳು ಬರಬಹುದು. ಆದರೆ ಯಾವುದಕ್ಕೂ ಅಳುಕದೆ, ಕುಗ್ಗದೆ, ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕು. ಡಿ.ವಿ.ಜಿ.ಯವರು, 'ರಾವಣ, ದಶಶಿರನು; ಮಾನವನು ಶತ ಶಿರನು' ಎಂದಿದ್ದಾರೆ. ಮಾನವರಲ್ಲಿ, ಮೃಗೀಯ ಗುಣಗಳಿವೆ. ಪ್ರೀತಿ ಸ್ನೇಹ, ಕರುಣೆ, ಬಾಂಧವ್ಯದಿಂದ ಆ ಕ್ರೂರತೆಯನ್ನು ಕಳೆದುಕೊಂಡು ಗುಣ ಸಂಪನ್ನನಾದರೆ ಅವನ ಬದುಕು ಸಾರ್ಥಕ. ನಮ್ಮಲ್ಲಿರುವ ಹಣ, ಅಧಿಕಾರ, ಸಂಪತ್ತು, ಕ್ಷಣಿಕ. ಅದು ಯಾವಾಗಲಾದರೂ ಬದಲಾಗಬಹುದು. ಆದ್ದರಿಂದ ಜೀವನದಲ್ಲಿ ಯಾವುದಕ್ಕೂ ಅಂಜದೆ, ಬಂದಂತಹ ಸವಾಲುಗಳನ್ನು ತಾಳ್ಮೆಯಿಂದ ಎದುರಿಸಬೇಕು. ಆಗ ಯಶಸ್ಸು ಸಿಗುವುದು ಎಂಬುದನ್ನು ಇಲ್ಲಿ ಕಾಣಬಹುದು.



10th_Kannada_Reader1-5.indd 16 03-04-2019 14:07:54

ಆತ ಮೃದು ಸ್ವಭಾವದ ವರ್ತಕನಾಗಿದ್ದ. ಧರ್ಮವಂತನಾಗಿದ್ದ. ಅವನಿಗೆ ಮೂವರು ಹೆಣ್ಣುಮಕ್ಕಳಿದ್ದರು. ಹಿರಿಯವರಾದ ಇಬ್ಬರು ಬಿಂಕ, ಬಡಿವಾರದ ಹುಡುಗಿಯರು. ಫ್ಯಾಷನ್, ಪಾರ್ಟಿ, ಗೆಳೆಯರೆಂದರೆ ಪಂಚಪ್ರಾಣ. ತಂದೆ ಶ್ರೀಮಂತ ವರ್ತಕನಾಗಿದ್ದುದರಿಂದ ತೊಂದರೆ ಆಗಲಿಲ್ಲ. ಮೂರನೆಯ ಹುಡುಗಿ ತಂದೆಯಷ್ಟೇ ಮೃದು ಸ್ವಭಾವದವಳಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯ. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು.

ಹೀಗಿದ್ದಾಗ ವರ್ತಕನ ಕಷ್ಟಗಳು ಶುರುವಾದವು. ಅವನ ವ್ಯಾಪಾರ ಕುಸಿದು ಬಿತ್ತು. ಬರಬೇಕಾಗಿದ್ದ ಹಣ ಬರಲಿಲ್ಲ. ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದ ಬದ್ದ ಸ್ಥಿರಾಸ್ತಿ ಚರಾಸ್ತಿಯನ್ನೆಲ್ಲ ಮಾರಿ ಸಾಲ ತೀರಿಸಿ ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯ ಕಡೆ ಒಂದು ಮನೆ ಕೊಂಡುಕೊಂಡು ತನ್ನ ಹೆಣ್ಣುಮಕ್ಕಳನ್ನು ಕರೆದು ಹೇಳಿದ : 'ಮಕ್ಕಳೇ! ನನ್ನ ಸ್ಥಿತಿ ಈಗಾಗಲೇ ನಿಮಗೆ ತಿಳಿದಿದೆ. ನಾವಿನ್ನು ನಗರದಲ್ಲಿ ವಾಸಿಸುವುದು ಕಷ್ಟ. ಆದ್ದರಿಂದ ಹಳ್ಳಿಗೆ ಹೋಗಬೇಕಾಗಿದೆ. ದಯಮಾಡಿ ಸಹಕರಿಸಿ' ಎಂದು ಹೇಳಿದ.

ಮೊದಲ ಇಬ್ಬರು ಹುಡುಗಿಯರಿಗೆ ಆಘಾತ, ನಿರಾಸೆ. ಮೊದಮೊದಲು ತಾವು ಹಳ್ಳಿಗೆ ಸುತರಾಂ ಬರುವುದಿಲ್ಲವೆಂದು ಹಠ ಹಿಡಿದರು. ಮೂರನೇ ಹುಡುಗಿ ಮಾತ್ರ ಹೊರಡಲು ಅಣಿಯಾದಳು. ಹೋಗಬೇಕಾದ ಅನಿವಾರ್ಯತೆಯನ್ನು ತಿಳಿದು ಮೊದಲ ಇಬ್ಬರು ಮಕ್ಕಳು ಅಳುತ್ತಲೇ ಹೊರಟರು.

ಬಡತನದಿಂದ ವರ್ತಕನಿಗೆ ಮತ್ತು ಸುಂದರಿಗೆ ಅಷ್ಟೇನೂ ತೊಂದರೆ ಆಗಲಿಲ್ಲ. ಅವರ ಜೀವನ ಸರಳವಾಗಿತ್ತು. ಹೀಗಿದ್ದಾಗ ಒಂದು ದಿನ ವರ್ತಕನ ಅಳಿದುಳಿದ ಹಡಗು ಬರುವ ಸುದ್ದಿ ಬಂತು. ವರ್ತಕ ಹಡಗನ್ನು ಸ್ವಾಗತಿಸಲು ನಗರಕ್ಕೆ ಹೊರಟ. ಆಗ ಇಬ್ಬರೂ ಹಿರಿಯ ಹೆಣ್ಣು ಮಕ್ಕಳು ನಗರದಿಂದ ಹಿಂದಿರುಗುವಾಗ ತಮಗೆ ತರಬೇಕಾದ ಬಟ್ಟೆ, ಒಡವೆ ಅಲಂಕಾರದ ವಸ್ತುಗಳ ಪಟ್ಟಿಯನ್ನು ತಂದೆಯ ಕೈಗೆ ನೀಡಿದರೆ, ಸುಂದರಿ ತನಗೊಂದು ಗುಲಾಬಿ ಹೂಗಳ ಗೊಂಚಲು ತರಬೇಕೆಂದು ಕೇಳಿಕೊಂಡಳು.

ವರ್ತಕ ಹಡಗಿಗಾಗಿ ಕಾದ. ಆದರೆ ಅದು ಬರಲೇ ಇಲ್ಲ. ನಿರಾಶನಾಗಿ ಹಳ್ಳಿಗೆ ಹೊರಟ. ಗಾಡಿಗೆ ಕಾಸಿಲ್ಲದೆ ನಡೆದುಕೊಂಡು ದಟ್ಟ ಅರಣ್ಯದಲ್ಲಿ ಸಾಗಿದ. ಹೊತ್ತು ನೆತ್ತಿಗೇರಿತು. ಹಸಿವಿನಿಂದ ಬಳಲಿದ್ದ. ಇದ್ದಕ್ಕಿದ್ದಂತೆ ಕಾಡಿನ ನಡುವೆ ಭವ್ಯ ಬಂಗಲೆಯೊಂದು ಗೋಚರಿಸಿತು. ಅದೊಂದು ಮನೋಹರವಾದ ಅರಮನೆ. ಅದು ನಿರ್ಜನವಾಗಿತ್ತು. ಮೌನವಾಗಿತ್ತು. ಅಂಜಿಕೆಯಿಂದಲೇ ಅದರೊಳಗೆ ಎಲ್ಲವನ್ನೂ ನೋಡುತ್ತಾ ಸಾಗಿದ. ಅಲ್ಲೊಂದು ಕೋಣೆಯೊಳಗೆ ಭಕ್ಷ್ಯ ಭೋಜ್ಯಗಳನ್ನು ಜೋಡಿಸಿ ಇಡಲಾಗಿತ್ತು. ಹಸಿವೆಯನ್ನು ತಾಳಲಾರದೆ ಅವನು ಅದನ್ನು ಉಂಡ. ಭೋಜನವನ್ನು ಸವಿದು ಹೊರಬಂದ. ಪುಷ್ಪವನದ ಗುಲಾಬಿಗಳನ್ನು ನೋಡಿದ. ತನ್ನ ಕಿರಿಯ ಮಗಳು ಸುಂದರಿಗಾಗಿ ಒಂದು ಗೊಂಚಲು ಹೂಗಳನ್ನು ಕಿತ್ತುಕೊಂಡ. ಇದ್ದಕ್ಕಿದ್ದಂತೆ ಸಿಡಿಲು ಹೊಡೆದಂತಹ ಶಬ್ದ. ಭೀಕರ ಮೃಗವೊಂದು ಉಗ್ರಶಬ್ದದಿಂದ ಘರ್ಜಿಸುತ್ತಾ ಅವನನ್ನು ಕೊಲ್ಲಲು ಅವನ ಕುತ್ತಿಗೆಗೆ ಕೈ ಹಾಕಿತು.

'ಅಯ್ಯೋ! ದೇವರೇ! ಕಾಪಾಡು! ಅಯ್ಯಾ ನನ್ನನ್ನು ಕೊಲ್ಲಬೇಡ. ನನ್ನ ಮೇಲೆ ಕರುಣೆದೋರು!' ಎಂದು ವರ್ತಕ ಬೇಡಿಕೊಂಡ.

'ನಾನು ಅಯ್ಯನೂ ಅಲ್ಲ, ದೇವರೂ ಅಲ್ಲ, ಮನುಷ್ಯನೂ ಅಲ್ಲ. ನನ್ನಲ್ಲಿ ಕರುಣೆ ಇಲ್ಲ. ಇರಲು ಸಾಧ್ಯವೂ ಇಲ್ಲ. ನಿನ್ನನ್ನು ಸೀಳಿ ತಿಂದು ಹಾಕುತ್ತೇನೆ' ಎಂದು ಕತ್ತು ಹಿಸುಕತೊಡಗಿತು.

'ಕೊಲ್ಲಬೇಡ! ನನ್ನ ಮಗಳಿಗಾಗಿ ಒಂದು ಗೊಂಚಲು ಗುಲಾಬಿ ತೆಗೆದುಕೊಂಡಿದ್ದು ಅಪರಾಧವೇ?' ಎಂದು ಕೇಳಿದ.

'ತಿಂದಿದ್ದೀ, ತೇಗಿದ್ದೀ, ಗುಲಾಬಿ ಕಿತ್ತಿದ್ದೀ' ಎಂದು ಮೃಗ ಸಿಟ್ಟಿನಿಂದ ಅಬ್ಬರಿಸಿ, 'ಕೇಳು! ನಿನ್ನ ಬದಲಾಗಿ ನಿನ್ನ ಮುದ್ದು ಮಗಳನ್ನು ತಂದು ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ. ನೀನು ತಪ್ಪಿಸಿಕೊಳ್ಳಲಾರೆ. ನೀನು ಈ ಬುಟ್ಟಿ ತೆಗೆದುಕೊ. ಇದರೊಂದಿಗೆ ಹೋಗು. ನಾಳೆ ಸಂಜೆಯೊಳಗೆ ನಿನ್ನ ಮಗಳನ್ನು ಕರೆ ತರದಿದ್ದರೆ ನಿನ್ನನ್ನೂ ನಿನ್ನ ಮಗಳನ್ನೂ ಒಟ್ಟಿಗೇ ಮುಗಿಸುತ್ತೇನೆ' ಎಂದಿತು.

10th_Kannada_Reader1-5.indd 17 03-04-2019 14:07:54

ಪ್ರಾಣ ಉಳಿಯಿತೆಂದು ಸಮಾಧಾನಗೊಂಡು ಬುಟ್ಟಿಯೊಂದಿಗೆ ಅವನು ಮನೆಗೆ ಹಿಂದಿರುಗಿದ. ತನ್ನ ಮಕ್ಕಳನ್ನು ಕರೆದು, ಮೃಗದ ಬಗ್ಗೆ ತಿಳಿಸಿದ. ಹಿರಿಯರಿಬ್ಬರೂ ಅರಣ್ಯಕ್ಕೆ ಹೋಗಲು ಒಪ್ಪಲಿಲ್ಲ. ಚಿಕ್ಕ ಮಗಳು ಸುಂದರಿ ಮಾತ್ರ ತಾನು ಹೋಗುತ್ತೇನೆ ಎಂದಳು. ಸುಂದರಿಯನ್ನು ಅವನು ಕಾಡಿಗೆ ತಂದು ಬಿಟ್ಟನು. ಭಾರವಾದ, ಹೃದಯದೊಂದಿಗೆ ವರ್ತಕ ಊರಿಗೆ ಹೋಗಿ, ಮೃಗ ಕೊಟ್ಟ ಬುಟ್ಟಿಯನ್ನು ತೆರೆದು ನೋಡಿದ. ಅದರಲ್ಲಿ ವಜ್ರ, ವೈಢೂರ್ಯ, ಮುತ್ತು ರತ್ನಗಳಿದ್ದವು. ಅವುಗಳನ್ನು ಬಳಸಿ ಹಿರಿಯ ಮಕ್ಕಳ ಮದುವೆ ಮಾಡಿದ.

ಇತ್ತ ಸುಂದರಿ ಭಯದಿಂದಲೇ ಅರಮನೆ ಪ್ರವೇಶಿಸಿದಳು. ಆ ಗೃಹದಲ್ಲಿ ಸುಂದರಿಯ ನೆಚ್ಚಿನ ಪುಸ್ತಕ ಭಂಡಾರವಿತ್ತು. ಸಂಗೀತದ ಇಂಪಿತ್ತು. ಆ ಮೃಗವಾದರೋ ಭೀಕರವಾಗಿತ್ತು. ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಕರ್ಕಶ ಸದ್ದು, ಗೊಗ್ಗರು ಧ್ವನಿಯೊಂದಿಗೆ ಅವಳನ್ನು ನಿಟ್ಟಿಸಿ ದಿಟ್ಟಿಸಿ ನೋಡುತ್ತಾ, 'ನೀನು ಸಂತೋಷದಿಂದ ಬಂದೆಯಾ?' ಎಂದು ಕೇಳಿತು. ಸುಂದರಿ ಭಯದಿಂದ 'ಹೂಂ' ಎಂದಳು. 'ಒಳ್ಳೆಯದು. ನೀನು ಒಳ್ಳೆಯವಳು. ನಾನು ನಿನಗೆ ಇಷ್ಟವಾ?' ಎಂದು ಕೇಳಿತು. ಸುಂದರಿಗೆ ಇನ್ನೂ ಭಯವಾಯಿತು. ಅಂಜುತ್ತಲೇ, 'ನಾನು ಸುಳ್ಳು ಹೇಳಲಾರೆ. ನೀನು ಕುರೂಪಿ. ಆದರೂ ನೀನು ತುಂಬಾ ಒಳ್ಳೆಯವನಂತಿದ್ದಿ' ಎಂದಳು. 'ನನ್ನ ಹೃದಯ ಒಳ್ಳೆಯದಿರಬಹುದು. ಆದರೂ ನಾನು ಮೃಗ' ಎಂದಿತು. ಅದಕ್ಕೆ ಸುಂದರಿ, 'ಮೃಗ ಒಳ್ಳೆಯ ಹೃದಯ ಹೊಂದಿದ್ದರೂ, ಮೃಗದ ಆಕಾರ ಹೊಂದಿರುವುದು ಸಹಜ. ಆದರೆ ಜಗದ ಅನೇಕ ಮನುಷ್ಯರು ಸುಂದರವಾದ ಆಕಾರವನ್ನು ಪಡೆದು ಮೃಗದ ಹೃದಯವನ್ನು ಹೊಂದಿರುತ್ತಾರೆ' ಎಂದಳು.

'ಸುಂದರೀ, ನನ್ನನ್ನು ಮದುವೆಯಾಗುವೆಯಾ?' ಎಂದು ಮೃಗ ಕೇಳಿದಾಗ ಸುಂದರಿ ತೊದಲಿದಳು.

'ಇ... ಇ... ಇಲ್ಲ' ಆಕೆಯ ಉತ್ತರದಿಂದ ನಿರಾಶಗೊಂಡ ಮೃಗ ನಿಟ್ಟುಸಿರಿಟ್ಟಿತು. ಸಿಟ್ಟಿನಿಂದ ಬುಸುಗುಟ್ಟಿದೊಡನೆ ಇಡೀ ಅರಮನೆ ಅದುರತೊಡಗಿತು. ಮರುದಿನ ಸುಂದರಿಗೆ ಮೃಗ ಕಾಣಲಿಲ್ಲ. ಏಕೆ ಬರಲಿಲ್ಲ ಎಂದು ಸುಂದರಿಗೆ ಕುತೂಹಲವಾಗುತ್ತಿತ್ತು. ಒಮ್ಮೊಮ್ಮೆ ನೋಡುವ ಇಷ್ಟವಾಗುತ್ತಿತ್ತು. ಅದರ ಒರಟು ಮಾತು, ತಿಕ್ಕಲು ನಡವಳಿಕೆ, ಮನಸ್ಸಿನಲ್ಲೇ ನಗು ತರುತ್ತಿದ್ದವು. ಆ ಮೃಗದ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

'ಒಂದು ದಿನ ಸುಂದರಿ ನಾನು ನನ್ನ ತಂದೆಯನ್ನು ಕಂಡು ಮಾತನಾಡಿಸಬೇಕು. ಕಳಿಸಿದರೆ ಸಂತೋಷವಾಗುತ್ತದೆ. ಬರೀ ಎರಡು ದಿನ...' ಎಂದು ಹೋದವಳು ಹತ್ತನೇ ದಿನವಾದರೂ ಅರಣ್ಯಕ್ಕೆ ಹಿಂದಿರುಗಲೇ ಇಲ್ಲ. ಆಕೆಗೆ ಅಳುಕು ಶುರುವಾಯಿತು. ಮೃಗ ಎಂದೂ ತನ್ನ ವಚನ ಮುರಿದಿರಲಿಲ್ಲ. ತನ್ನ ಮನ ನೋಯಿಸಿರಲಿಲ್ಲ. ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು. ಅದರ ಮುಖ ಚಲನವಲನ ನೆನಪಾದವು. ಮತ್ತೆ ನೋಡಬೇಕೆಂಬ ಆಸೆ ತೀವ್ರವಾಯಿತು. ಕೂಡಲೇ ತಂದೆಗೆ ತಿಳಿಸಿ ಅರಣ್ಯಕ್ಕೆ ಹೊರಟಳು. ಅರಣ್ಯದ ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸನ್ನು ತುಂಬಿತ್ತು. ಅರಮನೆ ತಲುಪಿ ಮೃಗಕ್ಕಾಗಿ ಹುಡುಕಾಡಿದಳು. ಅದು ಇರಲಿಲ್ಲ. ಅರಮನೆಯ ಆಚೆಯ ಬಂಡೆಯ ಮೇಲೆ ಕೂರುತ್ತಿದ್ದ ನೆನಪಾಯಿತು. ಅಲ್ಲಿಗೆ ಹೋದಳು. ಮೃಗ ಅಲ್ಲಿ ನೆಲಕ್ಕೊರಗಿತ್ತು. ತೇಲುಗಣ್ಣು, ಮೇಲುಗಣ್ಣಾಗಿ ಮಲಗಿತ್ತು. ಅದರ ದೇಹ ಬಡವಾಗಿ ಹೋಗಿತ್ತು. ಸತ್ತಿರಬಹುದೇ ಎಂಬ ಭಯದಿಂದ ಮೂಗಿನ ಹತ್ತಿರ ಬೆರಳಿಟ್ಟು ನೋಡಿದಳು. ಉಸಿರು ಹೋಗಿರಲಿಲ್ಲ. ದುಃಖದಿಂದ ಅಪ್ಪಿ, 'ನೀನು ನನ್ನವನು. ನೀನು ಸಾಯಬಾರದು. ನಾನು ನಿನ್ನನ್ನು ಮದುವೆಯಾಗುತ್ತೇನೆ' ಎಂದು ಅವಳು ಕಂಬನಿಗರೆದಳು. ಮೃಗ ಕ್ರಮೇಣ ಉಸಿರಾಡತೊಡಗಿತು.

'ಬಂದೆಯಾ!' ಎಂದು ಸಂತೋಷದಿಂದ ಕೇಳಿತು. 'ನೀನಿಲ್ಲದೆ ನನಗೆ ಊಟ ಸೇರಲಿಲ್ಲ. ನನಗೆ ನಿದ್ರೆ ಬರಲಿಲ್ಲ' ಎಂದಿತು. ಸುಂದರಿ, 'ಪ್ರೀತಿಸುವುದು ಮಾತ್ರವಲ್ಲ, ನಿನ್ನನ್ನು ನಾನು ಮದುವೆಯಾಗುತ್ತೇನೆ' ಎಂದಳು.

ಮೃಗ ಸಂತೋಷದಿಂದ ಹಿಗ್ಗಿತು. ಅದರ ಆಕಾರ ಬದಲಾಯಿತು. ಸುಂದರ ರಾಜಕುಮಾರನಾಗಿ ಬದಲಾಯಿತು. ರಾಜಕುಮಾರ ಹೇಳಿದ : 'ದೇವತೆಯೊಬ್ಬಳು ನನ್ನ ಸ್ವಪ್ರತಿಷ್ಠೆ ನೋಡಿ ಮೃಗವಾಗಿಸಿ, "ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ

10th_Kannada_Reader1-5.indd 18 03-04-2019 14:07:54

ಮೃಗವಾಗಿಯೇ ಇರು" ಎಂದು ಶಾಪ ಕೊಟ್ಟಳು. ನನ್ನ ಮೃಗತ್ವ ನಿನ್ನಿಂದ ಕರಗಿತು' ಎಂದ.

ರಾಜಕುಮಾರ ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲಾ ಕರೆದ. ಅರಮನೆ ಇನ್ನೂ ಮೋಹಕವಾಗಿ, ಜಗಮಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

('ಬ್ಯೂಟಿ ಅಂಡ್ ದಿ ಬೀಸ್ಟ್' ಎಂಬ ಹೆಸರಿನ ಕಥೆಯ ಅನುವಾದ)

ಕೃತಿ–ಕರ್ತೃ ಪರಿಚಯ



ಪಿ.ಲಂಕೇಶ್

ಪಾಳ್ಯ ಲಂಕೇಶ್ ಅವರು ಮಾರ್ಚ್ 8, 1935ರಂದು ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿ ಗ್ರಾಮದಲ್ಲಿ ಜನಿಸಿದರು. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಆಂಗ್ಲ ಭಾಷೆಯ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. 1962ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದರು. 1979ರಲ್ಲಿ ಲಂಕೇಶ್ ಪತ್ರಿಕೆ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು.

ಸಂಕ್ರಾಂತಿ, ಈಡಿಪಸ್ ಮತ್ತು ಆಂತಿಗೊನೆ ಮುಂತಾದ ನಾಟಕಗಳನ್ನೂ, ಕಲ್ಲು ಕರಗುವ ಸಮಯ, ಕೆರೆಯ ನೀರನು ಕೆರೆಗೆ ಚೆಲ್ಲಿ, ಉಲ್ಲಂಘನೆ, ಮಂಜು ಕವಿದ ಸಂಜೆ ಮುಂತಾದ ಕಥಾ ಸಂಗ್ರಹಗಳನ್ನೂ; ಮುಸ್ಸಂಜೆಯ ಕಥಾ ಪ್ರಸಂಗ, ಅಕ್ಕ ಎಂಬ ಕಾದಂಬರಿಗಳನ್ನೂ; ಹಲವಾರು ಅಂಕಣ ಬರಹಗಳನ್ನೂ; ಹುಳಿ ಮಾವಿನ ಮರ ಎನ್ನುವ ಆತ್ಮಕಥೆಯನ್ನೂ ರಚಿಸಿದ್ದಾರೆ. ಚಲನಚಿತ್ರ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೇಂದ್ರ ಸರ್ಕಾರದಿಂದ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗಳು ಲಭಿಸಿವೆ.

ಪ್ರಸ್ತುತ ಕಥೆಯನ್ನು, 'ಕಲ್ಲು ಕರಗುವ ಸಮಯ' ಎನ್ನುವ ಕಥಾ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ವರ್ತಕನು ಹಳ್ಳಿಯ ಮನೆಗೆ ಹೋಗಲು ಕಾರಣವೇನು ? ವಿವರಿಸಿ.
2. ಕಾಡಿನ ನಡುವಿನ ಮನೋಹರ ಅರಮನೆಯಲ್ಲಾದ ಘಟನೆಯೇನು ?
3. ಮೃಗದ ಆಕಾರ ಹೇಗಿತ್ತು ?
4. ಸುಂದರಿಯು ಅಂಜುತ್ತಾ, ಮೃಗದೊಡನೆ ಏನು ಮಾತನಾಡಿದಳು ?
5. ಸುಂದರಿಯು ತನ್ನ ತಂದೆಯ ಮನೆಯಿಂದ ಹಿಂದಿರುಗಿ, ಕಾಡಿಗೆ ಹೋಗಲು ಕಾರಣವೇನು?
6. ದೇವತೆಯು ಯಾರಿಗೆ, ಯಾವ ಶಾಪವನ್ನು ನೀಡಿದ್ದಳು ? ಏಕೆ ?
7. ಮೃಗದ ಶಾಪ ವಿಮೋಚನೆ ಹೇಗಾಯಿತು ?
8. ಮೃಗದ ಬಗೆಗಿನ ಸುಂದರಿಯ ಮನ ಕರಗಲು ಕಾರಣವೇನು? ವಿವರಿಸಿ.

10th_Kannada_Reader1-5.indd 19 03-04-2019 14:07:54

ಘಟಕ ಒಂದು

ಅಕ್ಷರ ಪ್ರಕರಣ

ಭಾಷೆ

ಪುರಾತನ ಕಾಲದಿಂದಲೂ ಜನರು ತಮ್ಮ ಅಭಿಪ್ರಾಯಗಳನ್ನು ಮತ್ತೊಬ್ಬರಿಗೆ ಸಂಜ್ಞೆಯ ಮೂಲಕವಾಗಲೀ, ಬಾಯಿ ಮಾತಿನಿಂದಾಲೀ, ಬರವಣಿಗೆಯಿಂದಾಗಲೀ ತಿಳಿಸುತ್ತಿದ್ದರು. ಹೀಗೆ ಅವರು ತಮ್ಮ ಅಭಿಪ್ರಾಯಗಳನ್ನು ತಿಳಿಸುವಾಗ ಬಳಸುವ ಸಾಧನವೇ ಭಾಷೆ. ಈ ಭಾಷೆ ಶ್ರಾವ್ಯ ಭಾಷೆಯಾಗಿತ್ತು. ಈ ಶ್ರಾವ್ಯ ಭಾಷೆಯ ಧ್ವನಿ ರೂಪವೇ ಬಾಷೆಯ ಸಹಜ ರೂಪ. ಆದರೆ ಈ ಧ್ವನಿ ರೂಪ ಅಶಾಶ್ವತವಾದದ್ದು. ಚಾಕ್ಷುಷ ರೂಪ ಶಾಶ್ವತವಾಗಿ ಭಾಷೆಯು, 'ಲಿಪಿ ರೂಪವಾಗಿ ಉಳಿಯುತ್ತದೆ.'

ಪ್ರಪಂಚದಲ್ಲಿ ಹಲವು ಭಾಷೆಗಳಿವೆ. ಒಂದೊಂದು ದೇಶದ ಜನರೂ ಒಂದೊಂದು ಭಾಷೆಯನ್ನು ಆಡುತ್ತಾರೆ. ನಾವು ಕನ್ನಡಿಗರು. ಕನ್ನಡ ಭಾಷೆಯನ್ನು ಆಡುತ್ತೇವೆ. ಇದು ನಮ್ಮ ಮಾತೃಭಾಷೆಯಾಗಿರುತ್ತದೆ. ನಾವು ಭಾಷೆಯನ್ನು ಹೇಗೆ ಬಳಸಿದರೆ ಇತರರಿಗೆ ನಮ್ಮ ಅಭಿಪ್ರಾಯಗಳನ್ನು ಸರಿಯಾದ ರೀತಿಯಲ್ಲಿ ತಿಳಿಸಬಹುದು. ಭಾಷೆಯ ಸ್ವರೂಪವೇನು? ಅವುಗಳ ಭೇದಗಳಾವುವು? ಬರವಣಿಗೆಯಲ್ಲಿ ತಪ್ಪಿಲ್ಲದೆ ಹೇಗೆ ಬರೆಯಬೇಕು? ಇವೆಲ್ಲಾ ವಿಷಯಗಳನ್ನೂ ತಿಳಿಸಿ ಕೊಡುವ ಶಾಸ್ತ್ರಕ್ಕೆ 'ವ್ಯಾಕರಣ ಶಾಸ್ತ್ರ' ಎನ್ನುತ್ತೇವೆ.

ಭಾಷೆ ಮೊದಲು ಹುಟ್ಟುತ್ತದೆ. ಅದು ಬೆಳೆಯುತ್ತಾ ಹೋಗುತ್ತದೆ. ಅನಂತರ ವ್ಯಾಕರಣ ಹುಟ್ಟಿ ಆ ಬಾಷೆಯನ್ನು ಕ್ರಮಬದ್ಧವಾಗಿಡಲು ಶ್ರಮಿಸುತ್ತದೆ. ವ್ಯಾಕರಣ ಕಲಿಯುವುದರಿಂದ ಭಾಷೆಯಲ್ಲಿ ಪ್ರಭುತ್ವ ಬರುತ್ತದೆ. ಭಾಷೆಯನ್ನು ಕ್ರಮವಾಗಿ ಶುದ್ಧವಾಗಿ ಬಳಸಲು ವ್ಯಾಕರಣ ಕಲಿಯುವುದು ಅತ್ಯಾವಶ್ಯಕ.

ಕನ್ನಡ ವರ್ಣಮಾಲೆ

ನಾನು ಶಾಲೆಗೆ ಹೋಗಿ ಬಂದೆನು ಈ ವಾಕ್ಯದಲ್ಲಿ **ನಾನು, ಶಾಲೆಗೆ, ಹೋಗಿ, ಬಂದೆನು** – ಹೀಗೆ ನಾಲ್ಕು ಅರ್ಥಪೂರ್ಣ ಪದಗಳಿವೆ. ಒಂದೊಂದು ಪದದಲ್ಲಿಯೂ ಬೇರೆ ಬೇರೆ ಅಕ್ಷರಗಳಿವೆ. **ಉದಾಹರಣೆ, ನಾನು** ಎನ್ನುವ ಪದದಲ್ಲಿ **ನ್ ಆ ನ್ ಉ** ಎಂಬ ನಾಲ್ಕು ಅಕ್ಷರಗಳಿವೆ. **ಬಂದೆನು** ಎನ್ನುವ ಪದದಲ್ಲಿ **ಬ್ ಅ ಂ ದ್ ಎ ನ್ ಉ** ಎನ್ನುವ ಅಕ್ಷರಗಳಿವೆ. ಈ ಎರಡು ಪದಗಳಲ್ಲಿರುವ **ನ್ ನ್ ಬ್ ದ್ ವ್** ಎಂಬ ಅಕ್ಷರಗಳನ್ನು ಉಚ್ಚರಿಸುವಾಗ ಧ್ವನ್ಯಂಗದ ಅಡೆತಡೆಯೊಂದಿಗೆ ಉಚ್ಚರಿಸಬೇಕಾಗುತ್ತದೆ. ಇವೇ **ವ್ಯಂಜನಾಕ್ಷರಗಳು**. ಆ ಅಕ್ಷರಗಳ ಹಿಂದೆ ಅಥವಾ ಮುಂದೆ ಇರುವ **ಆ ಊ ಏ** ಗಳು ಧ್ವನ್ಯಂಗದ ಅಡೆ ತಡೆಯಿಲ್ಲದೆ ಉಚ್ಚರಿಸಬಹುದಾದ ಅಕ್ಷರಗಳಾಗಿವೆ. ಇವೇ **ಸ್ವರಾಕ್ಷರಗಳು**. ಇವು ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು. ಹಾಗೆಯೇ **ಬಂದೆನು** ಎಂಬ ಪದದಲ್ಲಿರುವ **ಂ** ಎಂಬ ಅಕ್ಷರವನ್ನು ಪ್ರತ್ಯೇಕವಾಗಿ ಉಚ್ಚರಿಸಲು ಆಗುವುದಿಲ್ಲ. ಇದರ ಹಿಂದೆ ಸ್ವರಾಕ್ಷರಗಳು ಬಂದಾಗ ಮಾತ್ರ ಉಚ್ಚರಿಸಬಹುದು. ಇದೇ **ಯೋಗವಾಹ**.

ವರ್ಣಮಾಲೆಯ ವಿಭಾಗಗಳು

ಕನ್ನಡ ವರ್ಣಮಾಲೆಯನ್ನು ಸ್ವರಗಳು, ಯೋಗವಾಹಗಳು, ವ್ಯಂಜನಗಳು ಎಂದು ಮೂರು ಭಾಗಗಳಾಗಿ ವಿಭಾಗಿಸಬಹುದು.

10th_Kannada_Reader1-5.indd 20 03-04-2019 14:07:54

ಸ್ವರಗಳು

ಸ್ವತಂತ್ರವಾಗಿ ಉಚ್ಚಾರ ಮಾಡುವ ಅಕ್ಷರಗಳನ್ನು ಸ್ವರಗಳು ಎನ್ನುತ್ತೇವೆ. ಕನ್ನಡ ವರ್ಣಮಾಲೆಯಲ್ಲಿ 13 ಸ್ವರಗಳಿವೆ. ಅವು :

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

'ಐ'(ಅ+ಯ್) ಮತ್ತು ಔ(ಅ+ವ್) ಧ್ವನಿಯನ್ನು ಸಂಧ್ಯಕ್ಷರಗಳೆಂದೂ ಗುರುತಿಸುತ್ತಾರೆ. ಸ್ವರಗಳಲ್ಲಿ ಹ್ರಸ್ವಸ್ವರ, ದೀರ್ಘಸ್ವರ, ಪ್ಲುತ ಸ್ವರ ಎಂದು ಮೂರು ವಿಧಗಳುಂಟು.

1. ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹ್ರಸ್ವ ಸ್ವರ ಎಂದು ಹೆಸರು(**ಉದಾಹರಣೆ,** 'ಅ' ಎನ್ನುವ ಒಂದು ಅಕ್ಷರವನ್ನು ಉಚ್ಚರಿಸುವ ಕಾಲಕ್ಕೆ ಒಂದು ಮಾತ್ರಾ ಕಾಲ ಎಂದು ಹೆಸರು). ಕನ್ನಡದಲ್ಲಿ ಆರು ಹ್ರಸ್ವ ಸ್ವರಗಳಿವೆ. ಅವು,

   ಅ,ಇ,ಉ,ಋ,ಎ,ಒ.

2. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ದೀರ್ಘ ಸ್ವರ ಎಂದು ಹೆಸರು. ಕನ್ನಡದಲ್ಲಿ ಏಳು ದೀರ್ಘ ಸ್ವರಗಳಿವೆ. ಅವು,

   ಆ, ಈ, ಊ, ಏ, ಐ, ಓ, ಔ.

3. ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ ಸ್ವರಗಳನ್ನು ಪ್ಲುತ ಎನ್ನುತ್ತಾರೆ. **ಉದಾಹರಣೆ,** ಅಮ್ಮಾ..., ದೇವರೇ... ಕೊನೆಯ ಸ್ವರವನ್ನು ಎಳೆದು ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸುವುದರಿಂದ ಇವು ಪ್ಲುತ ಎನ್ನಿಸುವುವು.

ಯೋಗವಾಹಗಳು

ಯಾವುದಾದರೂ ಒಂದು ಅಕ್ಷರ ಸಂಬಂಧದಿಂದಲೇ ಉಚ್ಚರಿಸಲ್ಪಡುವುವು ಯೋಗವಾಹಗಳು ಎನಿಸುತ್ತವೆ. ಇವುಗಳಿಗೆ ಸ್ವತಂತ್ರವಾದ ಉಚ್ಚಾರವಿಲ್ಲ. 'ಯೋಗ' ಎಂದರೆ ಸಂಬಂಧ; 'ವಾಹ' ಎಂದರೆ ಹೋಗುವ, ಚಲಿಸುವ ಎಂದು ಅರ್ಥ. ಯೋಗವಾಹದಲ್ಲಿ ಎರಡು ವಿಧ. ಅವು,

1. ಅನುಸ್ವಾರ = ಂ.
2. ವಿಸರ್ಗ = ಃ

ಅನುಸ್ವಾರ ಹಾಗೂ ವಿಸರ್ಗಗಳು ಸ್ವರ ಸಂಬಂಧ ಪಡೆದು ಉಚ್ಚಾರಣೆಗೊಳ್ಳುತ್ತವೆ. ಇದರಿಂದ ಅನುಸ್ವಾರ ವಿಸರ್ಗಗಳನ್ನು ಅಕಾರದ ಮುಂದೆ ಬರೆಯುವುದು ವಾಡಿಕೆಯಾಗಿದೆ.

ಉದಾಹರಣೆ: ಅಂ, ಅಃ.

ವ್ಯಂಜನಗಳು

ಸ್ವರಗಳ ಸಹಾಯದಿಂದ ಉಚ್ಚಾರ ಮಾಡಲಾಗುವ ಅಕ್ಷರಗಳಿಗೆ ವ್ಯಂಜನಗಳೆಂದು ಹೆಸರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಮುವ್ವತ್ನಾಲ್ಕು ವ್ಯಂಜನಾಕ್ಷರಗಳಿವೆ. ಅವು :

1	2	3	4	5	ವರ್ಗವಿವರ
ಕ್	ಖ್	ಗ್	ಘ್	ಙ್	5 – ಕವರ್ಗ
ಚ್	ಛ್	ಜ್	ಝ್	ಞ್	5 – ಚವರ್ಗ
ಟ್	ಠ್	ಡ್	ಢ್	ಣ್	5 – ಟವರ್ಗ
ತ್	ಥ್	ದ್	ಧ್	ನ್	5 – ತವರ್ಗ
ಪ್	ಫ್	ಬ್	ಭ್	ಮ್	5 – ಪವರ್ಗ
ಯ್ ರ್ ಲ್ ವ್ ಶ್ ಷ್ ಸ್ ಹ್.					

10th_Kannada_Reader1-5.indd 21 03-04-2019 14:07:54

ವ್ಯಂಜನಗಳಲ್ಲಿ ವರ್ಗೀಯ ವ್ಯಂಜನ, ಅವರ್ಗೀಯ ವ್ಯಂಜನ ಎಂದು ಎರಡು ವಿಧಗಳಿವೆ.

1. ವರ್ಗೀಯ ವ್ಯಂಜನಗಳು

ಕ್ ನಿಂದ ಮ್ ವರೆಗಿನ 25 ಅಕ್ಷರಗಳನ್ನು ವರ್ಗೀಯ ವ್ಯಂಜನಗಳು ಎನ್ನುವರು. ಇಲ್ಲಿ 5 ವರ್ಗಗಳಿವೆ. ಪ್ರತಿ ವರ್ಗದಲ್ಲಿಯೂ ತಲಾ ಐದೈದು ಅಕ್ಷರಗಳಿವೆ. ಆಯಾ ವರ್ಗದ ಮೊದಲನೇ ಅಕ್ಷರದಿಂದಲೇ ವರ್ಗಗಳನ್ನು ಹೆಸರಿಸಲಾಗಿದೆ.

ಅಕ್ಷರಗಳನ್ನು ಉಚ್ಚರಿಸುವಾಗ ಅವುಗಳು ಎಲ್ಲೆಲ್ಲಿ ಹುಟ್ಟುತ್ತವೆ ಎಂಬುದರ ಆಧಾರದ ಮೇಲೆ ವರ್ಗೀಯ ವ್ಯಂಜನಗಳನ್ನು ವಿಭಾಗಿಸಲಾಗಿದೆ. ಅವುಗಳನ್ನು ಗಮನಿಸಿ.

1. ಕ ಖ ಗ ಘ ಙ – ಇವುಗಳು ಕಂಠದಲ್ಲಿ ಹುಟ್ಟುತ್ತವಾದ್ದರಿಂದ ಇವುಗಳು ಕಂಠ್ಯಾಕ್ಷರಗಳು.

2. ಚ ಛ ಜ ಝ ಞ – ಇವುಗಳು ತಾಲುವಿನಲ್ಲಿ ಹುಟ್ಟುತ್ತವೆ. ಹಾಗಾಗಿ ಇವು ತಾಲವ್ಯ ಅಕ್ಷರಗಳು.

3. ಟ ಠ ಡ ಢ ಣ – ಇವುಗಳು ಹುಟ್ಟುವ ಸ್ಥಳ ಮೂರ್ಧ. ಎಂದರೆ ಬಾಯಿಯ ಮೇಲ್ಭಾಗ. ನಾಲಿಗೆಯನ್ನು ಮಡಚಿ ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿ ಈ ಅಕ್ಷರಗಳನ್ನು ಉಚ್ಚರಿಸಲಾಗುತ್ತದೆ. ಹಾಗಾಗಿ ಇವು ಮೂರ್ಧನ್ಯ ಅಕ್ಷರಗಳು.

4. ತ ಥ ದ ಧ ನ – ಇವುಗಳು ಹುಟ್ಟುವ ಸ್ಥಳ ಹಲ್ಲುಗಳ ಬಳಿ. ಹಾಗಾಗಿ ಇವು ದಂತ್ಯಾಕ್ಷರಗಳು.

5. ಪ ಫ ಬ ಭ ಮ – ಇವುಗಳು ತುಟಿಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಇವುಗಳನ್ನು ಓಷ್ಠ್ಯ ಅಕ್ಷರಗಳೆಂದು ಕರೆಯಲಾಗುವುದು.

ವರ್ಗೀಯ ವ್ಯಂಜನಗಳಲ್ಲಿ 'ಅಲ್ಪಪ್ರಾಣ', 'ಮಹಾಪ್ರಾಣ' ಮತ್ತು 'ಅನುನಾಸಿಕ'ಗಳೆಂದು ಮೂರು ಬಗೆಗಳಿವೆ. ಪ್ರಾಣ ಎಂದರೆ ಉಸಿರು ಎಂದರ್ಥ.

1. ಅಲ್ಪಪ್ರಾಣ : ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.

ಅವು : ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್

2. ಮಹಾಪ್ರಾಣ : ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.

ಅವು : ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್

3. ಅನುನಾಸಿಕ : ಮೂಗಿನ ಸಹಾಯದಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.

ಅವು : ಙ್ ಞ್ ಣ್ ನ್ ಮ್

ವರ್ಗೀಯ ವ್ಯಂಜನಗಳ ಒಟ್ಟು ಸಂಖ್ಯೆ = 25.

2. ಅವರ್ಗೀಯ ವ್ಯಂಜನಗಳು

ಯ್ ನಿಂದ ಳ್ ವರೆಗಿನ ಒಂಭತ್ತು ಅಕ್ಷರಗಳು ಅವರ್ಗೀಯ ವ್ಯಂಜನಗಳು.

ಅವು : ಯ್ ರ್ ಲ್ ವ್ ಶ್ ಷ್ ಸ್ ಹ್.

10th_Kannada_Reader1-5.indd 22 03-04-2019 14:07:54

ರೂಢಿಯಲ್ಲಿರುವ ಒಟ್ಟು ಕನ್ನಡ ಅಕ್ಷರಗಳು – 49
ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು

ವರ್ಣಮಾಲೆ

↓

ಸ್ವರಗಳು–13 | **ಯೋಗವಾಹಗಳು–2** | **ವ್ಯಂಜನಗಳು–34**

↓ | ↓ | ↓

ಹ್ರಸ್ವ–6 | ದೀರ್ಘ–7 | ಅನುಸ್ವಾರ–1 | ವಿಸರ್ಗ–1 | ವರ್ಗೀಯ–25 | | | ಅವರ್ಗೀಯ–9

↓ | ↓ | ↓ | ↓ | ↓ | | | ↓

ಅ | ಆ | ಂ | ಃ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ | ಯ

ಇ | ಈ | | | ↓ | ↓ | ↓ | ರ

ಉ | ಊ | | | ಕ ಗ | ಖ ಘ | ಙ | ಲ

ಋ | ೠ | | | ಚ ಜ | ಛ ಝ | ಞ | ವ

ಎ | ಏ | | | ಟ ಡ | ಠ ಢ | ಣ | ಶ

ಒ | ಓ | | | ತ ದ | ಥ ಧ | ನ | ಷ

| ಔ | | | ಪ ಬ | ಫ ಭ | ಮ | ಸ

| | | | | | | | ಹ

| | | | | | | | ಳ

ಗುಣಿತಾಕ್ಷರಗಳು

ಚ್ ವ್ ರ್ ವ್ಯಂಜನಾಕ್ಷರಗಳನ್ನು ಸೇರಿಸಿ ಬರೆದರೆ ಪದ ರಚನೆಯಾಗುವುದಿಲ್ಲ. ಅದರ ಬದಲಿಗೆ ದ್+ಏ =ದೇ, ವ್+ಅ=ವ, ರ್+ಉ=ರು. ಈ ರೀತಿ ಸ್ವರಾಕ್ಷರಗಳನ್ನು ಸೇರಿಸಿ ಬರೆದರೆ ಅರ್ಥಪೂರ್ಣವಾದ ದೇವರು ಎಂಬ ಪದ ರಚನೆ ಆಗುತ್ತದೆ. ಹೀಗೆ ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರವೇ ಗುಣಿತಾಕ್ಷರ. ಒಂದು ವ್ಯಂಜನಕ್ಕೆ ಅ ದಿಂದ ಔ ವರೆಗಿನ 13 ಸ್ವರಗಳು ಸೇರಿದರೆ 13 ಗುಣಿತಾಕ್ಷರಗಳಾಗುತ್ತವೆ. 34 ವ್ಯಂಜನಗಳಿಗೆ ತಲಾ 13 ಸ್ವರಾಕ್ಷರಗಳನ್ನು ಸೇರಿಸುವುದರಿಂದ 442 ಗುಣಿತಾಕ್ಷರಗಳನ್ನು ರಚಿಸಬಹುದು. ಈ ಗುಣಿತಾಕ್ಷರಗಳೇ ಕಾಗುಣಿತ ಅಕ್ಷರಗಳು. ಅದೇ ರೀತಿ ಯೋಗವಾಹಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು.

ವರ್ಣಮಾಲೆಯಲ್ಲಿ ಮೊದಲು ಕ್ ವ್ಯಂಜನಕ್ಕೆ ಸ್ವರಗಳನ್ನು ಸೇರಿಸುವ ಪ್ರಕ್ರಿಯೆಯು ಆರಂಭವಾಗುವುದರಿಂದ ಕಾಗುಣಿತ ಎಂದು ಇದನ್ನು ಕರೆಯುವುದು ರೂಢಿಗೆ ಬಂತು.

ಗುಣಿತಾಕ್ಷರಗಳು			
ವ್ಯಂಜನಗಳಿಗೆ ಸ್ವರಗಳು ಸೇರಿದಾಗ ಗುಣಿತಾಕ್ಷರಗಳು ಎನಿಸುವುವು			
ಕ್ರಮಸಂಖ್ಯೆ	**ವ್ಯಂಜನ**	**ಸ್ವರ**	**ಗುಣಿತಾಕ್ಷರ**
1	ಕ್	ಅ	ಕ
2	ಕ್	ಆ	ಕಾ
3	ಕ್	ಇ	ಕಿ
4	ಕ್	ಈ	ಕೀ
5	ಕ್	ಉ	ಕು
6	ಕ್	ಊ	ಕೂ
7	ಕ್	ಋ	ಕೃ
8	ಕ್	ಎ	ಕೆ
9	ಕ್	ಏ	ಕೇ
10	ಕ್	ಐ	ಕೈ
11	ಕ್	ಒ	ಕೊ
12	ಕ್	ಓ	ಕೋ
13	ಕ್	ಔ	ಕೌ

10th_Kannada_Reader1-5.indd 23 03-04-2019 14:07:54

ನಾವು ವರ್ಣಮಾಲೆಯಲ್ಲಿ ಕಾಣುವ ವ್ಯಂಜನಾಕ್ಷರಗಳು ಸ್ವರಗಳೊಡನೆ ಕೂಡಿವೆ. **ಉದಾಹರಣೆ :**

ಕ = ಕ್+ಅ ಚ = ಚ್+ಅ

ಖ = ಖ್+ಅ ಛ = ಛ್+ಅ

ಗ = ಗ್+ಅ ಜ = ಜ್+ಅ

ಫ = ಫ್+ಅ ಝ = ಝ್+ಅ

ಬ = ಬ್+ಅ ಞ = ಞ್+ಅ

ಅವರ್ಗೀಯ ವ್ಯಂಜನಗಳೂ ಕೂಡ ಸ್ವರ ಸಹಿತವಾಗಿವೆ :

ಯ=ಯ್+ಅ; ರ=ರ್+ಅ; ಲ=ಲ್+ಅ; ವ=ವ್+ಅ; ಶ=ಶ್+ಅ; ಷ=ಷ್+ಅ; ಸ=ಸ್+ಅ; ಹ=ಹ್+ಅ; ಳ=ಳ್+ಅ.

ಕಾಗುಣಿತ ಮಾಲೆಯಲ್ಲಿ, 25 ವರ್ಗೀಯ ವ್ಯಂಜನಗಳಿಗೂ 9 ಅವರ್ಗೀಯ ವ್ಯಂಜನಗಳಿಗೂ (ಒಟ್ಟು 34 ವ್ಯಂಜನಗಳಿಗೂ) 13 ಸ್ವರಗಳನ್ನು ಸೇರಿಸಿ ಹೊಸ ಅಕ್ಷರಗಳನ್ನು ರೂಪಿಸಿಕೊಳ್ಳುತ್ತೇವೆ.

ಸಂಯುಕ್ತಾಕ್ಷರಗಳು

ಎರಡು ಅಥವಾ ಹೆಚ್ಚು ಅಕ್ಷರಗಳು ಕಾಲ ವಿಳಂಬವಿಲ್ಲದೆ ಕೂಡಿದಾಗ ಸಂಯುಕ್ತಾಕ್ಷರಗಳೆನಿಸುವುವು. **ಉದಾಹರಣೆ** : ಕನ್ನಡ, ಅಣ್ಣ, ವಸ್ತ್ರ – ಈ ಪದಗಳನ್ನು ನೋಡಿ. ಈ ಅಕ್ಷರಗಳಲ್ಲಿ ವ್ಯಂಜನಗಳು ಸೇರಿರುವುದನ್ನು ಗಮನಿಸಿ.

ನ್ನ = ನ್+ನ್+ಅ

ಣ್ಣ = ಣ್+ಣ್+ಅ

ಸ್ತ್ರ = ಸ್+ತ್+ರ್+ಅ

ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಹಾಗೂ ವಿಜಾತೀಯ ಸಂಯುಕ್ತಾಕ್ಷರ ಎಂದು ಎರಡು ವಿಧ.

1. ಸಜಾತೀಯ ಸಂಯುಕ್ತಾಕ್ಷರ

ಒಂದು ವ್ಯಂಜನಾಕ್ಷರಕ್ಕೆ ಅದೇ ವ್ಯಂಜನಾಕ್ಷರ ಸೇರಿ ಆಗುವ ಅಕ್ಷರವು 'ಸಜಾತೀಯ ಸಂಯುಕ್ತಾಕ್ಷರ' ಎನ್ನಿಸುವುದು. ಇದನ್ನು 'ದ್ವಿತ್ವ' ಎಂದೂ ಕರೆಯಲಾಗುವುದು. **ಉದಾಹರಣೆ** :

ಅ**ಕ್ಕ** = ಕ್+ಕ್+ಅ

ಅ**ಜ್ಜ** = ಜ್+ಜ್+ಅ

ಹು**ತ್ತ** = ತ್+ತ್+ಅ

ಬ**ಣ್ಣ** = ಣ್+ಣ್+ಅ

ಅ**ಯ್ಯ** = ಯ್+ಯ್+ಅ

ಅ**ಮ್ಮ** = ಮ್+ಮ್+ಅ

2. ವಿಜಾತೀಯ ಸಂಯುಕ್ತಾಕ್ಷರ

ಒಂದು ವ್ಯಂಜನಾಕ್ಷರಕ್ಕೆ ಬೇರೆಯ ಒಂದು ಅಥವಾ ಅದಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳು ಸೇರಿ ಆಗುವ ಅಕ್ಷರಗಳು ವಿಜಾತೀಯ ಸಂಯುಕ್ತಾಕ್ಷರಗಳು ಎನ್ನಿಸುವುವು. **ಉದಾಹರಣೆ** :

ಅ**ಕ್ಷ**ರ – ಕ್+ಷ್+ಅ = ಕ್ಷ

ಭ**ಕ್ತಿ** – ಕ್+ತ್+ಇ = ಕ್ತಿ

ಸ್ವಾರ್ಥಿ – ಸ್+ವ್+ಆ, ರ್+ಥ್+ಇ = ಸ್ವಾರ್ಥಿ

ಶಾ**ಸ್ತ್ರ** – ಸ್+ತ್+ರ್+ಅ = ಸ್ತ್ರ

10th_Kannada_Reader1-5.indd 24 03-04-2019 14:07:54

ಘಟಕ
ಎರಡು

ಪ್ರಕೃತಿ



ಕಾವ್ಯ ಕಣಜ	: ಗಹ್ವರದ ಮಾರ್ದನಿಗಳು	– ರಾಘವಾಂಕ
ಗದ್ಯ ವಿಹಾರ	: ಬಾರದಿದ್ದ ಮಳೆ ಬಂದಾಗ	–ಜ್ಯೋತಿ ಹೊಸೂರ
ಉಪಪಠ್ಯ	: ಕಲಕಿದ ಕೊಳ	– ಅ.ರಾ.ಮಿತ್ರ
ವ್ಯಾಕರಣ	: ನಾಮಪದಗಳು	

10th_Kannada_Reader1-5.indd 25 03-04-2019 14:07:55

ಕಾವ್ಯ ಕಣಜ

ಘಟಕ ಎರಡು

ಗಹ್ವರದ ಮಾರ್ದನಿಗಳು

– ರಾಘವಾಂಕ



'ಸಿದ್ಧರಾಮ'ನು ಸೊನ್ನಲಿಗೆಯಲ್ಲಿ ಮುದ್ದೇಗೌಡ ಮತ್ತು ಸುಗ್ಗವ್ವೆಯರೆಂಬ ದಂಪತಿಗಳಿಗೆ ಮಗನಾಗಿ ಜನಿಸಿದನು. ಮರುಳನಂತಿದ್ದ ಮಗನನ್ನು ತಂದೆಯು ದನ ಕಾಯಲು ಹಚ್ಚಿದನು. ಸಿದ್ಧರಾಮನು ದನ ಕಾಯಲು ಹೋದಾಗ ಅಡವಿಯಲ್ಲಿ ಹೊಲದಲ್ಲಿ ದಿನವೂ ಮಾವಿನ ಮರದ ಕೆಳಗೆ ಇರುವ ಲಿಂಗಕ್ಕೆ ಭಕ್ತಿಯಿಂದ ನಮಿಸಿ, ತಾನು ತಂದ ಬುತ್ತಿಯನ್ನು ನೈವೇದ್ಯ ಮಾಡಿ ಎಲ್ಲರಿಗೂ ಹಂಚುತ್ತಿದ್ದನು.

ಒಂದು ದಿನ ಸಿದ್ಧರಾಮನು ನವಣೆಯ ಹೊಲದಲ್ಲಿ ದನ ಮೇಯಿಸುತ್ತಿದ್ದಾಗ ಶಿವನು ಜಂಗಮ ವೇಷದಲ್ಲಿ ಬಂದು ತನ್ನ ನಿಜ ರೂಪವನ್ನು ತೋರಿಸಿ ತನ್ನ ಹೆಸರು 'ಮಲ್ಲಿನಾಥ'ನೆಂದು ಹೇಳಿದನು. ಸಿದ್ಧರಾಮನು ಕೊಟ್ಟ ಹಾಲ್ದುಂಬಿದ ಬೆಳಸಿ(ರಸ ಭರಿತವಾದ ತೆನೆ ಕಾಳು)ಯನ್ನು ಸೇವಿಸಿ, ಕುಡಿಯಲು ಮಜ್ಜಿಗೆ ಬೇಕೆಂದು ಕೇಳಿದನು. ಸಿದ್ಧರಾಮನು ಮನೆಗೆ ಬಂದು ಅದನ್ನು ತೆಗೆದುಕೊಂಡು ಹೋಗುವಷ್ಟರಲ್ಲಿ ಮಲ್ಲಿನಾಥನು ಮರೆಯಾಗಿದ್ದನು. ಸಿದ್ಧರಾಮನು ಮಲ್ಲಯ್ಯನನ್ನು ಹುಡುಕುತ್ತಾ ಅಲೆದಾಡಿದನು. ಆಗ ಶ್ರೀಶೈಲಕ್ಕೆ ಹೋಗುತ್ತಿದ್ದ ಜಾತ್ರೆಯ ಜನರು ಇವನನ್ನು ಕಂಡು, 'ನಾವು ನಿನಗೆ ಮಲ್ಲಯ್ಯನನ್ನು ತೋರಿಸುತ್ತೇವೆ ಬಾ' ಎಂದು ಶ್ರೀಶೈಲಕ್ಕೆ ಕರೆತಂದು ಲಿಂಗಾಕಾರವನ್ನು ತೋರಿಸಿದರು. ಸಿದ್ಧರಾಮನು ಮಲ್ಲಯ್ಯನನ್ನು ಹುಡುಕುವ ಸನ್ನಿವೇಶವನ್ನು ಈ ಪದ್ಯದಲ್ಲಿ ವರ್ಣಿಸಲಾಗಿದೆ.



10th_Kannada_Reader1-5.indd 26 03-04-2019 14:07:55

ಹಿಂದೆ ಕಂಡಾ ಮೂರ್ತಿಯೆಂದು ಬಗೆದತ್ಯರ್ಥ
ದಿಂದ ನಡೆ ನೋಡಿ ಲಿಂಗಾಕಾರಮಂ ಕಂಡು
ನೊಂದಡವಿಯೊಳಗೆ ಹೊಲಗೆಟ್ಟವ್ವೆಗತ್ತನ್ಯಳಂ ಕಂಡ ಶಿಶುವ ಪೋಲ್ತು
ತಂದೆ ಬಾ ತೋಜೆದಪೆವೆಂದಡಜೆಯದೆ ನಂಬಿ
ಬಂದು ಕೆಟ್ಟೆಂ ಕೆಟ್ಟೆನೆಂದು ಮಂದಿಗೆ ಮಜುಗು
ತಂದು ಮಲ್ಲಯ್ಯ ಮಲ್ಲಯ್ಯಯೆನುತಲಿ ಸಿದ್ಧರಾಮಯ್ಯ ಚಿಂತಿಸಿದನು ||1||

ಬಜೆದೇಕೆ ಬಾಯ್ಬಿಡುವೆ ತಮ್ಮ ಬೇಡೀ ಲೋಕ
ವಜೆಯುತಿರೆ ಮಲ್ಲಿಕಾರ್ಜುನನೀತನೆಂದೊಡಾ
ನಜೆಯೆನೇ ಸಾರೀತನಲ್ಲೆನಲು 'ನೀನಜೆವ ಕುಜುಹಾವುದೆನೆ', 'ಮುಡಿಯೊಳು
ಹೆಜೆಯುಂಡು ತೊಜೆಯುಂಟು ಜಡೆಯುಂಡು ಕೊರಳೆಡೆಯ
ಕಜೆಯುಂಟು ಪಂಚಮುಖವುಂಟು ದಶಭುಜವುಂಟು
ಕಿಜೆಯ ಫಣಿದೊಡವುಂಟು ನೊಸಲಕಣ್ಣುಂಟಾತನಂ ತೋಜೆಕೊಡಿಯೆಂದನು ||2||

ಆತನಂ ತೋಜಲಾವಜೆಯೆವಳಬೇಡೆಂದ
ಡೇತೆಜದೊಳಂ ಮಾಣದಿರ್ದೊಡಾಸತ್ತು ಬಿ
ಟ್ಟೈತಂದರಿತ್ತಲಿವನೆಂತುಮಜಸುತ್ತಾಗಳಳಲುರಿಯ ವಿರಹದಿಂದ
ಭೀತಿ ಬೀತಾಜೀಳವಸ್ಥೆ ತಲೆದೋಜೆ ಕಾ
ಬಾತುರದೊಳೆದ್ದು ಹೊಜವಂಟು ಬಳಿಕಾನಾವ
ಗೋತೆನಾರ್ಗೆಲ್ಲಿರ್ದೆನೇನಾದೆನೆಂದಜೆಯದಜಸಿದನದೇವೊಗಳ್ವೆನು ||3||

10th_Kannada_Reader1-5.indd 27 03-04-2019 14:07:55

ಗಂಗೆಯನು ತಳೆದನಾವೆಡೆಯೊಳಿರ್ದಪನೊ ಮಜೆ
ದಿಂಗಳನು ಮುಡಿದನೆಲ್ಲಿರ್ದಪನೊ ಹೊಳೆವ ಫಣಿ
ಪಂಗಳನು ತೊಟ್ಟವನು ಎತ್ತ ಹೋದಂ ಎತ್ತನೇಱಿರ್ದನೇನಾದಪಂ
ಅಂಗನೆಯನೆಡದ ದೇಹದೊಳು ಮಡಗಿಟ್ಟವನ
ಕಂಗಳಿಂಗಳದಿಂದ ಪುರವ ನೆಱೆ ಸುಟ್ಟವನ
ನುಗಭಸಿತನ ಕಂಡಿರೇನಯ್ಯ ಅಯ್ಯ ಎಂದವರವರ್ಗೆ ಬಾಯ್ವಿಟ್ಟನು ||4||

ಕರೆದಡೇಕೋಯೆನ್ನೆ ಮಲ್ಲಯ್ಯ ಬೆಂಬತ್ತಿ
ಹರಿದಡೇಕೋಯೆನ್ನೆ ಮಲ್ಲಯ್ಯ ಕಡುಬಿಸಿಲ
ಉರಿಗೆ ನೆಲಕಾಯ್ದ ಹುಡಿಯೊಳಗೆ ಹೊರಳಿದು ಮಿಡುಕೆ ಕರುಣವಿನಿತಿಲ್ಲ ನಿನಗೆ
ಮರುಳಂಗನಾಥಂಗನನ್ಯಗತಿಕಂಗಿನ್ನು
ಕರುಣಿಸೋ ಎಂಬ ಪ್ರಲಾಪಕ್ಕೆ ಸೈರಿಸದೆ
ತರುಗುಲ್ಮ ಲತೆಗಳೆದ್ದಳುತಿರ್ದವಂಬರದ ಕಂಬನಿಯ ಕೂಡೆಕೂಡೆ ||5||

ಕರೆಕರೆದು ಗಹ್ವರದ ಮಾರ್ದನಿಗಳು ಕೇಳ್ದು
ಗಿರಿಶನೋಯೆಂದನೆಂದೆಯ್ದೆ ಕಣ್ಮುಚ್ಚಿ ಹೃ
ತ್ಸರಿಸಿಜದೊಳಿರ್ದ ರೂಪಂ ಕಂಡು ಕಣ್ದೆಱೆದು ನೋಡಿ ಕಾಣದೆ ಮಱುಗುತ
ಭರವಸದಿ ನಡೆಯುಡುಗಿ ಬಿಱುಬಿಸಿಲೊಳಲ್ಲಲ್ಲಿ
ಹರಿಹರಿದು ಬಗಿಬಗಿದು ನೊಂದು ಪರಿಪರಿಯ ಕ
ಮ್ಮರಿಗಳೊಳು ನೋಡುತ್ತ ಬಾಡುತ್ತ ನೆಱೆರುದ್ರಗಮ್ಮರಿಗೆ ನಡೆತಂದನು ||6||

10th_Kannada_Reader1-5.indd 28 03-04-2019 14:07:55

ಘನಸತ್ಯಮಯನಪ್ಪ ನೀಂ ಪರ್ವತದಲಿಪ್ಪೆ
ನೆನೆ ನಿನ್ನ ಕಾಣಲೆಂದಾನಿಲ್ಲಿಗೈತಂದೊ
ಡನಿಮಿತ್ತ ಮುನಿದನಂತಡಗುವರೆ ಹಿಂದೆ ಕೆಯ್ಯೊಳಗೆ ತೋಱಿದ ನಿಜವನು
ಎನಗೀಗ ತೋಱುವುದು ಲೇಸ ಸಾಜಿದೆನು ದು
ರ್ಜನವಳಿಯಲಿನ್ನೊಮ್ಮೆ ಕರೆವೆನಲ್ಲಿಂ ಮೇಲೆ
ತನುವನೀ ಕಮ್ಮರಿಗೆ ಕುಡುವೆನೆಂದಾಡುತಿರೆ ಪರವಶಂ ಕೈಮಿಕ್ಕುದು ||7||

ಕೊರಳೆತ್ತಿ ಕೈಮುಗಿದು ನೆಗಪಿ ಕಣ್ಣಂ ಮುಚ್ಚಿ
ಕರುಣಾಬ್ಧಿ ಮಲ್ಲಿನಾಥಾ ಎಂದಡೋ ಕಂದ
ಕರೆದು ಬಳಲಿದೆಯೆನುತ್ತೆತ್ತಿ ತರ್ಕೈಸಿ ತಲೆದಡವಿ ಮುಂಡಾಡಿ ನೋಡಿ
ತರುಣೇಂದು ಸುರನದಿ ಜಟಾಮಕುಟವಸಮಾಕ್ಷ
ವುರಗಕುಂಡಲವೈದು ವದನವೀರೈದು ತೋಳ್
ಗರಳಗಳವಿಭಚರ್ಮವೆಡದ ಗಿರಿಸುತೆವೆರಸಿ ತೋಱಿದಂ ನಿಜರೂಪನು ||8||

ವರಮೂರ್ತಿಯಂ ಕಂಡು ಹಿಗ್ಗಿ ಹಾರೈಸಿ ಸೈ
ತಿರಿಸಲಿಜೆಯದೆ ಕುಣಿದು ಕುಕಿಲಿಜೆದು ಕುಂಬಿಕ್ಕಿ
ಚರಣದಲಿ ಬಿದ್ದ ಬಾಲಕನ ತೊದಳಂತುವಂ ಕೈಯ್ಯ ಕಂಪನದ ಕಡುಹಂ
ಸುರಿವ ಸುಖಜಲದ ಹೊನಲಂ ಸ್ವೇದದೊಱತೆಯಂ
ಪರವಸದ ಮಱವೆಯಂ ಗದುಗದದ ಭಾರಮಂ
ನೆರೆದ ಪುಳಕದ ಪಟ್ಟಿಯಂ ಕಂಡು ಬೆಱಗಾದರಾ ಪುಣ್ಯದಂಪತಿಗಳು ||9||

10th_Kannada_Reader1-5.indd 29 03-04-2019 14:07:55

ಕವಿ ಕಾವ್ಯ ವಿಚಾರ



ರಾಘವಾಂಕ

ಕವಿ ರಾಘವಾಂಕನ ವಾಸಸ್ಥಳ ಹಂಪೆ. ತಂದೆ: ಮಹಾದೇವಭಟ್ಟ; ತಾಯಿ: ರುದ್ರಾಣಿ. ಈತ ಕವಿ ಹರಿಹರನ ಸೋದರಳಿಯ ಹಾಗೂ ಶಿಷ್ಯ. ಇವನ ಕಾಲ ಕ್ರಿ.ಶ. 1165 ಎಂದು ಕವಿಚರಿತಕಾರರು ಹೇಳಿದ್ದಾರೆ. ಈ ಕವಿಯು 'ಹರಿಶ್ಚಂದ್ರ ಕಾವ್ಯ', 'ಸೋಮನಾಥ ಚಾರಿತ್ರ್ಯ', 'ಸಿದ್ಧರಾಮ ಚಾರಿತ್ರ್ಯ', 'ಶರಭ ಚಾರಿತ್ರ್ಯ', 'ವೀರೇಶ ಚರಿತೆ' ಮತ್ತು 'ಹರಿಹರ ಮಹತ್ವ' ಎಂಬ ಕಾವ್ಯಗಳನ್ನು ರಚಿಸಿದ್ದಾನೆ. ರಾಘವಾಂಕನಿಗೆ 'ಉಭಯ ಕವಿ ಕಮಲ ರವಿ', 'ಕವಿ ಶರಭ ಭೇರುಂಡ' ಎಂಬ ಬಿರುದುಗಳಿದ್ದವು.

ಪ್ರಸ್ತುತ ಪದ್ಯವನ್ನು 'ಸಿದ್ಧರಾಮ ಚಾರಿತ್ರ್ಯ' ಎಂಬ ಕಾವ್ಯದಿಂದ ಆರಿಸಿಕೊಳ್ಳಲಾಗಿದೆ.

ಶ್ರೀಶೈಲಕ್ಕೆ ಹೋಗುತ್ತಿದ್ದ ಜಾತ್ರೆಯ ಜನರು ಸಿದ್ಧರಾಮನನ್ನು ಕರೆದುಕೊಂಡು ಬಂದು ಲಿಂಗಾಕಾರವನ್ನು ತೋರಿಸುತ್ತಾರೆ. ಆಗ ಸಿದ್ಧರಾಮನು, 'ನಾನು ಹಿಂದೆ ಹೊಲದಲ್ಲಿ ನೋಡಿದ ಮಲ್ಲಯ್ಯನನ್ನು ನೋಡಬೇಕು. ಇವರನ್ನು ನಂಬಿ ಬಂದು ಕೆಟ್ಟೆ'ನೆಂದು ಚಿಂತಿಸುತ್ತಾನೆ. ನಾನು ಕಂಡ ಮಲ್ಲಯ್ಯನ ಮುಡಿಯಲ್ಲಿ ಚಂದ್ರನುಂಟು, ನದಿಯುಂಟು, ಜಡೆಯುಂಟು, ಕೊರಳಲ್ಲಿ ವಿಷವುಂಟು, ಪಂಚಮುಖ–ದಶಭುಜುಂಟು, ಹಾವಿನ ಆಭರಣವುಂಟು, ಹಣೆಯಲ್ಲಿ ಕಣ್ಣುಂಟು' ಎಂದು ಹೇಳುತ್ತಾನೆ. ಹೀಗೆ ಹುಡುಕುತ್ತಾ ಅಳುತ್ತಾ ಅಲೆದಾಡುತ್ತಿರುವ ಅವನ ಪ್ರಲಾಪಕ್ಕೆ ಮರ–ಗಿಡ–ಪೊದೆ–ಬಳ್ಳಿಗಳೂ ಮರುಗಿದವು. ತನ್ನ ಕೂಗಿಗೆ ಗುಹೆಗಳಿಂದ ಪ್ರತಿಧ್ವನಿ ಕೇಳುತ್ತಿರುವುದನ್ನು ಕಂಡು, ಮಲ್ಲಯ್ಯನೇ ನನ್ನನ್ನು ಕರೆದ ಎಂದು ತಿಳಿದು ಅಲ್ಲಿ ಹೋಗಿ ನೋಡಿದರೆ ಪ್ರಕೃತಿ ಮಾತ್ರ ಕಾಣುತ್ತಿತ್ತು. ಕೊನೆಗೆ, ಅಲ್ಲಿದ್ದ ಕಣಿವೆಯ ರುದ್ರಗಮ್ಮರಿಯ ಬಳಿಗೆ ಬರುತ್ತಾನೆ: 'ಇನ್ನೊಮ್ಮೆ ಕಣ್ಮುಚ್ಚಿ ನಾನು "ಮಲ್ಲಯ್ಯ" ಎನ್ನುತ್ತೇನೆ. ನೀನು ಬರದೇ ಇದ್ದರೆ ಈ ಕಮ್ಮರಿಯಿಂದ ಜಿಗಿದು ಪ್ರಾಣ ಬಿಡುತ್ತೇನೆ' ಎಂದು ಹೇಳಿ ಕಣ್ಮುಚ್ಚಿ, 'ಮಲ್ಲಿನಾಥಾ' ಎಂದು ಕರೆಯುತ್ತಾನೆ. ಆಗ ಮಲ್ಲಿನಾಥನು ಗಿರಿಜಾಸಮೇತ ತನ್ನ ನಿಜರೂಪವನ್ನು ತೋರಿಸುತ್ತಾನೆ.

ಪದಗಳ ಅರ್ಥ

ಪದ್ಯ 1 : ಅತ್ಯಾರ್ತ–ಅತಿ+ಆರ್ತ(ಯ.ಸಂ) ಬಹಳ ದುಃಖಿ; ಹೊಲಗೆಟ್ಟು–ದಾರಿತಪ್ಪಿ; ಅಜೆ(ಧಾ)–ತಿಳಿ.

ಪದ್ಯ 2 : ಬಜೆದು–ವ್ಯರ್ಥ, ಸುಮ್ಮನೆ; ಸಾರ್–ದೂರ ಸರಿ; ಹೆಜ್ಜೆ–ಚಂದ್ರ; ತೊಜ್ಜೆ– ನದಿ; ಜಟಾ–ಜಡೆ(ದ್ಭ); ಕವೆ(ನಾ)–ಕಳಂಕ; ಫಣಿದೊಡವು–ಹಾವಿನ ಆಭರಣ; ನೊಸಲು–ಹಣ.

ಪದ್ಯ 3 : ಏತೆಱದೊಳಂ–ಯಾವ ರೀತಿಯಿಂದಲೂ; ಮಾಣದೆ–ಕೇಳದೆ(ಮಾಣ್ ಎಂಬುದು ನಿಷೇಧಾರ್ಥ ಸೂಚಕಾವ್ಯಯ); ಆಸತ್ತು–ಬೇಸರಗೊಂಡು; ಬೀತು–ನಾಶವಾಗಿ; ಆಱೇಳು ಅವಸ್ಥೆ–ಆರು ಮತ್ತು ಏಳನೆಯ ಅವಸ್ಥೆ(ದಶಾವಸ್ಥೆಗಳು : ಅಭಿಲಾಷೆ, ಚಿಂತೆ, ಸಂಸ್ಮೃತಿ, ವಿಭುಗುಣ ನುತಿ, ಕ್ರಿಯಾದೋಷ, ಅಭಿಮಾನಚ್ಯುತಿ, ಗಮನ, ಕ್ಷುಭಿತಾ, ಆತ್ಮಾವಸ್ಥೆ, ಮರಣ. ಈ ದಶಾವಸ್ಥೆಗಳಲ್ಲಿ ಸಿದ್ಧರಾಮನಿಗೆ ಅಭಿಮಾನ ಚ್ಯುತಿ ಮತ್ತು ಗಮನ ಎಂಬ ಸ್ಥಿತಿಗಳು ಪ್ರಾಪ್ತವಾದವು). ತಲೆದೋಜೆ–ತಲೆಯಂ+ತೋಜೆ(ಕ್ರಿ.ಸ)–ಕಾಣಿಸಿಕೊಳ್ಳಲು; ಕಾಬ–ಕಾಣುವ; ಬಳಿಕ+ಆನು+ಅವಗೆ–ಬಳಿಕ ನಾನು ಅವನಿಗೆ; ಓತೆಂ–(ಓ=ಪ್ರೀತಿಸು)ಪ್ರೀತಿಸಿದೆನು.

ಪದ್ಯ 4 : ತಳೆ–ಧರಿಸು; ಮಜೆದಿಂಗಳು–ಮರಿ ತಿಂಗಳು, ಬಾಲಚಂದ್ರ; ಮುಡಿ–ಧರಿಸು; ಮಡಗು–ಇಡು; ಇಂಗಳ–ಬೆಂಕಿ; ನೆಜ್ಜೆ–ಚೆನ್ನಾಗಿ; ಅನಂಗ–ಶರೀರವಿಲ್ಲದವನು, ಮನ್ಮಥ.

ಪದ್ಯ 5 : ಬೆನ್ನಂ+ಪತ್ತಿ(ಕ್ರಿ.ಸ)–ಬೆಂಬತ್ತಿ, ಹಿಂಬಾಲಿಸಿ; ಹಜೆ–ಮಿಡುಕು, ಒದ್ದಾಡು; ಅನನ್ಯಗತಿಕ–ಬೇರೆ ಗತಿಯಿಲ್ಲದವ,ಶರಣಾಗತ;ತರುಗುಲ್ಮಲತೆಗಳ್(ದ್ವ.ಸ) –ಮರಪೊದೆಬಳ್ಳಿಗಳು.

10th_Kannada_Reader1-5.indd 30 03-04-2019 14:07:55

ಪದ್ಯ 6 : ಗಹ್ವರ–ಗವಿ, ಗುಹೆ; ಎಯ್ದೆ(ಚೆನ್ನಾಗಿ), ಸರಸಿಜ–ಕಮಲ; ಬಿಜುಬಿಸಿಲು–ಬಿರುಸಾದ+ಬಿಸಿಲು(ಕ.ಸ), ತೀಕ್ಷ್ಣವಾದ ಬಿಸಿಲು; ಬಗಿಬಗಿದು; ಜಾಗ ಮಾಡಿಕೊಂಡು; ಕಮ್ಮರಿ–ಪ್ರಪಾತ, ಕಮರಿ.

ಪದ್ಯ 7 : ಅನಿಮಿತ್ತ–ಕಾರಣವಿಲ್ಲದ; ಮುನಿ–ಕೋಪಗೊಳ್ಳು; ಲೇಸು–ಒಳ್ಳೆಯದು; ಪರವಶ–ಪರವಸ(ದ್ಭ), ಮೈಮರೆ; ಕೈಮಿಗು–ಅತಿಶಯ, ಕೆಯ್ಯೊಳಗೆ–ಹೊಲದೊಳಗೆ.

ಪದ್ಯ 8 : ನೆಗಪಿ–ಮೇಲಕ್ಕೆತ್ತಿ; ಕರುಣಾಬ್ಧಿ(ಸ.ದೀ.ಸಂ)–ಕರುಣಾಸಾಗರ; ತಕ್ಕೈಸಿ– ತಬ್ಬಿಕೊಂಡು, ಅಪ್ಪಿಕೊಂಡು; ಮುಂಡಾಡಿ – ಮುದ್ದಾಡಿ; ತರುಣೇಂದು–ತರುಣ+ಇಂದು (ಗು.ಸಂ)–ಬಾಲಚಂದ್ರ; ಸುರನದಿ–ಸುರರ+ನದಿ(ಷ.ತ.ಸ)=ಗಂಗಾನದಿ; ಅಸಮಾಕ್ಷ–ವಿಷಮ ಸಂಖ್ಯೆಯಲ್ಲಿ ಕಣ್ಣುಳ್ಳವನು; ಮುಕ್ಕಣ್ಣ–ಶಿವ; ಈರೈದು–ಎರಡು+ಐದು(ದ್ವಿ.ಸ), ಹತ್ತು; ಗರಳಗಳ–ವಿಷಕಂಠ, ಶಿವ, ಇಭ–ಆನೆ.

ಪದ್ಯ 9 : ಸೈತಿರಿಸು–ಸುಮ್ಮನಿರಿಸು, ಕುಕಿಲಿರಿದು–ಸಂತೋಷದಿಂದ ಕೂಗಿ, ಕುಂಬಿಕ್ಕಿ– ಚಪ್ಪಾಳೆ ತಟ್ಟಿ ಕುಣಿದು; ಸ್ವೇದ–ಬೆವರು; ಒಱೆತೆ–ಒಸರು, ಜಿನುಗುವಿಕೆ; ಪುಳಕ–ರೋಮಾಂಚನ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಿದ್ಧರಾಮನಿಗೆ ಶಿವನು ಮೊದಲು ಎಲ್ಲಿ ದರ್ಶನ ಕೊಟ್ಟನು ?
2. ಸಿದ್ಧರಾಮನಿಗೆ ಮಲ್ಲಯ್ಯನನ್ನು ತೋರಿಸುತ್ತೇನೆಂದು ಯಾರು ಕರೆದರು ?
3. ಸಿದ್ಧರಾಮನು ಮಲ್ಲಯ್ಯನನ್ನು ಕಾಣಲು ಎಲ್ಲಿಗೆ ಬಂದನು ?
4. ಸಿದ್ಧರಾಮನ ಪ್ರಲಾಪಕ್ಕೆ ಮರಗಿಡಗಳು ಯಾವ ಪ್ರತಿಕ್ರಿಯೆ ನೀಡಿದವು. ?
5. ಸಿದ್ಧರಾಮನು ಶಿವನನ್ನು ಕೂಡಲೇ ನೋಡಬೇಕೆಂಬ ತವಕದಿಂದ ಕೊನೆಗೆ ಎಲ್ಲಿಗೆ ಬಂದನು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಕೆಟ್ಟೆಂ ಕೆಟ್ಟೆನೆಂದು ಸಿದ್ಧರಾಮನು ಏಕೆ ಚಿಂತಿಸಿದನು ?
2. ಸಿದ್ಧರಾಮನು ಹೇಳಿದ ಮಲ್ಲಯ್ಯನ ಕುರುಹುಗಳು ಯಾವುವು ?
3. 'ಅಯ್ಯಾ ಕಂಡಿರೇನಯ್ಯಾ?' ಎಂದು ದಾರಿಗರನ್ನು ಕೇಳುವಾಗ ಸಿದ್ಧರಾಮನು ತಿಳಿಸಿದ ಮಲ್ಲಯ್ಯನ ವಿಶೇಷಗಳೇನು ?
4. ಸಿದ್ಧರಾಮನು ಮಲ್ಲಯ್ಯನನ್ನು ಕುರಿತು ಯಾವ ರೀತಿ ಪ್ರಲಾಪಿಸಿದನು ?
5. ಸಿದ್ಧರಾಮನು ರುದ್ರಗಮ್ಮರಿಗೆ ಏಕೆ ಬಂದನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸಿದ್ಧರಾಮನು ಮಲ್ಲಯ್ಯನನ್ನು ಕುರಿತು, 'ಲೇಸ ಸಾರಿದ ಮಾತು'ಗಳಾವುವು?
2. ಮಲ್ಲಿನಾಥನು ತೋರಿಸಿದ ನಿಜ ರೂಪವನ್ನು ವರ್ಣಿಸಿರಿ.
3. 'ಕಂಡು ಬೆಱಗಾದರಾ ಪುಣ್ಯದಂಪತಿಗಳು' ಏಕೆ ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಗಂಗೆ, ಫಣಿ, ಮರಿದಿಂಗಳು, ಗಹ್ವರ, ಮಾರ್ದನಿ,

2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಲಿಂಗಾಕಾರ, ಅತ್ಯಾರ್ಥ, ಕೊರಳೆತ್ತಿ, ತಲೆದೋಜೆ, ಮರಿದಿಂಗಳು.

3. ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸವನ್ನು ಹೆಸರಿಸಿ.

ಕಡುಬಿಸಿಲು, ಕೈಮುಗಿ, ಕಂಬನಿ, ಬಿರುಬಿಸಿಲು, ತರುಗುಲ್ಮಲತೆಗಳು, ಈರೈದು, ಬಾಯ್ಬಿಡು, ಕಣ್ಮುಚ್ಚಿ.

ಚಟುವಟಿಕೆ

1. ರಾಘವಾಂಕ ಕವಿಯ 'ಹರಿಶ್ಚಂದ್ರ ಕಾವ್ಯ'ವನ್ನು ಓದಿರಿ.

10th_Kannada_Reader1-5.indd 31 03-04-2019 14:07:55

ಗದ್ಯ ವಿಹಾರ

ಘಟಕ ಎರಡು

ಬಾರದಿದ್ದ ಮಳೆ ಬಂದಾಗ

– ಜ್ಯೋತಿ ಹೊಸೂರ



'ಮಳೆಯಿಂದಲೇ ಇಳೆ' ಎನ್ನುವ ಮಾತು ಸತ್ಯ. ಮಳೆ ಬಾರದಿದ್ದರೆ ಭೂಮಿ ಬರಡು. ಜನರು ಮಳೆಯನ್ನು ಯಾವಾಗಲೂ ಇಷ್ಟಪಡುವರು. ಮಳೆಯಾಗುತ್ತಿದ್ದರೆ ಸಂತೋಷ ಎಲ್ಲೆಡೆ ಇರುತ್ತದೆ. ಇಲ್ಲದಿದ್ದರೆ ಬರಗಾಲದ ಭೀತಿಯನ್ನು ಅನುಭವಿಸುತ್ತಿದ್ದಾಗ ಒಮ್ಮೆಲೇ ಮಳೆ ಬಂದರೆ ಜನತೆಯ ಹಿಗ್ಗು ಹೇಗಿರುತ್ತದೆ ಎನ್ನುವುದಕ್ಕೆ ನಿದರ್ಶನ ಈ ಬರಹ.



ದಿನಗಳು ಉರುಳುತ್ತಿದ್ದವು. ವಾರಗಳು ಮರಳುತ್ತಿದ್ದವು. ಆದರೆ ಇದ್ದ ಸ್ಥಿತಿಯಲ್ಲೇನೂ ಬದಲಾವಣೆ ಇಲ್ಲ. ದಿನವೂ ಅದೇ ಬೆಂಕಿ ಬಿಸಿಲು. ರಾತ್ರಿಯಾದರೂ ತಂಪಿಲ್ಲ, ತಣಿವಿಲ್ಲ. ಅಂತೆಯೇ ರೈತರು ಕಾತರದಿಂದ ಮುಗಿಲು ನೋಡಿ ಬೇಸತ್ತರು. ಬಡವರ ಆಸೆ ಕಮರಿತ್ತು. ದುಗುಡ ಇಮ್ಮಡಿಸಲಾರಂಭಿಸಿತು. ಒಟ್ಟಿನಲ್ಲಿ ಜನತೆಯ ಹೌಹಾರಿಕೆ ಹಾಗೆಯೇ ಮುನ್ನಡೆದಿತ್ತು.

ಎಂದಿನಂತೆ ಯಾವ ಬದಲಾವಣೆಯೂ ಇಲ್ಲದೆ ಬಂತು ಶನಿವಾರ. ಅದೇ ಗಾಳಿ, ಅದೇ ಧೂಳಿ. ಮುಗಿಲಲ್ಲಿ ಅದೇ ಬಿಳಿ ತಿಳಿ ಮೋಡಗಳು.

ಮಧ್ಯಾಹ್ನ ಸುಮಾರು ಒಂದು ಗಂಟೆಯ ಸಮಯ. ಮುಖ ಒಣಗಿಸಿಕೊಂಡ ಜನ ಅಲ್ಲಲ್ಲಿ ಇದ್ದಾರೆ. ಉರಿಯುವ ಬಿಸಿಲಾದರೂ ಕೆಲವರು ದುಡಿಯುತ್ತಲಿದ್ದಾರೆ. ಕೆಲವರು ದುಡಿಸಿಕೊಳ್ಳುತ್ತಲಿದ್ದಾರೆ. ಮತ್ತೆ ಕೆಲವರು ಸುಖವಾಗಿ ಕುಳಿತಿದ್ದಾರೆ. ಸೆಖೆಯ ಸಂಕಟ ಮಾತ್ರ ಎಲ್ಲರನ್ನೂ ಘಾಸಿಗೊಳಿಸುತ್ತಿದೆ. ಅನುಕೂಲವಿದ್ದವರು ಫ್ಯಾನು ಬೀಸಣಿಕೆಗಳಿಗೆ ಮೈಯೊಡ್ಡಿದ್ದಾರೆ. ಇನ್ನುಳಿದವರು ತಮ್ಮ ಅಂಗಿಗಳನ್ನೇ ಬೀಸಣಿಕೆ ಮಾಡಿಕೊಂಡಿದ್ದಾರೆ. ಎಷ್ಟು ಬೀಸಿಕೊಂಡರೂ ಸಮಾಧಾನವಿಲ್ಲ. ಒಂದೇ ಸಮನೆ ಚಡಪಡಿಸುತ್ತಿದ್ದಾರೆ.

10th_Kannada_Reader1-5.indd 32 03-04-2019 14:07:55

ಟಪಟಪ ಮಳೆ ಹನಿಗಳು ಬೀಳಲಾರಂಭಿಸಿದವು. ಅತ್ಯಾಶ್ಚರ್ಯ! ಏಕೆಂದರೆ ಅನಿರೀಕ್ಷಿತ ಮಳೆಹನಿಗಳು! ಒಡನೆಯೇ ಸಹಸ್ರ ಸಹಸ್ರ ಕಣ್ಣುಗಳು ಮುಗಿಲೆಡೆಗೆ ತಿರುಗಿದವು. ಬಿಳಿ ತಿಳಿ ಮೋಡಗಳು ಭ್ರಮರದ ಬಣ್ಣಕ್ಕೆ ತಿರುಗುತ್ತಿರುವುದನ್ನು ಕಂಡ ಕಣ್ಣುಗಳಲ್ಲಿ ಅದಾವುದೋ ಆಸೆ ಮೂಡಿತು. ಗಾಳಿ ನಿಂತು, ಧೂಳು ಇಲ್ಲವಾಗುತ್ತಿರುವುದನ್ನು ಗಮನಿಸಿ ಸಮಾಧಾನದ ಉಸಿರು ಅವರೆಲ್ಲರಲ್ಲಿ ಅವರರಿಯದಂತೆಯೇ ಹೊಮ್ಮಿತು.

ಆಗಸದಲ್ಲಿ ಕರಿಮೋಡಗಳು ಹೆಚ್ಚಿದವು. ಸುರಿಯುವ ಮಳೆಹನಿಗಳೂ ಹೆಚ್ಚಿದವು. ಗಳಿಗೆಯಷ್ಟೊತ್ತಿಗೆ ಮಳೆಯು ರಭಸದಿಂದ ಬೀಳಹತ್ತಿತು. ನೋಡುನೋಡುತ್ತಾ ಎಲ್ಲರ ಮುಖಗಳೂ ಅರಳಿದವು. ಮಕ್ಕಳೂ ಹುಡುಗರೂ ಹೆಂಗಸರೂ ಗಂಡಸರೂ ಎಲ್ಲರೂ ಉತ್ಕಂಠಿತರಾಗಿದ್ದಾರೆ. ಆಡುವವರು ಆಟ ನಿಲ್ಲಿಸಿ ಹರ್ಷದಲ್ಲಿದ್ದಾರೆ. ದುಡಿಯುವವರು ದುಡಿತ ನಿಲ್ಲಿಸಿ ಮಳೆಯ ತೀವ್ರತೆಯ ಲೆಕ್ಕಾಚಾರ ನಡೆಸಿದ್ದಾರೆ. ನಿಂತು ಮಾತನಾಡುವವರು ಮಳೆಯ ಪ್ರಸ್ತಾಪ ಮಾಡುತ್ತಾ ಮಾತನ್ನು ಮುಂದುವರೆಸಿದ್ದಾರೆ. ಎಲ್ಲರ ಬಾಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಮಳೆ ಸುಳಿದಾಡುತ್ತಲೇ ಇತ್ತು. ಮಹಲುಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸುಖ ಪುರುಷರೂ ಹೊರಗೋಡಿ ಬಂದಿದ್ದಾರೆ. ಮಳೆ ನೋಡಿ ಹಿಗ್ಗುತ್ತಲಿದ್ದಾರೆ. ಮೈಮೇಲಿನ ಬಟ್ಟೆಗಳೆಲ್ಲಾ ತೋಯುತ್ತಲಿವೆ. ಆದರೂ ಅವುಗಳನ್ನು ರಕ್ಷಿಸಿಕೊಳ್ಳಬೇಕೆಂಬ ಯೋಚನೆ ಯಾರಿಗೂ ಇದ್ದಂತಿಲ್ಲ. ಅವರೆಲ್ಲರೂ ಈಗ ಪರವಶರಾಗಿದ್ದಾರೆಂದೇ ಹೇಳಬೇಕು. ಆಡುವ ಹುಡುಗರ ಕೇಕೆ, ಜೋರಾಗುತ್ತಲಿದೆ. ಅವರ ದಂಡು ಬೆಳೆಯುತ್ತಲಿದೆ. ಅವರು ಮೊದಲಿನ ಆಟ ಬಿಟ್ಟುಕೊಟ್ಟಿದ್ದಾರೆ. ಎಲ್ಲರೂ ಮಳೆಯಾಟ ಆರಂಭಿಸಿದ್ದಾರೆ. ಕೈಬೀಸಿ ತಮ್ಮ ಮೈಸುತ್ತ ತಿರುಗುತ್ತಲಿದ್ದಾರೆ.

ಮಳೆ ಬಂತೋ ಮಾರಾಯ ।
ಗುಡಿ ಕಟ್ಟೋ ಶಿವರಾಯ ॥

ಎಂದು ದನಿಯೆತ್ತಿ ಹಾಡುತ್ತಲಿದ್ದಾರೆ. ಅಷ್ಟರಲ್ಲಿ ಗುಡುಗಿನ ಸಪ್ಪಳ ಕೇಳಿಸಿತು. ಕೂಡಲೇ ಹಾಡಿನ ಪಲ್ಲವಿಯೂ ಬದಲಾಯಿತು.

ಗುಡುಗುಡು ಮುತ್ಯಾ ಬಂದಾನೋ ।
ಉಂಡೀ ಕಡಬ ತಂದಾನೋ ।
ಹುಡುಗರ ಕೈಯಾಗ ಕೊಟ್ಟಾನೋ ॥

ಹೀಗೆ ಹತ್ತೆಂಟು ಬಗೆಯಿಂದ ಹಾಡುತ್ತಲಿದ್ದಾರೆ. ಹುಡುಗರ ಹುರುಪು ಈಗ ಮೇರೆ ಮೀರುತ್ತಲಿದೆ. ಬೇರಾವುದರ ಪರಿವೆಯೂ ಅವರಿಗಿಲ್ಲ. ಇತ್ತ ರೈತರು ಹುರುಪು ಹುಮ್ಮಸ್ಸು ಹೆಚ್ಚಿ ಕುಣಿತದ ಹೆಜ್ಜೆಯಲ್ಲಿ ಅತ್ತಿತ್ತ ಸುಳಿದಾಡುತ್ತಿದ್ದಾರೆ. ಎಲ್ಲರಲ್ಲೂ ಹರ್ಷಾರವ ಹೊಮ್ಮುತ್ತಲಿದೆ.

ಮಳೆಯ ರಭಸ ಇನ್ನೂ ಹೆಚ್ಚಿತು. ಅದರ ಜೊತೆಗೇ ಜನತೆಯ ಹರ್ಷವೂ ಹೆಚ್ಚುತ್ತಲಿತ್ತು. ಈಗ ಎಲ್ಲರೂ ತಮ್ಮ ತಮ್ಮ ಕೆಲಸ ನಿಲ್ಲಿಸಿ ಆಸರೆಯೆಡೆಗೆ ನಡೆದರು. ಅವರ ನಡಿಗೆಯಲ್ಲಿ ಈಗ ಆರು ತಿಂಗಳುಗಳಿಂದ ಇಲ್ಲದ ಸಂತಸ ಸಂತೃಪ್ತಿ ಬೆರೆತ ಸಂಭ್ರಮ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಕೆಲವರು ಓಡಿದರು, ಆಸರೆಗಾಗಿ. ಆ ಓಟದಲ್ಲೂ ಒಂದು ಒನಪಿತ್ತು, ನವಿನತೆಯಿತ್ತು.

ಮಳೆಯು ಜೋರಾಗಿ ಸುರಿಯುತ್ತಿತ್ತು. ಎಲ್ಲರೂ ಅಲ್ಲಲ್ಲಿ ಆಸರೆ ಪಡೆದಿದ್ದರು. ಆದರೆ ಮಳೆ ಸುರಿಯುವುದನ್ನು ನೋಡುವ ಚಪಲ ಅವರನ್ನು ಪೀಡಿಸುತ್ತಲಿತ್ತು. ಆಸರೆಗೆ ಬಂದ ಮಹಲು ಹೊಕ್ಕ ಸಿರಿವಂತ ಜನ, ಗುಡಿಸಲು ಹೊಕ್ಕ ಬಡಜನ, ಎಲ್ಲೆಲ್ಲೂ ಕಾಲೆತ್ತಿ ಗೋಣೆತ್ತಿ, ಸಂದು ಕಂಡಲೆಲ್ಲ ಕಣ್ಣು ಕಂಡಲೆಲ್ಲಾ ಕಣ್ಣು ತೂರಿ, ಕಿಟಕಿ ಇದ್ದಲ್ಲೆಲ್ಲಾ ಇಣುಕಿ ನೋಡುತ್ತಿತ್ತು ಮಳೆ ಬೀಳುವ ವೈಖರಿಯನ್ನು; ನೀರು ಹರಿದಾಡುವ ಸೊಬಗನ್ನು.

ಮನೆ, ಬಂಗಲೆ, ಗುಡಿಸಲು ಇವುಗಳ ಒಳಗೂ ಮಳೆ ಬೀಳುತ್ತಿರುವಂತೆ ಆಯಿತು. ಮುಚ್ಚಡ ಬೆಳಕಿಂಡಿಯಿಂದ ಕಿಟಕಿಗಳಿಂದ ಹೆಂಚುಗಳ ಸಂಧಿಯಿಂದ ಹನಿಗಳು ತೂರಿಕೊಂಡು ಒಳಬರುತ್ತಿದ್ದವು. ಮಾಳಿಗೆಯ ಮನೆಗಳು ಇರುವೆಯ ತೂತುಗಳಿಂದಾಗಿ ಸೋರುತ್ತಿದ್ದವು. ಹೀಗಾಗಿ ಮನೆ, ಬಂಗಲೆ, ಗುಡಿಸಲು ಇತ್ಯಾದಿಗಳಲ್ಲೆಲ್ಲ ನೀರು ಹರಿದಾಡಲಾರಂಭಿಸಿತು. ರಭಸಕ್ಕೆ ತೂರಿ ಬರುವ ಹನಿಗಳಿಂದ, ಸೋರಿ ಬರುವ ನೀರಿನಿಂದ ಅಲ್ಲಲ್ಲಿ ಇದ್ದ ಬಟ್ಟೆ ಬರೆಗಳು ಹೊಲಸಾಗುತ್ತಿದ್ದವು! ಕಾಳುಕಡ್ಡಿಗಳು ತೋಯುತ್ತಿದ್ದವು; ಹಿಟ್ಟು–ರೊಟ್ಟಿಗಳು

10th_Kannada_Reader1-5.indd 33 03-04-2019 14:07:55

ಹಾಳಾಗುತ್ತಿದ್ದವು. ಆದರೂ ಜನರು ಸಂತೋಷ ಪಟ್ಟರು. ಹಿಗ್ಗಿನಿಂದ ಓಡಾಡಿ ಸಾಮಾನುಗಳನ್ನು ತೆಗೆದಿಟ್ಟುಕೊಂಡರು.

ಮೈಮೇಲಿನ ಬಟ್ಟೆ ಬರೆ ತೊಯ್ದರೂ ಆನಂದವೇ. ಮನೆ ಗುಡಿಸಲು ಇತ್ಯಾದಿಗಳು ಸೋರಿದರೂ ಸಂತೋಷವೇ. ಇದಕ್ಕೆ ಕಾರಣ ಇಲ್ಲದಿಲ್ಲ. ಬಹಳ ದಿನಗಳಿಂದ ಬಾರದಿದ್ದ ಮಳೆ ಇಂದು ಬರಲಾರಂಭಿಸಿತ್ತು. ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಬೇಕಾದ ಅತಿಥಿ ಮಳೆರಾಯ ಬಂದಾಗ ಸಡಗರ ಎಲ್ಲೆಲ್ಲೂ ಅಭಿವ್ಯಕ್ತವಾಗುತ್ತಲಿದೆ...

ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ ಮಳೆಗಳೆಲ್ಲಾ ಮಳೆಗಾಲ ಬಂತೆಂಬ ಭಾವನೆಯನ್ನೂ ಸಹಿತ ಮೂಡಿಸದೆ ಅದಾವುದೋ ಮಾಯೆಯಿಂದ ಯಾರಿಗೂ ಕಾಣದೆ ಹಾರಿ ಹೋದವು. ಈ ಮಳೆಗಾಲಗಳೆಲ್ಲ ಯಾವಾಗ ಬಂದವು? ಹೇಗೆ ಬಂದವು? ಯಾವಾಗ ಹೋದವು? ಹೇಗೆ ಹೋದವು? ಇದಾವುದೂ ತಿಳಿಯಲಿಲ್ಲ. ಪಂಚಾಂಗಗಳು ಇಲ್ಲದಿದ್ದರೆ ಇದು ಮಳೆಗಾಲ ಎಂಬುದೂ ಗೊತ್ತಾಗುತ್ತಿರಲಿಲ್ಲ. ಬಿಸಿಲಿನ ತಾಪ ಕಡಿಮೆಯಾಗಲಿಲ್ಲ. ಗಾಳಿಯ ಕಸುವೂ ಕಡಿಮೆಯಾಗಲಿಲ್ಲ. ಧೂಳಿಯ ಸಾಮ್ರಾಜ್ಯ ಮಾತ್ರ ಹಾಗೆಯೇ ಉಳಿದಿದೆ.

ಕೆರೆ ಕಾಲುವೆ ಬಾವಿಗಳೆಲ್ಲಾ ಬತ್ತಿದವು. ನೀರಿನ ಅರಬು ಉಂಟಾಗಿ ತೀರ್ಥದಂತೆ ಬಳಸುವ ಪ್ರಸಂಗ ಬಂತು. ಕುಡಿಯಲು ಕೂಡ ನೀರು ತರಲು ಬಾವಿಯಿಂದ ಬಾವಿಗೆ ತಿರುಗಬೇಕಾಯಿತು. ನಡುರಾತ್ರಿಯೇ ಎದ್ದು ಸರತಿಗಾಗಿ ನಿಲ್ಲಬೇಕು. ತಡ ಮಾಡಿದರೆ ತೀರಿತು. ನೀರಿಗಾಗಿಯೇ ದಿನವಿಡೀ ಕಳೆಯಬೇಕು. ಮನೆಯಲ್ಲಿ ಜಳಕ ಮಾಡುವುದೆಂದರೆ ಒಂದು ತಂಬಿಗೆ ನೀರನ್ನು ಮೈಮೇಲೆ ಸಿಡಿಸಿಕೊಳ್ಳುವುದು. ಹೆಚ್ಚು ಬಳಸಿದರೆ ಕುಡಿಯಲು ಕೊರತೆ. ಇಂತಹ ಪರಿಸ್ಥಿತಿಯಲ್ಲಿ ಈಜಾಡುವುದಂತೂ ಸಾಧ್ಯವೇ ಇಲ್ಲ. ಕೊನೆಯ ಪಕ್ಷ ಬಾವಿಗೆ ಹೋಗಿ ನೀರಿನಲ್ಲಿ ಮುಳುಗಿ ಪೂರ್ಣ ಮೈಯನ್ನಾದರೂ ತೋಯಿಸಿಕೊಳ್ಳಬೇಕೆಂದರೆ ಮಧ್ಯ ರಾತ್ರಿಯಲ್ಲಿಯೇ ಏಳಬೇಕು; ಹತ್ತೆಂಟು ಕಡೆಗೆ ಸುತ್ತಾಡಬೇಕು. ಅಷ್ಟಿಷ್ಟು ನೀರು ಕಂಡ ಬಾವಿಯಲ್ಲಿಳಿದು ತಲೆ ತೋಯಿಸಿಕೊಂಡು ತೃಪ್ತಿ ಹೊಂದಬೇಕು. ಇಲ್ಲವಾದರೆ ಹೊತ್ತು ಮೂಡುವುದರೊಳಗೆ ಎದ್ದು ಎಂಜಿನ್ನುಗಳಿಂದ ರೈತರು ಬಾಯ್ತೆರೆದು ನಿಂತಿರುವ ಬೆಳೆಗಳಿಗೆ ಸಾಯುವವರ ಬಾಯಲ್ಲಿ ಬಿಡುವ ನೀರಿನಂತೆ ಉಣಿಸುತ್ತಿದ್ದರು. ಹಣ ಗಳಿಸಲು ಹಚ್ಚಿದ ಕಬ್ಬು ಬೆಳೆಸಿದ ಹತ್ತಿ ಮತ್ತು ಕಾಳಿಗಾಗಿ ಬೆಳೆಸಿದ ಜೋಳ ಗೋವಿನ ಜೋಳ ಎಲ್ಲವೂ ಮುಖ ಬಾಡಿಸಿಕೊಂಡಿದ್ದವು. ಕೆಲವು ಬೆಳೆಗಳಂತೂ ಕೈಕಾಲು ಕಳೆದುಕೊಂಡು ನೆಲ ಹಿಡಿದಿದ್ದವು. ಅನೇಕ ಬಾವಿ ಕೆರೆಗಳು ಪೂರ್ಣ ಬತ್ತಿದುದರಿಂದ ಅವುಗಳನ್ನು ಅವಲಂಬಿಸಿದ ಬೆಳೆಗಳೆಲ್ಲ ಕಮರಿ ಹೋಗಿದ್ದವು.

ದನಕರುಗಳ ಆಡುಕುರಿಗಳ ಕಥೆಯಂತೂ ಹೇಳುವಂತಿಲ್ಲ. ಅಡವಿಯಲ್ಲಿ ಹುಲ್ಲಿಲ್ಲ. ಮನೆಯಲ್ಲಿದ್ದ ಮೇವಿನ ಸಂಗ್ರಹವೂ ತೀರಿದೆ. ಕುಡಿಯಲು ಹೊಟ್ಟೆ ತುಂಬ ನೀರು ಸಿಗುವಂತಿಲ್ಲ. ಕೆರೆಗಳು ಎಂದೋ ಬತ್ತಿದ್ದುದರಿಂದ ಬಾವಿಯ ನೀರಿಗೇ ದನ ಕರುಗಳೆಲ್ಲಾ ಮೊರೆ ಹೋಗಬೇಕು. ಹೊತ್ತೇರುವ ಮುನ್ನವೇ ರೈತರು ಬಾವಿಗಳ ನೀರನ್ನು ತಮ್ಮ ಬೆಳೆಗಳನ್ನು ಬದುಕಿಸಿಕೊಳ್ಳಲೋಸುಗ ಕೆರೆದು ಬಿಡುತ್ತಿದ್ದರು. ಆದುದರಿಂದ ನಾಲಿಗೆ ಒಣಗಿಸಿಕೊಂಡು ನೀರಿಗಾಗಿ ಬಾವಿಯಿಂದ ಬಾವಿಗೆ ಅಲೆದಾಡುವ ದನಕರುಗಳ ಚಿತ್ರ ಕರುಣಾಜನಕವಾಗಿತ್ತು. ಇಂತಹ ಸ್ಥಿತಿಯಲ್ಲಿ ಅವುಗಳನ್ನು ಮಾರಬೇಕೆಂದರೆ ಯೋಗ್ಯ ಬೆಲೆ ಕೊಟ್ಟು ಕೊಳ್ಳುವವರಾದರೂ ಯಾರು?

ದನಕರುಗಳಂತೆಯೇ ಜನತೆಯ ಕಥೆಯೂ ಆಗಿದೆ. ಪೇಟೆಯಲ್ಲಿ ಕೇಳಿದಷ್ಟು ಹಣ ಕೊಟ್ಟರೂ, ಬೇಡಿದಷ್ಟು ಕಾಳು ಸಿಗುವಷ್ಟಿಲ್ಲ. ಧಾರಣೆಯಂತೂ ದಿನದಿನಕ್ಕೂ ಮುಗಿಲು ಮುಟ್ಟಲು ಹವಣಿಸುತ್ತಲಿದೆ. ಮಧ್ಯಮ ವರ್ಗದ ರೈತಾಪಿಗಳ ಸ್ಥಿತಿ ಹದಗೆಟ್ಟಿದೆ. ಅವರ ಕಾಳು ಕಡ್ಡಿಯ ಸಂಗ್ರಹ ತೀರಿದೆ.

ಕೈಯಲ್ಲಿಯ ಕಾಸು ಖರ್ಚಾಗಿ ಹೋಗಿದೆ. ಕೂಲಿಗೆ ಹೋಗಬೇಕೆಂದರೆ ಕೆಲಸ ಕೊಡುವವರಿಲ್ಲ. ಬಡವರ ಗತಿಯಂತೂ ವರ್ಣಿಸಲಾಗದು. ಕೂಲಿಗಾರರಿಗೆ ದಿಕ್ಕು ತೋಚದಾಗಿದೆ. ಕೆಲಸ ಕೊಡುವ ರೈತರೇ ಕೂಲಿಗೆ ಹೋಗಲು ಸಿದ್ಧರಾಗಿರುವಾಗ, ಇವರನ್ನು ಕೇಳುವವರಾರು. ಇನ್ನು ಧನ ಧಾನ್ಯ ಇರುವವರ ಸೊಕ್ಕು ಧಾರಣೆಗಿಂತ ಮೇಲೇರಿದೆ. ತಾಸುಗಟ್ಟಲೆ ಕಾಯ್ದು ನಿಂತರೂ ಮುಖ ಮೇಲೆ ಮಾಡಲು ಅವರು ಸಿದ್ಧರಿಲ್ಲ. ರೈತರ ಕೂಲಿಗಾರರ

10th_Kannada_Reader1-5.indd 34 03-04-2019 14:07:55

ಬೆಳ್ಳಿ ಬಂಗಾರದ ಆಭರಣಗಳೆಲ್ಲ ಈ ಧೂರ್ತರ ಖಜಾನೆ ಸೇರಿ ಅದೆಷ್ಟೋ ದಿನಗಳಾಗಿವೆ. ತಾಮ್ರ ಹಿತ್ತಾಳೆಯ ಪಾತ್ರೆಗಳೂ ಇವರ ಸ್ವಾಧೀನವಾಗಿವೆ. ಈಗ ಅಡವಿಡಲು ಇವರ ಬಳಿ ಬೇರೇನೂ ಇಲ್ಲವೆಂಬುದನ್ನರಿತ ಸಾಹುಕಾರರು ಮುಖವೆತ್ತಲಾರರು. ಕೊಟ್ಟ ಸಾಲವನ್ನೇ ಯಾವ ರೀತಿಯಿಂದ ವಸೂಲು ಮಾಡಬೇಕೆಂಬ ಸಮಸ್ಯೆ ಸಾಹುಕಾರರದು. ಇನ್ನಷ್ಟು ಸಾಲ ಯಾವ ರೀತಿಯಿಂದ ಪಡೆಯಬೇಕೆಂಬ ಹಣಿಕೆ ಬಡವರದು.

ಕಳೆದ ಎರಡು ವರ್ಷಗಳಿಂದ ಕೇವಲ ಚಳಿಗಾಲ ಮತ್ತು ಬೇಸಿಗೆ ಕಾಲ. ಇವೆರಡೇ ವರ್ಷವೆಲ್ಲ ವ್ಯಾಪಿಸಿದ್ದರಿಂದ ಪರಿಸ್ಥಿತಿ ಉಲ್ಬಣಿಸಿತ್ತು. ಆದ್ದರಿಂದ ಜೀವನವೇ ದುರ್ಭರವಾಗಿ ಜನ ದಿನದಿನ ಎಣಿಸಲಾರಂಭಿಸಿದ್ದರು.

ಈ ರೀತಿ ಜನ ವಿಲಿವಿಲಿ ಒದ್ದಾಡುತ್ತಿದ್ದಾಗ; ಎಂದೋ, ಏನೋ, ಹೇಗೋ ಎಂಬ ನಿರಾಶೆಯಲ್ಲಿ ಮುಳುಗೇಳುತ್ತಿದ್ದಾಗ; ಮೃಗಶಿರಾ ಮಳೆಯು ಹೋಗುವ ಕೊನೆಯ ಗಳಿಗೆಯಲ್ಲಿ ಅದು ಬಂದಿತು. ಸಂತಸ ತಂದಿತು. ಮೈಮೇಲಿನ ಬಟ್ಟೆ ತೊಯ್ದಾವೆಂಬ ಪರಿವೆ ಇಲ್ಲದೆ ಮಕ್ಕಳು ನೀರಿಗಿಳಿದು ಜಿಗಿದಾಡಿದರು. ಒಬ್ಬರಿಗೊಬ್ಬರು ರಾಡಿ ನೀರು ಎರಚಿ ನಕ್ಕರು. ರೈತರ ಹಿಗ್ಗು ಅಳತೆ ಮೀರಿದೆ. ಸೊರಗಿ ಕಡ್ಡಿಯಾಗಿರುವ ಅವರ ದೇಹಗಳಲ್ಲಿ ಈಗ ಅದ್ಭುತ ಶಕ್ತಿ ಸಂಚಾರವಾಗಿದೆ. ಗಡಿಬಿಡಿಯಿಂದ ಅತ್ತಿತ್ತ ಓಡಾಡತೊಡಗಿದ್ದಾರೆ. ತಮ್ಮ ಸಾಯುತ್ತಿರುವ ಬೆಳೆಯನ್ನು ಬದುಕಿಸುವ ಆಸೆ ಅವರದು. ಕೈಯಲ್ಲಿ ಸನಕಿ ಗುದ್ದಲಿ ಹಿಡಿದು ಮಳೆಯಲ್ಲಿಯೇ ಹೊರಬಿದ್ದಿದ್ದಾರೆ. ಹರಿದು ಬರುವ ನೀರಿಗೆ ಅಡ್ಡ ಕಟ್ಟಿ, ಒಡ್ಡು ಕಟ್ಟಿ ಬೆಳೆಗಳಿಗೊಯ್ಯುತ್ತಿದ್ದಾರೆ. ಬೆಳೆಯ ತುಂಬೆಲ್ಲ ನೀರು ನಿಂತಾಗ ಅವರ ಮುಖ ನೋಡಬೇಕು. ಮೀಸೆಯ ಮೇಲೆ ಕೈಯೆಳೆಯುವ ಭಂಗಿಯನ್ನು ನೋಡಬೇಕು!

ಒಟ್ಟು ಜನರ ಸಂತಸವನ್ನು ಇಷ್ಟೇ ಎಂದು ಹೇಳುವಂತಿಲ್ಲ. ಇದೇ ರೀತಿಯಿಂದ ಇದೇ ಪ್ರಮಾಣದಿಂದ ತಮ್ಮ ಸಂತಸವನ್ನು ವ್ಯಕ್ತ ಮಾಡಿದರೆಂದು ಬಣ್ಣಿಸಲೂ ಬಾರದು. ಬಹುದಿವಸಗಳಿಂದ ಬಾರದ್ದು ಬಂದಾಗ – ಅದು ಯಾವುದೇ ಇರಲಿ – ಸಂತಸ ಉಕ್ಕಲೇ ಬೇಕು! ಬಂಗಾರದ ಕಿರೀಟದಲ್ಲಿಯ ಮಿಶ್ರಧಾತುವಿನ ಪ್ರಮಾಣ ಹೇಗೆ ಕಂಡುಕೊಳ್ಳುವುದೆಂಬ ಗುಂಗಿನಲ್ಲಿ ಆರ್ಕಿಮಿಡೀಸನು ಸ್ನಾನದ ತೊಟ್ಟಿಗಿಳಿದಾಗ ನೀರು ಹೊರಚೆಲ್ಲಲು ಮನಸ್ಸಿನಲ್ಲಿ ಮಿಂಚು ತೋರಿ, ಆನಂದಾತಿರೇಖದಿಂದ, 'ತಿಳಿಯಿತು, ತಿಳಿಯಿತು' ಎಂದು ಬತ್ತಲೆಯಾಗಿಯೇ ಓಡಿದ ಘಟನೆ; ದುಡ್ಡಿಗೆ ದುಡ್ಡು ಕೂಡಿಸಿ ಹೊಸ ಕುಪ್ಪಸ ಕೊಂಡ ತರುಣಿಯು, ಸ್ನಾನ ಮುಗಿದ ಮೇಲೆ ಸೀರೆ ಮರೆತು ಅಕ್ಕರೆಯಿಂದ ಬಣ್ಣದ ಕುಪ್ಪಸವೊಂದನ್ನೇ ತೊಟ್ಟು ಒಯ್ಯಾರದಿಂದ ದೇವರಿಗೆ ಹೊರಟ ಘಟನೆ; ಇವು ಇಂತಹ ಹುಚ್ಚು ಹಿಗ್ಗಿನ ಸಾಕ್ಷ್ಯಗಳೆಂಬಂತೆ ಒಮ್ಮೆಲೇ ನೆನಪಾಗದಿರವು. ಅದಿರಲಿ, ಅಪವಾದವಿಲ್ಲದೆ ಎಲ್ಲ ಬಗೆಯ ಎಲ್ಲ ಅಂತಸ್ತಿನ ಜನರಿಗೂ ಒಂದು ತರಹದ ಅವರ್ಣನೀಯ ಆನಂದದ ಅನುಭವ ಬಹು ದಿನಗಳಿಂದ ಬಾರದಿದ್ದಾಗ ಮಳೆ ಬಂದಾಗ ಆಯಿತೆಂದು ಮಾತ್ರ ಹೇಳಬಹುದು!

ಕೃತಿ–ಕರ್ತೃ ಪರಿಚಯ

ಶ್ರೀ ಜೋತೆಪ್ಪ ಶಿವಪ್ಪ ಹೊಸೂರ ಅವರು 'ಜ್ಯೋತಿ ಹೊಸೂರ' ಎಂಬ ಹೆಸರಿನಿಂದ ಇಂದಿನ ಕನ್ನಡ ಸಾಹಿತ್ಯ ಲೋಕದಲ್ಲಿ ಪರಿಚಿತರಾಗಿದ್ದಾರೆ. ಬೆಳಗಾಂ ಜಿಲ್ಲೆಯ ರಾಯಭಾಗ ತಾಲೂಕಿನ ಮುಗಳಖೋಡದಲ್ಲಿ 1939ರಲ್ಲಿ ಇವರು ಜನಿಸಿದರು. ಕರ್ನಾಟಕದ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ., ಪದವಿಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. 'ಬೆರಿಸಿ ಇಟ್ಟೀನಾ ಬೆಲ್ಲ ನೆಲಗಡಲಿ', 'ಹೆಸರ ಹೇಳ್ತೀನಿ ಒಡಪ ಕಟ್ಟಿ', 'ಜನಪದ ಗದ್ಯ ಸಾಹಿತ್ಯ' – ಇವು ಇವರ ಕೃತಿಗಳು.

ರಾಯಭಾಗ ಕಲಾ ಮಹಾವಿದ್ಯಾಲಯದ ಪ್ರಿನ್ಸಿಪಾಲರಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ. 'ಕಾಲ' ಎನ್ನುವ ಚಾತುರ್ಮಾಸಿಕ ಪತ್ರಿಕೆಯ ಸಂಪಾದಕರಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ. ಜಾನಪದ ಸಂಶೋಧನಾ ಕಾರ್ಯವನ್ನೂ ಕೈಗೊಂಡಿದ್ದಾರೆ. 'ಜಾನಪದ ಮಂಟಪ'ವನ್ನು ಕಟ್ಟಿ ಗ್ರಂಥಗಳನ್ನೂ ಪ್ರಕಟಿಸುತ್ತಿದ್ದಾರೆ. ಈ ಗದ್ಯ ಭಾಗವನ್ನು ಇವರ ಜೀವನ ಎನ್ನುವ ಲೇಖನದಿಂದ ಆಯ್ದು ಕೊಳ್ಳಲಾಗಿದೆ.

10th_Kannada_Reader1-5.indd 35 03-04-2019 14:07:55

ಪದಗಳ ಅರ್ಥ

ಉರುಳು–ಗತಿಸು, ಕಳೆದು ಹೋಗು; ಮರಳು–ಹಿಂದಿರುಗು; ಕಾತರ–ಆತುರ; ಹೌಹಾರು–ಆಶ್ಚರ್ಯಪಡು; ದುಗುಡ–ದುಃಖ; ಸೆಖೆ–ಕಾವು; ಇಮ್ಮಡಿ–ಎರಡು ಪಟ್ಟು; ಮುತ್ಯಾ–ತಾತ; ಹೊತ್ತೇರು–ಮಧ್ಯಾಹ್ನ; ರೈತಾಪಿ–ರೈತರು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಡವರ ದುಗುಡ ಏಕೆ ಇಮ್ಮಡಿಯಾಗುತ್ತಿತ್ತು?
2. ಜನರಿಗೆ ಏಕೆ ಆಶ್ಚರ್ಯವಾಯಿತು ?
3. ಮಕ್ಕಳು ಹೇಗೆ ನಲಿದಾಡುತ್ತಿದ್ದರು ?
4. ಮಳೆ ಬೀಳುವ ವೈಖರಿ ಹೇಗಿತ್ತು ?
5. ಹರಿಯುವ ನೀರನ್ನು ಜನರು ಹೇಗೆ ಬಳಸಿಕೊಳ್ಳುತ್ತಿದ್ದರು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಉರಿಯುವ ಬಿಸಿಲಿಗೆ ಜನ ಹೇಗೆ ಚಡಪಡಿಸಿದರು ?
2. ಮಳೆ ಪ್ರಾರಂಭವಾದಾಗ ಜನರು ಹೇಗೆ ಹಿಗ್ಗಿದರು ?
3. ಮಳೆಯಲ್ಲಿ ಹುಡುಗರು ಹೇಗೆ ಸುಖಿಸಿದರು?
4. ಜನರು ಮಳೆ ಇಲ್ಲದಿದ್ದರೆ ಹೇಗೆ ಬಳಲುತ್ತಾರೆ?
5. ನೀರಿಲ್ಲದಿದ್ದರೆ ದನಕರುಗಳ ಸ್ಥಿತಿ ಏನಾಗುತ್ತದೆ?
6. ಮಳೆ ಇಲ್ಲದ ಬರಗಾಲದಲ್ಲಿ ಧನಿಕರು ಹೇಗೆ ನಡೆದುಕೊಂಡರು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಳೆ ಬಂದಾಗ ಜನರು ಹೇಗೆ ಸಂತೋಷ ಪಟ್ಟರು?
2. ಬೇಸಿಗೆಯಲ್ಲಿ ನೀರಿಗಾಗಿ ಜನರು ಎಷ್ಟು ಕಷ್ಟ ಪಡುತ್ತಿದ್ದರು? ವಿವರಿಸಿ

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಭ್ರಮರ, ಕಮರಿ, ಧಾರಣೆ, ಮುಗಿಲು, ಕಾತರ.

2. ಕೆಳಗಿನ ಪದಗಳ ಸಂಧಿ ಬಿಡಿಸಿ, ಸಂಧಿಯನ್ನು ಹೆಸರಿಸಿ.

ಅತ್ಯಾಶ್ಚರ್ಯ, ಅಷ್ಟಿಷ್ಟು, ಮಳೆಯಲ್ಲಿ, ಮಳೆಗಾಲ.

3. ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸವನ್ನು ಹೆಸರಿಸಿ

ಇಮ್ಮಡಿ, ಮುಗಿಲೆಡೆಗೆ, ಕಾಳುಕಡ್ಡಿಗಳು, ಕೆರೆ ಕಟ್ಟೆಬಾವಿಗಳು.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಪರವಶ, ಹಿಗ್ಗುತ್ತಾ, ಆಸರೆ, ಕರುಣಾಜನಕ, ಘಟನೆ.

ಚಟುವಟಿಕೆ

1. ಮಳೆಗಳ ಹೆಸರುಗಳನ್ನು ಪಟ್ಟಿ ಮಾಡಿ.
2. ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳ ಹೆಸರುಗಳನ್ನು ಬರೆಯಿರಿ.



10th_Kannada_Reader1-5.indd 36 03-04-2019 14:07:55

ಉಪಪಠ್ಯ

ಘಟಕ ಎರಡು

ಕಲಕಿದ ಕೊಳ

– ಅ.ರಾ. ಮಿತ್ರ.



ಕಾಲೇಜಿನಲ್ಲಿ ಕನ್ನಡ ಮೇಜರ್ ತೆಗೆದುಕೊಂಡಿದ್ದ ಮೂರನೇ ಬಿ.ಎ. ವಿದ್ಯಾರ್ಥಿಗಳು ವರ್ಷದ ಕೊನೆಯಲ್ಲಿ ತುಂಬ ಚಟುವಟಿಕೆಯಿಂದ ಓಡಾಡುತ್ತಿದ್ದರು. ಮೂರು ವರ್ಷಗಳಿಂದ ಸ್ನೇಹಪೂರ್ಣವಾಗಿ ಸಾಗಿ ಬಂದ ತಮ್ಮ ಗೆಳೆತನಕ್ಕೆ ಕಳಸವಿಡುವಂತೆ ಒಂದು 'ಮುಕ್ತಾಯ ಸಮಾರಂಭ'ವನ್ನು ಭರ್ಜರಿಯಾಗಿ ನಡೆಸಬೇಕೆಂದು ತೀರ್ಮಾನಿಸಿದ್ದರು. ಫೋಟೋ, ಕಾಫಿ, ತಿಂಡಿ, ಭಾಷಣಗಳು ಎಂದ ಮೇಲೆ ವಿದ್ಯಾರ್ಥಿಗಳು ಒಪ್ಪದೇ ಇರುತ್ತಾರೆಯೇ! ಹಣವೂ ಧಾರಾಳವಾಗಿ ಸಂಗ್ರಹವಾಯಿತು. ಎಲ್ಲಾ ವಿಷಯಗಳಲ್ಲೂ ಒಮ್ಮತ ಬಂತು. ಅದರೆ ಈ ವಿಶ್ವಾಸವನ್ನು ಮತ್ತಷ್ಟು ಗಾಢವಾಗಿ ಮಾಡಬೇಕೆಂಬ ಅತಿಯಾಸೆಯಿಂದ ಯಾರೋ ಒಬ್ಬರು, 'ಒಂದು ನಾಟಕವನ್ನೇಕೆ ಆಡಬಾರದು?' ಎಂದು ಸಲಹೆ ಕೊಡಬೇಕೇ? ಅಲ್ಲೇ ಬಂದದ್ದು ಗ್ರಹಚಾರ! ಈ ಪ್ರಸಂಗದಲ್ಲಿ ಒಬ್ಬರ ಬಗ್ಗೆ ಇನ್ನೊಬ್ಬರಿಗೆ ಎಷ್ಟೊಂದು ಪ್ರೀತಿ ವಿಶ್ವಾಸಗಳಿವೆ ಎಂಬ ಅಂಶ ಬೆಳಕಿಗೆ ಬಂತು! ರಾಮಾಯಣ, ಭಾಗವತ ಮೊದಲಾದ ನಾಟಕಗಳನ್ನು ಯಾರೋ ಸೂಚಿಸಿದರು. ಪೌರಾಣಿಕ ನಾಟಕಗಳನ್ನು ಅನೇಕರು ಪ್ರತಿಭಟಿಸಿದರು. ಸಾಮಾಜಿಕ ನಾಟಕಗಳ ಹೆಸರೂ ಅನೇಕರ ಬಾಯಲ್ಲಿ ಕುಣಿದವು. ಆದರೆ ಒಂದೊಂದು ನಾಟಕದ ಬಗ್ಗೆ ಒಬ್ಬೊಬ್ಬರು ಅಪಸ್ವರ ಎತ್ತಿದರು. ಆಗ ಕನ್ನಡ ಮೇಜರ್ ವಿದ್ಯಾರ್ಥಿಗಳಾದುದರಿಂದ ಹಳಗನ್ನಡ ನಾಟಕವನ್ನು ಆಡುವುದೇ ಒಳ್ಳೆಯದು ಎಂದು ಒಬ್ಬ ವಾದಿಸಿದ. ಬಿ.ಎಂ.ಶ್ರೀ.ಯವರ 'ಗದಾಯುದ್ಧ' ನಾಟಕ ಅವರಿಗೆ ಪಠ್ಯಪುಸ್ತಕವಾಗಿತ್ತು. ಅದನ್ನೇ ಆಡಬೇಕೆಂದು ಕೊನೆಗೆ ತೀರ್ಮಾನವಾಯಿತು. ಅಲ್ಲಿಯತನಕ ತಣ್ಣಗಿದ್ದ ಸಭೆಯಲ್ಲಿ ಪಾತ್ರಗಳ ಹಂಚಿಕೆಯ ಸಮಯದಲ್ಲಿ ಕಾವು ಹೆಚ್ಚಿತು. ವಾದ ವಿವಾದಗಳ ಬಿರುಗಾಳಿಗೂ ಆರಂಭ. ಒಬ್ಬ ಹುಡುಗ ಪಾತ್ರ ಹಂಚಿಕೆಯ ಉದ್ಘಾಟನೆಯನ್ನು ನೆರವೇರಿಸಿದ.

10th_Kannada_Reader1-5.indd 37 03-04-2019 14:07:55

'ನಮ್ಮ ಲಕ್ಷ್ಮಣರಾಯನನ್ನೇ ಕೌರವನ ಪಾತ್ರಕ್ಕೆ ಆರಿಸೋಣ. ಕೊನೆಯ ದೃಶ್ಯಗಳನ್ನಂತೂ ಅವನು ಭರ್ಜರಿಯಾಗಿ ಮಾಡುತ್ತಾನೆ' ಎಂದು ಅವನು ಸೂಚಿಸಿದ. ಎಲ್ಲರೂ ಮುಸಮುಸನೆ ನಕ್ಕರು. ಲಕ್ಷ್ಮಣರಾಯ ಹಾಕಿ ಆಟಗಾರ. ಆದರೆ ಒಂದು ವಾರದ ಹಿಂದೆ ಅವನಿಗೆ ಆಟದ ಬಯಲಲ್ಲಿ ಸೊಂಟಕ್ಕೆ ಏಟು ಬಿದ್ದು ಸೊಂಟ ಹಿಡಿದು ಕುಂಟಿಕೊಂಡು ನಡೆಯುತ್ತಿದ್ದ. ಗದಾಯುದ್ಧದ ಕೊನೆಯ ದೃಶ್ಯಗಳಲ್ಲಿ ತೊಡೆ ಮುರಿದುಕೊಂಡ ಕೌರವನು ಕಾಣಿಸುತ್ತಾನಷ್ಟೇ! ಅದನ್ನೇ ಧ್ವನಿಪೂರ್ಣವಾಗಿ ಆ ಹುಡುಗ ಸೂಚಿಸಿದ್ದ. ಕೆರಳಿದ ಲಕ್ಷ್ಮಣರಾಯನು ಸೆಡ್ಡು ಹೊಡೆದು ನಿಂತುಕೊಂಡು, 'ಲೇ! ನನಗೆ ಸೊಂಟ ರಿಪೇರಿಯಾಗಿದೆ ಕಣೋ, ನಿನಗೆ ಕಣ್ಣೇ ಐಬು. ಸೋಡ ಬಾಟ್ಲಿ ಕನ್ನಡಕದಿಂದ ನಿನಗೆಲ್ಲಿ ಕಂಡೀತು! ಪರ್ಸನಾಲಿಟೀನೇ ಇಲ್ಲ ನಿನಗೆ, ಆದರೂ ಹೀರೋ ಪಾರ್ಟಿನ ಆಸೆ ಇರೋ ಹಾಗೆ ಕಾಣುತ್ತೆ. ಹೀರೋ ಪಾರ್ಟು ನಿನಗೆ ಸಿಗೋ ಹಾಗಿಲ್ಲ. ಅದ್ಕೇ ಹೊಡ್ಕೋತಿದೀ ನನ್ನ ಮೇಲೆ. ಹೋಗ್ಲಿ ಬಿಡು, "ಬಲಿ ಚಕ್ರವರ್ತಿ" ನಾಟಕ ಆಡಿಸೋಣ ಇನ್ನೊಂದು ಸಲ. ಅದರಲ್ಲಿ ನಿನಗೆ ಸರಿಯಾದ ಪಾರ್ಟು–ಅಂದರೆ ಶುಕ್ರಾಚಾರೀ ಪಾರ್ಟು ಕೊಡಿಸೋಣ'.

ಅಷ್ಟರಲ್ಲೇ ಇನ್ನೊಬ್ಬ ಬಾಯಿ ಹಾಕಿದ. 'ಯಾಕೆ ಈ ನಾಟಕದಲ್ಲೂ ಕೊಡಬಹುದಲ್ಲ, ಧೃತರಾಷ್ಟ್ರನ ಪಾರ್ಟು. ಕನ್ನಡಕ ತೆಗೆದು ಬಿಟ್ಟರೆ ಆಯ್ತು. ನ್ಯಾಚುರಲ್ ಆಗೇ ಇರುತ್ತೆ'.

ಇಬ್ಬರ ಜಗಳದಲ್ಲಿ ಮೂರನೇ ಹುಡುಗ ತಲೆ ಹಾಕಿದ್ದು ನಾಲ್ಕನೆಯವನಿಗೆ ಹಿಡಿಸಲಿಲ್ಲ. ಸರಿ, ಮಾತು ಅವನ ಕಡೆ ಹೊರಳಿತು :

'ಅಲ್ಲೋ ಸಣ್ಣಯ್ಯ, ಅವನು ಕನ್ನಡಕ ತೆಗೆದು ಧೃತರಾಷ್ಟ್ರನ ಪಾರ್ಟು ಮಾಡೋದಾಗುತ್ತೆ. ನೀನು ಮೊದಲು ದ್ರೌಪದಿ ಪಾರ್ಟ್‌ಗೋ, ಗಾಂಧಾರಿ ಪಾರ್ಟ್‌ಗೋ ಒಪ್ಪಿಕೋ. ಹುಡುಗಿ ಪಾರ್ಟ್‌ಗೆ ಲಾಯಕ್ಕಾಗಿದ್ದಿ ನೀನು. ಹೇಗೂ ಲೇಡೀಸ್ ರೂಂನ ಮುಂದೆ ಹೋಗಿ ಹೋಗಿ ಸಾಯ್ತಾ ಇರ್ತಿ. ಆದ್ದರಿಂದ ಅವರ ಹಾವ ಭಾವ ನಡಿಗೆ ಮಾತು ಎಲ್ಲಾ ನಿನಗೆ ಅಭ್ಯಾಸವಾಗಿ ಹೋಗಿರಬೇಕು. ಅಲ್ಲದೆ ಹುಡುಗೀರ ಹಾಗೆ ನಿನ್ನದು ಬಹಳ ಕೋಮಲ ಶರೀರ. ಅವತ್ತು ಯಾರೋ ತಮಾಷೆಗೆ ಬೆನ್ನ ಮೇಲೆ ಸುಮ್ಮನೆ ಗುದ್ದಿದ್ದಕ್ಕೇ 'ಹ್ಹೋ...!' ಅಂತ ಅರ್ಧ ಗಂಟೆ ರಾಗ ಎಳೀತಿದ್ದೆ...'

ಸಣ್ಣಯ್ಯನಿಗೆ ಈಗ ರೇಗಿತು :

'ಅಲ್ಲಮ್ಮಾ, ಅವತ್ತು ನನ್ನ ಬೆನ್ನ ಮೇಲೆ ಕುರು ಎದ್ದಿತ್ತು ಕಣೋ. ಅಲ್ಲಿಗೇ ಬಲವಾಗಿ ಗುದ್ದಿದ್ದ ಆ ರಾಮು, ಗೊತ್ತಾ. ನಾನಾಗೋ ಹೊತ್ತಿಗೆ ತಡಕೊಂಡೆ ಆ ಹೊಡೆತಾನ. ಅಲ್ವೋ, ಲೇಡೀಸ್ ರೂಂ ಮುಂದೆ ಹೋಗ್ತೀನಿ ಅಂತ ನನ್ಮೇಲೆ ಯಾಕೋ ಹೊಡ್ಕೋತೀರಿ. ಆ ವತ್ಸಲಾ ನನ್ನ ಹತ್ತಿರ ನೋಟ್ಸ್ ಇಸ್ಕೊಂಡಿದ್ಲು, ಕಾಪಿ ಮಾಡಿಕೊಂಡು ಕೊಡ್ತೀನಿ ಅಂತ. ಅದನ್ನ ವಾಪಸ್ ಕೇಳ್ತಾ ಇದ್ದೆ ಅಷ್ಟೆ. ನೀವೆಲ್ಲಾ ಅಷ್ಟೊಂದು ಸಲ ಅಲೀತೀರಿ, ಅವಳನ್ನು ಮಾತಾಡಿಸಬೇಕು ಅಂತ. ಅವಳು ಕೇರ್ ಮಾಡೋಲ್ಲ. ಅದಕ್ಕೇ ಹೊಟ್ಟೆ ಉರಿ ನನ್ಮೇಲೆ. ನನ್ನನ್ನು ದ್ರೌಪದಿ ಪಾರ್ಟ್‌ಗೆ ರೆಕಮಂಡ್ ಮಾಡ್ತೀಯಲ್ಲ. ನಿನಗೆ ಯಾವ ಪಾರ್ಟು ಕೊಡಬಹುದು ಗೊತ್ತೇ. ಶಕುನಿ ಪಾತ್ರಕ್ಕೇ ಲಾಯಕ್ ನೀನು. ಆದರೆ ಹಾಳಾದ್ದು ಈ ನಾಟಕದಲ್ಲಿ ಶಕುನೀನೇ ಬರೋಲ್ಲ. ಎಂತಹ ಅನ್ಯಾಯ ನೋಡು. ಹೋಗ್ಲಿ, ನೋಡು ಒಂದು ಪಿಶಾಚಿ ಪಾರ್ಟು ಬರುತ್ತಲ್ಲ – ದುರ್ಯೋಧನನನ್ನು ಗೋಳು ಹುಯ್ಕೊಳ್ಳುತ್ತಲ್ಲಾ ಆ ಪಿಶಾಚಿ ಪಾರ್ಟು ಮಾಡು ನೀನು. ಹೇಗೂ ಎಲ್ಲರನ್ನೂ ಗೋಳು ಹೊಯ್ಕೊಳ್ಳೋದು ನಿನಗೆ ಸ್ವಭಾವ ಸಿದ್ಧವಾದ ಗುಣ ಅಲ್ವೇ, ಸರಿಹೋಗುತ್ತೆ...'

'ನಾರಾಯಣ ಮೂರ್ತಿಗೆ ಪಿಶಾಚಿ ಪಾರ್ಟು? ಭೇಷ್, ಒಳ್ಳೇ ಐಡಿಯಾ! ನೋಡೋಕೂ ಹೆಚ್ಚು ಕಡಿಮೆ ಹಾಗೇ ಇದ್ದಾನೆ. ಮೇಕಪ್ಪೇ ಬೇಕಾಗಿಲ್ಲ' ಎಂದು ಸೀನು ಇದನ್ನು ಸ್ವಾಗತಿಸಿದ. ನಾಣಿಗೆ ಸೀನುವಿನ ಕಾಮೆಂಟ್ ಹಿಡಿಸಲಿಲ್ಲ.

'ಓಹೋ! ನನಗೆ ಮೇಕಪ್ಪೇ ಬೇಕಾಗಿಲ್ವಾ! ಪಿಶಾಚಿ ಪಾರ್ಟ್ ನಾನು ಮಾಡಬೇಕಾ ? ನೀನು ? ಕನ್ನಡಿ ಎದುರಿಗೆ ಎಂದಾದರೂ ನಿಂತು ನಿನ್ನ ಮುಖ, ನಿನ್ನ ಹೊಟ್ಟೆ ನೋಡಿಕೊಂಡಿದ್ದೀಯಾ? ಒಳ್ಳೇ ಲಿವರ್ ಕ್ಯೂರ್ ಜಾಹೀರಾತು ಇದ್ದ ಹಾಗೆ ಇದ್ದೀಯಾ. ನನಗೆ ಬೇಡಪ್ಪಾ ಪಿಶಾಚಿ ಪಾರ್ಟು ನೀನೇ ಆರ್ಡರ್ ಕೊಟ್ಟು ಮಾಡಿಸಿದ ಹಾಗಿದ್ದೀ ನೋಡು ಆ ಪಾತ್ರಕ್ಕೆ'

10th_Kannada_Reader1-5.indd 38 03-04-2019 14:07:55

'ಅಂದರೆ ಪಿಶಾಚಿ ಪಾತ್ರಕ್ಕೆ ಈ ಇಬ್ಬರಲ್ಲಿ ಯಾರನ್ನು ಆರಿಸಬೇಕು ಅನ್ನೋದು ನಿಶ್ಚಯವಾಗಲಿಲ್ಲ ಅಲ್ವೇ? ಒಂದು ಕೆಲಸ ಮಾಡೋಣ, ಇಬ್ಬರನ್ನೂ ಆರಿಸೋಣ. ಒಂದು ದೊಡ್ಡ ಪಿಶಾಚಿ, ಇನ್ನೊಂದು ಸಣ್ಣ ಪಿಶಾಚಿ. ಹೇಗೂ ಎರಡು ಪಿಶಾಚಿಗಳು ಬೇಕಲ್ಲ ನಾಟಕಕ್ಕೆ...!'

ಅರುಣನನ್ನು ಆಡಿಕೊಳ್ಳುವುದಕ್ಕೆ ಹಲಗಪ್ಪನಿಗೆ ನಾಲಿಗೆ ಕಡಿಯಿತು.

'ಆಹಾ! ಎಂತಹ ಐಡಿಯಾ, ಇಬ್ಬರೂ ಪಿಶಾಚಿಗಳ ಪಾತ್ರ ವಹಿಸಬೇಕಂತೆ! ಲೋ, ಇಂಥಾ "ತಂದು ಹಾಕೋ ವಿದ್ಯ"ಕ್ಕೇ ಸರಿ ನೀನು. ಅಷ್ಟಲ್ಲದೆ ನಿನ್ನನ್ನು 'ಕಿತಾಪತಿ ರಾಯ' ಅಂತ ಕೂಗ್ತಾರ್ಯೇ? ಅಲ್ಲದೆ ಅವತ್ತು ಪಿಕ್‌ನಿಕ್ ಹೋಗಿದ್ದಾಗ ಆ ಜಾಗಾನೇ ಬೃಂದಾವನ ಅಂತ ತಿಳ್ಕೊಂಡು ಕೆಲವು ಗೋಪಿಯರನ್ನು ಕೆಣಕೋಕ್ಕೆ ಹೋಗಿ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಂಡಿದ್ದೆಯಲ್ಲ. ಆದ್ದರಿಂದ ಕೃಷ್ಣನ ಪಾತ್ರ ನೀನು ತಗೊಂಡು ಬಿಡು. ಲೀಲಾಜಾಲವಾಗಿ ನಿಭಾಯಿಸಬಹುದು'

'ಸರಿ. ಧರ್ಮರಾಯನ ಪಾರ್ಟು ಯಾರಿಗೆ ಕೊಡ್ತೀರಿ?' ಲಕ್ಷ್ಮಣರಾಯ ಕೊಕ್ಕೆ ಹಾಕಿದ. ಸ್ವಲ್ಪ ಕಾಲ ಗುಜುಗುಜು ಮಾತಿಗೆ ಆರಂಭವಾಯಿತು. ಯಾರಿಗೂ ಅದು ಬೇಗ ಹೊಳೆಯಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಒಬ್ಬ, 'ಸದ್ದು' ಎಂದು ಜೋರಾಗಿ ಕೂಗಿ, ಗಂಟಲು ಕೆರೆದುಕೊಳ್ಳುತ್ತಾ ಹೇಳಿದ :

'ಧರ್ಮರಾಯನ ಪಾತ್ರಕ್ಕೆ ನಮ್ಮ ಮುದ್ದಯ್ಯನೇ 'ಫಿಟ್'ಉ ಅಂತ ನನಗೆ ಅನ್ನಿಸುತ್ತೆ. ಪಾಪ, ಕ್ಲಾಸ್‌ನಲ್ಲಾಗಲೀ, ಹೊರಗಾಗಲೀ ಸದ್ದೇ ಇಲ್ಲ ಅವನದು. ಫ್ರೊಫೆಸರ್ ಕ್ಲಾಸ್‌ನಲ್ಲಿ ಕೂಡ ಲಕ್ಷಣವಾಗಿ ನಿದ್ರೆ ಹೊಡೀತಾ ಇರ್ತಾನೆ. ಸ್ವಭಾವದಲ್ಲೂ ಅಷ್ಟೇ, ಧರ್ಮರಾಯನೇ. ನಾವೇನಂದ್ರೂ ಅನ್ನಿಸ್ಕೋತಾನೆ. ಅವನ ಟೆಂಪರೇಚರ್ ಕೂಡ ಅಷ್ಟೇ. ಅವನ ತಲೇಲಿ ಯಾವ ವಿಚಾರವೂ ಹೈ ಡಿಗ್ರಿನಲ್ಲಿ ಬಾಯಿಲ್ ಆಗೋಲ್ಲ. ಒಟ್ಟಿನಲ್ಲಿ ಮುಂದೆ ಬಂದರೆ ಹಾಯೋಲ್ಲ, ಹಿಂದೆ ಬಂದರೆ ಒದೆಯೋಲ್ಲ. ಆದ್ದರಿಂದ ಅವನಿಗೇ ಧರ್ಮರಾಯನ ಪಾತ್ರ ಕೊಡಬೇಕು'

ಭಾರಿಯ ಕರತಾಡನದ ಮೂಲಕ ಎಲ್ಲರೂ ಒಪ್ಪಿಗೆ ಸೂಚಿಸಿದರು. ಇಷ್ಟಾದರೂ ಮುದ್ದಯ್ಯ ತುಟಿಪಿಟಿಕ್ ಅನ್ನಲಿಲ್ಲ. ಸುಮ್ಮನೆ ಕೇಳುತ್ತಾ ಕುಳಿತಿದ್ದ. ಹೀಗೇ ಮಾತಿನ ಚಕಮಕಿಯ ನಡುವೆ ಇತರ ಪಾತ್ರಗಳ ವಿತರಣೆಯಾಯಿತು. ಯಾವಾಗಲೂ ತಲೆನೋವು ಎಂದು ತಲೆಗೆ ಬಟ್ಟೆ ಕಟ್ಟಿಕೊಂಡಿರುತ್ತಿದ್ದ ಗಂಗಾಧರನ ತಲೆಗೆ ಗಾಂಧಾರಿಯ ಪಾತ್ರವನ್ನು ಕಟ್ಟಲಾಯಿತು. ನಕುಲ ಸಹದೇವ ಅಶ್ವತ್ಥಾಮಾದಿಗಳನ್ನೂ ಸಾಕಷ್ಟು ತೇಜೋವಧೆ ಮಾಡಿದ ಮೇಲೆಯೇ ಆರಿಸಿಕೊಳ್ಳಲಾಯಿತು.

'ಎಲ್ಲ ಸರಿ ಹೋಯಿತು. ಅಲ್ಲ, ಮುಖ್ಯ ಪಾತ್ರಧಾರಿ ಭೀಮನನ್ನೇ ಕೈಬಿಟ್ಟೆವಲ್ಲ. ನಾವೆಂತ ಪೆಚ್ಚರು!' ಎಂದು ಒಬ್ಬ ಹೇಳಿದ.

'ಹೌದಲ್ಲಾ' ಎಂದು ಎಲ್ಲರೂ ಬೆರಳು ಕಚ್ಚಿಕೊಂಡರು. ನಾಲ್ಕೂವರೆ ಅಡಿ ಉದ್ದವಿದ್ದ ನಾಗಭೂಷಣ ಕೂಡಲೇ ಇದ್ದು ನಿಂತು ಎಲ್ಲರ ಸಂಶಯ ನಿವಾರಣೆ ಮಾಡಿದ :

'ಭೀಮನ ಪಾತ್ರಕ್ಕೆ ನಮ್ಮ ಗುರಪ್ಪರೆಡ್ಡಿಯೇ ಸರಿ ಅಂತ ಕಣ್ಣು ಮುಚ್ಚಿಕೊಂಡು ಹೇಳಿಬಿಡಬಹುದು. ಪುಣ್ಯಾತ್ಮ ಆರು ಅಡಿ ಇದ್ದಾನೆ. ಈಗಲೇ ನೂರ ಎಪ್ಪತ್ತೆರಡು ಪೌಂಡು ತೂಗ್ತಾನೆ. ಮಹಡಿಯ ಮೇಲೆ ಇವನು ಓಡಾಡ್ತಾ ಇದ್ದರೆ ಕೆಳಗಿನ ಕ್ಲಾಸುಗಳಿಗೆಲ್ಲಾ ತುಂಬ ಗಲಾಟೆಯಾಗುತ್ತದೆ ಎಂದು ತಿಳಿದುಕೊಂಡು ಪ್ರಿನ್ಸಿಪಾಲರು ನಮ್ಮ ಕ್ಲಾಸುಗಳನ್ನೆಲ್ಲ ಕೆಳಗಡೆಯೇ ಹಾಕಿಕೊಟ್ಟಿದ್ದಾರೆ. ಸ್ವಲ್ಪ ತಾಮಸ ಸ್ವಭಾವ ಬೇರೆ. ಬಹಳ ಬೇಗ ನೆತ್ತಿ ಬಿಸಿ ಮಾಡ್ಕೋತಾನೆ. ಸುಮ್‌ಸುಮ್‌ನೆ ಎಲ್ಲರ ಮೇಲೂ ರೇಗ್ತಾನೆ. ಆಜಾನುಬಾಹು ಬೇರೆ. ಕಡಿದರೆ ನಾಲ್ಕು...'

ನಾಗಭೂಷಣನ ವಾಗ್ಝರಿ ಇನ್ನೂ ಮುಗಿದಿರಲಿಲ್ಲ. ಅಷ್ಟರಲ್ಲೇ ಭೀಮನ ಪಾತ್ರದ ಗುರಪ್ಪರೆಡ್ಡಿಗೆ ಆವೇಶ ಬಂದು ಬಿಡಬೇಕೇ? ಆವೇಶದಿಂದ ಮುನ್ನುಗ್ಗಿ,

'ಇರಲಿ. ನಾನೇನೋ ಭೀಮನ ಪಾರ್ಟ್‌ಗೆ ತಯಾರ್. ಆದರೆ ಒಂದು ಷರತ್ತಿನ ಮೇಲೆ. ಇಷ್ಟೇ ಇಷ್ಟು ಉದ್ದ ಇದ್ದಾನಲ್ಲ ಈ ಸಣಕಲ ನಾಗಭೂಷಣ, ಇವನು ನನ್ನ ಗದೆಯ ಪಾರ್ಟು ಮಾಡೋದಾದರೆ ನಾನು ಭೀಮನ ಪಾರ್ಟಿಗೆ ಸಿದ್ಧ. ಎಲ್ಲಿ ಒಂದು ಸಲ ರಿಹರ್ಸಲ್ ಮಾಡಿ ಬಿಡ್ತೇನೆ' ಎಂದು ಹೇಳಿ ಅನಾಮತ್ತಾಗಿ ನಾಗಭೂಷಣನ ಎರಡೂ ಕಾಲನ್ನೂ ಹಿಡಿದು ಮೇಲೆತ್ತಿ ಹೆಗಲ ಮೇಲೆ ಗದೆಯ ಹಾಗೆ ಉದ್ದಕ್ಕೆ ಒರಗಿಸಿಕೊಂಡೇ ಬಿಡೋದೇ! ನಾಗಭೂಷಣ 'ಕುಯ್ಯೋ ಮರ್ಯೋ' ಎಂದು ಎಷ್ಟೇ ಕೊರಚಾಡಿದರೂ ಬಿಡಲಿಲ್ಲ.

10th_Kannada_Reader1-5.indd 39 03-04-2019 14:07:55

ಅವರವರ ವಾಗ್ವಾದದ ರಭಸದಲ್ಲಿ ಗದಾಯುದ್ಧದ ನಾಟಕ ನಡೆಯಲಿಲ್ಲ ಎನ್ನಿ. ಒಂದೇ ಸಮಾಧಾನ. ಆಡಬೇಕಾದ ನಾಟಕಕ್ಕಿಂತ ಆಶು ನಾಟಕವೇ ಎಷ್ಟೋ ಸಲ ಚೆನ್ನಾಗಿರುತ್ತೆ, ಅಲ್ವೇ!?

ಕೃತಿ–ಕರ್ತೃ ಪರಿಚಯ



ಅ.ರಾ. ಮಿತ್ರ

ಈ ಪ್ರಬಂಧವನ್ನು ಅ.ರಾ. ಮಿತ್ರ ಅವರ 'ಸಂಕಲ್ಪಗಳು' ಎನ್ನುವ ಪ್ರಬಂಧ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಶ್ರೀಯುತರು ಹಾಸ್ಯ ಲೇಖನಗಳಿಗೆ ಪ್ರಖ್ಯಾತರಾದವರು.

ಇವರು ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರಾಗಿ, ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಸೇರಿ, ಬಳಿಕ ಮಡಿಕೇರಿಯ ಸರ್ಕಾರಿ ಕಾಲೇಜಿಗೆ ಉಪ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಮುಂದೆ ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಇವರು 'ಬಾಲ್ಕನಿಯ ಬಂಧುಗಳು', 'ಯಾರೋ ಬಂದಿದ್ದರು', 'ಸಂಕಲ್ಪಗಳು' ಮುಂತಾದ ಹಾಸ್ಯ ಪ್ರಬಂಧಗಳನ್ನು ಬರೆದಿದ್ದಾರೆ.

ಪದಗಳ ಅರ್ಥ

ಪಾರ್ಟು–ನಾಟಕದಲ್ಲಿನ ವೇಷ; ಕರತಾಡನ–ಚಪ್ಪಾಳೆ; ತಾಮಸ–ಕತ್ತಲೆ, ತಡವಾಗಿ, ಅಜ್ಞಾನ; ಆಜಾನುಬಾಹು–ದೃಢಗಾತ್ರದ ಹಾಗೂ ಬಲಿಷ್ಠವಾದ ವ್ಯಕ್ತಿ; ಐಬು–ಕುಂದು, ಕೊರತೆ; ವಾಗ್ವಾದ–ವಾದ ವಿವಾದ; ತೇಜೋವಧೆ–ಅವಮಾನ; ರಿಹರ್ಸಲ್–ಪೂರ್ವತಯಾರಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಕಾಲೇಜಿನ ವಿದ್ಯಾರ್ಥಿಗಳು ಯಾವ ನಾಟಕವನ್ನು ಆಡಲು ನಿರ್ಧರಿಸಿದರು? ಏಕೆ?
2. ಕೌರವನ ಪಾತ್ರಕ್ಕೆ ಯಾರು ಸೂಕ್ತ.? ಏಕೆ ?
3. ಧೃತರಾಷ್ಟ್ರನ ಪಾತ್ರವನ್ನು ಯಾರಿಗೆ ನೀಡಿದರು? ಏಕೆ?
4. ಸಣ್ಣಯ್ಯನಿಗೆ ಯಾವ ಪಾತ್ರ ಕೊಟ್ಟರು. ಕಾರಣವೇನು ?
5. ಪಿಶಾಚಿ ಪಾತ್ರಕ್ಕೆ ಯಾರನ್ನು ಆಯ್ದುಕೊಂಡರು? ಏಕೆ ?
6. ಧರ್ಮರಾಯನ ಪಾತ್ರವನ್ನು ಯಾರಿಗೆ ಕೊಟ್ಟರು? ಏಕೆ ?
7. ಭೀಮನ ಪಾತ್ರಕ್ಕೆ ಯಾರನ್ನು ಆಯ್ಕೆ ಮಾಡಿಕೊಂಡರು? ಏಕೆ ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಕಾಲೇಜಿನ ವಿದ್ಯಾರ್ಥಿಗಳು ಮುಕ್ತಾಯ ಸಮಾರಂಭವನ್ನು ಹೇಗೆ ಮಾಡಬೇಕೆಂದು ತೀರ್ಮಾನಿಸಿದರು?
2. ಗದಾಯುದ್ಧ ನಾಟಕದ ಪಾತ್ರಗಳಿಗೆ ಯಾರ್ಯಾರನ್ನು ಆಯ್ಕೆ ಮಾಡಲಾಯಿತು? ಯಾರ್ಯಾರಿಗೆ ಯಾವ ಯಾವ ಪಾತ್ರಗಳನ್ನು ನೀಡಲಾಯಿತು. ಅದಕ್ಕೆ ಕಾರಣಗಳೇನು ?



10th_Kannada_Reader1-5.indd 40 03-04-2019 14:07:55

ಘಟಕ ಎರಡು

ನಾಮಪದಗಳು

ಭಾಷೆಯಲ್ಲಿರುವ ಶಬ್ದಗಳಲ್ಲಿ ಬಗೆಬಗೆಯ ಹೆಸರುಗಳನ್ನು ತಿಳಿಸುವಂತಹವುಗಳನ್ನು ನಾಮಪ್ರಕೃತಿ ಅಥವಾ ನಾಮಪದ ಎಂದು ಕರೆಯುವರು. ಶಬ್ದದ ಮೂಲ ರೂಪಕ್ಕೆ ಪ್ರಕೃತಿ ಎಂದೂ, ಪ್ರಕೃತಿಯ ಮುಂದೆ ಸೇರುವ ವರ್ಣಗಳಿಗೆ ಪ್ರತ್ಯಯಗಳೆಂದೂ ಹೆಸರು. ಪ್ರಕೃತಿಯೂ ಪ್ರತ್ಯಯವೂ ಸೇರಿದರೆ ಪದವೆನಿಸುತ್ತದೆ.

ನಾಮಪ್ರಕೃತಿ	+	**ವಿಭಕ್ತಿ ಪ್ರತ್ಯಯ**	=	**ನಾಮಪದ**
ಮನೆ	+	ಅಲ್ಲಿ	=	ಮನೆಯಲ್ಲಿ
ಶಾಲೆ	+	ಇಂದ	=	ಶಾಲೆಯಿಂದ
ಹೊಲ	+	ಅನ್ನು	=	ಹೊಲವನ್ನು
ನೆಲ	+	ಕ್ಕೆ	=	ನೆಲಕ್ಕೆ

ಇಲ್ಲಿ ಮನೆ, ಹೊಲ, ನೆಲ ಮುಂತಾದವು ನಾಮಪ್ರಕೃತಿಗಳು. ಅಲ್ಲಿ, ಇಂದ, ಅನ್ನು, ಕ್ಕೆ ಇವೆಲ್ಲಾ ನಾಮ ವಿಭಕ್ತಿ ಪ್ರತ್ಯಯಗಳು. ಶಾಲೆಯಿಂದ, ಹೊಲವನ್ನು, ನೆಲಕ್ಕೆ ಇವೆಲ್ಲಾ ನಾಮಪದಗಳು.

1. **ನಾಮಪ್ರಕೃತಿ:** ನಾಮ ಪದದ ಮೂಲ ರೂಪವಾಗಿಯೂ, ಕ್ರಿಯೆಯ ಅರ್ಥವನ್ನು ಕೊಡದೆಯೂ ಇರುವ ಶಬ್ದವೇ ನಾಮ ಪ್ರಕೃತಿ ಎನಿಸುತ್ತದೆ. ಇದನ್ನು ಪ್ರಾತಿಪದಿಕ ಎಂದೂ ಕರೆಯುವರು.

ಉದಾಹರಣೆ:

ಹುಡುಗ, ಮರ, ಬಾಲಕ, ಪುಸ್ತಕ, ಸುಣ್ಣ, ಮಣ್ಣು ಇತ್ಯಾದಿ.

2. **ಪದ:** ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿ 'ಪದ'ಗಳೆನಿಸುತ್ತವೆ.

3. **ನಾಮಪದ:** ನಾಮಪ್ರಕೃತಿಗೆ ನಾಮವಿಭಕ್ತಿ ಪ್ರತ್ಯಯವು ಸೇರಿದಾಗ ಅದು ನಾಮಪದವಾಗುತ್ತದೆ. ನಾಮಪದ ಎಂದರೆ ಒಬ್ಬ ವ್ಯಕ್ತಿಯ ಹೆಸರನ್ನೋ ಒಂದು ಪದಾರ್ಥದ ಹೆಸರನ್ನೋ ಒಂದು ಪ್ರಾಣಿಯ ಹೆಸರನ್ನೋ ಸ್ಥಳದ ಹೆಸರನ್ನೋ ತಿಳಿಸುವ ಶಬ್ದ.

4. **ವಿಭಕ್ತಿ ಪ್ರತ್ಯಯ:** ಸ್ವತಂತ್ರವಾಗಿ ಅರ್ಥವಿಲ್ಲದೆ ನಾಮಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ ಉ, ಅನ್ನು, ಇಂದ, ಗೆ, ಕ್ಕೆ, ದೆಸೆಯಿಂದ, ಅ, ಅಲ್ಲಿ, ಓ, ಏ, ಇರಾ, ಈ, ಆ – ಇತ್ಯಾದಿಗಳಿಗೆ ವಿಭಕ್ತಿ ಪ್ರತ್ಯಯಗಳೆಂದು ಕರೆಯುತ್ತಾರೆ.

ನಾಮಪ್ರಕೃತಿ	+	ವಿಭಕ್ತಿ ಪ್ರತ್ಯಯ	=	ನಾಮಪದ
ತಾಯಿ	+	ಉ	=	ತಾಯಿಯು
ಬಟ್ಟೆ	+	ಅನ್ನು	=	ಬಟ್ಟೆಯನ್ನು
ತಂದೆ	+	ಇಂದ	=	ತಂದೆಯಿಂದ
ದನ	+	ಕ್ಕೆ	=	ದನಕ್ಕೆ
ರಾಮನ	+	ದೆಸೆಯಿಂದ	=	ರಾಮನ ದೆಸೆಯಿಂದ
ಅಣ್ಣ	+	ಅ	=	ಅಣ್ಣನ
ತಾಯಿ	+	ಅಲ್ಲಿ	=	ತಾಯಿಯಲ್ಲಿ
ಗುರು	+	ಏ	=	ಗುರುವೇ
ಸೋಮ	+	ಆ	=	ಸೋಮಾ

10th_Kannada_Reader1-5.indd 41 03-04-2019 14:07:56

ನಾಮಪದಗಳಲ್ಲಿ ಸಹಜನಾಮಗಳು ಮತ್ತು ಸಾಧಿತ ನಾಮಗಳು ಎಂದು ಮುಖ್ಯವಾಗಿ ಎರಡು ವಿಧಗಳಿವೆ.

1. ಸಹಜ ನಾಮಪ್ರಕೃತಿಗಳು

ಉದಾ : ಹೊಲ, ಕಲ್ಲು, ಮೂಡಣ, ದೊಡ್ಡ, ಕರಿದು.

2. ಸಾಧಿತ ನಾಮಪ್ರಕೃತಿಗಳು

ಇದರಲ್ಲಿ, ಅ. ಸಮಾಸಗಳು, ಆ. ಕೃದಂತಗಳು, ಇ. ತದ್ಧಿತಾಂತಗಳು – ಎಂದು ಮೂರು ಬಗೆಗಳಿವೆ.

ಸಹಜನಾಮವಾಚಕ ಪ್ರಕೃತಿಗಳನ್ನು –

1. ವಸ್ತು ವಾಚಕಗಳು
2. ಗುಣ ವಾಚಕಗಳು
3. ಸಂಖ್ಯಾ ವಾಚಕಗಳು
4. ಸಂಖ್ಯೇಯ ವಾಚಕಗಳು
5. ಭಾವ ನಾಮಗಳು
6. ಪರಿಮಾಣ ವಾಚಕಗಳು
7. ದಿಗ್ವಾಚಕಗಳು
8. ಪ್ರಕಾರ ವಾಚಕಗಳು
9. ಸರ್ವನಾಮಗಳು

– ಎಂದು ಅನೇಕ ಗುಂಪುಗಳಾಗಿ ವಿಂಗಡಿಸಬಹುದು.

1. ವಸ್ತು ವಾಚಕಗಳು : ವಸ್ತುವಿನ ಹೆಸರು ಹೇಳುವ ಶಬ್ದಗಳೆಲ್ಲ ವಸ್ತುವಾಚಕ ನಾಮಗಳು.

ಉದಾಹರಣೆ: ಗಂಡಸು, ಹೆಂಗಸು, ಮಗು, ಕರು, ಕುರಿ, ಕೋಳಿ, ಹಸು ಮುಂತಾದವು. ಇವುಗಳೆಲ್ಲ ಚೇತನವುಳ್ಳ ವಸ್ತುವಾಚಕಗಳು.

ಕಲ್ಲು, ನೆಲ, ಹಣ್ಣು, ಕಾಯಿ, ಮನೆ, ಕಬ್ಬಿಣ, ಹಡಗು, ನೀರು, ಗಾಳಿ ಮುಂತಾದವು ಚೇತನವಿಲ್ಲದ ವಸ್ತುವಾಚಕಗಳು.

ವಸ್ತುವಾಚಕಗಳಲ್ಲಿ ಮೂರು ವಿಧ. ರೂಢ ನಾಮ, ಅಂಕಿತ ನಾಮ ಹಾಗೂ ಅನ್ವರ್ಥನಾಮ.

(ಅ) **ರೂಢನಾಮ :** ರೂಢಿಯಿಂದ, ಹಿಂದಿನಿಂದಲೂ ಬಂದವುಗಳು ರೂಢನಾಮಗಳು. ರೂಢಿಯಿಂದ ಬಂದ ಹೆಸರುಗಳು ಎಂದು ಇದಕ್ಕೆ ಅರ್ಥ.

ಉದಾಹರಣೆ: ಗಂಡಸು, ಹೆಂಗಸು, ಪರ್ವತ, ದೇಶ, ನದಿ, ನೆಲ, ಪರ್ವತ, ಮರ, ಬೆಟ್ಟ ಮುಂತಾದವು.

(ಆ) **ಅಂಕಿತ ನಾಮ :** ಒಬ್ಬ ವ್ಯಕ್ತಿಯನ್ನೋ, ಒಂದು ಪ್ರದೇಶವನ್ನೋ ಗುರುತಿಸಲು ವ್ಯವಹಾರದ ಅನುಕೂಲಕ್ಕಾಗಿ ಇಟ್ಟುಕೊಂಡ ಹೆಸರುಗಳು ಅಂಕಿತನಾಮಗಳು.

ಉದಾಹರಣೆ: ರಾಮ, ಸೀತೆ, ಕಾವೇರಿ, ಶಂಕರ, ಕರ್ನಾಟಕ, ಬೆಂಗಳೂರು, ಮೈಸೂರು, ಮಾನ್ಯ, ರೇಖಾ, ಹಿಮಾಲಯ ಇತ್ಯಾದಿಗಳು.

(ಇ) **ಅನ್ವರ್ಥ ನಾಮ :** ಅರ್ಥಕ್ಕೆ ಅನುಗುಣವಾಗಿ ಅಥವಾ ವಸ್ತುವಿನ–ವ್ಯಕ್ತಿಯ ಲಕ್ಷಣಕ್ಕನುಗುಣವಾಗಿ ಬರುವ ಹೆಸರುಗಳು ಅನ್ವರ್ಥನಾಮಗಳು.

ಉದಾಹರಣೆ : ವಿದ್ಯಾರ್ಥಿ, ಕುಂಟ, ಕಿವುಡ, ಕಂಡಕ್ಟರ್, ಚಾಲಕ, ಹೆಳವ, ರೋಗಿ, ಟೀಚರ್ ಇತ್ಯಾದಿಗಳು.

2. ಗುಣವಾಚಕಗಳು : ವಸ್ತುಗಳು ಅಥವಾ ವ್ಯಕ್ತಿಯ ಗುಣವನ್ನು ಹೇಳುವ ಶಬ್ದಗಳು ಗುಣವಾಚಕಗಳು.

ಉದಾಹರಣೆ: ಒಳ್ಳೆಯ ಹುಡುಗಿ. ಇಲ್ಲಿ ಒಳ್ಳೆಯ ಎಂಬುದು ವಿಶೇಷವಾಗಿರುವ ಗುಣವಾಚಕ. ಅಂತೆಯೇ, ಕೆಂಪು, ದೊಡ್ಡದು, ಹಳೆಯದು, ಚಿಕ್ಕದು, ಕರಿಯ, ಕೆಂಪುಕೋತಿ ಇತ್ಯಾಗಳು:

3. ಸಂಖ್ಯಾವಾಚಕಗಳು : ಸಂಖ್ಯೆಗಳನ್ನು ತಿಳಿಸುವ ಶಬ್ದಗಳೇ ಸಂಖ್ಯಾವಾಚಕಗಳು.

ಉದಾಹರಣೆ: ಒಂದು, ಐದು, ಹತ್ತು, ನೂರು, ಲಕ್ಷ, ಕೋಟಿ, ಒಬ್ಬ, ಐವರು. ಇತ್ಯಾದಿ.

10th_Kannada_Reader1-5.indd 42 03-04-2019 14:07:56

4. **ಸಂಖ್ಯೇಯವಾಚಕಗಳು :** ಸಂಖ್ಯೆಯಿಂದ ಕೂಡಿದ ಶಬ್ದಗಳೆಲ್ಲ ಸಂಖ್ಯೇಯ ವಾಚಕಗಳೆನ್ನಿಸುತ್ತವೆ.

ಉದಾಹರಣೆ: ಮೂವರು, ಮೂರನೆಯ, ಒಂದನೇ, ನಾಲ್ಕನೆಯ ಇತ್ಯಾದಿಗಳು.

5. **ಭಾವವಾಚಕಗಳು :** ಒಂದು ಕ್ರಿಯೆ ನಡೆಯುವುದರಿಂದ ಉಂಟಾಗುವ ಸ್ಥಿತಿಯನ್ನಾಗಲೀ ಅಥವಾ ವಸ್ತುಗಳ ಮತ್ತು ಕ್ರಿಯೆಯ ಭಾವವನ್ನಾಗಲೀ ತಿಳಿಸುವ ಶಬ್ದಗಳೇ ಭಾವವಾಚಕಗಳು.

ಉದಾಹರಣೆ: ನೋಟ, ಬಡತನ, ಕುರುಡು, ಕಪ್ಪು, ನೋಟ, ಕೆಂಪು, ಬಿಳುಪು ಇತ್ಯಾದಿ.

6. **ಪರಿಮಾಣ(ಪ್ರಮಾಣ) ವಾಚಕಗಳು :** ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳೆಂದು ಹೇಳುವರು.

ಉದಾಹರಣೆ: ಹಲವು, ಕೆಲವು ದಿನಗಳು, ಅಷ್ಟು, ಇಷ್ಟು, ಅಷ್ಟು ಹೊತ್ತು, ಬೆಟ್ಟದಷ್ಟು ಇತ್ಯಾದಿ.

7. **ದಿಗ್ವಾಚಕಗಳು :** ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳನ್ನೆಲ್ಲ ದಿಗ್ವಾಚಕ ನಾಮಗಳೆಂದು ಕರೆಯುವರು.

ಉದಾಹರಣೆ: ಉತ್ತರ, ದಕ್ಷಿಣ, ಮೂಡಣ, ತೆಂಕಣ, ಈಶಾನ್ಯ, ಕೆಳಗೆ, ಮೇಲೆ ಇತ್ಯಾದಿ.

8. **ಪ್ರಕಾರ ವಾಚಕಗಳು :** ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರ ವಾಚಕಗಳೆನ್ನಿಸುತ್ತವೆ.

ಉದಾಹರಣೆ: ಅಂತಹವನು, ಅಂತಹುದು, ಇಂತಹವನು, ಇಂತಹ, ಅಂತಹವಳು ಇತ್ಯಾದಿ ಶಬ್ದಗಳು.

9. **ಸರ್ವನಾಮಗಳು :** ವಸ್ತುವಾಚಕಗಳಾದ ನಾಮಪದಗಳ ಬದಲಾಗಿ ಉಪಯೋಗಿಸುವ ಪದಗಳೇ ಸರ್ವನಾಮಗಳು. ಒಂದು ನಾಮಪದದ ಸ್ಥಾನದಲ್ಲಿ ಬರುವ ಶಬ್ದಕ್ಕೂ, ಒಂದು ವಸ್ತುವಿನ ಅಥವಾ ವಿಷಯದ ಹೆಸರು ಹೇಳದೆಯೇ ಅದನ್ನು ಸೂಚಿಸುವ ಶಬ್ದಕ್ಕೂ ಸರ್ವನಾಮವೆಂದು ಹೆಸರು. ಇದೂ ಸಹ ನಾಮಪದದ ಒಂದು ಬಗೆ.

ಉದಾಹರಣೆ: ರಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬ ಬಳಲಿದ್ದಂತೆ ತೋರುತ್ತಿತ್ತು. ಹೀಗೆ ನಾಮಪದಗಳಿಗೆ ಬದಲಾಗಿ ಅವನು, ಅವಳು, ನೀನು, ನೀವು, ಅದು, ಅವು, ನಾನು, ತಾವು, ನೀವು, ಏನು, ಯಾವಳು, ಇದು ಮುಂತಾದ ಶಬ್ದಗಳನ್ನು ಬಳಸುತ್ತೇವೆ. ಇವೆಲ್ಲ ಸರ್ವನಾಮಗಳು.

ಸರ್ವನಾಮಗಳಲ್ಲಿ ಮೂರು ರೀತಿಗಳಿವೆ. ಅವು,

(i) ಪುರುಷವಾಚಕ(ಪುರುಷಾರ್ಥಕ) ಸರ್ವನಾಮಗಳು :

(ಅ) **ಉತ್ತಮ ಪುರುಷ :** ನಾನು, ನಾವು ಎಂಬುವು ಮಾತನಾಡುತ್ತಿರುವವರನ್ನು ಸೂಚಿಸುತ್ತವೆ. ಇವಕ್ಕೆ ಉತ್ತಮ ಪುರುಷ ಸರ್ವನಾಮಗಳೆಂದು ಹೆಸರು

(ಆ) **ಮಧ್ಯಮ ಪುರುಷ :** ನಾವು ಯಾರೊಂದಿಗೆ ಮಾತಾಡುತ್ತಿದ್ದೇವೋ ಅವರನ್ನು ಕುರಿತು ಸಂಬೋಧಿಸುವ ಪದಗಳಿವು. **ಉದಾಹರಣೆ:** ನೀನು, ನೀವು.

(ಇ) **ಪ್ರಥಮ ಪುರುಷ :** ಮಾತನಾಡುತ್ತಿರುವವರು ಯಾರೊಂದಿಗೆ ಮಾತಾಡುತ್ತಿದ್ದಾರೋ ಅವರನ್ನು ಬಿಟ್ಟು, ಉಳಿದ ಎಲ್ಲಾ ಜನರನ್ನೂ, ವಸ್ತುಗಳನ್ನೂ ಇವು ಸೂಚಿಸುತ್ತವೆ.

ಉದಾಹರಣೆ: ಪುಲ್ಲಿಂಗ : ಅವನು, ಅವರು.
ಸ್ತ್ರೀಲಿಂಗ : ಅವಳು, ಅವರು.
ನಪುಂಸಕ ಲಿಂಗ : ಅದು, ಅವು

– ಈ ಮೂರು ಬಗೆಯ ಸರ್ವನಾಮಗಳನ್ನು ಒಟ್ಟಿಗೇ ಪುರುಷವಾಚಕ ಸರ್ವನಾಮಗಳೆಂದು ಕರೆಯುತ್ತಾರೆ.

(ii) ಪ್ರಶ್ನಾರ್ಥಕ ಸರ್ವನಾಮಗಳು :

ಯಾವುದು, ಏನು, ಯಾರು, ಯಾವಾಗ, ಯಾವನು, ಏತಕ್ಕೆ, ಎಲ್ಲಿ ಹೀಗೆ ಪ್ರಶ್ನೆಗಳನ್ನು ಸೂಚಿಸಲು ಬಯಸುವ ಪದಗಳೇ ಪ್ರಶ್ನಾರ್ಥಕ ಸರ್ವನಾಮಗಳು.

(iii) ಆತ್ಮಾರ್ಥಕ ಸರ್ವನಾಮಗಳು :

ತಾನು, ತಾವು, ತನ್ನ ಇತ್ಯಾದಿ ಪದಗಳನ್ನು ಆತ್ಮಾರ್ಥಕ ಸರ್ವನಾಮಗಳೆಂದು ಕರೆಯುವರು.

10th_Kannada_Reader1-5.indd 43 03-04-2019 14:07:56

ಘಟಕ
ಮೂರು

ಸಂಸ್ಕೃತಿ





ಕಾವ್ಯ ಕಣಜ	: ಹೇಮಂತ	– ಎಸ್.ವಿ.ಪರಮೇಶ್ವರ ಭಟ್ಟ
ಗದ್ಯ ವಿಹಾರ	: ನಮ್ಮ ಪರಂಪರೆ ಮತ್ತು ಸಂಸ್ಕೃತಿ	– ಎನ್. ಬಸವರಾಜು
ಉಪಪಠ್ಯ	: ಐತಿಹಾಸಿಕ ತಾಣ ತಲಕಾಡು	– ಡಾ. ತಮಿಳ್ ಸೆಲ್ವಿ
ವ್ಯಾಕರಣ	: ಲಿಂಗ–ವಚನ– ವಿಭಕ್ತಿ–ವಾಕ್ಯರಚನೆ	

10th_Kannada_Reader1-5.indd 44 03-04-2019 14:07:56

ಕಾವ್ಯ ಕಣಜ

ಘಟಕ ಮೂರು

ಹೇಮಂತ

– ಡಾ. ಎಸ್.ವಿ. ಪರಮೇಶ್ವರ ಭಟ್ಟ



ಹೇಮಂತ ಋತು ಪ್ರಕೃತಿಯಲ್ಲಿ ನಿಸ್ಸಾರತೆಯನ್ನು ತುಂಬುತ್ತದೆ. ಪ್ರಕೃತಿಯು ಒಂದು ರೀತಿಯಲ್ಲಿ ಹೇಮಂತವನ್ನು ಶಪಿಸುತ್ತದೆ. ಪ್ರತಿಯೊಂದು ಋತುವೂ, ಪ್ರಕೃತಿಯಲ್ಲಿ ನಾನಾ ಬದಲಾವಣೆಗಳನ್ನೂ ಏರುಪೇರನ್ನೂ ಉಂಟು ಮಾಡುತ್ತದೆ. ಮನುಷ್ಯನು ಪ್ರತಿಯೊಂದು ಋತುವಿನಿಂದಲೂ ಸಂಸ್ಕಾರ ಪಡೆಯುತ್ತ ಸಾಗುವುದೇ ಜೀವನ ಧರ್ಮ ಎಂದು ಕವಿ ಇಲ್ಲಿ ತಿಳಿಸಿದ್ದಾರೆ.



10th_Kannada_Reader1-5.indd 45 03-04-2019 14:07:56

ಹೇಮಂತ ಋತುರಾಜನಿಳೆಗೆ ಬಂದಿಳಿವಂದು
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ ಮಾರುತನಿಲ್ಲ ||

ಚೆಂಗುಡಿಯ ಸಿಂಗರದ ವರ ವರೂಥಗಳೆನಿಸಿ
ಮೆರೆವ ಮರಗಿಡಬಳ್ಳಿ ಬರಿದೆ ಮೊಗವಿಳುಹಿ
ಮೌನದಲಿ ಮೈದೆಗೆದು ಮನಮುರಿದು ನಿಂದಿಹವು
ಭಾಗ್ಯ ಹೀನರವೊಲು ದೀನರೆಂದೆನಿಸಿ ||

ಮಂಜು ಮುಸುಕನು ಹೊದ್ದು ಹೊಲಗದ್ದೆಗಳು ಮಲಗಿ
ಸುಯ್ಯೆಲರ ಸೂಸುತಿವೆ ನಿನ್ನ ಹಳಿದು
ಮೆಲ್ಲಮೆಲ್ಲನೆ ಸರಿದು ಮೊಗದ ಜವನಿಕೆಯೆಳೆದು
ತುಂಗೆ ತೊರೆ ಹರಿಯುತಿದೆ ನಡುಗಿ ಮೈ ನೆನೆದು ||

ಹಣ್ಣೆಲೆಗಳುದುರುತಿಹ ಬರಲು ಮರಗಳನೇರಿ
ಕಣ್ಣೀರು ಸುರಿಸುತಿದೆ ಕಾನನದ ಹಕ್ಕಿ
ತಣ್ಣನೆಯ ಗಾಳಿಯಲಿ ಹಿಮದೊಂದು ಸೋನೆಯಲಿ
ಮಿಣ್ಣನಿದೆ ಮಾನವನ ಜೀವ ಸೆರೆ ಸಿಕ್ಕಿ ||

ಎತ್ತಲುಂ ಬಿಳಿ ಮಂಜು ಎತ್ತಲೂ ಹಿಮಗಾಳಿ
ಎತ್ತಲೂ ನಡುಗುತಿಹ ನೀರವಾಲೋಕ
ಎತ್ತಲುಂ ಬರಡು ಬನವೆತ್ತಲುಂ ಜಡದ ಜನ
ಎತ್ತಲುಂ ಶೂನ್ಯ ಮನ ಮರುಗುತಿಹ ಮರುಕ ||

ಹೇಮಂತನಾಳಿಕೆಯ ಕಠಿಣ ಶಾಸನವಿಂತು
ಅದಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ
ಒಂದೊಂದು ಋತುವಿನಲಿ ಒಂದೊಂದು ರೀತಿಯಲಿ
ಸಂಸ್ಕಾರ ಪಡೆಯುವುದೆ ಜೀವಿಗಳ ಧರ್ಮ ||

10th_Kannada_Reader1-5.indd 46 03-04-2019 14:07:56

ಕವಿ ಕಾವ್ಯ ವಿಚಾರ



ಎಸ್.ವಿ.ಪರಮೇಶ್ವರ ಭಟ್ಟ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮಾಳೂರಿನಲ್ಲಿ ಹುಟ್ಟಿದ ಎಸ್.ವಿ.ಪರಮೇಶ್ವರ ಭಟ್ಟರು ಕನ್ನಡದ ಪ್ರಸಿದ್ಧ ಕವಿಗಳು ಮತ್ತು ವಿಮರ್ಶಕರು. ಕಾಳಿದಾಸನ ಸಮಗ್ರ ಕೃತಿಗಳನ್ನು ಅನುವಾದಿಸಿದ ಶ್ರೇಯಸ್ಸು ಮತ್ತು ಸಾಹಸ ಇವರದು. ಬಂಗಾರದ ಪದಕದೊಂದಿಗೆ ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯಲ್ಲಿ ಎಂ.ಎ., ಪದವಿ ಪಡೆದು, ಮಂಗಳೂರಿನ ಮಂಗಳ ಗಂಗೋತ್ರಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿದವರು. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ದೊಡ್ಡ ವಿದ್ವಾಂಸರಾದ ಅವರು ಉತ್ತಮ ವಾಗ್ಮಿ. ಕವಿತೆ, ಆಧುನಿಕ ವಚನ, ಗಾದೆ, ಒಗಟು, ವಿಮರ್ಶೆ, ಸಂಸ್ಕೃತ ಕಾವ್ಯಗಳ ಅನುವಾದ ಹೀಗೆ ಸುಮಾರು 60 ಗ್ರಂಥಗಳನ್ನು ಇವರು ರಚಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನೂ ಗಳಿಸಿದ್ದಾರೆ. 'ರಾಗಿಣಿ' 'ಜಹನಾರ', 'ಇಂದ್ರಚಾಪ', 'ಸುರಗಿ', 'ಸುರಹೊನ್ನೆ', 'ಚಂದ್ರವೀಧಿ' ಮೊದಲಾದವುಗಳು ಇವರ ಕೆಲವು ಕವನ ಸಂಕಲನಗಳು.

ಪದಗಳ ಅರ್ಥ

ಹೇಮಂತ–ಚಳಿಗಾಲ; ಇಳೆ–ಭೂಮಿ; ಮಾರುತ–ಗಾಳಿ; ಚೆಂಗುಡಿ–ಕೆಂಪಾದ ಚಿಗುರು; ಸಿಂಗರ–ಶೃಂಗಾರ, ಅಲಂಕಾರ; ವರೂಥ–ರಥ, ತೇರು; ಸುಯ್ಯೆಲರ್–ಉಸಿರಿನ ಗಾಳಿ; ಹಳಿ–ನಿಂದಿಸು, ದೂಷಿಸು; ಜವನಿಕೆ–ತೆರೆ, ಪರದೆ; ಬರಲು–ಬರಡು; ಸೋನೆ–ಎಡೆಬಿಡದೆ ಸುರಿಯುವ ಮಳೆ; ಮಿಣ್ಣ–ಮೌನ, ನಿಶ್ಶಬ್ದ; ಶೂನ್ಯ–ಸೊನ್ನೆ. ಶಿವ, ಇಭ–ಆನೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ

1. ಹೇಮಂತ ಋತು ಬರುವಾಗ ಇಳೆ ಹೇಗಿರುತ್ತದೆ ?
2. ಹೇಮಂತ ಋತುವಿನ ಆಗಮನದಿಂದ ಎಲ್ಲಾ ಕಡೆಯೂ ಶೂನ್ಯವು ಆವರಿಸಲು ಕಾರಣವೇನು ?
3. ಕಾನನದ ಹಕ್ಕಿಗಳು ಏಕೆ ಕಣ್ಣೀರು ಸುರಿಸುತ್ತವೆ?
4. ಸೃಷ್ಟಿಯ ಮರ್ಮವೇನು ?
5. ಜೀವಗಳ ಧರ್ಮವೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹೇಮಂತ ಋತುವಿನ ಪರಿಣಾಮವನ್ನು ಕವಿ ಈ ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ? ವಿವರಿಸಿ.

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
   ಮೈದೆಗೆದು, ಚೆಂಗುಡಿ, ನೀರವಾಲೋಕ, ದೀನರೆಂದೆನಿಸಿ, ಬಂದಿಳಿವಂದು.
2. **ಕೆಳಗಿನ ಪದಗಳಿಗೆ ತತ್ಸಮ ತದ್ಭವ ಬರೆಯಿರಿ.**
   ಸಿಂಗರ, ಮೌನ, ರಾಜ, ದನಿ, ಮೊಗ, ಬನ, ಶೂನ್ಯ.
3. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಹೆಸರಿಸಿ.**
   ಋತುರಾಜ, ಹೊಲಗದ್ದೆಗಳು, ಹಣ್ಣೆಲೆ, ಹಿಮಗಾಳಿ.

ಚಟುವಟಿಕೆ

1. ಋತುಗಳ ಬಗ್ಗೆ ಇತರ ಕವಿಗಳು ಬರೆದ ಕವನಗಳನ್ನು ಓದಿರಿ.

10th_Kannada_Reader1-5.indd 47 03-04-2019 14:07:56

ಗದ್ಯ ವಿಹಾರ

ಘಟಕ ಮೂರು

ನಮ್ಮ ಪರಂಪರೆ ಮತ್ತು ಸಂಸ್ಕೃತಿ

–ಎನ್. ಬಸವರಾಜು



ಭಾರತೀಯ ಸಂಸ್ಕೃತಿಯು ವೈವಿಧ್ಯಮಯ ಸಂಸ್ಕೃತಿಗಳಲ್ಲೊಂದು. ಭಾರತೀಯ ಉಪಖಂಡದ ಇತಿಹಾಸದಿಂದ ಪ್ರಭಾವಿತವಾಗಿರುವ ಇದು ಆಯಾ ಭೌಗೋಳಿಕ ಸನ್ನಿವೇಶಗಳಿಗನುಗುಣವಾಗಿ ಆಹಾರ ಪದ್ಧತಿ, ಉಡುಗೆ–ತೊಡುಗೆ, ಧಾರ್ಮಿಕ ನಂಬಿಕೆ ಮತ್ತು ಅನುಸರಿಸುವಿಕೆಯಲ್ಲಿ ವೈವಿಧ್ಯತೆಯನ್ನು ಹೊಂದಿದೆ. ಹಲವು ಧರ್ಮಗಳು ಹುಟ್ಟಿರುವ ಭಾರತದಲ್ಲಿ ವಿವಿಧ ಬಗೆಯ ಸಂಗೀತ, ನೃತ್ಯ, ಇತ್ಯಾದಿ ಹಲವು ಕಲೆಗಳೂ ಇವೆ. ಉದಾತ್ತ ನಾಗರಿಕತೆಯಾದ ಸಿಂಧೂ ಬಯಲಿನ ನಾಗರಿಕತೆಯಿಂದ ನಮ್ಮ ಸಂಸ್ಕೃತಿ ಆರಂಭವಾಗಿದೆ. ದಕ್ಷಿಣ ಏಷ್ಯಾದ ದೊಡ್ಡ ದೇಶವಾದ ಭಾರತದ ಪರಂಪರೆ ಮತ್ತು ಸಂಸ್ಕೃತಿಯನ್ನು ಈ ಪಾಠದಲ್ಲಿ ಉಲ್ಲೇಖಿಸಲಾಗಿದೆ.



10th_Kannada_Reader1-5.indd 48 03-04-2019 14:07:56

ಪುರಾತನ ಇತಿಹಾಸ, ಅನನ್ಯ ಭೌಗೋಳಿಕ ರಚನೆ, ವೈವಿಧ್ಯಮಯ ಜನ ಸಮುದಾಯ, ವಿಭಿನ್ನ ಸಂಪ್ರದಾಯಗಳು ಮತ್ತು ಆಚರಣೆಗಳು, ಪ್ರಾಚೀನ ಪರಂಪರೆ ಹಾಗೂ ನೆರೆಹೊರೆಯ ರಾಷ್ಟ್ರಗಳ ಪ್ರಭಾವಗಳು ಭಾರತೀಯ ಸಂಸ್ಕೃತಿಯನ್ನು ರೂಪಿಸಿವೆ. ಸಿಂಧೂ ಕಣಿವೆಯ ನಾಗರಿಕತೆಯಿಂದ ಆರಂಭಗೊಂಡ ಭಾರತೀಯ ಸಂಸ್ಕೃತಿ ವೇದಗಳ ಕಾಲದಲ್ಲಿ ಅಸಾಧಾರಣ ವಿಕಸನ ಕಂಡಿತು. ಇದಾದ ನಂತರ ಬೌದ್ಧ ಧರ್ಮದ ವಿಕಸನ ಮತ್ತು ಅವನತಿ, ಸುವರ್ಣಯುಗ, ಮುಸ್ಲಿಂ ಆಳ್ವಿಕೆಗೆ ಭಾರತ ಅಧೀನವಾದದ್ದು ಹಾಗೂ ಯೂರೋಪಿಯನ್ನರ ವಸಾಹತು ಆಳ್ವಿಕೆಯ ಸಂದರ್ಭದಲ್ಲಿ ಈ ವಿಕಸನ ಮತ್ತಷ್ಟು ವೈವಿಧ್ಯಮಯವಾಯಿತು. ಭಾರತದ ಶ್ರೇಷ್ಠ ಧಾರ್ಮಿಕ ಆಚರಣೆಗಳು, ಭಾಷೆಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು ಕಳೆದ ಐದು ಸಾವಿರ ವರ್ಷಗಳಿಂದ ಇದರ ಅನನ್ಯತೆಗೆ ಸಾಕ್ಷಿಯಾಗಿವೆ. ವಿವಿಧ ಧರ್ಮಗಳು ಮತ್ತು ಸಂಪ್ರದಾಯಗಳ ಸಂಯೋಜನೆಯಾಗಿರುವ ಭಾರತೀಯ ಸಂಸ್ಕೃತಿ ವಿಶ್ವದ ಇನ್ನಿತರ ಸಂಸ್ಕೃತಿಗಳ ಮೇಲೂ ತನ್ನ ಪ್ರಭಾವವನ್ನು ಬೀರಿದೆ. ಸಂಸ್ಕೃತಿ ಪ್ರತಿದಿನವೂ ಬದಲಾವಣೆಗೊಳಪಡುತ್ತಲೇ ಇರುತ್ತದೆ.

ಸಂಸ್ಕೃತಿ

ಪ್ರತಿಯೊಂದು ಸಂಗತಿಯ ಕುರಿತಾಗಿ ಒಂದು ಸಮೂಹವು ತನಗೆ ಒಳ್ಳೆಯದೆನಿಸಿದ್ದನ್ನೆಲ್ಲಾ ಸೇರಿಸಿಕೊಂಡು, ಅದನ್ನು ಪದ್ಧತಿಯನ್ನಾಗಿ ಮಾಡಿಕೊಂಡು ಆಚರಣೆಗೆ ತರುವುದೋ ಅದನ್ನೇ ಸಂಸ್ಕೃತಿ ಎನ್ನಬಹುದು. ಸಂಸ್ಕೃತಿಯು ಮಾನವ ಸಮುದಾಯವನ್ನು ಸನ್ಮಾರ್ಗದಲ್ಲಿ ನಡೆಸಲು ಕಾರಣವಾಗಿದೆ.

ಧರ್ಮ

ಹಿಂದೂ, ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳಿಗೆ ಭಾರತ ಜನ್ಮಭೂಮಿ. ಗಾಢ ಧರ್ಮನಿಷ್ಠೆ, ಹಲವು ಸಮುದಾಯಗಳು ಮತ್ತು ಸಂಸ್ಕೃತಿಯನ್ನು ಹೊಂದಿರುವ ಭಾರತ ವಿಶ್ವದಲ್ಲೇ ಅತ್ಯಂತ ಹೆಚ್ಚು ಧಾರ್ಮಿಕ ವೈವಿಧ್ಯತೆಯುಳ್ಳ ದೇಶ. ಇಲ್ಲಿನ ಬಹುತೇಕ ಜನರ ಬದುಕಿನಲ್ಲಿ ಇಂದಿಗೂ ಧರ್ಮ ನಿರ್ಣಾಯಕ ಪಾತ್ರ ವಹಿಸುತ್ತದೆ. ಧರ್ಮವೇ ಇಲ್ಲಿನ ಜನರ ಬದುಕನ್ನು ನಿಯಂತ್ರಿಸುತ್ತದೆ.

ಸಮಾಜ

ಇಲ್ಲಿನ ಮಕ್ಕಳಿಗೆ ಬಾಲ್ಯದಿಂದಲೇ ಅವರ ಕರ್ತವ್ಯ ಮತ್ತು ಸ್ಥಾನಮಾನಗಳನ್ನು ತಿಳಿಸಿ ಕೊಡುವ ಕಾರ್ಯ ಆರಂಭವಾಗುತ್ತದೆ. ದೇವರು ಅಥವಾ ಅತೀತವಾದ ಶಕ್ತಿ (ಹಣೆಬರಹ) ಬದುಕನ್ನು ನಿರ್ಧರಿಸುತ್ತದೆ ಎನ್ನುವ ಇವರ ನಂಬಿಕೆ ಇದನ್ನು ಮತ್ತಷ್ಟು ಬಲಪಡಿಸಿದೆ. ಧರ್ಮದಂತಹ ಹಲವು ವಿಭಿನ್ನತೆಗಳು ಸಂಸ್ಕೃತಿಯನ್ನು ಹೋಳು ಮಾಡಿವೆ.

ಕೌಟುಂಬಿಕ ವ್ಯವಸ್ಥೆ

ಭಾರತ ಹಲವು ಶತಮಾನಗಳಿಂದ ಅವಿಭಕ್ತ ಕುಟುಂಬ ವ್ಯವಸ್ಥೆ ಎಂಬ ರೂಢಿಗತ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದೆ. ಒಂದೇ ಕುಟುಂಬದಲ್ಲಿ ಹಲವು ಪೀಳಿಗೆಯ ಜನ ವಾಸಿಸುವ ಇಲ್ಲಿ ತಂದೆ–ತಾಯಿ, ಅವರ ಮಕ್ಕಳು, ಪತ್ನಿಯರು, ಮೊಮ್ಮಕ್ಕಳು, ಮರಿಮಕ್ಕಳು... ಹೀಗೆ ಎಲ್ಲರೂ ಒಟ್ಟಿಗೇ ವಾಸಿಸುತ್ತಾರೆ. ಹಿರಿಯ ವ್ಯಕ್ತಿ ಸಾಮಾನ್ಯವಾಗಿ ಪುರುಷ ಈ ಅವಿಭಕ್ತ ಕುಟುಂಬದ ಮುಖ್ಯಸ್ಥ. ಇವನು ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ತೀರ್ಮಾನವನ್ನು ಕೈಗೊಳ್ಳುವನು ಹಾಗೂ ನೀತಿ ನಿಯಮಗಳನ್ನು ರೂಪಿಸುವನು. ಕುಟುಂಬದ ಇತರೇ ಸದಸ್ಯರು ಇದಕ್ಕೆ ಬದ್ಧರಾಗಿರುತ್ತಾರೆ.

ನಿಯೋಜಿತ ವಿವಾಹ ಭಾರತೀಯ ಸಮಾಜದಲ್ಲಿ ಶತಶತಮಾನಗಳಿಂದಲೂ ಅಸ್ತಿತ್ವದಲ್ಲಿರುವ ಸಂಪ್ರದಾಯ. ಇಂದಿಗೂ ಕೂಡ ಬಹು ಸಂಖ್ಯಾತ ಭಾರತೀಯರು ನಿಯೋಜಿತ ರೀತಿಯಲ್ಲೇ ವಿವಾಹವಾಗಲು ಬಯಸುತ್ತಾರೆ. ವಧೂ ವರರ ಪೋಷಕರು ಮತ್ತು ಕುಟುಂಬದ ಗೌರವಾನ್ವಿತ ವ್ಯಕ್ತಿಗಳು ಈ ವಿವಾಹವನ್ನು ನಿಶ್ಚಯಿಸುತ್ತಾರೆ. ವಧೂವರರ ಅಭಿಪ್ರಾಯವನ್ನೂ ಕೇಳಲಾಗುವುದು. ವಧೂವರರ ವಯಸ್ಸು, ದೈಹಿಕ ಬೆಳವಣಿಗೆ, ವೈಯಕ್ತಿಕ ಘನತೆ ಮತ್ತು ಅಭಿರುಚಿಗಳು, ಕೌಟುಂಬಿಕ ಹಿನ್ನೆಲೆ, ಜಾತಿ ಮತ್ತು ಜಾತಕ(ಶಾಸ್ತ್ರ), ಹೊಂದಾಣಿಕೆ ಮುಂತಾದ ವಿಚಾರಗಳು ಒಪ್ಪಿಗೆಯಾದ ನಂತರವಷ್ಟೇ ವಿವಾಹ ನಿರ್ಧಾರವಾಗುತ್ತದೆ.

ನಮಸ್ತೆ, ನಮಸ್ಕಾರ್ ಅಥವಾ ನಮಸ್ಕಾರಮ್ ಎನ್ನುವ ಪದಗಳು ವಿನಯಪೂರ್ವಕ ಅಥವಾ ಗೌರವ ಸಂಬೋಧನೆಯ ಪ್ರತೀಕಗಳಾಗಿ ಭಾರತದ ಉಪಖಂಡದ ಜನರ ಆಡುಮಾತಿನಲ್ಲಿ

10th_Kannada_Reader1-5.indd 49 03-04-2019 14:07:56

ಬಳಕೆಯಾಗುತ್ತಿದೆ. ಹಿಂದೂ, ಬೌದ್ಧ ಮತ್ತು ಜೈನ ಸಮುದಾಯಕ್ಕೆ ಸೇರಿದ ಭಾರತ ಮತ್ತು ನೇಪಾಳದ ಜನ ಈ ಪದಗಳನ್ನು ಅತ್ಯಂತ ಸರ್ವೇಸಾಮಾನ್ಯವಾಗಿ ಬಳಸುತ್ತಾರೆ. ಎರಡು ಕೈಗಳು ಒಟ್ಟಿಗೆ ಬೆಸೆದಿರುವ ನಮಸ್ಕರಿಸುವ ಚಿಹ್ನೆ 'ಗೌರವದ ಭಾವನೆಯನ್ನು ಮೌನವಾಗಿ ಸೂಚಿಸುತ್ತದೆ' ಎಂಬ ಅರ್ಥದಲ್ಲಿ ಯೋಗ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಮಧ್ಯೆ ನಮಸ್ತೆ ಪದ ಪರಸ್ಪರ ವಿನಿಮಯವಾಗುತ್ತಿದೆ. 'ನಾನು ನಿನಗೆ ಶರಣಾಗುತ್ತೇನೆ ಅಥವಾ ಬಾಗುತ್ತೇನೆ' ಎಂಬುದೇ ಇದರ ಪದಶಃ ಅರ್ಥ. ತಲೆಬಾಗು, ಪ್ರಣಾಮ, ಪೂಜ್ಯ ವಂದನೆ ಮತ್ತು ಗೌರವ ಎಂಬೆಲ್ಲ ಅರ್ಥ ಕೊಡುವ ನಮಸ್ಕಾರ, ನಮಸ್ ಎಂಬ ಸಂಸ್ಕೃತ ಪದದಿಂದ ಇದು ನಿಷ್ಪನ್ನ ಹೊಂದಿದೆ.

ಹಬ್ಬಗಳು

ವಿವಿಧ ಧರ್ಮಗಳ ಬೀಡಾಗಿರುವ ಭಾರತದ್ದು ವೈವಿಧ್ಯಮಯ ಸಂಸ್ಕೃತಿ. ವಿವಿಧ ಧರ್ಮಗಳ ಹಲವು ಹಬ್ಬ ಹರಿದಿನಗಳನ್ನು ಭಾರತದಲ್ಲಿ ಆಚರಿಸಲಾಗುತ್ತದೆ. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿ ಜಯಂತಿ, ಶಿಕ್ಷಕರ ದಿನಾಚರಣೆ ಇವು ಭಾರತದ ಘೋಷಿತ ರಾಷ್ಟ್ರೀಯ ಹಬ್ಬಗಳು.

ಇವುಗಳನ್ನು ಶ್ರದ್ಧೆ ಮತ್ತು ಉತ್ಸಾಹದಿಂದ ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತದೆ. ಇದಲ್ಲದೆ ಹಲವು ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಅಲ್ಲಿನ ಭಾಷೆ ಮತ್ತು ಧರ್ಮವನ್ನು ಅನುಸರಿಸಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿವಿಧ ಸ್ಥಳೀಯ ಹಬ್ಬಗಳನ್ನೂ ಆಚರಿಸಲಾಗುತ್ತದೆ. ದೀಪಾವಳಿ, ಯುಗಾದಿ, ಗಣೇಶ ಚತುರ್ಥಿ, ದುರ್ಗಾಪೂಜಾ, ಹೋಳಿ, ರಕ್ಷಾ ಬಂಧನ ಮತ್ತು ದಸರಾ ಇಲ್ಲಿನ ಜನಪ್ರಿಯ ಹಬ್ಬಗಳು. ಸಮೃದ್ಧತೆಯ ಸಂಕೇತವಾಗಿ ಸುಗ್ಗಿಯ ಹಬ್ಬಗಳೂ ಕೂಡ ಇಲ್ಲಿ ಆಚರಿಸಲ್ಪಡುತ್ತವೆ. ಮುಸ್ಲಿಂ ಹಬ್ಬಗಳಾದ ಈದ್–ಉಲ್–ಪಿತರ್, ಈದ್–ಅಲ್–ಅಧಾ ಮತ್ತು ರಂಜಾನ್ ಹಬ್ಬಗಳನ್ನು ಭಾರತದಾದ್ಯಂತ ಮುಸ್ಲಿಂ ಬಾಂಧವರು ಸಂಭ್ರಮದಿಂದ ಆಚರಿಸುತ್ತಾರೆ. ಪೂರ್ವ ಭಾರತದ ಅರುಣಾಚಲ ಪ್ರದೇಶದ ಜೈರೋ ಕಣಿವೆಯ ಅಪಾಟಾನಿಸ್ ಬುಡಕಟ್ಟು ಜನ ಆಚರಿಸುವ ದ್ರೀ ಹಬ್ಬ ಭಾರತದ ಬುಡಕಟ್ಟು ಜನರ ಸಂಸ್ಕೃತಿಗೆ ಮತ್ತಷ್ಟು ಮೆರಗು ನೀಡಿದೆ.

ಉಡುಗೆ–ತೊಡುಗೆ

ಸೀರೆ ಭಾರತೀಯ ನಾರಿಯರ ಸಾಂಪ್ರದಾಯಿಕ ಉಡುಗೆ. ಇದರ ಜೊತೆಗೆ ಗಾಘ್ರ ಚೋಲಿ(ಲೆಹಂಗಾ) ವನ್ನು ಸಹ ಉತ್ತರ ಭಾರತದ ಸಾಕಷ್ಟು ಮಹಿಳೆಯರು ಧರಿಸುತ್ತಾರೆ. ಧೋತಿ, ಪಂಚೆ, ಕುರ್ತಾ – ಇವು ಪುರುಷರ ಸಾಂಪ್ರದಾಯಿಕ ತೊಡುಗೆಗಳು. ಮಹಿಳೆಯರ ಅಲಂಕಾರ ಪರಿಕರದಲ್ಲಿ ಬಿಂದಿಯೂ ಸೇರಿದೆ. ಕೆಂಪು ಕುಂಕುಮ(ಸಿಂಧೂರ)ವನ್ನು ವಿವಾಹಿತ ಮಹಿಳೆಯರು ಹಣೆಗೆ ಹಚ್ಚಿಕೊಳ್ಳುವುದು ಮೊದಲಿನಿಂದ ಇದ್ದ ಭಾರತೀಯ ಸಂಸ್ಕಾರ. ನಂತರದ ಕಾಲದಲ್ಲಿ ಅವಿವಾಹಿತರೂ ಇದನ್ನು ಧರಿಸುತ್ತಿದ್ದು, ಇದು ಮಹಿಳೆಯರ ಆಧುನಿಕ ಅಲಂಕಾರದ ಒಂದು ಭಾಗವಾಗಿ ಮಾರ್ಪಟ್ಟಿದೆ. ಸೂರ್ಯನ ಹಾಗೂ ಇತರೇ ಬಾಹ್ಯ ಶಕ್ತಿಗಳಿಂದ ಧರಿಸುವವರ ಮಿದುಳಿನ ರಕ್ಷಣೆಗೆ ಇದು ನೆರವಾಗುತ್ತದೆ ಎನ್ನುವ ನಂಬಿಕೆಯೂ ಇದೆ. ಭಾರತ ಉಪಖಂಡ ಮತ್ತು ಪಾಶ್ಚಿಮಾತ್ಯ ಉಡುಗೆ ತೊಡುಗೆ ಮಿಳಿತಗೊಂಡು, ಇಂಡೋ ವೆಸ್ಟ್ರನ್ ವಸ್ತ್ರಶೈಲಿ ರೂಪುಗೊಂಡಿದೆ. ಚೂಡಿದಾರ, ದುಪ್ಪಟ್ಟಾ, ಪೈಜಾಮಾ, ಕುರ್ತಾ, ಮುಂಡಮ್, ನೆರಿಯಾತುಮ್, ಶೇರ್ವಾನಿ, ಉತ್ತರೀಯಗಳು ಭಾರತದ ಇತರೆ ಉಡುಗೆತೊಡುಗೆಗಳಾಗಿವೆ.

ಸಾಹಿತ್ಯ

ಪ್ರಾಚೀನ ಭಾರತೀಯ ಸಾಹಿತ್ಯ ಪ್ರಸಾರವಾದದ್ದು ಮೌಖಿಕವಾಗಿ. ಭಾರತದ ಮೊಟ್ಟಮೊದಲ ಸಂಸ್ಕೃತ ಸಾಹಿತ್ಯ ಋಗ್ವೇದವು, ಕ್ರಿ.ಪೂ. 1500–2000ಗಳ ಮಧ್ಯೆ ರಚನೆಯಾಗಿರಬಹುದು. ಸಂಸ್ಕೃತ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳು ಮೊದಲ ಸಹಸ್ರಮಾನದ ಅಂತ್ಯದಲ್ಲಿ ರಚನೆಯಾಗಿರಬಹುದು. ತಮಿಳಿನ ಮಹತ್ವದ ಕೃತಿ ತಿರುಕ್ಕುರಳ್ ಈ ಕಾಲಘಟ್ಟದಲ್ಲೇ ರಚನೆಯಾಗಿರಬಹುದು ಎಂಬ ಒಂದು ಅಂದಾಜು. ತಮಿಳಿನ ಸಂಗಮ್ ಸಾಹಿತ್ಯ ಇದೇ ಹಂತದಲ್ಲಿ ರಚನೆಯಾಯಿತು. ಮಧ್ಯಕಾಲೀನ ಅವಧಿಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಾಹಿತ್ಯ ಕೃಷಿ ಆರಂಭವಾಯಿತು. ಕನ್ನಡದಲ್ಲಿ 9ನೇ ಶತಮಾನದಲ್ಲಿ; ತೆಲುಗಿನಲ್ಲಿ 11ನೇ ಶತಮಾನದಲ್ಲಿ ಮೊದಲ ಸಾಹಿತ್ಯ ಕೃತಿಗಳು ರಚನೆಯಾದವು. ಅದೇ ರೀತಿ 12ನೇ ಶತಮಾನದಲ್ಲಿ

10th_Kannada_Reader1-5.indd 50 03-04-2019 14:07:56

ಮಲೆಯಾಳಂ, ಬಂಗಾಳಿ, ಮರಾಠಿ, ಹಿಂದಿ ಉಪಭಾಷೆಗಳಲ್ಲಿ ಹಾಗೂ ಪರ್ಷಿಯನ್ ಮತ್ತು ಉರ್ದು ಭಾಷೆಗಳಲ್ಲಿ ಮೊದಲ ಸಾಹಿತ್ಯ ಕಾರ್ಯಗಳು ಇದೇ ಅವಧಿಯಲ್ಲಿ ಕಾಣಿಸಿಕೊಂಡವು. ರವೀಂದ್ರನಾಥ್ ಟ್ಯಾಗೋರ್, ರಾಮ್‌ಧಾರಿ ಸಿಂಗ್, ದಿನಕರ್, ಸುಬ್ರಹ್ಮಣ್ಯ ಭಾರತಿ, ಕುವೆಂಪು, ಬಂಕಿಮಚಂದ್ರ ಚಟ್ಟೋಪಾಧ್ಯಾಯ, ಮೈಕೇಲ್ ಮಧುಸೂದನ್ ದತ್, ಮುನ್ಷಿ ಪ್ರೇಮ್‌ಚಂದ್, ಮಹಮ್ಮದ್ ಇಕ್ಬಾಲ್ ಮತ್ತು ದೇವಕಿ ನಂದನ ಖತ್ರಿ ಇವರು ಭಾರತ ಕಂಡ ಮಹತ್ವದ ಸಾಹಿತಿಗಳು. ಗಿರೀಶ್ ಕಾರ್ನಾಡ್, ಆಗ್ಞೇಯ ನಿರ್ಮಲ್ ವರ್ಮ, ಕಮಲೇಶ್ವರ್, ವೈಕಂ ಮಹಮ್ಮದ್ ಬಷೀರ್, ಇಂದಿರಾ ಗೋಸ್ವಾಮಿ, ಮಹಾಶ್ವೇತಾದೇವಿ, ಅಮೃತ ಪ್ರೀತಮ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ತಕಳಿ ಶಿವಶಂಕರ್ ಪಿಳ್ಳೈ ಇನ್ನೂ ಮುಂತಾದವರು ಸಮಕಾಲೀನ ಭಾರತದಲ್ಲಿ ಹೆಚ್ಚು ಪ್ರಶಂಸೆಗೆ ಮತ್ತು ಮಹತ್ವದ ಚರ್ಚೆಗೊಳಗಾಗಿರುವ ಪ್ರಮುಖ ಸಾಹಿತಿಗಳು. ಜ್ಞಾನಪೀಠ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ ಆಧುನಿಕ ಭಾರತದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ನೀಡುವ ಅತ್ಯುನ್ನತ ಪ್ರಶಸ್ತಿಗಳಾಗಿವೆ.

ಸಂಗೀತ

ವೈವಿಧ್ಯಮಯವಾದ ಧಾರ್ಮಿಕ ಸಂಗೀತ, ಜಾನಪದ ಸಂಗೀತ, ಸುಗಮ ಸಂಗೀತ ಮತ್ತು ಇತರೇ ಶಾಸ್ತ್ರೀಯ ಪ್ರಕಾರಗಳು ಭಾರತದ ಸಂಗೀತ ಪ್ರಕಾರಗಳಾಗಿವೆ. ಗೇಯ ಗುಣಗಳನ್ನುಳ್ಳ ಸಾಮವೇದದ ಮಂತ್ರಗಳು ಸಂರಕ್ಷಿಸಲಾಗಿರುವ ಅತ್ಯಂತ ಪ್ರಾಚೀನ ಭಾರತೀಯ ಸಂಗೀತದ ಉದಾಹರಣೆ. ಭಾರತೀಯ ಶಾಸ್ತ್ರೀಯ ಸಂಗೀತ ಪರಂಪರೆಯ ಮೇಲೆ ಹಿಂದೂ ಗ್ರಂಥಗಳ ಗಾಢ ಪ್ರಭಾವವಿದೆ. ಈ ಪರಂಪರೆ ಕರ್ನಾಟಿಕ್ ಮತ್ತು ಹಿಂದೂಸ್ತಾನಿ ಸಂಗೀತ ಎಂಬ ಎರಡು ವಿಭಿನ್ನ ಶೈಲಿಗಳನ್ನು ಒಳಗೊಂಡಿದೆ. ಭಾರತದ ಶಾಸ್ತ್ರೀಯ ಸಂಗೀತ ಹಲವು ಮಧುರ ರಾಗಗಳಿಗೆ ಜನಪ್ರಿಯವಾಗಿದೆ.

ನೃತ್ಯ

ಭಾರತೀಯ ನೃತ್ಯ ಪ್ರಕಾರದಲ್ಲಿ ಜಾನಪದ ಮತ್ತು ಶಾಸ್ತ್ರೀಯ ಎಂಬ ಎರಡು ಪ್ರಬೇಧಗಳಿದ್ದು, ಅವು ವಿವಿಧ ರೂಪದಲ್ಲಿ ಮೈದಾಳಿವೆ. ಪಂಜಾಬ್‌ನ 'ಭಾಂಗ್ರ', ಅಸ್ಸಾಂನ ಬಹು, ಜಾರ್ಖಂಡ್ ಮತ್ತು ಒರಿಸ್ಸಾದ ಚೌ, ರಾಜಾಸ್ತಾನ್‌ನ ಘೂಮರ್, ಗುಜರಾತಿನ ದಾಂಡಿಯಾ ಮತ್ತು ಗರ್ಬ, ಕರ್ನಾಟಕದ ಯಕ್ಷಗಾನ, ಮಹಾರಾಷ್ಟ್ರದ ಲಾವಣಿ, ಗೋವಾದ ದೇಖ್‌ನಿ – ಇವು ಭಾರತದ ಜನಪ್ರಿಯ ಜಾನಪದ ನೃತ್ಯ ಪ್ರಕಾರಗಳು.

ನಿರೂಪಣಾ ತಂತ್ರ ಮತ್ತು ಪೌರಾಣಿಕ ಅಂಶಗಳನ್ನು ಒಳಗೊಂಡಿರುವ ಭಾರತದ ಎಂಟು ನೃತ್ಯ ರೂಪಗಳಿಗೆ ನೃತ್ಯ ಮತ್ತು ನಾಟಕ ಅಕಾಡೆಮಿ ಶಾಸ್ತ್ರೀಯ ನೃತ್ಯದ ಸ್ಥಾನಮಾನ ನೀಡಿದೆ. ಅವುಗಳೆಂದರೆ ತಮಿಳುನಾಡಿನ ಭರತನಾಟ್ಯಂ, ಉತ್ತರ ಪ್ರದೇಶದ ಕಥಕ್, ಕೇರಳದ ಕಥಕ್ಕಳಿ ಮತ್ತು ಮೋಹಿನಿ ಆಟ್ಟಂ, ಆಂಧ್ರಪ್ರದೇಶದ ಕೂಚುಪುಡಿ, ಮಣಿಪುರದ ಮಣಿಪುರಿ, ಒರಿಸ್ಸಾದ ಒಡಿಸ್ಸಿ ಮತ್ತು ಅಸ್ಸಾಂನ ಸಾತ್ರಿಯಾ. ವಿಶ್ವದಲ್ಲಿ ಅತ್ಯಂತ ಪುರಾತನವಾದದ್ದು ಸಮರಾಯ್ ಕಲೆ. ಇದೇ ನೃತ್ಯಪ್ರಕಾರ ಮುಂದೆ ಚೀನಾದಲ್ಲಿ ಕುಂಗ್‌ಫೂ ಎಂಬ ಪ್ರಸಿದ್ಧ ಸಮರ ಕಲೆಯಾಗಿ ಅಭಿವೃದ್ಧಿ ಹೊಂದಿರಬಹುದೆಂಬುದು ಕೆಲವರ ವಾದವಾಗಿದೆ. ಇಂತಹ ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ಭಾರತ ದೇಶದ ಹಿರಿಮೆ–ಗರಿಮೆಗಳನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಡಬೇಕಾದುದು ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ.

ಕೃತಿ–ಕರ್ತೃ ಪರಿಚಯ

ಪ್ರಸ್ತುತ ಲೇಖನವನ್ನು ಶ್ರೀ. ಎನ್.ಬಸವರಾಜು ಅವರು ರಚಿಸಿದ್ದಾರೆ. ಶ್ರೀಯುತರು ಕನ್ನಡ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ಪ್ರಸ್ತುತ ಇವರು ತಾಳವಾಡಿಯಲ್ಲಿರುವ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೊರನಾಡು ಕನ್ನಡ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸುವ ಇವರು ಸಾಹಿತ್ಯಾಸಕ್ತರು. 'ನಮ್ಮ ಪರಂಪರೆ ಮತ್ತು ಸಂಸ್ಕೃತಿ' ಈ ಲೇಖನವನ್ನು ಭಾರತೀಯ ಸಂಸ್ಕೃತಿಯ ಹಿರಿಮೆ–ಗರಿಮೆಗಳನ್ನು ಯುವ ಜನಾಂಗವು ಮೈಗೂಡಿಸಿಕೊಳ್ಳಲೆಂಬ ಸದುದ್ದೇಶದಿಂದ ರಚಿಸಲಾಗಿದೆ

10th_Kannada_Reader1-5.indd 51 03-04-2019 14:07:56

ಪದಗಳ ಅರ್ಥ

ಅನನ್ಯ – ಅದ್ವಿತೀಯ, ಬೇರೆಯಲ್ಲದ; ವಿಕಸನ – ವೃದ್ಧಿ, ವಿಕಾಸ, ಅರಳುವಿಕೆ; ಅಧೀನ – ಕೈಕೆಳಗಿರುವ; ವಸಾಹತು – ಪಾಳೆಯ, ಬೀಡು; ನಿಷ್ಠೆ–ನಂಬಿಕೆ; ನಿರ್ಣಾಯಕ – ಅಂತಿಮ; ಶ್ರದ್ಧೆ – ವಿಶ್ವಾಸ, ನಂಬಿಕೆ, ನಿಷ್ಠೆ, ಗೌರವ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಂಸ್ಕೃತಿ ಎಂದರೇನು?
2. ಭಾರತೀಯ ಸಂಸ್ಕೃತಿ ಹೇಗೆ ರೂಪುಗೊಂಡಿದೆ?
3. ಭಾರತ ಯಾವ ಧರ್ಮಗಳಿಗೆ ಜನ್ಮಭೂಮಿಯಾಗಿತ್ತು?
4. ಭಾರತೀಯ ಜನರ ಬದುಕಿನಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ಯಾವುದು?
5. ನಾವು ಬಳಸುವ ಗೌರವ ಸಂಬೋಧನಾ ಪದಗಳ ಬಗ್ಗೆ ಬರೆಯಿರಿ.
6. 'ದ್ರೀ' ಹಬ್ಬ ಎಂದರೇನು ?
7. ಭಾರತದ ರಾಷ್ಟ್ರೀಯ ಹಬ್ಬಗಳು ಯಾವುದು?
8. ಅತ್ಯಂತ ಪ್ರಾಚೀನ ಭಾರತೀಯ ಸಂಗೀತ ಪ್ರಕಾರ ಯಾವುದು ?
9. ಭಾರತೀಯ ಸಂಗೀತ ಪರಂಪರೆಯ ಮೇಲೆ ಯಾವ ಪ್ರಭಾವವಿದೆ ?
10. ಯಕ್ಷಗಾನ ಯಾವ ರಾಜ್ಯದ ಜನಪದ ಕಲಾ ಪ್ರಕಾರ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಭಾರತೀಯ ಸಂಸ್ಕೃತಿ ಹೇಗೆ ವೈವಿಧ್ಯಮಯವಾಗಿದೆ ?
2. ಭಾರತೀಯ ಸಮಾಜದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ ?
3. ಅಪಾಟಾನಿಸ್ ಬುಡಕಟ್ಟು ಜನರ ಹಬ್ಬ ಆಚರಣೆಯ ಬಗ್ಗೆ ತಿಳಿಸಿ.
4. ಭಾರತೀಯ ವೇಷ–ಭೂಷಣಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ.
5. ಸಾಹಿತ್ಯ ಪ್ರಕಾರಗಳು ಬೆಳೆದು ಬಂದ ಬಗೆಯ ಬಗ್ಗೆ ಚರ್ಚಿಸಿ.
6. ಭಾರತೀಯ ಸಾಹಿತ್ಯ ಕಂಡ ಪ್ರಸಿದ್ಧ ಕವಿಗಳಾರು ?
7. ಭಾರತೀಯ ಸಂಗೀತದ ಪ್ರಕಾರಗಳಾವುವು?
8. ಭಾರತೀಯ ನೃತ್ಯದ ಪ್ರಬೇಧಗಳಾವುವು ?
9. ಪುರಾತನ ಕಲೆಯ ಬಗ್ಗೆ ತಿಳಿಸಿ.

III.ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭಾರತೀಯ ಕುಟುಂಬ ವ್ಯವಸ್ಥೆಯ ಬಗ್ಗೆ ವಿವರಿಸಿ.
2. ಭಾರತೀಯರ ವಿವಾಹ ಪದ್ಧತಿಯನ್ನು ವಿವರಿಸಿ.
3. ಭಾರತೀಯ ಹಬ್ಬಗಳ ಬಗ್ಗೆ ವಿವರವಾಗಿ ಬರೆಯಿರಿ.
4. ಭಾರತೀಯ ಸಾಹಿತ್ಯದ ಬಗ್ಗೆ ವಿವರಿಸಿ.
5. ಭಾರತೀಯ ನೃತ್ಯ ಪ್ರಕಾರಗಳ ಬಗ್ಗೆ ವಿವರಿಸಿ.

ಭಾಷಾಭ್ಯಾಸ

1. ಈ ಕೆಳಕಂಡ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಪುರಾತನ	x
ಅವನತಿ	x
ಶ್ರೇಷ್ಠ	x
ನಂಬಿಕೆ	x
ಗೌರವ	x
ಉತ್ಸಾಹ	x
ಬಂಧನ	x
ಸಾಮಾನ್ಯ	x

10th_Kannada_Reader1-5.indd 52 03-04-2019 14:07:56

2. ಈ ಕೆಳಕಂಡ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಇತಿಹಾಸ –

ಪ್ರಾಚೀನ –

ವಿಶ್ವ –

ಧರ್ಮ –

ಪತ್ನಿ –

ತೀರ್ಮಾನ –

ವಿವಾಹ –

ಚಿಹ್ನೆ –

3. ಈ ಕೆಳಗಿನ ಜೋಡುಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ನೆರೆ–ಹೊರೆ, ಆಚಾರ–ವಿಚಾರ, ನೀತಿ–ನಿಯಮ, ಹಬ್ಬ–ಹರಿದಿನ, ಉಡುಗೆ–ತೊಡುಗೆ.

4. ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.

ಧರ್ಮನಿಷ್ಠೆ –

ತಲೆಬಾಗು –

ಸಹಸ್ರಮಾನ –

ಜನಪ್ರಿಯ –

ದೀಪಾವಳಿ –

ಚಟುವಟಿಕೆ

1. ಯೂರೋಪಿಯನ್ ದೇಶಗಳ ನೃತ್ಯ ಪ್ರಕಾರಗಳನ್ನು ಅಧ್ಯಯನ ಮಾಡಿ.
2. ಆಫ್ರಿಕನ್ ದೇಶಗಳ ಸಂಗೀತ ಉಪಕರಣಗಳ ಸಮೀಕ್ಷೆ ನಡೆಸಿ.



10th_Kannada_Reader1-5.indd 53 03-04-2019 14:07:56

ಘಟಕ ಮೂರು

ಉಪಪಠ್ಯ

ಐತಿಹಾಸಿಕ ತಾಣ ತಲಕಾಡು

– ಡಾ. ತಮಿಳ್ ಸೆಲ್ವಿ



ತಲಕಾಡು ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳಗಳಲ್ಲಿ ಒಂದು. ಇದು ಮೈಸೂರು ಜಿಲ್ಲೆಯ ಪ್ರಮುಖ ಯಾತ್ರಾಸ್ಥಳವೂ ಆಗಿದೆ. ಮೈಸೂರಿನಿಂದ ಸುಮಾರು 45 ಕಿ.ಮೀ. ಹಾಗೂ ಬೆಂಗಳೂರಿನಿಂದ 120 ಕಿ.ಮೀ. ದೂರದಲ್ಲಿದೆ. ಈ ಎರಡೂ ಪ್ರಮುಖ ನಗರಗಳಿಂದ ತಲಕಾಡಿಗೆ ಸಾರಿಗೆ ವ್ಯವಸ್ಥೆ ಇದ್ದು, ರಸ್ತೆ ಮೂಲಕ ಸುಲಭವಾಗಿ ತಲುಪಬಹುದು. ಕಾವೇರಿ ನದಿಯ ಎಡದಂಡೆಯಲ್ಲಿರುವ ಈ ಊರು ಜಲದುರ್ಗದಂತಿದ್ದು, ಮೂರೂ ಕಡೆಗಳಿಂದಲೂ ನೀರಿನಿಂದ ಸುತ್ತುವರೆಯಲ್ಪಟ್ಟಿದೆ. ನದಿಗೆ ಕಟ್ಟಿರುವ ಅಣೆಕಟ್ಟಿನ ಕಾರಣದಿಂದ ತುಂಬಿರುವ ಮರಳು ಹಾಗೂ ಇಲ್ಲಿನ ಐತಿಹಾಸಿಕ ದೇವಾಲಯಗಳಿಂದ ಈ ಊರು ಜನರನ್ನು ಆಕರ್ಷಿಸುತ್ತಿದೆ. ಕಾವೇರಿ ನದಿಯು ಇಲ್ಲಿ ತೀಕ್ಷ್ಣವಾದ ತಿರುವು ಪಡೆದುಕೊಳ್ಳುತ್ತದೆ. ಇಲ್ಲಿನ ನದಿ ತೀರ ಮತ್ತು ಅದರ ಸುತ್ತಲಿನ ದೃಶ್ಯಗಳು ನೋಡಲು ನಯನ ಮನೋಹರವಾಗಿ ಕಾಣಿಸುತ್ತವೆ. ಎತ್ತ ನೋಡಿದರೂ ಮರಳ ರಾಶಿ. ಮಂದಗತಿಯಲ್ಲಿ ಹರಿಯುವ ತಿಳಿನೀರಿನಿಂದ ಕೂಡಿದ ಕಾವೇರಿ ನದಿ! ನೀಲಾಗಸದ ಹಿನ್ನೆಲೆಯಲ್ಲಿ ಈ ನದಿಯಲ್ಲಿ ತೆಪ್ಪದ ದೋಣಿಯಲ್ಲಿ ವಿಹಾರ ಮಾಡುವುದು ಪ್ರವಾಸಿಗರಿಗೆ ಪ್ರಿಯವಾಗುತ್ತದೆ.



10th_Kannada_Reader1-5.indd 54 03-04-2019 14:07:57

ತಲಕಾಡು ಪುರಾತನ ಹಾಗೂ ಕಲಾತ್ಮಕ ಸುಂದರ ದೇವಾಲಯಗಳಿಂದ ಕೂಡಿದ್ದು, ಭಕ್ತರನ್ನೂ, ಪ್ರವಾಸಿಗರನ್ನೂ, ಇತಿಹಾಸಜ್ಞರನ್ನೂ ಒಟ್ಟಿಗೇ ಸೆಳೆಯುವ ಈ ಸ್ಥಳದ ಸುತ್ತಲೂ ಹಲವಾರು ಕಥೆಗಳೂ, ಸ್ಥಳಪುರಾಣಗಳೂ ಹೆಣೆದುಕೊಂಡಿವೆ. ತಲಕಾಡು ಪ್ರಾಚೀನ ಕಾಲದಲ್ಲಿ ದಟ್ಟವಾದ ಕಾಡುಗಳಿಂದ ತುಂಬಿದ್ದು, ಆ ಕಾರಣದಿಂದಲೇ ಈ ಊರಿಗೆ ಈ ಹೆಸರು ಬಂದಿರಬಹುದು. ತಟ್ಕೈ, ತಳೆ ಎಂದರೆ ಚಿಗುರು ಎಂದರ್ಥ. ಕಾಡು ಎಂದರೆ ಮರಗಳ ಸಮೂಹದಿಂದ ಕೂಡಿರುವ ಪ್ರದೇಶ ಎಂದು ಅರ್ಥ. ಹಸಿರು ಬಣ್ಣದ ಎಲೆಗಳಿಂದ ಕೂಡಿದ ದಟ್ಟವಾದ ಪ್ರದೇಶ ಎಂಬ ಕಾರಣದಿಂದ ಈ ಊರಿಗೆ ತಳೆಕಾಡು ಎಂಬ ಹೆಸರಾಗಿರಬೇಕು. ಕ್ರಮೇಣ ಅದು ತಲಕಾಡು ಎಂದು ಬದಲಾಯಿತು.

ತಲಕಾಡಿನ ಶಿವನಿಗೆ ಗಜಾರಣ್ಯನಾಥ ಎಂಬ ಹೆಸರೂ ಇದೆ. ಇದಕ್ಕೂ ಈ ಊರಿಗೆ ತಲಕಾಡು ಎಂಬ ಹೆಸರು ಹೇಗೆ ಬಂತೆಂಬುದಕ್ಕೂ ಒಂದು ದಂತಕಥೆಯಿದ್ದರೆ, ಇಡೀ ಊರು ಮರಳಿನಿಂದ ಮುಚ್ಚಿ ಹೋಗಿರುವುದಕ್ಕೆ ಮತ್ತೊಂದು ದಂತಕಥೆ ಇದೆ.

ಕಾವೇರಿ–ಕಪಿಲಾ ನದಿಗಳ ಸಂಗಮ ಸ್ಥಳದಲ್ಲಿರುವ ಗಜಾರಣ್ಯ ಕ್ಷೇತ್ರದಲ್ಲಿ ತಪಸ್ಸು ಮಾಡಲು ವಸಿಷ್ಠ ಕುಲದ ಸೋಮದತ್ತ ಎಂಬ ಋಷಿ ಬರುತ್ತಾನೆ. ಆದರೆ ಒಂದು ಕಾಡಾನೆಯಿಂದ ಸೋಮದತ್ತ ಹತನಾಗುತ್ತಾನೆ. ಮುಂದಿನ ಜನ್ಮದಲ್ಲಿ ಆನೆಯಾಗಿ ಹುಟ್ಟಿ, ಆ ಸ್ಥಳದಲ್ಲಿರುವ ಲಿಂಗಕ್ಕೆ ಹೂಗಳನ್ನು ತಂದು ಅರ್ಪಿಸುತ್ತಿರುತ್ತದೆ. ಆ ಲಿಂಗವು ಪೊದೆಗಳಿಂದ ಆವೃತವಾಗಿದ್ದು, ಯಾರಿಗೂ ಕಾಣಿಸುತ್ತಿರಲಿಲ್ಲ. ತಳ ಮತ್ತು ಕಾಡ ಎಂಬ ಇಬ್ಬರು ಬೇಡ ಸಮುದಾಯದ ಸಹೋದರರು ಆ ಪೊದೆಯನ್ನು ಕಡಿಯುತ್ತಿದ್ದಾಗ, ಮರದ ಮರೆಯಲ್ಲಿದ್ದ ಶಿವಲಿಂಗವನ್ನು ತಿಳಿಯದೆ ಭಗ್ನ ಮಾಡುತ್ತಾರೆ. ಅವರ ಕೊಡಲಿ ತಾಗಿ, ಲಿಂಗದಿಂದ ರಕ್ತ ಸುರಿಯಲಾರಂಭಿಸುತ್ತದೆ. ಇದನ್ನು ಕಂಡು ಅವರು ಹೆದರಿ, ಭಯದಿಂದ ಶಿವನನ್ನು ಪ್ರಾರ್ಥಿಸುತ್ತಾರೆ. ಆಗ ಶಿವಲಿಂಗದಿಂದ ಒಂದು ಧ್ವನಿ ಅವರಿಗೆ ಕೇಳಿಸುತ್ತದೆ. 'ಹೆದರಬೇಡಿ. ನಿಮ್ಮನ್ನು ರಕ್ಷಿಸುತ್ತೇನೆ. ಹತ್ತಿಯನ್ನು ತೆಗೆದು, ಇಲ್ಲಿನ ಅರಳಿ ಮರದ ಹಾಲಿನಲ್ಲಿ ಅದ್ದಿ ಗಾಯವಾಗಿರುವ ಜಾಗದಲ್ಲಿಡಿ. ಮುಂದೆ ನೀವೇ ಈ ಪ್ರಾಂತ್ಯದ ಪಾಲಕರಾಗಿರಿ' ಎಂದು ಶಿವನು ಹೇಳುತ್ತಾನೆ. ಹೀಗೆ ಗಾಯಗೊಂಡ ಲಿಂಗರೂಪಿ ಶಿವನಿಗೆ ಗಿಡಮೂಲಿಕೆಯ ಸುಷ್ರೂಷೆ ನಡೆಯುತ್ತದೆ. ಶಿವನು ತನ್ನ ಗಾಯಕ್ಕೆ ತಾನೇ ಮದ್ದನ್ನು ಸೂಚಿಸಿದ ಕಾರಣದಿಂದ ಇಲ್ಲಿಯ ಶಿವನಿಗೆ ವೈದ್ಯೇಶ್ವರನೆಂದು ಹೆಸರಾಗುತ್ತದೆ. ಕಡೆಯಲ್ಲಿ ಶಿವನು ಪ್ರತ್ಯಕ್ಷನಾಗಿ ಎಲ್ಲರಿಗೂ ಮೋಕ್ಷವನ್ನು ಕರುಣಿಸುತ್ತಾನೆ. ಆನೆಯ ಜನ್ಮ ಪಡೆದಿದ್ದ ಸೋಮದತ್ತ ಋಷಿ ಮತ್ತು ಆತನ ಶಿಷ್ಯರು ಇಲ್ಲಿ ಶಿವನನ್ನು ದರ್ಶಿಸಿ, ಮೋಕ್ಷ ಪಡೆದದ್ದರಿಂದ ಇದು ಗಜಾರಣ್ಯ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಇಲ್ಲಿ ನೆಲೆ ನಿಂತ ಶಿವನು ಗಜಾರಣ್ಯನಾಥನೆಂದೂ, ವೈದ್ಯೇಶ್ವರ ಅಥವಾ ವೈದ್ಯನಾಥೇಶ್ವರನೆಂದೂ ಪ್ರಖ್ಯಾತನಾಗುತ್ತಾನೆ. ಅಂದಿನಿಂದ ಆ ಜಾಗಕ್ಕೆ, ಆ ಸಹೋದರರ ಹೆಸರಿನಿಂದ ತಳಕಾಡು ಎಂಬ ಹೆಸರು ಬಂದಿತು ಎಂದೂ ಹೇಳಲಾಗುತ್ತದೆ. ಈ ಕಥೆಯಲ್ಲಿ ಗಂಗರ ಮೂಲದ ಬಗೆಗೆ ಕೆಲವು ಸತ್ಯಾಂಶಗಳೂ ಗೋಚರವಾಗುತ್ತವೆ. ಗಂಗರ ಮೂಲ ವಂಶಸ್ಥರು ಬೇಡರಾಗಿದ್ದರೆಂಬುದನ್ನು ಇದರಿಂದ ಅರಿಯಬಹುದು. ಗಂಗರ ರಾಜಲಾಂಛನವು ಆನೆಯಾಗಿರುವುದು ಇದೇ ಕಾರಣದಿಂದ. ವೈದ್ಯನಾಥೇಶ್ವರನ ಜೊತೆ ಮನೋನ್ಮಣಿ ಅಮ್ಮನವರನ್ನೂ ಇಲ್ಲಿ ದರ್ಶಿಸಬಹುದು.

ವೈದ್ಯನಾಥೇಶ್ವರ ದೇವಾಲಯವು ತಲಕಾಡಿನಲ್ಲಿರುವ ಪ್ರಮುಖ ದೇವಾಲಯವಾಗಿದೆ. ಮಾಧವ ಮಂತ್ರಿಯು ಈ ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯವು ಗಂಗರ ಕಾಲದ ಭವ್ಯ ದೇಗುಲಗಳಲ್ಲಿ ಒಂದಾಗಿದೆ. ಕಣಶಿಲೆಯಿಂದ ನಿರ್ಮಾಣವಾಗಿರುವ ಈ ದೇವಾಲಯದಲ್ಲಿ ಗಂಗರ ಕಾಲದ ಸುಂದರ ಶಿಲ್ಪಕಲೆಯನ್ನು ಕಾಣಬಹುದು. ವೈದ್ಯೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ಸುಂದರವಾದ ಶಿವಲಿಂಗದ ಮೂರ್ತಿಯಿದೆ. ಇಲ್ಲಿರುವ ಕಂಚಿನ ನಟರಾಜ ಹಾಗೂ ಉತ್ಸವ ಮೂರ್ತಿಗಳೂ ಆಕರ್ಷಕವಾಗಿವೆ. ಹೊರಭಿತ್ತಿಯ ಬಲ ಭಾಗದಲ್ಲಿ ಮೂಷಿಕ ವಾಹನನಾದ ಗಣಪನ ಸುಂದರ ಕೆತ್ತನೆಯಿದೆ. ಪ್ರಾಕಾರದಲ್ಲಿ ಇತರ ಕೆಲವು ಸಣ್ಣ ಸಣ್ಣ ಗುಡಿಗಳೂ ಇವೆ. ಅಡ್ಡಪಟ್ಟಿಕೆಗಳಲ್ಲಿ ಹಲವು ಸುಂದರ ಶಿಲ್ಪಗಳಿವೆ.

ಮುಖ್ಯದ್ವಾರದ ಬಳಿ ಸುಂದರ ಕೆತ್ತನೆಯ 10 ಅಡಿ ಎತ್ತರದ ದ್ವಾರಪಾಲಕರ ಗುಡಿಗಳಿವೆ. ಇಷ್ಟು ಎತ್ತರವಾದ ದ್ವಾರಪಾಲಕರ ಮೂರ್ತಿಗಳನ್ನು ಮತ್ತಾವ ದೇವಾಲಯದಲ್ಲೂ ಕಾಣಲು ಸಾಧ್ಯವಿಲ್ಲ. ದ್ರಾವಿಡ–ಹೊಯ್ಸಳ ಶೈಲಿಯ ಮಿಶ್ರಣದಲ್ಲಿ ಈ ದೇವಾಲಯದ ವಾಸ್ತುವನ್ನು ನಿರ್ಮಿಸಲಾಗಿದೆ.

10th_Kannada_Reader1-5.indd 55 03-04-2019 14:07:57

ಪಂಚಲಿಂಗಗಳ ಪೈಕಿ ವೈದ್ಯೇಶ್ವರ, ಪಾತಾಳೇಶ್ವರ, ಮರಳೇಶ್ವರ ಎಂಬ ಮೂರು ದೇವಾಲಯಗಳು ತಲಕಾಡಿನಲ್ಲೂ; ಉಳಿದೆರಡು ದೇವಾಲಯಗಳಾದ ಅರ್ಕೇಶ್ವರ ದೇವಾಲಯವು ತಲಕಾಡಿನಿಂದ ನಾಲ್ಕು ಕಿ.ಮೀ. ದೂರದಲ್ಲಿರುವ ವಿಜಯಪುರದಲ್ಲೂ; ಮಲ್ಲಿಕಾರ್ಜುನ ದೇವಾಲಯವು ಮುಡುಕುತೊರೆಯಲ್ಲೂ ಇದೆ. ವೈದ್ಯೇಶ್ವರ ದೇವಾಲಯದ ನಾಲ್ಕು ದಿಕ್ಕುಗಳಲ್ಲೂ ಇರುವಂತೆ ಉಳಿದ ಈ ನಾಲ್ಕು ದೇವಾಲಯಗಳನ್ನು ನಿರ್ಮಿಸಲಾಗಿದೆ. ಎಂದರೆ, ಇದರ ಪೂರ್ವಕ್ಕೆ ಅರ್ಕೇಶ್ವರ ದೇವಾಲಯವೂ, ದಕ್ಷಿಣಕ್ಕೆ ಪಾತಾಳೇಶ್ವರ ದೇವಾಲಯವೂ, ಪಶ್ಚಿಮಕ್ಕೆ ಮರಳೇಶ್ವರ ದೇವಾಲಯವೂ, ಉತ್ತರಕ್ಕೆ ಮಲ್ಲಿಕಾರ್ಜುನ ದೇವಾಲಯವೂ ಇದೆ.

ಇವಲ್ಲದೆ, ತಲಕಾಡಿನಲ್ಲಿ ಕೀರ್ತಿನಾರಾಯಣ, ಕಾಳಿಕಾಂಬ, ವೀರಭದ್ರೇಶ್ವರ, ಕರಿಬಸವಸ್ವಾಮಿ, ಊರಿನ ಮುಂಭಾಗದಲ್ಲೇ ಇರುವ ಈಶ್ವರ ಗುಡಿ ಮುಂತಾದ ದೇವಾಲಯಗಳಿವೆ. ಒಂದು ಕಾಲದಲ್ಲಿ ಇಲ್ಲಿ ಸುಮಾರು 30 ದೇವಾಲಯಗಳಿದ್ದವು. ಕೀರ್ತಿನಾರಾಯಣ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದೆ. ತಲಕಾಡಿನಲ್ಲಿ ಹೊಯ್ಸಳರಿಂದ ನಿರ್ಮಿತವಾಗಿರುವ ಏಕ ಮಾತ್ರ ದೇವಾಲಯ ಇದಾಗಿದೆ. ಇದನ್ನು ಇತ್ತೀಚೆಗೆ ನವೀಕರಣ ಮಾಡಲಾಗಿದೆ.

ಪಂಚಲಿಂಗ ದರ್ಶನ ಇಲ್ಲಿನ ವಿಶೇಷವಾಗಿದೆ. ಇತಿಹಾಸ ಪ್ರಸಿದ್ಧವಾದ ತಲಕಾಡಿನ ಪಂಚಲಿಂಗ ದರ್ಶನ ಉತ್ಸವ ಅಪರೂಪಕ್ಕೆ ಮಾತ್ರ ನಡೆಯುತ್ತದೆ. ಮೈಸೂರು ಪ್ರಾಂತ್ಯದ ಪ್ರಮುಖ ಧಾರ್ಮಿಕ ಉತ್ಸವ ಎನಿಸಿರುವ ತಲಕಾಡು ಪಂಚಲಿಂಗ ದರ್ಶನವು ಕಾರ್ತಿಕ ಮಾಸದಲ್ಲಿ ಬರುವ ಐದನೇ ಸೋಮವಾರವು ಅಮಾವಾಸ್ಯೆಯೂ ಆಗಿರುವ ದಿನದಂದು, ಸೂರ್ಯ–ಚಂದ್ರರಿಬ್ಬರೂ ವೃಶ್ಚಿಕ ರಾಶಿಯಲ್ಲಿ ಸೇರಿದಾಗ ಕುಹೂ ಯೋಗ ಮತ್ತು ವಿಶಾಖ ನಕ್ಷತ್ರಗಳು ಒಟ್ಟಿಗೆ ಬಂದಾಗ ನಡೆಯುತ್ತದೆ. ಅಂದು ಇಲ್ಲಿ ಪಂಚಲಿಂಗ ದರ್ಶನಕ್ಕಾಗಿ ಲಕ್ಷಾಂತರ ಭಕ್ತರು ಸೇರುತ್ತಾರೆ. ಆ ದಿನ ದರ್ಶನ ಮಹೋತ್ಸವಕ್ಕೆ ಏರ್ಪಾಟು ನಡೆಯುತ್ತದೆ. ಈ ದಿನವು ಪ್ರತಿ ವರ್ಷವೂ ಬರುವುದಿಲ್ಲ. 3, 5, 7, 12, 13 ಹೀಗೆ ಹಲವು ವರ್ಷಗಳ ಅಂತರದಲ್ಲಿ ಮಾತ್ರ ಬರುತ್ತದೆ. ಕೆಲವೊಮ್ಮೆ ಮೂರು ಅಥವಾ ನಾಲ್ಕು ವರ್ಷಗಳ ಅಂತರದಲ್ಲಿ ಬಂದರೆ ಮತ್ತೆ ಕೆಲವೊಮ್ಮೆ 14–15 ವರ್ಷಗಳಿಗೊಮ್ಮೆ ಬರುತ್ತದೆ. ಈ ಹಿಂದೆ, 1908, 1915, 1925, 1938, 1952, 1959, 1966, 1979, 1986 ಹಾಗೂ 1993ರಲ್ಲಿ 2009ರಲ್ಲಿ ಈ ಉತ್ಸವ ನಡೆದಿದೆ. ಈ ಕಾರಣದಿಂದಾಗಿಯೇ ಇಲ್ಲಿನ ಪಂಚಲಿಂಗ ದರ್ಶನ ಉತ್ಸವವು ಭಾರೀ ಜನಪ್ರಿಯತೆಯನ್ನು ಪಡೆದುಕೊಂಡಿದೆ.

ಪಂಚಲಿಂಗ ದರ್ಶನದ ಸಂದರ್ಭದಲ್ಲಿ ಮರಳಿನಿಂದ ಮುಚ್ಚಿ ಹೋಗಿರುವ ಪಾತಾಳೇಶ್ವರ, ವೈದ್ಯನಾಥೇಶ್ವರ ದೇವಾಲಯಗಳಲ್ಲಿ ಮರಳನ್ನು ತೆಗೆದು, ಪೂಜೆಗೆ ಸಿದ್ಧ ಮಾಡಲಾಗುತ್ತದೆ. ಎಲ್ಲ ಮುಗಿದ ಮೇಲೆ ಇದನ್ನು ಮತ್ತೆ ಮರಳಿನಿಂದ ಮುಚ್ಚಿ ಬಿಡುತ್ತಾರೆ. ತಲಕಾಡಿನ ಹಲವು ದೇವಾಲಯಗಳು ಮರಳಿನಲ್ಲಿ ಪ್ರತಿ ವರ್ಷವೂ ಮುಚ್ಚಿ ಹೋಗುತ್ತಿರುತ್ತವೆ. ಅವುಗಳನ್ನು ಕಾಪಾಡುವ ಪ್ರಯತ್ನವನ್ನು ನಿರಂತರವಾಗಿ ಮಾಡಲಾಗುತ್ತದೆ.

ಇತಿಹಾಸ ಹಾಗೂ ಪುರಾಣ ಪ್ರಸಿದ್ಧವಾದ ಈ ಊರನ್ನು ಆಳಿದ ಪ್ರಾಚೀನ ಹಾಗೂ ಪ್ರಸಿದ್ಧ ಅರಸು ಮನೆತನಗಳಲ್ಲಿ ಗಂಗರು ಪ್ರಮುಖರಾದವರು. ಇವರು ಕ್ರಿ.ಶ. ನಾಲ್ಕನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೂ ಕರ್ನಾಟಕವನ್ನು ಆಳಿದರು. ಇವರು ಕ್ರಿ.ಶ 350–ರಿಂದ 600ರವರೆಗೂ ಸ್ವತಂತ್ರ ಅರಸರಾಗಿಯೂ; ನಂತರ ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟ ಅರಸರ ಸಾಮಂತರಾಗಿಯೂ ಆಳ್ವಿಕೆ ಮಾಡಿದ್ದಾರೆ. ಗಂಗರು ಸುಮಾರು 600 ವರ್ಷಗಳ ಕಾಲ ಕರ್ನಾಟಕವನ್ನು ಆಳಿದರು. ಗಂಗರ ಶಾಸನಗಳ ಆಧಾರದಿಂದ ತಮಿಳುನಾಡಿನ ಪೇರೂರು(ಇಂದಿನ ಕೊಯಮತ್ತೂರು) ಇವರ ಮೂಲ ಎಂದು ಹೇಳಲಾಗುತ್ತದೆ. ಗಂಗರಾಜ್ಯವು ಪ್ರಮುಖವಾಗಿ ಇಂದಿನ ಕೋಲಾರ, ಮೈಸೂರು, ಮಂಡ್ಯ, ಬೆಂಗಳೂರು, ನೆಲಮಂಗಲ, ತುಮಕೂರು ಮೊದಲಾದ ಪ್ರಾಂತ್ಯಗಳನ್ನು ಒಳಗೊಂಡಿತ್ತು. ಈ ಪ್ರದೇಶವನ್ನು ಗಂಗವಾಡಿ ಎಂದು ಕರೆಯಲಾಗುತ್ತಿತ್ತು. ಕ್ರಮೇಣ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳೂ ಕೂಡ ಗಂಗವಾಡಿಯೊಳಗೆ ಸೇರಿಕೊಂಡವು. ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಪ್ರಾಂತ್ಯಗಳನ್ನೂ ಕೂಡ ಗಂಗರು ತಮ್ಮ ವಶಪಡಿಸಿಕೊಂಡರು. ತಲಕಾಡು ಇವರ ಮುಖ್ಯ ರಾಜಧಾನಿಯಾಗಿತ್ತು. ಇಂದಿನ ಕೋಲಾರವು ಇವರ ಮೊದಲಿನ ರಾಜಧಾನಿಯಾಗಿತ್ತು. ಕೋಲಾರದ ಹಿಂದಿನ ಹೆಸರು ಕುವಳಾಲಪುರ. ನಂತರ ತಲಕಾಡಿಗೆ ಇವರು ರಾಜಧಾನಿಯನ್ನು ಬದಲಾಯಿಸಿದರು. ಅವಿನೀತ ಅರಸನ ಆಳಿಕೆಯ ಅವಧಿಯಲ್ಲಿ, ಕ್ರಿ.ಶ.469–529ರ

10th_Kannada_Reader1-5.indd 56 03-04-2019 14:07:57

ನಡುವೆ ಈ ಬದಲಾವಣೆಯು ನಡೆಯಿತು. ಗಂಗ ವಂಶದ ಮುಂದಿನ ಎಲ್ಲ ಅರಸರ ರಾಜಧಾನಿಯೂ ಇದೇ ಆಗಿತ್ತು. ನಂತರ ಗಂಗರನ್ನು 'ತಲಕಾಡಿನ ಗಂಗರು' ಎಂದೇ ಕರೆಯತೊಡಗಿದರು. ಮಣ್ಣೆ(ಮಾನ್ಯಪುರ) ಮತ್ತು ಮನಕುಂದ ಪ್ರದೇಶಗಳು ಇವರ ಪ್ರಾದೇಶಿಕ ರಾಜಧಾನಿಗಳಾಗಿದ್ದವು.

ನಂತರ ಚೋಳರು ಗಂಗವಾಡಿಯನ್ನು ಕ್ರಿ.ಶ. 1004ರಲ್ಲಿ ತಮ್ಮ ವಶಪಡಿಸಿಕೊಂಡರು. ಆಗ ಈ ಊರಿಗೆ ಚೋಳರು ರಾಜರಾಜಪುರ ಎಂದು ಹೆಸರಿಟ್ಟರು. ಸುಮಾರು 100 ವರ್ಷಗಳ ನಂತರ ಹೊಯ್ಸಳ ಅರಸ ವಿಷ್ಣುವರ್ಧನನು ಇದನ್ನು ಚೋಳರಿಂದ ತನ್ನ ವಶಪಡಿಸಿಕೊಂಡು ಆಳ್ವಿಕೆ ನಡೆಸಿದನು. ಆಗ ತಲಕಾಡಿಗೆ ಸೇರಿದ್ದ ಏಳು ಪಟ್ಟಣಗಳನ್ನೂ ವಶಪಡಿಸಿಕೊಂಡನು. ಅದರಲ್ಲಿ ಮಾಲಂಗಿ ಪಟ್ಟಣವೂ ಒಂದು. ಅನಂತರ ವಿಜಯನಗರದ ಅರಸರು, ಆಮೇಲೆ ಮೈಸೂರು ಅರಸರು ಈ ಪ್ರಾಂತ್ಯವನ್ನು ತಮ್ಮ ವಶಪಡಿಸಿಕೊಂಡು ಆಡಳಿತ ನಡೆಸಿದರು. 1610ರಲ್ಲಿ, ಮೈಸೂರು ರಾಜರು ತಲಕಾಡನ್ನು ವಶಪಡಿಸಿಕೊಂಡರು.

ವಿಷ್ಣುವರ್ಧನನು ತಲಕಾಡನ್ನು ವಶಪಡಿಸಿಕೊಂಡಾಗ ಈ ಊರು ಮರಳುಮಯವಾಗಿರಲಿಲ್ಲ. ಆತ ತಲಕಾಡನ್ನು ಗೆದ್ದ ಮೇಲೆ, ತನ್ನ ವಿಜಯದ ಸ್ಮರಣಾರ್ಥ ಇಲ್ಲಿ ಕೀರ್ತಿನಾರಾಯಣ ದೇಗುಲವನ್ನು ನೆಲಮಟ್ಟದಲ್ಲಿಯೇ ನಿರ್ಮಿಸಿದನು.

1342ರಲ್ಲಿ ವಿಜಯನಗರದ ಅರಸರ ಪರವಾಗಿ ಅಲ್ಲಿ ಆಡಳಿತ ನಡೆಸುತ್ತಿದ್ದ ಮಾಧವ ಮಂತ್ರಿಯು ಊರಿನ ಅಂಚಿನಲ್ಲಿ ಪ್ರಶಾಂತವಾಗಿ ಹರಿಯುತ್ತಿದ್ದ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿಸಿದ. ಪರಿಣಾಮವಾಗಿ ಊರಿನಲ್ಲಿ ಮರಳು ಶೇಖರವಾಗತೊಡಗಿತು. ಇದೇ ವಾಸ್ತವ ಸಂಗತಿ. ಕಡೆಗೆ ಊರಾಗಿದ್ದ ತಲಕಾಡು ಮರಳ ಗುಡ್ಡವಾಗಿ ಪರಿಣಮಿಸಿತು. 16ನೇ ಶತಮಾನದಲ್ಲಿ ಈ ಊರಿನಲ್ಲಿ ಪೂರ್ತಿಯಾಗಿ ಮರಳು ತುಂಬಿಕೊಂಡಿತು. ಬಹುಶಃ ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದಿಂದ ಈ ಊರು ಮರಳುಮಯವಾಗಿರಬೇಕು. ಮಾಧವ ಮಂತ್ರಿಯು ಈ ಊರಿನಲ್ಲಿ ಅಣೆಕಟ್ಟು ನಿರ್ಮಾಣ ಮಾಡುವವರೆಗೂ ಈ ಊರಿನಲ್ಲಿ ಮರಳು ತುಂಬಿಕೊಂಡಿರಲಿಲ್ಲ. ಸಹಜವಾಗಿತ್ತು. ಆ ಕಾರಣದಿಂದಲೇ ಇದು ಗಂಗರ ರಾಜಧಾನಿಯೂ, ಅವರ ಆಡಳಿತದ ಕೇಂದ್ರಸ್ಥಾನವೂ ಆಗಿತ್ತು. ಆದರೆ ಊರು ಮರಳ ರಾಶಿಯಾಗಿರುವ ಬಗ್ಗೆ ಅಲ್ಲಿನ ಜನರು ತಮ್ಮದೇ ಆದ ದಂತಕಥೆ ಅಥವಾ ಕಟ್ಟುಕಥೆಯನ್ನು ಕಟ್ಟಿಕೊಂಡಿದ್ದಾರೆ!

ಮಾಲಂಗಿ ಪಟ್ಟಣ ತಲಕಾಡಿನಲ್ಲಿ, ಕಾವೇರಿ ನದಿಯ ಎದುರು ಭಾಗದಲ್ಲಿತ್ತು. ಈ ಪಟ್ಟಣದ ಹಿಂದಿನ ಹೆಸರು ಜನತಾಪುರ. 14ನೇ ಶತಮಾನದ ಮಧ್ಯಭಾಗದಲ್ಲಿ ಹೊಯ್ಸಳ ರಾಜ್ಯಕ್ಕೆ ಸೇರಿ, ಮುಂದೆ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರದ ಪ್ರತಿನಿಧಿಯಾಗಿ ಶ್ರೀರಂಗರಾಯ ಶ್ರೀರಂಗಪಟ್ಟಣವನ್ನಾಳುತ್ತಿದ್ದ. ಅವನಿಗೆ ವಾಸಿಯಾಗದ ಬೆನ್ನುಫಣಿ ಕಾಯಿಲೆ ಬಂದು, ಯಾವ ಔಷಧದಿಂದಲೂ ಗುಣವಾಗದಿದ್ದಾಗ, ತಲಕಾಡಿನ ವೈದ್ಯೇಶ್ವರ ದೇವರಿಗೆ ಪೂಜೆ ಮಾಡಿ ರೋಗದಿಂದ ಮುಕ್ತಿ ಪಡೆಯಲು ತಲಕಾಡಿಗೆ ರಾಣಿ ಅಲಮೇಲಮ್ಮನ ಜೊತೆ ಬಂದ. ಆದರೆ ಕಾಯಿಲೆ ವಾಸಿಯಾಗದೆ ಆತ ಮರಣ ಹೊಂದಿದ. ಆತನ ರಾಣಿ ಅಲಮೇಲಮ್ಮ ತಲಕಾಡಿನ ಪಕ್ಕದ ಗ್ರಾಮವಾದ ಮಾಲಂಗಿ ಗ್ರಾಮದಲ್ಲಿ ನೆಲೆಸಿದ್ದಳು. ಆಗ ರಾಜನಿಲ್ಲದ ಶ್ರೀರಂಗಪಟ್ಟಣವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮೈಸೂರು ಅರಸರು ವಹಿಸಿಕೊಂಡರು. ಮೈಸೂರು ಅರಸರಿಗೆ ರಾಣಿ ಅಲಮೇಲಮ್ಮನ ಬಳಿ ಇರುವ ಅಪಾರವಾದ ಹಾಗೂ ಅಮೂಲ್ಯ ಆಭರಣಗಳ ವಿಷಯ ತಿಳಿದು ಅದನ್ನು ತಮ್ಮ ವಶಪಡಿಸಿಕೊಳ್ಳಲು ಸೈನಿಕರನ್ನು ಮಾಲಂಗಿಗೆ ಕಳುಹಿಸಿದರು. ರಾಣಿ ಅಲಮೇಲಮ್ಮ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ, ತನ್ನ ಪ್ರಾಣ ಕಾಪಾಡಿಕೊಳ್ಳಲು ಕಾವೇರಿ ನದಿಯೊಳಗೆ ಧುಮುಕಿ ಪ್ರಾಣ ಬಿಟ್ಟಳು. ಪ್ರಾಣ ಬಿಡುವ ಮುಂಚೆ 'ಮಾಲಂಗಿ ಮಡುವಾಗ್ಲಿ, ತಲಕಾಡು ಮರಳಾಗ್ಲಿ, ಮೈಸೂರು ಅರಸರಿಗೆ ಮಕ್ಕಳಿಲ್ಲದೇ ಹೋಗ್ಲಿ' ಎಂದು ಶಾಪ ನೀಡಿದಳಂತೆ! ಇದರಿಂದಲೇ ತಲಕಾಡು ಮರಳಾಯಿತು ಎಂದು ಸ್ಥಳೀಯರು ನಂಬುತ್ತಾರೆ ಹಾಗೂ ಮೈಸೂರು ಅರಸರಿಗೆ ಸಂತಾನ ಭಾಗ್ಯವೂ ಇಲ್ಲವೆನ್ನಲಾಗುತ್ತದೆ. ಆದರೆ ವಾಸ್ತವವಾಗಿ ಶ್ರೀರಂಗರಾಯನ ಕಾಲಕ್ಕಾಗಲೇ ತಲಕಾಡಿನಲ್ಲಿ ಮರಳು ಸಂಗ್ರಹವಾಗಲು ಆರಂಭವಾಗಿತ್ತು. ಆದುದರಿಂದಲೇ ಜನರಲ್ಲಿ ಅವಳು ಮರಣ ಹೊಂದುವ ಮುನ್ನ ಇಂತಹ ಶಾಪವನ್ನು ಕೊಟ್ಟಳು ಎಂಬ ಕಥೆ ಹುಟ್ಟಿಕೊಂಡಿತು! ನದೀ ಪಾತ್ರದ ಕಡೆಯಿಂದ ಮರಳು ಶೇಖರವಾಗುತ್ತಾ ಹೋದಂತೆಲ್ಲ ಊರು ಉತ್ತರದ ಕಡೆಗೆ ಸ್ಥಳಾಂತರವಾಗತೊಡಗಿತು. ಇಂದಿಗೂ ಕೂಡ

10th_Kannada_Reader1-5.indd 57 03-04-2019 14:07:57

ಮರಳ ದಿಬ್ಬ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬರುತ್ತಿರುವುದನ್ನು ಕಾಣಬಹುದು. ಹೀಗೆ ಬೃಹದಾಕಾರವಾಗಿ ಸಂಗ್ರಹವಾಗುತ್ತಿರುವ ಮರಳ ರಾಶಿಯ ಕಾರಣದಿಂದ ಇಲ್ಲಿನ ಅವಶೇಷಗಳೂ ಹಾಳಾಗುತ್ತಿವೆ.

ತಲಕಾಡಿಗೆ ಪ್ರವಾಸ ಹೋಗಲು, ನವೆಂಬರ್‌ನಿಂದ ಮಾರ್ಚ್‌ವರೆಗಿನ ಕಾಲ ಉತ್ತಮವಾಗಿರುತ್ತದೆ. ಆಗ ಇಲ್ಲಿನ ಹವಾಮಾನ ಹಿತಕರವಾಗಿರುತ್ತದೆ. ತಲಕಾಡಿಗೆ ಹೋದಾಗ ಪ್ರವಾಸಿಗರು ಸೋಮನಾಥಪುರ, ಶಿವನ ಸಮುದ್ರ, ಮೈಸೂರು, ಶ್ರೀರಂಗಪಟ್ಟಣ, ರಂಗನತಿಟ್ಟು ಮತ್ತು ಬಂಡೀಪುರಗಳಿಗೂ ಭೇಟಿ ಕೊಡಬಹುದು.

ಕೃತಿ–ಕರ್ತೃ ಪರಿಚಯ



ಡಾ. ತಮಿಳ್ ಸೆಲ್ವಿ

ಡಾ. ತಮಿಳ್ ಸೆಲ್ವಿಯವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕನ್ನಡ ಹಾಗೂ ತಮಿಳು ಎರಡೂ ಭಾಷೆಗಳಲ್ಲೂ ಪರಿಣತಿ ಗಳಿಸಿದ್ದಾರೆ. ಹಳಗನ್ನಡ ಕಾವ್ಯಗಳ ವಾಚನದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದಾರೆ. ತಮಿಳು ಹಾಗೂ ಕನ್ನಡ ಎರಡೂ ಭಾಷೆಗಳ ನಡುವೆ ಸೌಹಾರ್ದ ಸಂಬಂಧ ಬೆಸೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೈಚಾರಿಕ ದೃಷ್ಟಿಕೋನ, ಸೃಜನಶೀಲತೆ ಹಾಗೂ ಶೈಕ್ಷಣಿಕ ವಲಯದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಹೆಸರು ಮಾಡಿದ್ದಾರೆ. 'ಗಂಗರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಪಿಎಚ್.ಡಿ ಪ್ರಬಂಧವನ್ನು ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. ಇತ್ತೀಚೆಗೆ ತಮಿಳು ಹಾಗೂ ಕನ್ನಡ ಭಾಷೆಗಳ ನಡುವಿನ ಅನನ್ಯತೆಯನ್ನು ಕುರಿತು ಮಾಡಿರುವ ಸಂಶೋಧನಾ ಪ್ರಬಂಧಕ್ಕೆ ಡಿ.ಲಿಟ್., ಪದವಿಯನ್ನೂ ಗಳಿಸಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳ ಹಲವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಲಿ, ಪರೀಕ್ಷಾ ಮಂಡಲಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ತಮಿಳು ನಾಡು ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸಂಕ್ರಾಂತಿ, ನೇಪಥ್ಯ, ಪಲ್ಲವ–ಚೋಳ ಶಿಲ್ಪಕಲೆ, ಅಶೋಕ ಮಿತ್ರನ್ ಕಥೆಗಳು, ಅನನ್ಯ, ಅವಲೋಕನ ಮೊದಲಾದ ಮುವ್ವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ 'ನಾನು ಅವನಲ್ಲ, ಅವಳು' ಎನ್ನುವ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಪದಗಳ ಅರ್ಥ

ಅಣೆಕಟ್ಟು–ನದಿಗೆ ಅಡ್ಡಲಾಗಿ ಕಟ್ಟುವ ಸೇತುವೆ; ಇತಿಹಾಸ–ಚರಿತ್ರೆ; ಐತಿಹಾಸಿಕ–ಇತಿಹಾಸ ಪ್ರಸಿದ್ಧವಾದ; ಇತಿಹಾಸಜ್ಞರು–ಇತಿಹಾಸ ತಜ್ಞರು, ಚರಿತ್ರೆಯನ್ನು ಅಧ್ಯಯನ ಮಾಡುವ ವಿದ್ವಾಂಸರು; ಗಜ–ಆನೆ; ಹತನಾಗು–ಮರಣ ಹೊಂದು; ಸುಶ್ರೂಷೆ–ಚಿಕಿತ್ಸೆ; ಗರ್ಭಗುಡಿ–ದೇವಾಲಯದಲ್ಲಿ ದೇವರ ಮೂರ್ತಿ ಇರುವ ಕೋಣೆ; ಮೂರ್ತಿ–ವಿಗ್ರಹ; ದ್ವಾರಪಾಲಕ–ಬಾಗಿಲು ಕಾಯುವವ; ಪ್ರಾಕೃತಿಕ–ಪ್ರಕೃತಿಗೆ ಸಂಬಂಧಿಸಿದ; ಸಹಜ; ದಂತಕಥೆ–ಬಾಯಿಂದ ಬಾಯಿಗೆ ಹರಡುವ ಕಥೆ, ಸುಮ್ಮನೆ ಕಲ್ಪಿಸಿಕೊಂಡು ಹೇಳುವ ಕಥೆ, ಹೀಗಿರಬಹುದು ಎಂದು ಊಹೆ ಮಾಡಿಕೊಂಡು ಹೇಳುವ ಕಥೆಯು ಜನರಲ್ಲಿ ಒಬ್ಬರಿಂದ ಒಬ್ಬರಿಗೆ ಪ್ರಚಾರವಾಗುತ್ತಾ ಹೋಗುವ ಕಥೆ; ಕಟ್ಟುಕಥೆ–ಕಟ್ಟಿ ಹೇಳಿದ ಕಥೆ, ಕಲ್ಪಿಸಿಕೊಂಡು ಹೇಳುವ ಕಥೆ; ವಶಪಡಿಸುಕೊಳ್ಳು–ಸ್ವಾಧೀನಪಡಿಸಿಕೊಳ್ಳುವುದು, ತನ್ನ ಅಧೀನಕ್ಕೆ ತೆಗೆದುಕೊಳ್ಳುವುದು; ಸ್ಥಳೀಯರು–ಆ ಸ್ಥಳಕ್ಕೆ ಸೇರಿದವರು, ಊರಿನವರು; ಸಾಮಂತರು–ಅಧೀನ ಅರಸರು; ರಾಜಧಾನಿ–ಆಡಳಿತ ನಡೆಸುವ ಕೇಂದ್ರಸ್ಥಾನ; ಮುಕ್ತಿ–ಬಿಡುಗಡೆ; ಮಡು–ನೀರಿನಿಂದ ತುಂಬಿರುವ ಪ್ರದೇಶ; ದಿಬ್ಬ–ದಿಣ್ಣೆ, ಎತ್ತರವಾದ ಪ್ರದೇಶ.

10th_Kannada_Reader1-5.indd 58 03-04-2019 14:07:57

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ತಲಕಾಡು ಎಲ್ಲಿದೆ ?
2. ತಲಕಾಡು ಯಾವ ನದಿಯ ದಡದಲ್ಲಿದೆ ?
3. ಬೇಡ ಸಹೋದರರ ಹೆಸರೇನು ?
4. ಪೊದೆಯನ್ನು ಕತ್ತರಿಸಿದಾಗ ರಕ್ತ ಸುರಿದದ್ದೇಕೆ ?
5. ಶಿವನು ತನ್ನ ಗಾಯಕ್ಕೆ ಯಾವ ಔಷಧಿಯನ್ನು ಸೂಚಿಸಿದನು ?
6. ಚೋಳರು ಗಂಗವಾಡಿಯನ್ನು ಯಾವಾಗ ವಶ ಪಡಿಸಿಕೊಂಡರು ?
7. ಗಂಗರ ಪ್ರದೇಶವನ್ನು ಯಾವ ಹೆಸರಿನಿಂದ ಕರೆಯಲಾಗುತ್ತಿತ್ತು ?
8. ಕಾವೇರಿ ನದಿಗೆ ಯಾರು ಅಣೆಕಟ್ಟನ್ನು ನಿರ್ಮಿಸಿದರು, ಯಾವಾಗ ?
9. ಕೋಲಾರದ ಮೊದಲಿನ ಹೆಸರೇನು ?
10. ಗಂಗವಾಡಿಯನ್ನು ವಶಪಡಿಸಿಕೊಂಡ ಹೊಯ್ಸಳ ರಾಜ ಯಾರು ?
11. ಚೋಳರು ತಲಕಾಡಿಗೆ ಏನೆಂದು ಹೆಸರು ನೀಡಿದರು ?
12. ಮಾಲಂಗಿಯ ಮೊದಲಿನ ಹೆಸರೇನು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ತಳಕಾಡು ಎಂಬ ಹೆಸರು ಹೇಗೆ ಬಂದಿದೆ ?
2. ಗಂಗರ ಮೊದಲಿನ ರಾಜಧಾನಿ ಯಾವುದು ? ಅದನ್ನು ಯಾರು ಬದಲಾಯಿಸಿದರು ಮತ್ತು ಎಲ್ಲಿಗೆ ಬದಲಾಯಿಸಿದರು ?
3. ಶ್ರೀರಂಗರಾಯ ಯಾರು ? ಅವನು ತಲಕಾಡಿಗೆ ಬರಲು ಕಾರಣವೇನು ?
4. ಅಲಮೇಲಮ್ಮ ಮರಣ ಹೊಂದಲು ಕಾರಣವೇನು ?
5. ಅಲಮೇಲಮ್ಮ ಏನೆಂದು ಶಾಪ ನೀಡಿದಳು ?
6. ವಿಷ್ಣುವರ್ಧನನು ತಲಕಾಡಿನಲ್ಲಿ ಕಟ್ಟಿಸಿದ ದೇವಾಲಯ ಯಾವುದು ಮತ್ತು ಅದನ್ನು ಏಕೆ ಕಟ್ಟಿಸಿದನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ತಲಕಾಡಿಗೆ ಆ ಹೆಸರು ಬರಲು ಸ್ಥಳೀಯರು ಹೇಳುವ ದಂತಕಥೆಯೇನು?
2. ತಲಕಾಡು ಮರಳಮಯವಾಗಲು ವಾಸ್ತವ ಕಾರಣವೇನು ?
3. ಪಂಚಲಿಂಗ ದರ್ಶನವು ಯಾವ ಸಮಯದಲ್ಲಿ ನಡೆಯುತ್ತದೆ ?
4. ಪಂಚಲಿಂಗಗಳು ಯಾವುವು? ಅವುಗಳ ಬಗ್ಗೆ ಬರೆಯಿರಿ ?
5. ತಲಕಾಡಿನಲ್ಲಿರುವ ಇತರ ದೇವಾಲಯಗಳು ಯಾವುವು ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಕೃತಕ, ಅವನತಿ, ಹಿತಕರ, ಸಾಧ್ಯ, ಶಾಪ, ಹೊಗಳು

2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ದರುಶನ, ಮುಕುತಿ, ಭಕುತಿ, ಕೀರ್ತಿ, ವರುಷ, ಹರ್ಷ

3. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ವಶಪಡಿಸಿಕೊ, ಮರಳು, ದಂತಕಥೆ, ರಾಜಧಾನಿ, ಬೃಹದಾಕಾರ

4. ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ರಾಜ, ನದಿ, ನೀರು, ದೇವಾಲಯ, ಆನೆ

ಚಟುವಟಿಕೆ

1. ಅಧ್ಯಾಪಕರ ಜೊತೆ ಚರ್ಚಿಸಿ ನಿಮ್ಮ ಊರಿನ ಸುತ್ತಮುತ್ತ ಇರುವ ಇತಿಹಾಸ ಪ್ರಸಿದ್ಧ ಸ್ಥಳಗಳ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ ಬರೆಯಿರಿ.
2. ನಿಮ್ಮ ಶಾಲೆಯಿಂದ ಯಾವುದಾದರೂ ಒಂದು ಸ್ಥಳಕ್ಕೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಿ.

10th_Kannada_Reader1-5.indd 59 03-04-2019 14:07:57

ಘಟಕ ಮೂರು

ಲಿಂಗ–ವಚನ– ವಿಭಕ್ತಿ–ವಾಕ್ಯರಚನೆ

ಒಂದು ನಾಮ ಪದದಲ್ಲಿ ಲಿಂಗ, ವಚನ, ವಿಭಕ್ತಿಗಳೆಂಬ ಮೂರು ಅಂಶಗಳಿರುತ್ತವೆ. **ಉದಾಹರಣೆ** 'ದೇಶದಿಂದ' ಎಂಬ ನಾಮಪದವನ್ನು ಬಿಡಿಸಿ ಬರೆದರೆ ದೇಶ+ಇಂದ – ಎಂದಾಗುತ್ತದೆ. ಇವುಗಳಲ್ಲಿ, 'ದೇಶ' ಎಂಬುದು ನಪುಂಸಕ ಲಿಂಗ ಹಾಗೂ ಅದು ಒಂದೇ ಒಂದು ದೇಶವನ್ನು ಸೂಚಿಸುವುದರಿಂದ ಅದು ಏಕವಚನವಾಗುತ್ತದೆ. ಇಲ್ಲಿ 'ಇಂದ' ಎಂಬುದು ವಿಭಕ್ತಿ ಪ್ರತ್ಯಯವಾಗಿದೆ. ಈ ಕುರಿತಂತೆ ಕೆಲವೊಂದು ಅಂಶಗಳನ್ನು ವಿವರವಾಗಿ ತಿಳಿದುಕೊಳ್ಳೋಣ.

ಲಿಂಗ

ಒಂದು ನಾಮಪ್ರಕೃತಿಯನ್ನು ಲಿಂಗವೆಂದು ಕರೆಯುತ್ತಾರೆ. ಕನ್ನಡದಲ್ಲಿ ಪ್ರಮುಖವಾಗಿ ಮೂರು ವಿಧಗಳಿವೆ. ಅವುಗಳನ್ನು ಪುಲ್ಲಿಂಗ ಸ್ತ್ರೀಲಿಂಗ ಹಾಗೂ ನಪುಂಸಕ ಲಿಂಗಗಳೆಂದು ಕರೆಯುವರು.

1. **ಪುಲ್ಲಿಂಗ:** ಪುರುಷರನ್ನು ಕುರಿತು ಹೇಳುವ ಲಿಂಗವನ್ನು ಪುಲ್ಲಿಂಗವೆನ್ನುವರು.
   ಉದಾಹರಣೆ: ರಮೇಶ, ಅಪ್ಪ, ದೇವ, ಅವನು ಇತ್ಯಾದಿ.

2. **ಸ್ತ್ರೀಲಿಂಗ:** ಸ್ತ್ರೀಯರನ್ನು ಕುರಿತು ಹೇಳುವ ಲಿಂಗವನ್ನು ಸ್ತ್ರೀಲಿಂಗವೆನ್ನುವರು.
   ಉದಾಹರಣೆ: ಗೀತಾ, ಅಜ್ಜಿ, ದೇವಿ, ಅಮ್ಮ, ತಂಗಿ, ಅವಳು ಇತ್ಯಾದಿ.

3. **ನಪುಂಸಕಲಿಂಗ:** ಪುಲ್ಲಿಂಗವೂ ಅಲ್ಲದ, ಸ್ತ್ರೀಲಿಂಗವೂ ಅಲ್ಲದ ಲಿಂಗಗಳನ್ನು ನಪುಂಸಕ ಲಿಂಗ ಎನ್ನುವರು.
   ಉದಾಹರಣೆ: ಗಿಡ, ನದಿ, ಮರ, ಗುಡ್ಡ, ಕುದುರೆ, ಕುರ್ಚಿ, ಅದು ಇತ್ಯಾದಿ.

ಇವುಗಳಲ್ಲದೆ ಲಿಂಗಗಳಲ್ಲಿ ಇನ್ನೂ ಕೆಲವು ವಿಧಗಳಿವೆಯೆಂದು ವ್ಯಾಕರಣಶಾಸ್ತ್ರಕಾರರು ಹೇಳುತ್ತಾರೆ.
ಅವುಗಳು : ಪುನ್ನಪುಂಸಕ ಲಿಂಗ, ಸ್ತ್ರೀನಪುಂಸಕ ಲಿಂಗ ಹಾಗೂ ನಿತ್ಯನಪುಂಸಕ ಲಿಂಗಗಳು.

ಅ. ಪುನ್ನಪುಂಸಕ ಲಿಂಗ : ಕೆಲವು ನಾಮಪದಗಳನ್ನು ಸಂದರ್ಭಕ್ಕನುಗುಣವಾಗಿ ಪುಲ್ಲಿಂಗವಾಗಿಯೂ, ನಪುಂಸಕಲಿಂಗವಾಗಿಯೂ ಬಳಸುತ್ತೇವೆ. ಅವುಗಳನ್ನು ಪುನ್ನಪುಂಸಕ ಲಿಂಗ ಎನ್ನುವರು.

ಉದಾಹರಣೆ : ಚಂದ್ರ ಮೂಡಿದನು(ಪುಲ್ಲಿಂಗ); ಚಂದ್ರ ಮೂಡಿತು(ಪುನ್ನಪುಂಸಕಲಿಂಗ).

ಆ. ಸ್ತ್ರೀನಪುಂಸಕಲಿಂಗ : ಕೆಲವು ನಾಮಪದಗಳನ್ನು ಸಂದರ್ಭಕ್ಕನುಗುಣವಾಗಿ ಸ್ತ್ರೀಲಿಂಗವಾಗಿಯೂ ನಪುಂಸಕಲಿಂಗವಾಗಿಯೂ ಬಳಸುತ್ತೇವೆ. ಅವುಗಳನ್ನು ಸ್ತ್ರೀನಪುಂಸಕಲಿಂಗವೆನ್ನುವರು.
ಉದಾಹರಣೆ : ಗಂಗೆ ಹರಿಯುತ್ತಾಳೆ(ಸ್ತ್ರೀಲಿಂಗ); ಗಂಗೆ ಹರಿಯಿತು(ಸ್ತ್ರೀನಪುಂಸಕಲಿಂಗ).

ಇ. ನಿತ್ಯ ನಪುಂಸಕಲಿಂಗ : ಕೆಲವು ನಾಮಪದಗಳನ್ನು ಯಾವುದೇ ಸಂದರ್ಭದಲ್ಲಿಯೂ ನಪುಂಸಕಲಿಂಗವಾಗಿ ಮಾತ್ರವೇ ಬಳಸುತ್ತೇವೆ. ಅಂತಹ ಪದಗಳನ್ನು ನಿತ್ಯ ನಪುಂಸಕ ಲಿಂಗವೆಂದು ಕರೆಯಲಾಗುವುದು.
ಉದಾಹರಣೆ : 'ಮಗು' ನಕ್ಕಿತು, 'ದಂಡು' ಬಂತು; 'ಜನ' ಆಗಮಿಸಿತು... ಇತ್ಯಾದಿ.

10th_Kannada_Reader1-5.indd 60 03-04-2019 14:07:57

ವಚನ

ವಚನ ಎಂದರೆ ಮಾತು. ಆದರೆ ವ್ಯಾಕರಣದಲ್ಲಿ ಇದು 'ಸಂಖ್ಯೆ' ಎಂಬರ್ಥವನ್ನು ನೀಡುತ್ತದೆ. ಕನ್ನಡದಲ್ಲಿ ಎರಡು ಬಗೆಯ ವಚನಗಳಿವೆ. 1. ಏಕವಚನ. 2. ಬಹುವಚನ.

1. ಏಕವಚನ

ಒಬ್ಬ ವ್ಯಕ್ತಿ, ಒಂದು ವಸ್ತು, ಒಂದು ಸ್ಥಳವನ್ನು ಸೂಚಿಸುವುದನ್ನು ಏಕವಚನವೆನ್ನುವರು.
ಉದಾಹರಣೆ: ರಾಜ, ಹಣ್ಣು, ಮನೆ, ಹಳ್ಳಿ, ಗಿಡ, ತಾಯಿ, ನದಿ ಇತ್ಯಾದಿ.

2. ಬಹುವಚನ

ಒಂದಕ್ಕಿಂತ ಹೆಚ್ಚು ವ್ಯಕ್ತಿ, ವಸ್ತು, ಸ್ಥಳವನ್ನು ಸೂಚಿಸುವುದನ್ನು ಬಹುವಚನ ಎನ್ನುವರು.
ಉದಾಹರಣೆ: ರಾಜರು, ಹಣ್ಣುಗಳು, ಮನೆಗಳು, ಹಳ್ಳಿಗಳು, ತಾಯಂದಿರು, ನದಿಗಳು ಇತ್ಯಾದಿ.

ಏಕವಚನಕ್ಕೆ ಕೆಲವು ಪ್ರತ್ಯಯಗಳು ಸೇರಿ ಬಹುವಚನಗಳಾಗುತ್ತವೆ. ಹಾಗೆ ಸೇರುವ ಪ್ರತ್ಯಯಗಳನ್ನು 'ಬಹುವಚನ' ಪ್ರತ್ಯಯಗಳೆಂದು ಕರೆಯುತ್ತಾರೆ.
ಉದಾಹರಣೆ : ವು, ರು, ಕ್ಕಳ್, ಗಳು, ಅಂದಿರು ಇತ್ಯಾದಿ.

ಅದು–ಅವು; ಹುಡುಗ–ಹುಡುಗರು; ಮಗು–ಮಕ್ಕಳು; ಕಲ್ಲು–ಕಲ್ಲುಗಳು; ತಮ್ಮ–ತಮ್ಮಂದಿರು ಇತ್ಯಾದಿ.

ಕನ್ನಡ ಭಾಷೆಯಲ್ಲಿ ದ್ವಿವಚನ ಪ್ರಯೋಗ ಬಹಳ ವಿರಳ. ಕಿವಿಗಳು, ಕಾಲುಗಳು, ಕಣ್ಣುಗಳು ಇತ್ಯಾದಿ ಪದಗಳು ಮಾತ್ರ ದ್ವಿವಚನಗಳಾಗುತ್ತವೆ ಎಂದು ತಿಳಿದುಕೊಳ್ಳಿರಿ.

ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮೇಲೆ ಕರ್ತೃ, ಕರ್ಮ, ಹರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣ ಎಂಬ ಏಳು ಕಾರಕಾರ್ಥಗಳಲ್ಲಿ ಸೇರುವ ಏಳು ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆಂದು ಹೆಸರು.

ಉದಾಹರಣೆ: ಮರದಲ್ಲಿ ಎಂಬ ಪದದಲ್ಲಿ ಮರ+ದ+ಅಲ್ಲಿ – ಎಂಬ ಮೂರು ಅರ್ಥವತ್ತಾದ ಕನಿಷ್ಠತಮ ಘಟಕಗಳಿವೆ. ಮರ=ನಾಮಪ್ರಕೃತಿ; ದ=ಪ್ರಾತಿಪದಿಕ ರಚಕ(ನಾಮಪ್ರಕೃತಿಗೆ ಪ್ರತ್ಯಯಗಳನ್ನು ನೇರವಾಗಿ ಹಚ್ಚಲು ಸಾಧ್ಯವಿಲ್ಲದ ಕಡೆ ಮಾತ್ರ ಇಂತಹ ಪ್ರಾತಿಪದಿಕ ರಚಕಗಳ ಬಳಕೆಯಾಗುತ್ತದೆ); ಅಲ್ಲಿ=ವಿಭಕ್ತಿ ಪ್ರತ್ಯಯ.

ಈ ಕೆಳಗಿನ ಪಟ್ಟಿಯಲ್ಲಿ ಪೂರ್ಣ ವಿವರವನ್ನು ನೀಡಲಾಗಿದೆ.

ವಿಭಕ್ತಿಗಳು	ವಿಭಕ್ತಿ ಪ್ರತ್ಯಯಗಳು	ಕಾರಕಾರ್ಥ	ಉದಾ : 'ರಾಮ' ಪ್ರಕೃತಿ	
			ಏಕವಚನ	ಬಹುವಚನ
ಪ್ರಥಮಾ	ಉ	ಕರ್ತೃ	ರಾಮ (ರಾಮನು)	ರಾಮರು
ದ್ವಿತೀಯಾ	ಅನ್ನು	ಕರ್ಮ	ರಾಮನನ್ನು	ರಾಮರನ್ನು
ತೃತೀಯಾ	ಇಂದ	ಕರಣ	ರಾಮನಿಂದ	ರಾಮರಿಂದ
ಚತುರ್ಥಿ	ಗೆ, ಕ್ಕೆ, ಇಕ್ಕೆ	ಸಂಪ್ರದಾನ	ರಾಮನಿಗೆ	ರಾಮರಿಗೆ
ಪಂಚಮೀ	ದೆಸೆಯಿಂದ	ಅಪಾದಾನ	ರಾಮನ ದೆಸೆಯಿಮದ	ರಾಮರ ದೆಸೆಯಿಂದ
ಷಷ್ಟೀ	ಅ	ಸಂಬಂಧ	ರಾಮನ	ರಾಮರ
ಸಪ್ತಮೀ	ಅಲ್ಲಿ	ಅಧಿಕರಣ	ರಾಮನಲ್ಲಿ	ರಾಮರಲ್ಲಿ

ಪ್ರಥಮಾ ವಿಭಕ್ತಿಯಲ್ಲಿ 'ಉ' ಪ್ರತ್ಯಯದ ಅವಶ್ಯಕತೆಯಿಲ್ಲ. ಆದರೂ ಬಳಕೆಯಲ್ಲಿ ಬಂದಿರುವುದರಿಂದ ಅದನ್ನು ಆವರಣದಲ್ಲಿ ಕೊಡಲಾಗಿದೆ.

10th_Kannada_Reader1-5.indd 61 03-04-2019 14:07:57

ವಿಭಕ್ತಿ ಪಲ್ಲಟ

ನಾಮ ಪ್ರಕೃತಿಗೆ ಸೇರಬೇಕಾದ ವಿಭಕ್ತಿ ಪ್ರತ್ಯಯಗಳಿಗೆ ಬದಲಾಗಿ ಬೇರೊಂದು ವಿಭಕ್ತಿ ಪ್ರತ್ಯಯವನ್ನು ಸೇರಿಸುವುದೂ ಉಂಟು. ಹಾಗೆ ಒಂದು ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಬೇರೊಂದು ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದರೆ ಅದಕ್ಕೆ ವಿಭಕ್ತಿ ಪಲ್ಲಟ ಎಂದು ಹೆಸರು.

ದ್ವಿತೀಯಾ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿ ಪ್ರತ್ಯಯವನ್ನು ಸೇರಿಸುವುದುಂಟು.

ಉದಾ : ಅವನು ಮರವನ್ನು ಹತ್ತಿದನು(ದ್ವಿತೀಯಾ);
ಅವನು ಮರಕ್ಕೆ ಹತ್ತಿದನು(ಚತುರ್ಥೀ)

ಷಷ್ಠೀ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯನ್ನು ಸೇರಿಸುವುದುಂಟು.

ಉದಾ : ಮನೆಯ ಯಜಮಾನ(ಷಷ್ಠೀ)
ಮನೆಗೆ ಯಜಮಾನ(ಚತುರ್ಥೀ)

ಸಪ್ತಮೀ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯನ್ನು ಸೇರಿಸುವುದುಂಟು.

ಉದಾ : ಹಳ್ಳದಲ್ಲಿ ಬಿದ್ದನು(ಸಪ್ತಮೀ)
ಹಳ್ಳಕ್ಕೆ ಬಿದ್ದನು(ಚತುರ್ಥೀ)

ಪದಗಳು ಮತ್ತು ವಾಕ್ಯಗಳು

ಮಾತು ಪದಗಳಿಂದ ಆರಂಭವಾಗುತ್ತದೆ. ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ. ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ ವಾಕ್ಯ. ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗ ಮಾತ್ರ ವಾಕ್ಯ ಎನ್ನಿಸಿಕೊಳ್ಳುತ್ತದೆ.

ಈ ವಾಕ್ಯಗಳನ್ನು ಗಮನಿಸಿ :

1. ಜಿಂಕೆ ಹುಲ್ಲನ್ನು ತಿಂದಿತು.

2. ಕೃಷ್ಣ ಧೇನುಕಾಸುರನನ್ನು ಕೊಂದ.

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ. ಆದರೆ ಪ್ರತಿಯೊಂದು ವಾಕ್ಯದಲ್ಲಿರುವ ಯಾವುದಾದರೂ ಒಂದು ಪದ ಇಲ್ಲವಾದಲ್ಲಿ ಆ ವಾಕ್ಯ ಪೂರ್ಣ ಅರ್ಥ ಕೊಡದೆ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಉದಾಹರಣೆ : ಮೊದಲ ವಾಕ್ಯದಲ್ಲಿರುವ 'ಜಿಂಕೆ' ಪದ ಇಲ್ಲವಾದರೆ ಹುಲ್ಲನ್ನು ತಿಂದುದು ಯಾವುದು ? ಎಂಬ ಪ್ರಶ್ನೆ ಮೂಡುತ್ತದೆ. 'ಹುಲ್ಲನ್ನು' ಪದ ಇಲ್ಲವಾದರೆ ಜಿಂಕೆ ಏನನ್ನು ತಿಂದಿತು ಎಂಬ ಪ್ರಶ್ನೆ ಮೂಡುತ್ತದೆ. 'ತಿಂದಿತು' ಪದ ಇಲ್ಲವಾದರೆ ಜಿಂಕೆ ಹುಲ್ಲನ್ನು ಏನು ಮಾಡಿತು ಎಂಬ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಇಲ್ಲಿ ಜಿಂಕೆ ಎಂಬುದು 'ಕರ್ತೃಪದ'. 'ಹುಲ್ಲು' ಎಂಬುದು 'ಕರ್ಮಪದ'. 'ತಿಂದಿತು' ಎಂಬುದು ಕ್ರಿಯಾಪದ. ಅರ್ಥಪೂರ್ಣ ವಾಕ್ಯ ಎಂದರೆ ಕರ್ತೃ, ಕರ್ಮ, ಕ್ರಿಯಾ ಪದಗಳಿಂದ ಕೂಡಿರುವ ಪದಸಮೂಹ.

10th_Kannada_Reader1-5.indd 62 03-04-2019 14:07:57

ಘಟಕ
ನಾಲ್ಕು

ನಾಗರಿಕತೆ



ಕಾವ್ಯ ಕಣಜ	: ಹುತ್ತರಿ ಹಾಡು	– ಪಂಜೆ ಮಂಗೇಶರಾಯ
ಗದ್ಯ ವಿಹಾರ	: ನಾಗರಿಕ	– ಎಂ.ಆರ್. ಶ್ರೀ.
ಉಪಪಠ್ಯ	: ಕನಸಿನ ಹುಡುಕಾಟ	– ಎ.ಕೆ.ರಾಮಾನುಜಂ
ವ್ಯಾಕರಣ	: ಕಾಲಸೂಚಕಗಳು	

10th_Kannada_Reader1-5.indd 63 03-04-2019 14:07:57

ಕಾವ್ಯ ಕಣಜ

ಘಟಕ ನಾಲ್ಕು

ಹುತ್ತರಿ ಹಾಡು

–ಪಂಜೆ ಮಂಗೇಶರಾಯ



ನಮ್ಮ ಭಾರತ ದೇಶ ಕೃಷಿ ಪ್ರಧಾನವಾದುದು. ರೈತರೇ ನಮ್ಮ ನಾಡಿನ ಬೆನ್ನೆಲುಬು. ಮಳೆ ಸುರಿದು ಬೆಳೆ ಬೆಳೆದು ನಿಂತಾಗ ಇಳೆಯು ಹಚ್ಚ ಹಸಿರಿನಿಂದ ಕಂಗೊಳಿಸುವ ದೃಶ್ಯವನ್ನು ಕಂಡಾಗ ರೈತಾಪಿ ವರ್ಗದ ಜನರ ಮೊಗದಲ್ಲಿ ಸಂತೃಪ್ತಿ ಮೂಡುತ್ತದೆ. ರೈತನು ದುಡಿಯದಿದ್ದರೆ ಇಳೆಯಲ್ಲಿನ ವ್ಯಾಪಾರ, ವಾಣಿಜ್ಯ ಚಟುವಟಿಕೆಗಳು ನಡೆಯಲಾರವು. ಕೊಡವರು ಬೆಳೆದ ಬೆಳೆಯನ್ನು ಕಟಾವು ಮಾಡುವ ಸಂದರ್ಭದ ಸವಿಯನ್ನು ಈ ಕವನ ಉಣಬಡಿಸುತ್ತದೆ.



10th_Kannada_Reader1-5.indd 64 03-04-2019 14:07:57

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆಹೊಳೆವಳೋ ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆಕಳೆಕಳೆವಳೋ ? ॥ 1 ॥
ಅಲ್ಲೆ ಆ ಕಡೆ ನೋಡಲಾ !
ಅಲ್ಲೆ ಕೊಡಗರ ನಾಡಲಾ !
ಅಲ್ಲೆ ಕೊಡವರ ಬೀಡಲಾ ! ॥ 2 ॥
ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು ?
ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು ?
ಸವರಿ ಆನೆಯ ಸೊಂಡಲಿನ ರಣಕೊಂಬನಾರ್ ಭೋರ್ಗರೆದರೋ ?
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ ? ॥ 3 ॥
ಅವರು ಸೋಲ್ ಸಾವರಿಯರು !
ಅವರು ಕಡುಗಲಿ ಗರಿಯರು !
ಅವರೆ ಕೊಡಗಿನ ಹಿರಿಯರು ! ॥ 4 ॥
ತಮ್ಮ ನಾಡಿನ ಕೊರಳು ದಾಸ್ಯದ ನೊಗದ ಭಾರಕೆ ಬಗ್ಗದೋಲ್
ಹೆಮ್ಮೆ ಹಗೆಗಳ ಹೊಡೆದು ಹಿರಿಯರು ಹಸಿರು ಹಾರುವ ಬಗ್ಗದೋಲ್
ಬೊಮ್ಮಗಿರಿಯಿಂ ಪುಷ್ಪಗಿರಿ ಪರ್ಯಂತ ಬೆಳದೀ ದೇಶವು
ಧರ್ಮದಾನದ ಕಟ್ಟುಕಟ್ಟಳೆ ರೀತಿ ನೀತಿಯ ಕೋಶವು ॥ 5 ॥
ನಮ್ಮ ಕೊಡಗಿದು ಜಮ್ಮದು !
ಜಮ್ಮ ಕೊಡಗಿದು ನಮ್ಮದು !
ನಮ್ಮೊಡಲ್ ಬಿಡಲಮ್ಮದು ! ॥ 6 ॥
ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ ?
ಸುಮ್ಮನಿತ್ತರೊ ದಟ್ಟಿ ಕುಪ್ಪಸ? ಹಾಡು ಹುತ್ತರಿಗೇಳಿರಿ ?
ಚಿಮ್ಮಿ ಪಾತುರೆ ಕೋಲ ಹೊಯ್ಲಿಗೆ ಕುಣಿವ ಪದ ಹೊರಹೊಮ್ಮಲಿ ?
ಅಮ್ಮೆ ಹರಸಿದ ಸೀಮೆ ನಮಗಿದು ಇರಲಿ ನಮ್ಮದೆ ನಮ್ಮಲಿ ॥ 7 ॥
ನೆಮ್ಮದಿಯನಿದು ತಾಳಲಿ !
ಅಮ್ಮೆಯಾ ಬಲ ತೋಳಲಿ !
ನಮ್ಮ ಕೊಡಗಿದು ಬಾಳಲಿ ! ॥ 8 ॥

10th_Kannada_Reader1-5.indd 65 03-04-2019 14:07:57

ಕವಿ ಕಾವ್ಯ ವಿಚಾರ



ಪಂಜೆ ಮಂಗೇಶರಾಯ

ಈ ಪದ್ಯವನ್ನು ಬರೆದವರು ಪಂಜೆ ಮಂಗೇಶರಾಯರು. ಈ ಶತಮಾನದ ಆದಿಯಿಂದಲೇ ಹೊಸಗನ್ನಡ ಸಾಹಿತ್ಯದಲ್ಲೊಂದು ಅಭೂತಪೂರ್ವ ಪರಿವರ್ತನೆಯನ್ನುಂಟು ಮಾಡಿದ ಹಿರಿಯ ಸಾಹಿತಿ ಇವರು. ಕನ್ನಡದಲ್ಲಿ ಸಣ್ಣಕಥೆ, ಹರಟೆ – ಈ ಸಾಹಿತ್ಯ ಪ್ರಕಾರವನ್ನು ಪ್ರಾರಂಭಿಸಿದವರೆಂಬ ಹಿರಿಮೆ ಇವರಿಗೆ ಸಂದಿದೆ. ಶ್ರೀಯುತರು ಮದ್ರಾಸ್ ಕರ್ನಾಟಕದ ದೊಡ್ಡ ಶಿಕ್ಷಣ ತಜ್ಞರಾಗಿದ್ದರು. ಮಡಿಕೇರಿ ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿ ಸೇವಾ ನಿವೃತ್ತಿಯನ್ನು ಹೊಂದಿದರು. 1934ರಲ್ಲಿ ರಾಯಚೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ಪದ್ಯದಲ್ಲಿ ಕೊಡಗಿನಲ್ಲಿ ನಡೆಯುವ ಹುತ್ತರಿ ಹಬ್ಬದ ವರ್ಣನೆಯಿದೆ. ಹುತ್ತರಿ ಹಬ್ಬವು ಕೊಡಗರ ಸುಗ್ಗಿಯ ಹಬ್ಬ. ಮಾರ್ಗಶಿರ ಮಾಸದ ಹುಣ್ಣಿಮೆಯ ದಿನ ಕೊಡಗರು ಧಾನ್ಯಲಕ್ಷ್ಮಿಯನ್ನು ಪೂಜಿಸುತ್ತಾರೆ. ಹುತ್ತರಿ ಅಥವಾ ಪುತ್ತರಿ ಎಂದರೆ ಹೊಸ ಅಕ್ಕಿ ಎಂದರ್ಥ. ಕೊಡಗರು ಸಾಹಸ ಕೃತ್ಯಗಳಿಗೆ ಪ್ರಸಿದ್ಧರಾದವರು. ಪ್ರತಿಯೊಬ್ಬ ವೀರನೂ ಕಪ್ಪು ನಿಲುವಂಗಿ ತೊಟ್ಟು, ತಲೆಗೆ ಬಿಳಿಯ ಜರತಾರಿ ಪೇಟ ಧರಿಸಿ, ಸೊಂಟಕ್ಕೆ ಕೆಂಪು ಬಣ್ಣದ ರೇಷ್ಮೆಯ ಬಟ್ಟೆ ಕಟ್ಟಿಕೊಂಡು, ಅದಕ್ಕೆ ಬೆಳ್ಳಿಯ ಚಿಕ್ಕ ಚೂರಿಯನ್ನು ಸಿಕ್ಕಿಸಿರುತ್ತಾನೆ. ಇದುವೇ ಕೊಡಗರ ದೇಶೀಯ ಉಡುಪು. ಅವರಲ್ಲಿ ಕ್ಷಾತ್ರ ತೇಜಸ್ಸು ಮೆರೆದಿರುತ್ತದೆ. ಕವಿಯು ಕೊಡಗಿನ ಪ್ರಕೃತಿಯ ಸೌಂದರ್ಯವನ್ನು ಈ ಪದ್ಯದಲ್ಲಿ ಸೊಗಸಾಗಿ ವರ್ಣಿಸಿದ್ದಾರೆ.

ಪದಗಳ ಅರ್ಥ

ಗಿರಿ–ಬೆಟ್ಟ, ಪರ್ವತ; ಹುತ್ತರಿ–ಹೊಸ ಅಕ್ಕಿ; ನಮ್ಮೊಡಲ್–ನಮ್ಮ ದೇಹ; ಮುಗಿಲಲ್ಲಿ–ಆಕಾಶದಲ್ಲಿ; ಓಲ್–ಅಂತೆ; ಅಮ್ಮೆ–ತಾಯಿ; ಪರ್ಯಂತ–ವರೆಗೆ, ಅಲ್ಲಿಯತನಕ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಈ ಪದ್ಯದಲ್ಲಿ ಯಾವ ನಾಡನ್ನು ವರ್ಣಿಸಲಾಗಿದೆ?
2. ಕೊಡಗು ನಾಡಿನ ಸೃಷ್ಟಿ ಸೌಂದರ್ಯವನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
3. ಈ ಹಾಡನ್ನು ಹುತ್ತರಿ ಹಾಡು ಎಂದು ಏಕೆ ಕರೆಯಲಾಗಿದೆ ?
4. ಹುತ್ತರಿ ಹಬ್ಬದಲ್ಲಿ ಕೊಡಗರು ಎಂತಹ ಉಡುಪು ಧರಿಸುತ್ತಾರೆ ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹುತ್ತರಿ ಹಾಡಿನಲ್ಲಿ ಪ್ರಕೃತಿ ಸೌಂದರ್ಯವನ್ನು ಕವಿ ಹೇಗೆ ವರ್ಣಿಸಿದ್ದಾರೆ ?
2. ಕೊಡಗರು ವೀರರು, ಸಾಹಸಿಗಳು ಎಂಬುದನ್ನು ಕವಿಯು ಹೇಗೆ ಸ್ಪಷ್ಟಪಡಿಸಿದ್ದಾರೆ ?
3. ಒಮ್ಮತ ಒಗ್ಗಟ್ಟಿಗೆ ಕವಿ ನೀಡಿರುವ ಪ್ರಾಶಸ್ತ್ಯವೇನು?

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.
ದಾಸ್ಯ, ಹೊರಹೊಮ್ಮು, ಹುತ್ತರಿ, ನೆಮ್ಮದಿ.

2. ಕೆಳಗಿನ ಪದಗಳಲ್ಲಿರುವ ಅಲಂಕಾರವನ್ನು ಗುರುತಿಸಿ ಸಮನ್ವಯಿಸಿ, ಲಕ್ಷಣವನ್ನು ಬರೆಯಿರಿ.
'ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ ?'
'ತಮ್ಮ ನಾಡಿನ ಕೊರಳು ದಾಸ್ಯದ ನೊಗದ ಭಾರಕೆ ಬಗ್ಗದೋಲ್'.

ಚಟುವಟಿಕೆ

1. ನಿಮ್ಮ ತರಗತಿಯಲ್ಲಿ ಕೊಡಗರ ಉಡುಪನ್ನು ಧರಿಸಿ ಈ ಹಾಡನ್ನು ರಾಗವಾಗಿ ಅಭಿನಯದೊಂದಿಗೆ ಹಾಡಿರಿ.
2. ಕೊಡಗಿಗೆ ಒಮ್ಮೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಿ.

10th_Kannada_Reader1-5.indd 66 03-04-2019 14:07:58

ಘಟಕ ನಾಲ್ಕು

ನಾಗರಿಕ

–ಎಂ.ಆರ್.ಶ್ರೀ.



ಕಥೆ, ಕವನ, ಕಾದಂಬರಿ, ಲಲಿತಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ 'ನಾಟಕ'ವೂ ಒಂದು. ನಾಟಕವನ್ನು ದೃಶ್ಯ ಕಾವ್ಯವೆಂದು ಕರೆಯುವರು. ಪ್ರೇಕ್ಷಕರಿಗೆ ನಾನಾ ಬಗೆಯ ರಸಾಸ್ವಾದನೆಯನ್ನು ಮೂಡಿಸುವುದೇ 'ನಾಟಕ'ದ ಮುಖ್ಯ ಉದ್ದೇಶ. ಅದರೊಂದಿಗೆ ಪ್ರೇಕ್ಷಕರ ಚಿಂತನೆಗೆ ಆಹಾರ ಒದಗಿಸುವ ಜವಾಬ್ದಾರಿಯೂ ನಾಟಕಕ್ಕಿದೆ. ಭಾರತೀಯ ಸಂಸ್ಕೃತ ನಾಟಕ ಪರಂಪರೆಗೆ ವಿಶ್ವಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಕಾಳಿದಾಸ, ಭಾಸ, ಶೂದ್ರಕ ಮುಂತಾದವರನ್ನು ಈ ನಿಟ್ಟಿನಲ್ಲಿ ನೆನೆಯಬಹುದು.

ಇಪ್ಪತ್ತೊಂದನೆಯ ಶತಮಾನದಲ್ಲಿ, ಕನ್ನಡದಲ್ಲಿ ಹೊಸ ಬಗೆಯ ನಾಟಕಗಳು ಸೃಷ್ಟಿಯಾಗುತ್ತಿವೆ. ಇಂದು ಕನ್ನಡ ನಾಟಕಗಳು ಭಾರತೀಯ ನಾಟಕ ಸಾಹಿತ್ಯದಲ್ಲಿ ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸಿವೆ.



10th_Kannada_Reader1-5.indd 67 03-04-2019 14:07:58

ದೃಶ್ಯ 6

(ತುಂಗಭದ್ರಾ ತೀರದಲ್ಲಿ ನಾಗರಿಕನು ಪ್ರವೇಶಿಸುವನು)

ನಾಗರಿಕ

ಆರವರು ? ಕಾಷಾಯ ವಸ್ತ್ರಮಂ ಪೊದೆದವರು ?
ಅಲ್ಲಲ್ಲಿ ಸುಳಿದಾಡಿ ನಿಂತು ನೋಡುತೆ ಮತ್ತೆ
ನಡೆದವರು. ಮಕುಟವರ್ಧನರಾರೊ ಬಂದವರು ?
ಅಡಿಗೆರಗಿ ತೆರಳಿದರು. ಇತ್ತಲೇ ಪೋಗಿಹರು
ನೋಡುವೆನು; ಕಂಡಿಲ್ಲಿ ಮಾಯವಾಗಿಹರವರು.
ಆರಾರು ಸಂಚರಿಸಿ ಪಾವನ ಮಾಡುವರೋ !
ಯೋಗಿಗಳ ಗುಹೆಯುಂಟು, ಋಷ್ಯಾಶ್ರಮಗಳುಂಟು.
(ಹುಡುಕುತ್ತ ಹೋಗುವನು)

ವಿದ್ಯಾರಣ್ಯ

ಇಂದೇಕೆ ಮನದೊಳಗೆ ಕಳವಳವು ?
ಅಚ್ಯುತಾದಿಗಳೆಲ್ಲ ಪೊಡಮಟ್ಟು ತೆರಳಿದರು.
ಸಂಕಲ್ಪವೇನುಂಟೋ ?
(ಪೂಜಾರಿಯ ಪ್ರವೇಶ)
ದುಗುಡದಿಂ ಬಂದಿಹನು

ಪೂಜಾರಿ

ಗುರುದೇವ !
(ಪೂಜಾರಿಯು ನಮಸ್ಕರಿಸುವನು)

ವಿದ್ಯಾರಣ್ಯ

ಆರ್ಯ, ದುಗುಡಮಿದೇನು ? ಏಳೇಳು.
(ಕೈ ಹಿಡಿದು ಎಬ್ಬಿಸುವರು)

ಪೂಜಾರಿ

ಗುರುದೇವ !
ಗುರುದೇವ !

ವಿದ್ಯಾರಣ್ಯ

ದೇವನೊಳ್ಳಿದನೆ ಮಾಡುವನಾರ್ಯ !

ಪೂಜಾರಿ

ದುಗುಡಮೇಂ ತುಂಬಿರದೆ ಕೇಳುವಿರಿ, ಗುರುದೇವ ?
ದುಷ್ಕಾಲ ಬಂದಿಹುದು, ಧರ್ಮವದು ಪೋಗಿಹುದು,
ನೋಡದೆಯೆ ಕಣ್ಮುಚ್ಚಲೆನ್ನಾಯು ಮುಗಿದಿಲ್ಲ
ಪಾಪಿ ಜೀವದಲ್ಲಿದ್ದು ಮಾಡುವುದು ತಾನೇನು ?

ವಿದ್ಯಾರಣ್ಯ

ನೊಂದಿರುವೆ, ನೊಂದಿರುವೆ.

ಪೂಜಾರಿ

ನೋಯದೇಂ ? ಪೇಳಿರೈ
ಗುರುದೇವ, ಧರೆಯಲ್ಲಿ ನಾಸ್ತಿಕರು ಹೆಚ್ಚಿದರು,
ದೇವನಂ ಲಕ್ಷಿಸರು, ಭಯ ಭಕ್ತಿಯಿನಿತಿಲ್ಲ.
ದೇವಂಗೆ ಮೊರೆಯಿಡಲು ಮೌನ ಮುದ್ರೆಯ ತಾಳಿ
ತಾನಿಹನು. ಬಿನ್ನಪವ ಲಾಲಿಸನು, ಪಾಲಿಸನು.
ಧರ್ಮವೆಂಬುದು ಅತಜಲದಲ್ಲಿ ಮುಳುಗಿಹುದು.
ಏಗೈವೆನೇಗೈವೆ, ಗುರುದೇವ ? ಅನುದಿನವು
ಭಜಿಸಿದೆವು ಯುಗಯುಗಾಂತರದಿಂದ ಸೇವೆಯಂ
ಮಾಡಿದೆವು, ಅಪಚಾರವೆಣಿಸಿಲ್ಲ. ದೇವಂಗೆ
ದಯೆಯಿಲ್ಲ !

ವಿದ್ಯಾರಣ್ಯ

ಆರ್ಯ ! ನೊಂದು ನುಡಿಯುವೆ, ಧರ್ಮಮೇಂ
ದೇವನಂ ದೂರುವುದು ?

ಪೂಜಾರಿ

ನೋಯದಿರುವೆನದೆಂತು ?
ನಾಸ್ತಿಕನು ಬಂದಿಂದು ಲೋಕೈಕನಾಥನನು
ಪಂಪಾದಿನಾಥನನು ತೆಗಳಿದನು. ದೂಷಣೆಗೆ
ಕೊನೆಯಿಲ್ಲ. ಕಲ್ಲುಗೊಂಬೆಗಳೆಂದು, ಮಹಿಮೆಯದು
ಸಟೆಯೆಂದು, ಪೊಳ್ಳುಕಥೆಯೆಂದು, ಉದರಪೋಷಣ
ವೆಂದೆಲ್ಲವನು ಜರೆದು, ತೀರ್ಥವನು ಕೈಕೊಳದೆ
ಮರಳಿದನು. ನೋಯದಿರುವೆನದೆಂತು ಗುರುದೇವ ?

ವಿದ್ಯಾರಣ್ಯ

ದುರ್ಜನರು ಕೆಲರುಂಟು, ಸಜ್ಜನರು ಕೆಲರುಂಟು;
ಕರ್ಮಬದ್ಧರು ನರರು, ಅವರವರ ಪುಣ್ಯಪಾಪಗಳುಂಟು;
ನೋಡುವವ ಬೇರುಂಟು. ನೋಯದಿರು
ಆರ್ಯ, ನೀ ನೋಯದಿರು.

ಪೂಜಾರಿ

ತಾವೆಲ್ಲ ಕೆಟ್ಟಿಹರು,
ಲೋಕಮಂ ಕೆಡಿಸುವರು, ಕಟ್ಟುನಿಟ್ಟುಗಳಿಲ್ಲ.
ಧರ್ಮವೇನುಳಿಯುವುದೆ ? ಲೋಕವೇನುಳಿಯುವುದೆ?

10th_Kannada_Reader1-5.indd 68 03-04-2019 14:07:58

ವಿದ್ಯಾರಣ್ಯ

ಜನಪದದ ಮನವೆಲ್ಲ ಹರಿಹಂಚು. ದುಃಖದಿಂ ತುಂಬಿಹರು ?

ಪೂಜಾರಿ

ಗುರುದೇವ, ಧರ್ಮಮಂ ಕಾಪಿಡದೆ ಬರಿದೆ ನೋಡುವುದುಂಟೆ ?

ವಿದ್ಯಾರಣ್ಯ

ಧರ್ಮಮಂ ಕಾಪಿಡುವೆ.
ಧರ್ಮತರು ಶುಷ್ಕವೆಂದೆಣಿಸದಿರು.
ಕಾಲಗತಿಯನುಸರಿಸಿ ಧರ್ಮವದು ಬೆಳೆಯುವುದು.
ಹಿಂದೆ ತಿಳುಹಿದ ಧರ್ಮವಂದಿನಲಿ ನೆರವಾಯ್ತು.
ಇಂದಿಗದರಲಿ ಕೊರತೆ. ಯುಗಧರ್ಮಮಂ ತಿಳಿಯದೊಡೆ ಕೇಡು

(ನಾಗರಿಕನ ಪ್ರವೇಶ)

ನಾಗರಿಕ

ಧರ್ಮಕರ್ಮಗಳೆಲ್ಲ ಕೆಲ ದಿನಂ ದೂರಿರಲಿ.
ಪುರುಷಂಗೆ ಮೀರಿದುದು ಮೂಲೋಕದೊಳಗಿಲ್ಲ
ಶಕ್ತಿಯಂ ತೋರುವಡೆ ತಾ ದೇವನಹನಿಂದು.
ಅಜ್ಞಾನ ಮುಚ್ಚಿದೊಡೆ ತಾ ಮನುಜನಹನಿಂದು.
ಹರಿಯಜರ ಅಂಶಗಳು, ಕಾಲಭೈರವನಂಶ
ನಮ್ಮೊಳಗೆ ಸೇರಿಹವು; ದೇವನಂ ಮಾಡಿಹವು.
ವಿಧಿ ಬರೆದ ಬರೆಹವಂ, ಪ್ರಾರಬ್ಧವೆಂಬುದಂ
ತೋಳತೀಟದಿ ತೊಡೆದು ಬೇರೊಂದು ಬರೆಹವಂ
ತೋರುವೆವು ! ವೀರರಾ ಪಂಥವದು, ನೇಮವದು.
ಕಣ್ಣಿನಲಿ ನೀರೇಕೆ ? ಮನದಲ್ಲಿ ಕೊರಗೇಕೆ ?
ಹಂಪೆಯಲಿ ರಾಜ್ಯವಂ ಕಟ್ಟಿದರು ನಮ್ಮವರು.
ಪರಧರ್ಮದಾಹತವ ಬಿಗಿತಡೆದರೆಮ್ಮವರು
ಅಂಜಿಕೆಯ ಬಾಳೇಕೆ ? ಅತ್ತು ಕಾಡುವುದೇಕೆ ?
ಮೊರೆಯಿಟ್ಟು ಶತವರ್ಷ ಹೇಡಿ ಜೀವನವೇಕೆ ?
ಸಾಹಸದ ಬಾಳಿರಲಿ, ಗಳಿಗೆಯೊಂದರ ಬಾಳು.
ಸಾವಿನಲಿ ಸುಖವುಂಟು. ಧೈರ್ಯದಲಿ ಜಸವುಂಟು.
ಮಾನವೆಂಬುದೆ ಜೀವಮಾನವಂ ರಕ್ಷಿಪುದು.
ಅಭಿಮಾನಧನರಾಗಿ ಚಿರಕಾಲ ಬಾಳುವುದು.

(ನಾಗರಿಕನು ಮುಂದೆ ನೋಡುವನು)

ಪೂಜಾರಿ

ಇಲ್ಲಿಗೇಕೈತಂದ ನಾಸ್ತಿಕನು, ದೂಷಕನು ? ದೇವನಂ ದೂಷಿಸಿದ ಪಾಪಿಯಿವ, ಗುರುದೇವ !

ನಾಗರಿಕ

ಗುರುವರರು ! ಗುರುವರರು ! ಹಾ ದೇವ !

(ವಿದ್ಯಾರಣ್ಯರ ಕಾಲ ಮೇಲೆ ಬಂದು ಬೀಳುವನು)

ವಿದ್ಯಾರಣ್ಯ

ದುಃಖದಿಂ
ತುಂಬಿಹನು. ಅಕಟಕಟ ! ಮೈಮರೆದು ಬಿದ್ದಿಹನು.

(ಪೂಜಾರಿಗೆ)

ಮೈಮರೆದನೀತನಂ ಸಂತೈಸು.

ಪೂಜಾರಿ

ನಾಸ್ತಿಕನ ನೋಡುವುದೆ ? ಮುಟ್ಟುವುದೆ ? ಗುರುದೇವ ನಿನ್ನಾಜ್ಞೆ.

(ಅರೆಮನಸ್ಸಿನಿಂದ ಹಿಡಿಯುವನು).

ವಿದ್ಯಾರಣ್ಯ

ಆಸ್ತಿಕನ ನಾಸ್ತಿಕನ ಭೇದವೊಂದೆಡೆಯಿರಲಿ,
ಶರಣಜನ ಸಂರಕ್ಷಣವೆ ಧರ್ಮವಾಗಿಹುದು.
ಮೈಮರೆದನೀತನಂ ದೂಷಿಪುದು ಧರ್ಮವೇಂ ?

ಪೂಜಾರಿ

ಕ್ಷಮಿಸುವುದು ಗುರುದೇವ; ತಪ್ಪೆನ್ನ ಮನ್ನಿಪುದು

(ಉಪಚರಿಸುವನು. ವಿದ್ಯಾರಣ್ಯರು ಕೈಹಿಡಿದು ನಾಗರಿಕನನ್ನು ಎಬ್ಬಿಸುವರು).

ವಿದ್ಯಾರಣ್ಯ

ದೇವನಿಹ ಕರುಣಾಳು; ಒಳ್ಳಿದನೆ ಮಾಡುವನು.

ನಾಗರಿಕ

ಪಾದಕಮಲವ ಕಂಡು ಧನ್ಯನಾದೆನು ದೇವ,
ಪಾದಕಮಲದ ಧೂಳಿ ಎನ್ನ ಶಿರದೊಳಗಿರಲಿ.
ಜಡದೇಹವನು ಬಿಟ್ಟು ತೆರಳಿದಿರಿ ನೀವೆಂದು
ಲೋಕದಲಿ ಸಾರಿದರು ಜಡಜನರು. ಅವತರಿಸಿ
ನೀವು ಬಂದಿಹುದುಂಟೆ ? ಇಲ್ಲಿ ನಿಲ್ಲುವುದುಂಟೆ ?
ಧೈರ್ಯವನು ಶೌರ್ಯವನು ಮತ್ತೆ ತುಂಬುವರುಂಟೆ?
ಕರುಣಾಳುಗಳು ನೀವಿಲ್ಲಿ ಬಂದಿರಿ. ಸಲಹಿರೈ ಗುರುದೇವ.

ವಿದ್ಯಾರಣ್ಯ

ಲೋಕದಲಿ ನಾವುಂಟು, ಲೋಗರೆದುರಿಗೆ ನಿಂದು ಕಾಣುವವರಲ್ಲೆಮಗೆ ಸಾವಿಲ್ಲ.

10th_Kannada_Reader1-5.indd 69 03-04-2019 14:07:58

ನಾಗರಿಕ

ಅಂಧಕಾರದಲಿದ್ದು ರೋದಿಸಿದ ಶಿಶುಗಳಂ
ಜ್ಯೋತಿಯಿಂ ಸೈಪಿಟ್ಟು ಪೊರೆದಿರೈ ಗುರುದೇವ !
ಹೃತ್ಸರಸಿ ಬತ್ತಿರಲು ನವಜಲದ ಧೈರ್ಯಮಂ
ಪೊರಸೂಸುವಂದದಿಂ ತುಂಬಿದಿರಿ ಗುರುದೇವ !
ಹೇಮಂತನುಪಹತಿಗೆ ಕಳೆಯಿಳಿದ ಮರದಲ್ಲಿ
ಮಧುವಿಂದೆ ತಳಿರು ಪೂ ತೋರಿದಿರಿ ಗುರುದೇವ !
ಎಳಪೈರು ಬಾಡಿರಲು ಕರುಣ ರಸಧಾರೆಯಂ
ಸೂಸಿದಿರಿ ಕಳಕಳನೆ ನಗಿಸಿದಿರಿ ಗುರುದೇವ !

ವಿದ್ಯಾರಣ್ಯ

ಕಾರ್ಯವೊದಗಿರುವಲ್ಲಿ ಕಾರ್ಯವನು ಸಾಧಿಪುದು,
ಬರಿದೆ ಶೋಕಿಪುದಲ್ಲ, ಗತವೈಭವಕೆ ಕೊರಗಿ
ಹರಣಮಂ ಬಿಡಲುಂಟೆ? ಆಗುವುದು ಪೋಗುವುದು.
ಮುಂದಿನಾ ವೈಭವಕೆ ತಳಹದಿಯು ಹಿಂದಿನ ಸಂಪದವು.

ಪೂಜಾರಿ

ಗುರುವಿನಲಿ ಭಕ್ತಿಯಿಹುದೀತನಿಗೆ !
ನಾಸ್ತಿಕನೊ ಆಸ್ತಿಕನೊ ತಿಳಿಯದಿದು. ಪೊಸ ರೀತಿ
ಯಾಗಿಹುದು.

ನಾಗರಿಕ

ತಾವು ಸೃಜಿಸಿದ ಶಿಶುವು, ತಾವು ಸಲುಹಿದ ಶಿಶುವು,
ವಿಜಯನಗರದ ರಾಜ್ಯ – ನಿಲಲಿಲ್ಲ.
ಶೋಕವೆಂತಡಗುವುದು ?

ವಿದ್ಯಾರಣ್ಯ

ಆರು ಕಟ್ಟಿದೊಡೇನು ?
ಈಶ ಸಂಕಲ್ಪವದು. ರಾಮರಾಜ್ಯವು ಪೋಗದೇನಿಹುದೆ?
ಧರ್ಮರಾಜ್ಯವು ಪೋಗದೇನಿಹುದೆ ?
ಇನ್ನುಳಿದ ರಾಜ್ಯಗಳ ಮಾತೇಕೆ ?

ನಾಗರಿಕ

ಮಮತೆಯಂ
ಬಿಟ್ಟಿಹಿರಿ, ಸುಲಭದಲಿ ಹೇಳುವಿರಿ ! ಈಶನೇಂ ?
ಈಶ ಸಂಕಲ್ಪಮೇಂ ? ಅರ್ಥವಾಗವು ನಮಗೆ.

ವಿದ್ಯಾರಣ್ಯ

ಹುಟ್ಟು ಸಾವುಗಳೆಲ್ಲ ಜೀವಿಗಳಿಗಿರುವಂತೆ
ಚಕ್ರಾಧಿಪತ್ಯಗಳಿಗುಂಟು. ಚಿಂತಿಸಲೇಕೆ ?
ಕಾಲಚಕ್ರದಲಿರುವ ಚಕ್ರಾಧಿಪತ್ಯಗಳ
ಗಣನೆಯಂ ಮಾಡಬಲ್ಲವರುಂಟೆ ? ದೈವದಾ
ಜ್ಞೆಯಲಿ ತೋರುವುವು. ಸಂಕಲ್ಪ ಕಾರ್ಯವ ಮಾಡಿ
ಮುಳುಗುವುವು; ವಿಶ್ವವದು ಮುಂದುಮುಂದಕೆ ನಿಯತ
ಮಾರ್ಗದಲಿ ಬೆಳೆಯುವುದು. ಅದರೊಳಗೆ ಮಾನವಗೆ
ಗೋಚರಿಪುದತ್ಯಲ್ಪವಲ್ಲದೇಂ ಪಿರಿದುಂಟೆ ?
ಶೋಕದಿಂ ಫಲಮಿಲ್ಲ. ಜನದಂತೆ ಜನಪದವು,
ನೀತಿಯಂ ಬಿಟ್ಟಂದು ದುರ್ಗತಿಗೆ ಪಕ್ಕಾಗಿ
ಬೀಳುವುದು.

ನಾಗರಿಕ

ಮತ್ತೆಮಗೆ ಗತಿಯೇನು ಗುರುದೇವ ?

ವಿದ್ಯಾರಣ್ಯ

ಗತಿಯುಂಟು, ದೈವದೊಲ್ಮೆಯದುಂಟು.
ವಿಶ್ವಮೈತ್ರಿಯ ಬೆಳೆಸಿ ಕಟ್ಟುವೆವು ರಾಜ್ಯಗಳ.

ನಾಗರಿಕ

ಗುರುದೇವ !
ಅಂತಾದೊಡೇನೆಮಗೆ ಧೈರ್ಯಮಂ ನೀಡುವಿರೆ ?

ವಿದ್ಯಾರಣ್ಯ

ಅಹುದಹುದು, ಮುಂದಿನದ ವೈಭವವು ಹೆಚ್ಚಿನದು.
ಸಂಕಲ್ಪದೊಳಗುಂಟು.

ನಾಗರಿಕ

ಆದುದಂ ನೋಡಿದಿರಿ,
ಆಗುವುದ ನೋಡುವಿರಿ! ಅಲ್ಪಾಯುಗಳು ನಾವು.
ಹಿಂದಿನಾ ವೈಭವದ ಸಿರಿನೋಟವಂ ನೋಡ
ಬೇಕೆಂಬ ಮನಮಿಹುದು, ಕರುಣಿಸಿರಿ ಗುರುದೇವ.
ಕೇಳುಂಟು. ಬಣ್ಣನೆಯ ವೈಖರಿಯ ಒಳಗಣ್ಣ
ಕಟ್ಟಿಹುದು, ಹೊರಗಣ್ಣಿನಲಿ ನೋಡುವಾ ಪುಣ್ಯ
ಎಮಗಿಲ್ಲ; ಬೇಡುವೆನು ಕೈಮುಗಿದು.

ವಿದ್ಯಾರಣ್ಯ

ಗತವೈಭವವನೀಕ್ಷಿಸಲು ತವಕಪಡುತಿರುವೆ;
ದುಃಖವಿಮ್ಮಡಿಯಹುದು.

ನಾಗರಿಕ

ಬೇಡುವೆನು ಗುರುದೇವ !

10th_Kannada_Reader1-5.indd 70 03-04-2019 14:07:58

ಕೃತಿ–ಕರ್ತೃ ಪರಿಚಯ



ಎಂ.ಆರ್. ಶ್ರೀನಿವಾಸಮೂರ್ತಿ

ಈ ಭಾಗವನ್ನು ಎಂ.ಆರ್. ಶ್ರೀನಿವಾಸಮೂರ್ತಿಯವರ 'ನಾಗರಿಕ' ನಾಟಕದಿಂದ ಆಯ್ದುಕೊಳ್ಳಲಾಗಿದೆ. 'ನಾಗರಿಕ' ನಾಟಕದ ವಸ್ತು ವಿಜಯನಗರದ ಪತನಾನಂತರ ಹಂಪೆಯ ವೈಭವ ಸೂರೆ ಹೋದ ಮೇಲೆ ಅದಕ್ಕಾಗಿ ಪರಿತಪಿಸುವ ಸಹೃದಯಿ ನಾಗರಿಕನೊಬ್ಬನ ಪ್ರತಿಕ್ರಿಯೆಯ ರೂಪದಲ್ಲಿದೆ. ಮರೆಯಲಾಗದ ಸಾಮ್ರಾಜ್ಯದ ಪತನದಿಂದ ಪ್ರಕ್ಷುಬ್ಧ ಮನೋಸ್ಥಿತಿಗೆ ಒಳಗಾದ ನಾಗರಿಕ ನಾಸ್ತಿಕನಂತೆ ತನ್ನ ಅನಿಸಿಕೆಗಳನ್ನು ಪ್ರಕಟಪಡಿಸುವನು. ವಿದ್ಯಾರಣ್ಯರು ಅವನಿಗೆ ದರ್ಶನ ಕೊಟ್ಟು ಸಮಾಧಾನ ಮಾಡಿ, ಅವನ ಕೋರಿಕೆಯಂತೆ ವಿಜಯನಗರದ ಗತವೈಭವವನ್ನು ಕಾಣಿಸುವರು. ನಾಟಕದ ದೃಶ್ಯ 6ರಲ್ಲಿ ನಾವಿದನ್ನು ನೋಡುವೆವು.

ನಾಟಕದ ಕರ್ತೃಗಳಾದ ಎಂ.ಆರ್.ಶ್ರೀನಿವಾಸಮೂರ್ತಿಯವರು ಆಗಸ್ಟ್ 28, 1892ರಲ್ಲಿ ಜನಿಸಿದರು. ಇವರು ವಿದ್ಯಾ ಇಲಾಖೆಯಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ, ಜಿಲ್ಲಾ ಶಿಕ್ಷಣಾಧಿಕಾರಿಯಾಗಿ ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿರುವರು. 'ರಂಗಣ್ಣನ ಕನಸಿನ ದಿನಗಳು', 'ಮಹಾತ್ಯಾಗ', 'ಸಾವಿತ್ರಿ' ಎಂಬ ಕಾದಂಬರಿಗಳನ್ನೂ, 'ಕವಿಯ ಸೋಲು', 'ರೂಲ್ಸ್ ಮೇಷ್ಟ್ರು' ಎಂಬ ಕಾವ್ಯ ನಾಟಕಗಳನ್ನೂ, 'ಭಕ್ತಿ ಭಂಡಾರಿ ಬಸವಣ್ಣನವರು' ಎಂಬ ಜೀವನ ಚರಿತ್ರೆಯನ್ನೂ 'ವಚನ ಧರ್ಮಸಾರ' ಎಂಬ ವಚನ ಸಾಹಿತ್ಯವನ್ನು ಕುರಿತ ವಿನೂತನ ವಿಶ್ಲೇಷಣಾತ್ಮಕ ಕೃತಿಯನ್ನೂ ರಚಿಸಿರುವರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸೊಲ್ಲಾಪುರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಶ್ರೇಷ್ಠ ವಿದ್ವಾಂಸರೂ, ಸಾಹಿತಿಗಳೂ, ಆಡಳಿತಗಾರರೂ ಆಗಿದ್ದ ಇವರು ಸೆಪ್ಟೆಂಬರ್ 16, 1953ರಂದು ನಿಧನರಾದುದು ಕನ್ನಡಕ್ಕೆ ತುಂಬಲಾಗದ ನಷ್ಟ.

ಪದಗಳ ಅರ್ಥ

ಕಾಷಾಯ ವಸ್ತ್ರ – ಕಾವಿ ಬಟ್ಟೆ; ಮಕುಟವರ್ಧನರು – ಕಿರೀಟವನ್ನು ಧರಿಸಿದವರು, ರಾಜರು; ಅಡಿ – ಪಾದ; ಅಚ್ಯುತ – ವಿಜಯನಗರದ ಅರಸ ಅಚ್ಯುತದೇವರಾಯ; ಸಂಕಲ್ಪ – ಉದ್ದೇಶ; ದುಗುಡ(ನಾ) – ವ್ಯಸನ, ಚಿಂತೆ; ಆರ್ಯ(ನಾ) – ಸಜ್ಜನ, ಹಿರಿಯ; ಒಳ್ಳಿತು – ಒಳ್ಳೆಯದು, ಶುಭ; ದುಷ್ಕಾಲ – ಕೆಟ್ಟ ಕಾಲ; ಧರೆ – ಭೂಮಿ; ನಾಸ್ತಿಕ – ದೇವರು, ವೇದ ಮತ್ತು ಪುರಾಣಗಳನ್ನು ನಂಬದವನು, ನಿರೀಶ್ವರವಾದಿ; ಅತಲ – ಏಳು ಅಧೋಲೋಕಗಳಲ್ಲಿ ಒಂದು; ಸಟೆ – ಸುಳ್ಳು; ಜರೆ – ನಿಂದಿಸು; ಜನಪದ – ಜನಸಾಮಾನ್ಯರು; ಹರಿಹಂಚು – ಚೆಲ್ಲಾಪಿಲ್ಲಿ; ಪ್ರಾರಬ್ಧ – ವಿಧಿ, ದೈವ; ಪಂಥ – ಪ್ರತಿಜ್ಞೆ; ಜಸ – ಯಶಸ್ಸು; ಆಸ್ತಿಕ –ದೇವರಲ್ಲಿ ನಂಬಿಕೆಯುಳ್ಳವನು; ಕಳಕಳನೆ–ಜೀವಂತವಾಗಿ; ಹರಣ–ಪ್ರಾಣ; ಮೈತ್ರಿ–ಸ್ನೇಹ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕಾಷಾಯ ವಸ್ತ್ರವನ್ನು ಹೊದ್ದಿದ್ದವರು ಯಾರು ?
2. ವಿದ್ಯಾರಣ್ಯರಿಗೆ ನಮಸ್ಕರಿಸಿದವರು ಯಾರು ?
3. ನಾಸ್ತಿಕರೆಂದರೆ ಯಾರು ?
4. ಜನಸಾಮಾನ್ಯರ ಮನಸ್ಸು ಯಾವುದರಿಂದ ತುಂಬಿದೆ ?
5. ಧರ್ಮವು ಹೇಗೆ ಬೆಳೆಯುವುದು ?
6. ನಾಗರಿಕನಿಗೆ ಅರ್ಥವಾಗದ ವಿಷಯ ಯಾವುದು?
7. ವಿದ್ಯಾರಣ್ಯರು ಎಂತಹ ರಾಜ್ಯಗಳನ್ನು ಕಟ್ಟುವೆವು ಎಂದು ಹೇಳಿದ್ದಾರೆ ?
8. ನಾಗರಿಕನು ನೋಡ ಬಯಸಿದ ನೋಟ ಯಾವುದು ?

10th_Kannada_Reader1-5.indd 71 03-04-2019 14:07:58

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಪೂಜಾರಿಯ ದುಗುಡಕ್ಕೆ ಕಾರಣವೇನು ?
2. ವಿದ್ಯಾರಣ್ಯರು ಪೂಜಾರಿಯನ್ನು ಹೇಗೆ ಸಮಾಧಾನ ಪಡಿಸಿದರು ?
3. ನಾಗರಿಕನು ಧರ್ಮ ಕರ್ಮಗಳೆಲ್ಲ ಕೆಲದಿನ ದೂರವಿರಲಿ' ಎಂದು ಏಕೆ ನುಡಿದನು ?
4. ವಿದ್ಯಾರಣ್ಯರು ಗತವೈಭವಕ್ಕೆ ಕೊರಗಿ ಪ್ರಾಣವನ್ನು ಬಿಡಬಾರದೆಂದು ಏಕೆ ನುಡಿದರು?
5. ನಾಗರಿಕನು ನೋಡ ಬಯಸಿದ ಸಿರಿ ನೋಟವು ಯಾವುದು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಿದ್ಯಾರಣ್ಯರು ಪೂಜಾರಿಯೊಡನೆ ನಡೆಸಿದ ಸಂವಾದದ ಸಾರಾಂಶವನ್ನು ಬರೆಯಿರಿ.
2. ವಿದ್ಯಾರಣ್ಯರು ನಾಗರಿಕನೊಡನೆ ನಡೆಸಿದ ಸಂವಾದದ ಸಾರಾಂಶವನ್ನು ಸಂಕ್ಷೇಪವಾಗಿ ಬರೆಯಿರಿ.

ಭಾಷಾಭ್ಯಾಸ

1. ಈ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಗತವೈಭವ, ಕಳವಳ, ದುಷ್ಕಾಲ, ಅಪಚಾರ, ಹರಿಹಂಚು, ಪ್ರಾರಬ್ಧ, ಕರುಣಾಳು, ಕಳಕಳ, ಕಾಲಚಕ್ರ.

2. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ದುಷ್ಕಾಲ, ಪುಣ್ಯ, ದುಃಖ, ನಾಸ್ತಿಕ, ಧರ್ಮ, ಮುಳುಗು, ಸಟೆ, ದುರ್ಜನರು, ಆರ್ಯ, ತೆಗಳು.

3. ಈ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಮೌನ, ಆರ್ಯ, ಧರ್ಮ, ಭಕ್ತಿ, ದುಗುಡ, ಋಷಿ, ಬಿನ್ನಹ, ವಿಧಿ, ಗಳಿಗೆ, ಜಸ, ಬಣ್ಣನೆ, ವರ್ಷ, ಕಾರ್ಯ.

4. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಋಷ್ಯಾಶ್ರಮ, ಕೊನೆಯಿಲ್ಲ, ಲೋಕೈಕ, ಗತಿಯೇನು, ಒಳಗಣ್ಣು, ಹೊರಗಣ್ಣು, ಹರಿಯಜ.

ಚಟುವಟಿಕೆ

1. ವಿ.ಸೀ. ಅವರ 'ಪಂಪಾಯಾತ್ರೆ' ಎಂಬ ಪ್ರವಾಸ ಕಥನವನ್ನು ಓದಿರಿ.
2. ಎಂ.ಆರ್. ಶ್ರೀಯವರ 'ಧರ್ಮ ದುರಂತ' ನಾಟಕವನ್ನು ಸಂಗ್ರಹಿಸಿ ಓದಿರಿ.



10th_Kannada_Reader1-5.indd 72 03-04-2019 14:07:58

ಉಪಪಠ್ಯ

ಘಟಕ ನಾಲ್ಕು

ಕನಸಿನ ಹುಡುಕಾಟ

–(ಸಂ) ಎ.ಕೆ.ರಾಮಾನುಜಂ

–ಅನುವಾದ: ಡಾ. ಕರೀಗೌಡ ಬೀಚನಹಳ್ಳಿ



ಕನ್ನಡ ಸಾಹಿತ್ಯಕ್ಕೆ ಜನಪದ ಸಾಹಿತ್ಯದ ಕೊಡುಗೆ ಅಪಾರ. ಇದು ಜನಸಾಮಾನ್ಯರು ರಚಿಸಿದ ಸಾಹಿತ್ಯ. ಇದು ಗ್ರಂಥಸ್ಥ ಸಾಹಿತ್ಯವಲ್ಲ. ಹಳ್ಳಿಗರು ತಮ್ಮ ದಿನದಿನದ ಜೀವನ ನಿರ್ವಹಣೆಯಲ್ಲಿ ನಿರತರಾಗಿ ಆಸೆ ಆಕಾಂಕ್ಷೆಗಳನ್ನು, ಏರುಪೇರುಗಳನ್ನು, ತಮ್ಮೆಲ್ಲ ಅನುಭವಗಳನ್ನು ಈ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಅವರ ಸಮಗ್ರ ಬದುಕಿನ ಸಂಗಾತಿ ಈ ಜನಪದ ಸಾಹಿತ್ಯ. ಇಡೀ ಜನಾಂಗದ ಸಂಸ್ಕೃತಿಯನ್ನು ಪ್ರತಿಪಾದಿಸುವ ವ್ಯಾಪಕತೆ ಇದಕ್ಕಿದೆ. 'ಕನಸಿನ ಹುಡುಕಾಟ'ವು ಒಂದು ಜನಪದ ಕತೆಯಾಗಿದೆ.



10th_Kannada_Reader1-5.indd 73 03-04-2019 14:07:58

ಒಬ್ಬ ರಾಜನಿಗೆ ಮೂರು ಜನ ಗಂಡು ಮಕ್ಕಳಿದ್ದರು. ಅವರಲ್ಲಿ ಇಬ್ಬರು ಶತಮೂರ್ಖರು. ಕೊನೆಯ ಮಗ ಮಾತ್ರ ಬುದ್ಧಿವಂತನಾಗಿದ್ದ. ರಾಜನಿಗೆ ಅವನು ಹೆಚ್ಚು ಮೆಚ್ಚಿಗೆಯಾಗಿದ್ದ. ಅದರಿಂದ ರಾಜ ಕೊನೆಯ ಮಗನಿಗೆ ರಾಜ್ಯವನ್ನು ವಹಿಸಿ ಕೊಡಲು ತೀರ್ಮಾನಿಸಿದ.

ಒಂದು ರಾತ್ರಿ ರಾಜನಿಗೆ ಒಂದು ವಿಚಿತ್ರವಾದ ಕನಸು ಬಿತ್ತು. ಆ ಕನಸಿನಲ್ಲಿ ಒಂದು ಸುಂದರವಾದ ಕೈತೋಟವಿತ್ತು. ಆ ತೋಟದ ನಡುವಿನಲ್ಲಿ ಒಂದು ಬೆಳ್ಳಿಯ ಮರಕ್ಕೆ ಪಚ್ಚೆ ಹರಳಿನ ಎಲೆಗಳು ಮತ್ತು ಕೆಂಪು ಹರಳಿನ ಹಣ್ಣುಗಳಿದ್ದವು. ಅದರ ಕೊಂಬೆಗಳೆಲ್ಲ ಚಿನ್ನದ ಕವಲುಗಳಾಗಿದ್ದವು. ಆ ಮರದ ಮೇಲೆ ಒಂದು ಪಚ್ಚೆ ಹರಳಿನ ಗಿಳಿ ಹಾಡುತ್ತಾ ಮೆಲ್ಲಗೆ ಹಾರಾಡುತ್ತಿತ್ತು. ಕನಸಿನೊಳಗೆ ರಾಜ ಒಂದು ನಾಗಮಣಿಯನ್ನು ಹಿಡಿದುಕೊಂಡು ಗಿಳಿಯನ್ನು ಬೆದರಿಸಿದಾಗ ಇಡೀ ತೋಟವೆಲ್ಲಾ ಒಂದೇ ಬಾರಿಗೆ ಕಣ್ಮರೆಯಾಗಿ ಬಿಟ್ಟಿತು.

ರಾಜನಿಗೆ ನಿಜವಾದ ಬದುಕಿನಲ್ಲಿ ಇದರ ಅರ್ಥವೇನು ಎಂದು ತಿಳಿಯುವ ಆಸೆಯಾಯಿತು. ಅವನು ತನ್ನ ಮೂವರು ಗಂಡು ಮಕ್ಕಳನ್ನೂ ಕರೆದು ತನ್ನ ಕನಸನ್ನು ವರ್ಣಿಸಿದ. 'ಒಂದು ವೇಳೆ ನಿಮ್ಮಲ್ಲಿ ಯಾರಾದರೂ ಸರಿ, ನಾನು ನೋಡಿದ ಕನಸಿನ ನಿಜ ರೂಪವನ್ನು ಸರಿಯಾಗಿ ತಿಳಿಸಿದರೆ ನಿಮಗೆ ರಾಜ್ಯವನ್ನೆಲ್ಲ ಕೊಟ್ಟು ಬಿಡುತ್ತೇನೆ' ಎಂದ. ಎಲ್ಲರೂ ಅದಕ್ಕೆ ಒಪ್ಪಿಕೊಂಡರು. ಅವರಿಗೆ ಬೇಕಾದ ಸಕಲ ಸಿದ್ಧತೆಗಳನ್ನೂ ರಾಜ ಮಾಡಿಕೊಟ್ಟ. ಅವರು ಕನಸಿನ ಮೂಲ ಹುಡುಕಲು ಪ್ರಯಾಣ ಬೆಳೆಸಿದರು. ಹಿರಿಯ ಮಕ್ಕಳಿಬ್ಬರೂ ಒಂದು ದಿಕ್ಕಿನಲ್ಲಿ ಪ್ರಯಾಣ ಹೊರಟರೆ ಕಿರಿಯವನು ಅದರ ವಿರುದ್ಧ ದಿಕ್ಕಿನಲ್ಲಿ ಪ್ರಯಾಣ ಬೆಳೆಸಿದ.

ಐದಾರು ದಿನ ಪ್ರಯಾಣ ಮಾಡಿದ ಹಿರಿಯ ಗಂಡು ಮಕ್ಕಳಿಗೆ ಬೇಸರ ಶುರುವಾಯಿತು. ಕಲ್ಲು ಮುಳ್ಳು ಕೊರಕಲು ಕಾಡುಮೇಡುಗಳುಳ್ಳ ದಾರಿಗಳಿಗಿಂತ ಪಟ್ಟಣವೇ ಅವರನ್ನು ಹೆಚ್ಚು ಆಕರ್ಷಿಸುತ್ತಿತ್ತು. ಒಂದು ಒಳ್ಳೆಯ ಸ್ಥಳ ಸಿಕ್ಕಿದ ಕೂಡಲೇ ಅವರು ಪ್ರಯಾಣ ನಿಲ್ಲಿಸಿದರು. ಇದ್ದ ಹಣ ಖರ್ಚಾಗುವವರೆಗೆ ಚೆನ್ನಾಗಿ ಕಾಲ ಕಳೆದರು. ನಂತರ ಅರಮನೆಗೆ ಬಂದು ತಮಗೆ ಯಾವ ತೋಟವಾಗಲೀ, ಗಿಳಿಯಾಗಲೀ ಕಾಣಿಸಲೇ ಇಲ್ಲ ಎಂದು ತಂದೆಗೆ ಹೇಳಿದರು. ಈ ನಡುವೆ ಕಿರಿಯ ಮಗ ಒಬ್ಬ ವಯಸ್ಸಾದ ಅಜ್ಜಿಯನ್ನು ಕಂಡು ಅವಳ ಜೊತೆ ಸೇರಿಕೊಂಡ. ಮೂರೇ ದಿನಗಳಲ್ಲಿ ಅವನು ಒಳ್ಳೆಯ ಹುಡುಗನಾಗಿ ಕಂಡ. ಅವನನ್ನು ಅವಳು ಬಹಳವಾಗಿ ಮೆಚ್ಚಿಕೊಂಡಳು. ಇಬ್ಬರಿಗೂ ಚೆನ್ನಾಗಿ ಪರಿಚಯವಾದ ನಂತರ ಆತ ತಾನು ಅಲ್ಲಿಗೆ ಬಂದ ಕಾರಣವನ್ನು ತಿಳಿಸಿದ. ಅವಳಿಗೆ ಇದರ ಬಗ್ಗೆ ತಿಳಿದಿತ್ತು. ಅವಳು ಅವನಿಗೆ, 'ನೀನು ಈ ಪಟ್ಟಣದ ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಿದರೆ ಅಲ್ಲಿ ಒಂದು ಅಮೃತ ಶಿಲೆಯ ಕೋಟೆ ಕಾಣುತ್ತದೆ. ಅದರ ಒಳಗಡೆ ಹೋದರೆ ಒಂದು ತೋಟವಿದೆ. ಅಲ್ಲಿಗೆ ಹೋಗುವುದು ಬಹಳ ಕಷ್ಟ. ಆದರೆ ಅಲ್ಲಿಗೆ ಹೇಗೆ ಹೋಗುವುದು ಅಂತ ನಿನಗೆ ಹೇಳಿಕೊಡ್ತೀನಿ. ಮೊದಲು ಒಂದು ದೊಡ್ಡ ಅರಳಿ ಮರ ಕಾಣುತ್ತದೆ. ಅದರ ಕೆಳಗೆ ಹುತ್ತ ಇದೆ. ಒಂದು ದೈತ್ಯ ವಿಷ ಸರ್ಪ ಅಲ್ಲಿ ವಾಸ ಮಾಡುತ್ತಿರುತ್ತದೆ. ಅದು ಪ್ರತಿ ರಾತ್ರಿ ಹುತ್ತದಿಂದ ಹೊರಗೆ ಬರುತ್ತದೆ. ಅದರ ಹಣೆಯ ಮೇಲಿರುವ ಪವಿತ್ರವಾದ ನಾಗಮಣಿಯನ್ನು ತೆಗೆದು ಆ ಮರದ ಕೆಳಗೆ ಇಟ್ಟು ಅದರ ಬೆಳಕಿನಲ್ಲಿ ಆಹಾರವನ್ನು ಹುಡುಕುತ್ತದೆ. ನೀನು ಹೇಗಾದರೂ ಮಾಡಿ ಆ ಮಣಿಯನ್ನು ತೆಗೆದುಕೊಂಡರೆ ಅದು ನಿನಗೆ ತೋಟಕ್ಕೆ ಹೋಗುವ ದಾರಿಯನ್ನು ತೋರಿಸುತ್ತದೆ. ಅಲ್ಲಿ ನಿನಗೆ ನಾಲ್ಕು ಜನ ರಾಜಕುಮಾರಿಯರು ಸಿಗುತ್ತಾರೆ. ರಾತ್ರಿಯಾದ ಮೇಲೆ ಅವರಲ್ಲಿ ಒಬ್ಬಳು ಬೆಳ್ಳಿಯ ಮರವಾಗುತ್ತಾಳೆ. ಇನ್ನೊಬ್ಬಳು ಪಚ್ಚೆ ಮಣಿಯ ಎಲೆಗಳಾಗುತ್ತಾಳೆ. ಇನ್ನೊಬ್ಬಳು ಕೆಂಪು ಹರಳಿನ ಹಣ್ಣಾಗುತ್ತಾಳೆ. ಮತ್ತೊಬ್ಬಳು ಆ ಮರದ ಚಿನ್ನದ ಕವಲುಗಳಾಗಿ ಬದಲಾಗುತ್ತಾಳೆ. ನೀನು ಪಚ್ಚೆ ಮಣಿಯ ಗಿಳಿಯ ಜೊತೆ ಮಾತನಾಡಬೇಕು. ಅದರ ಬಗ್ಗೆ ಮುಂದೆ ನನಗೇನೂ ತಿಳಿದಿಲ್ಲ. ಆದರೆ ನನಗೊಬ್ಬಳು ಅಕ್ಕ ಇದ್ದಾಳೆ. ಅವಳು ಮುಂದಿನ ಪಟ್ಟಣದಲ್ಲಿದ್ದಾಳೆ. ಹೋಗಿ ಅವಳನ್ನು ಕೇಳು. ಅವಳಿಗೆ ಅದರ ಬಗ್ಗೆ ಗೊತ್ತಿರಬಹುದು' ಎಂದು ಹೇಳಿ ಕಳಿಸಿದಳು.

ಯುವರಾಜ ಕುಮಾರ ಕೃತಜ್ಞತೆಯಿಂದ ಅವಳಿಗೆ ಕೈಮುಗಿದು ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಿದ. ಮೂರು ದಿನ ಹಗಲೂ ರಾತ್ರಿ ಪ್ರಯಾಣ ಮಾಡಿದ ಮೇಲೆ ಅವನಿಗೆ ಅಮೃತ ಶಿಲೆಯ ಕೋಟೆ ಕಂಡಿತು.

10th_Kannada_Reader1-5.indd 74 03-04-2019 14:07:58

ಅದರ ಬಾಗಿಲು ಮುಚ್ಚಿತ್ತು. ಅವನು ರಾತ್ರಿಯಾಗುವವರೆಗೆ ಕಾದಿದ್ದ. ರಾತ್ರಿಯಾದಾಗ ಕೋಟೆ ಬಾಗಿಲುಗಳು ತೆರೆದುಕೊಂಡವು. ತಕ್ಷಣ ಇವನು ಒಳಗೆ ಹೋದ. ಅಲ್ಲೊಂದು ದೊಡ್ಡ ಅರಳಿ ಮರ ಕಾಣಿಸಿತು. ಅದರ ಕೆಳಗೆ ನಿಜವಾಗಿಯೂ ಒಂದು ಹುತ್ತವಿತ್ತು. ಅವನು ಮರ ಹತ್ತಿ ಎಲೆಗಳ ಮರೆಯಲ್ಲಿ ಅಡಗಿ ಕುಳಿತ. ಹಾವು ಹೊರಗೆ ಬರುವುದನ್ನು ಕಾದ. ಭಯಾನಕವಾದ ದೈತ್ಯಾಕಾರದ ಹಾವು ಹೊರಗೆ ಬಂದಿತು. ಅದು ಅಲ್ಲಿದ್ದ ಒಂದು ಗಡಿಗೆಯಲ್ಲಿ ತನ್ನ ಹಣೆಯಲ್ಲಿದ್ದ ನಾಗಮಣಿಯನ್ನು ಕಳಚಿ ಇಟ್ಟಿತು. ಅದರ ಬೆಳಕು ಸುತ್ತಮುತ್ತ ಹರಡಿತು. ಆಗ ಆ ಬೆಳಕಿನ ನಡುವೆ ತನ್ನ ಆಹಾರವನ್ನು ಹಾವು ಹುಡುಕುತ್ತಿತ್ತು. ಆಗ ರಾಜಕುಮಾರ ತನ್ನ ಬೊಗಸೆಯ ತುಂಬ ಅರಳಿ ಎಲೆಗಳನ್ನು ಕಿತ್ತು ತಂದು ಆ ಮಣಿಯ ಬೆಳಕು ಕಾಣದಂತೆ ಆ ಗಡಿಗೆಯೊಳಗೆ ಹಾಕಿದ. ಕತ್ತಲಾಯಿತು. ಹಾವು ತನ್ನ ಮಣಿಗಾಗಿ ಕತ್ತಲೆಯಲ್ಲೇ ಬಹಳ ಹೊತ್ತು ತಡಕಾಡಿತು. ಅದಕ್ಕೆ ಕೋಪ ಬಂದು ಕೆರಳಿತು. ಕೋಪ ಹೆಚ್ಚುತ್ತಲೇ ಹೋಯಿತು. ಬಹಳಷ್ಟು ಸಾರಿ ಹೆಡೆಯೆತ್ತಿ ಬುಸುಗುಡುತ್ತಾ ಬಂಡೆಗೆ ಬಡಿಯುತ್ತಿತ್ತು. ಆಗ ಅದು ರಕ್ತ ಕಾರಿಕೊಂಡು ಸತ್ತು ಹೋಯಿತು.

ರಾಜಕುಮಾರ ಬೇಗ ಹೋಗಿ ಆ ನಾಗಮಣಿಯನ್ನು ಕೈಗೆ ತೆಗೆದುಕೊಂಡ. ಅದರ ಬೆಳಕಿನಲ್ಲಿ ಅವನ ಮುಂದೆ ಒಂದು ಸುಂದರವಾದ ಕೈತೋಟವಿರುವುದು ಕಾಣಿಸಿತು. ಅವನು ಅದರ ಒಳಕ್ಕೆ ಕಾಲಿಟ್ಟಾಗ ಅಲ್ಲಿ ಒಂದು ಬೆಳ್ಳಿಯ ಮರ, ಅದರಲ್ಲಿದ್ದ ಪಚ್ಚೆ ಮಣಿಯ ಎಲೆಗಳು, ಕೆಂಪು ಮಣಿಯಿಂದ ಕೂಡಿದ ಹಣ್ಣುಗಳು ಮತ್ತು ಚಿನ್ನದ ಕವಲುಗಳು ಕಂಡವು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅವನು ಮಣಿಯ ಬೆಳಕನ್ನು ಅವುಗಳ ಕಡೆಗೆ ತಿರುಗಿಸಿದನು. ಅಷ್ಟೇ ಬೇಗ ಆ ಸ್ಥಳದಲ್ಲಿದ್ದ ಮರ ಮಾಯವಾಗಿ ನಾಲ್ವರು ರಾಜಕುಮಾರಿಯರು ನಿಂತಿದ್ದರು. ಅವರ ಚೆಲುವು ಒಬ್ಬರನ್ನೊಬ್ಬರು ಮೀರಿಸುವಂತಿತ್ತು. ಅವರು ಅಪ್ರತಿಮ ಸುಂದರಿಯರಾಗಿದ್ದರು. ಅವರೆಲ್ಲರೂ ಇವನನ್ನು ನೋಡಿ, ಒಬ್ಬಳು ಇನ್ನೊಬ್ಬಳಿಗೆ ಆ ರಾಜಕುಮಾರನನ್ನು ತಾನು ಮದುವೆಯಾಗುವುದಾಗಿ ಹೇಳುತ್ತಿದ್ದರು. ಈ ಬಗ್ಗೆ ಅವರು ಅವನನ್ನು ಕೇಳಿದಾಗ ಅವನು ತನ್ನ ಮುಂದಿನ ಕೆಲಸ ಮುಗಿಸಿಕೊಂಡು ಬಂದು ತಮ್ಮನ್ನು ಕಾಣುವುದಾಗಿ ಭರವಸೆ ಕೊಟ್ಟು, ಕೆಲವು ದಿನಗಳವರೆಗೆ ಕಾಯಲು ತಿಳಿಸಿ ಹೊರಟ.

ರಾಜಕುಮಾರ ಈಗ ಹಸಿರು ಮಣಿಯ ಗಿಣಿಯನ್ನು ಹುಡುಕಿಕೊಂಡು ಹೊರಟ. ಪಕ್ಕದ ಪಟ್ಟಣಕ್ಕೆ ಹೋಗಿ, ಅಲ್ಲಿ ಮೊದಲು ಒಳ್ಳೆಯ ಹೆಸರನ್ನು ಸಂಪಾದಿಸಿ, ಆಮೇಲೆ ಎರಡನೆಯ ಮುದುಕಿಯ ಬಳಿಗೆ ಹೋಗಿ, ಮೂರೇ ದಿನದಲ್ಲಿ ಅವಳಿಂದ ಒಳ್ಳೆಯವನು ಎನ್ನಿಸಿಕೊಂಡ. ಅವನು ಅವಳನ್ನು ನಂಬಿಕೆಯಿಂದ ವಿಶ್ವಾಸದಿಂದ ಕಂಡ ಮೇಲೆ ಅವಳನ್ನು 'ನಿನಗೆ ಯಾರಾದರೂ ಅಕ್ಕ ತಂಗಿಯರಿದ್ದಾರೆಯೇ?' ಎಂದು ಕೇಳಿದ. 'ಹೌದು, ನನಗೆ ಒಬ್ಬಳು ತಂಗಿಯಿದ್ದಾಳೆ. ಅವಳು ಇನ್ನೊಂದು ಪಟ್ಟಣದಲ್ಲಿದ್ದಾಳೆ' ಎಂದಳು. ಆಗ ಅವನು ತಾನು ಅವಳ ತಂಗಿಯನ್ನು ಭೇಟಿಯಾದದ್ದು, ಅವಳು ತನಗೆ ಸಹಾಯ ಮಾಡಿದ್ದು ಮತ್ತು ತಾನು ಹಸಿರು ಗಿಣಿಗಾಗಿ ಬಂದಿರುವುದರ ಕಥೆಯನ್ನೆಲ್ಲ ಹೇಳಿದ. ಆಗ ಆ ಮುದುಕಿ, ಅದರ ಬಗ್ಗೆ ಗೊತ್ತಿದ್ದುದೆಲ್ಲವನ್ನೂ ಅವನಿಗೆ ಹೇಳಿಬಿಟ್ಟಳು. ಏಳು ಸಮುದ್ರದ ಆಚೆ ಒಂದು ಕೊಳ ಇದೆ. ಅದರ ಒಳಗೆ ಒಂದು ತಾವರೆಯ ಗಿಡ ಇದೆ. ರಾಜ ಕುಮಾರನಾದ ನೀನು ಅದರ ಜೊತೆ ಒಂದು ದಿನವೆಲ್ಲಾ ಆಟವಾಡಿದರೆ ಅದು ರಾತ್ರಿಯ ಹೊತ್ತಿಗೆ ಹಸಿರು ಮಣಿಯ ಗಿಳಿಯಾಗಿ ಬದಲಾಗುತ್ತದೆ' ಎಂದು ಹೇಳಿದಳು.

'ಅಲ್ಲಿಗೆ ಹೇಗೆ ಹೋಗುವುದು ?' ಎಂದು ಅವನು ಕೇಳಿದ.

'ನಿನ್ನ ಬಳಿ ಇರುವ ನಾಗಮಣಿಯನ್ನು ಭಕ್ತಿಯಿಂದ ಪೂಜಿಸು. ಆಗ ಒಂದು ಗರುಡ ಪಕ್ಷಿ ಕಾಣಿಸಿಕೊಳ್ಳುತ್ತದೆ. ಅದು ನಿನ್ನನ್ನು ಏಳು ಸಮುದ್ರದ ಆಚೆ ಕರೆದುಕೊಂಡು ಹೋಗುತ್ತದೆ. ರಾಜಕುಮಾರ ಅವಳು ಹೇಳಿದಂತೆಯೇ ಮಾಡಿದ. ಆಗ ಒಂದು ದೊಡ್ಡ ಗರುಡ ಪಕ್ಷಿ ಬಂದು ಅವನನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು, ಹಾರುತ್ತಾ ಏಳು ಸಮುದ್ರ ದಾಟಿ ಆ ಕೊಳದ ಹತ್ತಿರಕ್ಕೆ ತಂದು ಅವನನ್ನು ಬಿಟ್ಟಿತು. ಆಗ ಆತ ತನ್ನ ಮುಂದೆ ಇದ್ದ ತಾವರೆ ಗಿಡವನ್ನು ನೋಡಿದ. ದೊಡ್ಡ ತಾವರೆ ಗಿಡದ ಹಾಸಿಗೆಯ ಮೇಲೆ ಒಬ್ಬ ಸುಂದರವಾದ ರಾಜಕುಮಾರಿ ಮಲಗಿ ನಿದ್ದೆ ಮಾಡುತ್ತಿದ್ದಳು. ಅವನು ತನ್ನ ಬಳಿ ಇದ್ದ ನಾಗಮಣಿಯಿಂದ ಅವಳ ಕಡೆಗೆ ಬೆಳಕು ಹರಿಸಿದಾಗ ಅವಳು ನಿದ್ರೆಯಿಂದ ಎದ್ದು

10th_Kannada_Reader1-5.indd 75 03-04-2019 14:07:58

ರಾಜಕುಮಾರನ ಮುಂದೆ ನಿಂತಳು. ರಾಜಕುಮಾರ ಅವಳನ್ನೇ ಬಹಳ ಹೊತ್ತು ನೋಡುತ್ತಿದ್ದುದನ್ನು ಗಮನಿಸಿದ ಅವಳು ನಾಚಿಕೆಯಿಂದ ತಲೆತಗ್ಗಿಸಿದಳು. ಆಗ ರಾಜಕುಮಾರ ಅವಳನ್ನು ಕುರಿತು, 'ನನ್ನೊಂದಿಗೆ ಗಾಂಧರ್ವ ವಿವಾಹಕ್ಕೆ ಸಮ್ಮತಿಯೇ?' ಎಂದು ಕೇಳಿದಾಗ ಒಪ್ಪಿಗೆಯೆಂಬಂತೆ ಆಕೆ ತಲೆ ಅಲ್ಲಾಡಿಸಿದಳು.

ನಂತರ ಇಬ್ಬರೂ ಗರುಡ ವಾಹನದ ಮೇಲೆ ಕುಳಿತು ಮರಳಿ ಏಳು ಸಮುದ್ರ ದಾಟಿದರು. ಆ ಮುದುಕಿ ಇಬ್ಬರನ್ನೂ ಆಶೀರ್ವದಿಸಿ ಕಳಿಸಿ ಕೊಟ್ಟಳು. ಅವರು ಮತ್ತೆ ಅಮೃತ ಶಿಲೆಯಿಂದ ಆವೃತವಾದ ಕೋಟೆಯ ಅರಮನೆಗೆ ಬಂದರು. ಅಲ್ಲಿದ್ದ ನಾಲ್ವರು ರಾಜಕುಮಾರಿಯರೂ, ರಾಜಕುಮಾರನನ್ನು ಮತ್ತು ಆ ಹುಡುಗಿಯನ್ನು ನೋಡಿ ಸಂತಸ ಪಟ್ಟರು. ಆಗ ಆತ ತನ್ನ ತಂದೆಗೆ ಬಿದ್ದ ಕನಸನ್ನು ಅವರಿಗೆ ವಿವರಿಸಿ ಹೇಳಿದ. ಆಗ ಅವರು, 'ನಾವು ಐದೂ ಜನರೂ ಅಕ್ಕ ತಂಗಿಯರು. ಒಬ್ಬ ಕೆಟ್ಟ ರಾಕ್ಷಸ ನಮ್ಮ ಹಿರಿಯ ಅಕ್ಕನನ್ನು ತೆಗೆದುಕೊಂಡು ಹೋಗಿ ಏಳು ಸಮುದ್ರದ ಆಚೆ ಇಟ್ಟಿದ್ದ. ಆ ರಾಕ್ಷಸ ಪ್ರತಿ ರಾತ್ರಿ ನೀರಿನ ಕೆಳಗೆ ಹೋಗಿ ಮಲಗುತ್ತಿದ್ದ. ಅಲ್ಲಿಗೆ ಬಂದವರನ್ನು ಆ ರಾಕ್ಷಸ ಸಾಯಿಸದೇ ಬಿಡುತ್ತಿರಲಿಲ್ಲ. ಆದರೆ ನೀನು ಎಲ್ಲರಿಗಿಂತ ಧೈರ್ಯಶಾಲಿ. ನೀನು ಹೋಗಿ ನಮ್ಮ ಅಕ್ಕನನ್ನು ಬಂಧನದಿಂದ ಬಿಡಿಸಿಕೊಂಡು ಕರೆತಂದಿರುವೆ. ನಾವು ನಿನ್ನನ್ನು ಬಿಡುವುದಿಲ್ಲ, ನೀನು ನಮ್ಮೆಲ್ಲರನ್ನೂ ಮದುವೆಯಾಗಬೇಕು' ಎಂದರು.

'ಆದರೆ ನಮ್ಮ ತಂದೆ ಹೇಳಿದ ಕನಸು ಹೇಗೆ ನಿಜ ಮಾಡುವುದು ? ಅಪ್ಪ ಕೇಳಿದರೆ ಏನು ಹೇಳುವುದು ?' ಎಂದುಕೊಂಡು, 'ಅಪ್ಪ ತಾನು ಕಂಡ ಕನಸನ್ನು ನಿಜವಾದ ಬೆಳಕಿನಲ್ಲಿ ನೋಡಲು ಇಷ್ಟಪಟ್ಟ. ಅದಕ್ಕೇನು ಮಾಡುವುದು' ಎಂದು ಕೇಳಿದ. ಆ ರಾಜಕುಮಾರಿಯರು ಅವನಿಗೆ ಹೇಳಿದರು: 'ನಮ್ಮನ್ನು ಸಾಲಾಗಿ ನಿಲ್ಲಿಸಿ, ಐದೂ ಜನರ ತಲೆಗಳನ್ನೂ ಒಂದೇ ಏಟಿಗೆ ಕತ್ತರಿಸು. ಆಗ ನಿನ್ನ ತಂದೆಯ ಕನಸು ನಿಜವಾಗುತ್ತದೆ. ಅದೇ ರೀತಿ ನಮ್ಮನ್ನು ಬದುಕಿಸಲು, ನಾಗಮಣಿಯಿಂದ ಗಿಳಿಯನ್ನು ಹೊಡೆದಾಗ ನಾವು ಮೊದಲಿನ ರೂಪ ಪಡೆಯುತ್ತೇವೆ' ಎಂದು ಹೇಳಿದರು.

ರಾಜಕುಮಾರ ತಾನು ಕಷ್ಟ ಪಟ್ಟದ್ದಕ್ಕೂ ಸಾರ್ಥಕವಾಯಿತು ಎಂದು ತಿಳಿದು ಸಂತೋಷಪಟ್ಟ. ಅವರೆಲ್ಲರನ್ನೂ ಮೊದಲನೆಯ ಅಜ್ಜಿಯ ಮನೆಗೆ ಕರೆದುಕೊಂಡು ಹೋದ. ಅವಳು ಒಂದು ಆಸೆ ಪಟ್ಟಳು, ತನ್ನ ಅಕ್ಕನ ಜೊತೆ ಇರಲು ಅವಳು ಅಪೇಕ್ಷಿಸಿದಳು. ರಾಜಕುಮಾರ ನಾಗಮಣಿಯನ್ನು ಭಕ್ತಿಯಿಂದ ಪೂಜಿಸಿದ. ಆಗ ಗರುಡ ಕಾಣಿಸಿಕೊಂಡಿತು. ಅದು ಅಜ್ಜಿಯನ್ನು ಅವಳ ಅಕ್ಕನ ಮನೆಗೆ ಹೊತ್ತುಕೊಂಡು ಹೋಯಿತು.

ರಾಜಕುಮಾರ, ರಾಜಕುಮಾರಿಯರೊಂದಿಗೆ ತನ್ನ ರಾಜ್ಯಕ್ಕೆ ಪ್ರಯಾಣ ಬೆಳೆಸಿದ, ತನ್ನ ಅರಮನೆಗೆ ಬಂದ. ಅವನ ತಂದೆ, 'ನಾನು ನನ್ನ ಕನಸನ್ನು ನಿಜ ಮಾಡು ಎಂದು ಹೇಳಿ ಕಳಿಸಿದೆ. ನೀನು ನಿನ್ನ ಸ್ವಂತಿಕೆಯಿಂದ ಈ ರಾಜಕುಮಾರಿಯರನ್ನು ಸಂಪಾದಿಸಿರುವೆ' ಎಂದು ಹೇಳಿ ಮೆಚ್ಚಿಕೆಯಿಂದ ಮಗನ ಬೆನ್ನು ತಟ್ಟಿದ. ನಂತರ ರಾಜಕುಮಾರ, 'ಐವರನ್ನೂ ಸಾಲಾಗಿ ನಿಲ್ಲಿಸಿ ತನ್ನ ಖಡ್ಗದಿಂದ ಒಂದೇ ಸಾರಿಗೆ ಅವರ ತಲೆಯನ್ನು ಕತ್ತರಿಸಿದ. ಆ ಕ್ಷಣ ಅದ್ಭುತವೆಂಬಂತೆ ರಾಜನ ಕನಸು ಕಣ್ಮುಂದೆ ಕಾಣಿಸಿತು. ಅದೇ ಮರ! ಹಸಿರು ಕೆಂಪು ಬಣ್ಣಗಳಿಂದ ಕೂಡಿದ ಎಲೆ, ಹಣ್ಣು, ಗಿಳಿ...!

ರಾಜಕುಮಾರ ಈಗ ನಾಗಮಣಿಯಿಂದ ಗಿಳಿಗೆ ಹೊಡೆದಾಗ ರಾಜಕುಮಾರಿಯರು ಮೊದಲಿನ ರೂಪದಲ್ಲಿ ಕಾಣಿಸಿಕೊಂಡರು. ರಾಜ ದಂಗಾಗಿ ನೋಡಿದ!

ಆಮೇಲೆ ರಾಜ ಬಹಳ ವೈಭವದಿಂದ ತನ್ನ ಕಿರಿಯ ಮಗನ ಮದುವೆಯನ್ನು ಆ ಐದೂ ಜನ ರಾಜಕುಮಾರಿಯರ ಜೊತೆ ನೆರವೇರಿಸಿ, ತನ್ನ ರಾಜ್ಯವನ್ನು ಅವನಿಗೆ ವಹಿಸಿದ. ಆತ ಚೆನ್ನಾಗಿ ಆಡಳಿತ ನಡೆಸುತ್ತಾ ಎಲ್ಲರನ್ನೂ ಸುಖವಾಗಿ ನೋಡಿಕೊಂಡ. ಅದೇ ರೀತಿ ಮಂದಬುದ್ಧಿಯ ತನ್ನ ಮೂರ್ಖ ಅಣ್ಣಂದಿರನ್ನೂ ಚೆನ್ನಾಗಿ ನೋಡಿಕೊಂಡ. ಎಲ್ಲರೂ ಬಹಳ ವರ್ಷ ಸುಖ ಸಂತೋಷದಿಂದ ಬಾಳಿದರು.

10th_Kannada_Reader1-5.indd 76 03-04-2019 14:07:58

ಕೃತಿ–ಕರ್ತೃ ಪರಿಚಯ



ಎ.ಕೆ. ರಾಮಾನುಜನ್



ಡಾ. ಕರೀಗೌಡ ಬೀಚನಹಳ್ಳಿ

ಎ.ಕೆ. ರಾಮಾನುಜನ್ ಅವರು ಮಾರ್ಚ್ 17, 1929ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್ ಎಂದು. ಬಹುಭಾಷಾ ವಿಶಾರದರಾದ ಇವರು ಅಮೇರಿಕಾದ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ದ್ರಾವಿಡ ಭಾಷಾ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. 'ಹೊಕ್ಕುಳಲ್ಲಿ ಹೂವಿಲ್ಲ', 'ಭಾರತೀಯ ಜನಪದ ಕಥೆಗಳು', 'ಕುಂಟೋ ಬಿಲ್ಲೆ', 'ಮತ್ತೊಬ್ಬನ ಆತ್ಮಚರಿತ್ರೆ' ಮುಂತಾದವು ಇವರ ಕೃತಿಗಳು.

'ಕನಸಿನ ಹುಡುಕಾಟ' ಎನ್ನುವ ಜನಪದ ಕಥೆಯನ್ನು ಇವರು ಸಂಪಾದಿಸಿದ್ದಾರೆ. ಇಂಗ್ಲಿಷ್‌ನಲ್ಲಿರುವ ಈ ಕಥೆಯನ್ನು ಕನ್ನಡಕ್ಕೆ ಅನುವಾದಿಸಿದವರು ಡಾ. ಕರೀಗೌಡ ಬೀಚನಹಳ್ಳಿ ಅವರು. ಜನಪದ ಕಥೆಗಳ ವಂಶಾಡಳಿತ, ರಾಜ್ಯ ವ್ಯವಸ್ಥೆ, ಬಹುಪತ್ನಿತ್ವ, ಕಿರಿಯ ಮಗನ ಪ್ರಾಮುಖ್ಯತೆ ಮೊದಲಾದ ಅಂಶಗಳನ್ನು ಈ ಕಥೆಯಲ್ಲಿ ಕಾಣಬಹುದು. ಇಡೀ ಕಥೆ ಕನಸಿನಲ್ಲಿ ನಡೆದಂತೆ ಭಾಸವಾಗುತ್ತದೆ. ಜನಪದ ಕಥೆಗಳ ರಚನಾ ತಂತ್ರವೇ ಒಂದು ಕನಸಾಗಿ ಇಲ್ಲಿ ರೂಪುಗೊಂಡಿದೆ.

ಪದಗಳ ಅರ್ಥ

ಶತಮೂರ್ಖ–ಬಹಳ ದಡ್ಡ; ಪಚ್ಚೆ–ಹಸಿರು ಬಣ್ಣ, ನವರತ್ನಗಳಲ್ಲಿ ಒಂದು, ಹಸಿರು ಬಣ್ಣದ ಕಲ್ಲು; ನಾಗಮಣಿ–ಹಾವಿನ ಹೆಡೆಯಲ್ಲಿರುವುದೆಂದು ಹೇಳಲಾಗುವ ಮಣಿ; ದೈತ್ಯ–ಬೃಹತ್, ದೊಡ್ಡದಾದ; ಕಳಚು–ಬೇರೆ ಮಾಡು, ಬಿಚ್ಚು, ಪ್ರತ್ಯೇಕಿಸು; ತಡಕಾಡು–ಹುಡುಕಾಡು; ಗಡಿಗೆ–ಮಣ್ಣಿನ ಪಾತ್ರೆ; ಗಾಂಧರ್ವ ವಿವಾಹ–ವಧು ವರರು ಪರಸ್ಪರ ಮೆಚ್ಚಿ ತಾವೇ ಮಾಡಿಕೊಳ್ಳುವ ಮದುವೆ; ಅಪೇಕ್ಷೆ–ಬಯಕೆ, ನಿರೀಕ್ಷೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ರಾಜನಿಗೆ ಎಷ್ಟು ಜನ ಮಕ್ಕಳಿದ್ದರು? ಅವರ ಸ್ವಭಾವವೇನು ?
2. ಹಿರಿಯ ಗಂಡು ಮಕ್ಕಳಿಗೆ ಬೇಸರವಾಗಲು ಕಾರಣವೇನು ?
3. ರಾಜಕುಮಾರನು ಅಮೃತಶಿಲೆಯ ಕೋಟೆಯ ಒಳಗೆ ಹೇಗೆ ತಲುಪಿದ ?
4. ದೈತ್ಯಾಕಾರದ ಹಾವು ಸಾಯಲು ಕಾರಣವೇನು?
5. ಹಸಿರುಮಣಿ ಗಿಳಿಯನ್ನು ಹುಡುಕಲು ಎರಡನೇ ಅಜ್ಜಿ ನೀಡಿದ ಸಲಹೆಯೇನು?
6. ಗರುಡ ಪಕ್ಷಿಯು ರಾಜಕುಮಾರನಿಗೆ ಮಾಡಿದ ಸಹಾಯ ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ರಾಜನು ಕಂಡ ವಿಚಿತ್ರವಾದ ಕನಸನ್ನು ವಿವರಿಸಿ?
2. ರಾಜಕುಮಾರನಿಗೆ ಮೊದಲನೆಯ ಅಜ್ಜಿ ನೀಡಿದ ಸಲಹೆಯನ್ನು ವಿವರಿಸಿ ?
3. ರಾಜಕುಮಾರನು ನಾಗಮಣಿಯನ್ನು ಪಡೆದ ಸಂದರ್ಭವನ್ನು ಚಿತ್ರಿಸಿ ?
4. ಮರವು ರಾಜಕುಮಾರಿಯಾಗಿ ಬದಲಾದ ಸಂದರ್ಭವನ್ನು ವಿವರಿಸಿ ?
5. ರಾಜನು ಕಂಡ ಕನಸನ್ನು ಅವನ ಕಿರಿಯ ಮಗ ನನಸು ಮಾಡಿದ?

ಚಟುವಟಿಕೆ

1. ಎ.ಕೆ.ರಾಮಾನುಜನ್ ಸಂಗ್ರಹಿಸಿರುವ 'ಭಾರತೀಯ ಜನಪದ ಕಥೆಗಳು' ಕೃತಿಯಲ್ಲಿರುವ ಇತರ ಕಥೆಗಳನ್ನು ಓದಿರಿ.
2. ನಿಮ್ಮ ಮನೆಯ ಹಿರಿಯರಿಂದ ಜನಪದ ಕಥೆಗಳನ್ನು ಕೇಳಿ ಆನಂದಿಸಿ.

10th_Kannada_Reader1-5.indd 77 03-04-2019 14:07:58

ವ್ಯಾಕರಣ

ಘಟಕ ನಾಲ್ಕು

ಕಾಲಸೂಚಕಗಳು

ಕಾಲಗಳು

ಕಾಲಗಳು ಮೂರು ಬಗೆಯಾಗಿವೆ. ಅವು, 1. ಭೂತ ಕಾಲ 2. ವರ್ತಮಾನ ಕಾಲ ಹಾಗೂ 3. ಭವಿಷ್ಯತ್ ಕಾಲ.

1. ಭೂತ ಕಾಲ

ಈಗಾಗಲೇ ಮುಗಿದು ಹೋದ ಸಮಯವನ್ನು ಸೂಚಿಸುವ ಕಾಲವನ್ನು ಭೂತಕಾಲವೆನ್ನುವರು. ಈ ಕಾಲದ ಕಾಲ ಸೂಚಕ ಪ್ರತ್ಯಯ 'ದ'. **ಉದಾಹರಣೆ:**

ಪುರುಷ ಲಿಂಗ	**ಏಕವಚನ**	**ಬಹುವಚನ**
ಉತ್ತಮ –	ಓಡಿದೆನು	ಓಡಿದೆವು
ಮಧ್ಯಮ –	ಓಡಿದೆ	ಓಡಿದಿರಿ
ಪ್ರಥಮ ಪುಲ್ಲಿಂಗ	ಓಡಿದನು	ಓಡಿದರು
ಸ್ತ್ರೀಲಿಂಗ	ಓಡಿದಳು	ಓಡಿದರು
ನಪುಂಸಕ ಲಿಂಗ	ಓಡಿತು	ಓಡಿದವು.

2. ವರ್ತಮಾನ ಕಾಲ

ಈಗ ನಡೆಯುತ್ತಿರುವ ಕಾಲವನ್ನು ಸೂಚಿಸುವುದಕ್ಕೆ ವರ್ತಮಾನ ಕಾಲವೆನ್ನುವರು. ವರ್ತಮಾನ ಕಾಲದ ಕಾಲಸೂಚಕ ಪ್ರತ್ಯಯ 'ಉತ್ತ'. **ಉದಾಹರಣೆ:**

ಪುರುಷ ಲಿಂಗ	**ಏಕವಚನ**	**ಬಹುವಚನ**
ಉತ್ತಮ –	ಓಡುತ್ತೇನೆ	ಓಡುತ್ತೇವೆ
ಮಧ್ಯಮ –	ಓಡುತ್ತಿ	ಓಡುತ್ತೀರಿ
ಪ್ರಥಮ ಪುಲ್ಲಿಂಗ	ಓಡುತ್ತಾನೆ	ಓಡುತ್ತಾರೆ
ಸ್ತ್ರೀಲಿಂಗ	ಓಡುತ್ತಾಳೆ	ಓಡುತ್ತಾರೆ
ನಪುಂಸಕ ಲಿಂಗ	ಓಡುತ್ತದೆ	ಓಡುತ್ತವೆ.

3. ಭವಿಷ್ಯತ್ ಕಾಲ

ಮುಂದೆ ನಡೆಯುವುದನ್ನು ಸೂಚಿಸುವುದೇ ಭವಿಷ್ಯತ್ ಕಾಲ. ಇದರ ಪ್ರತ್ಯಯ 'ವ'. **ಉದಾಹರಣೆ:**

ಪುರುಷ ಲಿಂಗ	**ಏಕವಚನ**	**ಬಹುವಚನ**
ಉತ್ತಮ –	ಓಡುವೆನು	ಓಡುವೆವು
ಮಧ್ಯಮ –	ಓಡುವಿ	ಓಡುವಿರಿ
ಪ್ರಥಮ ಪುಲ್ಲಿಂಗ	ಓಡುವನು	ಓಡುವರು
ಸ್ತ್ರೀಲಿಂಗ	ಓಡುವಳು	ಓಡುವರು
ನಪುಂಸಕ ಲಿಂಗ	ಓಡುವುದು	ಓಡುವುವು.

10th_Kannada_Reader1-5.indd 78 03-04-2019 14:07:58

ಭೂತ ಕಾಲ

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ	–	(ನಾನು) ಮಾಡಿದೆನು	(ನಾವು) ಮಾಡಿದೆವು
ಮಧ್ಯಮ	–	(ನೀನು) ಮಾಡಿದೆ	(ನೀವು) ಮಾಡಿದಿರಿ
ಪ್ರಥಮ	ಪುಲ್ಲಿಂಗ	(ಅವನು) ಮಾಡಿದನು	(ಅವರು) ಮಾಡಿದರು
	ಸ್ತ್ರೀಲಿಂಗ	(ಅವಳು) ಮಾಡಿದಳು	(ಅವರು) ಮಾಡಿದರು
	ನಪುಂಸಕಲಿಂಗ	(ಅದು) ಮಾಡಿತು	(ಅವು) ಮಾಡಿದವು

ವರ್ತಮಾನ ಕಾಲ

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ	–	(ನಾನು) ಮಾಡುತ್ತೇನೆ	(ನಾವು) ಮಾಡುತ್ತೇವೆ
ಮಧ್ಯಮ	–	(ನೀನು) ಮಾಡುತ್ತೀ	(ನೀವು) ಮಾಡುತ್ತೀರಿ
ಪ್ರಥಮ	ಪುಲ್ಲಿಂಗ	(ಅವನು) ಮಾಡುತ್ತಾನೆ	(ಅವರು) ಮಾಡುತ್ತಾರೆ
	ಸ್ತ್ರೀಲಿಂಗ	(ಅವಳು) ಮಾಡುತ್ತಾಳೆ	(ಅವರು) ಮಾಡುತ್ತಾರೆ
	ನಪುಂಸಕಲಿಂಗ	(ಅದು) ಮಾಡುತ್ತದೆ	(ಅವು) ಮಾಡುತ್ತವೆ

ಭವಿಷ್ಯತ್ ಕಾಲ

ಪುರುಷ	ಲಿಂಗ	ಏಕವಚನ	ಬಹುವಚನ
ಉತ್ತಮ	–	(ನಾನು) ಮಾಡುವೆನು	(ನಾವು) ಮಾಡುವೆವು
ಮಧ್ಯಮ	–	(ನೀನು) ಮಾಡು/ವಿ	(ನೀವು) ಮಾಡುವಿರಿ
ಪ್ರಥಮ	ಪುಲ್ಲಿಂಗ	(ಅವನು) ಮಾಡುವನು	(ಅವರು) ಮಾಡುವರು
	ಸ್ತ್ರೀಲಿಂಗ	(ಅವಳು) ಮಾಡುವಳು	(ಅವರು) ಮಾಡುವರು
	ನಪುಂಸಕಲಿಂಗ	(ಅದು) ಮಾಡುವುದು	(ಅವು) ಮಾಡುವುವು

10th_Kannada_Reader1-5.indd 79 03-04-2019 14:07:58

ಘಟಕ
ಐದು

ಶಿಕ್ಷಣ



ಕಾವ್ಯ ಕಣಜ : ಅನುಭಾವ ವಚನ ಮಾಲೆ

ಗದ್ಯ ವಿಹಾರ : ವ್ಯಾಸಂಗದ ಹವ್ಯಾಸ – ಡಿ.ಎಲ್.ನರಸಿಂಹಾಚಾರ್

ಉಪಪಠ್ಯ : ಜಾತ್ರೆ – ದ.ರಾ.ಬೇಂದ್ರೆ

ವ್ಯಾಕರಣ : ಸಂಧಿಗಳು

10th_Kannada_Reader1-5.indd 80 03-04-2019 14:07:58

ಘಟಕ ಐದು

ಅನುಭಾವ ವಚನ ಮಾಲೆ



ತನ್ನ ತಾನರಿವುದೆ ಎಲ್ಲ ಸಾಧನೆಯ ಗುರಿ. ಭಕ್ತಿ ಇದಕ್ಕೆ ಸುಲಭ ಸಾಧನ. ಲೌಕಿಕ ಆಮಿಷಗಳನ್ನು ಗೆದ್ದು ಸರ್ವಾಂಗ ಲಿಂಗಿಯಾಗುವ ಸಿದ್ಧಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಶಿವಶರಣರು ಈ ಮಾರ್ಗವನ್ನು ಅನುಸರಿಸಿ ಗೆದ್ದವರು. ಗುರು ಕೃಪೆಯ ಮೂಲಕ ಭಕ್ತನು ಪರಮನಾಗುವುದು ಸುಸಾಧ್ಯ. ಸ್ವ–ಅನುಭವದಿಂದ ಭಕ್ತಿಯಾಧಿಕ್ಯವನ್ನು ಸಾಧಿಸಿರುವ ಶರಣರು ತಮ್ಮ ಅನುಭಾವದ ವಚನಗಳಲ್ಲಿ ಅದನ್ನೇ ಬೋಧಿಸಿದ್ದಾರೆ. ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಕ್ರಾಂತಿಯ ಮೂಲ ಮಂತ್ರಗಳೇ ವಚನಗಳು.

ದೇವರ ದಾಸಿಮಯ್ಯನ ವಚನಗಳು

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು ?
ಸರ್ವರಿಗೆ ಸಾಧ್ಯವಲ್ಲ
ಮುಟ್ಟಿ ಮುಟ್ಟದು
ಅದ ಕೂಡುವರೆ ಗುರುವಿನಂದಲ್ಲದಾಗದು ಕಾಣಾ ರಾಮನಾಥ ॥ 1 ॥
ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವ ಕೆಂಡ ನುಂಗಿದಂತೆ
ಗುರು ಚರಣದ ಮೇಲೆ ತೃಣವನಿಳುಹಿದರೆ
ಆತನ ಸರ್ವಾಂಗವೆಲ್ಲಾ ಲಿಂಗ ಕಾಣಾ ರಾಮನಾಥ ॥ 2 ॥

10th_Kannada_Reader1-5.indd 81 03-04-2019 14:07:58

ಅಲ್ಲಮಪ್ರಭುವಿನ ವಚನಗಳು

ಆಸೆಗೆ ಸತ್ತುದು ಕೋಟಿ !
ಆಮಿಷಕ್ಕೆ ಸತ್ತುದು ಕೋಟಿ !
ಹೊನ್ನು – ಹೆಣ್ಣು – ಮಣ್ಣಿಂಗೆ ಸತ್ತುದು ಕೋಟಿ !
ಗುಹೇಶ್ವರ,
ನಿಮಗಾಗಿ ಸತ್ತವರಾರನೂ ಕಾಣೆ ॥ 1 ॥

ಅಜ್ಞಾನವೆಂಬ ತೊಟ್ಟಿಲೊಳಗೆ
ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದ–ಶಾಸ್ತ್ರವೆಂಬ ನೇಣು ಕಟ್ಟಿ
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ
ಭ್ರಾಂತಿಯೆಂಬ ತಾಯಿ
ತೊಟ್ಟಿಲು ಮುರಿದು
ನೇಣು ಹರಿದು
ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು ॥ 2 ॥

ಬಸವಣ್ಣನ ವಚನಗಳು

ಗುರು ಕಾರುಣ್ಯವೇ ಸದಾಚಾರ
ಗುರು ಕಾರುಣ್ಯವೇ ಶಿವಾಚಾರ
ಗುರು ಕಾರುಣ್ಯವೇ ಪ್ರಸಾದ ರುಚಿ
ಮುಂದೆ ಗುರು, ಹಿಂದೆ ಲಿಂಗ, ಕೂಡಲ ಸಂಗಮದೇವಾ ॥ 1 ॥

ಗುರು ಶಿಷ್ಯ ಸಂಬಂಧವೇನೆಂದುಪಮಿಸುವೆನಯ್ಯಾ ?
ಗುರುವಿನ ಹಿಂದಾಗಿ ಹೋಗಬಾರದು;
ಅದೇಕೆಂದರೆ ಗುರುವಿನ ನೆರಳು ಮೆಟ್ಟಿದ ಹಾಗೆ ಹೋಗಬೇಕು.
ಗುರುವಿದ್ದ ಊರಲ್ಲಿರಬಾರದು;

10th_Kannada_Reader1-5.indd 82 03-04-2019 14:07:58

ಅದೇಕೆಂದರೆ ತ್ರಿಕಾಲದಲ್ಲಿ ನಮಸ್ಕರಿಸಿದಲ್ಲದೆ ಇರಬಾರದು.
ಗುರುವಿನಿದಿರಲ್ಲಿ ಆಸನಮಿರ್ಕೆ ಕುಳ್ಳಿರಬಾರದು;
ಅದೇನು ಕಾರಣವೆಂದರೆ ಆಸನವಿಲ್ಲದೆ ಭೃತ್ಯನಾಗಿ ಕುಳ್ಳಿರಬೇಕು.
ಗುರುವಿನ ಸಮಪಂಕ್ತಿಯಲ್ಲಿ ಲಿಂಗಾರ್ಚನೆಯ ಮಾಡಲಾಗದು
ಅದೇನು ಕಾರಣವೆಂದರೆ, ಗುರುವಿಂಗೆ ಆರೋಗಣೆಯ
ಮಾಡಿಸಿದ ಬಳಿಕ ಪ್ರಸಾದಮಂ ಕೊಂಬುದು
ಗುರುವಂತಹವನಿಂತಹವನೆಂದು ಕನಸಿನಲ್ಲಿ ಮನಸಿನಲ್ಲಿ ನಿಂದ್ಯವ
ಮಾಡಿದಡೆ ಅಘೋರ ನರಕದಲ್ಲಿಕ್ಕದೆ ಬಿಡುವನೆ
ನಮ್ಮ ಕೂಡಲ ಸಂಗಮದೇವನು ॥ 2 ॥

ಅಕ್ಕಮಹಾದೇವಿಯ ವಚನಗಳು

ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿ ಕಂಡೆ
ಚನ್ನಮಲ್ಲಿಕಾರ್ಜುನಯ್ಯ ನಾ ಹುಟ್ಟಿದೊಡನೆ
ವಿಭೂತಿಯ ಪಟ್ಟನಕಟ್ಟಿ ಸದ್ಗುರು ಸ್ವಾಮಿ
ಲಿಂಗಸಾಯಕವ ಮಾಡಿದನಾಗೆ ಧನ್ಯಳಾದೆನು ॥ 1 ॥

ಸಂಸಾರ ಸಾಗರದೊಳಗೆ ಬಿದ್ದೆ ನೋಡಾ ನಾನು
ಸಂಸಾರ ನಿಸ್ಸಾರವೆಂದು ತೋರಿದನೆನಗೆ ಗುರು
ಅಂಗ ವಿಹಾರದ ಸಂಗವ ನಿಲಿಸಿ ಅಂಗವನಂಗದ
ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು
ಹಿಂದಣ ಜನ್ಮವ ತೊಡೆದು
ಮುಂದಣ ಪಡುವಲ ತೋರಿದನೆನ್ನ ತಂದೆ
ಚನ್ನಮಲ್ಲಿಕಾರ್ಜುನನ ಗುರು ನಿಜವನರುಹಿದ ॥ 2 ॥

10th_Kannada_Reader1-5.indd 83 03-04-2019 14:07:58

ಕವಿ ಕಾವ್ಯ ವಿಚಾರ



ದೇವರ ದಾಸಿಮಯ್ಯ

ಆದ್ಯ ವಚನಕಾರನೆಂದು ಪ್ರಸಿದ್ಧನಾದ ದೇವರ ದಾಸಿಮಯ್ಯ ಗುಲ್ಬರ್ಗ ಜಿಲ್ಲೆಯ ಮುದನೂರಿನವನು. ಇವನ ಕಾಲ ಹನ್ನೆರಡನೆಯ ಶತಮಾನ. ಬಟ್ಟೆ ನೇಯುವುದು ಇವನ ವೃತ್ತಿಯಾದ್ದರಿಂದ ಇವನಿಗೆ ಜೇಡರ ದಾಸಿಮಯ್ಯ ಎಂಬ ಹೆಸರೂ ಇದೆ. ಮುದನೂರಿನ ದೈವವಾದ ರಾಮನಾಥನ ಭಕ್ತನಾದ್ದರಿಂದ 'ರಾಮನಾಥ' ಎಂಬ ಹೆಸರನ್ನು ಈತ ತನ್ನ ವಚನಗಳ ಅಂಕಿತವಾಗಿ ಬಳಸಿಕೊಂಡಿದ್ದಾನೆ. ಇವನ ವಚನಗಳು ಗಾತ್ರದಲ್ಲಿ ತೀರ ಚಿಕ್ಕವು. ಭಾಷೆಯೂ ತೀರ ಸರಳ. ದೇವರದಾಸಿಮಯ್ಯನ ವ್ಯಕ್ತಿತ್ವಕ್ಕೆ ಮಾತ್ರವಲ್ಲ, ಆತನ ವಚನಗಳ ಪ್ರಾಮಾಣಿಕ ವಿಚಾರಧಾರೆಗೂ ಮುಗ್ಧ ಕಾವ್ಯಸೌಂದರ್ಯಕ್ಕೂ ಬಸವಣ್ಣ ಮಾರು ಹೋಗಿದ್ದಾನೆ. 150ರವರೆಗೆ ಉಪಲಬ್ಧವಾದ ಈತನ ವಚನಗಳಲ್ಲಿ ಉತ್ಕಟವಾದ ವೀರಶೈವ ನಿಷ್ಠೆ, ನಿಷ್ಠುರವಾದ ಸ್ಪಷ್ಟ ವಾಕ್ಯತೆ, ಮಾರ್ಮಿಕವಾದ ಸಂಕ್ಷಿಪ್ತ ಶೈಲಿ, ಉಚಿತ ದೃಷ್ಟಾಂತಗಳ ಸಂಪತ್ತಿ ಮುಂತಾದ ಗುಣಗಳು ಎದ್ದು ಕಾಣುತ್ತವೆ.



ಅಲ್ಲಮ ಪ್ರಭು

ಬಸವಣ್ಣ ಮುಂತಾದ ಶರಣರಿಗೆ ಗುರು ಸ್ಥಾನದಲ್ಲಿದ್ದು ಆ ಕಾಲದ ಎಲ್ಲರ ಮೇಲೂ ಪ್ರಭಾವವನ್ನು ಬೀರಿದ ಅಲ್ಲಮ ಪ್ರಭು ಒಬ್ಬ ಮಹಾಪುರುಷ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವೆ ಅಲ್ಲಮನ ಹುಟ್ಟಿದೂರು. ಅವನು ತಾನು ಮದುವೆಯಾದ ಕಾಮಲತೆಯ ಸಾವಿನಿಂದ ಮಾನಸಿಕ ಯಾತನೆಗೊಳಗಾಗುತ್ತಾನೆ. ಮುಂದೆ ಆಧ್ಯಾತ್ಮಿಕ ಸಾಧನೆ ಮಾಡಿ ದುಃಖಿಗಳನ್ನು ಸಂತೈಸುವ, ಮೂಢರನ್ನು ಎಚ್ಚರಿಸುವ, ಸಾಧಕರಿಗೆ ಸರಿಯಾದ ಮಾರ್ಗವನ್ನು ತೋರುವ ಉಪದೇಶಕನಾಗಿ ತಾನು ಕಂಡ ಸಣ್ಣತನವನ್ನು ಕಟುವಾಗಿ ಟೀಕಿಸುತ್ತಾನೆ; ಒಳ್ಳೆಯದನ್ನು ಮೆಚ್ಚಿ ಗೌರವಿಸುತ್ತಾನೆ. ಮುಕ್ತಾಯಕ್ಕ, ಗೊಗ್ಗಯ್ಯ, ಗೋರಕ್ಷ, ಸಿದ್ಧರಾಮ ಮುಂತಾದವರನ್ನು ಉದ್ಧರಿಸುತ್ತಾನೆ. ಅವನು ಕಲ್ಯಾಣಕ್ಕೆ ಬಂದು ಹಲವು ಕಾಲವಿದ್ದು ಅಲ್ಲಿಯ ಶಿವಾನುಭವ ಗೋಷ್ಠಿಗಳಲ್ಲಿ ಕೇಂದ್ರ ವ್ಯಕ್ತಿಯಾಗಿದ್ದು ಶಿವತತ್ವವನ್ನು ಉಪದೇಶಿಸುತ್ತಾನೆ. ಅಲ್ಲಮನ ವಚನಗಳು ಓದುಗರನ್ನು ಉದಾತ್ತಗೊಳಿಸುತ್ತವೆ. ಇನ್ನೊಂದು ಲೋಕಕ್ಕೆ ಕೊಂಡೊಯ್ಯುತ್ತವೆ. ಚಕಿತಗೊಳಿಸಿ ದಿಗ್ಭ್ರಾಂತರನ್ನಾಗಿ ಮಾಡುತ್ತವೆ. ಅಲ್ಲಮನ ವಚನಗಳಲ್ಲಿ ಸಾಮಾಜಿಕ ವಿಡಂಬನೆ ಮಾತ್ರವಲ್ಲದೆ ಆಧ್ಯಾತ್ಮಿಕ ಅನುಭವ, ಚಿಂತನೆಗಳನ್ನೂ ಕಾಣಬಹುದು.



ಬಸವಣ್ಣ

ಹನ್ನೆರಡನೆಯ ಶತಮಾನದ ಆಂದೋಲನದ ನಾಯಕ ಮತ್ತು ಕೇಂದ್ರ ವ್ಯಕ್ತಿಯಾದ ಬಸವಣ್ಣ ಸಾಹಿತ್ಯದ ದೃಷ್ಟಿಯಿಂದಲೂ ಅತ್ಯುತ್ತಮ

10th_Kannada_Reader1-5.indd 84 03-04-2019 14:07:59

ಕೃತಿಕಾರ. ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಆ ಕಾಲದ ಚಕ್ರವರ್ತಿ ಬಿಜ್ಜಳನ ಹತ್ತಿರ ಭಂಡಾರಿಯಗಿದ್ದರು. ಸಮಾಜದ ದಲಿತ ವರ್ಗದ ಜೊತೆ ಮಿಳಿತವಾಗಿ ಜೀವನದುದ್ದಕ್ಕೂ ಅವರಿಗಾಗಿ ಹೋರಾಡಿದ ವ್ಯಕ್ತಿ ಬಸವಣ್ಣ. ಬಸವಣ್ಣ ಹುಟ್ಟಿದ್ದು ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ. ಮಾದಿರಾಜ ಅವನ ತಂದೆ. ಮಾದಾಂಬೆ ಅವನ ತಾಯಿ. ಗಂಗಾದೇವಿ ಹಾಗೂ ಮಾಯಿದೇವಿ ಅವನ ಮಡದಿಯರು. ಬಸವಣ್ಣ ಹಲವು ಮುಖಗಳುಳ್ಳ ವ್ಯಕ್ತಿತ್ವದ ಅಪೂರ್ವ ಮನುಷ್ಯ. ದೈವಭಕ್ತ, ಭಂಡಾರಿ, ಸಾಮಾಜಿಕ ಆಂದೋಲನಕಾರ, ಮಾನವತಾವಾದಿ, ಸಾಹಿತಿ – ಇವುಗಳೆಲ್ಲ ಅವನಲ್ಲಿ ಮೇಳೈಸಿವೆ. ಭಕ್ತಿ ಭಂಡಾರಿ ಬಸವಣ್ಣ ವಚನಕಾರರಲ್ಲೆಲ್ಲ ಅತ್ಯಂತ ಶ್ರೇಷ್ಠನಾದವನು. ಬಸವಣ್ಣನ ವಚನಗಳಲ್ಲಿ ಭಕ್ತಿ, ಸಮಾಜ ವಿಮರ್ಶೆ, ಆಧ್ಯಾತ್ಮಿಕ ವಿಚಾರ ಮುಂತಾದುವು ಪ್ರತಿಪಾದಿತವಾಗಿವೆ.



ಅಕ್ಕಮಹಾದೇವಿ

ಅಕ್ಕಮಹಾದೇವಿ ಎಂದು ಖ್ಯಾತಳಾದ ಮಹಾದೇವಿಯಕ್ಕ ಬಸವಣ್ಣನ ಸಮಕಾಲೀನಳು. ಹೆಣ್ಣಿನ ಗೌರವ, ಸ್ವಾತಂತ್ರ್ಯ ಹಾಗೂ ಪರಮಾರ್ಥ ಸಾಧನೆಯ ಪ್ರತೀಕವಾಗಿ ಮೆರೆದವಳು. ಶ್ರೇಷ್ಠ ಅನುಭಾವಿಯಾದ ಆಕೆ ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವಗಳೆರಡನ್ನೂ ಧಿಕ್ಕರಿಸಿ ಜೀವನವನ್ನು ಹೋರಾಟದಲ್ಲಿ ಕಳೆದವಳು. ವಚನ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಟ್ಟು ಕನ್ನಡದ ಪ್ರಥಮ ಶ್ರೇಷ್ಠ ಕವಯಿತ್ರಿಯೆನಿಸಿದವಳು. ಹೆಣ್ಣುತನಕ್ಕೆ ಗೌರವ ಭಾವನೆಯನ್ನು ತಂದುಕೊಟ್ಟು ಬಸವಣ್ಣ, ಅಲ್ಲಮ, ಮೊದಲಾದವರಿಂದ ಸನ್ಮಾನಿತಳಾದವಳು. ಬಳ್ಳಿಗಾವೆಯ ಸಮೀಪದ ಉಡುತಡಿ ಈಕೆಯ ಜನ್ಮಸ್ಥಳ. ಮಧುರಭಕ್ತಿ, ವಿರಕ್ತಿ, ಸಮಾಜವಿಮರ್ಶೆ ಮುಂತಾದವು ಇವಳ ವಚನಗಳಲ್ಲಿ ಅಭಿವ್ಯಕ್ತವಾಗಿವೆ. ಎಳೆಯ ವಯಸ್ಸಿನಿಂದಲೇ ಶಿವನೇ ತನ್ನ ಗಂಡನೆಂದು ಭಾವಿಸಿ ಈಕೆ ತಂದೆ ತಾಯಿಗಳ ಕ್ಷೇಮಕ್ಕಾಗಿ ಊರಿನ ದೊರೆ ಕೌಶಿಕನನ್ನು ಒತ್ತಾಯದಿಂದ ಮದುವೆಯಾಗಿ ಕೊನೆಗೆ ಅವನನ್ನು ತೊರೆದು ವಿರಕ್ತಳಾಗಿ ಹೊರಡುತ್ತಾಳೆ. ಶ್ರೀಶೈಲದತ್ತ ಹೊರಟ ಅಕ್ಕ ನಡುವೆ ಅಲ್ಲಮ, ಬಸವಣ್ಣ ಮುಂತಾದ ಶಿವಶರಣರನ್ನು ಭೇಟಿ ಮಾಡುತ್ತಾಳೆ. ಅನುಭಾವದ ಸ್ವರೂಪವನ್ನು ಕುರಿತು ಶಿವಶರಣರೊಂದಿಗೆ ಸಂವಾದ ನಡೆಸಿ ಕೊನೆಗೆ ಒಂಟಿಯಾಗಿ ಕದಳಿಯ ವನದಲ್ಲಿ ತನ್ನ ನಲ್ಲ ಚೆನ್ನಮಲ್ಲಿಕಾರ್ಜುನನನ್ನು ಸೇರುತ್ತಾಳೆ. ವೇದನೆ ಹಾಗೂ ನಿವೇದನೆ ಅವಳ ವಚನಗಳ ಗುಣಗಳು. ಅವಳ ವಚನಗಳು ರಸಾರ್ದ್ರವಾಗಿದ್ದು, ಉಪಮಾನಗಳಿಂದ, ಚಿತ್ರಕಲ್ಪನೆಗಳಿಂದ ಕೂಡ ಮನೋಹರವಾಗಿವೆ.

ಪದಗಳ ಅರ್ಥ

ಇಳೆ–ಭೂಮಿ; ಕುನ್ನಿ–ನಾಯಿಮರಿ, ಕ್ಷುದ್ರ; ತಿರಿ–ಬೇಡು, ಸುತ್ತು; ಒರೆ–ಪರೀಕ್ಷಿಸು; ಅರಿ–ಕತ್ತರಿಸು; ಬಸಿರು–ಹೊಟ್ಟೆ; ಆಪಾದಮಸ್ತಕ–ಪಾದದಿಂದ ತಲೆಯವರೆಗೆ; ಇಳುಹು–ನೀಗು, ಇಳಿಸು, ಇಡು, ಕುಗ್ಗಿಸು; ವಸುಧೆ–ಭೂಮಿ; ಗಾರುಡಿಗ–ಹಾವಾಡಿಗ; ಪಾವಕ–ಬೆಂಕಿ; ಉದಕ–ನೀರು; ಹಲ್ಲಣ–ಜೀನು; ಸೊಡರು–ದೀಪ; ಘಟ–ಮಣ್ಣಿನ ಪಾತ್ರೆ, ಕೊಡ; ಚೈತನ್ಯ–ಶಕ್ತಿ, ಸಾಮರ್ಥ್ಯ, ಅರಿವು; ತೃಣ–ಹುಲ್ಲು, ದರ್ಭೆ; ಚರಣ–ಕಾಲು, ಪಾದ; ಭ್ರಾಂತಿ–ಕಂಗೆಡು; ದಿಕ್ಕು ತೋಚದಿರು–ಏನು ಮಾಡುವುದೆಂದು ತಿಳಿಯದಿರುವುದು, ಕಕ್ಕಾಬಿಕ್ಕಿಯಾಗುವುದು; ಜೋಗುಳ–ಲಾಲಿಹಾಡು; ಉಪಮಿಸು–ಹೋಲಿಕೆ; ಇದಿರು–ಎದುರು; ಭೃತ್ಯ–ಸೇವಕ; ಆರೋಗಣೆ–ಊಟ, ಭೋಜನ; ನಿಂದ್ಯ–ನಿಂದಿಸು; ಸ್ಥಾಪ್ಯ–ನೆಲೆಗೊಳಿಸು, ಪ್ರತಿಷ್ಠಾಪಿಸು.

10th_Kannada_Reader1-5.indd 85 03-04-2019 14:07:59

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸರ್ವರಲ್ಲಿ ಶಿವನ ಚೈತನ್ಯ ಹೇಗಿರುತ್ತದೆ ?
2. ತೃಣವನ್ನು ಯಾವುದು ನುಂಗಿತು ?
3. ಭ್ರಾಂತಿಯೆಂಬ ತಾಯಿಯು ತೊಟ್ಟಿಲೊಳಗೆ ಏನನ್ನು ಮಲಗಿಸಿ ಜೋಗುಳವಾಡುತ್ತಿದ್ದಾಳೆ ?
4. ಗುರುವಿನ ಜೊತೆಯಲ್ಲಿ ಹೋಗಬಾರದು. ಏಕೆ ?
5. ಗುರುವಿನ ಕರುಣದಿಂದ ಏನನ್ನು ಕಂಡೆ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಗುರು ಚರಣದ ಮೇಲೆ ತೃಣವನ್ನಿಟ್ಟರೆ ಏನಾಗುವುದು ?
2. ಅಲ್ಲಮಪ್ರಭು ಲೋಕವು ಯಾವುದಕ್ಕಾಗಿ ಸತ್ತಿತೆಂದು ಹೇಳುತ್ತಾನೆ ?
3. ಗುರುವಿನ ಸಮೀಪ ಕುಳ್ಳಿರಬಾರದು, ಗುರುವಿನ ಜೊತೆ ಲಿಂಗಾರ್ಚನೆ ಮಾಡಲಾಗದು. ಏಕೆ ?
4. ಅಕ್ಕಮಹಾದೇವಿಗೆ ಗುರುವು ಚನ್ನಮಲ್ಲಿಕಾರ್ಜುನನ ನಿಜವನ್ನು ಹೇಗೆ ತಿಳಿಹೇಳಿದನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ದೇವರ ದಾಸಿಮಯ್ಯನು ತನ್ನ ವಚನಗಳಲ್ಲಿ ಗುರುವಿನ ಮಹತ್ವವನ್ನು ಹೇಗೆ ತಿಳಿಸಿದ್ದಾರೆ ?
2. ಗುಹೇಶ್ವರನೆಂಬ ಲಿಂಗವ ಕಾಣಬಾರದು ಎನ್ನುವುದರ ಅರ್ಥವೇನು ?
3. ಗುರು ಶಿಷ್ಯ ಸಂಬಂಧವನ್ನು ಬಸವಣ್ಣ ಹೇಗೆ ವಿವರಿಸಿದ್ದಾರೆ ?
4. ಅಕ್ಕಮಹಾದೇವಿಯು ಗುರುವಿನ ವಿಶೇಷತೆಯನ್ನು ತನ್ನ ವಚನಗಳಲ್ಲಿ ಹೇಗೆ ಬಿಂಬಿಸಿದ್ದಾಳೆ ?

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಚೈತನ್ಯ, ಸಾಧ್ಯ, ಮೇಲೆ, ಆಸೆ, ಜ್ಞಾನ, ನರಕ, ಕನಸು, ಸಾರ, ಮುಂದಣ, ಹುಟ್ಟು.

2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಜನ್ಮ, ಗೋಷ್ಠಿ, ಆಸೆ, ಜ್ಞಾನ, ಶಿಶು, ಪ್ರಸಾದ.

3. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಚೈತನ್ಯ, ಆಮಿಷ, ಜೋಗುಳ ಹಾಡು, ಕಾರುಣ್ಯ, ನಮಸ್ಕರಿಸು, ಧನ್ಯ.

4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಸರ್ವಾಂಗ, ಇದ್ದರೇನು, ಗುಹೇಶ್ವರ, ಜೋಗುಳವಾಡು, ಸದಾಚಾರ, ಶಿವಾಚಾರ, ಲಿಂಗಾರ್ಚನೆ, ಸದ್ಭಕ್ತ, ಸಜ್ಜನ, ಪಾದೋದಕ, ಮಲ್ಲಿಕಾರ್ಜುನ, ಸದ್ಗುರು.

5. ಹೊಂದಿಸಿ ಬರೆಯಿರಿ.

ಅ	ಆ
1. ಚನ್ನಮಲ್ಲಿಕಾರ್ಜುನ	ಅ. ಬಸವಣ್ಣ
2. ಗುಹೇಶ್ವರ	ಆ. ದೇವರ ದಾಸಿಮಯ್ಯ
3. ಕೂಡಲ ಸಂಗಮದೇವಾ	ಇ. ಅಲ್ಲಮ ಪ್ರಭು
4. ಕಾಣಾ ರಾಮನಾಥಾ	ಈ. ಅಕ್ಕಮಹಾದೇವಿ

ಚಟುವಟಿಕೆ

1. ಅಧ್ಯಾಪಕರ ಸಹಾಯದಿಂದ ವಚನ ಸಂಗ್ರಹಗಳನ್ನು ವಾಚನಾಲಯದಿಂದ ಪಡೆದು ಉತ್ತಮವಾದ ವಚನಗಳನ್ನು ಸಂಗ್ರಹಿಸಿರಿ.
2. ಸಂಗ್ರಹಿಸಿದ ವಚನಗಳಿಗೆ ರಾಗ ಸಂಯೋಜಿಸಿ ಸಾಮಾನ್ಯರಿಗೂ ಅರ್ಥವಾಗುವಂತೆ ಹಾಡಲು ಅಭ್ಯಾಸ ಮಾಡಿರಿ. ಅದನ್ನು ಶಾಲಾ ಸಮಾರಂಭಗಳಲ್ಲಿ ಹಾಡಿರಿ.

10th_Kannada_Reader1-5.indd 86 03-04-2019 14:07:59

ಘಟಕ ಐದು

ವ್ಯಾಸಂಗದ ಹವ್ಯಾಸ

– ಡಿ.ಎಲ್.ನರಸಿಂಹಾಚಾರ್



ದೇಹದ ಆರೋಗ್ಯಕ್ಕೆ ಹಸಿವು, ನಿದ್ರೆ ಮುಂತಾದವು ಎಷ್ಟು ಅವಶ್ಯಕವೋ, ವ್ಯಾಸಂಗವು ಮಾನಸಿಕ ಆರೋಗ್ಯಕ್ಕೆ ಅಷ್ಟೇ ಅವಶ್ಯಕ. ಊಟದ ರುಚಿ ರಸಿಕನೇ ಬಲ್ಲ. ಮಕ್ಕಳ ಪ್ರೀತಿ ವಾತ್ಸಲ್ಯ ತಾಯಿಗೇ ಗೊತ್ತು. ಹಾಗೆಯೇ ವ್ಯಾಸಂಗದ ಸಂತಸ ಅದರ ಹವ್ಯಾಸಿಗೇ ವೇದ್ಯ. ಬಾಲ್ಯದಿಂದಲೂ ವ್ಯಾಸಂಗವೇ ತನ್ನ ಬದುಕೆಂದು ನಂಬಿದ್ದ ಲೇಖಕರ ಸ್ವಾನುಭವದ ಉತ್ತಮ ಪರಿಣಾಮಕ್ಕೆ ಈ ಲೇಖನವು ಮಾದರಿಯಾಗಿದೆ.



10th_Kannada_Reader1-5.indd 87 03-04-2019 14:07:59

'ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಗಳಂ ನೋಡುತಂ' ಎಂಬುದು ಪುಲಿಗೆರೆಯ ಸೋಮೇಶ್ವರನ ಮಾತು. ಬಲ್ಲವರಿಂದ ಕಲಿಯುವ ವಿಚಾರವಂತೂ ಅತಿ ಶ್ರೇಷ್ಠವಾದದ್ದೇ. ಹೀಗೆ ಕಲಿಯಲು ಸಾಧ್ಯವಿಲ್ಲದಿರುವಾಗ 'ಶಾಸ್ತ್ರಂಗಳ'ನ್ನು ನೋಡಿ ಕಲಿಯುವ ಮಾರ್ಗವೇ ಸುಲಭವಾದದ್ದು. ಇಲ್ಲಿ 'ಶಾಸ್ತ್ರಂಗಳು' ಎಂಬ ಮತನ್ನು ಕವಿ ಎಲ್ಲ ರೀತಿಯ ಗ್ರಂಥ ಸಮುದಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಬಳಸಿದ್ದಾನೆ. ಇದರಲ್ಲಿ ರಸ–ಭಾವ ಪ್ರಧಾನವಾದ ಕಾವ್ಯ ನಾಟಕಾದಿ ಗ್ರಂಥಗಳೂ, ವಿಜ್ಞಾನ ಶಾಸ್ತ್ರಗಳೂ, ರಾಜಕೀಯ ಸಾಮಾಜಿಕ ಗ್ರಂಥಗಳೂ, ಚರಿತ್ರೆಗಳೂ, ಯಂತ್ರೋಪಕರಣ ವಿಷಯ ಗ್ರಂಥಗಳೂ ಸೇರಿವೆ. ಅಲ್ಲದೆ ರೈಲ್ವೆ ಗೈಡಿನಂಥ ಪುಸ್ತಕಗಳೂ, ಸರ್ಕಾರದ ಆಡಳಿತ ವಿಷಯಕವಾದ ಪ್ರಕಟಣೆಗಳೂ, ಇನ್ನೂ ಹಲವಾರು ರೀತಿಯ ಲೌಕಿಕ ಪಾರಮಾರ್ಥಿಕ ಜ್ಞಾನದಾಯಕವಾದ ಗ್ರಂಥಗಳೂ ಇವೆ. ಈ ಎಲ್ಲ ಗ್ರಂಥಗಳನ್ನೂ ಒಬ್ಬನೇ ತನ್ನ ಜೀವಮಾನದಲ್ಲಿ ಓದಿ ಮುಗಿಸುವುದು ತೀರಾ ಅಸಾಧ್ಯವಾದದ್ದು. ತನಗೆ ಯಾವ ವಿಷಯದಲ್ಲಿ ಆಸಕ್ತಿಯಿದೆಯೋ, ಯಾವುದರಲ್ಲಿ ತನ್ನ ಬುದ್ಧಿ ಚುರುಕಾಗಿ ಓಡುತ್ತದೆಯೋ, ಆ ವಿಷಯವನ್ನು ಕುರಿತ ಗ್ರಂಥಗಳನ್ನು ಮಾತ್ರ ತಾನು ಆರಿಸಿಕೊಂಡು ಓದಬೇಕಾಗುತ್ತದೆ. ಇದೂ ಕೂಡ ಕಷ್ಟಸಾಧ್ಯವಾದದ್ದೆ. ಏಕೆಂದರೆ, ಯಾವ ಅಲ್ಪ ವಿಷಯವೇ ಆಗಲಿ ಅದನ್ನು ಕುರಿತ ಗ್ರಂಥಗಳ ಸಂಖ್ಯೆ ಪ್ರಪಂಚದ ನಾನಾ ಭಾಷೆಗಳಲ್ಲಿ ಅಪಾರವಾಗಿದೆ. ಆದ್ದರಿಂದ ಇದರಲ್ಲಿ ಕೂಡ ವ್ಯಕ್ತಿ ವಿವೇಕವನ್ನು ಉಪಯೋಗಿಸಿ ಮುಖ್ಯವೆಂದು ಕಾಣುವ ಗ್ರಂಥಗಳನ್ನು ಮಾತ್ರ ನೋಡಬೇಕಾಗುತ್ತದೆ. ಹೀಗೆ ಗ್ರಂಥಗಳನ್ನು ಅವಲೋಕನ ಮಾಡಿ ಜ್ಞಾನವನ್ನು ಗಳಿಸುವುದಕ್ಕೆ ವ್ಯಾಸಂಗವೆಂದು ಹೆಸರು. ಎತ್ತಿಕೊಂಡ ವಿಷಯವನ್ನು ಪಟ್ಟು ಹಿಡಿದು ಆಸಕ್ತಿಯಿಂದ ಅಭ್ಯಾಸ ಮಾಡುವುದು ನಿಜವಾದ ವ್ಯಾಸಂಗ. ಆದರೆ ಇಲ್ಲಿ ಆ ಪದದ ಅರ್ಥವನ್ನು ಸ್ವಲ್ಪ ಸಡಿಲ ಮಾಡಿ ವಿನೋದಕ್ಕಾಗಿ ಓದುವುದನ್ನು ಒಳಕೊಳ್ಳುವಂತೆ ಅದನ್ನು ಬಳಸಿದೆ.

ಹವ್ಯಾಸವೆಂದರೆ ಗೀಳು, ಆಸಕ್ತಿ, ಅಭಿಲಾಷೆ. ಒಬ್ಬನಿಗೆ ಒಂದೆರಡು ವಿಷಯಗಳಲ್ಲಿ ಮಾತ್ರ ತೀವ್ರವಾದ ಆಸಕ್ತಿ ಇರುತ್ತದೆ. ಮಿಕ್ಕ ವಿಷಯಗಳಲ್ಲಿ ದಿನಚರಿಯ ವ್ಯವಹಾರಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ತಿಳಿದುಕೊಂಡಿದ್ದರೆ ಸಾಕು. ಹೀಗೆ ತಿಳಿಯುವುದು ಹವ್ಯಾಸವೆನ್ನಿಸಿಕೊಳ್ಳುವುದಿಲ್ಲ. ಕೆಲವರ ಬಾಳಿನಲ್ಲಿ ಓದುವುದು ದಿನಚರಿಯ ಕೆಲಸಗಳಲ್ಲಿ ಒಂದು ಅಂಶವಾಗಿರುತ್ತದೆ. ಎಂದಾದರೂ ಒಂದು ದಿನ ಏನೋ ಕಾರಣದಿಂದ ಓದಲಾಗದಿದ್ದರೆ ಅವರ ಮನಸ್ಸಿಗೆ ನೆಮ್ಮದಿಯಿರುವುದಿಲ್ಲ. ಕಾಫಿ ಕುಡಿಯದಿದ್ದರೆ, ನಸ್ಯ ಏರಿಸದಿದ್ದರೆ ಹೇಗೆ ಬಾಳು ಬರಿದಾಗಿ ಕಾಣುತ್ತದೆಯೋ ಹಾಗೆಯೇ ಓದದೇ ಇದ್ದರೆ ಕೆಲವು ಜೀವಿಗಳಿಗೆ ಹಿತವಾಗುವುದಿಲ್ಲ. ಇಂಥವರಿಗೆ ಓದುವುದು ದಿನಚರಿಯ ರೂಢಿಯಾಗಿರುತ್ತದೆ. ಹವ್ಯಾಸವೆಂಬ ಪದವನ್ನು ಈ ಅರ್ಥದಲ್ಲಿ ಬಳಸುವುದು ನಮ್ಮ ಜನರಲ್ಲಿ ಕಾಣುತ್ತದೆ. ಏನಾದರೂ ಒಂದು ಹವ್ಯಾಸ ಪ್ರತಿಯೊಬ್ಬನಿಗೂ ಇರುತ್ತದೆ. ಕೆಲವು ಹವ್ಯಾಸಗಳು ಅವನ್ನುಳ್ಳ ವ್ಯಕ್ತಿಗೆ ಮಾತ್ರ ಹಿತವನ್ನೋ, ಅಹಿತವನ್ನೋ ಮಾಡಬಹುದು. ಕೆಲವು ಸುತ್ತಲಿನ ಸಮಾಜಕ್ಕೆ ಮಾತ್ರ ಒಳ್ಳೆಯದಾಗಿಯೋ, ಕೆಟ್ಟದಾಗಿಯೋ ಪರಿಣಮಿಸಬಹುದು. ಮತ್ತೆ ಕೆಲವು ಹವ್ಯಾಸಗಳು ವ್ಯಕ್ತಿಗೂ, ಸಮಾಜಕ್ಕೂ ಏಕಕಾಲದಲ್ಲಿ ಕ್ಷೇಮವನ್ನೋ, ಕ್ಷೋಭೆಯನ್ನೋ ಎಸಗಬಹುದು. ವ್ಯಾಸಂಗದ ಹವ್ಯಾಸಕ್ಕೂ ಈ ಎಲ್ಲ ಲಕ್ಷಣಗಳುಂಟು. ಕಲಿತದ್ದು ಒಳ್ಳೆಯದಾಗಿದ್ದರೆ ಅದರಿಂದ ಯಾರಿಗೂ ಕೆಡುಕಾಗುವುದಿಲ್ಲ. ತಸ್ಕರಶಾಸ್ತ್ರವನ್ನು ಕಲಿತರೆ ಕಲಿತದ್ದನ್ನು ಕಾರ್ಯತಃ ತೋರಿಸಿದರೆ ಯಾರಿಗೂ ಕಷ್ಟ ತಪ್ಪುವುದಿಲ್ಲ. ತುಬ್ಬುಗಾರನಿಗೆ ಇದರಿಂದ ಪ್ರಯೋಜನವಿದೆ, ಅಷ್ಟೆ. ಮೋಚಿಯಿಂದ ಹಿಡಿದು ಮಂತ್ರಿಯವರೆಗೆ, ರಾಕ್ಷಸನಿಂದ ಹಿಡಿದು ತಪಸ್ವಿಯವರೆಗೆ ಅವರವರು ವ್ಯಾಸಂಗ ಮಾಡಬೇಕಾದ ವಿಷಯಗಳು ಬಹಳವಾಗಿವೆ. ಇವನ್ನೆಲ್ಲಾ ಕುರಿತು ವಿವರಿಸಲು ಸಾಧ್ಯವಿಲ್ಲ. ಹೊತ್ತು ಕಳೆಯುವುದಕ್ಕೋ, ವಿನೋದಕ್ಕೋ, ಅಲ್ಪಸ್ವಲ್ಪ ಜ್ಞಾನಾರ್ಜನೆ ಮಾಡುವುದಕ್ಕೋ ಬೇಕಾದ ಗ್ರಂಥ ವ್ಯಾಸಂಗವನ್ನು ಮಾತ್ರ ಕುರಿತು ಇಲ್ಲಿ ಪ್ರಸ್ತಾಪಿಸುತ್ತೇನೆ.

ಸ್ವಂತ ಅನುಭವದಿಂದ ಬರುವ ತಿಳಿವಳಿಕೆಯೇ ಉತ್ಕೃಷ್ಟವಾದ ಜ್ಞಾನವಾಗಿದ್ದರೂ ಅದು ಎಲ್ಲರಿಗೂ ಎಲ್ಲ ವಿಷಯಗಳಲ್ಲೂ ಲಭ್ಯವಾಗುವುದಿಲ್ಲ. ಪ್ರತಿಯೊಬ್ಬನ ಅನುಭವಕ್ಕೂ ಮಿತಿ ಇರುತ್ತದೆ. ಈ ಮಿತಿಯನ್ನು ಕೊಂಚ ವಿಸ್ತರಿಸಿಕೊಳ್ಳಬೇಕಾದರೆ ವ್ಯಾಸಂಗವು ಅವಶ್ಯಕ. ಈ ವಿಸ್ತರಣ ಕಾರ್ಯ ಒಂದು ದಿನದಲ್ಲಿ ನಡೆಯುವಂಥದಲ್ಲ, ಪ್ರತಿದಿನವೂ ಕೊಂಚ ಕೊಂಚ ವಿಸ್ತರಿಸುತ್ತಾ ಹೋಗುತ್ತದೆ. ಆದ್ದರಿಂದ ವ್ಯಾಸಂಗವು ಹವ್ಯಾಸವಾಗಲೇ ಬೇಕು. ಮನುಷ್ಯ ಸ್ವಭಾವವನ್ನು ಚೆನ್ನಾಗಿ ತಿಳಿಯಬೇಕಾದರೆ ವ್ಯಕ್ತಿಯೊಬ್ಬನು ನೂರಾರು ಜನರೊಡನೆ ಕಲೆತು ಓಡಾಡಿ ಅವರನ್ನು ಪರೀಕ್ಷೆ ಮಾಡಬೇಕು. ಇದು ಎಷ್ಟು ಜನರಿಗೆ ಸಾಧ್ಯ? ಎಲ್ಲರೊಡನೆಯೂ ಅವನ ನಿಕಟವಾದ ಸಂಬಂಧವನ್ನು ಬೆಳೆಸುವುದು ಆಗದ ಕೆಲಸ. ಅವನ ಪ್ರಪಂಚದಲ್ಲಿ, ಬೀದಿಯಲ್ಲಿ

10th_Kannada_Reader1-5.indd 88 03-04-2019 14:07:59

'ಏನ್ರೀ? ಚೆನ್ನಾಗಿದ್ದೀರಾ?' ಎಂದು ಕೇಳುವವರ ಸಂಖ್ಯೆ ಹೆಚ್ಚಾಗಿರುತ್ತದೆ. ಅವರಲ್ಲಿ ಇವನಿಗೆ ಬೇಕಾದವರು, ಕಷ್ಟ ಸುಖಗಳಲ್ಲಿ ನೆರವಾಗುವವರು ತೀರ ಕಡಿಮೆ. ಆತ್ಮೀಯವಾದ ಸಂಪರ್ಕವನ್ನು ಹೊಂದಿರುವವರಂತೂ ಎಣಿಕೆಗೆ ಸಿಕ್ಕಬಲ್ಲರು. ವ್ಯಕ್ತಿಯ ಪ್ರಪಂಚ ಸಣ್ಣದು. ಇದರಿಂದ ಬರುವ ಅನುಭವವು ವಿಶಾಲವಾಗಿಯೂ ಆಳವಾಗಿಯೂ ಹೇಗೆ ತಾನೆ ಇದ್ದೀತು ? ಆದರೆ ಇದು ನೇರವಾದ ಅನುಭವವಾಗಿರುವುದರಿಂದ ಬೆಲೆಯುಳ್ಳದ್ದು. ಇದನ್ನು ವಿಸ್ತರಿಸಿಕೊಳ್ಳಬೇಕಾದರೆ ವ್ಯಾಸಂಗಕ್ಕಿಂತ ಉತ್ಕೃಷ್ಟವಾದ ಮಾರ್ಗವಿಲ್ಲ. ಕಥೆ, ಕಾದಂಬರಿ, ನಾಟಕಗಳನ್ನೋದಿದರೆ ಮನುಷ್ಯ ಸ್ವಭಾವದ ಪರಿಜ್ಞಾನ ಹೆಚ್ಚು ಹೆಚ್ಚಾಗಿ ಉಂಟಾಗುತ್ತದೆ. ನಮ್ಮ ಅನುಭವದಲ್ಲಿ ಎದುರುಗೊಳ್ಳಲಾಗದ ವ್ಯಕ್ತಿಗಳನ್ನು ನಾವು ಅಲ್ಲಿ ನೋಡುತ್ತೇವೆ. ನಾವು ಕಾಣದ ಸಮಸ್ಯೆಗಳೂ, ಧರ್ಮ ಸಂಕಟಗಳೂ ನಮಗೆ ಅಲ್ಲಿ ದೊರೆಯುತ್ತವೆ. ನಮಗಿಂತಲೂ ನೂರರಷ್ಟು ಅನುಭವಶಾಲಿಯಾದ ಕವಿಯ ಜ್ಞಾನ ಭಂಡಾರ ನಮ್ಮ ವಶವಾಗುತ್ತದೆ. ಕವಿಯ ಮಾತಂತಿರಲಿ, ನ್ಯಾಯಾಸ್ಥಾನದಲ್ಲಿ ನಡೆಯುವ ಮೊಕದ್ದಮೆಗಳ ವರದಿಗಳನ್ನು ಓದಿದರೂ ಸಾಕು, ಲೋಕದಲ್ಲಿ ಎಂತೆಂತಹ ಚಿತ್ರ ವಿಚಿತ್ರ ಸ್ವಭಾವದವರಿದ್ದಾರೆಂಬ ವಿಷಯ ಗೊತ್ತಾಗುತ್ತದೆ. ಲೋಕ ಲೀಲೆಯನ್ನು ಕಂಡು ವಿಸ್ಮಯಗೊಳ್ಳುತ್ತೇವೆ. ಹೀಗೆ ವ್ಯಾಸಂಗದಿಂದ ಬರುವ ಜ್ಞಾನ ನೇರವಾದ ಅನುಭವಕ್ಕೆ ಸಾಟಿಯಿಲ್ಲದಿದ್ದರೂ ಅದಕ್ಕಿರುವ ಎಲ್ಲೆಯನ್ನು ವಿಸ್ತರಗೊಳಿಸುತ್ತದೆ. ಅನುಭವದ ಜ್ಞಾನಕ್ಕೆ ವ್ಯಾಸಂಗದ ಜ್ಞಾನ ಪೂರಕವಾಗುತ್ತದೆ.

ವ್ಯಾಸಂಗವನ್ನು ಹವ್ಯಾಸವಾಗಿ ಉಳ್ಳವರಿಗೆ ತಮ್ಮ ಜ್ಞಾನವನ್ನು ಬೆಳೆಸಿಕೊಳ್ಳಬೇಕೆಂಬ ಒಂದೇ ಒಂದು ಉದ್ದೇಶವಿರುವುದಿಲ್ಲ. ಕೆಲವರು ತಾವು ಕಲಿತದ್ದನ್ನು ಬೇರೆಯವರಿಗೆ ತಿಳಿಸಬೇಕೆಂದು ಬಯಸಿ ಗ್ರಂಥರಚನೆ ಮಾಡುತ್ತಾರೆ. ಇತರರು ತಿಳಿಯಲಿ, ಬಿಡಲಿ, ಬರೆದ ಗ್ರಂಥ ಖರ್ಚಾಗಿ ಕೊಂಚ ಹಣ ಕೈಗೆ ಬಂದರೆ ಯಾರನ್ನು ಕೆಡಿಸಿತು ಎಂಬ ಮನೋಧರ್ಮ ಕೆಲವರದು. ಕೀರ್ತಿಗಾಗಿ ಬರೆಯುವವರು ಮತ್ತೆ ಕಲೆವರು. ಮನದಲ್ಲಿ ತಾಕಲಾಡುತ್ತಿರುವ ಆಲೋಚನೆಗಳ ಹೊರೆಯನ್ನು ಹೊರಕ್ಕೆ ಕೆಡವಿ ಚಿತ್ತ ಸಮಾಧಾನವನ್ನು ಪಡೆಯಬೇಕೆಂದು ಬರೆಯುವವರು ಕೆಲವರು. ಸಮಾಜದಲ್ಲಿನ ಅನ್ಯಾಯಗಳಿಂದ ಕೊರಗಿ ಕ್ರುದ್ಧರಾಗಿ ಜನಮನವನ್ನು ಉದ್ರೇಕಗೊಳಿಸಿ ಕ್ರಾಂತಿಯನ್ನೆಬ್ಬಿಸಬೇಕೆಂದು ಬರೆಯುವವರು ಮತ್ತೆ ಕೆಲವರು. ಪ್ರಯೋಜನದ ಅಭಿಲಾಷೆಯಿಲ್ಲದೆ ಯಾವ ಕೆಲಸವನ್ನೂ ಯಾವ ದಡ್ಡನೂ ಕೂಡ ಮಾಡನೆಂಬುದು ಹಿರಿಯರ ಹೇಳಿಕೆ. ಇದು ಅನುಭವದ ಸತ್ಯ. ಆದ್ದರಿಂದ ವ್ಯಾಸಂಗದ ಹವ್ಯಾಸಕ್ಕೂ ಇರಲೇಬೇಕಾದ ಉದ್ದೇಶಗಳನ್ನು, ಪ್ರಯೋಜನಗಳನ್ನು ಪರಿಶೀಲಿಸುವುದು ಅತ್ಯವಶ್ಯಕ.

ನಮಗುಂಟಾಗುವ ಸುಖದುಃಖಗಳು ಇಬ್ಬಗೆಯಾಗಿವೆ. ಒಂದನೆಯದು ದೈಹಿಕವಾದದ್ದು; ಎರಡನೆಯದು ಮಾನಸಿಕವಾದದ್ದು. ಒಂದು ಸ್ಥೂಲ, ಇನ್ನೊಂದು ಸೂಕ್ಷ್ಮ. ದೈಹಿಕ ಸುಖಕ್ಕಿಂತ ಮಾನಸಿಕ ಸುಖಕ್ಕೆ ಹೆಚ್ಚು ಬೆಲೆ. ಒಂದೊಂದು ಸಲ ಮಾನಸಿಕ ಸುಖ ಅಧಿಕವಾಗಿದ್ದರೆ ದೈಹಿಕ ಸುಖ ಕೂಡ ಮರೆತು ಹೋಗಬಹುದು. ವ್ಯಾಸಂಗದಿಂದ ನಾವು ಪ್ರಮುಖವಾಗಿ ಪಡೆಯುವುದು ಮಾನಸಿಕ ಸುಖವನ್ನು. ಅದರಲ್ಲೂ ರಸಭಾವಗಳ ರಸಾಯನವಾದ ಕಾವ್ಯ ನಾಟಕಗಳನ್ನು ಓದಿದರೆ ನಮ್ಮ ಮನಸ್ಸಿನ ಸುಖ ಆನಂದದ ಅಂತಸ್ಥಿಗೆ ಏರಿ ಬಿಡುತ್ತದೆ. ಕಾವ್ಯ ವ್ಯಾಸಂಗದ ಪರಮಾರ್ಥವೇ ಇದು. ಇದನ್ನು ಹವ್ಯಾಸವಾಗಿ ಉಳ್ಳವರು ನಿಜವಾಗಿಯೂ ಸುಖಿಗಳು. ಅವರ ಪಾಲಿಗೆ ದುಃಖವೂ ಕೂಡ ಆನಂದದಾಯಕವಾಗುತ್ತದೆ. ಲೋಕದ ನೋವು ಕಾವ್ಯದಲ್ಲಿ ಮೈದೋರಿದಾಗ ಹೇಳಲಾಗದ ಯಾವುದೋ ರಾಸಾಯನಿಕ ಕ್ರಿಯೆಯಿಂದ ಆನಂದ ಸ್ಕಂಧಿಯಾಗಿ ಮಾರ್ಪಡುತ್ತದೆ. ಇಂಥ ಆನಂದದ ಎದುರಿಗೆ ದೈಹಿಕ ಸುಖ ಸತ್ವಹೀನವಾಗಿ ಕಾಣುವುದು ಅಚ್ಚರಿಯೇನಲ್ಲ.

ಶಾಸ್ತ್ರ ವ್ಯಾಸಂಗದಿಂದಲೂ ಇಂಥ ಮಾನಸಿಕ ಸುಖವನ್ನು ಹೊಂದಬಹುದು. ಇಲ್ಲಿ ರಾಗ ಭಾವಗಳು ಉದ್ರೇಕಗೊಳ್ಳುವ ಪ್ರಸಂಗವಿಲ್ಲ. ಬುದ್ಧಿಯ ಕಾರ್ಯವೇ ಇಲ್ಲಿ ಪ್ರಧಾನ. ಪ್ರಕೃತಿಯ ರಹಸ್ಯವನ್ನು ಭೇದಿಸಲು ಬುದ್ಧಿ ಬಂದೂಕದಿಂದ ಹೊರ ಹೊಮ್ಮುವ ಗಂಡಿನಂತೆ ಮುನ್ನುಗ್ಗುತ್ತಿರುವಾಗ ಇತರ ವಿಷಯಗಳ ಪರಿವೆಯೇ ಅದಕ್ಕೆ ಬರುವುದಿಲ್ಲ. ತಾನೇ ತಾನಾಗಿ ತನ್ನ ಸಾಹಸದಲ್ಲಿ ಅದು ಸುಖಿಸುತ್ತದೆ. ರಹಸ್ಯವನ್ನು ಕಂಡು ಹಿಡಿದಾಗಲಂತೂ ಅದಕ್ಕೆ ಬರುವ ಆನಂದ ವರ್ಣಿಸಲಸದಳ. ಕಠಿಣವಾಗಿರುವ ಗಣಿತದ ಸಮಸ್ಯೆಯೊಂದನ್ನು ಬುದ್ಧಿ ಪರಿಶ್ರಮದಿಂದ ಬಿಡಿಸಿದಾಗ ಸಂತೋಷವುಂಟಾಗುವುದು ಎಲ್ಲರ ಅನುಭವವಾಗಿದೆ. 'ನಾನು ಕಂಡು ಹಿಡಿದೆ. ನಾನು ಕಂಡು ಹಿಡಿದೆ' ಎಂದು ಆರ್ಕಿಮಿಡೀಸನು ಕೂಗಾಡಿ ಕುಣಿದನಂತೆ. ಅವನ ಮನಸ್ಸಿಗೆ ಅಷ್ಟು ಸುಖದ ಸ್ಪರ್ಷವುಂಟಾಗಿರಬೇಕು! ಅಂಥ ಪರಿಶೋಧನೆಯಿಂದ ಇಷ್ಟು ಹರ್ಷ ಬರುವುದಾದರೆ ಅತಿ ಗಹನವಾದ ಪ್ರಕೃತಿ ರಹಸ್ಯ

10th_Kannada_Reader1-5.indd 89 03-04-2019 14:07:59

ಭೇದನದಿಂದ ಆಗುವ ಆನಂದಕ್ಕೆ ಮಿತಿಯಿದೆಯೇ? ಅಣು ಪರಮಾಣುಗಳ ರಚನೆಯನ್ನು ಕಂಡು ಹಿಡಿಯುವುದು, ಅಣುವನ್ನು ಸೀಳುವುದು, ಗ್ರಹ ನಕ್ಷತ್ರ–ನೀಹಾರಿಕೆಗಳ ಚಲನ ವಲನ ನಿಯಮಗಳನ್ನು ತಿಳಿಯುವುದು, ಅಗಾಧವಾದ ಭೌತ ಶಕ್ತಿಗಳನ್ನು ವಶ ಪಡಿಸಿಕೊಂಡು ಅವನ್ನು ಆಳುವುದು, ಇವೇ ಮುಂತಾದ ಸಾಹಸಗಳಲ್ಲಿ ಜಯವನ್ನು ಗಳಿಸಿದ ಮಾನವ ಬುದ್ಧಿ ಎಷ್ಟು ಪ್ರಚಂಡವಾದದ್ದು! ಇಂಥ ಬುದ್ಧಿ ಪೌರುಷದಿಂದ ಬರುವ ಆನಂದವೂ ಮಿಗಿಲಾದದ್ದು. ಹಲವು ಶತಮಾನಗಳಿಂದ ಮನುಷ್ಯ ಬುದ್ಧಿ ನಿರಂತರವಾಗಿ ಪರಿಶ್ರಮಿಸಿ ಶೇಖರಿಸಿಟ್ಟಿರುವ ವಿಜ್ಞಾನ ಭಂಡಾರದ ಪರಿಚಯವನ್ನು ವ್ಯಾಸಂಗದ ಮೂಲಕ ಹೊಂದುವ ಆಸಕ್ತಿಯುಳ್ಳವನಿಗೂ ಆ ಬುದ್ಧಿಯಾತ್ರೆಯಲ್ಲಿ ಆನಂದವು ಲಭಿಸುತ್ತದೆ.

ವಿಜ್ಞಾನದ ಪರಿಶೋಧನೆಗಳಲ್ಲಿ ಬಹುಭಾಗ ಬುದ್ಧಿಯ ತರ್ಕಶಕ್ತಿಯಿಂದ ಬಂದಿರುವ ಸಿದ್ಧಿಗಳು. ಅತಿಮುಖ್ಯವೂ, ಮುಂದೆ ನೂರಾರು ಸಂಶೋಧನೆಗಳಿಗೆ ಬೀಜರೂಪವೂ ಆದ ಕೆಲವು ತತ್ವಗಳು ವಿಜ್ಞಾನಿಗಳಿಗೆ ಯಾವುದೋ ಒಂದು ಕ್ಷಣದಲ್ಲಿ ಮಿಂಚಿನಂತೆ ಹೊಳೆದು ಬಿಡುತ್ತದೆ. ಇದನ್ನು ತರ್ಕಾತೀತ ಜ್ಞಾನವೆಂದೋ, ಸ್ವಯಂಪ್ರಕಾಶಿತ ಜ್ಞಾನವೆಂದೋ ಕರೆಯಬಹುದು. 'ರಿಲೆಟಿವಿಟಿ' ಸಿದ್ಧಾಂತವು ವಿಜ್ಞಾನಿ ಐನ್‌ಸ್ಟೀನ್‌ಗೆ ಈ ರೀತಿ ಗೋಚರವಾಯಿತಂತೆ. ಇಂಥ ಸಂದರ್ಭಗಳಲ್ಲಿ ವಿಜ್ಞಾನಿ ಋಷಿ ಸದೃಶನಾಗುತ್ತಾನೆ. ಕವಿಯ ದಿವ್ಯ ಭವ್ಯ ಸೃಷ್ಟಿಗೆ ಪ್ರತಿಭೆ ಹೇಗೆ ಕಾರಣವೋ ಹಾಗೆ ವಿಜ್ಞಾನಿಯ ಗಹನ ಸಿದ್ಧಿಗೆ ಅವನ ಸ್ವಯಂ ಪ್ರಕಾಶ ಜ್ಞಾನ ಕಾರಣ. ಇಂಥ ವಿಷಯಗಳನ್ನೆಲ್ಲಾ ವ್ಯಾಸಂಗ ಮಾಡುತ್ತಾ ಹೊರಟರೆ ಯಾರಿಗೆ ತಾನೇ ರೋಮಾಂಚವಾಗುವುದಿಲ್ಲ.

ಹೀಗೆ ಕಾವ್ಯ ಶಾಸ್ತ್ರಗಳೆರಡೂ ಅವನ್ನು ವ್ಯಾಸಂಗ ಮಾಡುವವರಿಗೆ ಆನಂದವನ್ನು ದೊರಕಿಸಿ ಕೊಡ ಬಲ್ಲವು. ಕಾವ್ಯದಲ್ಲಿ ರಾಗ–ಭಾವಗಳ ಮೂಲಕ ಆನಂದದ ನೆಲೆ ದೊರೆತರೆ ಶಾಸ್ತ್ರದಲ್ಲಿ ಬುದ್ಧಿಯ ಮೂಲಕ ಅದೇ ನೆಲೆ ಸಿಕ್ಕುತ್ತದೆ. ಈ ಆನಂದದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅದರ ಕಡೆಗೆ ಪ್ರಯಾಣ ಮಾಡಲು ಕಾವ್ಯ ಶಾಸ್ತ್ರಗಳು ಬೇರೆ ಬೇರೆ ಮಾರ್ಗಗಳು. ವಿಜ್ಞಾನಿಯಾದವನು ಕಲಾಭ್ಯಾಸದ ಹವ್ಯಾಸವನ್ನೂ, ಕಲೆಗಾರನು ವಿಜ್ಞಾನಾಭ್ಯಾಸದ ಹವ್ಯಾಸವನ್ನೂ ಇಟ್ಟುಕೊಂಡರೆ ಬಹಳ ಒಳ್ಳೆಯದು. ಇಬ್ಬರ ಮನಸ್ಸೂ ಪರಿಪೂರ್ಣವಾಗುತ್ತದೆ. ಹೊಟ್ಟೆಯ ಪಾಡಿಗಾಗಿ ಯಾವುದಾದರೂ ವಿದ್ಯೆಯನ್ನು ಮನುಷ್ಯ ಕಲಿಯಲೇಬೇಕು; ಅದಕ್ಕೆ ಸಂಬಂಧಪಡದ ಯಾವುದಾದರೂ ಇನ್ನೊಂದು ವಿದ್ಯೆಯ ವ್ಯಾಸಂಗ ಹವ್ಯಾಸವಾಗಬೇಕು. ಇದರಿಂದ ವ್ಯಕ್ತಿಯ ಬಾಳು ತುಂಬಿ ಹಸನಾಗುತ್ತದೆ.

ಕೃತಿ–ಕರ್ತೃ ಪರಿಚಯ



ಡಿ.ಎಲ್.ನರಸಿಂಹಾಚಾರ್ಯ

ಈ ಪಾಠವನ್ನು ಡಿ.ಎಲ್.ಎನ್. ಎಂದು ಕನ್ನಡ ವಿದ್ವಜ್ಜನರಿಗೆ ಚಿರಪರಿಚಿತರಾಗಿರುವ ಶ್ರೀ. ಡಿ.ಎಲ್.ನರಸಿಂಹಾಚಾರ್ಯರ 'ಆಯ್ದ ಲೇಖನಗಳು' ಎಂಬ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. ಇವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ದೊಡ್ಡಬೆಲೆ ಲಕ್ಷ್ಮೀನರಸಿಂಹಾಚಾರ್ ಎಂಬುದು ಇವರ ಪೂರ್ಣ ಹೆಸರು. ಇವರು ತಮ್ಮ ಅಪಾರವಾದ ಪಾಂಡಿತ್ಯದಿಂದ 'ನಡೆದಾಡುವ ನಿಘಂಟು' ಎಂಬ ಹೆಸರನ್ನು ಪಡೆದಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' ಯೋಜನೆಯ ಪ್ರಧಾನ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಶಬ್ದ ವಿಚಾರ, ಕನ್ನಡ ಗ್ರಂಥ ಸಂಪಾದನೆ, ಪೀಠಿಕೆಗಳು ಮತ್ತು ಲೇಖನಗಳು, ಪಂಪ ಭಾರತ ದೀಪಿಕೆ ಮುಂತಾದ ಪ್ರಾಚೀನ ಕಾವ್ಯ ಹಾಗೂ ಶಾಸ್ತ್ರ ಗ್ರಂಥಗಳನ್ನು ಅತ್ಯುತ್ತಮ ರೀತಿಯಲ್ಲಿ ಸಂಪಾದಿಸಿದ್ದಾರೆ. 1960ರಲ್ಲಿ ಬೀದರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಸನ್ಮಾನಿಸಿದೆ. 1971ರಲ್ಲಿ ಡಿ.ಎಲ್.ಎನ್. ಅವರು ವಿಧಿವಶರಾದರು.

10th_Kannada_Reader1-5.indd 90 03-04-2019 14:07:59

ಪದಗಳ ಅರ್ಥ

ತುಬ್ಬುಗಾರ–ಪತ್ತೇದಾರ, ಪರಮಾರ್ಥ–ಶ್ರೇಷ್ಠವಾದ ಗುರಿ, ಕೊನೆಯ ದಾರಿ, ಮೋಕ್ಷ; ಆರ್ಕಿಮಿಡೀಸ್–ಗ್ರೀಸ್ ದೇಶದ ಗಣಿತಜ್ಞ ಹಾಗೂ ಭೌತ ವಿಜ್ಞಾನಿ; ರಿಲೆಟಿವಿಟಿ–ಐನ್‌ಸ್ಟೀನ್ ಕಲ್ಪಿಸಿದ ಸಾಪೇಕ್ಷ ಸಿದ್ಧಾಂತ; ತಸ್ಕರ–ಕಳ್ಳತನ, ಕಳುವು ಮಾಡುವುದು, ಚೋರತನ; ಮೋಚಿ–ಚಪ್ಪಲಿ ಹೊಲೆಯುವವ; ಸಾಟಿ–ಸಮಾನ; ಹವ್ಯಾಸ–ಗೀಳು, ಆಸಕ್ತಿ, ಅಭಿಲಾಷೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಪುಲಿಗೆರೆಯ ಸೋಮೇಶ್ವರನು ಹೇಳಿದ ಮಾತುಗಳೇನು ?
2. ನಿಜವಾದ ವ್ಯಾಸಂಗವೆಂದು ಯಾವುದನ್ನು ಹೇಳಲಾಗುತ್ತದೆ ?
3. ಹವ್ಯಾಸವೆಂದರೇನು ?
4. ಎಂಥವರಿಗೆ ಓದುವುದು ದಿನಚರಿಯ ರೂಢಿಯಾಗಿದೆ ?
5. ಮನುಷ್ಯ ಸ್ವಭಾವದ ಪರಿಜ್ಞಾನ ಹೇಗೆ ಹೆಚ್ಚಾಗುತ್ತದೆ ?
6. ವ್ಯಾಸಂಗವನ್ನು ಹವ್ಯಾಸವನ್ನಾಗಿ ಉಳ್ಳವನಿಗೆ ಯಾವ ಉದ್ದೇಶವಿರುತ್ತದೆ ?
7. ಆರ್ಕಿಮಿಡೀಸನು ಏನೆಂದು ಕೂಗಾಡಿದನು ?
8. ಐನ್‌ಸ್ಟೀನನು ಕಂಡು ಹಿಡಿದ ಸಿದ್ಧಾಂತದ ಹೆಸರೇನು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಗ್ರಂಥಗಳಲ್ಲಿ ಏನೆಲ್ಲಾ ಬಗೆಗಳಿವೆ ಎಂದು ಕವಿಯು ತಿಳಿಸುತ್ತಾರೆ ?
2. ಹವ್ಯಾಸದ ಹಿತ–ಅಹಿತದ ಬಗ್ಗೆ ಕವಿಯ ಅಭಿಪ್ರಾಯವೇನು ?
3. ಶಾಸ್ತ್ರವ್ಯಾಸಂಗದಿಂದ ಹೇಗೆ ಮಾನಸಿಕ ಸುಖವನ್ನು ಹೊಂದಬಹುದು ?
4. ವಿಜ್ಞಾನದ ಗಹನ ಸಿದ್ಧಿಗೆ ಸ್ವಯಂ ಪ್ರಕಾಶ ಜ್ಞಾನ ಕಾರಣ. ವಿವರಿಸಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನಿಜವಾದ ವ್ಯಾಸಂಗ ಹೇಗಿರಬೇಕೆಂದು ಲೇಖಕರು ಹೇಳುತ್ತಾರೆ ?
2. ಸ್ವಂತ ಅನುಭವ ಹಾಗೂ ವಿದ್ಯೆ ಇವುಗಳಲ್ಲಿ ಯಾವುದು ಮೇಲೆಂಬುದರಲ್ಲಿ ನಿಮ್ಮ ಅಭಿಪ್ರಾಯವೇನು ?
3. ಬರಹಗಾರರಲ್ಲಿ ಕವಿಯು ಎಷ್ಟು ಪ್ರಭೇದಗಳನ್ನು ಗುರುತಿಸಿದ್ದಾರೆ ?
4. ದೈಹಿಕ ಹಾಗೂ ಮಾನಸಿಕ ಸುಖಗಳಲ್ಲಿ ಯಾವುದು ಮೇಲು? ಕಾರಣದೊಂದಿಗೆ ವಿವರಿಸಿ.

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ**
   ಸಂತೋಷ, ಅನುಭವ, ಲೌಕಿಕ, ಸಾಧ್ಯ, ವಿವೇಕ, ಆಸಕ್ತಿ, ಲಕ್ಷಣ, ಗೋಚರ, ಕಠಿಣ.
2. **ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.**
   ಜೀವಮಾನ, ಅವಲೋಕನ, ಕೆಡುಕು, ಉತ್ಕೃಷ್ಟ, ಸಂಪರ್ಕ, ವಿಸ್ಮಯ, ರಹಸ್ಯ, ರೋಮಾಂಚನ, ಪ್ರತಿಭೆ.
3. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**
   ಸೋಮೇಶ್ವರ, ಯಂತ್ರೋಪಕರಣ, ಜ್ಞಾನಾರ್ಜನೆ, ಪರಮಾರ್ಥ, ಜ್ಞಾನವನ್ನು, ಎದುರುಗೊಳ್ಳು.
4. **ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ತಿಳಿಸಿ.**
   ಜ್ಞಾನ, ಆಚೆ, ಕಾವ್ಯ, ಪ್ರಯಾಣ, ಕಾರ್ಯ, ಅಚ್ಚರಿ.

ಚಟುವಟಿಕೆ

1. ನಿಮ್ಮ ಶಾಲೆಯ ಹಾಗೂ ಊರಿನ ವಾಚನಾಲಯಗಳಿಗೆ ಭೇಟಿ ನೀಡಿ ನಿಮಗಿಷ್ಟವಾದ ಪುಸ್ತಕಗಳನ್ನು ಓದಿ ಜ್ಞಾನ ಸಂಪನ್ನರಾಗಿರಿ.
2. 'ಪುಸ್ತಕಾಲಯ'– ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

10th_Kannada_Reader1-5.indd 91 03-04-2019 14:07:59

ಉಪಪಠ್ಯ

ಘಟಕ ನಾಲ್ಕು

ಜಾತ್ರೆ

– ದ.ರಾ..ಬೇಂದ್ರೆ



'ಮಾಡಿದ್ದುಣ್ಣೋ ಮಾರಾಯ' ಎಂಬ ನಾಣ್ಣುಡಿಯಂತೆ ಇಲ್ಲೊಬ್ಬ ರಾಜ ತನ್ನ ದರ್ಪದ ಆಡಳಿತ ವೈಖರಿಯಿಂದ ಮುಂದೆ ಬುದ್ಧಿ ಕಲಿತುಕೊಳ್ಳುವ ಅನುಭವವಾಗುತ್ತದೆ. 'ಅನುಭವವೇ ಉತ್ತಮ ಶಿಕ್ಷಣ' ಎಂಬುದಕ್ಕೆ ಈ ನಾಟಕ ಉತ್ತಮ ಉದಾಹರಣೆಯಾಗಿದೆ. ಕವಿ ಬೇಂದ್ರೆಯವರು ಉತ್ತಮ ನಾಟಕಕಾರರೂ ಆಗಿದ್ದರೆಂಬುದಕ್ಕೆ ಸಾಮಾಜಿಕ ಕಾಳಜಿಯ ವಸ್ತುವನ್ನು ಹೊಂದಿರುವ ಈ ಏಕಾಂಕವು ಸಾಕ್ಷೀಭೂತವಾಗಿ ನಿಂತಿದೆ.



10th_Kannada_Reader1-5.indd 92 03-04-2019 14:07:59

ಪಾತ್ರಗಳು

ದೇವರು (ದೊರೆ) – ಹುಚ್ಚಾಪುರದ ದೊರೆ.
ಕಾರಭಾರಿಗಳು
ಕಾರಕೂನರು
ಡಾಕ್ಟರು
ಆಳುಗಳು
ಡಂಗೂರದವರು.

(ಅರಮನೆಯ ಒಂದು ದಿವಾಣಖಾನೆ. ದೊರೆಗಳು ಮಂಚದ ಮೇಲೆ ಅಡ್ಡಾಗಿದ್ದಾರೆ. ಕಾರಭಾರಿಗಳು ಸರಕಾರದ ಡಾಕ್ಟರರೊಡನೆ ಬರುವರು. ಕಾರಕೂನರು ಅವರನ್ನು ಹಿಂಬಾಲಿಸಿಕೊಂಡು ಬರುವರು. ದೊರೆಗಳಿಗೆ ನಮಸ್ಕರಿಸಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವ ಹೊತ್ತಿಗೆ ದೊರೆಗಳು ಎದ್ದು ಕೂಡುವರು).

ದೇವರು (ದೊರೆ)

(ಕುಳಿತಲ್ಲಿಂದ ಮುಖ ಹೊರಳಿಸಿ)
ಕಾರಭಾರಿಗಳೇ !

ಕಾರಭಾರಿ

(ಆಸನದಿಂದ ಮೇಲಕ್ಕೆದ್ದು)
ದೇವರು !

ದೊರೆ

ಜಾತ್ರೆಯಾಗಲೇ ಬೇಕು !

ಕಾರಭಾರಿ

(ತಲೆ ಬಗ್ಗಿಸಿ ವಿನಯದಿಂದ)
ಹಾಗೇ ಆಗಲಿ, ದೇವರು !

ದೊರೆ

ಡಾಕ್ಟರೇ, ಊರಲ್ಲಿ ಪ್ಲೇಗು–ಗೀಗು ಏನೂ ಇಲ್ಲ, ಹೌದಷ್ಟೇ!

ಡಾಕ್ಟರು

ದೇವರು, ಏನು ಹೇಳಲಿ... ನಿನ್ನೆ ಮೊನ್ನೆ ನಾಲ್ಕು ಜನರು ಗಂಟು ಎದ್ದು ಸತ್ತರು.

ದೊರೆ

ಔಷಧ ಯಾರು ಕೊಟ್ಟರು ?

ಡಾಕ್ಟರು

ನಾನು, ದೇವರು.

ದೊರೆ

ಹಾಗಾದರೆ ಅವರು ಸತ್ತದ್ದು ಗಂಟಿನಿಂದಲ್ಲ. ಊರಲ್ಲಿಲ್ಲ ಪ್ಲೇಗು, ಅವರೇನು ಗಂಟು ಕಟ್ಟಿಕೊಂಡು ಬಂದಿದ್ದರೇ? ಅಂತೂ ಊರೊಳಗೆ ಪ್ಲೇಗಿಲ್ಲ, ಹೌದೇ?

ಡಾಕ್ಟರು

ಮನೆಮನೆಗಳಲ್ಲಿ ಬೀಳುತ್ತಿರುವ ಇಲಿಗಳು ಪ್ಲೇಗಿನವು ನಿಜ, ದೇವರು.

ದೊರೆ

ಇಲಿಗಳ ವಿಷಯ ನೀವು ಹೇಳಬೇಡಿರಿ. ಮುಂಬೈಯಿಂದ ಸರ್ಕಾರೀ ಉತ್ತರ ಬರಲಿ. ಸರಕಾರ ಹೇಳಿದ್ದು ಸತ್ಯ. ಕಾರಭಾರಿಗಳೇ, ಡಂಗೂರ ಸಾರಲು ಹೇಳಿರಿ.

(ಕಾರಭಾರಿಗಳು ಕಾರಕೂನರಿಗೆ ಸನ್ನೆ ಮಾಡುವರು. ಕಾರಕೂನರು ಒಳಗೆ ಸನ್ನೆ ಮಾಡುವರು. ಕೂಡಲೇ ಡಂಗೂರದವನು ಸಾರುವುದು ಕೇಳಿಸುವುದು... 'ಕೇಳ್ರಪ್ಪೋ ಕೇಳ್ರೀ! ಸರಕಾರದ ಡಂಗುರ. ಊರಾಗ ಪ್ಲೇಗಿಲ್ಲ. ಯಾರೂ ಊರು ಬಿಡಾಕಾಗದು! ಜಾತ್ರಿ ಆಗೇ ಆಕ್ಕೈತ್ರಪ್ಪೋ.... ಆಗೇ ಆಕ್ಕೈತಿ' ಹಲಗೆಯ ಸಪ್ಪಳ ಕೇಳಿ ಬರುವುದು).

'ಊರಲ್ಲಿ ಪ್ಲೇಗಿಲ್ಲ. ಯಾರೂ ಊರು ಬಿಡಬಾರದು. ಜಾತ್ರಿ ಬಹಳ ವಿಜೃಂಭಣೆಯಿಂದ ಜರುಗುವುದು. ಪರ ಊರಿಂದ ಜನರು ಬರಬೇಕು' ಎಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧಿ ಪಡಿಸಿರಿ. ಜನರು

10th_Kannada_Reader1-5.indd 93 03-04-2019 14:07:59

ಬರಲು ಅಡ್ಡಿ ಇಲ್ಲವೆಂದು ಇಲ್ಲಿಯ ಸರಕಾರೀ ಡಾಕ್ಟರರ ಅಭಿಪ್ರಾಯವಿದೆಯೆಂದು ಬರೆದು ಬಿಡಿರಿ.

ಡಾಕ್ಟರು

ನಾನು ಹಾಗೆ ಹೇಳಲಿಲ್ಲ, ದೇವರು !

ದೊರೆ

ಹಾಗೆ ಹೇಳಿದ್ದು ನಾನು, ನೀವಲ್ಲ – ನನಗೆ ಗೊತ್ತು. ನಿಮಗೆ ಬುದ್ಧಿ ಇದ್ದರೆ ನನ್ನಂತೆಯೇ ಹೇಳುತ್ತಿದ್ದಿರಿ. ಜಾತ್ರೆಯಾಗದಿದ್ದರೆ ಸಾವಿರಗಟ್ಟಲೆ ರೂಪಾಯಿ ಬರುವುದಿಲ್ಲ. ಪೂಜೆಯಿಲ್ಲದೆ ದೇವರು ಸಾಯಬೇಕು, ಸಂಬಳ ಸಿಗದೆ ದುಡಿಯುವವರೂ ಸಾಯಬೇಕು... ನಿಮ್ಮಂತೆಯೇ ಆಗಲಿ ಡಾಕ್ಟರೇ, ಪ್ಲೇಗು ಇದೆಯೆನ್ನೋಣ. ಎಷ್ಟು ಜನರು ಸಾಯಬಹುದು? ಪ್ಲೇಗು ಇರದಿದ್ದರೂ ಕೆಲವು ಜನರು ಸತ್ತೇ ಸಾಯುತ್ತಿದ್ದಾರೆ. ಆಮೇಲೆ ಕೆಲವು ಮುದುಕರು ಸಾಯುವರೆನ್ನೋಣ, ಮುದುಕರು ಸತ್ತರೆ ಕಸ ಹೋದಂತೆ. ಆಮೇಲೆ ಹೆಂಗಸರು ಸಾಯಬಹುದು. ಅವರು ಇದ್ದು ಗಳಿಸುವುದು ಅಷ್ಟರಲ್ಲೇ ಇದೆ. ಕೂಳು ದಂಡ! ಇನ್ನು ಕೆಲವು ಸಣ್ಣ ಹುಡುಗರು ಸಾಯಬಹುದು; ಹುಡುಗರು ಸತ್ತರೂ ತೊಟ್ಟಿಲುಗಳೇನೂ ತೆರವು ಬೀಳುವುದಿಲ್ಲ. ಹಿಂದೂಸ್ಥಾನದ ಖಾನೇಸುಮಾರಿ ಕೇಳಿದ್ದೀರೋ ಇಲ್ಲವೋ? ಹತ್ತು ವರ್ಷಗಳಲ್ಲಿ 33 ಕೋಟಿ, 43 ಕೋಟಿಯಾಗಿದೆ!

ಡಾಕ್ಟರು

ಬಡಬಗ್ಗರ ಗತಿಯೇನು ದೇವರು ?

ದೊರೆ

ಬದುಕುವುದೇ ಕಷ್ಟವಾದಾಗ ಸಾಯುವುದೇ ಸುಖ ಅವರಿಗೆ; ಸತ್ತರೆ ಚಿಂತೆ ಹರಿಯಿತು.

ಡಾಕ್ಟರು

ಅದಿರಲಿ ದೇವರು. ದುಡ್ಡುಳ್ಳವರು ಯರಾದರೂ.....

ದೊರೆ

ಅವರಿಗೆ ಯಾರು ಸತ್ತರೇನು, ದುಡ್ಡು ಇರುವುದಲ್ಲ. ಅವರು ಕಳ್ಳರು–ಕಾಕರಿಗೆ ಹೆದರಬೇಕು. ರೋಗದ ಹೆದರಿಕೆಯೇ ಅವರಿಗೆ. ಹಿರಿಯರು ಸತ್ತರೆ ಮಕ್ಕಳಿಗೆ ಪಟ್ಟ ಬರುವುದು. ಮಕ್ಕಳು ಸತ್ತರೆ ಪಾಲಾಗುವುದು ಉಳಿಯಿತು.

ಡಾಕ್ಟರು

ದೇವರು, ಬಹಳ ಕಲ್ಲೆದೆ ಮಾಡಿದ್ದೀರಿ.

ದೊರೆ

ಡಾಕ್ಟರೇ! ಧರ್ಮ, ಧರ್ಮ...! ಡಾಕ್ಟರೇ, ಧರ್ಮ ನಿಲ್ಲಬಾರದು. ದೇವರ ಪೂಜೆ, ಉತ್ಸವ ಸಾಗಬೇಕು. ಅಷ್ಟೂ ಮೀರಿ ಕೆಲವು ಬೇಕಾದ ಜೀವ ಸಾಯುವವೆನ್ನಿರಿ. ಅದನ್ನು ಸಹಿಸಲಿಕ್ಕೇ ಬೇಕು. ಜಾತ್ರೆ ನಿಂತರೆ ಸಂಸ್ಥಾನದ ನಾಡಿಯೇ ನಿಂತಂತೆ. ಯಜಮಾನರ ಸಂಬಳ ನಿಂತರೆ, ಮನೆಯವರು ತಿನ್ನುವುದೇನು? ಈಗಲಾದರೂ ತಿಳಿಯಿತೇ? ಪ್ಲೇಗು ಇಲ್ಲ... ಹೌದೇ ಡಾಕ್ಟರೇ?

(ಕಾರಕೂನನು ಕಾರಭಾರಿಗಳ ಕೈಯಲ್ಲಿ ತಂತಿಯೊಂದನ್ನು ಕೊಡುವನು).

ಕಾರಭಾರಿ

ಮುಂಬಯಿಯ ತಂತಿ ಬಂದಿದೆ ದೇವರು.

ಡಾಕ್ಟರು

ಹೊತ್ತಿಗೆ ಬಂದಿತು !

ದೊರೆ

ಸರಕಾರದ ವೈದ್ಯ ಶಾಖೆಯವರೇನೆನ್ನುತ್ತಾರೆ ?

ಕಾರಭಾರಿ

(ಗಾಬರಿಯಿಂದ)

'Rats plague infected' ಇಲಿಗಳು ಗಂಟು ಬೇನೆಯವಂತೆ, ದೇವರು !

ದೊರೆ

(ಸಿಟ್ಟಿನಿಂದ)

ಹರಿದು ಹಾಕಿರಿ ಆ ಕಾಗದವನ್ನು!

(ಕಾರಭಾರಿಗಳು ಚಟ್ಟನೆ ಹಾಗೇ ಮಾಡುವರು)

ಇಲ್ಲಿಯ ಇಲಿಯದು ದಿಲ್ಲಿಗೇನು ತಿಳಿಯುವುದು? ಕಾರಭಾರಿಗಳೇ, ಊರ ಹೊರಗಿನ ಒಡ್ಡರು ಇರುವರೋ, ಎಲ್ಲರೂ ಸತ್ತರೋ? ಅವರು ದಿನಾಲೂ ಇಲಿಗಳನ್ನೇ ತಿನ್ನುವರಲ್ಲವೇ ? ಅದೇ ನಿಜವಾದ ಪರೀಕ್ಷೆ. ಮುಂಬಯಿಗೇನು ತಿಳಿಯುತ್ತದೆ?

ಕಾರಭಾರಿ

ದೇವರು, ಅವರಲ್ಲಿ ಯಾರಾದರೂ ಸತ್ತಿದ್ದರೆ ಇಲ್ಲಿಗೆ ಅಳುವು ಕೇಳಿಸುತ್ತಿತ್ತು. ಮತ್ತೇನು ? ಎಲ್ಲರೂ

10th_Kannada_Reader1-5.indd 94 03-04-2019 14:07:59

ಸತ್ತಿರುವುದರಿಂದ ಯಾರೂ ಅಳುವುದಿಲ್ಲವೋ ? ಇದ್ದವರಲ್ಲವೇ ಸತ್ತವರಿಗಳುವುದು ?

ದೊರೆ

ಆ ಸಂಶಯ ಬೇಡ. ಹಾಗಾಗಿದ್ದರೆ ಊರಿಗೂರೇ ಬೊಬ್ಬೆ ಕುಟ್ಟುತ್ತಿತ್ತು. ಊರಲ್ಲಿ ಪ್ಲೇಗಿಲ್ಲ. ಇದೇ ನಿಜ. ಜಾತ್ರೆಯಾಗಲೇ ಬೇಕು. ಹೌದೆನ್ನಿರಿ ಡಾಕ್ಟರೇ...!

(ಹೊರಗೆ ದೂರದಿಂದ, 'ಅಯ್ಯೋ ಮಹಾರಾಯ!' ಎಂಬ ದನಿ ಕೇಳಿ ಬರುವುದು).

ಏನೀ ಕೂಗಾಟ ?

ಕಾರಕೂನ

ಯಾರೋ ಶೂದ್ರರ ಗಂಡಸು ಪ್ಲೆಗಿನಿಂದ ಸತ್ತನಂತೆ!

ದೊರೆ

ಯಾರೆಂದರು ಪ್ಲೇಗೆಂದು ? ಈ ಅರಮನೆಯಲ್ಲಿ ನನ್ನ ಅಪ್ಪಣೆಯಿಲ್ಲದೆ ಪ್ಲೇಗೂ ಬರಕೂಡದು. ಯಾರೂ ಬರಕೂಡದು. ನಾನು, 'ಪ್ಲೇಗಿದೆ' ಎನ್ನುವವರೆಗೆ, ಯಾರೂ 'ಪ್ಲೇಗು' ಎಂಬ ಮಾತನ್ನೂ ಎತ್ತಕೂಡದು. ಕಾರಭಾರಿಗಳೇ, ಏನದು ಗದ್ದಲ ಹೊರಗೆ?

ಕಾರಭಾರಿ

ಯಾರೋ ಸತ್ತಿರಬೇಕು.

ದೊರೆ

ಏನಾಗಿತ್ತು?

ಕಾರಭಾರಿ

ಬರೀ ಪ್ರಾಣ ಹೋಗಿರಬೇಕು ಅಷ್ಟೇ !

ದೊರೆ

ಗಂಟು ಎದ್ದಿತ್ತೇ ಅವನಿಗೆ ?

ಕಾರಭಾರಿ

ಎದ್ದಿದ್ದರೂ ಅದು ಕುರುವಾಗಲೀ, ಹದಗಡಲೆಯಾಗಲೀ ಇರಬೇಕು.

ಡಾಕ್ಟರು

ಕುರುವು, ಹದಗಡಲೆಯಿಂದ ಯಾರೂ ಸಾಯುವುದಿಲ್ಲ.

ದೊರೆ

ಭಲೇ ! ದೊಡ್ಡ ಶೋಧ ಮಾಡಿದಿರಿ ! ಸಾಯಬಾರದೆನ್ನುವವರು ಕುರುವೂ ಹದಗಡಲೆಯೂ ಆಗುವಂತೆ ಮಾಡಿಕೊಂಡರಾಯಿತು ಎನ್ನಿರಿ ! ಭಲೇ ಡಾಕ್ಟರೇ !

ಡಾಕ್ಟರು

ನಾನು ಹಾಗೆ ಹೇಳಲಿಲ್ಲ ದೇವರು. ಬರೀ ಕುರುವು, ಹದಗಡಲೆಯಿಂದ ಯಾರೂ ಸಾಯಲಾರರು ಎಂದೆ.

ದೊರೆ

ಅದಿರಲಿ, ಯಾತರಿಂದ ಸತ್ತಿರಬೇಕು ಹೇಳಿರಿ ?

ಡಾಕ್ಟರು

ನೋಡದೇ ಬಿಡದೇ ಹೇಳಲಿಕ್ಕೆ ನಾನೇನು ಜ್ಯೋತಿಷಿಯೇ ದೇವರು ?

ದೊರೆ

ಅದಕ್ಕೆ ಜ್ಯೋತಿಷ್ಯವೇತಕ್ಕೆ ಬೇಕು ! ಯಾರೋ ಅತ್ತರು ಎಂದ ಮೇಲೆ ಇನ್ನೊಬ್ಬರಾರೋ ಸತ್ತರು. ಈ ತರ್ಕ ಸರಿಯಷ್ಟೇ ! ಕಾರಣವಿಲ್ಲದೇ ಸತ್ತಿರಲಾರರು. ಕಾರಭಾರಿಗಳು ಹೇಳುತ್ತಾರೆ, ಪ್ರಾಣ ಹೋಗಿರಬೇಕೆಂದು. ಅದಕ್ಕಾದರೂ ಕಾರಣವೇನು?

ಡಾಕ್ಟರು

ಸರಕಾರದವರು ಪ್ಲೇಗಿಲ್ಲ ಎನ್ನುವಾಗ ತನಗೆಲ್ಲಿಂದ ಗಂಟು ಬಂತೋ ಎಂದು ಹೆದರಿ ಸತ್ತಿರಬೇಕು.

ದೊರೆ

ಷಹಬ್ಬಾಶ್ ಡಾಕ್ಟರೇ ! ನೀವು ಹೇಳಿದ್ದೇ ಸರಿ, ಊರಲ್ಲಿ ಜನರು ಪ್ಲೇಗಿನ ಹೆದರಿಕೆಯಿಂದ ಸಾಯುತ್ತಿದ್ದಾರೆ– ಪ್ಲೇಗಿನಿಂದಲ್ಲ. ಕಾರಭಾರಿಗಳೇ, ಡಂಗುರ ಸಾರ ಹೇಳಿರಿ. 'ಊರಲ್ಲಿ ಪ್ಲೇಗಿಲ್ಲ. ಪ್ಲೇಗಿಗೆ ಯಾರೂ ಹೆದರಬಾರದು. ಸತ್ತರೂ ಹೆದರಬಾರದು. ಜಾತ್ರೆ ವಿಜೃಂಭಣೆಯಿಂದ ಜರುಗುವುದು' ಎಂದು ಸಾರಲಿ.

ಡಾಕ್ಟರು

ಹಾಗೇ ಆಗಲಿ ದೇವರು,

(ಕಾರಭಾರಿಗಳು ಕಾರಕೂನರಿಗೆ ಸನ್ನೆ ಮಾಡುವರು. ಕಾರಕೂನರು ಒಳಗೆ ಸನ್ನೆ ಮಾಡುವರು. ಕೂಡಲೇ ಡಂಗೂರದವನು ಸಾರುವುದು ಕೇಳಿಸುವುದು... ಹಲಗೆಯ ಸಪ್ಪಳ. 'ಕೇಳ್ರಪ್ಪೋ ಕೇಳ್ರೀ! ಸರಕಾರದ ಡಂಗುರ. ಊರಾಗ ಪ್ಲೇಗಿಲ್ಲ. ಪ್ಲೇಗ್‌ಗೆ ಯಾರೂ ಬೆದರಾಕಾಗದು. ಸತ್ತರೂ ಬೆದರಾಕಾಗದು. ಜಾತ್ರಿ ಆಗೇ ಆಕ್ಕೈತ್ರಪ್ಪೋ.... ಆಗೇ ಆಕ್ಕೈತಿ' ಹಲಗೆಯ ಸಪ್ಪಳ ಕೇಳಿ ಬರುವುದು. ಅದು ನಿಂತ ಮೇಲೆ... 'ಅಯ್ಯೋ, ಮಾರಾಯಾ!' ಎಂದು ಅಳುವ ಧ್ವನಿ ಕೇಳಿ ಬರುವುದು.)

10th_Kannada_Reader1-5.indd 95 03-04-2019 14:07:59

ದೊರೆ

ಮತ್ತೆ ಯಾರು ಸತ್ತರು ? ಅತ್ತರೇನು, ಸತ್ತವರೇಳುವರೇ? ಈ ಹುಂಬ ಮಂದಿಗೆ ಏನೂ ತಿಳಿಯುವುದಿಲ್ಲ. ಡಾಕ್ಟರೇ, ಇವನೇಕೆ ಸತ್ತಿರಬೇಕು!

ಡಾಕ್ಟರು

ಆಗಳೆಯವರನು ಸತ್ತಾಗ ಉಳಿದವರು ಅತ್ತದ್ದನ್ನು ಕೇಳಿ ಇವನು ಎದೆಯೊಡೆದುಕೊಂಡು ಸತ್ತಿರಬೇಕು.

ದೊರೆ

ವಾಹವ್ವಾ ಡಾಕ್ಟರೇ ! ನೀವು ದೊಡ್ಡ ಗಂಡಾತರದಲ್ಲಿ ನನಗೆ ಬಹಳೇ ಸಹಾಯ ಮಾಡುತ್ತಿರುವಿರಿ. ಕಾರಭಾರಿಗಳೇ, 'ಯಾರು ಸತ್ತರೂ ಯಾರೂ ಅಳಕೂಡದು, ಈ ಜಾತ್ರೆಯಾಗುವವರೆಗೆ' ಎಂದು ಡಂಗುರ ಸಾರ ಹೇಳಿರಿ.

(ಕಾರಭಾರಿಗಳು ಕಾರಕೂನರಿಗೆ ಸನ್ನೆ ಮಾಡುವರು. ಕಾರಕೂನರು ಒಳಗೆ ಸನ್ನೆ ಮಾಡುವರು. ಕೂಡಲೇ ಡಂಗೂರದವನು ಸಾರುವುದು ಕೇಳಿಸುವುದು... ಹಲಗೆಯ ಸಪ್ಪಳ. 'ಕೇಳ್ರಪ್ಪೋ ಕೇಳ್ರೀ! ಸರಕಾರದ ಡಂಗುರ. ಜಾತ್ರಿ ಆಗೇ ಆಕ್ಕೈತ್ರಪ್ಪೋ.... ಆಗೇ ಆಕ್ಕೈತಿ ಆಗೋ ತನಕ ಯಾರು ಸತ್ತರೂ ಯಾರೂ ಅಳಬಾರದ್ರಪ್ಪೋ... ಯಾರೂ ಅಳಬಾರದು!' ಹಲಗೆಯ ಸಪ್ಪಳ ಮತ್ತೆ ಕೇಳಿ ಬರುವುದು.)

ನನಗೆ ಜಾತ್ರೆಯ ಚಿಂತಿ; ಜನರಿಗೆ ಸಾಯುವ ಅವಸರ.

ಕಾರಕೂನ

ದೇವರು, ಕೆಲ ಜನರು ಊರು ಬಿಟ್ಟು ಹೋಗುತ್ತಿರುವರು; ಅವರ ಬಂಡಿಗಳನ್ನು ಅಧಿಕಾರಿಗಳು ತರುಬಿದ್ದಾರಂತೆ; ಏನು ಮಾಡಬೇಕು?

ದೊರೆ

ಆ ಜನರನ್ನು ಊರೊಳಕ್ಕೆ ಅಟ್ಟಿರೆಂದು ಹೇಳಿರಿ. ಊರವರೇ ಅಂಜಿ ಓಡಿದರೆ ಪರ ಊರವರು ಇಲ್ಲಿ ಬಂದೇನು ಸತ್ತಾರು ? ಅದೇನೂ ಇಲ್ಲ. ಊರಲ್ಲಿ ಪ್ಲೇಗಿಲ್ಲ. ಪ್ಲೇಗಿಗೆ ಯಾರೂ ಹೆದರಬಾರದು. ಹೆದರಿದರೆ ಸತ್ತೀರಿ! ಸತ್ತರೂ ಅಳಬಾರದು, ಎಂದು ಊರ ಜನರಿಗೆಲ್ಲ ತಿಳಿಯುವಂತೆ ಡಂಗುರ ಸಾರಿರಿ.

(ಕಾರಭಾರಿಗಳು ಕಾರಕೂನರಿಗೆ ಸನ್ನೆ ಮಾಡುವರು. ಕಾರಕೂನರು ಒಳಗೆ ಸನ್ನೆ ಮಾಡುವರು. ಕೂಡಲೇ ಡಂಗೂರದವನು ಸಾರುವುದು ಕೇಳಿಸುವುದು... ಹಲಗೆಯ ಸಪ್ಪಳ. 'ಊರಾಗ ಪ್ಲೇಗು ಇಲ್ಲ. ಪ್ಲೇಗ್‌ಗೆ ಯಾರೂ ಬೆದರಾಕಾಗದು. ಬೆದರಿದರ ಸತ್ತೀರಿ! ಸತ್ತರೂ ಯಾರೂ ಅಳಬಾರದ್ರಪ್ಪೋ... ಅಳಬಾರದು!' ಹಲಗೆಯ ಸಪ್ಪಳ. ನಂತರ ಒಬ್ಬ ಸಿಪಾಯಿಯು ಕಾರಕೂನರ ಕೈಯಲ್ಲಿ ಒಂದು ಕಾಗದವನ್ನು ತಂದು ಕೊಡುವನು. ಕಾರಕೂನನು ಅದನ್ನು ಕಾರಭಾರಿಗಳ ಕೈಯಲ್ಲಿ ಕೊಡುವರು).

ಕಾರಭಾರಿ

(ಕೈಗೆ ಬಂದ ಕಾಗದ ನೋಡುತ್ತ)

ದೇವರು, ಇಂದು ಬೆಳಗಿನಿಂದ ಐದು ಜನ ತೀರಿಕೊಂಡರಂತೆ. 'ಕಾರಣ ತಿಳಿದಿಲ್ಲ' ಎನ್ನುವರು ಸರಕಾರದ ಅಧಿಕಾರಿಗಳು.

ದೊರೆ

ಚಮತ್ಕಾರ ! ಎಷ್ಟು ಅವಸರ, ಎಷ್ಟು ಅವರಸ! ಈ ಸಾಯುವ ಮಹಾರಾಯರು ಜಾತ್ರೆಯಾಗುವವರೆಗೆ ತಡೆದಿದ್ದರೆ ಏನು ಪ್ರಾಣ ಹಾರಿ ಹೋಗುತ್ತಿತ್ತೆ ? ಜನರಿಗೆ ತಿಳುವಳಿಕೆಯೇ ಕಡಿಮೆ. ಏನು ಯಮನ ಊರಿನಲ್ಲಿಯೂ ಜಾತ್ರೆ ನೆರೆಯುತ್ತಿರಬಹುದೇ? ಇದೆಲ್ಲ ಕೇಳಿ ನನ್ನ ತಲೆ ಕಾದು ಹೋಗಿದೆ. ಏನು, ಕಾರಣವೇನಿರಬಹುದು ಡಾಕ್ಟರೇ ?

ಡಾಕ್ಟರು

ಒಂದು ಪ್ಲೇಗು...

ದೊರೆ

ಛಿ, ಛೀ... ನಾನದನ್ನು ಒಪ್ಪಲಾರೆ.

ಡಾಕ್ಟರು

ಇನ್ನೊಂದು, ಮುಂಜಾವಿನಿಂದ ಒಂದೇ ಸವನೆ ಡಂಗುರ ಕೇಳಿ ಕೇಳಿ ಜನರು ಪ್ರಾಣ ಕಳಕೊಳ್ಳುತ್ತಿರಬಹುದು, ದೇವರು.

ದೊರೆ

ಚೇಷ್ಟೆ ಮಾಡುತ್ತಿಲ್ಲವಷ್ಟೇ ಡಾಕ್ಟರೇ! ಕಾರಭಾರಿಗಳೇ, ಡಾಕ್ಟರೆನ್ನುವಂತೆ ಇರಬಹುದೇ?

ಕಾರಭಾರಿ

ಯಾಕಿರಬಾರದು ? ಪ್ಲೇಗಿರಬಹುದೆಂಬ ಸುಳ್ಳು ಹೆದರಿಕೆಯಿಂದ ಜನರ ಎದೆ ಹಾರುತ್ತಿರಬೇಕು. ತಮ್ಮ ಬಾಯಿಂದ ಎಲ್ಲಿ ಪ್ಲೇಗು ಎಂಬ ಮಾತು ಸುಳ್ಳೇ ಜಾರಿ

10th_Kannada_Reader1-5.indd 96 03-04-2019 14:07:59

ಹೋದೀತೆಂದು ನಿಜವಾದ ಹೆದರಿಕೆಯುಂಟಾಗಿ ಎದೆ ಮತ್ತಷ್ಟು ಹಾರುತ್ತಿರಬೇಕು. ಎದೆಯ ಹಾರುವ ಸಪ್ಪಳದಲ್ಲಿ ಮೇಲಿಂದ ಮೇಲಾಗುವ ಡಂಗುರದ ಸಪ್ಪಳ ಕೂಡಿ, ಡಂಗುರವೋ ಎದೆಯೋ ತಿಳಿಯದಾಗಿ ಎದೆಯು ಹಾರಿ ಹಾರಿ, ಪ್ರಾಣವು ಜಿಗಿದು, ಮನುಷ್ಯನು ಪುಟಿದು ಬೀಳುತ್ತಿರಬಹುದು.

ದೊರೆ

ಡಾಕ್ಟರೇ, ಇದು ಹೇಗೆ ? ನಿಜವಿರಬಹುದೇ ?

ಡಾಕ್ಟರು

ನಿಜವೇನೇ ಇದ್ದರೂ ಹೀಗಿರಬೇಕೆಂದು ನಮ್ಮ ತರ್ಕ, ದೇವರು.

ದೊರೆ

ಇದನ್ನೆಲ್ಲ ಕೇಳಿ ನನ್ನ ಎದೆ ಹಾರುತ್ತಿದೆ.

ಡಾಕ್ಟರು

ಜಾತ್ರೆಯ ವಿಚಾರದಿಂದಾಗುತ್ತಿರಬೇಕು. ನಿಜವಾಗಿ ತಮ್ಮ ಎದೆ ಕುಣಿದಾಡಬೇಕು, ದೇವರು.

ದೊರೆ

ನನ್ನ ಹಣೆ ಕಾದಂತಿದೆ. ಡಂಗುರ ಸಾರುವುದು ಇನ್ನು ಬೇಡ ಎಂದು ತಿಳಿಸಿರಿ. ಜಾತ್ರೆಯ ಎಲ್ಲ ಸಿದ್ಧತೆ ಮಾತ್ರ ಸಾಗಲಿ. ಜಾತ್ರೆಯಾಗಲೇಬೇಕು. ಡಾಕ್ಟರೇ ನನ್ನ ಮೈ ಕಾದಿದೆಯೇನು ನೋಡಿರಿ !

ಡಾಕ್ಟರು

ದೊರೆಗಳ ಮೈ ಬೆಚ್ಚಗಿರಲೇಬೇಕು!

ದೊರೆ

(ತನ್ನ ನಾಡಿ ತಾನೇ ನೋಡಿಕೊಂಡು)
ನನ್ನ ನಾಡಿ ಇಷ್ಟೇಕೆ ಹಾರುತ್ತಿದೆ ?

ಡಾಕ್ಟರು

ರಾಜನಾಡಿ ಕೇಳುವುದೇನು ? ರಣಾಂಗಕ್ಕೆ ಹೊರಟ ಕುದುರೆಯಂತೆ ಹೊರಟಿದೆ ದೇವರು.

ದೊರೆ

ನನ್ನ ಮೈ ಯಾಕೋ ನಡುಗುತ್ತಿದೆಯಲ್ಲಾ ?

ಡಾಕ್ಟರು

ದೇವರು, ಅದು ಜಾತ್ರೆಯ ಉತ್ಸಾಹ.
(ಸಿಪಾಯಿ ಕರೆದದ್ದನ್ನು ನೋಡಿ ಕಾರಕೂನರು ಒಳಗೆ ಹೋಗಿ ಬಂದು...)

ಕಾರಕೂನ

ದೇವರು, ತೆಳಗಿನ ಓಣಿಯಲ್ಲಿ ಇಬ್ಬರು ಬಡಪಾಯಿಗಳು ಸತ್ತರಂತೆ, ಅವರ ಮನೆಯಲ್ಲಿ ಕೂಡ ಏನೂ ಗಂಟಿರಲಿಲ್ಲವಂತೆ.

ದೊರೆ

ನಮ್ಮ ಮನೆಯೇನು ಅರಮನೆಯೋ, ಯಮರಾಜನ ಸುಂಕದ ಕಟ್ಟೆಯೋ? ಸತ್ತವರಿಗೆ ಸುಮ್ಮನೆ ಸ್ಮಶಾನದ ಹಾದಿಯನ್ನು ಹಿಡಿಯಹೇಳಿರಿ. ಒಬ್ಬ ಕೂಲಿ ಸತ್ತರೂ ಇಲ್ಲಿ ಬೊಬ್ಬೆ, ಒಂದು ಇಲಿ ಸತ್ತರೂ ಇಲ್ಲಿ ಬೊಬ್ಬೆಯೇ? ಊರು ಸತ್ತರೂ ಜಾತ್ರೆ ನಿಂತೀತೇ? ಯಾರು ಸತ್ತದ್ದೂ ಇನ್ನು ನನಗೆ ಹೇಳಬೇಡಿರಿ. ನಾನು ಕೇಳಲಾರೆ.

(ಸಿಪಾಯಿ ಕರೆದದ್ದನ್ನು ನೋಡಿ ಕಾರಕೂನನು ಒಳಗೆ ಹೋಗಿ ತಿರುಗಿ ಬಂದು ಕಾರಭಾರಿಗಳ ಕಿವಿಯಲ್ಲಿ ಏನೋ ಹೇಳುವನು).

ಕಾರಭಾರಿ

ದೇವರು, ಆಚೆಯ ಕೋಣೆಯ ಮಧ್ಯದಲ್ಲಿ ಒಂದು ಇಲಿಯು ಸುಮ್ಮನೆ ಬಿದ್ದು ಕೊಂಡಿದೆಯಂತೆ.

ದೊರೆ

ಸತ್ತಿದೆಯೇ ?

ಕಾರಭಾರಿ

ಏನೋ ದೇವರು, ಯಾರ ಕಾಲ ಸಪ್ಪಳಕ್ಕೂ ಅದು ಹೆದರಿ ಸರಿದಾಡಲೊಲ್ಲದು ಕೂಡ!

ದೊರೆ

ಸಪ್ಪಳ ಮಾಡದಿದ್ದರೆ ಅದು ಧೈರ್ಯದಿಂದ ಹೊರಟು ಹೋಗಬಹುದಲ್ಲ !

ಕಾರಭಾರಿ

ಜಡಜಂತು, ಅದಕ್ಕೆ ಅಷ್ಟು ವಿವೇಕವಿರುವಂತೆ ತೋರುವುದಿಲ್ಲ!

ದೊರೆ

ಬೆಕ್ಕು ಬಿಟ್ಟು ನೋಡಿದಿರಾ ?

ಕಾರಭಾರಿ

ಆ ಇಲಿ ಬೀಳುವ ಹೊತ್ತಿಗೆ ಕೋಣೆಯೊಳಗಿಂದ ಓಡಿ ಹೋದ ಎರಡು ಬೆಕ್ಕುಗಳು ಇನ್ನೂ ಕೈಗೆ ಸಿಕ್ಕಿಲ್ಲ.

10th_Kannada_Reader1-5.indd 97 03-04-2019 14:07:59

ದೊರೆ

ಆ ಇಲಿಗಳನ್ನು ಈಗಿಂದೀಗ ತಂತಿಯಿಂದ ಮದ್ರಾಸಿಗೆ ಕಳಿಸಿರಿ.

ಡಾಕ್ಟರು

ವಾಯರ್‌ಲೆಸ್ಸಿನಿಂದ ಕಳಿಸಿದರೆ ಒಳ್ಳೇದಾಗಲಿಕ್ಕಿಲ್ಲವೇ?

ದೊರೆ

ನಿಮಗೆ ಹುಚ್ಚು ಡಾಕ್ಟರೇ ! ಹಾಗೆ ಹೇಗೆ ಬಂದೀತು !

ಡಾಕ್ಟರು

ತಾವಂದಂತೆ ತಂತಿಯಿಂದ ಬರಬಹುದೇ ದೇವರು?

ದೊರೆ

(ಉದ್ವೇಗದಿಂದ)

ನಾನು ಹಾಗೆಂದೆನೇ ? ನನ್ನ ಮನಸ್ಸು ಸ್ಥಿರವಿಲ್ಲ. ಕಾರಭಾರಿಗಳೇ, ಆ ಇಲಿಯ ಅಂತ್ಯವಿಧಿ ತೀರಿಸಿರಿ.

(ಕಾರಭಾರಿಗಳು ಹೋಗುವರು)

ಡಾಕ್ಟರೇ ! ನನಗೆ ಜ್ವರ ಬಂದಿದೆಯೇನೋ ?

ಡಾಕ್ಟರು

ಹಾಗೆ ಭಾಸವಾಗುತ್ತಿರಬೇಕು !

ದೊರೆ

ಇದು ಪ್ಲೇಗಿನ ಜ್ವರವಿರಲಿಕ್ಕಿಲ್ಲವಷ್ಟೇ ?

ಡಾಕ್ಟರು

ದೇವರು, ತಾವು ದೊರೆಗಳು; ಸಾಮಾನ್ಯ ಜನರಂತೆ ಮಾಡಿದರೆ ಹೇಗೆ ? ಪ್ಲೇಗು ಇಲ್ಲದಲ್ಲಿ ಪ್ಲೇಗಿನ ಜ್ವರವೇ ?

ದೊರೆ

ತಮಗೆ ಪ್ಲೇಗಿನ ಹೆದರಿಕೆಯಿಲ್ಲವೇ ?

ಡಾಕ್ಟರು

ನಾನು ಸೂಜಿಮದ್ದನ್ನು ಚುಚ್ಚಿಕೊಂಡಿದ್ದೇನೆ.

ದೊರೆ

ಅದೇಕೆ ಚುಚ್ಚಿಕೊಂಡಿರಿ. ಪ್ಲೇಗಿಲ್ಲದೆ ಸುಮ್ಮನೆ...

ಡಾಕ್ಟರು

ಆ ವಿಚಾರ ಚುಚ್ಚಿಕೊಂಡ ಮೇಲೆ ನನಗೂ ಹೊಳೆಯಿತು.

ದೊರೆ

(ಆತುರದಿಂದ)

ನನಗೂ ಚುಚ್ಚುವಿರಾ ? ಡಾಕ್ಟರೇ !!

ಡಾಕ್ಟರು

ಸುಮ್ಮನೆ ಏಕೆ ದೇವರು ?

(ಕಾರಭಾರಿಗಳು ಮರಳಿ ಬರುವರು)

ದೊರೆ

ಆ ಇಲಿಯಿಂದ ನನ್ನ ಮನಸ್ಸಿಗೆ ಹೆದರಿಕೆಯಾಗಿದೆ.

ಡಾಕ್ಟರು

ಆ ಇಲಿಯು ಪ್ಲೇಗಿನದಿರಲಾರದು.

ದೊರೆ

ಯಾವ ದೇವರು ಹೇಳಿದರು ನಿನಗೆ ಇದನ್ನು ?

ಡಾಕ್ಟರು

'ರಾಜಾ ಪ್ರತ್ಯಕ್ಷ ದೇವತಾಃ!' ಬೇರೆ ಯಾರು ? ಊರಲ್ಲಿಯೇ ಪ್ಲೇಗಿನ ಇಲಿಗಳಿಲ್ಲದ ಮೇಲೆ ದೊರೆಗಳ ಮನೆಯಲ್ಲಿ ಎಲ್ಲಿಂದ ಬರಬೇಕು ?

ದೊರೆ

ಆದರೆ ತಾವೇ ಮೊದಲು ಎನ್ನಲಿಲ್ಲವೇ ? ಪ್ಲೇಗಿನ ಇಲಿಗಳಿವೆ ಎಂದು !

ಡಾಕ್ಟರು

ಆಗ ನನಗೆ ಬುದ್ಧಿಯಿರಲಿಲ್ಲ.

ದೊರೆ

ಮುಂಬಯಿ ಸರಕಾರದ ವೈದ್ಯ ಶಾಖೆಯರು ಹಾಗೆ ತಿಳಿಸುವರಲ್ಲ! ಕಾರಭಾರಿಗಳೇ, ಅಲ್ಲವೇ ?

ಕಾರಭಾರಿ

ಅವರೇನೋ ಹಾಗೆಂದಿದ್ದಾರೆ.

ಡಾಕ್ಟರು

ತೊಗಲಲ್ಲೇನು ಬಲ್ಲ ತಿಮ್ಮಪ್ಪ ? ದೊರೆಗಳ ಇಲಿಗಳು ದೊರೆಗಳು ಬಲ್ಲರು ?

ಕಾರಭಾರಿ

(ಕೈಯಲ್ಲಿರುವ ಕಾಗದವನ್ನು ನೋಡಿ)

ಯಾವುದೋ ಪತ್ರಿಕೆಯಲ್ಲಿ, 'ಹುಚ್ಚಾಪುರದಲ್ಲಿ ಜಾತ್ರೆಯ ಸಿದ್ಧತೆಯೂ ಹೆಚ್ಚಾಗಿ ನಡೆದಿದೆ; ಊರಲ್ಲಿ ಪಿಡುಗೂ ಹೆಚ್ಚಾಗುತ್ತಾ ನಡೆದಿದೆ' ಎಂಬ ಸುದ್ದಿ ಪ್ರಕಟವಾಗಿದೆಯಂತೆ.

ದೊರೆ

(ಸಿಟ್ಟಿನಿಂದ)

ಏನು ಮುದ್ರಾರಾಕ್ಷಸವಿದು ! ದೆವ್ವನಂತಾ ತಪ್ಪು !

10th_Kannada_Reader1-5.indd 98 03-04-2019 14:07:59

ಇನ್ನೇನು ಸಾಯಬೇಕು ? ಆ ಪತ್ರಿಕೆಗೆ ತಿದ್ದುಪಡಿ ಕಳಿಸಿರಿ. ಪಿಡುಗಲ್ಲ, ಬೆಡಗು ಎಂದು. ಊರಲ್ಲಿ ಬೆಡಗು ಹೆಚ್ಚಾಗುತ್ತಾ ನಡೆದಿದೆ. ಪಿಡುಗಂತೆ ಪಿಡುಗು ! ಸಂಪಾದಕರಿಗೇನು ? ಪಿಡುಗೂ ಸುದ್ದಿಯೇ, ಬೆಡಗೂ ಸುದ್ದಿಯೇ ! ಅವರ ಗಂಟೇನು ಹೋದೀತು?

(ಒಮ್ಮೆಲೇ ನಿಸ್ತೇಜನಾಗಿ)

ನನ್ನ ಕೈಕಾಲೇ ಹೋದವು ಡಾಕ್ಟರ್ !

ಡಾಕ್ಟರು

ದೇವರು, ತಾವು ಧೈರ್ಯವಂತರು, ಏಕವಚನಿಗಳು. ಆಡಿದ ಮಾತು ತಿರುಗುವಂತಿಲ್ಲ ತಮ್ಮದು.

ದೊರೆ

ಮಂಚದ ಮೇಲೆ ಬಿದ್ದುಕೊಳ್ಳಲಾ ಎನ್ನಿಸುತ್ತಿದೆ.

ಡಾಕ್ಟರು

ತಾವು ಬಿದ್ದುಕೊಂಡರೆ ಜಾತ್ರೆಯೂ ಬಿದ್ದುಕೊಂಡು ಬಿಡುವುದು ದೇವರು.

ದೊರೆ

ತಲೆ ತಿರುಗಹತ್ತಿದೆ.

ಡಾಕ್ಟರು

ತಮ್ಮ ವಿಚಾರಗಳ ಪ್ರಭಾವವದು.

ದೊರೆ

ಕಣ್ಣುಗಳು ಉರಿಯ ಹತ್ತಿವೆ.

ಡಾಕ್ಟರು

ತಮ್ಮ ದೃಷ್ಟಿಯು ಅಷ್ಟು ಪ್ರಖರ !

ದೊರೆ

ಬಾಯಿ ಆರುತ್ತಿದೆ !

ಡಾಕ್ಟರು

ಏನೂ ಅಡ್ಡಿಯಿಲ್ಲ ದೇವರು.

ದೊರೆ

ಡಾಕ್ಟರೇ, ನಿಮ್ಮ ಶಾಂತತೆ ನನಗೆ ಸಹಿಸಲಾಗುವುದಿಲ್ಲ. ನನಗೇನೋ ಆಗಿದೆ. ಪರೀಕ್ಷಿಸಿ ನೋಡಿರಿ.

ಡಾಕ್ಟರು

ಪರೀಕ್ಷಿಸಿ ಏನು ನೋಡುವುದು ? ಮೇಲೆಯೇ ಕಾಣುತ್ತದೆ. ಸತ್ತವರ ಸುದ್ದಿಗಳನ್ನು ಮುಂಜಾವಿನಿಂದ ಕೇಳಿ ಕೇಳಿ ಭ್ರಮೆಯಾಗಿರಬೇಕು.

ದೊರೆ

ಹಾಗೆಂದರೆ ಹೇಗೆ ? ಪ್ಲೇಗು ಏನಾದರೂ ?

ಡಾಕ್ಟರು

ಆ ಮಾತು ನಾನಾಡಲಾರೆ. ದೊರೆಗಳು ಹೇಳಬಹುದು.

ದೊರೆ

(ಹಾಸಿಗೆಯ ಮೇಲುರುಳುತ್ತಾ)

ಡಾಕ್ಟರೇ, ಪ್ಲೇಗೆಂಬ ಮಾತಿಗೆ ಎಷ್ಟು ಹೆದರುತ್ತೀರಿ ?

ಡಾಕ್ಟರು

ನನಗೆ ಪ್ಲೇಗಿನ ಭೀತಿಯಿಲ್ಲ, ತಮ್ಮದು ದೇವರು.

ದೊರೆ

ಹೆದರದೇ ಹೇಳಿರಿ; ನನಗೇನಾಗಿರಬೇಕು ?

ಡಾಕ್ಟರು

ಪ್ಲೇಗು !

ದೊರೆ

(ಒಮ್ಮೆಲೇ ಎದ್ದು)

ನನಗೆ ಪ್ಲೇಗಾಗಿದೆ ?

(ವಿಕಾರವಾಗಿ)

ಊರೊಳಗಿನ ಎಲ್ಲ ಇಲಿಗಳನ್ನು ಕೊಂದು ಬಿಡಿರಿ. ಕಾರಭಾರಿಗಳೇ, ಇಲಿಗಳೆಲ್ಲಿವೆ ?

(ಬಿದ್ದುಕೊಳ್ಳುವನು)

ಕಾರಭಾರಿ

ದೊರೆಸಾನಿಗಳು ಒಳಗೆ ಬರಲು ಅಪ್ಪಣೆಗಾಗಿ ಕಾದಿದ್ದಾರೆ. ಜನರು ಊರು ಬಿಡಲು ಕಾದಿದ್ದಾರೆ.

ದೊರೆ

ಕಾರಭಾರಿಗಳೇ, ಇನ್ನೇನು ದೇವರ ಜಾತ್ರೆಯೋ, ದೊರೆಗಳ ಪ್ರೇತ ಯಾತ್ರೆಯೋ! ಡಾಕ್ಟರೇ, ಊರ ಜನರಿಗೆ ಊರು ಬಿಡ ಹೇಳಿರಿ. ಜೀವದ ಜಾತ್ರೆ ಹೊರಡಲಿ. ಡಾಕ್ಟರೇ, ನಿಮಗೆ ಬುದ್ಧಿಯಿಲ್ಲ. ಹೆದರಿಸಿದರೆ ಹೆದರಿ ಬಿಡುತ್ತೀರಿ. ಸತ್ತರೂ ಸತ್ಯ ಬಿಡಬಾರದು. ನಾನು ಹೇಳುತ್ತೇನೆ – ಇದು ಪ್ಲೇಗು.

ಡಾಕ್ಟರು

ಸರಕಾರ ಹೇಳಿದ್ದೇ ಸತ್ಯ, ದೇವರು.

(ಕಾರಭಾರಿಗಳು ಹೇಳ ಹೋಗುವರು. ಒಳಗೆ, 'ಭಾಳ ದಿನಾ ಬಾಳಲಿ ನಮ್ಮ ಧಣಿ' ಎಂದು ಜನಜಂಗುಳಿಯು ಕೂಗುವುದು ಕೇಳ ಬರುವುದು).

ತೆರೆ ಬೀಳುವುದು.

10th_Kannada_Reader1-5.indd 99 03-04-2019 14:07:59

ಕೃತಿ–ಕರ್ತೃ ಪರಿಚಯ



ಡಾ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಜ್ಞಾನಪೀಠ ಪ್ರಶಸ್ತಿ ವಿಜೇತ 'ಅಂಬಿಕಾತನಯದತ್ತ' ಕಾವ್ಯ ನಾಮದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಆಧುನಿಕ ಕನ್ನಡ ಕವಿಗಳಲ್ಲಿ ಅಗ್ರ ಪಂಕ್ತಿಗೆ ಸೇರಿದವರು. ನಮ್ಮ ಜನಪದರ ಭಾಷೆಯ ಸೊಗಡನ್ನೂ ಬೆಡಗನ್ನೂ ಮಾತಿನ ಮಿತ ಪ್ರಯೋಜನ ಮರ್ಮವನ್ನೂ ಇವರು ಆಧುನಿಕ ಕವಿತೆಗೆ ತಂದು ನೆಟ್ಟು, ಬೆಳೆಸಿ ಕೀರ್ತಿ ಶೇಷರಾದರು. ಕವಿಯಾಗಿ, ಚಿರಪರಿಚಿತರಾದ ಬೇಂದ್ರೆಯವರು ಉತ್ತಮ ಗದ್ಯ ಲೇಖಕರೂ ಆಗಿದ್ದರು. ಸಾಹಿತ್ಯ, ಸಂಶೋಧನೆ, ಕಾವ್ಯಮೀಮಾಂಸೆ, ವಿಮರ್ಶೆಗಳನ್ನು ಕುರಿತ ಗ್ರಂಥಗಳನ್ನೂ ಇವರು ರಚಿಸಿದ್ದಾರೆ. ಕೆಲವು ನಾಟಕಗಳನ್ನೂ ಬರೆದಿದ್ದಾರೆ. ಇವರ 'ಜಾತ್ರೆ' ಎಂಬ ಏಕಾಂಕ ನಾಟಕವನ್ನು ಇಲ್ಲಿ ಉಪಪಠ್ಯವಾಗಿ ನೀಡಲಾಗಿದೆ.

ಪದಗಳ ಅರ್ಥ

ದಿವಾಣಖಾನೆ – ಮೊಗಸಾಲೆ, ಮಂತ್ರಿಗಳ ಆಲೋಚನಾ ಮಂದಿರ., ಕಾರಕೂನ – ಕರಣಿಕ, ಗುಮಾಸ್ತ., ಪ್ಲೇಗು – ಇಲಿಗಳಿಂದ ಹರಡುವ ಒಂದು ಮಾರಕ ರೋಗ., ಸನ್ನೆ – ಸಂಜ್ಞೆ, ಸುಳಿವು, ಸೂಚನೆ., ಖಾನೇಸುಮಾರಿ – ಜನಗಳನ್ನು ಕ್ರಮವಾಗಿ ಎಣಿಕೆ ಮಾಡುವಿಕೆ., ಒಡ್ಡರು – ಕಲ್ಲು–ಮಣ್ಣು ಕೆಲಸ ಮಾಡುವವರು., ಮೂರ್ಖ – ದಡ್ಡ., ಕುರು – ಬೊಕ್ಕೆ, ಕೀವು–ರಕ್ತಗಳಿಂದ ತುಂಬಿದ ಗುಳ್ಳೆ., ಗಂಡಾಂತರ – ಅಪಾಯ, ವಿಪತ್ತು., ತರುಬು – ಅಡ್ಡಗಟ್ಟು, ನಿಗ್ರಹಿಸು., ತೊಗಲು – ಚರ್ಮ, ಭ್ರಮೆ – ಊಹೆ, ಕಲ್ಪನೆಯಿಂದ ಕಂಗೆಡುವುದು., ವಿವೇಕವನ್ನು ಕಳೆದುಕೊಳ್ಳುವುದು. ಭೀತಿ – ಭಯ, ಹೆದರು.,

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಡಂಗುರ ಸಾರುವವನು ಏನೆಂದು ಡಂಗುರ ಸಾರಿದನು ?
2. ದೊರೆಯು ಜಾತ್ರೆ ನಡೆಯಲೇಬೇಕೆಂದು ಹೇಳಲು ನೀಡುವ ಕಾರಣಗಳೇನು ?
3. ಮುಂಬಯಿಯಿಂದ ತಂತಿ ಬಂದಾಗ ದೊರೆಯು ಸಿಟ್ಟುಗೊಂಡುದೇಕೆ ?
4. ಪ್ಲೇಗಿನಿಂದ ಜನರು ಸಾಯಲು, ದೊರೆಗಳು ಅದಕ್ಕೆ ನೀಡುವ ಕಾರಣಗಳೇನು?
5. ಜನರ ಸಾವಿನಿಂದ ರಾಜನು ಭಯಗೊಂಡವನಾಗಿ, ತನ್ನ ಆರೋಗ್ಯದ ಬಗ್ಗೆ ವೈದ್ಯರಲ್ಲಿ ಏನೆಂದು ಹಲುಬಿದನು ?
6. ಅರಮನೆಯಲ್ಲಿ ಒಂದು ಇಲಿ ಸತ್ತಾಗ ಉಂಟಾದ ಭಯದ ವಾತಾವರಣವನ್ನು ವಿವರಿಸಿರಿ.
7. ಪತ್ರಿಕೆಯಲ್ಲಿ ಬಂದ ಸುದ್ದಿ ಏನು ?
8. ದೊರೆ ಹಾಗೂ ಡಾಕ್ಟರ್ ಅವರ ಸಂಭಾಷಣೆಯಲ್ಲಿ ಪ್ಲೇಗಿನ ಕುರುಹುಗಳು ಏನೆಂದು ತಿಳಿಯುತ್ತವೆ ?
9. ನಾಟಕದ ಅಂತ್ಯದಲ್ಲಿ ತಿಳಿಯುವ ಸತ್ಯಾಸತ್ಯತೆಯ ವಿಮರ್ಶೆಯನ್ನು ಮಾಡಿರಿ.

ಚಟುವಟಿಕೆ

1. ಈ ನಾಟಕವನ್ನು ತರಗತಿಯಲ್ಲಿ ಅಭಿನಯಿಸಿ.
2. ನಿಮಗಿಷ್ಟವಾದ ಪಾತ್ರದ ಸಂಭಾಷಣೆಯನ್ನು ಏಕಪಾತ್ರಾಭಿನಯ ಮಾಡಿ ತೋರಿಸಿ.

10th_Kannada_Reader1-5.indd 100 03-04-2019 14:07:59

ವ್ಯಾಕರಣ

ಘಟಕ ಐದು

ಸಂಧಿಗಳು

ನಾವು ಮಾತನಾಡುವಾಗ ಕೆಲವು ಶಬ್ದಗಳನ್ನು ಕೂಡಿಸಿ ಹೇಳುತ್ತೇವೆ. 'ಊರು ಊರು' ಎಂಬ ಎರಡು ಶಬ್ದಗಳನ್ನು ಊರೂರು ಎಂದು ಕೂಡಿಸಿಯೇ ಮಾತನಾಡುತ್ತೇವೆ. ಒಮ್ಮೊಮ್ಮೆ ಶಬ್ದ ಶಬ್ದಗಳನ್ನು ಬಿಡಿಸಿ ಹೇಳಿದರೂ ಪ್ರಕೃತಿ ಪ್ರತ್ಯಯಗಳನ್ನು ಮಾತ್ರ ಸಂಧಿ ಮಾಡಿಯೇ ಹೇಳುತ್ತೇವೆ. ಅವುಗಳನ್ನು ಬಿಡಿಬಿಡಿಯಾಗಿ ಹೇಳಲು ಸಾಧ್ಯವಾಗುವುದೇ ಇಲ್ಲ. **ಉದಾಹರಣೆ,**

ಪ್ರಕೃತಿ + ಪ್ರತ್ಯಯ = ಕೂಡಿಸಿದ ರೂಪ(ಸಂಧಿ ರೂಪ)

ಆಡು + ಇಸು = ಆಡಿಸು

ಮರ + ಅನ್ನು = ಮರವನ್ನು – ಮುಂತಾದವುಗಳು.

ಇನ್ನು ಕೆಲವು ಪದಗಳನ್ನು ಕೂಡಿಸಿಯೂ ಹೇಳಬಹುದು ಅಥವಾ ಬಿಡಿಬಿಡಿಯಾಗಿಯೂ ಹೇಳಬಹುದು. **ಉದಾಹರಣೆ:**

ಪದ	ಪದ	ಕೂಡಿಸಿದ ರೂಪ	ಕೂಡಿಸದ ರೂಪ
ಹಣ್ಣಿನ	**+ ಅಂಗಡಿ**	**ಹಣ್ಣಿನಂಗಡಿ**	**ಹಣ್ಣಿನ ಅಂಗಡಿ**

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೆ ಒಂದನ್ನೊಂದು ಸೇರಿ ಒಂದೇ ಪದವಾಗುವುದಕ್ಕೆ ಸಂಧಿ ಎನ್ನುತ್ತೇವೆ. ಪೂರ್ವ ಪದದ ಎಂದರೆ ಮೊದಲನೆಯ ಪದದ ಕೊನೆಯ ಅಕ್ಷರಕ್ಕೂ ಮತ್ತು ಉತ್ತರ ಪದದ (ಮುಂದಿನ ಪದದ) ಮೊದಲ ಅಕ್ಷರಕ್ಕೂ ಸಂಧಿ ಕಾರ್ಯ ನಡೆಯುತ್ತದೆ. ಸಂಧಿಯಲ್ಲಿ ಸ್ವರ ಸಂಧಿ, ವ್ಯಂಜನ ಸಂಧಿ ಎಂದು ಎರಡು ವಿಧಗಳಿವೆ.

ಸ್ವರದ ಮುಂದೆ ಸ್ವರ ಬಂದು ಸಂಧಿಯಾದರೆ ಸ್ವರ ಸಂಧಿ ಎನ್ನುತ್ತೇವೆ. ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿಯಾದರೆ ವ್ಯಂಜನ ಸಂಧಿ ಎನ್ನುತ್ತೇವೆ.

ಕನ್ನಡ ಸಂಧಿಗಳು

ಹೆಸರೇ ಸೂಚಿಸುವಂತೆ ಕನ್ನಡ ಸಂಧಿಗಳಲ್ಲಿ ಪೂರ್ವ ಪದ ಮತ್ತು ಉತ್ತರ ಪದ ಎರಡೂ ಕನ್ನಡ ಪದಗಳೇ ಆಗಿರುತ್ತವೆ. ಕನ್ನಡದಲ್ಲಿ ಒಟ್ಟು ಮೂರು ಬಗೆಯ ಸಂಧಿಗಳಿವೆ. ಅವುಗಳು : ಲೋಪಸಂಧಿ, ಆಗಮ ಸಂಧಿ, ಆದೇಶ ಸಂಧಿ.

ಲೋಪ ಸಂಧಿ

ಸ್ವರದ ಮುಂದೆ ಸ್ವರವು ಬಂದು, ಸಾಮಾನ್ಯವಾಗಿ ಪೂರ್ವ ಪದದ ಕೊನೆಯ ಅಕ್ಷರವು ಲೋಪವಾಗುವುದನ್ನೇ ಲೋಪಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ:

ಊರು+ಅನ್ನು=ಊರನ್ನು(ಉಕಾರ ಲೋಪವಾಗಿದೆ)

ಅವನ+ಊರು=ಅವನೂರು(ಅಕಾರ ಲೋಪವಾಗಿದೆ)

10th_Kannada_Reader1-5.indd 101 03-04-2019 14:07:59

ದೇವರು+ಇಂದ=ದೇವರಿಂದ(ಉಕಾರ ಲೋಪವಾಗಿದೆ)

ಕಾಡು+ಇಗೆ=ಕಾಡಿಗೆ(ಉಕಾರ ಲೋಪವಾಗಿದೆ)

ಆಗಮ ಸಂಧಿ

ಸ್ವರದ ಮುಂದೆ ಸ್ವರವು ಬಂದು ಲೋಪ ಸಂಧಿಯಾದರೆ; ಆಗ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ನಡುವೆ 'ಯ'ಕಾರವೋ ಅಥವಾ 'ವ'ಕಾರವೋ ಹೊಸದಾಗಿ ಬಂದು ಸೇರಿಕೊಳ್ಳುತ್ತದೆ. ಇದನ್ನು ಆಗಮ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ :

ಹಳ್ಳಿ+ಅಲ್ಲಿ=ಹಳ್ಳಿಯಲ್ಲಿ(ಯಕಾರಾಗಮ)

ಹೊಲ+ಅನ್ನು=ಹೊಲವನ್ನು(ವಕಾರಾಗಮ)

ಕೆರೆ+ಅನ್ನು=ಕೆರೆಯನ್ನು(ಯಕಾರಾಗಮ)

ಕರು+ಅನ್ನು=ಕರುವನ್ನು(ವಕಾರಾಗಮ)

ಆದೇಶ ಸಂಧಿ

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಆದೇಶವಾಗಿ ಬರುವುದನ್ನೇ ಆದೇಶ ಸಂಧಿ ಎಂದು ಕರೆಯುತ್ತಾರೆ. ಮುಖ್ಯವಾಗಿ ಉತ್ತರ ಪದದ ಮೊದಲಿನ ಅಕ್ಷರಗಳಾದ ಕ,ತ,ಪ–ಗಳಿಗೆ ಅದೇ ವರ್ಗದ ತೃತೀಯಾಕ್ಷರಗಳಾದ ಗ,ದ,ಬ–ಗಳು ಆದೇಶವಾಗುತ್ತವೆ.

ಉದಾಹರಣೆ :

ಅಡಿ+ಕಲ್ಲು=ಅಡಿಗಲ್ಲು(ಕಕಾರಕ್ಕೆ ಗಕಾರ ಆದೇಶವಾಗಿದೆ)

ಕೆಳ+ತುಟಿ=ಕೆಳದುಟಿ(ತಕಾರಕ್ಕೆ ದಕಾರ ಆದೇಶವಾಗಿದೆ)

ಹೊಸ+ಕನ್ನಡ=ಹೊಸಗನ್ನಡ(ಕಕಾರಕ್ಕೆ ಗಕಾರ ಆದೇಶವಾಗಿದೆ)

ಕಣ್+ಪನಿ=ಕಂಬನಿ(ಪಕಾರಕ್ಕೆ ಬಕಾರ ಆದೇಶವಾಗಿದೆ)

ಪ್ರಕೃತಿಭಾವ

ಸ್ವರದ ಮುಂದೆ ಸ್ವರವು ಬಂದರೂ, ಕೆಲವು ಕಡೆಗಳಲ್ಲಿ ಲೋಪ–ಆಗಮ–ಆದೇಶ ಸಂಧಿಗಳಾಗದೆ, ಇರುವ ಪದಗಳು ಇರುವ ಹಾಗೆಯೇ ಇರುವುದಕ್ಕೆ ಪ್ರಕೃತಿ ಭಾವ ಎಂದು ಕರೆಯುತ್ತಾರೆ. ಅನುಕರಣ ಶಬ್ದಗಳ ಮುಂದೆ ಸ್ವರ ಬಂದರೆ ಸಂಧಿಯಾಗುವುದಿಲ್ಲ.

ಉದಾಹರಣೆ:

ಆ+ಅರಸ=ಆ ಅರಸ

ಈ+ಹುಡುಗ=ಈ ಹುಡುಗ

ಓಹೋ+ನಿಧಿ ಸಿಕ್ಕಿತು!=ಓಹೋ ನಿಧಿ ಸಿಕ್ಕಿತು!

ದೇವರೇ+ಅವರನ್ನು ಕಾಪಾಡು=ದೇವರೇ, ಅವರನ್ನು ಕಾಪಾಡು!

10th_Kannada_Reader1-5.indd 102 03-04-2019 14:07:59

ಸಂಸ್ಕೃತ ಸಂಧಿಗಳು

ಇವುಗಳಲ್ಲಿ ಪೂರ್ವ ಮತ್ತು ಉತ್ತರ ಪದಗಳೆರಡೂ ಸಂಸ್ಕೃತ ಪದಗಳೇ ಆಗಿರುತ್ತವೆ. ಸಂಸ್ಕೃತ ಸಂಧಿಗಳನ್ನು ಸ್ವರ ಸಂಧಿಗಳು, ವ್ಯಂಜನ ಸಂಧಿಗಳು ಹಾಗೂ ಅನುನಾಸಿಕ ಸಂಧಿಗಳೆಂದು ಎರಡು ರೀತಿಯಲ್ಲಿ ಗುರುತಿಸಬಹುದು.

ಸಂಸ್ಕೃತ ಸ್ವರ ಸಂಧಿಗಳು

ಸ್ವರ–ಸ್ವರಗಳು ಸೇರಿ ಸಂಧಿಯಾದರೆ ಅದನ್ನು ಸ್ವರ ಸಂಧಿ ಎನ್ನುವರು.

ಸವರ್ಣದೀರ್ಘ ಸಂಧಿ

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಸ್ವರದ ದೀರ್ಘ ಸ್ವರವು ಬರುವುದನ್ನು ಸವರ್ಣದೀರ್ಘ ಸಂಧಿ ಎಂದು ಎಂದು ಕರೆಯುತ್ತಾರೆ.

ಉದಾಹರಣೆ:

ಭೀಮ+ಅರ್ಜುನ=ಭೀಮಾರ್ಜುನ(ಅ+ಅ=ಆ)

ಕವಿ+ಇಂದ್ರ=ಕವೀಂದ್ರ(ಇ+ಇ+ಈ)

ಗುರು+ಉಪದೇಶ=ಗುರೂಪದೇಶ(ಉ+ಉ+ಊ)

ಗುಣ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಇಈ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏಕಾರವೂ, ಉಊಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಓಕಾರವೂ; ಋಕಾರವು ಪರವಾದರೆ ಅವೆರಡರ ಸ್ಥಾನದಲ್ಲಿ ಅರ್‌ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ:

ಸುರ+ಇಂದ್ರ=ಸುರೇಂದ್ರ(ಅ+ಇ=ಏ)

ಚಂದ್ರ +ಉದಯ=ಚಂದ್ರೋದಯ(ಅ+ಉ=ಓ)

ಮಹ+=ಋಷಿ=ಮಹರ್ಷಿ(ಅ+ಋ=ಅರ್/ರ್)

ವೃದ್ಧಿ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಉತ್ತರ ಪದದ ಮೊದಲಲ್ಲಿ ಏಐ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐಕಾರವೂ; ಒಔ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔಕಾರವೂ ಬರುವುದನ್ನು ವೃದ್ಧಿ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ:

ಏಕ+ಏಕ=ಏಕೈಕ(ಅ+ಏ=ಐ)

ಅಷ್ಟ+ಐಶ್ವರ್ಯ=ಅಷ್ಟೈಶ್ವರ್ಯ(ಅ+ಐ=ಐ)

ಮಹಾ+ಔದಾರ್ಯ=ಮಹೌದಾರ್ಯ(ಆ+ಔ=ಔ)

ಮಹಾ+ಔನ್ನತ್ಯ=ಮಹೌನ್ನತ್ಯ(ಆ+ಔ=ಔ)

ಯಣ್ ಸಂಧಿ

ಪೂರ್ವ ಪದದ ಕೊನೆಯಲ್ಲಿ ಇಈಉಊಋ–ಕಾರಗಳಿಗೆ ಸವರ್ಣವಲ್ಲದ ಅಕ್ಷರಗಳು ಪರವಾದರೆ, ಇಈ–ಕಾರಗಳಿಗೆ 'ಯ'ಕಾರವೂ; ಉಊ–ಕಾರಗಳಿಗೆ 'ವ'ಕಾರವೂ; ಋಕಾರಕ್ಕೆ 'ರ'ಕಾರವೂ ಆದೇಶವಾಗಿ ಬರುವುದನ್ನು ಯಣ್ ಸಂಧಿ ಎಂದು ಕರೆಯುತ್ತಾರೆ.

10th_Kannada_Reader1-5.indd 103 03-04-2019 14:07:59

ಉದಾಹರಣೆ:

ಅತಿ+ಅವಸರ=ಅತ್ಯವಸರ(ಇ+ಆ=ಯ)

ಪ್ರತಿ+ಉತ್ತರ=ಪ್ರತ್ಯುತ್ತರ(ಇಕಾರಕ್ಕೆ ಯಕಾರ)

ಮನು+ಅಂತರ=ಮನ್ವಂತರ(ಉಕಾರಕ್ಕೆ ವಕಾರ)

ಪಿತೃ+ಆರ್ಜಿತ(ಋಕಾರಕ್ಕೆ ರಕಾರ)

ಸಂಸ್ಕೃತ ವ್ಯಂಜನ ಸಂಧಿಗಳು

ಜಸ್ತ್ವ ಸಂಧಿ

ಜಸ್ ಎಂದರೆ ಸಂಸ್ಕೃತ ವ್ಯಾಕರಣದಲ್ಲಿ ಗಜಡದಪ ಎಂಬ ಐದು ವ್ಯಂಜನಗಳನ್ನು ಸೂಚಿಸುವ ಒಂದು ಸಂಜ್ಞೆ. ಪೂರ್ವ ಪದದ ಕೊನೆಯಲ್ಲಿರುವ ಕ,ಚ,ಟ,ತ,ಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಆಯಾ ವರ್ಗದ ಮೂರನೆಯ ವ್ಯಂಜನಾಕ್ಷರಗಳಾದ ಗ,ಜ,ಡ,ದ,ಬ–ಗಳು ಆದೇಶವಾಗಿ ಬರುವುದನ್ನು ಜಸ್ತ್ವಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ:

ವಾಕ್+ದೇವಿ=ವಾಗ್ದೇವಿ(ಕಕಾರಕ್ಕೆ ಗಕಾರ ಆದೇಶವಾಗಿದೆ)

ದಿಗ್+ಅಂತ=ದಿಗಂತ(ಕಕಾರಕ್ಕೆ ಗಕಾರ ಆದೇಶವಾಗಿದೆ)

ಸತ್+ಆನಂದ=ಸದಾನಂದ(ತಕಾರಕ್ಕೆ ದಕಾರಾದೇಶ)

ಷಟ್+ಆನನ=ಷಡಾನನ(ಟಕಾರಕ್ಕೆ ಡಕಾರಾದೇಶ)

ಶ್ಚುತ್ವ ಸಂಧಿ

'ಶ್ಚು' ಎಂದರೆ ಶಕಾರ ಚವರ್ಗಾಕ್ಷರಗಳು.. ಪೂರ್ವ ಪದದ ಕೊನೆಯಲ್ಲಿ ಸಕಾರ ಹಾಗೂ ತವರ್ಗಾಕ್ಷರಗಳಿಗೆ ಶಕಾರ ಮತ್ತು ಚವರ್ಗಾಕ್ಷರಗಳು ಪರವಾದರೆ; ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶವಾಗಿ ಬರುವುದನ್ನೇ ಶ್ಚುತ್ವ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ:

ಮನಸ್+ಶಾಂತಿ=ಮನಶ್ಶಾಂತಿ(ಸಕಾರಕ್ಕೆ ಶಕಾರಾದೇಶ)

ಸತ್+ಚಿತ್ತ=ಸಚ್ಚಿತ್ತ(ತಕಾರಕ್ಕೆ ಚಕಾರಾದೇಶ)

ಅನುನಾಸಿಕ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಾದ ಕಚಟತಪ ವ್ಯಂಜನಗಳಿಗೆ ಯಾವುದೇ ವ್ಯಂಜನಗಳು ಪರವಾದರೂ ಅದೇ ವರ್ಗದ ಅನುನಾಸಿಕಗಳಾದ ಙಞಣನಮಗಳು ಆದೇಶವಾಗಿ ಬರುವುದನ್ನೇ ಅನುನಾಸಿಕ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆ :

ದಿಗ್+ನಾಗ=ದಿಙ್ನಾಗ

ಚಿತ್+ಮಯ=ಚಿನ್ಮಯ

ಷಟ್+ಮುಖ=ಷಣ್ಮುಖ

ಸತ್+ಮಾನ=ಸನ್ಮಾನ

10th_Kannada_Reader1-5.indd 104 03-04-2019 14:07:59

ಘಟಕ
ಆರು

ವಿಜ್ಞಾನ ಮತ್ತು ತಂತ್ರಜ್ಞಾನ



ಕಾವ್ಯ ಕಣಜ	: ಬೀಜ–ಮರ	– ಕೆ.ಎಸ್.ನಿಸಾರ್ ಅಹಮದ್
ಗದ್ಯ ವಿಹಾರ	: ರೇಷ್ಮೆ ಕೈಗಾರಿಕೆ	– ರಾ. ಗೋಪಾಲರೆಡ್ಡಿ
ಉಪಪಠ್ಯ	: ಇಟಲಿಯ ವಿಹಂಗಮ ನೋಟ	– ಡಾ. ಕೆ. ಶಿವರಾಮ ಕಾರಂತ
ವ್ಯಾಕರಣ	: ಸಮಾಸಗಳು	

10th_Kannada_Reader1-5.indd 105 03-04-2019 14:07:59

ಕಾವ್ಯ ಕಣಜ

ಘಟಕ ಆರು

ಬೀಜ – ಮರ

– ಕೆ.ಎಸ್.ನಿಸಾರ್ ಅಹಮದ್



ಇಂದಿನ ಕಿರಿಯರು ನಾಳೆಯ ಹಿರಿಯರು; ಇಂದಿನ ಮಕ್ಕಳು ನಾಳೆಯ ದೇಶದ ಭವಿಷ್ಯದ ಉದ್ಧಾರಕರು. ಆದ್ದರಿಂದ ಸಮಾಜದಲ್ಲಿ ಹಿರಿಯರ ಆಶೀರ್ವಾದ ಮತ್ತು ಉತ್ತಮ ಮಾರ್ಗದರ್ಶನ ಕಿರಿಯರಿಗಿರಬೇಕು. ಒಬ್ಬರು ಇನ್ನೊಬ್ಬರಿಗೆ ನೀಡುವ ಸಹಾಯ ಸಹಕಾರಗಳೇ ಸಮಾಜದ ಮುಖ್ಯ ಧ್ಯೇಯ. ಸಮಾಜವೆಂಬುದು ಒಂದು ಸ್ಥಿರವಾದ ಪದಾರ್ಥವಲ್ಲ. ಇದು ಕುಂಬಾರನ ತಿಗುರಿಯ ಮೇಲಿನ ಮಡಕೆಯಂತೆ ಯಾವಾಗಲೂ ರೂಪಗೊಳ್ಳುತ್ತಲೇ ಇರುವುದು. ಸಂಸಾರವನ್ನು ಒಂದು ವೃಕ್ಷಕ್ಕೆ ಹೋಲಿಸುವ ವಾಡಿಕೆಯಿದೆ. ಜೀವಂತ ಮರವು ಋತುಮಾನಕ್ಕನುಸರಿಸಿ ಬದಲಾವಣೆಗಳನ್ನು ಹೊಂದುವುದು. ಹಳೆಯ ಎಲೆಗಳು ಉದುರುವುವು. ಹೊಸ ಚಿಗುರುಗಳು ಹುಟ್ಟುವುವು, ಹೂ ಬಿಡುವುವು; ಫಲ ಕೊಡುವುವು. ಹೀಗೆಯೇ ಸಂಸಾರ ಕೂಡ ಎಂಬ ಅರಿವು ಹಿರಿಯರಿಗಿರಬೇಕು. 'ಬೀಜವಿಲ್ಲದೇ ಮರವಿಲ್ಲ, ಮರವಿಲ್ಲದದೆ ಬೀಜವಿಲ್ಲ' ಎಂಬಂತೆ ಕಾಲಧರ್ಮವನ್ನನುಸರಿಸಿ ಸಹಕಾರಿಗಳಾಗಿ ಬಾಳಬೇಕು ಎಂಬ ತತ್ವ ಕವನದಲ್ಲಿ ಧ್ವನಿತವಾಗಿದೆ.





10th_Kannada_Reader1-5.indd 106 03-04-2019 14:08:00

ಮಣ್ಣ ಮುಕ್ಕುತ ಬಿಕ್ಕುತಿರುವ ಹೊಸ ಬೀಜಕ್ಕೆ
ಭೂತಳದ ಹೊಸಿಲಾಚೆ ನಗುವ ಹೂ ಬಿಸಿಲಲ್ಲಿ
ಟಿಸಿಲೊಡೆದು ಬಳುಕುವಾಸೆ –
ವಾಮನತೆಯಿಂದೊಮ್ಮೆ ಗೆದ್ದು, ವಿಕ್ರಮಪದವಿಗೇರುವಾಸೆ!
ಕೊಟ್ಟರಾರೀ ಎಳೆಯ ಬೀಜಕ್ಕೆ ಆ ಹಕ್ಕು ?
ಸುಕ್ಕಾದ ಮುದಿಯ ಮರ ಮೂಗು ಮುರಿದಿದೆ ನಕ್ಕು
ಆಡಿದರೆ ಬಾಡುವುದೇ ಕಿರಿ ಬೀಜದುತ್ಸಾಹ ?
ಇಂಗುವುದೆ ಸಾರ್ಥತೆಯ ಮುಟ್ಟಲಿಹ ಹಿರಿ ದಾಹ?
ಬೀಜಕಿದೆ ಭೂತಾಯ ಚಿಕ್ಕ ಕೃಪೆಯ ಆಧಾರ;
ತನ್ನೆದೆಯ ಸವಿ ಸಾರವೆರೆದು ಬೆಳೆಸುವ ಭಾರ.
ಆ ತಾಯಿ ಹೊತ್ತಿರಲು, ಪರನಿಂದೆ ಧ್ರುವ ದೂರ.
ಇಂದೋ ನಾಳೆಯೋ ಮಸೆವ ಬೀಸುಗಾಳಿಗೆ ಬಿದ್ದು
ಅಡಗಬಹುದೆಲೆ ಮರವೆ, ನಿನ್ನ ಕುಹಕದ ಸದ್ದು!
ಮುಂದೆ ನಿನ್ನವಶೇಷ ರಾಶಿಯನೆ ತಾನೊದ್ದು
ನಿಲಬಹುದು ಎದೆ ಸೆಟೆದು ಈ ಬೀಜ ಮೇಲೆದ್ದು.
ಮರೆತು ಹಿಂದಿನದೆಲ್ಲ ಹರಸೋ ಅಣ್ಣ;
'ಬದುಕು ವರ್ಧಿಸಿ ಆಗು ಸರ್ವಮಾನ್ಯ'
ಎಂದು. ಬೀಜವಿಲ್ಲದ ನಿನಗೆ ಅನ್ಯ.

10th_Kannada_Reader1-5.indd 107 03-04-2019 14:08:00

ಕವಿ ಕಾವ್ಯ ವಿಚಾರ



– ಕೆ.ಎಸ್.ನಿಸಾರ್ ಅಹಮದ್

ಈ ಕವನವನ್ನು ನಿಸಾರ್ ಅಹಮದ್ ಅವರ ಆಯ್ದ ಕವಿತೆಗಳ ಸಂಗ್ರಹದಿಂದ ಆರಿಸಲಾಗಿದೆ. ಸುಪ್ರಸಿದ್ಧ ಕವಿಯೆನಿಸಿರುವ ಇವರು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ಸುಮುಹೂರ್ತ, ಸಂಜೆ ಐದರ ಮಳೆ, ಸ್ವಯಂ ಸೇವೆಯ ಗಿಳಿಗಳು, ನಿತ್ಯೋತ್ಸವ ಇವೇ ಮೊದಲಾದವು ಇವರ ಕವನ ಸಂಕಲನಗಳು. ನವೋದಯ ಕಾವ್ಯದಲ್ಲಿ ವೈಚಾರಿಕತೆ ಎನ್ನುವ ವಿಮರ್ಶಾ ಗ್ರಂಥವನ್ನೂ ಬರೆದಿದ್ದಾರೆ. ಹಲವಾರು ಅನುವಾದ ಗ್ರಂಥಗಳನ್ನು ರಚಿಸಿದ್ದಾರೆ. ಆಂತರಿಕ ಭಾವಗಳನ್ನು ಹೊರಹೊಮ್ಮಿಸುವ ಕಂಡ ದೃಶ್ಯಗಳನ್ನು ಸುಂದರವಾಗಿ ವ್ಯಾಖ್ಯಾನಿಸುವ ಚತುರತೆಯನ್ನೂ ಇವರು ಪಡೆದಿದ್ದಾರೆ. ಅಸಾಧಾರಣವಾದ ಲಯ ಮತ್ತು ಗೇಯ ಗುಣಗಳು ಇವರ ಕವನಗಳಲ್ಲಿ ಎದ್ದು ಕಾಣುತ್ತವೆ.

ಸರ್ವರ ಉದ್ಧಾರದಲ್ಲಿ ತನ್ನ ಉದ್ಧಾರವಿದೆ ಎನ್ನುವ ತತ್ವ ಈ ಕವನದಲ್ಲಿ ವ್ಯಕ್ತವಾಗಿದೆ. ಆದ್ದರಿಂದ ಹಿರಿಯರು ಕಿರಿಯರ ಅಭಿವೃದ್ಧಿಗೆ ಭಂಗ ತರದೆ, ಗೊಣಗಾಣದೆ, ತನಗಿಂತ ಅಧಿಕನಾಗುವನೆಂದು ಅಸೂಯೆ ಪಡೆದು ಆಶೀರ್ವದಿಸಿ ಅವರ ಏಳ್ಗೆಗೆ ಮಾರ್ಗದರ್ಶಕರಾಗಿರಬೇಕು ಎಂಬ ನೀತಿ ಇಲ್ಲಿ ಧ್ವನಿತವಾಗಿದೆ. 'ಮರವಿಲ್ಲದೆ ಬೀಜವಿಲ್ಲ; ಬೀಜವಿಲ್ಲದೆ ಮರವೂ ಇಲ್ಲ' ಎಂಬಂತೆ ಮರವು ಬೀಜವನ್ನು ಹರಸಬೇಕು. ಅದರ ಉತ್ಸಾಹಕ್ಕೆ ಅಸೂಯೆ ಪಡದೆ ಅದಕ್ಕೂ ಭೂತಾಯಿಯ ಕೃಪೆಯಿದೆ. ಎಲ್ಲರಿಗೂ ಭಗವಂತನ ದಯೆಯಿದೆ ಎಂಬುದನ್ನು ತಿಳಿದು ಹಸುಳೆಗಳನ್ನೂ(ಬೀಜವನ್ನೂ) ನಿಂದಿಸದೆ ಆಶೀರ್ವದಿಸಬೇಕು. ಇಂದೋ ನಾಳೆಯೋ ಬಿದ್ದು ಸಾಯುವ ಮರದ ನಿಂದನೆಯೂ ಶಾಶ್ವತವಲ್ಲ ಎಂಬುದರಲ್ಲಿ ಇಂದೊ ನಾಳೆಯೋ ಸಾಯುವ ಮುದುಕರು ಹುಡುಗರ ಉತ್ಸಾಹಕ್ಕೆ ಭಂಗ ತಂದು ನಿಂದಿಸಿ ಪ್ರಯೋಜನವಿಲ್ಲ. ತನ್ನ ಸ್ಥಾನದಲ್ಲಿ ಅವನು ನಿಂತು ಸಂಸಾರ ಸಾಗಿಸಬೇಕೆಂಬ ಅಭಿಲಾಷೆಯಿಂದ ಹರಸಬೇಕೆಂಬ ತತ್ವವಿದೆ. ಅಲ್ಲದೆ ಭೂತಾಯಿಯ ಕೃಪೆಯಿಂದ ಬೀಜವು ಹೆಮ್ಮರವಾಗುವಂತೆ, ಮಕ್ಕಳು ಬೆಳೆದು ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗುವರು ಎಂಬುದನ್ನು ತಿಳಿದು ಅವರ ಅಭಿವೃದ್ಧಿಗೆ ಹಿರಿಯರು ಭಂಗ ತರಬಾರದೆಂಬ ನೀತಿಯಿದೆ.

ಪದಗಳ ಅರ್ಥ

ಭೂತಳ–ಭೂಮಿ; ಟಿಸಿಲು–ಕವಲು; ಹೊಂಬಿಸಿಲು–ಎಳೆಬಿಸಿಲು; ಬಳುಕುವ ಆಸೆ–ಓಲಾಡುವ ಆಸೆ; ವಿಕ್ರಮ–ಪರಾಕ್ರಮ; ಹಕ್ಕು–ಅಧಿಕಾರ; ಸಾರ್ಥತೆ–ಸಫಲತೆ; ಹಿರಿದಾಹ–ಹೆಚ್ಚಿನ ಬಯಕೆ; ಚಿರಕೃಪೆ–ಶಾಶ್ವತ ದಯೆ; ಸಾರ–ಸತ್ವ; ಧೃವದೂರ–ಉತ್ತರ ದಿಕ್ಕಿನ ಮೇರುವಿನಷ್ಟು ದೂರ(ಧೃವ ನಕ್ಷತ್ರ); ಕುಹಕ–ವಂಚನೆ, ಕಪಟ; ಹರಸು–ಆಶೀರ್ವದಿಸು; ಬದುಕು–ಜೀವನ; ವರ್ಧಿಸಿ–ಅಭಿವೃದ್ಧಿ ಹೊಂದಿ; ಸರ್ವಮಾನ್ಯ–ಎಲ್ಲರಿಂದ ಗೌರವ ಪಡೆದವನು.

10th_Kannada_Reader1-5.indd 108 03-04-2019 14:08:00

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಹೊಸ ಬೀಜಕ್ಕೆ ಹೇಗೆ ಬದುಕಬೇಕೆಂಬ ಆಸೆಯಿದೆ ?
2. ಬೀಜಕ್ಕೆ ಯಾರ ಆಧಾರ ಇದೆ ?
3. ಕವಿಯು ಯಾವುದು ಶಾಶ್ವತವಲ್ಲ ಎಂದು ಹೇಳಿದ್ದಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಬೀಜಕ್ಕೆ ಇದ್ದ ಆಸೆ ಆಕಾಂಕ್ಷೆಗಳು ಯಾವುವು ?
2. ಮರದ ಕರ್ತವ್ಯವೇನು? ಈ ವಿಚಾರದಲ್ಲಿ ಕವಿಯ ಅಭಿಪ್ರಾಯವೇನು ?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. ಬೀಜ – ಮರ ಈ ಕವನದ ಸಾರಾಂಶವನ್ನು ವಿವರಿಸಿ ಬರೆಯಿರಿ.

ಭಾಷಾಭ್ಯಾಸ

1. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಸಾರ್ಥತೆ, ಧ್ರುವ ದೂರ, ಕುಹಕ, ಹಿರಿಯದು, ಸರ್ವಮಾನ್ಯ.

2. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಬಿಕ್ಕುತಿರುವ, ಬದುಕುವಾಸೆ, ನಿನ್ನವಶೇಷ, ಮೇಲೆದ್ದು, ಬೀಜವಿಲ್ಲದ

ಚಟುವಟಿಕೆ

1. ನಿಮ್ಮ ಶಾಲೆಯ ಮತ್ತು ನಿಮ್ಮ ಮನೆಯ ಕೈತೋಟಗಳಲ್ಲಿ ಹೊಸ ಗಿಡಗಳನ್ನು ನೆಟ್ಟು ಬೆಳೆಸಿರಿ.



10th_Kannada_Reader1-5.indd 109 03-04-2019 14:08:00

ಗದ್ಯ ವಿಹಾರ

ಘಟಕ ಆರು

ರೇಷ್ಮೆ ಕೈಗಾರಿಕೆ

–ರಾ. ಗೋಪಾಲರೆಡ್ಡಿ



ಮದುವೆಯ ಸಮಾರಂಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಹೆಣ್ಣು ಮಕ್ಕಳು ರಂಗುರಂಗಿನ, ಮಿನುಗುವ ಮತ್ತು ಎಲ್ಲರನ್ನೂ ಆಕರ್ಷಿಸುವ ರೇಷ್ಮೆ ಸೀರೆಗಳನ್ನು ಉಟ್ಟುಕೊಂಡು ಮೆರದಾಡುವುದನ್ನು ನಾವು ಕಾಣುತ್ತೇವೆ. ಹಿಂದಿನ ಕಾಲದಲ್ಲಿ ಪಟ್ಟೆಯುಡುಗೆಗಳನ್ನು ರಾಜ–ರಾಣಿಯರು, ಆಗರ್ಭ ಶ್ರೀಮಂತರು ಮಾತ್ರ ಧರಿಸುತ್ತಿದ್ದರು ಎಂದು ಇತಿಹಾಸ, ಪುರಾಣಗಳಿಂದ ತಿಳಿದು ಬರುತ್ತದೆ. ಅಂದರೆ ಸುಮಾರು 3000 ವರ್ಷಗಳಿಂದಲೂ ರೇಷ್ಮೆ ಬಟ್ಟೆಗಳಿದ್ದವು. ಆದರೆ ಇಂದು ಜನಸಾಮಾನ್ಯರೂ ಸಹ ರೇಷ್ಮೆ ಉಡುಗೆಗಳನ್ನು ಧರಿಸಲು ಸಾಧ್ಯವಾಗಿದೆ.









10th_Kannada_Reader1-5.indd 110 03-04-2019 14:08:00

ರೇಷ್ಮೆಯ ಇತಿಹಾಸ

ರೇಷ್ಮೆಯ ಇತಿಹಾಸ ಬಹಳ ಕುತೂಹಲಕರವಾಗಿದೆ. ಕ್ರಿ.ಪೂ. 2640ನೇ ಇಸವಿಯಲ್ಲಿ ಚೀನಾದ ಒಂದು ಭಾಗವನ್ನು ಒಬ್ಬ ಚಕ್ರವರ್ತಿ ಆಳುತ್ತಿದ್ದ. ಆತನಿಗೆ ಅನೇಕ ಜನ ಹೆಂಡತಿಯರಿದ್ದರು. ಅವರಲ್ಲಿ ಎಲ್ಲರಿಗಿಂತ ಚಿಕ್ಕವಳು ಬಹಳ ಬುದ್ಧಿವಂತೆ. ಚಕ್ರವರ್ತಿಯು ತನ್ನ ತೋಟದಲ್ಲಿ ಅನೇಕ ರೀತಿಯ ಹೂ ಗಿಡಗಳನ್ನು ಬೆಳೆಸಿದ್ದನು. ತೋಟದ ಅಂಚಿನಲ್ಲಿ ಹಿಪ್ಪುನೇರಳೆ ಗಿಡಗಳನ್ನೂ ಬೆಳೆಸಿದ್ದನು. ಕೆಲವು ಹುಳುಗಳು ಆ ಗಿಡಗಳನ್ನು ತಿನ್ನುತ್ತಿದ್ದುದರಿಂದ ಅವುಗಳನ್ನು ಕೊಲ್ಲುವಂತೆ ಚಕ್ರವರ್ತಿಯು ತನ್ನ ಕಿರಿಯ ಹೆಂಡತಿಗೆ ಹೇಳಿದನು. ಆಕೆ ಬುದ್ಧಿವಂತೆಯಾದುದರಿಂದ ಆ ಗಿಡಗಳ ಕೆಳಗೆ ಬಿದ್ದ ಹುಳದ ಗೂಡುಗಳನ್ನು ತೆಗೆದು ಪರೀಕ್ಷಿಸಿದಳು. ಗೂಡಿನಲ್ಲಿರುವ ಅಂಟು ಹೋಗಲು ಕುದಿಯುವ ನೀರಿನಲ್ಲಿ ಹಾಕಿದಳು. ಆಗ ನೂಲಿನ ಎಳೆಗಳು ಬಿಚ್ಚಿಕೊಂಡು ಅತೀ ಉದ್ದವಾದ ಹೊಳಪಿನ ರೇಷ್ಮೆ ದಾರ ಬರಲಾರಂಭಿಸಿತು. ಆಕೆ ಹೆಚ್ಚು ಗೂಡುಗಳಿಂದ ಈ ರೀತಿ ನೂಲನ್ನು ತೆಗೆದು ಒಂದು ವಸ್ತ್ರವನ್ನು ನೇಯ್ದು ಚಕ್ರವರ್ತಿಗೆ ಕೊಟ್ಟಳು. ಅದನ್ನು ನೋಡಿದವರೆಲ್ಲ ಸಂತೋಷ ಪಟ್ಟರು. ಅಂದಿನಿಂದ ಹುಳುಗಳನ್ನು ಸಾಕುವುದು, ನೂಲನ್ನು ಬಿಡಿಸುವುದು, ವಸ್ತ್ರಗಳನ್ನು ನೇಯುವುದು ಮೊದಲಾಯಿತು. ದಿನೇದಿನೇ ರೇಷ್ಮೆಯ ಬಟ್ಟೆಗಳಿಗೆ ಬೇಡಿಕೆ ಹೆಚ್ಚಾಗಿ ರೇಷ್ಮೆ ಕೈಗಾರಿಕೆಯು ಪ್ರಸಿದ್ಧವಾಯಿತು.

ಚೀನೀಯರು ರೇಷ್ಮೆ ಕೈಗಾರಿಕೆಯ ವಿಷಯವನ್ನು ಬಹಳ ಗೋಪ್ಯವಾಗಿಟ್ಟುಕೊಂಡಿದ್ದರು. ಬೇರೆ ದೇಶದ ಯಾತ್ರಿಕರು ರೇಷ್ಮೆಯ ಮೊಟ್ಟೆಗಳನ್ನಾಗಲೀ, ಹುಳುಗಳನ್ನಾಗಲೀ ಕೊಂಡೊಯ್ಯುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಮರಣದಂಡನೆಗೆ ಗುರಿ ಪಡಿಸುತ್ತಿದ್ದರು.

ಭಾರತೀಯರಿಗೆ 3000 ವರ್ಷಗಳ ಮೊದಲೇ ರೇಷ್ಮೆ ಕೈಗಾರಿಕೆಯ ಬಗ್ಗೆ ತಿಳಿದಿತ್ತು ಎಂದು ತಿಳಿದು ಬರುತ್ತದೆ. ನೇಪಾಳದ ಒಬ್ಬ ರಾಜಪುತ್ರನು ಚೀನಾದ ಒಬ್ಬ ರಾಜಕುಮಾರಿಯನ್ನು ಮದುವೆಯಾಗಿದ್ದನು. ಆಕೆಗೆ ರೇಷ್ಮೆ ಹುಳುಗಳನ್ನು ಸಾಕುವುದು ಚೆನ್ನಾಗಿ ಕರಗತವಾಗಿತ್ತು. ಆಕೆ ತನ್ನ ತವರು ಮನೆಯಾದ ಚೀನಾ ದೇಶಕ್ಕೆ ಹೋಗಿ ಬರುವಾಗ ತನ್ನ ಶಿರಸ್ತ್ರಾಣದಲ್ಲಿ ರೇಷ್ಮೆಹುಳುಗಳ ಮೊಟ್ಟೆಗಳನ್ನು ಮುಚ್ಚಿಟ್ಟು ಹೊಲಿದುಕೊಂಡು ತೆಗೆದುಕೊಂಡು ಬಂದಳು. ಅವುಗಳನ್ನು ನೇಪಾಳದಲ್ಲಿ ಸಾಕತೊಡಗಿದಳು. ಕ್ರಮೇಣ ಭಾರತದಲ್ಲೂ ಈ ವಿದ್ಯೆಯು ಪ್ರಚಲಿತವಾಯಿತು.

ಭಾರತದಲ್ಲಿ ರೇಷ್ಮೆಯನ್ನು ಉತ್ಪಾದಿಸುವ ರಾಜ್ಯಗಳೆಂದರೆ ಬಂಗಾಳ, ಕರ್ನಾಟಕ, ಆಂಧ್ರ, ಪಂಜಾಬ್, ಅಸ್ಸಾಂ ಹಾಗೂ ತಮಿಳುನಾಡು. ಕರ್ನಾಟಕವು ಎಲ್ಲಾ ರಾಜ್ಯಗಳಿಗಿಂತಲೂ ರೇಷ್ಮೆ ಕೈಗಾರಿಕೆಯಲ್ಲಿ ಮುಂದಿದೆ.

ರೇಷ್ಮೆಯ ಸಾಕಣೆ

ಕರ್ನಾಟಕದಲ್ಲಿ ರೇಷ್ಮೆ ಹುಳುಗಳಲ್ಲಿ ಎರಡು ಉಪಜಾತಿಗಳಿವೆ. ಒಂದು ಬಿಳಿಗೂಡಿನ ಬೈವೋಲ್ಟಿನ್. ಎರಡನೆಯದು ಹೊಂಬಣ್ಣದ ಗೂಡಿನ ಮಿಶ್ರತಳಿ(ನಾಟಿ). ಇವುಗಳ ಮೊಟ್ಟೆಗಳು ಗುಂಡುಸೂಜಿಯ ತಲೆಯಷ್ಟು ಗಾತ್ರವಿರುತ್ತದೆ. ಹಳದಿ ಅಥವಾ ಬಿಳಿ ಬಣ್ಣದ ಮೊಟ್ಟೆಗಳು ಒಡೆಯುವ ಸಂದರ್ಭದಲ್ಲಿ ಕಪ್ಪಗಾಗುತ್ತವೆ. 9–10 ದಿನಗಳಲ್ಲಿ ಮೊಟ್ಟೆಗಳು ಒಡೆಯುತ್ತವೆ. ಮೊಟ್ಟೆಗಳು ಒಡೆಯುವ ಮುನ್ನಾ ದಿನ ಮೊಟ್ಟೆಗಳನ್ನು ಬಿದಿರಿನ ತಟ್ಟಿಯಲಿ ಮೇಣದ ಹಾಳೆಯಲ್ಲಿ ಹಾಕಿ ಕತ್ತಲಲ್ಲಿ ಇಡಬೇಕು. ಸಾಮಾನ್ಯವಾಗಿ ಬೆಳಗಿನ ಸಮಯದಲ್ಲಿ ಮರಿಗಳು ಹೊರಬರುತ್ತವೆ. ಮೊಟ್ಟೆಗಳು ಒಡೆದು ಹೊರ ಬರುವ ಮರಿಗಳು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಮರಿಗಳು ಹೊರ ಬಂದ ಒಂದೆರಡು ಗಂಟೆಗಳಲ್ಲಿ ಹಿಪ್ಪು ನೇರಿಳೆ ಎಲೆಯನ್ನು ಸಣ್ಣಸಣ್ಣದಾಗಿ ಕತ್ತರಿಸಿ ಹಾಕಬೇಕು. ಇದನ್ನು ಚಾಕಿ ಕಟ್ಟುವುದು ಎಂದು ಕರೆಯುವರು.

ಹಿಪ್ಪುನೇರಳೆಯ ಸೊಪ್ಪನ್ನು ಬೆಳಗಿನ ಸಮಯದಲ್ಲಿ ಬಿಸಿಲು ಏರುವುದಕ್ಕೆ ಮುನ್ನ ಎಲೆಯ ಮೇಲೆ ನೀರು ಹನಿಗಳು ಇಲ್ಲದ ಹಾಗೆ ನೋಡಿ ಕಿತ್ತು ತರಬೇಕು. ತಂದ ಎಲೆಗಳನ್ನು 1.5 ಚದುರ ಸೆಂ.ಮೀ.ನಷ್ಟು ಚಿಕ್ಕದಾಗಿ ಕತ್ತರಿಸಿ ಹುಳುಗಳಿಗೆ ಹಾಕಬೇಕು. ಸೊಪ್ಪು ಹಾಕಿದ 5ರಿಂದ 10 ನಿಮಿಷಗಳವರೆಗೆ ಕಾದು ಮೇಣದ ಹಾಳೆಯಿಂದ ಹುಳುಗಳನ್ನು ತಟ್ಟೆಗಳಿಗೆ ವರ್ಗಾಯಿಸಬೇಕು. ವರ್ಗಾಯಿಸುವಾಗ ಹಕ್ಕಿಯ ಪುಕ್ಕವನ್ನು ಬಳಸಿದರೆ ಮರಿಗಳಿಗೆ ತೊಂದರೆಯಾಗುವುದಿಲ್ಲ. ಮರಿಗಳಾಗುವ ಮುನ್ನ

10th_Kannada_Reader1-5.indd 111 03-04-2019 14:08:00

ತಟ್ಟೆಗಳ ಸ್ಟ್ಯಾಂಡಿನ ಕಾಲುಗಳನ್ನು ಬಟ್ಟಲುಗಳಲ್ಲಿಟ್ಟು ನೀರು ತುಂಬಿಸಬೇಕು. ಇದರಿಂದ ಇರುವೆ, ಗೊದ್ದಗಳ ಕಾಟ ತಪ್ಪುತ್ತದೆ. ಬಿ.ಎಚ್.ಸಿ. ಧೂಳನ್ನು ತಟ್ಟೆಗಳ ಹತ್ತಿರ ಸಿಂಪಡಿಸಬಾರದು.

ಮೊದಲ ಸಾರಿ ಸೊಪ್ಪು ಹಾಕಿ ಚಾಕಿ ಕಟ್ಟಿದ ನಂತರ ರೇಷ್ಮೆ ಹುಳುಗಳು ನಿಜ ಜೀವನಕ್ಕೆ ಕಾಲಿಟ್ಟು ತಮ್ಮ ಕಾರ್ಯ ಪ್ರಾರಂಭಿಸುತ್ತವೆ. ರೇಷ್ಮೆ ಹುಳುಗಳನ್ನು ಜಾಗರೂಕತೆಯಿಂದ ಸಾಕಿದರೆ ಉತ್ತಮ ಇಳುವರಿ ಬರುತ್ತದೆ. ಹುಳುಗಳಿಗೆ ದಿನವೊಂದಕ್ಕೆ 4ರಿಂದ 5 ಸಾರಿ ಸೊಪ್ಪನ್ನು ಆಹಾರವನ್ನಾಗಿ ಕೊಡಬಹುದು. ಸೊಪ್ಪನ್ನು ನಾಲ್ಕು ಗಂಟೆಗಳಿಗೊಮ್ಮೆ ಕೊಡಬಹುದು. ದಿನದಿನಕ್ಕೂ ಹುಳುಗಳು ಬೆಳೆಯುತ್ತಾ ಹೋಗುವ ಪ್ರಯುಕ್ತ ಹುಳುಗಳ ಹಾಸಿಗೆಯನ್ನು ಹೆಚ್ಚಿಸಿಕೊಳ್ಳಬೇಕು. ಹುಳುಗಳ ಹಾಸಿಗೆಯನ್ನು ಸಮವಾಗಿ ಹರಡಬೇಕು. ಇಲ್ಲದಿದ್ದರೆ ಹುಳುಗಳು ಸರಿಯಾಗಿ ಬೆಳೆಯುವುದಿಲ್ಲ. ಹುಳುಗಳಿಗೆ ಯಾವಾಗಲೂ ಬೆಳಿಗ್ಗೆ ರಸಭರಿತ ಸೊಪ್ಪನ್ನು ಕಿತ್ತು ತರಬೆಕು. ಹುಳುಗಳ ಹಾಸಿಗೆ ದಪ್ಪವಾಗಿರುವ ಚಿಹ್ನೆಗಳು ಕಂಡು ಬಂದಲ್ಲಿ ಸ್ವಚ್ಛತೆಯನ್ನು ಕೈಗೊಳ್ಳಬೇಕು. ಆಗತಾನೇ ಸೊಪ್ಪು ಹಾಕಿದ ಹುಳುಗಳನ್ನು ತೆಳ್ಳಗೆ ಒಂದನ್ನೂ ಬಿಡದಂತೆ ಎಳೆದುಕೊಂಡು, ಕೆಳಗಿನ ಅನುಪಯುಕ್ತ ಹಾಸಿಗೆಯ ಭಾಗವನ್ನು ತೆಗೆದು ಹಾಕಬೇಕು. ಹುಳುಗಳು ಕೆಳ ಸೊಪ್ಪಿನಲ್ಲಿ ಬೆರೆತುಹೋಗುವ ಸಾಧ್ಯತೆ ಇರುವುದರಿಂದ ಜಾಗರೂಕತೆಯಿಂದ ಕೆಲಸ ಮಾಡಬೇಕು. ಹಾಸಿಗೆಯನ್ನು ಸ್ವಚ್ಛಗೊಳಿಸಿದ ಬಳಿಕ ಹುಳುಗಳಿಗೆ ರೋಗ ನಿರೋಧಕ ಶೀಲೀಂಧ್ರ ನಾಶಕವನ್ನು ಕೊಡಬೇಕು.

ಸಾಮಾನ್ಯವಾಗಿ ಚಾಕಿ ಕಟ್ಟಿದ 2–3 ದಿನಗಳಲ್ಲಿ ಹುಳುಗಳು ಮೊದಲನೆಯ ಜ್ವರಕ್ಕೆ ತುತ್ತಾಗುತ್ತವೆ. ಜ್ವರಕ್ಕೆ ಹೋಗುವಾಗ ಹುಳುಗಳು ಸೊಪ್ಪು ಮೇಯುವುದಿಲ್ಲ. ಈ ಸಂದರ್ಭದಲ್ಲಿ ಸೊಪ್ಪು ಕೊಡುವ ಅವಶ್ಯಕತೆಯಿಲ್ಲ. ಹಾಸಿಗೆಯ ತೇವಾಂಶ ಕಡಿಮೆಯಾಗಲು ತೆಳ್ಳಗೆ ಸುಣ್ಣದ ಪುಡಿಯನ್ನು ಹುಳುಗಳ ಹಾಸಿಗೆಗೆ ಸಿಂಪಡಿಸಿ ತಟ್ಟೆಗಳನ್ನು ಅಡ್ಡಾದಿಡ್ಡಿಯಾಗಿ ಇಡಬೇಕು.

ಮೊದಲನೆಯ ಜ್ವರದ ಹುಳುಗಳು ಪೊರೆ ಕಳಚಿದ ಸಂದರ್ಭದಲ್ಲಿ ಬಿಳಿ ಬಣ್ಣವನ್ನು ಹೊಂದಿರುತ್ತವೆ. ಮೊದಲನೆಯ ಜ್ವರಕ್ಕೆ ಹೋಗಿ, 20 ಗಂಟೆಗಳ ನಂತರ ಕುಡಿಯ ಎರಡು ಎಲೆಗಳನ್ನು ಬಿಟ್ಟು, ಕಿತ್ತ ಸೊಪ್ಪನ್ನು ಕೊಡಬೇಕು. ಜ್ವರದಿಂದ ಚೇತರಿಸಿಕೊಂಡ ನಂತರ ಎರಡು ಸಾರಿ ಸೊಪ್ಪನ್ನು ಸಾಮಾನ್ಯ ಗಾತ್ರದಲ್ಲಿ ಕತ್ತರಿಸಿ ಹಾಕಬೇಕು. ಬಳಿಕ ಹುಳುಗಳ ಜ್ವರದ ಪೊರೆ, ಹಿಕ್ಕೆ, ಮತ್ತಿತರ ಕಶ್ಮಲಗಳನ್ನು ತೆಗೆದು ಹಾಸಿಗೆಯನ್ನು ಸ್ವಚ್ಛಗೊಳಿಸಬೇಕು. ಮತ್ತೆ ಎರಡು ದಿನಗಳಲ್ಲಿ ಎರಡನೇ ಜ್ವರಕ್ಕೆ ಹೋಗುತ್ತದೆ.

ಒಂದರಿಂದ ನಾಲ್ಕನೆಯ ಜ್ವರದವರೆಗೂ ಮೇಲೆ ತಿಳಿಸಿದಂತೆ ಪಾಲಿಸಬೇಕು. ನಾಲ್ಕನೆಯ ಜ್ವರವೇ ಅಂತಿಮ ಜ್ವರ. ಆ ನಂತರ ಹುಳುಗಳು ಪೊರೆಯನ್ನು ಬಿಡುವುದಿಲ್ಲ. ಇಲ್ಲಿಂದ ಹುಳುವಿನ ನಿಜವಾದ ಬೆಳವಣಿಗೆ ಪ್ರಾರಂಭವಾಗುವುದು. ಈ ಅವಧಿಯೇ

ಹಂತಹಂತವಾಗಿ ಹುಳುವಿನ ಬೆಳವಣಿಗೆ (ಆಧಾರಿತ)

	ಹಂತ	ಕಾಲಾವಧಿ	ಜ್ವರ	ಜ್ವರದ ಸಮಯ
1.	ಮೊದಲನೆಯ ಹಂತ	$3–3^{1/2}$ ದಿನಗಳು	ಮೊದಲನೆಯ ಜ್ವರ	20 ಗಂಟೆಗಳು
2.	ಎರಡನೆಯ ಹಂತ	$2^{1/2}–3$ ದಿನಗಳು	ಎರಡನೆಯ ಜ್ವರ	24 ಗಂಟೆಗಳು
3.	ಮೂರನೆಯ ಹಂತ	$3–3^{1/2}$ ದಿನಗಳು	ಮೂರನೆಯ ಜ್ವರ	24 ಗಂಟೆಗಳು
4.	ನಾಲ್ಕನೆಯ ಹಂತ	$4–4^{1/2}$ ದಿನಗಳು	ನಾಲ್ಕನೆಯ ಜ್ವರ	30 ಗಂಟೆಗಳು
5.	ಐದನೆಯ ಹಂತ	6–7 ದಿನಗಳು	ಹಣ್ಣಾಗಿ ಗೂಡು ನೇಯುವುದು	–

ಒಟ್ಟು 23ರಿಂದ 26 ದಿನಗಳನ್ನು ಇದು ತೆಗೆದುಕೊಳ್ಳುತ್ತದೆ.

10th_Kannada_Reader1-5.indd 112 03-04-2019 14:08:00

ರೈತನಿಗೆ ಉತ್ಪನ್ನ ನಿರ್ಧರಿಸುವ ಹಂತವೆನ್ನಬಹುದು. ರೋಗಗಳಾದ ಸುಣ್ಣಕಟ್ಟು, ಸಪ್ಪೆರೋಗ ಮುಂತಾದವು ಈ ಹಂತದಲ್ಲಿ ಕಾಣಿಸಿಕೊಳ್ಳುವುವು. ಈ ಹಂತದಲ್ಲಿ ಹುಳುಗಳು ಅಧಿಕ ಸೊಪ್ಪನ್ನು ತಿನ್ನುತ್ತವೆ. ಅವುಗಳಿಗೆ ಬೇಕಾಗುವಷ್ಟು ಸೊಪ್ಪನ್ನು ಒದಗಿಸಬೇಕು. ತಟ್ಟೆಗಳನ್ನು ಸ್ವಚ್ಛಗೊಳಿಸಬೇಕು. ಔಷಧಿಯನ್ನು ಹೊಡೆಯಬೇಕು. ಈ ಸಮಯದಲ್ಲಿ ಕೆಲಸಗಾರರು ಹೆಚ್ಚಾಗಿ ಬೇಕು. ಜ್ವರದಿಂದ ಹೊರ ಬಂದ 6–8 ದಿನಗಳವರೆಗೆ ಅಂದರೆ ಹಣ್ಣಾಗುವವರೆಗೆ ರೈತರು ಹೆಚ್ಚಾಗಿ ಶ್ರದ್ಧೆ ಮತ್ತು ಶ್ರಮವನ್ನು ವಹಿಸಬೇಕು. ಅಲಕ್ಷ್ಯ ಮಾಡಿದರೆ ನಿರೀಕ್ಷಿಸಿದ ಇಳುವರಿ ಸಿಗುವುದಿಲ್ಲ. ಸಪ್ಪೆಹುಳು ರೋಗಗ್ರಸ್ತ ಹುಳುವಿನಂತೆ ಇರುತ್ತದೆ. ಇದು ಸೊಪ್ಪನ್ನು ತಿನ್ನುವುದಿಲ್ಲ. ಆರೋಗ್ಯವಂತ ಹಣ್ಣಾದ ಹುಳುವು ಆಚೀಚೆ ತಲೆಯಾಡಿಸಿ ರೇಷ್ಮೆ ಎಳೆಯನ್ನು ಹೊರ ಹಾಕುತ್ತದೆ. ಇದರಿಂದ ಹಣ್ಣಾದ ಹುಳುಗಳನ್ನು ಗುರುತಿಸಬಹುದು.

ಹಣ್ಣಾದ ಹುಳುಗಳನ್ನು ಆರಿಸಿ ಚಂದ್ರಿಕೆಗೆ ಬಿಡಬೇಕು. ಆ ಚಂದ್ರಿಕೆಗಳು ಸ್ವಚ್ಛವಾಗಿರಬೇಕು. ಹುಳುಗಳನ್ನು ಚಂದ್ರಿಕೆಗಳಲ್ಲಿ ತೆಳುವಾಗಿ ಸಮ ಪ್ರಮಾಣವಾಗಿ ಬಿಡಬೇಕು. ಸಾಮಾನ್ಯವಾಗಿ ಒಂದು ಚಂದ್ರಿಕೆಯಲ್ಲಿ 1ರಿಂದ –2 ಕಿ.ಗ್ರಾಂ ಗೂಡಿನ ತೂಕದ ಹುಳುಗಳನ್ನು ಬಿಡಬಹುದು. ಚಂದ್ರಿಕೆಯನ್ನು ಪೂರ್ಣವಾಗಿ ಮಲಗಿಸಿ ಹುಳುಗಳನ್ನು ಹಾಕಿ ನಂತರ ಅವು ತೆಳುವಾಗಿ ಹೆಣೆದ ನಂತರ ಓರೆಯಾಗಿಡಬೇಕು. ಏಕೆಂದರೆ ಹುಳುಗಳ ಮಲಮೂತ್ರ ಕೆಳಗೆ ಬಿದ್ದು ಗೂಡು ಶುಭ್ರವಾಗಿರುತ್ತದೆ. ಚಂದ್ರಿಕೆಗೆ ಬಿಟ್ಟ ಎರಡು ಮೂರು ದಿನಗಳಾದ ಬಳಿಕ ಅಂದರೆ ಗೂಡಿನಲ್ಲಿ ಹುಳುವು ಅಲುಗಾಡುತ್ತಿದ್ದರೆ ಗೂಡು ಬಿಡಿಸಲು ಪ್ರಾರಂಭಿಸಬೇಕು. ಮಿಶ್ರತಳಿ 100 ಮೊಟ್ಟೆಗಳಿಗೆ 30ರಿಂದ 45 ಕಿ.ಗ್ರಾಂ ಗೂಡನ್ನು ಮತ್ತು ಬೈವೋಲ್ಟಿನ್ 100 ಮೊಟ್ಟೆಗಳಿಗೆ 40 ರಿಂದ 50 ಕಿ.ಗ್ರಾಂ. ಗೂಡನ್ನು ಪಡೆಯಬಹುದು. ಗೂಡನ್ನು 12 ದಿನಗಳಲ್ಲಿ ಮಾರುಕಟ್ಟೆಗೆ ತೆಗೆದುಕೊಂಡುಹೋಗಿ ಮಾರುತ್ತಾರೆ.

ಚಂದ್ರಿಕೆಗೆ ಹಾಕಿದ 9 ದಿನಗಳೊಳಗಾಗಿ ರೇಷ್ಮೆಯ ಗೂಡನ್ನು ಕುದಿಯುವ ನೀರಿನಲ್ಲಿ ಹಾಕಬೇಕು. ಇಲ್ಲದಿದ್ದರೆ ಗೂಡನ್ನು ಕತ್ತರಿಸಿಕೊಂಡು ಚಿಟ್ಟೆ ಹೊರಕ್ಕೆ ಬರುತ್ತದೆ. ಚಿಟ್ಟೆ ಹೊರಕ್ಕೆ ಬಂದ ಗೂಡಿನಿಂದ ದಾರ ತೆಗೆಯಲು ಸಾಧ್ಯವಿಲ್ಲ.

ಕುದಿಯುವ ನೀರಿಗೆ ಹಾಕಿದ ಗೂಡಿನಲ್ಲಿ ಅಂಟು ಹೋಗಿ ಎಳೆಗಳು ಬಿಚ್ಚಿಕೊಳ್ಳುತ್ತವೆ. ಆ ಉದ್ದವಾದ ರೇಷ್ಮೆಯ ಎಳೆಗಳನ್ನು ಸುತ್ತಿ 3 ಎಳೆ, 4 ಎಳೆ, 5 ಎಳೆಗಳನ್ನು ಒಟ್ಟು ಸೇರಿಸಿ ದಾರ ಮಾಡಲಾಗುತ್ತದೆ. ಆ ದಾರಕ್ಕೆ ಬೇಕಾದ ಬಣ್ಣಗಳನ್ನು ಹಾಕಿ ವಸ್ತ್ರಗಳನ್ನು ತಯಾರಿಸಲು ಸಿದ್ಧ ಮಾಡುತ್ತಾರೆ. ರೇಷ್ಮೆ ಬಟ್ಟೆಗಳಿಗೆ ವಿದೇಶಗಳಲ್ಲೂ ಬಹಳ ಬೇಡಿಕೆಯಿರುವುದರಿಂದ ವಿದೇಶೀ ವಿನಿಮಯವನ್ನೂ ಮಾಡಬಹುದಾಗಿದೆ.

ರೇಷ್ಮೆ ಕೈಗಾರಿಕೆಯು ವ್ಯವಸಾಯಗಾರರಿಗೆ ಒಂದು ವರವಾಗಿದೆ. ಇದು ಬೇರೆ ಆರ್ಥಿಕ ಬೆಳೆಗಳಿಗಿಂತ ಹೆಚ್ಚು ಆದಾಯವನ್ನು ನೀಡುತ್ತದೆ. ಒಂದು ಎಕರೆಗೆ ವರ್ಷಕ್ಕೆ ಸುಮಾರು 30–50 ಸಾವಿರ ರೂಪಾಯಿಗಳವರೆಗೂ ಆದಾಯ ಗಳಿಸಬಹುದು. ರೇಷ್ಮೆಯ ಸೊಪ್ಪನ್ನು ದನಗಳ ಮೇವಿಗೂ, ಅದರ ಕಡ್ಡಿಯನ್ನು ಉರುವಲಾಗಿಯೂ, ಹುಳುಗಳ ಹಿಕ್ಕೆಯನ್ನು ಗೊಬ್ಬರವನ್ನಾಗಿಯೂ ಉಪಯೋಗಿಸುತ್ತಾರೆ.

ಚೀನಾ ದೇಶವು ರೇಷ್ಮೆ ಕೈಗಾರಿಕೆಯಲ್ಲಿ ಪ್ರಪಂಚದಲ್ಲೇ ಪ್ರಥಮ ಸ್ಥಾನದಲ್ಲಿದೆ. ನಂತರ ಜಪಾನ್, ಕೊರಿಯಾ, ಭಾರತ ದೇಶಗಳಿವೆ. ಭಾರತದಲ್ಲಿ ಕರ್ನಾಟಕವು ರೇಷ್ಮೆ ಕೈಗಾರಿಕೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.

ಪದಗಳ ಅರ್ಥ

ಮಿನುಗು–ಹೊಳಪು; ಮೆರೆದಾಡುವ–ತಿರುಗಾಡುವ; ಉಡುಗೆ–ಬಟ್ಟೆ; ಗೋಪ್ಯ–ರಹಸ್ಯ; ನಿರ್ದಾಕ್ಷಿಣ್ಯ–ದಾಕ್ಷಿಣ್ಯವಿಲ್ಲದೆ, ಕ್ರೂರವಾಗಿ; ಕರಗತ–ಕೈವಶ, ಅಧೀನ; ಶಿರಸ್ತ್ರಾಣ–ರುಮಾಲು, ಟೋಪಿ; ಪ್ರಚಲಿತ–ಬಳಕೆ; ಪ್ರಯುಕ್ತ–ಕಾರಣವಾಗಿ, ಸಲುವಾಗಿ; ಅನುಪಯುಕ್ತ–ಉಪಯೋಗಕ್ಕೆ ಬಾರದ; ಶಿಲೀಂಧ್ರ–ಅಣಬೆ, ನಾಯಿಕೊಡೆ; ಹಂತ–ಮಟ್ಟ, ಮೆಟ್ಟಿಲು; ಉತ್ಪನ್ನ–ಗಳಿಕೆ, ಸಂಪಾದನೆ; ಅಲಕ್ಷ್ಯ–ಕಡೆಗಣಿಸುವುದು; ನಿರೀಕ್ಷೆ–ಎದುರು ನೋಡುವುದು; ಎಳೆ–ದಾರ; ಉರುವಲು–ಸೌದೆ; ಹಿಕ್ಕೆ–ಹಕ್ಕಿಯ ಮಲ..

10th_Kannada_Reader1-5.indd 113 03-04-2019 14:08:00

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ರೇಷ್ಮೆ ಬಟ್ಟೆಗಳನ್ನು ಪ್ರಾಚೀನ ಕಾಲದಲ್ಲಿ ಯಾರು ಧರಿಸುತ್ತಿದ್ದರು ?
2. ರೇಷ್ಮೆಯನ್ನು ಮೊದಲು ಯಾವ ದೇಶದವರು ಕಂಡು ಹಿಡಿದರು ?
3. ರೇಷ್ಮೆಯನ್ನು ನೇಪಾಳ ದೇಶಕ್ಕೆ ಹೇಗೆ ತರಲಾಯಿತು ?
4. ಭಾರತದಲ್ಲಿ ಯಾವ ರಾಜ್ಯಗಳಲ್ಲಿ ರೇಷ್ಮೆ ಉತ್ಪಾದಿಸುತ್ತಾರೆ ?
5. ರೇಷ್ಮೆ ಹುಳುಗಳಿಗೆ ಯಾವುದನ್ನು ಆಹಾರವಾಗಿ ನೀಡುತ್ತಾರೆ ?
6. ರೇಷ್ಮೆ ಹುಳುಗಳು ಎಷ್ಟು ಜ್ವರಕ್ಕೆ ಬೀಳುತ್ತವೆ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ರೇಷ್ಮೆ ಬಟ್ಟೆಗಳನ್ನು ಯಾರು ಯಾವಾಗ ಧರಿಸುತ್ತಾರೆ ?
2. ಚೀನಾದಲ್ಲಿ ರೇಷ್ಮೆ ಬಟ್ಟೆಗಳನ್ನು ಮೊಟ್ಟ ಮೊದಲು ಯಾರು ತಯಾರಿಸಿದರು? ಹೇಗೆ ?
3. ಭಾರತೀಯರಿಗೆ 3000 ವರ್ಷಗಳ ಮೊದಲೇ ರೇಷ್ಮೆ ಬೆಳೆ ತಿಳಿದಿತ್ತು. ಹೇಗೆ?
4. ಚಾಕಿ ಕಟ್ಟುವುದು ಎಂದರೇನು ?
5. ಎಲೆಯನ್ನು ತೋಟದಿಂದ ಯಾವ ರೀತಿ ಕಿತ್ತು ತರಬೇಕು ಮತ್ತು ಅದನ್ನು ಯಾವ ರೀತಿ ಕತ್ತರಿಸಿ ಹಾಕಬೇಕು ?
6. ಹುಳುಗಳನ್ನು ಹೇಗೆ ಸಾಕಬೇಕು ?
7. ಯಾವ ಅವಧಿಯಲ್ಲಿ ರೋಗಗಳು ಬರುತ್ತವೆ ?
8. ಹಣ್ಣಾದ ಹುಳುಗಳನ್ನು ಏನು ಮಾಡುತ್ತಾರೆ ?
9. ಗೂಡುಗಳಿಂದ ದಾರವನ್ನು ಹೇಗೆ ತೆಗೆಯುತ್ತಾರೆ ?
10. ವ್ಯವಸಾಯಗಾರರಿಗೆ ರೇಷ್ಮೆ ಬೆಳೆ ಒಂದು ವರದಾನ. ಹೇಗೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ರೇಷ್ಮೆ ಇತಿಹಾಸ ಬಗ್ಗೆ ತಿಳಿಸಿ.
2. ರೇಷ್ಮೆಯ ಸಾಕಣೆ ಕುರಿತು ಬರೆಯಿರಿ.

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಮಾಡಿರಿ.**

   ಇತಿಹಾಸ, ಬುದ್ಧಿವಂತೆ, ಚಕ್ರವರ್ತಿ, ನಿರ್ದಾಕ್ಷಿಣ್ಯ, ಕರಗತ, ಸ್ವಚ್ಛತೆ, ಅನುಪಯುಕ್ತ, ಆವಶ್ಯಕ, ಉತ್ಪನ್ನ, ಅಲಕ್ಷ್ಯ.

2. **ಕೆಳಗಿನ ಪದಗಳಿಗೆ ವಿರುದ್ಧಾರ್ಥಗಳನ್ನು ಬರೆಯಿರಿ.**

   ಕಿರಿಯ, ಉದ್ದ, ನಿರ್ದಾಕ್ಷಿಣ್ಯ, ಉತ್ಪಾದನೆ, ಸಾಮಾನ್ಯ, ಜಾಗರೂಕತೆ, ಅಲಕ್ಷ್ಯ.

3. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

   ಬರಲಾರಂಭಿಸಿತು, ಪ್ರಸಿದ್ಧಿಯಾಯಿತು, ಕೊಂಡೊಯ್ಯುವುದು, ತೇವಾಂಶ, ತಲೆಯಾಡಿಸಿ, ಬೇಡಿಕೆಯಿರುವುದರಿಂದ.

ಚಟುವಟಿಕೆ

1. ರೇಷ್ಮೆ ಬೆಳೆಗಾರರ ಮನೆಗಳಿಗೆ ಹೋಗಿ ಬೆಳೆಯನ್ನು ಯಾವ ರೀತಿ ಬೆಳೆಯುತ್ತಾರೆ ಎಂದು ನೋಡಿ ತಿಳಿದುಕೊಳ್ಳಿ.
2. ರೇಷ್ಮೆ ಬಟ್ಟೆಯನ್ನು ನೇಯುವ(ತಯಾರಿಸುವ) ಕಾರ್ಖಾನೆಗಳ ಮಾಹಿತಿಯನ್ನು ಸಂಗ್ರಹಿಸಿರಿ.

10th_Kannada_Reader1-5.indd 114 03-04-2019 14:08:00

ಘಟಕ ಆರು

ಉಪಪಠ್ಯ

ಇಟಲಿಯ ವಿಹಂಗಮ ನೋಟ

–ಡಾ. ಕೆ. ಶಿವರಾಮ ಕಾರಂತ



'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬುದು ಜನಪ್ರಿಯವಾದ ನಾಣ್ನುಡಿ. ಹಾಗೆ ಮಾಡುವುದರಿಂದ ಮನುಷ್ಯನ ಅನುಭವ ವಿಸ್ತಾರವಾಗುತ್ತದೆ. ನಾನಾ ಬಗೆಯ ಜನರ ಜೀವನ, ರೀತಿ–ನೀತಿ, ಸಂಸ್ಕೃತಿಗಳ ಪರಿಚಯವಾಗುತ್ತದೆ. ಮನುಷ್ಯ ತಾನು ನೋಡಿದ ಸ್ಥಳಗಳ ಪರಿಚಯವನ್ನು ಪಡೆದ ಅನುಭವವನ್ನು ಸ್ವಾರಸ್ಯಕರವಾಗಿ ದಾಖಲು ಮಾಡುವುದೇ ಪ್ರವಾಸ ಕಥನ. 'ಇಟಲಿಯ ವಿಹಂಗಮ ನೋಟ' ಅಂತಹ ಒಂದು ಪ್ರವಾಸ ಕಥನ.



10th_Kannada_Reader1-5.indd 115 03-04-2019 14:08:00

ನಾನು ಈ ತನಕ ನೋಡಿ ಬಂದ ರಾಷ್ಟ್ರಗಳೆಲ್ಲ ಒಂದು ತೆರನಾದರೆ, ಇಟಲಿಯೇ ಬೇರೊಂದು ತೆರ. ಇಟಲಿ, ಸ್ಪೆಯಿನ್ ದೇಶಗಳೆಲ್ಲ ಐಬೀರಿಯನ್ ಜನಾಂಗದ ಹುಟ್ಟು, ಬೆಳವಣಿಗೆಯ ಉದ್ಯಾನವಾಗಿತ್ತು. ಇಟಲಿ ದೇಶದ ಬೇಸಿಗೆಯೆಂಬುದು ನಮ್ಮೂರಿನ ಬೇಸಿಗೆಯಂತೆ ಸಾಕೋ ಸಾಕೆನಿಸುತ್ತದೆ. ನಾನಿದ್ದ ಹನ್ನೆರಡು ದಿನಗಳಲ್ಲಿ ಸೂರ್ಯನ ತಾಪ 90°F ಡಿಗ್ರಿತನಕ ಓಲಾಡುತ್ತಿತ್ತು. ಉಣ್ಣೆಯ ಬಟ್ಟೆಗಳು ಬೇಡ, ಹತ್ತಿ ಬಟ್ಟೆಗಳೂ ಹೆಚ್ಚು ಎನ್ನುವ ಸ್ಥಿತಿ ಬೇಸಗೆಯ ದಿನಗಳಲ್ಲಿ ಬರುತ್ತದೆ. ಭೂಮಧ್ಯ ಸಮುದ್ರದ ಈ ಪ್ರದೇಶ, ಕಡಲಿನಲ್ಲಿ ಚಾಚಿದ ಒಬ್ಬ ಮನುಷ್ಯನ ಕಾಲಿನ ಆಕಾರದಲ್ಲಿದೆ. ಪಾದದ ತುದಿಯಲ್ಲಿ ಚೆಂಡೊಂದು ಕುಳಿತ ಹಾಗೆ ಸಿಸಿಲ ದ್ವೀಪವಿದೆ. ತೀರ ಉತ್ತರದ ಆಲ್ಪ್ಸ್ ಸರಹದ್ದನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಚಳಿಗಾಲದಲ್ಲಿ ಹಿಮ ಬೀಳುವುದಿಲ್ಲ. ಬದಲು ಮಳೆ ಬೀಳುತ್ತದೆ. ರೋಮ್ ನಗರದಲ್ಲಿದ್ದಾಗ ನನಗೆ ಈ ಮಳೆಯ ವಿಚಿತ್ರವಾದುದೊಂದು ಅನುಭವವಾಯಿತು. ಮೂರು ನಾಲ್ಕು ದಿನಗಳ ತನಕ ಆಫ್ರಿಕದ ಮರುಭೂಮಿಯ ಬಿಸಿ ಗಾಳಿ ಬೀಸಿ, ದೇಶಕ್ಕೆ ದೇಶವನ್ನೇ ಸುಡುತ್ತಿತ್ತು. ಆ ಬಿಸಿಲಿನಿಂದ ಸತ್ತವರೂ ಇದ್ದರು. ಒಂದು ದಿನ ನಾನು ರೋಮ್ ನಗರದ ಥೋಮಸ್ ಕುಕ್ ಕಂಪನಿಯವರ ಆಫೀಸಿಗೆ ಹೋಗಿದ್ದೆ. ಬೆಳಗಿನ ಹತ್ತು ಘಂಟೆಯಾಗಿರಬೇಕು. ಒಮ್ಮಿಂದೊಮ್ಮೆ ಬಾನಲ್ಲಿ ಕಾರ್ಮುಗಿಲು ಕವಿಯಿತು. ಬಿರುಗಾಳಿ ಬೀಸಿತು, ಜಡಿಮಳೆ ಹೊಡೆಯಲಾರಂಭಿಸಿತು. ಅರ್ಧ ತಾಸು ಬರಿಯ ಮಳೆಯೇ ಬೀಳುತ್ತಿತ್ತು. ಆನಂತರ ಮಳೆಯ ಜೊತೆಗೆ ಆಲಿಕಲ್ಲುಗಳು ಹೊಡೆಯತೊಡಗಿತು. ಗೋಲಿಗಿಂತಲು ದೊಡ್ಡ ಗಾತ್ರದ ಹಿಮದ ತುಂಡುಗಳು ಉದ್ರೇಕಗೊಂಡ ಬಾನಿನಿಂದ ನೆಲದ ಮೇಲೆ ಉದುರತೊಡಗಿದವು. ಮಳೆಯನ್ನು ಅಲಕ್ಷಿಸಿದ ಜನಗಳು ಕೂಡ ಆಲಿಕಲ್ಲಿನ ಏಟಿಗೆ ಈಡಲ್ಲ. ಜನರೆಲ್ಲ ಮಾಡಿನ ಆಶ್ರಯವನ್ನು ಹೊಂದಲೇಬೇಕಾಯಿತು. ನೆಲವೆಲ್ಲ ದೊಡ್ಡದೊಡ್ಡ ಹಿಮದ ತುಣುಕುಗಳಿಂದ ಹತ್ತಿಯ ಹಾಸಿಗೆಯಂತಾಯಿತು. ಒಂದು ಘಂಟೆಯೆಲ್ಲ ಹೀಗೆ ಆಲಿಕಲ್ಲು ಬಡಿದು, ಹವೆಯು ಶೀತಗೊಂಡಿತು. ಆ ದಿನ ರೋಮ್, ಮಿಲಾನ್ ಮೊದಲಾದಲ್ಲಿ ಆಲಿಕಲ್ಲುಗಳ ಪೆಟ್ಟಿಗೆ ಸತ್ತ ಕುರಿಗಳೆಷ್ಟೋ!

ಇಟಲಿಯ ಉತ್ತರ ಭಾಗವು ಆಲ್ಪ್ಸ್ ಬೆಟ್ಟಗಳಿಗೆ ತಾಗಿಕೊಂಡಿರುವ ಸುಂದರವಾದ ಪ್ರಾಂತ್ಯ. ಕೆಳಗಡೆ ಗಂಗಾ, ಸಿಂಧೂ ಬಯಲುಗಳಿರುವಂತೆ ಕಡಲನ್ನು ಸೇರುವ ಬಯಲು ಭೂಮಿಯಿದೆ. ಇಟಲಿಯ ನಡುವಣದಿಂದ, ಉತ್ತರ ದಕ್ಷಿಣಕ್ಕೆ, ದೀರ್ಘವಾದ ಎಪಿನೈನ್ ಪರ್ವತಾವಳಿ ಹಾದು ಹೋಗುತ್ತದೆ. ಈ ಪರ್ವತಗಳ ದಕ್ಷಿಣ ಸೆರಗು ಸಿಸಿಲಿಗೋವರೆಗೆ ಚಾಚಿಕೊಂಡಿದೆ. ವಿಷುವಿಯಸ್, ಸ್ಟ್ರಂಬೋಲಿ, ಎಟ್ನಾ ಮೊದಲಾದ ಅಗ್ನಿಪರ್ವತಗಳು ಇಲ್ಲಿವೆ. ಅವು ಇಂದಿಗೂ ಜೀವಂತವಾಗಿರುವ ಜ್ವಾಲಾಮುಖಿಗಳು. ದಕ್ಷಿಣ ಭಾಗದ ನೆಲದಲ್ಲಿ ಲಾವಾ ಹೆಪ್ಪುಗಟ್ಟಿ ಉಂಟಾದ ಬಂಡೆಗಳೇ ಅಧಿಕ. ತುಂಬ ತಗ್ಗು ನೆಲ, ಒರಟಾದ ಶಿಲೆಗಳು, ಕಾಣುವವರ ಕಣ್ಣಿಗೆ ಇಲ್ಲೇನು ಬೆಳೆದೀತು, ಮನುಷ್ಯ ಹೇಗೆ ಬದುಕಿದ್ದಾನು ಎಂಬ ನಿರಾಶೆಯುಂಟಾಗಬೇಕು. ಒಟ್ಟು ದೇಶದಲ್ಲಿ ಬಯಲಿನ ಭಾಗ ಕಡಿಮೆ, ಪರ್ವತಗಳೇ ಅಧಿಕ. ಆದರೆ ಯೂರೋಪಿನಂತೆಯೇ ಬೀಳು ನೆಲವಿಲ್ಲ. ಇಟಲಿ ವಿಸ್ತಾರ 1,20,000 ಚದರ ಮೈಲು. ಜನಸಂಖ್ಯೆ ಸುಮಾರು 46 ಮಿಲಿಯ. ಐತಿಹಾಸಿಕ ಕಾಲದಿಂದ ಅದರ ಪೂರ್ವದಿಂದ ಮಾನವ ಕುಲವು ಇಲ್ಲಿ ತನ್ನ ಸಂಸ್ಕೃತಿಯ ಲೀಲಾಜಾಲವನ್ನೆಲ್ಲ ನಡೆಸಿಕೊಂಡು ಬಂದಿದೆ. ಇಟ್ರೂಶಿಯನ್ನರು, ರೋಮನ್ನರು ಅವರಲ್ಲಿ ಮೊದಲಿಗರು. ರೋಮನ್ನರಂತೂ ಎರಡು ಸಾವಿರ ವರ್ಷಗಳ ಹಿಂದೆಯೇ ಯೂರೋಪನ್ನು, ಈಜಿಪ್ಟನ್ನು ಆಳಿ, ಮೆರೆದು, ಸಾಮ್ರಾಜ್ಯ ಕಟ್ಟಿದವರು. ನೀರೋ, ಎಡ್ರಿಯಾನ್, ಜೂಲಿಯಸ್ ಸೀಸರ್, ಅಗಸ್ಟಸ್ ಇವರೆಲ್ಲರೂ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಒಳಿತಿಗೋ, ಕೆಟ್ಟದ್ದಕ್ಕೋ ಗುರುತಿಸಿ ಹೋದ ಮಹಾನುಭಾವರು. ರೋಮನರ ಅವನತಿಯೊಡನೆ ಕ್ರೈಸ್ತಧರ್ಮ, ಅದರಲ್ಲಿಯೂ ಕೆಥೋಲಿಕ್ ಪಂಥವು ಈ ಜನರ ಮನಸ್ಸನ್ನು ಸೆರೆಹಿಡಿಯಿತು. ರೋಮ್ ನಗರ ಕೆಥೋಲಿಕ್ ಗುರುಗಳಾದ ಪೋಪರ ಕೇಂದ್ರವಾಯಿತು. ಇವತ್ತು ರೋಮಿನ ಒಂದು ಪುಟ್ಟ ಅಂಶವಾದ ವ್ಯಾಟಿಕನ್ ಸ್ವತಂತ್ರ ರಾಷ್ಟ್ರವಾಗಿದೆ. ಹಿಂದೆ ವ್ಯಾಟಿಕನ್‌ನ ಪೋಪರು ಯೂರೋಪಿನ ಅರಸರನ್ನೂ, ಸಾಮ್ರಾಟರನ್ನೂ ತಮ್ಮ ಮುಷ್ಟಿಯಲ್ಲಿರಿಸಿಕೊಂಡಿದ್ದವರು. ಇಂದಿಗೂ ಪ್ರಪಂಚದ ವಿವಿಧ ಮೂಲೆಗಳಲ್ಲಿ ಪೋಪರಿಗಿರುವ ದೃಶ್ಯಾದೃಶ್ಯ ಸಂಬಂಧಗಳು ಸಾಮಾನ್ಯವಲ್ಲ.

10th_Kannada_Reader1-5.indd 116 03-04-2019 14:08:00

ರೋಮನರ ಯುಗ ಕಳೆದು, ಪೋಪರ ಯುಗ ತೊಡಗುತ್ತಿರುವಾಗಲೇ, ಇಟಲಿ ಈಶಾನ್ಯ ಮೂಲೆಯ ಕಡಲು ತೀರದ ಪಟ್ಟಣಗಳಾದ ವೇನಿಸ್ ತನ್ನ ವ್ಯಾಪಾರೀ ಸಾಮ್ರಾಜ್ಯವನ್ನು ಹಬ್ಬಿಸಿತು. ವೇನಿಸ್ ಡ್ಯೂಕರು, ಶ್ರೀಮಂತರು ಕಟ್ಟಿದ ವ್ಯಾಪಾರ ಮಂದಿರಗಳು, ನೌಕೆಗಳು, ಅರಮನೆಗಳು ಯೂರೋಪಿನ ಕಣ್ಣನ್ನು ಕುಕ್ಕಿದವು. ನೆಪೋಲಿಯನ್ನನ ಪ್ರಭಾವದಿಂದ ಅದರ ಶಕ್ತಿ ಕುಸಿಯಿತು. ಅಷ್ಟರೊಳಗಾಗಿ ಕ್ರೈಸ್ತಧರ್ಮದ ವರ್ಚಸ್ಸು ಇಟಲಿಯ ಮೂಲೆಮೂಲೆಗೂ ಹಬ್ಬಿ ಅನೇಕ ವಿಧಗಳಿಂದ ಮತಧರ್ಮ ಪ್ರಸಾರ ಮಾಡಿತು. ಲಲಿತ ಕಲೆಗಳನ್ನು ಬೆಳಗಿಸಿತು. ವೇನಿಸ್, ರೋಮ್, ಮೀಲಾನ್, ಪಾಡುವಾ ರೆವೆನ್ನಾ, ಫ್ಲಾರೆನ್ಸ್ ಮೊದಲಾದ ನಗರಗಳ ತಮ್ಮ ಕಲಾ ವೈಭವಗಳಿಂದ ಪ್ರಪಂಚದ ಮನ್ನಣೆಯನ್ನು ಸೆಳೆಯುವಂತಾಯಿತು. ಈ ಕ್ಷೇತ್ರದಲ್ಲಿ ಹೆಸರನ್ನು ಗಲಿಸಿದ ಬ್ರಮಾಂಟಿ, ಡೊನಾಟೆಲೋ, ವಿನ್ಸಿ, ರಾಫೇಲ್, ಮೈಕೆಲ್ ಏಂಜಲೋ, ಟಿಂಟಿರೆಟೋ, ವೆರೋನಿಸ್, ಟೈಟನ್ ಮೊದಲಾದ ಅನೇಕ ಕಲಾವಿದರು ಇಟಲಿಗೆ ಅಮರವಾದಂಥ ಕೀರ್ತಿಯನ್ನು ತಂದು ಕೊಟ್ಟರುಲ ಕ್ರಿಸ್ತಗುರುಗಳು ಹಳೆಗಾಲದ ಸಾಧು ಸಂತರೊಡನೆ ಹೊಸ ಕಾಲದ ಸಂತರನ್ನು ನೆನ್ನೆ ನೆನ್ನೆಯತನಕ ಸೇರಿಸಕೊಂಡು ಬಂದು, ಕ್ರೈಸ್ತ ಧರ್ಮದ ಸಂತರುಗಳೆಲ್ಲ ಇಟಲಿಗೇ ಮೀಸಲು – ಎಂಬಷ್ಟು ನಂಬಿಕೆಯನ್ನು ಬೆಳೆಸಿದ್ದಾರೆ. ಈ ಸಂತರುಗಳ ಹೆಸರಿನಲ್ಲಿ ಹುಟ್ಟಿದ ನೂರಾರು ಚರ್ಚುಗಳು, ತಮ್ಮ ವಾಸ್ತುವೈಖರಿಯಿಂದ ಕಲಾ ಸಂಪತ್ತಿನಿಂದ ಜಗದ ಮನ್ನಣೆ ಪಡೆಯತೊಡಗಿದವು. ಇಂದು ನಮ್ಮ ಪ್ರವಾಸದ ಅರ್ಧ ಸೊಬಗು ಅವುಗಳನ್ನು ನೋಡುವುದರಲ್ಲಿದೆ.

ರಾಜಕೀಯ ಕ್ಷೇತ್ರದಲ್ಲಿ ಮೆಚಿವಿಲಿ, ಗೆರಿಬಾಲ್ಡಿ, ಮೈಜಿನಿಯರು ಒಂದೊಂದು ವಿಧದಿಂದ ಹೆಸರು ಗಳಿಸಿದರು. ಹಳೆಯ ಸಾಮ್ರಾಟರ ಹೆಮ್ಮೆಯನ್ನೆಲ್ಲ ಹೊತ್ತು, ನೋರೋವಿನ ನಿಷ್ಕರುಣೆಯನ್ನೆಲ್ಲ ತೋರಿ, ಇಟಲಿಯನ್ನು ಪೂರ್ವ ವೈಭವಕ್ಕೆ ಒಯ್ಯುತ್ತೇನೆ ಎಂದು ಧುಮುಕಿದ ಅಹಂಕಾರಿ ಮುಸಲೋನಿ ನಮಗೆ ತೀರ ಹೊಸಬ. ಅವನ ಕಾಲ ಮುಗಿದು ಇಂದು ಪ್ರಭಾಪ್ರಭುತ್ವದ ಕಾಲವು ಇಟಲಿಯಲ್ಲಿ ಉದಯಿಸಿದೆ. ಹೀಗೆ ಎರಡು ಸಾವಿರ ವರ್ಷಗಳ ಕಾಲ ಇತಿಹಾಸ, ಮತ, ಧರ್ಮ, ಕಲೆಗಳು ತಾಂಡವ ಮಾಡಿದಂಥ ದೇಶ ಇಟಲಿ. ಮನುಷ್ಯ ತನ್ನ ಸಾತ್ವಿಕ ಗುಣಗಳಿಂದ ಆತ್ಮಾನಂದದಿಂದ ಎಂಥ ಧವಲಕೀರ್ತಿಯನ್ನು ಸಂಪಾದಿಸಬಹುದೋ ಅದನ್ನೂ ಗಳಿಸಿತು. ಧನಮದ, ಅಧಿಕಾರಮದ, ಸಾಮ್ರಾಜ್ಯ ಮದಗಳಿಂದ ತನಗೆ ತಾನೇ ಆಗಿ ಮೆರೆದು, ಯಾವೆಲ್ಲ ವೈಭವದ ಬಾಳನ್ನು ವಿಜೃಂಭಣೆಯ ಬಾಳನ್ನು ನಡೆಸಬಹುದೋ ಅದನ್ನೂ ನಡೆಸಿತು. ಇಂಥ ಬಾಳಿನೊಡನೆ ಅನಿವಾರ್ಯವಾಗಿ ಬೆರೆತುಕೊಂಡಿರುವ ದುರಹಂಕಾರ, ಕ್ರೌರ್ಯ, ಅತಿ ಕಾಮುಕತೆ, ಹಿಂಸಾ ಲೋಲುಪತೆಗಳಿಂದ ತುಂಬಿ ತುಳುಕಿ ತನ್ನ ನಾಶವನ್ನು ತಂದುಕೊಂಡಿತು. ಮಾನವ ಕೋಟಿಯಿಂದ ತರಿಸಿದ ಒಂದೊಂದು ಆನಂದಬಾಷ್ಪದ ಸುಖ–ದುಃಖಗಳ, ಅರ್ತಿಗಳ ಕಂಬನಿಯ ಹೊಳೆಯನ್ನು ಹರಿಯಿಸಿತು. ಇಟಲಿಯ ಉನ್ನತಿ ಅವನತಿಗಳೆರಡರಲ್ಲೂ ಅಷ್ಟೇ ಮೇಲಕ್ಕೆದ್ದಿತು, ಕೆಳಕ್ಕೆ ಇಳಿಯಿತು.

ಈ ದೇಶದ ಹಳೆಗಾಲದ ಇತಿಹಾಸದ ಸ್ಮರಣೆಯಿಂದ ನಾವು ನಾಡನ್ನು ಸಂರಿಸಿದುದಾದರೆ ಈಗಿನ ಜನತೆಯನ್ನು ಕಂಡು ಏನೋ ವಿಸ್ಮಯವಾಗುತ್ತದೆ. ರೋಮನರೆಂಬುವರು ಇದ್ದರೇ? ಇದ್ದಿದ್ದರೆ ಅವರ ಕುಲದವರಿಲ್ಲವೇ – ಎಂಬ ಅನುಮಾನ ಉಂಟಾಗುತ್ತದೆ. ಯೂರೋಪಿನಲ್ಲೇ ಅತಿ ಕುಳ್ಳರು ಇಲ್ಲಿನ ಜನ. ರೋಮನರ ಗಾತ್ರಕ್ಕೂ ಇವರ ನಿಲುಮೆಗೂ ಸಂಬಂಧವೇ ಉಳಿದಿಲ್ಲ. ಯೂರೋಪಿಯನ್ನರ ರಕ್ತ ತುಂಬಿದ ಪಾಟಿಲ ತೊಗಲು ಇವರದ್ದಲ್ಲ, ಬಿಳಿ ಮೈಯ್ಯವರೇ ಹೆಚ್ಚು. ಅದರಲ್ಲಿಯೂ ಗಂಡಸರಂತೂ ನಮ್ಮಷ್ಟೇ ಕಂದು ಬಣ್ಣದವರು, ಕರಿಯರಲ್ಲ. ಉತ್ತರ ಯೂರೋಪಿನವರ ಕೆಂಚು ನೆಲ್ಲಿನ ಬಣ್ಣದ ತಲೆಗೂದಲಿಲ್ಲ. ಪೌರ್ವಾತ್ಯರಂತೆ ಕಪ್ಪುಗೂದಲಿನ ಜನಗಳೇ ಅಧಿಕ. ಕಣ್ಣುಗಳು ಮಾತ್ರ ನೀಲ, ಕಂದು ಬಣ್ಣದವು.

ಪ್ರವಾಸಿಗಳಿಗೆ ಕಾಣುವ ಇನ್ನೊಂದು ಸಮಸ್ಯೆಯೆಂದರೆ ಜನಜೀವನಕ್ಕೂ ಕೆಥೋಲಿಕ್ ಧರ್ಮದ ವಿರಕ್ತಿಗೂ ಇರುವ ಅಂತರ. ಕೆಥೋಲಿಕ್ ಮತದಲ್ಲಿ ವಿರಕ್ತಿಯ ಪಾಠ ಎಷ್ಟೆಷ್ಟು ಅಧಿಕವೋ, ಪಾದ್ರಿ ಮಾದ್ರಿಯರ ಸಂಖ್ಯೆ ಈ ದೇಶದಲ್ಲಿ ಎಷ್ಟೆಷ್ಟು ಹೆಚ್ಚಿಗೆ ಕಾಣಿಸುತ್ತದೆಯೋ, ಜನಜೀವನದಲ್ಲಿ ವಿಷಯ ಲೋಲುಪತೆಯೂ ವಿಲಾಸವೂ ಕಾಣಿಸುತ್ತದೆ. ದ್ರಾಕ್ಷಿಯ ಅಮಲು, ಕಾಮಿನಿಯ ಅಮಲು. ಸ್ಪೆಯಿನ್,

10th_Kannada_Reader1-5.indd 117 03-04-2019 14:08:00

ಫ್ರಾನ್ಸ್, ಇಟಲಿಗಳನ್ನು ತನ್ನ ಮೋಹಜಾಲದಲ್ಲಿ ಇರಿಸಿಕೊಂಡಷ್ಟು ಯೂರೋಪಿನ ಇತರ ಭಾಗಗಳನ್ನು ಇರಿಸಿಕೊಂಡಿಲ್ಲ ಎಂದು ಅನ್ನಿಸುತ್ತದೆ.

ದೇಶದ ನೆಲವನ್ನು ಕಾಣುವಾಗ ನಿಸ್ಸಾರವಾದುದು ಎನ್ನಿಸುವ ಭಾವ ಬರುತ್ತದೆಯಾದರೂ, ಜನರು ಶ್ರಮಜೀವಿಗಳು. ಉತ್ತರದ ಬಯಲು ಅಖಂಡವಾದ ಒಂದೇ ಹೊಲ ಎನ್ನುವಷ್ಟು ಬೆಳೆಯಿಂದ ತುಂಬಿಕೊಂಡಿದೆ. ಉಳಿದ ನೆಲವಾದರೂ ಹಾಗೆಯೇ. ತಗ್ಗಿನ ಭೂಮಿಗಳಲ್ಲಿ ಮೆಕ್ಕೆಜೋಳ, ಗೋಧಿ, ಅಕ್ಕಿ, ಮೊದಲಾದ ಕಾಳುಗಳನ್ನು ಬೆಳೆಯುತ್ತಾರೆ. ಉಳಿದ ಭಾಗಗಳನ್ನು ಬರಡಾಗಿ ಬಿಟ್ಟಿಲ್ಲ. ಎಲ್ಲೆಲ್ಲಿಯೂ ದ್ರಾಕ್ಷಿ ತೋಟಗಳಿವೆ. ಬೇಲಿಗಳ ಮೇಲೆ ದ್ರಾಕ್ಷಿ ಬಳ್ಳಿ, ಮರಗಳ ಮೇಲೆ ದ್ರಾಕ್ಷಿ ಬಳ್ಳಿ, ತೋಟವಾಗಿ ನಟ್ಟ ದ್ರಾಕ್ಷಿ ಬಳ್ಳಿ, ದ್ರಾಕ್ಷಿಗಳ ತೋಟಗಳು ಕಾಣಿಸಿದರೆ; ಮೇಲಿನ ಭಾಗದಲ್ಲೆಲ್ಲ ಸಾವಿರಾರು ಎಕರೆ ವಿಸ್ತೀರ್ಣಕ್ಕೆ ಇಪ್ಪೆ ಮರದ ತೋಟಗಳಿವೆ. ಅಲ್ಲಿಂದ ಮುಂದಕ್ಕೆ ಕಣ್ಣು ಚಾಚಿದರೆ ಬೆಟ್ಟದ ತಗ್ಗುಗಳಲ್ಲೂ ಪೈನ್ ವೃಕ್ಷಗಳನ್ನು ನೆಡುವ ಸಾಹಸ ಮಾಡಿದ್ದಾರೆ. ಇಟಲಿ ಕೃಷಿಕರ ನಾಡು. ರೋಮ್, ಬೊಲೋನಾ, ಮಿಲಾನ್, ಟೂರಿನ್ ಮೊದಲಾದ ಕಡೆಗಳಲ್ಲಿ ಆಧುನಿಕ ಯಂತ್ರೋದ್ಯಮ ಬಹುವಾಗಿ ಬೆಳೆದು ಬಂದಿದೆಯಾದರೂ ದಕ್ಷಿಣ ಇಟಲಿ, ಸಿಸಿಲಿ ಮೊದಲಾದ ದ್ವೀಪಗಳು ದಾರಿದ್ರ್ಯದ ಕೊಂಪೆಗಳು. ಜನರು ಉಡುಗೆ ತೊಡುಗೆಗಳಲ್ಲಿಯೂ ಬಡವರೇ. ಶುಚಿ, ಸ್ವಭಾವದಲ್ಲಿಯೂ ಬಡವರೇ. ಉತ್ತರ ಯೂರೋಪಿನಲ್ಲಿ ಬಡತನದ ಅಂಥ ದಾರುಣ ಚಿತ್ರ ನಾನು ಕಂಡಿರಲಿಲ್ಲ. ರೋಮ್ ನಗರ ಮತ್ತಿತರ ಪಟ್ಟಣದಲ್ಲಿ ಕಿಸೆ ಕತ್ತರಿಸುವ ಕಳ್ಳರ ಸಂಖ್ಯೆಯೂ ಹೆಚ್ಚಾಗಿದೆ. ರೋಮ್ ಬಹುದೊಡ್ಡ ನಗರ. ತೀರ ಪುರಾತನವಾದುದು. ಅಷ್ಟೇ ಆಧುನಿಕವಾದುದು. ಅದರ ಬೀದಿಗಳಲ್ಲಿಯೇ ಬಿದ್ದ ಸಿಗರೇಟ್ ತುಂಡುಗಳನ್ನು ನೆಕ್ಕುತ್ತಿದ್ದ ಇಬ್ಬರು ಬಡಪಾಯಿಗಳನ್ನು ನಾನು ನೋಡಿದೆ.

ಒಂದು ದಿನ ನೇಪಲ್ಸ್ ನೋಡುವುದಕ್ಕೆ ಹೋಗಿದ್ದೆ. 'ನೇಪಲ್ಸ್ ನೋಡಿ ಸಾಯಬೇಕಂತೆ'. ಸುಂದರವಾದ ಕಡಲ ತೀರದ ಮಗ್ಗುಲಲ್ಲಿ ಬೆಳೆದ ಈ ನಗರದ ಜನಸಂಖ್ಯೆಯು ಒಂದು ಮಿಲಿಯಷ್ಟಿದೆ. ನಾನು ಕಡಲ ಸೆರಗಿನ ಒಂದು ದಾರಿ ಹಿಡಿದು, ಎರಡು ಮೈಲುಗಳ ತನಕ ಕಾಲು ನಡೆಯಿಂದಲೇ ಸರಿದೆ. ದಾರಿಯ ನೋಟವು ನನ್ನನ್ನು ಬೆರಗು ಮಾಡಿತು. ಇಕ್ಕೆಡೆಗಳಲ್ಲೂ ಯುದ್ಧ ಕಾಲದಲ್ಲಿ ಬಾಂಬುಗಳ ಆಘಾತಕ್ಕೆ ಗುರಿಯಾದ ಕಟ್ಟಡಗಳಿದ್ದವು. ದಾರಿಯ ಮಗ್ಗುಲಲ್ಲಿ ಕೊಳಚೆಯ ರಾಶಿಗಳು ಕಾಣಿಸುತ್ತಿದ್ದವು. ಸಾಲದುದಕ್ಕೆ ತೆರವಾದ ಸ್ಥಳಗಳಲ್ಲಿ ನಮ್ಮ ದೇಶದ ಅನೇಕ ಕಡೆಗಳಲ್ಲಿ ಕಾಣುವಂತೆ ಹರಕುಮುರುಕು ಜೋಪಡಿಗಳಿದ್ದವು. ಹರಕು ಚಿಂದಿಗಳನ್ನು ಹೊಲಿದು ಕಟ್ಟಿದ ಬಟ್ಟೆಗಳ ಮರೆಯೇ ಗೋಡೆ. ತಗಡುಗಳಿಂದ ಆಕಾರವಿಲ್ಲದೆ ಹೊದೆಸಿದ ಮಾಡು, ಮೇಲಿನ ರಕ್ಷೆ. ಅದರೊಳಗೆ ವಾಸಿಸುವವ ಕುಟುಂಬ – ಚಿಂದಿಯನ್ನು ತೊಟ್ಟವರದು. ಓಡಾಡುವ ಮಕ್ಕಳು ಕೊಳೆ ತುಂಬಿದ ಮೈಯವರು. ಧೂಳಿನಲ್ಲೇ ಉರುಳಾಡುವವರು. ಪಾದರಕ್ಷೆ ಇಲ್ಲದ ಬಡಜೀವಿಗಳು. ಕಕ್ಕಸವಿಲ್ಲದೆ ದಿನ ಕಳೆಯುವ ಜನವರ್ಗ ಅಲ್ಲಿಯೂ ಇತ್ತು. ಕಡಲು ದಂಡೆಗೆ ಹೋದರ ಮೈಗೆ ಪೂರ್ಣ ಅರಿವೆ ಇಲ್ಲದೆ ಎದೆಗೂಡು ಕಾಣುವ ಮಕ್ಕಳೆಷ್ಟು ಬೇಕು ! ಕೇವಲ ಬೀದಿಯ ಮಕ್ಕಳು ಅವರು.

ನೇಪಲ್ಸ್‌ನಿಂದ ತುಸು ದೂರದ ಪಾಂಪಿಗೆ ಹೋದಾಗ ಜತೆಗೆ ಕುಳಿತ ಪ್ರಯಾಣಿಕರ ಬಟ್ಟೆಯ ಕೊಳೆ, ಹರಕುಗಳನ್ನು ನೋಡುವುದಕ್ಕಾಗದು. ಯೂರೋಪಿನ ಜನರು ದಾರಿಯಲ್ಲಿ ಒಂದು ತುಣುಕು ಕಾಗದ ಎಸೆಯುತ್ತಿರಲಿಲ್ಲ. ಇವರೋ ಬಂಡಿಯಲ್ಲಿ ಕುಳಿತು, ಅದರ ಒಳಗೇನೇ ಉಗುಳುತ್ತಿದ್ದುದನ್ನು ಕಂಡಾಗ, ಉತ್ತರ ಯೂರೋಪು ಎಲ್ಲಿ? ದಕ್ಷಿಣ ಇಟಲಿ ಎಲ್ಲಿ ಎನ್ನುವ ವಿಸ್ಮಯ ನನಗೆ ಉಂಟಾಯಿತು. ಇಷ್ಟೊಂದು ಬಡತನ ನೆಲೆಸಿರುವಾಗ ಮಾನವತೆಯ ನೈತಿಕ ಮಟ್ಟ ಕೆಳಕ್ಕಿಳಿದಿರುವಲ್ಲಿ ಆಶ್ಚರ್ಯವಿಲ್ಲ. ಈ ಬಡತನ ನಿವಾರಣೆಗೊಳ್ಳುವುದೂ ಸುಲಭವಲ್ಲ. ಕುಡುಕುತನ, ವಿಷಯ ಲೋಲುಪತೆ, ಜುಗಾರು ತುಂಬಿದ ನಾಡಿನಲ್ಲಿ ಬಡತನ, ಅನೀತಿ ಹೋಗುವುದು ತುಂಬ ಕಷ್ಟದ ಕೆಲಸ. ಆದರೂ ಈ ದೇಶದ ಉತ್ತರ ಭಾಗ ಉತ್ತಮಗೊಂಡಂತೆ ದಕ್ಷಿಣ ಭಾಗ ಬೆಳೆಯಬಾರದೆಂದಲ್ಲ. ಕಮ್ಯುನಿಸಮ್ ಇಟಲಿಯಲ್ಲಿ ಬೇರು ಬಿಡುವುದು ಶಕ್ಯವಾಗಿದ್ದರೆ, ಅದು ದಾರಿದ್ರ್ಯದ ಈ ಹಸನಾದ ನೆಲದಿಂದ ಡೆನ್ಮಾರ್ಕಿನಂತೆ, ಹಾಲೆಂಡಿನಂತೆ, ಬಡವರ ಸಲುವಾಗಿ ಹಿಂದಣ ಸರ್ಕಾರಗಳು ದುಡಿದಿರಲಿಲ್ಲ. ಇನ್ನು ದುಡಿದು, ಜನಗಳಲ್ಲಿ ತೃಪ್ತಿಯನ್ನುಂಟು ಮಾಡಿ, ಈ ಪ್ರಶ್ನೆ ನಿವಾರಣೆಗೊಳ್ಳಬೇಕು.

10th_Kannada_Reader1-5.indd 118 03-04-2019 14:08:00

ಕೃತಿ–ಕರ್ತೃ ಪರಿಚಯ



– ಕೆ.ಶಿವರಾಮ ಕಾರಂತ

'ಕಡಲ ತಡಿಯ ಭಾರ್ಗವ' ಎಂದೇ ಹೆಸರಾದ ಕೆ.ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬ ಗ್ರಾಮದಲ್ಲಿ 1902ರಲ್ಲಿ ಜನಿಸಿದರು. ಇವರನ್ನು 'ನಡೆದಾಡುವ ವಿಶ್ವಕೋಶ' ಎಂತಲೂ ಕರೆಯುವರು. ಇವರು ಕನ್ನಡ ಸಾಹಿತ್ಯಕ್ಕೆ ಮತ್ತು ಮಕ್ಕಳ ವಿಜ್ಞಾನ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರ. ಇವರು ಬೆಟ್ಟದ ಜೀವ, ಚೋಮನ ದುಡಿ, ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಮೈಮನಗಳ ಸುಳಿಯಲ್ಲಿ, ಮೂಕಜ್ಜಿಯ ಕನಸುಗಳು ಮುಂತಾದ ಕಾದಂಬರಿಗಳನ್ನು ಇವರು ರಚಿಸಿದ್ದಾರೆ. ಇವರ 'ಮೂಕಜ್ಜಿಯ ಕನಸುಗಳು' ಎಂಬ ಕಾದಂಬರಿಗೆ 'ಜ್ಞಾನಪೀಠ ಪ್ರಶಸ್ತಿ' ಲಭಿಸಿದೆ. 'ಮೈಮನಗಳ ಸುಳಿಯಲ್ಲಿ' ಎನ್ನುವ ಕಾದಂಬರಿಗೆ ಪಂಪ ಪ್ರಶಸ್ತಿ ಲಭಿಸಿದೆ. 'ಯಕ್ಷಗಾನ ಮತ್ತು ಬಯಲಾಟ' ಎನ್ನುವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಪ್ರಸ್ತುತ ಕಥನವು ಲೇಖಕರು ಯೂರೋಪ್ ನೋಡಿಕೊಂಡು, ಇಟಲಿಗೆ ಪ್ರವಾಸ ಹೋಗಿದ್ದಾಗ ಅಲ್ಲಿನ ವೈಭವವನ್ನು ಮತ್ತು ಅಲ್ಲಿನ ಜನರ ಬದುಕಿನ ರೀತಿಯನ್ನು ವಿವರಿಸುತ್ತದೆ. ಹಿಂದಿನ ಇಟಲಿಯ ಸುಂದರ ನೋಟವನ್ನು ಈಗ ನೋಡಲು ಸಾಧ್ಯವಿಲ್ಲ ಎಂಬುದರ ಜೊತೆಗೆ ರೋಮ್ ನಗರದ ತೀವ್ರ ಬಡತನ ಮತ್ತು ಅಲ್ಲಿನ ಜನಜೀವನದ ಬಗ್ಗೆ ಇದು ತಿಳಿಸುತ್ತದೆ.

ಪದಗಳ ಅರ್ಥ

ವಿಹಂಗಮ ನೋಟ–ಪಕ್ಷಿ ನೋಟ; ಸರಹದ್ದು–ಎಲ್ಲೆ, ಗಡಿ, ಮೇರೆ; ಕಾರ್ಮುಗಿಲು–ಕಪ್ಪುಮೋಡ; ಕವಿ–ಮುಸುಕು, ಆವರಿಸು; ಉದ್ರೇಕ–ಉದ್ವೇಗ, ದುಡುಕು; ಅಲಕ್ಷಿಸು–ಕಡೆಗಣಿಸು; ಮಾಡು–ಛಾವಣಿ, ಉಪ್ಪರಿಗೆ; ತುಣುಕು–ಚೂರು, ತುಂಡು; ಸೆರಗು–ಅಂಚು, ತೀರ; ಲೀಲಾಜಾಲ–ಸರಾಗ, ಅತ್ಯಂತ ಸುಲಭ; ಮನ್ನಣೆ–ಗೌರವ; ಅಮರ–ಶಾಶ್ವತವಾದ; ವೈಖರಿ–ರೀತಿ; ಸೊಬಗು–ಚೆಲುವು; ಸಾತ್ವಿಕ–ಒಳ್ಳೆಯ ಗುಣದಿಂದ ಕೂಡಿದವನು; ಕ್ರೌರ್ಯ–ನಿರ್ದಯತೆ; ಲೋಲುಪತೆ–ಆಸಕ್ತಿಯುಳ್ಳದ್ದು; ಅರ್ತಿ–ಪ್ರೀತಿ; ಸ್ಮರಣೆ–ನೆನಪು; ವಿಸ್ಮಯ–ಆಶ್ಚರ್ಯ; ತೊಗಲು–ಚರ್ಮ; ವಿರಕ್ತಿ–ವೈರಾಗ್ಯ, ನಿರಾಸಕ್ತಿ; ಕಾಮಿನಿ–ಹೆಂಗಸು, ಸುಂದರಿ; ಕಿಸೆ–ಜೇಬು; ಬೆರಗು–ಆಶ್ಚರ್ಯ; ಇಕ್ಕಡೆ–ಎರಡೂ ಕಡೆ; ಜೋಪಡಿ–ಗುಡಿಸಲು; ಜುಗಾರು–ಜೂಜು; ಹಸನು–ಶುದ್ಧವಾದುದು.

ಅಭ್ಯಾಸ

I..ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಇಟಲಿ ದೇಶದ ಬೇಸಗೆಯನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ ?
2. ಯೂರೋಪನ್ನು, ಈಜಿಪ್ಟನ್ನು ಆಳಿದ ರೋಮನ್ ಅರಸರುಗಳು ಯಾರು ?

10th_Kannada_Reader1-5.indd 119 03-04-2019 14:08:01

3. ವೇನಿಸ್ ನಗರವು ಯೂರೋಪಿನ ಕಣ್ಣನ್ನು ಕುಕ್ಕಲು ಕಾರಣವೇನು ?
4. ತಮ್ಮ ಕಲಾ ವೈಭವಗಳಿಂದ ಪ್ರಪಂಚದ ಮನ್ನಣೆಯನ್ನು ಪಡೆದ ನಗರಗಳಾವುವು ?
5. ಇಟಲಿಗೆ ಅಮರಪ್ರಾಯವಾದ ಕೀರ್ತಿಯನ್ನು ತಂದು ಕೊಟ್ಟ ಕಲಾವಿದರುಗಳನ್ನು ಹೆಸರಿಸಿ ?
6. ರೋಮ್ ನಗರದ ಬಡತನದ ಬಗ್ಗೆ ಲೇಖಕರ ಅಭಿಪ್ರಾಯವೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ರೋಮ್ ನಗರದಲ್ಲಿ ಲೇಖಕರಿಗಾದ ಮಳೆಯ ಅನುಭವವನ್ನು ಚಿತ್ರಿಸಿ.
2. ಇಟಲಿಯ ಭೌಗೋಳಿಕ ವಿಸ್ತಾರವನ್ನು ತಿಳಿಸಿ.
3. ಇಟಲಿಯ ಉನ್ನತಿ ಅವನತಿಗಳನ್ನು ವಿವರಿಸಿ.
4. ಇಟಲಿ ಕೃಷಿಕರ ನಾಡು ಹೇಗೆ ? ವಿವರಿಸಿ.
5. ನೇಪಲ್ಸ್ ನಗರದ ಬಡತನದ ದೃಶ್ಯವನ್ನು ಲೇಖಕರು ಹೇಗೆ ಕಟ್ಟಿಕೊಟ್ಟಿದ್ದಾರೆ? ವಿವರಿಸಿ.

ಚಟುವಟಿಕೆ

1. ಪ್ರವಾಸ ಸಾಹಿತ್ಯ ಕೃತಿಗಳನ್ನು ಓದಿರಿ.
2. 'ದೇಶ ಸುತ್ತು, ಕೋಶ ಓದು' – ಈ ಗಾದೆಯನ್ನು ವಿಸ್ತರಿಸಿ ಬರೆಯಿರಿ.



10th_Kannada_Reader1-5.indd 120 03-04-2019 14:08:01

ವ್ಯಾಕರಣ

ಘಟಕ ಆರು

ಸಮಾಸಗಳು

ಎರಡು ಅಥವಾ ಹಲವು ಪದಗಳು ಅರ್ಥಕ್ಕೆ ಅನುಸಾರವಾಗಿ ಒಟ್ಟು ಸೇರಿ ಒಂದು ಪದವಾಗುವುದಕ್ಕೆ ಸಮಾಸವೆನ್ನುವರು. ಹೀಗೆ ಎರಡು ಪದಗಳು ಸೇರುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವು ಲೋಪವಾಗುತ್ತದೆ. ಸಮಾಸ ಪದಗಳನ್ನು ಅರ್ಥವಾಗುವಂತೆ ಬಿಡಿಸಿ ಹೇಳುವುದಕ್ಕೆ ವಿಗ್ರಹ ವಾಕ್ಯಗಳೆಂದು ಹೆಸರು. ವಿಗ್ರಹ ವಾಕ್ಯದ ಮೊದಲ ಪದವನ್ನು ಪೂರ್ವ ಪದವೆಂದೂ, ಅದರ ಮುಂದಿನ ಪದವನ್ನು ಉತ್ತರ ಪದವೆಂದೂ ಕರೆಯುತ್ತಾರೆ.

ಉದಾಹರಣೆ:

ತಾಯಿಯ+ನುಡಿ=ತಾಯ್ನುಡಿ.

ಅರಸನ+ಮನೆ=ಅರಮನೆ

ಸಮಾಸಗಳಲ್ಲಿ ಮುಖ್ಯವಾಗಿ ತತ್ಪುರುಷ, ಕರ್ಮಧಾರಯ, ಅಂಶಿ, ಬಹುವ್ರೀಹಿ, ದ್ವಂದ್ವ, ಗಮಕ, ಕ್ರಿಯಾ ಮತ್ತು ದ್ವಿಗು ಸಮಾಸಗಳೆಂದು ಎಂಟು ವಿಧಗಳಿವೆ.

1. **ತತ್ಪುರುಷ ಸಮಾಸ:**

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸವೆಂದು ಹೆಸರು. ತತ್ಪುರುಷ ಸಮಾಸದಲ್ಲಿ ದ್ವಿತೀಯಾ, ತೃತೀಯಾ, ಚತುರ್ಥಿ, ಪಂಚಮೀ, ಷಷ್ಠಿ ಹಾಗೂ ಸಪ್ತಮೀ ತತ್ಪುರುಷ ಎಂದು ಆರು ಭೇದಗಳಿವೆ.

ಉದಾಹರಣೆ:

ಹಣ್ಣನ್ನು ಮಾರುವವನು	–	ಹಣ್ಣು ಮಾರುವವನು(ದ್ವಿತೀಯಾ)
ವಯಸ್ಸಿನಿಂದ ವೃದ್ಧ	–	ವಯೋವೃದ್ಧ(ತೃತೀಯಾ)
ಭೂತಗಳಿಗೆ ತೃಪ್ತಿ	–	ಭೂತ ತೃಪ್ತಿ(ಚತುರ್ಥೀ)
ಚೋರನ ದೆಸೆಯಿಂದ ಭಯ	–	ಚೋರಭಯ(ಪಂಚಮೀ)
ಎಲೆಯ ಮನೆ	–	ಎಲೆವನೆ/ಎಲೆಮನೆ(ಷಷ್ಠೀ)
ವನದಲ್ಲಿ ವಾಸ	–	ವನವಾಸ(ಸಪ್ತಮೀ)

2. **ಕರ್ಮಧಾರಯ ಸಮಾಸ:**

ಪೂರ್ವಪದದಲ್ಲಿ ವಿಶೇಷಣವಿದ್ದು, ಉತ್ತರ ಪದದ ಅರ್ಥ ಮುಖ್ಯವಾಗಿದ್ದು, ವಿಶೇಷಣ, ವಿಶೇಷ್ಯಗಳಿಗೆ ಸಂಬಂಧವಿದ್ದರೆ ಅದು ಕರ್ಮಧಾರಯ ಸಮಾಸವೆನ್ನಿಸುತ್ತದೆ.

ಉದಾಹರಣೆ:

ಹೊಸದು+ಕನ್ನಡ=ಹೊಸಗನ್ನಡ

ಹಿರಿದು+ಬಾಗಿಲು=ಹೆಬ್ಬಾಗಿಲು

3. **ದ್ವಿಗು ಸಮಾಸ:**

ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸವೆನ್ನಿಸುತ್ತದೆ.

10th_Kannada_Reader1-5.indd 121 03-04-2019 14:08:01

ಉದಾಹರಣೆ: :

ಒಂದು+ಕಟ್ಟು=ಒಗ್ಗಟ್ಟು

ಎರಡು+ಮಡಿ=ಇಮ್ಮಡಿ

ಮೂರು+ಪುರಿ=ಮುಪ್ಪುರಿ

4. ಅಂಶಿ ಸಮಾಸ:

ಪೂರ್ವೋತ್ತರ ಪದಗಳು ಅಂಶಾಂಶಿ ಭಾವ ಸಂಬಂಧದಿಂದ ಸೇರಿ ಪೂರ್ವ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಅಂಶಿ ಸಮಾಸವೆನ್ನುವರು.

ಉದಾಹರಣೆ: :

ತಲೆಯ+ಮುಂದು=ಮುಂದಲೆ

ಕೈಯ+ಅಡಿ=ಅಂಗೈ

ಕಾಲಿನ+ಮುಂದು=ಮುಂಗಾಲು

5. ದ್ವಂದ್ವ ಸಮಾಸ:

ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿ ಉಳ್ಳ ಸಮಾಸಕ್ಕೆ ದ್ವಂದ್ವ ಸಮಾಸವೆಂದು ಹೆಸರು.

ಉದಾಹರಣೆ: :

ಆನೆಯೂ ಕುದುರೆಯೂ ಒಂಟೆಯೂ=ಆನೆಕುದುರೆಒಂಟೆಗಳು

ಗಿಡವೂ ಮರವೂ ಬಳ್ಳಿಯೂ=ಗಿಡಮರಬಳ್ಳಿಗಳು

6. ಬಹುವ್ರೀಹಿ ಸಮಾಸ:

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಪೂರ್ವಪದ ಉತ್ತರ ಪದಗಳಲ್ಲಿ ಯಾವುದರ ಅರ್ಥವೂ ಮುಖ್ಯವಾಗಿರದೆ ಅನ್ಯ ಪದದ ಅರ್ಥ ಮುಖ್ಯವಾಗಿದ್ದರೆ ಅದಕ್ಕೆ ಬಹುವ್ರೀಹಿ ಸಮಾಸ ಎಂದು ಹೆಸರು.

ಉದಾಹರಣೆ:

ಮೂರು ಕಣ್ಣುಗಳು ಯಾರಿಗೆ ಇವೆಯೋ ಅವನು–ಮುಕ್ಕಣ್ಣ =ಶಿವ

ಕಮಲದಂತಹ ಮುಖವು ಯಾರಿಗೆ ಇದೆಯೋ ಅವಳು–ಕಮಲಮುಖಿ =ಲಕ್ಷ್ಮಿ

7. ಕ್ರಿಯಾ ಸಮಾಸ:

ಪೂರ್ವಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾರೂಪವಾಗಿದ್ದರೆ ಕ್ರಿಯಾಸಮಾಸವಾಗುವುದು.

ಉದಾಹರಣೆ:

ಮೈಯನ್ನು+ತಡವು = ಮೈದಡವು

ಕಣ್ಣನ್ನು+ತೆರೆ = ಕಣ್ದೆರೆ

8. ಗಮಕ ಸಮಾಸ:

ಪೂರ್ವಪದವು ಸರ್ವನಾಮ ಅಥವಾ ಕೃದಂತವಾಗಿದ್ದು, ಉತ್ತರಪದವು ನಾಮಪದವಾಗಿದ್ದರೆ ಗಮಕಸಮಾಸವಾಗುವುದು.

ಉದಾಹರಣೆ:

ಅವನು+ಹುಡುಗ=ಆ ಹುಡುಗ

10th_Kannada_Reader1-5.indd 122 03-04-2019 14:08:01

ಅದು+ಕಲ್ಲು = ಆ ಕಲ್ಲು

ಮಾಡಿದುದು+ಅಡಿಗೆ = ಮಾಡಿದಡಿಗೆ

ಸಿಡಿಯುವುದು+ಮದ್ದು = ಸಿಡಿಮದ್ದು

ಹುರಿದ+ಕಡಲೆ = ಹುರಿಗಡಲೆ

ಅರಿ ಸಮಾಸ

ಕನ್ನಡ ಮತ್ತು ಸಂಸ್ಕೃತ ಶಬ್ದಗಳನ್ನು ಸೇರಿಸಿ ಮಾಡುವ ಸಮಾಸವನ್ನು ಅರಿಸಮಾಸವೆನ್ನುತ್ತಾರೆ. ಇದೊಂದು ದೋಷ. ರೂಢಿಯ ವ್ಯಾಕರಣದ ಪ್ರಕಾರ ಇದು ನಿಷಿದ್ಧ. ಆದರೆ ಭಾಷೆಯಲ್ಲಿ ಇಂತಹ ಪ್ರಯೋಗಗಳು ಕಂಡು ಬರುತ್ತವೆ. ಪೂರ್ವದ ಪ್ರಸಿದ್ಧ ಕವಿಗಳು ಮಾಡಿರುವ ಪ್ರಯೋಗಗಳಲ್ಲಿ ಬಿರುದಾವಳಿಗಳಲ್ಲಿ ಗಮಕ ಮತ್ತು ಕ್ರಿಯಾ ಸಮಾಸಗಳಲ್ಲಿ ಅರಿಸಮಾಸವನ್ನು ದೋಷವೆಂದು ಪರಿಗಣಿಸಬಾರದು.

ಉದಾಹರಣೆ:

ಪೂರ್ವ ಕವಿ ಪ್ರಯೋಗಕ್ಕೆ – ತುರಗದಳ, ಮಂಗಳಾರತಿ

ಬಿರುದಾವಳಿಗೆ – ದಳಮುಖಾದಿತ್ಯ, ರಾಯಕೋಲಾಹಲ.

ಗಮಕಸಮಾಸಕ್ಕೆ – ಪೊಡೆವ ಭೇರಿ, ಆ ಕಾರ್ಯ.

ಕ್ರಿಯಾಸಮಾಸಕ್ಕೆ – ಧೈರ್ಯ ಹೊಂದು, ಧರ್ಮ ಮಾಡು.

10th_Kannada_Reader1-5.indd 123 03-04-2019 14:08:01

ಘಟಕ ವಿಳು

ಕಲೆ



ಕಾವ್ಯ ಕಣಜ	: ನೊಂದು ತಲೆವಾಗಿದೆನು ಲಜ್ಜೆಯಲಿ	– ಕುಮಾರವ್ಯಾಸ
ಗದ್ಯ ವಿಹಾರ	: ನಿರ್ಮಲ ಧರ್ಮದಿ ಪಾಲಿಸು ಧರೆಯಂ	– ಜಾನ್‌ಸನ್ ಸುಕುಮಾರ್
ಉಪಪಠ್ಯ	: ಅಮ್ಮ	– ಡಾ. ಯು.ಆರ್. ಅನಂತಮೂರ್ತಿ
ವ್ಯಾಕರಣ	: ಛಂದಸ್ಸು	

10th_Kannada_Reader1-5.indd 124 03-04-2019 14:08:01

ಘಟಕ ಏಳು

ನೊಂದು ತಲೆವಾಗಿದೆನು ಲಜ್ಜೆಯಲಿ

–ಕುಮಾರವ್ಯಾಸ



'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂಬ ಕವಿ ಕುವೆಂಪು ಅವರ ಕವಿವಾಣಿಯಂತೆ ಕುಮಾರವ್ಯಾಸನ ಕಾವ್ಯ ಪ್ರತಿಭೆ ಎಂತಹುದು ಎಂದು ತಿಳಿದು ಬರುತ್ತದೆ. ಈ ದೈತ್ಯ ಪ್ರತಿಭೆಯ ಕವಿ ಹಾಸ್ಯದಲ್ಲಿಯೂ ಪದ್ಯಗಳನ್ನು ರಚಿಸಿದ್ದಾರೆ. ನವರಸಗಳಲಿ ಹಾಸ್ಯವೂ ಒಂದು. ಈ ಪದ್ಯಭಾಗವು ಹಾಸ್ಯದ ವರ್ಣನೆಯಾಗಿದೆ.

ಅರಗಿನ ಅರಮನೆಯಿಂದ ತಪ್ಪಿಸಿಕೊಂಡ ಪಾಂಡವರು, ವಿವಿಧೆಡೆ ಬ್ರಾಹ್ಮಣರ ವೇಷ ಧರಿಸಿಕೊಂಡು ಜೀವಿಸಿ, ದ್ರೌಪದಿಯನ್ನು ವರಿಸಿದ ನಂತರ ಹಸ್ತಿನಾಪುರವನ್ನು ಪ್ರವೇಶಿಸುತ್ತಾರೆ. ಹಸ್ತಿನಾಪುರದಲ್ಲಿ ಮಯ ಎಂಬ ದೇವ ಶಿಲ್ಪಿ ಪಾಂಡವರಿಗೆ ಸುಂದರವಾದ ಒಂದು ಭವ್ಯ ಅರಮನೆಯನ್ನು ನಿರ್ಮಿಸಿಕೊಡುತ್ತಾನೆ. ಈ ಭವ್ಯ ಅರಮನೆಯ ಸೌಂದರ್ಯ ವರ್ಣನೆ ಹಾಗೂ ದುರ್ಯೋಧನನು ಹೇಗೆ ಅರಮನೆಯನ್ನು ನೋಡಿ ನಗೆಪಾಟಲಿಗೆ ಸಿಲುಕಿ ನಾಚಿಕೆಗೆ ಗುರಿಯಾದನು ಎಂಬ ಸಂದರ್ಭವನ್ನು ಇಲ್ಲಿ ವರ್ಣಿಸಲಾಗಿದೆ.



10th_Kannada_Reader1-5.indd 125 03-04-2019 14:08:01

ಏನನೆಂಬೆನು ಬೊಪ್ಪ ಕುಂತೀ
ಸೂನುಗಳ ಸಾಮರ್ಥ್ಯಪಣವನು
ದಾನವಾರಿಯ ಹಾಸು ಹೊಕ್ಕಿನ ಸೌಖ್ಯ ಸಂಗತಿಯ
ತಾ ನಪುಂಸಕನಾದ ಪರಿಯನ
ದೇನು ವಿಸ್ತರಿಸುವೆನು ಲಜ್ಜಾ
ಮಾನಿನಿಗೆ ತನ್ನೊಕ್ಕತನವಿಂದಿಳಿದು ಹೋಯ್ತೆಂದ ||1||

ನೆಗೆದ ಬುಗುಟದೆ ಹಣೆಯಲವರೋ
ಲಗದ ಸಭೆಯಲಿ ನನೆದ ಸೀರೆಯ
ತೆಗೆಸಿ ಕೊಟ್ಟರು ತಮ್ಮ ಮಡಿವರ್ಗದ ನವಾಂಬರವ
ಬೆಗಡುಗೊಳಿಸಿದರೆನ್ನನವರೋ
ಲಗದ ಸೂಳೆಯರವರ ಸೂಳಿನ
ನಗೆಯ ನೆನೆ ನೆನೆದೆನ್ನ ಮನ ಜರ್ಝರಿತವಾಯ್ತೆಂದ ||2||

ಇದಕೆ ಕಾರಣವೇನು ಹಣೆ ನೊಂದು
ದುದಕೇನು ನಿಮಿತ್ತವೆನಲಾ
ಸದನದಲಿ ಮಯನಿತ್ತ ಸಭೆಯನು ದೇವರರಿಯಿರಲೆ
ಮುದದಿನಾ ಧರ್ಮಜನು ಘನ ಸಂ
ಪದದಲೋಲಗವಿತ್ತನಾ ದ್ರೌ
ಪದಿ ನಿಜಾನುಜ ಮಂತ್ರಿ ಸಚಿವ ಪಸಾಯಿತರು ಸಹಿತ ||3||

ಆ ಮಹಾಸಭೆ ದೇವ ನಿರ್ಮಿತ
ರಾಮಣೀಯಕ ವಿವಿಧ ರತ್ನ
ಸ್ತೋಮ ತೇಜಃ ಪುಂಜ ಭಂಜಿತ ನಯನ ವೀಥಿಯಲಿ
ಸಾಮದಲಿ ನಮ್ಮನು ಯುಧಿಷ್ಠಿರ
ಭೂಮಿಪತಿ ಕರೆಸಿದನು ತನ್ನು
ದ್ಧಾಮ ವಿಭವವನೆನಗೆ ತೋರಲು ತತ್ಸಭಾಸ್ಥಳಕೆ ||4||

10th_Kannada_Reader1-5.indd 126 03-04-2019 14:08:01

ಹರಹಿನಲಿ ಹಿರಿದಾಯ್ತು ಕೆಂದಾ
ವರೆಯ ವನ ಬೇರೊಂದು ತಾಣದೊ
ಳುರವಣಿಯ ಬೆಳದಿಂಗಳೌಕಿದುದೊಂದು ತಾಣದಲಿ
ಹರಿವ ಯಮುನಾ ನದಿಯನಲ್ಲಿಗೆ
ತರಿಸಿದವರಾರೆನಲು ಮಣಿ ಬಂ
ಧುರದ ಬೆಳಗಿನ ಲಹರಿ ಮುರಿದುದು ತನ್ನ ಜಾಣುಮೆಯ ‖5‖

ಹೊಕ್ಕ ಸಾಲಲಿ ಹೊಳೆವ ಮಣಿರುಚಿ
ಮುಕ್ಕುಳಿಸಿದವು ಕಂಗಳನು ನಡೆ
ದಿಕ್ಕೆಲನ ನೋಡಿದರೆ ಮುರಿದೊಳಸರಿದವಾಲಿಗಳು
ಉಕ್ಕುವಮಲಚ್ಛವಿಗಳಲಿ ಮನ
ಸಿಕ್ಕಿ ಹೊಲಬಳಿದುದು ವಿವೇಕವ
ಡೊಕ್ಕರಿಸಿ ಕೆಡಹಿದವು ಬಹುವಿಧ ರತ್ನಕಾಂತಿಗಳು ‖6‖

ಹಿಡಿದವೆನ್ನೂಹೆಯನು ಮಣಿ ರುಚಿ
ಯೆಡತರದೊಳಿಕ್ಕಿದವು ಭಿತ್ತಿಯ
ಬಿಡೆಯದಲಿ ಝಳಪಿಸುವ ನೀಲದ ಲಳಿಯ ಲಹರಿಯಲಿ
ತಡಿಯ ಕಾಣೆನು ತಳಿತ ಕಾಂತಿಯ
ಕಡಲ ವಿಮಲ ಸ್ಫಟಿಕ ಜಲದಲಿ
ಮಿಡುಕಲಂಜಿದವಂಘ್ರಿಗಳು ನರನಾಥ ಕೇಳೆಂದ ‖7‖

ಸ್ಥಳವೆ ಜಲರೂಪದಲಿ ಜಲವೇ
ಸ್ಥಳದ ಪಾಡಿನಲಿದ್ದುದದು ಕೆಲ
ಬಲನ ಭಿತ್ತಿಯ ಕಂಬಕಂಬದ ನಡುವೆ ಭಿತ್ತಿಗಳು
ಹೊಳಹನೇ ಕಂಡೆನು ವಿವೇಕದ
ಕಳಿವು ಚಿತ್ತದ ಸೆರೆ ದುಹಾರದೊ
ಳಿಳಿದವಕ್ಷಿಗಳಿಂತು ಸೋತೆನು ತಂದೆ ಕೇಳೆಂದ ‖8‖

10th_Kannada_Reader1-5.indd 127 03-04-2019 14:08:01

ಮುಂದೆ ವಿಮಲ ಸ್ಫಟಿಕ ಭೂಮಿಯ
ದೊಂದು ಠಾವಿನೊಳೀಕ್ಷಿಸುತೆ ಕೊಳ
ನೆಂದು ಬಗೆದೆನು ನಿಂತು ಸಂವರಿಸಿದೆನು ಮುಂಜೆರಗ
ಅಂದು ದ್ರೌಪದಿ ಸಹಿತ ನಾರೀ
ವೃಂದ ಕೈಗಳ ಹೊಯ್ದು ಮಿಗೆ ಗೊ
ಳ್ಳೆಂದು ನಕ್ಕುದು ನೊಂದು ತಲೆವಾಗಿದೆನು ಲಜ್ಜೆಯಲಿ ‖9‖

ಊಹೆಯಲಿ ತಡವರಿಸಿ ಹೆಜ್ಜೆಯ
ಗಾಹುಗತಕದೊಳಿಡುತ ಕಾಂತಿಯ
ಸೋಹೆಯರಿದೆ ಬೀದಿಯಲಿ ಕಂಡೆನು ಸರೋವರವ
ಆ ಹರಿಬವನು ಮುರಿವೆನೆಂದಿದ
ನೂಹಿಸದೆ ನಾ ಸ್ಫಟಿಕವೆಂದು
ತ್ಸಾಹಿಸಲು ನೀರಾಯ್ತು ನನೆದೆನು ನಾಭಿದಘ್ನದಲಿ ‖10‖

ಮತ್ತೆ ಗೊಳ್ಳೆಂದುದು ನೃಪಾಲನ
ಮತ್ತ ಕಾಶಿನಿಯರು ಯುಧಿಷ್ಠಿರ
ನಿತ್ತ ದಿವ್ಯ ದುಕೂಲವನು ತಡಿಗಡರಿ ತೊಡಚಿದೆನು
ಬತ್ತಿತೆನ್ನಭಿಮಾನ ಜಲನಿಧಿ
ಮತ್ತೆ ಮಾರಿಯ ಮಸಕವನು ನೀ
ವಿತ್ತವಿಸಿರೇ ಬೊಪ್ಪಯೆಂದನು ಕೌರವರ ರಾಯ ‖11‖

ನಂಬಿಸಿದುದೊಂದೆಡೆಯ ಬಾಗಿಲು
ಬಿಂಬಿಸಿತು ಭಿತ್ತಿಯಲಿ ತತ್ಪ್ರತಿ
ಬಿಂಬವೆಂದಾನರಿಯದೊಡಹಾಯಿದೆನು ಚೌಕಿಗೆಯ
ಎಂಬೆನೇನನು ಹೊರಳಿ ನಗುವ ನಿ
ತಂಬಿನಿಯರನು ಭೀಮ ಪಾರ್ಥರ
ಡಂಬರವ ಕಂಡಸುವ ಹಿಡಿದೆನು ನೋಡಿಕೊಳ್ಳೆಂದ ‖12‖

10th_Kannada_Reader1-5.indd 128 03-04-2019 14:08:01



ನೊಂದುದೇ ಹಣೆ ಮನದೊಳಗೆ ಕಡು
ನೊಂದೆನವದಿರ ನಗೆಗೆ ನಡೆದೆನು
ಮುಂದಣೋವರಿ ಬಾಗಿಲನು ಕಂಡೆನ್ನ ಮನದೊಳಗೆ
ಹಿಂದೆ ಹೇರಿದ ಭಂಗವೇ ಸಾ
ಕೆಂದು ಸುಪ್ರೌಢಿಯಲಿ ಬಾಗಿಲ
ನೊಂದು ಠಾವಿನೊಳರಸಿ ತಡವರಿಸಿದೆನು ಭಿತ್ತಿಗಳ ||13||

ನಗೆಗೆ ನಗೆ ಕುಂಟಣಿ ವಿವೇಕದ
ಹೊಗೆಗೆ ಹೊಗೆ ಸಖಿಯಾದುದಲ್ಲಿಯ
ಹಗರಣಿಗ ನಾನಾದೆನದು ನೋಟಕದ ಜನವಾಯ್ತು
ನಗುವವರ ಜರೆದನೆ ಯುಧಿಷ್ಠಿರ
ನಗೆಯ ಮರೆದನೆ ಬೊಪ್ಪ ನಿಮ್ಮಯ
ಮಗನವಸ್ಥಾರೂಪವಿದು ಚಿತ್ತವಿಸಿ ನೀವೆಂದ ||14||

ಒಡ್ಡವಿಸಿದೆನ್ನಾಟ ನಗೆಯೊಳ
ಗಡ್ಡ ಬಿದ್ದಳು ಪಾಂಡು ಪುತ್ರರ
ಬೊಡ್ಡಿ ಬಿಂಕದಲವರು ಬಿರಿದರು ಭೀಮ ಫಲುಗುಣರು
ಖಡ್ಡಿ ಗರುವೆನ್ನಿಂದ ರೋಷದ
ಗೊಡ್ಡು ನಾನಾದೆನು ವಿಘಾತಿಯ
ಬಡ್ಡಿಗಿನ್ನಕ ಬದುಕಿದೆನು ಧೃತರಾಷ್ಟ್ರ ಕೇಳೆಂದ ||15||

10th_Kannada_Reader1-5.indd 129 03-04-2019 14:08:01

ಕವಿ ಕಾವ್ಯ ವಿಚಾರ



ಕುಮಾರವ್ಯಾಸ

ಈತನ ಕಾಲ ಕ್ರಿ.ಶ. ಸುಮಾರು 1430. ಕುಮಾರವ್ಯಾಸನ ನಿಜವಾದ ಹೆಸರು ಗದುಗಿನ ನಾರಣಪ್ಪ. ಗದಗ ಜಿಲ್ಲೆಯ ಕೋಳಿವಾಡದವನು. ಈತನು 'ಕರ್ಣಾಟ ಭಾರತ ಕಥಾ ಮಂಜರಿ' (ಗದುಗಿನ ಭಾರತ) ಎನ್ನುವ ಕಾವ್ಯವನ್ನು ರಚಿಸಿದ್ದಾನೆ. ಈತನು ಗದುಗಿನ ವೀರನಾರಾಯಣನ ಪರಮಭಕ್ತ. ಕೃಷ್ಣಭಕ್ತಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾನೆ. ಇವನಿಗೆ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ನೀಡಲಾಗಿದೆ. ವ್ಯಾಸರ ಬಗೆಗಿನ ಗೌರವಕ್ಕಾಗಿ ಈತ ತನ್ನನ್ನು ತಾನು ಕುಮಾರವ್ಯಾಸ ಎಂದು ಕರೆದುಕೊಂಡಿದ್ದಾನೆ. ಇವನ ಕಾವ್ಯವು ಕನ್ನಡದ ಶ್ರೇಷ್ಠ ಕೃತಿಗಳಲ್ಲೊಂದಾಗಿದೆ. 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿಯುವುದು, ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು. ಕಲಿ ಕೆಚ್ಚಾಗುವನು, ಕವಿ ಹುಚ್ಚಾಗುವನು' ಎಂದು ಕವಿ ಕುವೆಂಪು ಹೇಳಿರುವುದು ಈ ಕಾವ್ಯದ ಜನಪ್ರಿಯತೆಯನ್ನು ಹಾಗೂ ಮಹತ್ವವನ್ನು ಸೂಚಿಸುತ್ತದೆ. ಈತ ಭಾಮಿನಿ ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿದ್ದಾನೆ.

ಪ್ರಸ್ತುತ ಈ ಕಾವ್ಯ ಭಾಗವನ್ನು ಕುಮಾರವ್ಯಾಸ ಭಾರತದ ಸಭಾ ಪರ್ವದ ಹನ್ನೆರಡನೆಯ ಸಂಧಿಯಿಂದ ಆರಿಸಲಾಗಿದೆ.

ಪದಗಳ ಅರ್ಥ

1. ಬೊಪ್ಪ–ತಂದೆ, ಒಡೆಯ; ಸೂನು–ಮಗ; ದಾನವಾರಿ–ಕೃಷ್ಣ; ಮಾನಿನಿ–ಹೆಂಗಸು.
2. ಬುಗುಟು–ಉಬ್ಬಿರುವುದು; ಓಲಗ–ರಾಜನ ಸಭೆ; ಸೂಳಿನ–ಅವಕಾಶದ, ಸರದಿಯ.
3. ಪಸಾಯತ–ದೊರೆಯ ವಸ್ತ್ರಾಲಂಕಾರದ ಮೇಲ್ವಿಚಾರಕ.
4. ಸ್ತೋಮ–ಗುಂಪು; ತೇಜಃಪುಂಜ–ಕಾಂತಿಯ ಮೊತ್ತ; ಸಾಮ–ಚತುರೋಪಾಯಗಳಲ್ಲಿ ಒಂದು.
5. ಹರಹು–ವ್ಯಾಪ್ತಿ, ಹರಡು; ಲಹರಿ–ಅಲೆ, ಒಲವು.
6. ಹೊಲಬು–ದಾರಿ.
7. ಲಳಿ–ಆವೇಶ, ಉತ್ಸಾಹ, ಚುರುಕು; ಅಂಘ್ರಿ–ಕಾಲು, ಹೆಜ್ಜೆ.
8. ವಕ್ಷ–ಎದೆ.
9. ಠಾವು–ನೆಲೆ; ಲಜ್ಜೆ–ನಾಚಿಕೆ.
10. ಊಹೆ–ಅಂದಾಜು, ಎಣಿಕೆ; ಸೋಹೆ–ಸೂಚನೆ; ಹರಿಬ–ಕಾರ್ಯ, ಉಪಾಯ; ನಾಭಿ–ಹೊಕ್ಕಳು.
11. ದುಕೂಲ–ರೇಷ್ಮೆ ಬಟ್ಟೆ.
12. ಚೌಕಿ–ಮನೆಯ ಅಂಗಳ, ನಿತಂಬಿನಿ–ಚೆಲುವೆ; ಅಸು–ಪ್ರಾಣ;
13. ಭಂಗ–ಸೋಲು, ನಾಶ.
14. ಹಗರಣಿಗ–ಬೀದಿಯಲ್ಲಿ ನಾಟಕ ಮಾಡುವವ, ಗೊಂದಲದಲ್ಲಿರುವವನು; ಜರೆ–ಮುಪ್ಪು, ನಿಂದಿಸು; ಬೊಪ್ಪ–ತಂದೆ;
15. ಗೊಡ್ಡು–ನಿಷ್ಫಲವಾದ; ವಿಘಾತಿ–ಪೆಟ್ಟು, ನಾಶ.

10th_Kannada_Reader1-5.indd 130 03-04-2019 14:08:01

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕುಂತೀಪುತ್ರರು ಯಾರ್ಯಾರು ?
2. ಪಾಂಡವರಿಗೆ ನೂತನವಾದ ಅರಮನೆಯನ್ನು ನಿರ್ಮಿಸಿದವರ್ಯಾರು ?
3. ದುರ್ಯೋಧನನು ಕೊಳವನ್ನು ಕಂಡು ಏನು ಮಾಡಿದನು ?
4. ದುರ್ಯೋಧನನು ನೀರಿನಲ್ಲಿ ಮುಳುಗಲು ಏನಾಯ್ತು ?
5. ದುರ್ಯೋಧನನು ಬಾಗಿಲು ಎಂದುಕೊಂಡು ಏಟು ಮಾಡಿಕೊಂಡದ್ದು ಹೇಗೆ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ದುರ್ಯೋಧನನ ಮನವು ಜರ್ಝರಿತವಾಗಲು ಕಾರಣವೇನು?
2. ಅರಮನೆಯ ಮಹಾಸಭೆಯು ಹೇಗೆ ಕಂಗೊಳಿಸುತ್ತಿತ್ತು?
3. ಅರಮನೆಯ ಒಳಗಿನ ಜಲ–ಕೊಳಗಳು ಹೇಗೆ ಕಂಗೊಳಿಸುತ್ತಿದ್ದವು?
4. ದುರ್ಯೋಧನನು ಸ್ಫಟಿಕ ಭೂಮಿಯನ್ನು ಕಂಡು ಏನೆಂದು ಭಾವಿಸಿದನು ?
5. ಕುಮಾರವ್ಯಾಸನ ಪರಿಚಯ ಮಾಡಿಕೊಡಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಯನು ನಿರ್ಮಿಸಿದ ಅರಮನೆಯ ವೈಭವವನ್ನು ವರ್ಣಿಸಿರಿ.
2. ಪಾಂಡವರೂ ದ್ರೌಪದಿಯೂ ದುರ್ಯೋಧನನನ್ನು ಕಂಡು ನಗಲು ಕಾರಣವೇನು? ವಿವರಿಸಿ.
3. ದುರ್ಯೋಧನನು ಅವಮಾನಿತನಾಗಲು ಕಾರಣವೇನು?
4. ಈ ಪದ್ಯದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ದಾನವ, ಮಾನಿನಿ, ಕಡಲು, ನಯನ, ನೃಪಾಲ.

2. ಕೆಳಗಿನ ಪದಗಳಿಗೆ ತತ್ಸಮ ತದ್ಭವ ಬರೆಯಿರಿ.

ವನ, ಜಾಣುಮೆ, ಭೂಮಿ, ರತ್ನ, ಕಂಬ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಸಚಿವ, ಸಾಮರ್ಥ್ಯ, ದಾನವ, ವಿವೇಕ, ಸೌಖ್ಯ, ಉತ್ಸಾಹ.

4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಏನನೆಂಬೆನು, ನವಾಂಬರ, ಬೀದಿಯಲ್ಲಿ, ನೀರಾಯ್ತು, ಮನದೊಳಗೆ.

5. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಮಾಸವನ್ನು ಹೆಸರಿಸಿ.

ಕೆಂದಾವರೆ, ಮುಂಜೆರಗು, ತಲೆಬಾಗು, ಭೀಮಫಲುಗುಣರು, ದಾನವಾರಿ.

6. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಸಾಮರ್ಥ್ಯ, ತಲೆಬಾಗು, ಅಭಿಮಾನ, ವಿವೇಕ, ಬದುಕು.

ಚಟುವಟಿಕೆ

1. ಮಹಾಭಾರತದ ಕಥೆಯನ್ನು ಓದಿ ತಿಳಿದುಕೊಳ್ಳಿರಿ.
2. ಮಹಾಭಾರತದ ಕಥೆಯನ್ನು ನಾಟಕ ರೂಪದಲ್ಲಿ ಅಭಿನಯಿಸಿ.

10th_Kannada_Reader1-5.indd 131 03-04-2019 14:08:01

ಗದ್ಯ ವಿಹಾರ

ಘಟಕ ಏಳು

ನಿರ್ಮಲ ಧರ್ಮದಿಂ ಪಾಲಿಸು ಧರೆಯಂ

– ಮೂಲ : ಜನ್ನನ 'ಯಶೋಧರ ಚರಿತೆ')
– (ಗದ್ಯಾನುವಾದ : ಜಾನ್‌ಸನ್ ಸುಕುಮಾರ್)



ಕನ್ನಡ ಸಾಹಿತ್ಯದಲ್ಲಿ ಜನ್ನ ಕವಿಯದು ವಿಶಿಷ್ಟ ಹೆಸರು. ಜನ್ನನ 'ಯಶೋಧರ ಚರಿತೆ' ಜೀವ ದಯೆಯನ್ನು ಚಿತ್ರಿಸುವ, ಅಹಿಂಸಾ ತತ್ವವನ್ನು ನಿರೂಪಿಸುವ ಕೃತಿ. ಇದರಲ್ಲಿ ಜನ್ಮಾಂತರಗಳ ದೈಹಿಕ – ಮಾನಸಿಕ ಹಿಂಸೆಯ ಕಥನವಿದೆ. ಹಿಂಸೆಯ ದುಷ್ಫಲ ಅಹಿಂಸೆಯ ಸತ್ಫಲಗಳನ್ನು ತಿಳಿಸುವ ಧಾರ್ಮಿಕ ಕಾವ್ಯ ಇದಾಗಿದೆ.

ಅಹಿಂಸೆ, ಹಿಂಸೆಯ ಮೇಲೆ; ಧರ್ಮ, ಅಧರ್ಮದ ಮೇಲೆ; ನ್ಯಾಯ, ಅನ್ಯಾಯದ ಮೇಲೆ; ನೀತಿ, ಅನೀತಿಯ ಮೇಲೆ ಜಯ ಸಾಧಿಸಬೇಕೆಂಬುದು ಲೋಕದ ಆಶಯ. ಈ ಆಶಯಕ್ಕನುಸಾರ ಕೆಟ್ಟವುಗಳಿಂದ ಸದಾ ಎಚ್ಚರದಿಂದ ಇರಬೇಕು. ಸ್ವಲ್ಪ ಮೈಮರೆತು ಪಾಪಕ್ಕೆ ಗುರಿಯಾದರೂ ನರಕವನ್ನು ಅನುಭವಿಸಬೇಕಾದೀತು. ಆದುದರಿಂದ ಸತ್ಯ ಮಾರ್ಗ ಹಾಗೂ ಅಹಿಂಸಾ ಮಾರ್ಗದಲ್ಲಿ ಜೀವನ ನಡೆಸಬೇಕು. ತಾಳ್ಮೆ ಮತ್ತು ಅಹಿಂಸೆಯನ್ನು ತಿಳಿಸುವುದು ಈ ಕಥೆಯ ಆಶಯವಾಗಿದೆ.



10th_Kannada_Reader1-5.indd 132 03-04-2019 14:08:01

ಸಂಪದ್ಭರಿತವಾದ ಭರತ ಖಂಡದಲ್ಲಿ ಅತ್ಯಂತ ಪ್ರಸಿದ್ಧವಾದ ಅಯೋಧ್ಯಾ ದೇಶವಿತ್ತು. ಅದರ ರಾಜಧಾನಿ ರಾಜಪುರ. ರಾಜಪುರವು ಸಕಲ ಸಂಪತ್ಸಮೃದ್ಧಿಗೂ ಜನ್ಮಭೂಮಿಯಾಗಿ, 'ತ್ಯಾಗದ ತವರು, ಭೋಗದ ಭವನ' ಎಂಬಂತಿತ್ತು. ಮಾರಿದತ್ತ ಅದರ ಅರಸ. ಆ ರಾಜಪುರದ ದಕ್ಷಿಣದಲ್ಲಿ ಚಂಡಮಾರಿ ಎಂಬ ಹೆಸರಿನ ದೇವತೆ ನೆಲೆಸಿದ್ದಳು. ಇವಳು ಆ ಊರಿನ ದೇವತೆ. ಆಕೆಗೆ ಪ್ರತಿ ಚೈತ್ರ–ಅಶ್ವಯುಜ ಮಾಸಗಳಲ್ಲಿ ಜಾತ್ರೆ ನಡೆಯುತ್ತಿತ್ತು. ಅನೇಕ ಜೀವಿಗಳ ಹತ್ಯೆಯೇ ಅವಳಿಗೆ ಸುಖೋದ್ದೀಪನ. ಪಾಪದ ಕಲೆಯಲ್ಲಿ ಪಾಂಡಿತ್ಯ ಅವಳದ್ದು. ಚೈತ್ರ ಮಾಸದಲ್ಲಿ ಜಾತ್ರೆ ನಡೆಯದಿದ್ದರೆ ಆ ದೇವತೆಯು ಕೋಪಗೊಂಡು ಅಲ್ಲಿಯವರನ್ನೆಲ್ಲ ಸಂಪೂರ್ಣವಾಗಿ ಧ್ವಂಸಗೊಳಿಸಿಯಾಳು.

ಒಮ್ಮೆ ಚೈತ್ರ ಮಾಸವು ಬಂದಿತು. ಮೂಡಿ ಬಂದ ಬಾಲಚಂದ್ರನೇ ದೇವಿಯ ಅರ್ಚನೆಗಾಗಿ ಬಳಸುವ ತಲೆಯ ಗಾಳದಂತಿರಲು, ಚಿಗುರಿದ ಅಶೋಕದ ಮರವು ಬೆಂಕಿಯ ಉಯ್ಯಾಲೆಯಾಗಿರಲು, ಕೋಗಿಲೆಗಳು ಕೂಗುವ ಧ್ವನಿಯೇ ಮೂದಲೆಯ ಮಾತಾಗಿರಲು ವಸಂತ ಋತುವು ಮೂಡಿ ಬಂದಿತು. ಆ ದೇವಿಗೆ ಹರಕೆಯೊಪ್ಪಿಸುವುದಕ್ಕಾಗಿ ಶಿಶಿರವನ್ನೇ ಹಿಡಿದು ಹೂಬಿಟ್ಟ ಮಾವಿನ ಮರದ ಅಡಿ ಮಂಚಿಕೆಯಲ್ಲಿ ಅವನನ್ನು ಕೊಚ್ಚಿ ಕೊಚ್ಚಿ ಕತ್ತರಿಸಿ ಹಾಕಿದ ಮಾಂಸದ ರಾಶಿಯೆಂಬಂತೆ ಆ ವನದಲ್ಲಿ ಉದುರಿಬಿದ್ದ ಮುತ್ತುಗದ ಮೊಗ್ಗೆಗಳು ಕೆಂಪಾಗಿ ತೋರುತ್ತಿದ್ದವು. ವನದಲ್ಲಿಯ ಅರಗಿಳಿಗಳು ಗಟ್ಟಿಯಾಗಿ ಈ ರೀತಿಯಾಗಿ ಉಲಿಯುತ್ತಿದ್ದವು: 'ಎಲೆ ಮಾರಿ ದೇವತೆಯೇ! ಮಲಯಮಾರುತನು ಹೊಸ ತಾವರೆಗಳ ಸಮೂಹವೆಂಬ ಕೆಂಡದಲ್ಲಿ ದೀರ್ಘದಂಡ ನಮಸ್ಕಾರ ಮಾಡುತ್ತಾ ಬರುತ್ತಿದ್ದಾನೆ. ಈ ಕಡೆ ಗಮನವಿಡು' ಎಂದು. ಈ ರೀತಿಯಾಗಿ ಮೂಡಿ ಬಂದ ವಸಂತಕಾಲದಲ್ಲಿ ಮಾರಿದತ್ತ ರಾಜನೂ ಆತನ ಜನರೂ ಒಂದಾಗಿ ಚಂಡಮಾರಿಗೆ ಸಂತೋಷವನ್ನುಂಟು ಮಾಡಲು ಜಾತ್ರೆಯನ್ನು ನೆರವೇರಿಸಲು ಅಲ್ಲಿಗೆ ಸೇರಿದರು.

ಖಡ್ಗದಿಂದ ರಕ್ತಬಲಿಯನ್ನು ನೀಡುವ ಹಾಗೂ ಬೇರೆ ಬೇರೆ ಹರಕೆಯನ್ನೊಪ್ಪಿಸುವ ಲಕ್ಷೋಪಲಕ್ಷ ದೇವಿಯ ಭಕ್ತರು ಒಂದಾಗಿ ಸೇರಿ, ರಾಜನೊಡನೆ ದೇವಿಯ ಗುಡಿಯ ಪ್ರದಕ್ಷಿಣೆ ಬಂದು ಬಂದು ದೇವಿಗೆ ನಮಸ್ಕರಿಸಿದರು. ಅನಂತರ ದೇವಾಲಯದ ರಂಗಮಂಟಪದಲ್ಲಿ ಮಾರಿದತ್ತನು ನಿಂತುಕೊಂಡು ಚಂಡಕರ್ಮ ಎನ್ನುವ ತಳಾರನನ್ನು ಕರೆದು, 'ದೇವಿಗೆ ಬಲಿ ಕೊಡಬೇಕು. ಇಬ್ಬರು ಮನುಷ್ಯರನ್ನು ಹಿಡಿದುಕೊಂಡು ಬಾ' ಎಂದು ಹೇಳುತ್ತಾನೆ. ಪದ್ಧತಿಯ ಪ್ರಕಾರ ರಾಜನು ಮೊಟ್ಟ ಮೊದಲು ಬಲಿ ನೀಡಬೇಕು. ಇಲ್ಲದಿದ್ದರೆ ದೇವಿಯ ಕೋಪಕ್ಕೆ ಒಳಗಾಗಬೇಕಾಗುತ್ತಿತ್ತು.

ಮಾರಿದತ್ತನು ಚಂಡಕರ್ಮನಿಗೆ ಆಜ್ಞಾಪಿಸಿದ ಕೂಡಲೇ, ಎಳೆಯ ವಯಸ್ಸಿನ ಶುಭಲಕ್ಷಣವುಳ್ಳ ಬುದ್ಧಿವಂತರಾದ ಒಳ್ಳೆಯ ವಂಶದಲ್ಲಿ ಹುಟ್ಟಿದ ಮಾನವ ಜೋಡಿಯನ್ನು ಹುಡುಕುತ್ತಾ ಮಾರಿಯ ಬನದಿಂದ ಹೊರಟನು.

ಇತ್ತ ಸುದಾತ್ತಾಚಾರ್ಯ ಎಂಬ ಜೈನ ಗುರುಗಳು ಐನೂರು ಮಂದಿ ಶಿಷ್ಯರನ್ನು ಕೂಡಿಕೊಂಡು ರಾಜಪುರ ರಾಜಧಾನಿಯ ಉಪವನಕ್ಕೆ ಬಂದು ಅಲ್ಲಿಯೇ ತಂಗಿದ್ದರು. ಅವರ ಗುಣ ಮನೋನಿಗ್ರಹ, ತಪಶ್ಚರಣ ಎಂಬುವುಗಳು. ಅದು ಅಂತಿಂಥ ಸಾಮಾನ್ಯರಿಗೆ ನಿಲುಕುವಂತಹುದಲ್ಲ. ಅವರು ಅಸಾಮಾನ್ಯರಾಗಿದ್ದರು. ಈ ಮುನಿಗಳು ವ್ರತದ ಅಂಗವಾಗಿ ಉಪವಾಸವನ್ನು ಮಾಡುತ್ತಿದ್ದರು. ಅನಂತರ ತಮ್ಮ ಶಿಷ್ಯರಾಗಿದ್ದ ಇಬ್ಬರು ಮಕ್ಕಳನ್ನು ಕರೆದು ಭಿಕ್ಷೆ ತರುವಂತೆ ಹೇಳಿ ಕಳುಹಿಸಿದರು.

ಆ ಮಕ್ಕಳ ಹೆಸರು ಅಭಯರುಚಿ ಮತ್ತು ಅಭಯಮತಿ. ಇವರಿಬ್ಬರೂ ಯಶೋಮತಿ ಎನ್ನುವ ಅರಸನ ಅವಳಿ ಮಕ್ಕಳು. ಇವರು ಬಾಲ್ಯದಲ್ಲಿಯೇ ಜಿನದೀಕ್ಷೆಯನ್ನು ಪಡೆದುಕೊಂಡಿದ್ದರು. ಆ ಮಕ್ಕಳು ಗುರುಗಳ ಪಾದಕ್ಕೆ ನಮಿಸಿ, ಅಲ್ಲಿಂದ ಹೊರಟರು. ಇದೇ ಸಮಯದಲ್ಲಿ ಚಂಡಕರ್ಮನು ಎಳೆಯರ ಹುಡುಕಾಟದಲ್ಲಿ ತೊಡಗಿದ್ದು, ಇವರನ್ನು ಕಂಡೊಡನೆ 'ಎಳೆಯ ಜಿಂಕೆಯ ಮರಿಗಳನ್ನು ಹುಲಿಯು ಹಿಡಿಯುವಂತೆ' ಹಿಡಿದನು. ಹಿಡಿದ ಕೂಡಲೇ ಆ ಎಳೆಯರಿಗೆ ಅವರನ್ನು ಹಿಡಿದುಕೊಂಡು ಹೋಗುವಂತಹ ಉದ್ದೇಶದ ಅರಿವಾಯಿತು. ಅವರಿಗೆ ತಮ್ಮನ್ನು ಬಲಿ ಕೊಡಲಿದ್ದಾರೆ ಎಂಬುದು ತಿಳಿಯಿತು.

ಆಗ ಅಭಯರುಚಿಯು ತನ್ನ ತಂಗಿಯಾದ ಅಭಯಮತಿಗೆ, 'ಎಲೆ ತಂಗೀ, ನಮ್ಮಯ ಸಾವು ಸಮೀಪಿಸಿತೆಂದು ಭಯ ಪಡಬೇಡ. ವಿಧಿ ನಿಯಮವನ್ನು ಮೀರುವವರು ಯಾರಿದ್ದಾರೆ. ಅದಕ್ಕೆ ಅಂಜಿದರೆ ಆಗದು.

10th_Kannada_Reader1-5.indd 133 03-04-2019 14:08:01

ಅದನ್ನು ಸಹಿಸಿಕೊಳ್ಳುವುದೇ ನ್ಯಾಯ. ಒದಗಿ ಬರುವ ಸವಾಲುಗಳನ್ನು ಜಯಿಸುವುದೇ ತಪಸ್ಸು' ಎಂದೆಲ್ಲಾ ಹೇಳಿ ಅವಳನ್ನು ಸಮಾಧಾನ ಮಾಡಲು ಪ್ರಯತ್ನಿಸಿದನು. ಅಣ್ಣನ ಮಾತನ್ನು ಕೇಳಿ ಅಭಯಮತಿಯು, 'ಅಣ್ಣಾ, ನಾವು ಮಾಡಿದುದರ ಪ್ರತಿಫಲವನ್ನು ನಾವು ಅನುಭವಿಸಲೇ ಬೇಕು. ಅದಕ್ಕಾಗಿ ಭಯ ಪಡುವುದೇಕೆ? ಅಪಾಯದ ಕೋಟಿಗಳು ಎಷ್ಟಿವೆಯೋ ಅದಕ್ಕೆಲ್ಲಾ ಈ ದೇಹವೇ ಮನೆಯಲ್ಲವೇ?' ಎಂದು ಆಕೆಯೂ ಹೇಳಿದಳು. ಹೀಗೆ ಒಬ್ಬರಿಗೊಬ್ಬರು ಸಮಾಧಾನ ಪಡಿಸಿಕೊಂಡು ಚಂಡಕರ್ಮನ ಜೊತೆ ಮಾರಿಯ ಮನೆಯನ್ನು ಪ್ರವೇಶಿಸಿದರು. ಆ ಮಾರಿಗುಡಿಯು ಹೇಗಿತ್ತೆಂದರೆ, 'ಅದು ಯಮನ ಅಡುಗೆಯ ಮನೆಯಂತಿತ್ತು. ಅಂಗೈಗಳನ್ನೂ ಅಂಗಾಲುಗಳನ್ನೂ ಕತ್ತರಿಸಿ ಇಡುವ ವೀರರು ಕೆಲವರು, ಕಣ್ಣನ್ನು ಕಿತ್ತು ದೇವಿಗೆ ಏರಿಸುವ ವೀರರು ಕೆಲವರು, ಕರುಳನ್ನು ಹೊರಕ್ಕೆಳೆದು ತೋರಣವಾಗಿ ಕಟ್ಟುವವರು ಕೆಲವರು, ಕಾಲುಗಳನ್ನು ಉರಿಸಿ ರಕ್ತದಿಂದ ಅನ್ನವನ್ನು ಬೇಯಿಸುವ ಕೆಲವರು – ಹೀಗೆ ಅಲ್ಲಿ ಸುತ್ತಮುತ್ತಲೂ ಜನ ತುಂಬಿಕೊಂಡಿದ್ದರು. ಬಾಯಿಯನ್ನು ಬಗಿದು ಅಂಗುಳು ಕಾಣುವಂತೆ ಮಾಡಿ, ಅಲ್ಲಿಗೆ ಗಾಳವನ್ನು ಚುಚ್ಚಿ, ಆ ಗಾಳವನ್ನು ನೆತ್ತಿಯಲ್ಲಿ ಹೊರಬರುವಂತೆ ಮಾಡಿ, ಎತ್ತರದಲ್ಲಿ ತೂಗಾಡಿಸುವ ವೀರಪುರುಷರು ಸಾಲುಸಾಲಾಗಿ ಕಾಣಿಸುತ್ತಿದ್ದರು. ಹೊಲಗಳಲ್ಲಿ ಪಕ್ಷಿಗಳನ್ನು ಬೆಚ್ಚಿಸಿ ಓಡಿಸುವುದಕ್ಕಾಗಿ ಬೆರ್ಚುಗಳನ್ನು ಕಟ್ಟಿ ನಿಲ್ಲಿಸಿದಂತೆ ಇಲ್ಲಿ ಈ ವೀರರು ಪಾಪದ ಬೆಳೆಯನ್ನು ರಕ್ಷಿಸುವುದಕ್ಕಾಗಿ ನಿಲ್ಲಿಸಲ್ಪಟ್ಟಿದ್ದರು. ಬಲಿಗಾಗಿ ತಂದಿದ್ದ ಆಡು, ಕುರಿ, ಕೋಳಿ, ಕೋಣ ಮುಂತಾದ ಪ್ರಾಣಿಗಳ ಸಮುದಾಯವೆಲ್ಲ ಭಯದಿಂದ ಕರ್ಕಶವಾಗಿ ಅರಚುತ್ತಿದ್ದವು. ಅರಚಾಟದ ಪ್ರತಿಧ್ವನಿ ಆ ವನವನ್ನೆಲ್ಲ ವ್ಯಾಪಿಸಿತ್ತು. ನೆಲವೊಣಗಿ ಸ್ವಾಭಾವಿಕವಾಗಿ ಬಿರುಕು ಬಿಟ್ಟಿತ್ತು. ಆ ಮೂಕ ಪ್ರಾಣಿಗಳ ಸಂಕಟಕ್ಕಾಗಿ ಇಡೀ ಕಾಡೇ ಅಳುವಂತೆ, ದುಃಖದಿಂದ ಭೂಮಿ ಎದೆಯೊಡೆದುಕೊಂಡಂತೆ ಭಾಸವಾಗುತ್ತಿತ್ತು. ಮಾರಿಗುಡಿಯ ಹೊರಗಣ ಪ್ರಾಕಾರದ ಮೇಲೆ ಎಲ್ಲ ದಿಕ್ಕುಗಳಲ್ಲಿಯೂ ಬಲಿಯಾಗಿದ್ದ ಮನುಷ್ಯರ ತಲೆಬುರುಡೆಗಳನ್ನು ಸಾಲಾಗಿ ಇರಿಸಲಾಗಿತ್ತು. ಮಾರಿದೇವಿ ಮಾಂಸವನ್ನು ಬಹಳವಾಗಿ ಬಯಸಿ ಹೊರಗಣ ಜೀವ ಸಮುದಾಯವನ್ನು ಹಲವು ಮುಖಗಳಿಂದ ನೋಡುತ್ತಾಳೋ ಎಂಬಂತೆ ಆ ನೋಟವು ಭಯಂಕರವಾಗಿತ್ತು. ಇವುಗಳ ನಡುವೆ ಭೈರವನ, ಯಮನ ಕೋಣದಂತೆ ಮಾರಿದತ್ತನು ನಿಂತಿದ್ದನು.

ಈ ಚಿತ್ರಣವನ್ನು ನೋಡಿದವರ ಎದೆಯೊಡೆದು ಪ್ರಜ್ಞೆತಪ್ಪಿ ಬೀಳುವಂತೆ ಅಲ್ಲಿನ ದೃಶ್ಯವಿತ್ತು. ಆದರೆ ಈ ಧೀರ ಮಕ್ಕಳು ಇದಾವುದಕ್ಕೂ ಹೆದರದೆ, ಧೈರ್ಯದಿಂದ ಮಾರಿದತ್ತನ ಮುಂದೆ ಹೋಗಿ ನಿಂತರು. ಲಲಿತಾಕಾರರಾದ, ಧೀರರಾದ ಆ ಮಕ್ಕಳ ಸ್ವರೂಪವನ್ನು ಕಂಡು ಮಾರಿದತ್ತನು ಅಚ್ಚರಿಗೊಂಡನು. ಆಗ ಅಲ್ಲಿ ಕೂಡಿದ್ದ ಜನರೆಲ್ಲಾ, 'ಬಲಿಯಾಗುವುದಕ್ಕೂ ಮುಂಚೆ ನಮ್ಮಯ ಅರಸನನ್ನು ಹರಸಿರಿ, ಹರಿಸಿರಿ' ಎಂದು ಬೊಬ್ಬಿಟ್ಟರು. ಆಗ ಧೀರನಾದ ಅಭಯರುಚಿಯು, ಮಂದರಗಿರಿಯಂತೆ ಗಂಭೀರವಾದ ವಾಣಿಯಿಂದ, 'ರಾಜಶ್ರೇಷ್ಠನೇ! ನಿರ್ಮಲ ಧರ್ಮದಿ ಪಾಲಿಸು ಧರೆಯಂ' ಎಂದು ಹರಸಿದನು.

ಮೊದಲೇ ಆ ಮಕ್ಕಳ ರೂಪು, ಧೈರ್ಯವನ್ನು ಕಂಡು ಅಚ್ಚರಿಗೊಂಡಿದ್ದ ಮಾರಿದತ್ತನ ಮನಸ್ಸು ಈ ಮಂಗಳದ ಮಾತುಗಳನ್ನು ಕೇಳಿದ ಕೂಡಲೇ ಸೋತು ಹೋಯಿತು. 'ಈ ದೇವಾಲಯದ ಒಳ ಬಂದವರಿಗೆ ಇಲ್ಲಿನ ಚಿತ್ರಣ ಕಂಡ ಕೂಡಲೇ ಪ್ರಾಣ ಪಕ್ಷಿ ಹಾರಿ ಹೋಗುತ್ತಿತ್ತು. ಆದರೆ ಈ ರೀತಿಯಾಗಿ ಅಂಜದೆ ಅಳುಕದೆ ಧೈರ್ಯದಿಂದ ನನ್ನನ್ನು ಹರಸಿದವರನ್ನು ನಾನಿದುವರೆಗೂ ಕಂಡಿಲ್ಲ. ಇವರು ಧೀರರು. ಇವರ ನಡತೆ ಬಹಳ ಹಿರಿದು. ಇವರಿಗೆ ಈ ಬಗೆಯ ಮನಸ್ಸಿನ ಶಾಂತಿ ಹೇಗೆ ಬಂದಿತು? ಜೋಡಿ ಚಂದ್ರರು ಮಾನವ ರೂಪ ಧರಿಸಿ ಭೂಮಿಯಲ್ಲಿ ಬಂದಂತೆ ಇವರ ಕಾಂತಿ ಮೆರೆಯುತ್ತಾ ಇದೆ' ಎಂದು ಅವನು ಯೋಚಿಸಿದ. ಆ ಮಕ್ಕಳ ಕೊರಳನ್ನು ಕಡಿಯಲು ಎತ್ತಿದ್ದ ಅವನ ಖಡ್ಗ ಅವನಿಗೆ ಅರಿವಿಲ್ಲದೆಯೇ ಕೆಳಕ್ಕೆ ಇಳಿಯಿತು. ಇವರ ವಿಷಯವನ್ನು ಇವರ ಬಗೆಗಿನ ಮಾಹಿತಿಯನ್ನು ತಿಳಿದು ಕೊಳ್ಳುವ ಆತುರದಿಂದ ಮಾರಿದತ್ತನು, 'ಮಕ್ಕಳೇ ನಿಮ್ಮ ಕುಲ ಯಾವುದು? ನೀವು ಯಾರ ಮಕ್ಕಳು? ಎಲ್ಲಿಂದ ಬಂದಿರಿ? ಈ ಎಳೆಯ ವಯಸ್ಸಿನಲ್ಲಿಯೇ ಭಿಕ್ಷಾವೃತ್ತಿಯನ್ನು ಕೈಕೊಂಡುದೇಕೆ?' ಎಂದು ಒಮ್ಮೆಲೇ ಹಲವಾರು ಪ್ರಶ್ನೆಗಳನ್ನು ಕೇಳುತ್ತಾನೆ. ಆಗ ಅಭಯರುಚಿಯು,

10th_Kannada_Reader1-5.indd 134 03-04-2019 14:08:01

'ನಮ್ಮದು ನಿರ್ಮಲವಾದ ಚರಿತೆ. ಧರ್ಮ ಪರವಾಗಿರುವವರಿಗೆ ಮಾತ್ರ ಇದು ರುಚಿಸುವುದೇ ಹೊರತು, ಇತರರಿಗೆ ಇದು ರುಚಿಸುವುದಿಲ್ಲ. ನಿನಗೆ ಸಂಬಂಧಿಸಿದ ಮಟ್ಟಿಗೆ ಧರ್ಮದ ದಾರಿಯು ಆ ನರ್ಮದೆಗಿಂತಲೂ ದೂರ. ಆದುದರಿಂದ ನಮ್ಮನ್ನು ಕೇಳುವುದೇಕೆ? ಅದು ನಿನಗೆ ಅರ್ಥವಾಗದು. ನಿನಗೆ ಯಾವುದು ಸರಿಯೆನಿಸುವುದೋ ಅದನ್ನು ನೀನು ನೆರವೇರಿಸಬಹುದು. ಗುಣವಂತರ ಗುಣವೆಂಬ ರತ್ನಾಭರಣಗಳು ಕೆಟ್ಟ ಹೃದಯವುಳ್ಳವರಿಗೆ ಸೊಗಸಾಗಿ ಕಾಣಲಾರವು. ಕನ್ನಡಿಗೆ ಜಿಡ್ಡು ತಾಗಿದರೆ ಅದರಲ್ಲಿ ಪ್ರತಿಬಿಂಬ ಉಜ್ವಲವಾಗಿ ಕಾಣುವುದೇ?' ಎಂದನು. ಈ ಮಾತುಗಳನ್ನು ಕೇಳಿದ ಕೂಡಲೇ ಮಾರಿದತ್ತನಲ್ಲಿ ಏನೋ ಬದಲಾವಣೆಗಳು ಉಂಟಾದವು. ಆತನ ಪಾಪದ ಕತ್ತಲೆಯ ಮೊತ್ತವೆಲ್ಲಾ ಎತ್ತೆತ್ತಲೋ ಮಾಯವಾಯಿತು. ತಾವರೆ ಮುಚ್ಚಿಕೊಳ್ಳುವಾಗ ಭ್ರಮರಗಳು ಎದ್ದು ಹೋಗುವಂತೆ ಮಾರಿದತ್ತನ ಪಾಪಗಳು ತೊಲಗಿದವು. ರಾಜನ ಸೇವಕರೆಲ್ಲಾ ವಿನಯನಿಧಿಯಾದ ಅಭಯರುಚಿಗೆ ಮಣಿದರು. ಆಗ ಮಾರಿದತ್ತನು ಮತ್ತೊಮ್ಮೆ ಕೈ ಮುಗಿದು ಆ ಮಕ್ಕಳನ್ನು ತಮ್ಮ ವಿಷಯ ತಿಳಿಸಬೇಕೆಂದು ಪ್ರಾರ್ಥಿಸಿಕೊಂಡನು. ದಯೆಯಿಂದ ತುಂಬಿದ ಮಾರಿದತ್ತನ ಮನಸ್ಸನ್ನು ಕಂಡು ಅಭಯರುಚಿ ತಮ್ಮ ಕಥೆ ಹೇಳಲು ಪ್ರಾರಂಭಿಸಿದನು.

"ಆವಂತಿ ಎಂಬುದೊಂದು ದೇಶ. ಅದರ ರಾಜಧಾನಿ ಉಜ್ಜಯಿನೀ ಪುರ. ಅದರ ದೊರೆ ಯಶೌಘ. ಅವನ ಹೆಂಡತಿ ಚಂದ್ರಮತಿ. ಇವರಿಗೆ ಒಬ್ಬನೇ ಮಗ. ಅವನ ಹೆಸರು ಯಶೋಧರ. ಇವನ ಹೆಂಡತಿ ಅಮೃತಮತಿ. ಯಶೌಘನು ಉತ್ತಮವಾದ ರೀತಿಯಲ್ಲಿ ರಾಜ್ಯಭಾರವನ್ನು ಮಾಡಿಕೊಂಡು ಹೋಗುತ್ತಿರುತ್ತಾನೆ. ಯಶೋಧರನು ಅರಸನಿಗೆ ಸಹಾಯ ಮಾಡುತ್ತಿರುತ್ತಾನೆ. ಹೀಗಿರುವಾಗ ಒಮ್ಮೆ ಯಶೌಘನು ತನ್ನ ತಲೆಯಲ್ಲಿ ಒಂದು ಬಿಳೀ ಕೂದಲು ಹುಟ್ಟಿರುವುದನ್ನು ಕಾಣುವನು. ಕೂಡಲೇ ಅವನು ಜೀವನದಲ್ಲಿ ವೈರಾಗ್ಯ ಹೊಂದಿ, ಈ ಸಂಸಾರ ನಶ್ವರ ಎಂದು ವೈರಾಗ್ಯ ತಾಳಿ ಮಗ ಯಶೋಧರನಿಗೆ ಪಟ್ಟವನ್ನು ಕಟ್ಟಿ ಕಾಡಿಗೆ ಹೊರಟು ಹೋದನು.

ಯಶೋಧರ–ಅಮೃತಮತಿಯರು ದೇವೇಂದ್ರ–ಶಚೀದೇವಿಯಂತೆ ಶೋಭಿಸುತ್ತಾ ಸಂಭ್ರಮದಿಂದ ವೈಭವದಿಂದ ಉಲ್ಲಾಸಮಯವಾದ ಜೀವನ ನಡೆಸುತ್ತಿರುತ್ತಾರೆ. ಗಂಡ–ಹೆಂಡತಿಯರಿಬ್ಬರೂ ಬಹಳ ಪ್ರೀತಿ, ಅನ್ಯೋನ್ಯತೆಯಿಂದ ಆನಂದದಿಂದ ಕಾಲ ಕಳೆಯುತ್ತಿರುತ್ತಾರೆ. ಹೀಗೆ ಇವರ ಸುಂದರವಾದ ಜೀವನ ಸಾಗುತ್ತಿರುವಾಗ ಒಂದು ರಾತ್ರಿ ಎಲ್ಲರೂ ಮಲಗಿರುತ್ತಾರೆ. ಮಧ್ಯರಾತ್ರಿಯ ಸಮಯ. ಎಲ್ಲೆಲ್ಲಿಯೂ ನಿಶ್ಶಬ್ದ ವಾತಾವರಣ. ಆ ಸಮಯದಲ್ಲಿ ಯಾವುದೋ ಒಂದು ಇಂಪಾದ ದನಿ ಅಮೃತಮತಿಯನ್ನು ಎಚ್ಚರಿಸಿದಂತೆ ಆಗುತ್ತದೆ. ಆಕೆ ನಿದ್ರೆಯಿಂದ ಎಚ್ಚೆತ್ತು, ಎದ್ದು ಕುಳಿತುಕೊಳ್ಳುತ್ತಾಳೆ. ಆ ಇನಿದನಿಯು ಆಕೆಯ ಮನಸ್ಸನ್ನು ಸೂರೆಗೊಳ್ಳುತ್ತದೆ. ಆ ದನಿಯು ಎಲ್ಲಿಂದ ಬರುವುದು ಎಂದು ನೋಡಿದಾಗ, ಅರಮನೆಯ ಪಕ್ಕದ ಗಜಶಾಲೆಯಿಂದ ಆ ಹಾಡು ಬರುತ್ತಿರುವುದು ತಿಳಿಯುತ್ತದೆ. ಹಾಡುತ್ತಿದ್ದವನು ಅರಮನೆಯ ಗಜಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಮಾವುತ. ಅವನ ಹೆಸರು ಅಷ್ಟಾವಂಕ. ಇವನ ಹಾಡನ್ನು ಕಿವಿಗೊಟ್ಟು, ಮನಸ್ಸಿಟ್ಟು ಕೇಳಿದ ಅಮೃತಮತಿಯು ಕೂಡಲೇ ಅದನ್ನು ಮೆಚ್ಚಿ, ಅದಕ್ಕೆ ಉಡುಗೊರೆಯಾಗಿ ತನ್ನ ಮನಸ್ಸನ್ನೇ ಹಾಡಿದವನಿಗೆ ಅರ್ಪಿಸಿಬಿಟ್ಟಳು. ಆ ಮಾವುತನ ಹಾಡು ಅತಿ ಮಧುರವಾಗಿ ಕೇಳುತ್ತಿರಲು ಇವಳ ಮನಸ್ಸು ಕದಡಿ ಹೋಯಿತು. ಅವಳಿಗೆ ಕಣ್ಣಲ್ಲೇ ಬೆಳಗಾಯಿತು. ಬೆಳಗಾಗುವವರೆಗೂ ಅವನನ್ನು ಹೇಗೆ ನೋಡಲಿ, ಹೇಗೆ ಕೂಡಲಿ ಎಂಬ ಚಿಂತೆಯು ಕಡಲಂತೆ ಉಕ್ಕಿ ಹರಿಯಿತು. ಬೆಳಗಾದ ಕೂಡಲೇ ಅವಳು ತನ್ನ ನಚ್ಚುಮೆಚ್ಚಿನ ಗೆಳತಿಯನ್ನು ಕರೆದು ತನ್ನ ಅಂತರಂಗದ ಬಯಕೆಯನ್ನೆಲ್ಲಾ ತಿಳಿಸಿದಳು. ಮಾವುತನ ಬಳಿಗೆ ಆಕೆಯನ್ನು ಕಳುಹಿಸಿದಳು. ಒಡತಿಯ ಅಪ್ಪಣೆಯ ಮೇರೆಗೆ ಹೊರಟ ಸೇವಕಿ ಅವನನ್ನು ದೂರದಿಂದ ಕಂಡುದೇ ತಡ, ಅವಳ ಕಣ್ಣಿಗೂ ಮನಸ್ಸಿಗೂ ಓಕರಿಕೆಯುಂಟಾಯಿತು. ಅವಳಿಗೆ ಅಲ್ಲಿ ನಿಲ್ಲುವುದಕ್ಕೂ ಸಾಧ್ಯವಾಗದೆ ಕೂಡಲೇ ಹಿಂತಿರುಗಿದಳು. 'ಅಯ್ಯೋ ದೇವರೇ? ಅಮೃತಮತಿಯೆಲ್ಲಿ? ಈ ಕುರೂಪಿಯಾದ ಅಷ್ಟಾವಂಕನೆಲ್ಲಿ?' ಎಂಬೆಲ್ಲಾ ಯೋಚನೆ ಅವಳ ತಲೆಗೆ ಸುಳಿಯಿತು. ಇವಳ ಬರುವಿಕೆಯನ್ನೇ ಕಾಯುತ್ತಿದ್ದ ಅಮೃತಮತಿಯ ಮುಖ ತುಸು ಬಾಡಿಕೊಂಡೇ ಇತ್ತು. ಗೆಳತಿ ಬಂದೊಡನೆ ಆತುರಾತುರವಾಗಿ ಅವನ ಬಗ್ಗೆ ವಿಚಾರಿಸಲು ಆಕೆಯು, 'ಇಂತಹ ಸುಂದರಾಂಗನನ್ನು ಹೇಗೆ ಒಲಿದೆ? ಅವನನ್ನು ವರ್ಣಿಸೋಣವೆಂದರೆ

10th_Kannada_Reader1-5.indd 135 03-04-2019 14:08:01

ಜಗತ್ತಿನಲ್ಲಿ ಅವನಂತೆ ಬೇರೆ ಯಾರೂ ಇಲ್ಲ' ಎಂದು ಕೊಂಕು ಮಾತನ್ನಾಡಿದಳು. ಇವಳ ಮಾತು ಅರ್ಥವಾಗದೆ ಮತ್ತಷ್ಟು ಕುತೂಹಲದಿಂದ ರಾಣಿಯು ಕೇಳಲು, ಗೆಳತಿಯು, 'ಅವನ ತಲೆಗೂದಲು ಅಲ್ಲಲ್ಲಿ ಕಿತ್ತು ಹೋಗಿದೆ. ಹಣೆ ಹೊಂಡ ಬಿದ್ದಿದೆ. ಕಣ್ಣು ಕೊಳೆತು ಹೋಗಿದೆ. ಬಾಯಿ ಜೊಲ್ಲು ಸುರಿಸುತ್ತಲೇ ಇದೆ. ಚಪ್ಪಟೆಯಾದ ಮೂಗು, ಮುರುಟಿದ ಕಿವಿ, ಬಿರಿದ ಹಲ್ಲು, ಕೊರಳು ಕುಗ್ಗಿ, ಎದೆ ಒಳನುಗ್ಗಿ, ಬೆನ್ನು ಹೊರಚಾಚಿದೆ. ಹೊಟ್ಟೆ ಬಾತುಕೊಂಡಿದೆ. ದೇಹದಿಂದ ದುರ್ವಾಸನೆ, ಗೂನು ಬೆನ್ನು, ಸೊಂಟವು ಕಾಲುಗಳು ಮುರಿದ ಕತ್ತೆಯ ಹಾಗಿದೆ. ಮುದಿಯಾದ ಕಪ್ಪು ಕರಡಿಯ ಚರ್ಮದಂತೆ ಆತನ ಚರ್ಮ, ತಾಳೆಯ ಮರದಂತೆ ಒರಟಾದ ಆತನ ಶರೀರವು ಒಣಕಟ್ಟಿಗೆಯ ಕೊರಡಿನಂತೆ ಅಂಕುಡೊಂಕಾಗಿ ಅಷ್ಟಾವಕ್ರವಾಗಿದೆ' ಎಂದೆಲ್ಲಾ ಗೆಳತಿಯು ಅವನನ್ನು ವರ್ಣಿಸಲು ಅಮೃತಮತಿಯ ಗಂಟಲು ಒಣಗಿತು. ಎದೆ ನಡುಗಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಅವಳು ಸ್ತಂಭೀಭೂತಳಾದಳು. ಕ್ಷಣಕಾಲ ಮೌನವಾಗಿದ್ದು, ಬಳಿಕ ಮೆಲ್ಲನೆ ಮಾತಿಗಾರಂಭಿಸಿದಳು. 'ಕಸ್ತೂರಿಯ ಬಣ್ಣ ಕಪ್ಪು, ಆದರೆ ಅದನ್ನು ಕಡೆಗಣಿಸುವರೇ? ಕಾಮನ ಬಿಲ್ಲು ಡೊಂಕು, ಆದರೆ ಯಾರೂ ಅದನ್ನು ಹೀನಾಯವಾಗಿ ಕಾಣುವುದಿಲ್ಲ. ಹುಚ್ಚೇ ನಮ್ಮ ಮೆಚ್ಚಿನವರಲ್ಲಿ ದೋಷವಿದ್ದರೆ, ಅದೇ ಅವರ ಮೇಲ್ಮೈಯೆನಿಸುತ್ತದೆ. ಅದೂ ಅಲ್ಲದೆ ಮನಸ್ಸು ಮೆಚ್ಚಿದೆಯೆಂದರೆ ಮತ್ತೆ ರೂಪದ ಪ್ರಶ್ನೆಯೇ ಏಳುವುದಿಲ್ಲ. ಅಲ್ಲದೆ ಕಾರ್ಯವಾದ ಮೇಲೆ ಕಾರಣದಿಂದೇನು ಪ್ರಯೋಜನ? ಇಂದು ಅವನೇ ನನಗೆ ಇಂದ್ರ ಚಂದ್ರ' ಎಂದಳು. ಗೆಳತಿಯ ಸಹಾಯದಿಂದ ಅಷ್ಟಾವಂಕನನ್ನು ಒಪ್ಪಿಸಿ ಅವನೊಡನೆ ಕಾಲ ಕಳೆಯತೊಡಗಿದಳು. ಹೀಗೆ ಇವರ ಒಡನಾಟ ಮುಂದುವರೆಯತೊಡಗಿತು.

ಹೀಗೆ ದಿನಗಳು ಉರುಳುತ್ತಿರಲು ಅಮೃತಮತಿಯಲ್ಲಾದ ಬದಲಾವಣೆ ಯಶೋಧರನಿಗೆ ತಿಳಿಯಿತು. ಅಮೃತಮತಿ ಹಾಗೂ ಅಷ್ಟಾವಂಕರ ನಡುವಿನ ಸಂಬಂಧವೂ ಗೊತ್ತಾಯಿತು. ಇದರಿಂದ ಕೋಪಗೊಂಡ ರಾಜ ಅವರಿಬ್ಬರನ್ನೂ ಕೊಲ್ಲಲು ಮುಂದಾಗುತ್ತಾನೆ. ಆದರೆ ಹಾಗೆ ಮಾಡದೆ ಅವರಿಬ್ಬರ ಸಂಬಂಧವನ್ನು ಕಂಡು ತುಂಬಾ ಬೇಸರಗೊಂಡು, ದುಃಖಿತನಾಗಿ ತಾಯಿಯ ಬಳಿಗೆ ಹೋಗುತ್ತಾನೆ. ಯಶೋಧರನ ಬಾಡಿದ ಮುಖ ನೋಡಿದ ಆಕೆ, 'ಏಕೆ ಮುಖ ಇಷ್ಟು ಬಾಡಿದೆ?' ಎಂದು ಕೇಳಲು, ಅರಸನು ನೇರವಾಗಿ ವಿಷಯವನ್ನು ತಿಳಿಸಲು ಸಾಧ್ಯವಾಗದೆ ನಡೆದ ಘಟನೆಯನ್ನು ಮರೆಮಾಚಿ 'ಕೆಟ್ಟ ಕನಸನ್ನು ಕಂಡೆ' ಎಂದು ಹೇಳುತ್ತಾನೆ. ತಾಯಿಯು ಅದನ್ನು ಕೇಳಿ ತಿಳಿದುಕೊಂಡ ಮೇಲೆ, 'ದುಃಸ್ವಪ್ನದ ಶಾಂತಿಗಾಗಿ ದೇವಿಗೆ ಒಂದು ಪ್ರಾಣಿಯನ್ನು ಬಲಿ ಕೊಡು'ವಂತೆ ಹೇಳುತ್ತಾಳೆ. ಮಗನು ಇದನ್ನು ಕೇಳಿ ಪ್ರಾಣಿ ಬಲಿ ಹಿತವಲ್ಲ. 'ಜೀವದಯೆ ಜೈನಧರ್ಮ' ಎಂದಾಗ ತಾಯಿಯು ತನ್ನ ಹಠ ಬಿಡುವುದಿಲ್ಲ. 'ಮಗನ ಹಿತಕ್ಕಾಗಿ ಕಡೆಗೆ ತಾನೇ ದೇವಿಗೆ ಬಲಿಯಾಗುತ್ತೇನೆ' ಎನ್ನುತ್ತಾಳೆ. ಕೊನೆಗೆ, 'ನಿಜವಾದ ಪ್ರಾಣಿಯನ್ನು ಬಲಿ ಕೊಡುವುದು ಬೇಡ. ಒಂದು ಹಿಟ್ಟಿನ ಕೋಳಿಯನ್ನಾದರೂ ಬಲಿ ಕೊಡು' ಎನ್ನುತ್ತಾಳೆ. ಪಾಪ ಅವಳಿಗೆ ಹೆದರಿಕೆ. ಮಗನಿಗೆ ಏನಾದರೂ ಕೇಡಾಗುವುದೋ ಎಂಬ ಭಯ. ತಾಯಿಯ ಮಾತನ್ನು ಮೀರಲಾರದೆ ಯಶೋಧರ ಒಂದು ಹಿಟ್ಟಿನ ಕೋಳಿಯನ್ನು ಮಾಡಿಸುತ್ತಾನೆ. ಹಿಟ್ಟಿನ ಕೋಳಿಯು ನೋಡಲು ಬಹು ಸುಂದರವಾಗಿ, ಆಕರ್ಷಕವಾಗಿತ್ತು. ಅದನ್ನು ನೋಡಿ ಆಕರ್ಷಿತಗೊಂಡ ಒಂದು ಪಿಶಾಚಿಯು ಅದರೊಳಗೆ ಬಂದು ಸೇರಿಕೊಂಡಿತು. ಮಹಾನವಮಿಯ ಹಿಂದಿನ ದಿನ ವಿವಿಧ ಪೂಜಾ ಅರ್ಚನೆಗಳ ನಂತರ ಚಂಡಿಕಾ ದೇವಿಗೆ ಹಿಟ್ಟಿನ ಕೋಳಿಯನ್ನು ಬಲಿ ನೀಡಲು ಕತ್ತರಿಸಿದಾಗ, ಆ ಹಿಟ್ಟಿನ ಕೋಳಿಯು 'ಕೊಕ್ಕೊಕ್ಕೋ...' ಎಂದು ವಿಕಾರವಾಗಿ ಕೂಗುತ್ತಾ ಕೆಳಕ್ಕೆ ಬಿದ್ದಿತು. ಈ ವಿಕಾರವಾದ ಕೂಗನ್ನು ಕೇಳಿ ತಾಯಿ ಮತ್ತು ಮಗ ಬೆಚ್ಚಿ ದಿಗ್ಭ್ರಮೆಗೊಂಡರು. ಯಶೋಧರನು ಇದರಿಂದ ನೊಂದು, ತಾನಿನ್ನು ರಾಜನಾಗಿರಲಾರೆನೆಂದು ತೀರ್ಮಾನಿಸಿ ತನ್ನ ಮಗನಾದ ಯಶೋಮತಿಗೆ ಪಟ್ಟ ಕಟ್ಟಿ ತಾನು ಕಾಡಿಗೆ ಹೋಗಲು ಸಿದ್ಧನಾದನು. ಅದು ರಾಣಿ ಅಮೃತಮತಿಗೆ ತಿಳಿಯಿತು. ಗಂಡ ಹೀಗೆ ಹೋಗುವುದು ಅವಳಿಗೆ ಬೇಕಿರಲಿಲ್ಲ. ಅವನನ್ನು ಕಂಡರೆ ಅವಳಿಗೆ ಅದೇಕೋ ದ್ವೇಷ. ಆದರೆ ಅದನ್ನು ಹೇಳಲೂ ಆಗದೆ ತೋರಿಸಿಕೊಳ್ಳಲೂ ಆಗದೆ ಅವಳು, 'ಹೂವಿನ ಜೊತೆಯಲ್ಲಿ ಸುಗಂಧವೂ ಹೋಗುವಂತೆ ತಾನೂ ತನ್ನ ಗಂಡನ ಜೊತೆಯಲ್ಲಿಯೇ ಅರಣ್ಯಕ್ಕೆ ಹೋಗುವುದಾಗಿಯೂ, ಹೋಗುವ ಮೊದಲು

10th_Kannada_Reader1-5.indd 136 03-04-2019 14:08:01

ಔತಣವನ್ನು ಉಂಡು ಹೋಗಬೇಕೆ'ಂದು ಗಂಡನನ್ನೂ ಅತ್ತೆಯನ್ನೂ ಒಪ್ಪಿಸಿ, ಔತಣದ ಅಡುಗೆಯಲ್ಲಿ ವಿಷ ಹಾಕಿ ಅವರಿಬ್ಬರನ್ನೂ ಕೊಂದು ಬಿಡುತ್ತಾಳೆ. ಅನಂತರ ನಿರಾತಂಕವಾಗಿ ಅಷ್ಟಾವಂಕನ ಜೊತೆಯಲ್ಲಿ ಇದ್ದು ಬಿಡುತ್ತಾಳೆ.

ಹೀಗೆ ದುರ್ಮರಣದಿಂದ ಸತ್ತ ತಾಯಿ–ಮಗ ಮುಂದೆ ನಾನಾ ಪಶುಪಕ್ಷಿಗಳಾಗಿ ಜನ್ಮ ತಳೆದು ತಾವು ಮಾಡಿದ 'ಸಂಕಲ್ಪ ಹಿಂಸೆ'ಗೆ ತಕ್ಕ ಪ್ರಾಯಶ್ಚಿತ್ತ ಹೊಂದಿ, ಮಾಡಿದ ಈ ಒಂದು ಚಿಕ್ಕ ತಪ್ಪಿಗೆ ಏಳು ಜನ್ಮವನ್ನು ತಾಳಿ ತೊಳಲಾಡಿ ಏಳನೆಯ ಜನ್ಮದಲ್ಲಿ ಯಶೋಧರ ಅಮೃತಮತಿಯರ ಮಗನಾದ ಯಶೋಮತಿಯ ಪತ್ನಿ ಕುಸುಮಾವಳಿಗೇ ಅಭಯರುಚಿ, ಅಭಯಮತಿ ಎಂಬ ಮಕ್ಕಳಾಗಿ ಜನಿಸುತ್ತಾರೆ. ಈ ಅವಳಿ ಮಕ್ಕಳು ಎಳೆಯ ವಯಸ್ಸಿನಲ್ಲಿಯೇ ಜೈನ ದೀಕ್ಷೆಯನ್ನು ಸ್ವೀಕರಿಸಿ, ಸುದತ್ತಾಚಾರ್ಯರಲ್ಲಿ ಶಿಷ್ಯರಾಗಿರುತ್ತಾರೆ"

ಹೀಗೆ ಮಾರಿದತ್ತನಿಗೆ ಅಭಯರುಚಿ, ಅಭಯಮತಿಯರು ತಮ್ಮ ಹಿಂದಿನ ಕಥೆಯನ್ನು ಹೇಳುತ್ತಾರೆ. ಮತ್ತೆ ಅಭಯರುಚಿಯು, "ಒಂದು ಹಿಟ್ಟಿನ ಕೋಳಿಯನ್ನು ಬಲಿ ಕೊಟ್ಟ ಪಾಪಕ್ಕೇ ನಾವು ಪಟ್ಟ ಪಾಡಿನ ಕಥೆ ಇದಾದರೆ, ಇನ್ನು ಜೀವದಿಂದಿರುವ ಇಷ್ಟೊಂದು ಪ್ರಾಣಿಗಳನ್ನೂ ನರಮಾನವರನ್ನೂ ನೀನು ಬಲಿ ಕೊಡುತ್ತಿದ್ದೀಯ. ನಿನಗೆ ಇನ್ನೆಷ್ಟು ಶಿಕ್ಷೆಯಾಗಬಹುದು? ಇದಕ್ಕಾಗಿ ನಾವು ಮರುಗುತ್ತೇವೆ. ನಮ್ಮ ಜೀವ ನಿನಗಾಗಿ ತಲ್ಲಣಿಸುತ್ತಿದೆ" ಎಂದು ಕಥೆಯನ್ನು ಮುಗಿಸಿದನು.

ಮಾರಿದತ್ತ ದೊರೆಗೆ ಇವರ ಕಥೆಯನ್ನು ಕೇಳಿ ಜ್ಞಾನೋದಯವಾಯಿತು. ಅವನ ಮನಸ್ಸು, "ಈ ಮಕ್ಕಳು ನಿನ್ನವರು. ನಿನ್ನ ಉದ್ಧಾರಕ್ಕಾಗಿ ಬಂದಿರುವರು" ಎಂದು ನುಡಿಯಿತು. ಇವರ ಕಥೆಯನ್ನು ಕೇಳಿ ಮಾರಿದೇವಿಯ ಮನಸ್ಸು ಕೂಡ ಬದಲಾಯಿತು. ಆಕೆ ಪ್ರತ್ಯಕ್ಷಳಾಗಿ, 'ಇನ್ನು ಮುಂದೆ ನನಗೆ ಹಿಂಸಾ ಪೂಜೆ ಬೇಡ. ಹೂವು ಅಕ್ಷತೆಗಳಿಂದ ಮಾಡುವ ಪೂಜೆಯಿಂದಲೇ ನನಗೆ ತೃಪ್ತಿ' ಎಂದು ಹೇಳಿ ಕಟ್ಟಳೆಯಿಟ್ಟು ಮಾಯವಾದಳು.

ಮಾರಿದತ್ತನು ಈ ಕಥೆಯನ್ನೆಲ್ಲ ಕೇಳಿ ಪಶ್ಚಾತ್ತಾಪ ಪಟ್ಟು, ಮಾನಸಾಂತರಗೊಂಡು ತನ್ನ ಮಗನಾದ ಕುಸುಮದತ್ತನಿಗೆ ಪಟ್ಟ ಕಟ್ಟಿ, ತಾನೂ ಜೈನ ದೀಕ್ಷೆ ಸ್ವೀಕರಿಸಿ, ಸಮಾಧಿ ಮರಣದಿಂದ ಸತ್ತು ಮೂರನೆಯ ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು. ಅಭಯರುಚಿ ಮತ್ತು ಅಭಯಮತಿಯರಿಬ್ಬರೂ ತಪಸ್ಸು ಮಾಡಿ ಸತ್ತು ದೇವಲೋಕದಲ್ಲಿ ಹುಟ್ಟಿದರು.

ಇನ್ನು ಪಾತಕಿ ಅಮೃತಮತಿಗೆ ಅಷ್ಟಾವಂಕನ ದೆಸೆಯಿಂದ ತೊನ್ನು ರೋಗ ಬಂದು, ಮೈಯೆಲ್ಲಾ ಹುಳಿತು, ಹುಣ್ಣಾಗಿ ಕೀವು ರಕ್ತ ಸೋರಲಾರಂಭಿಸಿತು. ಅವಳ ಪಾಪಕ್ಕೆ ಅದೇ ಜನ್ಮದಲ್ಲಿ ಸಾಕಷ್ಟು ನೋವು ಅನುಭವಿಸಿದಳು. ಹೀಗೆ ಎಲ್ಲರಿಂದಲೂ ತಿರಸ್ಕೃತಗೊಂಡು ನರಳಿ ನರಳಿ ಧೂಮಪ್ರಭ ಎಂಬ ನರಕದಲ್ಲಿ ಬಿದ್ದಳು.

ಇಲ್ಲಿಗೆ ಯಶೋಧರ ಚರಿತ್ರೆಯ ಕಥೆ ಮುಗಿಯುತ್ತದೆ.

ಕೃತಿ–ಕರ್ತೃ ಪರಿಚಯ



ಜನ್ನ

ಪ್ರಸ್ತುತ ಕಥೆಯನ್ನು ಜಾನ್‌ಸನ್ ಸುಕುಮಾರ್ ಅವರು ಗದ್ಯಾನುವಾದ ಮಾಡಿದ್ದಾರೆ. ಶ್ರೀಯುತರು ಕನ್ನಡ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ಪ್ರಸ್ತುತ ಇವರು ಈರೋಡು ಜಿಲ್ಲೆಯ ತಾಳವಾಡಿ ತಾಲ್ಲೂಕಿನ ಪಣಕನಹಳ್ಳಿಯಲ್ಲಿರುವ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೊರನಾಡು ಕನ್ನಡ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸುವ ಇವರು ಸಾಹಿತ್ಯಾಸಕ್ತರು. ಜನ್ನನ ಯಶೋಧರ ಚರಿತೆಯ ಕಾವ್ಯ ಭಾಗವನ್ನು ಕಥಾ ರೂಪದಲ್ಲಿ ಇವರು ಇಲ್ಲಿ ಸಂಗ್ರಹಿಸಿ ನೀಡಿದ್ದಾರೆ.

10th_Kannada_Reader1-5.indd 137 03-04-2019 14:08:01

ಪದಗಳ ಅರ್ಥ

ಉದ್ದೀಪನ–ಹೊತ್ತಿಸುವ, ಪ್ರಕಾಶನ; ಮಂಚಿಕೆ–ಬೇಟೆಯಾಡಲು ಹಾಕುವ ವೇದಿಕೆ; ಉಲಿ–ಧ್ವನಿ, ಮಾತು; ತಳಾರ–ಕಾವಲುಗಾರ; ಬೆರ್ಚು–ಬೆದರುಗೊಂಬೆ; ಮೂರಿ–ಕೋಣ; ವಿರಾಗಿ–ಬೈರಾಗಿ, ವಿರಕ್ತ; ವೈರಾಗ್ಯ–ಪ್ರಾಪಂಚಿಕ ವಿಷಯದಲ್ಲಿ ಅನಾಸಕ್ತಿಯಿಂದಿರುವುದು; ಮಾವುತ–ಮಾವಟಿಗ, ಆನೆಗಳನ್ನು ನೋಡಿಕೊಳ್ಳುವವನು; ಕುರೂಪಿ–ಅಂದವಿಲ್ಲದ; ಅಷ್ಟಾವಕ್ರ–ಬಹಳ ವಿಕಾರವಾಗಿರುವ; ದುಃಸ್ವಪ್ನ–ಕೆಟ್ಟಕನಸು; ತಲ್ಲಣ–ಹೆದರಿಕೆ, ತಳಮಳ; ಮಾನಸಾಂತರ–ಬದಲಾಗುವಿಕೆ; ಶಿಶಿರ–ಚಳಿಗಾಲ; ಭ್ರಮರ–ದುಂಬಿ; ಪ್ರದಕ್ಷಿಣೆ–ದೇವತೆ ಅಥವಾ ಹಿರಿಯರನ್ನು ಸುತ್ತಿ ಬರುವುದು; ಕರ್ಕಶ–ಬಿರುಸಾದ, ಒರಟಾದ; ಅಚ್ಚರಿ–ಆಶ್ಚರ್ಯ; ನಶ್ವರ–ಅಶಾಶ್ವತವಾದ, ನಾಶವಾಗುವ; ಇನಿ–ಇಂಪು, ಸಿಹಿ; ಓಕರಿಕೆ–ವಾಂತಿ ಬರುವುದು, ಜುಗುಪ್ಸೆ; ಕೊಂಕು–ವ್ಯಂಗ್ಯೋಕ್ತಿ, ಚುಚ್ಚಿ ಮಾತನಾಡುವುದು; ಒಡನಾಟ–ಸಹವಾಸ, ಸ್ನೇಹ; ಔತಣ–ವಿಶೇಷ ಭೋಜನ, ಆತಿಥ್ಯ; ಕಟ್ಟಳೆ–ನಿಯಮ, ಪದ್ಧತಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಾರಿದತ್ತನು ಯಾರು ?
2. ಚಂಡಮಾರಿ ಯಾರು ? ಇವಳು ಎಲ್ಲಿದ್ದಳು ?
3. ಗಿಳಿಗಳು ಏನೆಂದು ಉಲಿಯುತ್ತಿದ್ದವು ?
4. ಚಂಡಕರ್ಮ ಯಾರು ? ಇವನಿಗೆ ನೇಮಿಸಿದ ಕಾರ್ಯವಾವುದು ?
5. ಅಭಯರುಚಿ ಮತ್ತು ಅಭಯಮತಿ ಯಾರು ?
6. ಅಭಯರುಚಿಯು ರಾಜನನ್ನು ಏನೆಂದು ಹರಸಿದನು ?
7. ಯಶೋಧರ ಮತ್ತು ಅಮೃತಮತಿ ಯಾರು ?
8. ಅಷ್ಟಾವಂಕನು ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಚಂಡಮಾರಿಯು ಯಾರು ? ಇವಳ ವಿಶೇಷತೆಯೇನು ?
2. ಸುದತ್ತಾಚಾರ್ಯರ ಬಗ್ಗೆ ಬರೆಯಿರಿ.
3. ಮಾರಿದತ್ತನು ಚಂಡಕರ್ಮನಿಗೆ ಏನು ಹೇಳಿದನು ? ಅದಕ್ಕೆ ಅವನು ಏನು ಮಾಡಿದನು.
4. ಅಭಯರುಚಿ ಹಾಗೂ ಅಭಯಮತಿಯರ ಸಂಭಾಷಣೆಯನ್ನು ಬರೆಯಿರಿ.
5. ಮಾರಿದತ್ತನು ಎಳೆಯ ಮಕ್ಕಳನ್ನು ಕಂಡು ಏಕೆ ಅಚ್ಚರಿಗೊಂಡನು ?
6. ಅಮೃತಮತಿಯ ಮನಸ್ಸು ಕದಡಲು ಕಾರಣವಾದ ಘಟನೆಯನ್ನು ಬರೆಯಿರಿ?
7. ಅಷ್ಟಾವಂಕನನ್ನು ಮೊದಲು ನೋಡಲು ಹೋದವರು ಯಾರು ? ಆಕೆಯು ಅವನನ್ನು ಕಂಡು ಏನೆಂದುಕೊಂಡಳು ?
8. ಚಂಡಮಾರಿಯು ಏಕೆ ಪ್ರತ್ಯಕ್ಷಳಾದಳು ಹಾಗೂ ಏನೆಂದು ಕಟ್ಟಳೆಯಿತ್ತಳು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ವಸಂತ ಕಾಲದ ವರ್ಣನೆಯನ್ನು ವಿವರಿಸಿ.
2. ಮಾರಿಯ ಗುಡಿ ಹೇಗಿತ್ತು ? ವರ್ಣಿಸಿರಿ.
3. ಮಾರಿದತ್ತನು ಅವಳಿ ಮಕ್ಕಳನ್ನು ಏನೆಂದು ಕೇಳಿದನು? ಅದಕ್ಕೆ ಅವರು ಏನೆಂದು ಉತ್ತರ ನೀಡಿದರು ?
4. ಅಷ್ಟಾವಂಕನ ರೂಪವನ್ನು ಗೆಳತಿಯ ಮಾತುಗಳಲ್ಲಿ ಬಣ್ಣಿಸಿ.
5. ಹಿಟ್ಟಿನ ಕೋಳಿಯ ವಿಷಯವನ್ನು ವಿವರಿಸಿ.
6. ಮಾರಿದತ್ತನು ಹೇಗೆ ಮಾನಸಾಂತರಗೊಂಡನು? ವಿವರಿಸಿ.

10th_Kannada_Reader1-5.indd 138 03-04-2019 14:08:01

ಭಾಷಾಭ್ಯಾಸ

1. ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಚಂದ್ರ, ರಾಜ, ವನ, ಭೂಮಿ, ಭ್ರಮರ, ಪಿಶಾಚಿ, ಕಟ್ಟಳೆ, ಮರಣ.

2. ಈ ಕೆಳಕಂಡ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಶುಭ, ಲಕ್ಷಣ, ರಕ್ಷಿಸು, ಭಯ, ನಿಶ್ಶಬ್ದ, ಅಂತರಂಗ, ಆತಂಕ, ಪಾಪ.

3. ಕೆಳಗಿನ ಪದಗಳ ತತ್ಸಮ ತದ್ಭವಗಳನ್ನು ಬರೆಯಿರಿ.

ಭಿಕ್ಷೆ, ಭೂಮಿ, ಅಚ್ಚರಿ, ಕಸ್ತೂರಿ, ತ್ಯಾಗ, ಚಂದ್ರ, ಕೋಗಿಲೆ, ವನ.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ

ಹರಕೆ, ಪ್ರಾಯಶ್ಚಿತ್ತ, ಉಪವಾಸ, ತೋರಣ, ಭಯಂಕರ, ಬಯಕೆ, ದಿಗ್ಭ್ರಮೆ, ಪಶ್ಚಾತ್ತಾಪ.

4. ಕೆಳಗಿನ ಪದಗಳ ಸಂಧಿ ಬಿಡಿಸಿ ಬರೆಯಿರಿ.

ಸುಖೋದ್ದೀಪನ, ಲಕ್ಷೋಪಲಕ್ಷ, ದೇವಾಲಯ, ಬಾಯಿಯನ್ನು, ಅರಿವಿಲ್ಲದೆ, ರತ್ನಾಭರಣ, ಎತ್ತೆತ್ತಲೋ, ತಲೆಗೂದಲು

5. ಕೆಳಗಿನ ಪದಗಳನ್ನು ವಿಂಗಡಿಸಿ ಬರೆದು ಸಮಾಸದ ಹೆಸರನ್ನು ತಿಳಿಸಿ..

ದೇವಾಲಯ, ಐನೂರು, ಅಂಗೈ, ಅಂಗಾಲು, ಗಜಶಾಲೆ, ಇನಿದನಿ, ಅರಮನೆ, ಪಶುಪಕ್ಷಿಗಳು.

ಚಟುವಟಿಕೆ

1. ಯಶೋಧರ ಚರಿತೆಯ ಪದ್ಯಗಳನ್ನು ಸಂಗ್ರಹಿಸಿ ಓದಿರಿ.
2. ಜೈನಧರ್ಮದ ಇತರ ಕಾವ್ಯಗಳನ್ನು ಓದಿರಿ.
3. ಈ ಕಥೆಯನ್ನು ನಾಟಕ ರೂಪವಾಗಿ ಅಭಿನಯಿಸಿ.





10th_Kannada_Reader1-5.indd 139 03-04-2019 14:08:01

ಉಪಪಠ್ಯ

ಘಟಕ ಏಳು

ಅಮ್ಮ

– ಡಾ. ಯು.ಆರ್. ಅನಂತಮೂರ್ತಿ



ಅಮ್ಮ ಎನ್ನುವ ಈ ಲೇಖನ ಒಂದು ಆತ್ಮಕಥೆ. ವ್ಯಕ್ತಿಯೊಬ್ಬ ತಾನು ಬದುಕಿದ ರೀತಿಯನ್ನು ತನ್ನ ನೋವು ನಲಿವುಗಳನ್ನು ತಾನೇ ಬರೆದುಕೊಳ್ಳುವುದನ್ನೇ ಆತ್ಮಕಥೆಯೆನ್ನುವರು.

ಮಾನವನ ಬದುಕಿನಲ್ಲಿ ಬಾಲ್ಯದ ನೆನಪುಗಳು ಅಪಾರ ಹಾಗೂ ಅಮೋಘ. ಬಾಲ್ಯದ ನೆನಪಿನಂಗಳದಲ್ಲಿ ತುಂಬಿರುವ ನೆನಪಿನ ಬುತ್ತಿಯು ಬದುಕಿನುದ್ದಕ್ಕೂ ಎಷ್ಟು ಸವಿದರೂ ಮುಗಿಯದ ಅಕ್ಷಯಪಾತ್ರೆಯಾಗಿರುತ್ತದೆ. 'ಮನೆಯೇ ಮೊದಲ ಪಾಠಶಾಲೆ. ಜನನಿ ತಾನೇ ಮೊದಲ ಗುರುವು. ಜನನಿಯಿಂದ ಪಾಠ ಕಲಿತ ಜನರೇ ಧನ್ಯರು'. ಮಕ್ಕಳ ಬದುಕಿನಲ್ಲಿ ಅಮ್ಮನ ಪಾತ್ರ ಅತ್ಯಂತ ಮಹತ್ವದ್ದು. ಮಾನವನ ಸಂಸ್ಕಾರಯುತ ಜೀವನ ಆರಂಭವಾಗುವುದೇ ತಾಯಿಯ ಮಡಿಲಿನಲ್ಲಿ. ಅಮ್ಮ ಸಂಸ್ಕಾರ ನೀಡಿದರೆ ಜನಿಸಿದ ಈ ತಾಯ್ನೆಲ, ಈ ಪರಿಸರವನ್ನಪ್ಪಿ ಬೆಳೆದ ಬಾಲ್ಯದ ನೆನಪುಗಳು ಮಾನವನ ಜೀವನದಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತುತ್ತವೆ. ಮಲೆನಾಡಿನ ಪ್ರಕೃತಿಯ ಮಡಿಲಿನಲ್ಲಿ ಬರುವ ತನ್ನೂರಿನ ಜನಜೀವನದೊಂದಿಗೆ ತನ್ನ ಶಾಲಾದಿನಗಳ ನೆನಪನ್ನು ಓದುಗರ ಮನಮುಟ್ಟುವಂತೆ ಕಟ್ಟಿ ಕೊಡುವುದೇ ಇಲ್ಲಿ ಲೇಖಕರ ಆಶಯವಾಗಿದೆ.



10th_Kannada_Reader1-5.indd 140 03-04-2019 14:08:02

ಈ ಊರಿನಲ್ಲಿ ಹುಲಿಗಳ ಕಾಟ ಬಹಳ ಇತ್ತು. ನಮ್ಮಮ್ಮನಿಗೆ ದೂರದಲ್ಲಿ ಹುಲಿ ಕೂಗುತ್ತಿದ್ದರೆ ಥಟ್ಟನೆ ತಿಳಿದು ಬಿಡುತ್ತಿತ್ತು. ಹುಲಿಗಳ ಶಬ್ದಕ್ಕೆ ತುಂಬ ಸೂಕ್ಷ್ಮವಾಗಿದ್ದ ಜೀವಿಗಳೆಂದರೆ ಕೊಟ್ಟಿಗೆಯ ದನಗಳು. ಅವು ಗಡಗಡ ನಡುಗಲು ಶುರು ಮಾಡುತ್ತಿದ್ದವು. ಕೊರಳಿನ ಗಂಟೆ ಜೋರು ಶಬ್ದ ಮಾಡುತ್ತಿತ್ತು. ನಾನು, ನಮ್ಮಮ್ಮ, ನಮ್ಮಜ್ಜ, ಚಿಮಣಿ ದೀಪದ ಬೆಳಕಲ್ಲಿ ಒಳಗಡೆ ಕೂತು ಎಲ್ಲಿ ಹುಲಿ ನಮ್ಮ ಕೊಟ್ಟಿಗೇಗೂ ನುಗ್ಗಿ ಬಿಡುತ್ತದೆಯೋ ಎಂದು ಕಾಯುತ್ತಿದ್ದೆವು. ಮನೆಗೆ ನಿತ್ಯ ಆಳುಗಳು ಬಂದಾಗ ಮಾತು ಶುರುವಾಗುತ್ತಿದ್ದುದು ಯಾವುದೋ ಹುಲಿ ಯಾವುದೋ ದನವನ್ನು ಕಾಡಲ್ಲಿ ಹಿಡೀತು, ಅವರ ಮನೆ ದನ ಹೋಯ್ತು, ಇವರ ಮನೆ ದನ ಹೋಯ್ತು – ಹೀಗೆ. ಮಲೆನಾಡಿನಲ್ಲಿ ಹುಲಿ ಆಗ ನಿಜವಾದ ಹಸಿದ ಕಣ್ಣುಗಳ ಕೋರೆದಾಡೆಯ ಮುಖವಾಗಿತ್ತು. ನಮಗೆ ತುಂಬಾ ಭಯವಾದಾಗ ಹೇಳಿಕೊಳ್ಳಲು ಅರ್ಜುನ ಮಂತ್ರವಿತ್ತು: 'ಅರ್ಜುನಃ ಫಲ್ಗುಣೋ ಪಾರ್ಥ ಕಿರೀಟೀ ಶ್ವೇತವಾಹನಃ' ಇದು ನಮ್ಮಜ್ಜ ಹೇಳಿ ಕೊಟ್ಟಿದ್ದು. ಅದನ್ನು ಹೇಳಿ ಬಿಟ್ಟರೆ ಭಯ ನಿವಾರಣೆ ಆಗುತ್ತೆ ಅಂತ ಹೇಳಿದ್ದರು. ಅದನ್ನು ಹೇಳುತ್ತ ಹೇಳುತ್ತ ನಾವು ನಿದ್ದೆ ಹೋಗುತ್ತಿದ್ದೆವು. ಅಮ್ಮ ಮಾತ್ರ ನಿದ್ದೆ ಮಾಡುತ್ತಿರಲಿಲ್ಲ. ಬೆಳಿಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂದು ಗೊತ್ತಾದಾಗ ಮನಸ್ಸಿಗೆ ಸಮಾಧಾನ.

ನನ್ನ ಮೊದಲ ವಿದ್ಯಾಗುರು ನನ್ನ ಅಮ್ಮ. ಅಮ್ಮ ಸ್ಕೂಲಿಗೆ ಹೋಗಿ ಸ್ವಲ್ಪ ಓದಿ ಬರೆಯಲು ಕಲಿತಿದ್ದಳು. ಸ್ಕೂಲಿನಲ್ಲಿ ಅವಳು ಎಸ್.ವಿ.ಪರಮೇಶ್ವರ ಭಟ್ಟರ ಸಹಪಾಠಿಯಾಗಿದ್ದವಳು. ಕೆರೆಕೊಪ್ಪದ ಮನೆಯಲ್ಲಿದ್ದಾಗಲೇ ನನಗೆ ಅಕ್ಷರಾಭ್ಯಾಸ ಪ್ರಾರಂಭವಾಗಿದ್ದು. ಆಗ ಸ್ಕೂಲ್ ಮನೆಯ ಹತ್ತಿರ ಇರಲಿಲ್ಲ. ಹಬ್ಬದ ದಿನ ಅದು. ಆದ್ದರಿಂದ, 'ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣೀ, ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತುಮೇ ಸದಾ' ಎಂದು ಹೇಳಿ ಅಮ್ಮ ನೆಲದಲ್ಲಿ ಮರಳು ಹರಡಿ ಕೂರಿಸಿ ನನ್ನ ಬೆರಳನ್ನು ಹಿಡಿದುಕೊಂಡು 'ಅ' ಎಂಬ ಅಕ್ಷರವನ್ನು ಬರೆಯಿಸಿದ್ದಳು. ಅಮ್ಮ ನಿತ್ಯ ಹೀಗೆ ಬರೆಸುತ್ತಿದ್ದುದರಿಂದ ನಾನು ಶಾಲೆಯಲ್ಲಿ ಅಕ್ಷರ ಕಲಿಯಲು ಆರಂಭಿಸುವ ಹೊತ್ತಿಗೆ ಅನೇಕ ಅಕ್ಷರಗಳನ್ನು ಕಲಿತು ಬಿಟ್ಟಿದ್ದೆ.

ಹುಲಿಯ ಭಯದಿಂದಾಗಿ ನನ್ನನ್ನು ಆ ದಿನಗಳಲ್ಲಿ ಶಾಲೆಗೆ ಕಳುಹಿಸುತ್ತಿರಲಿಲ್ಲ. ಪಾಠ ಹೇಳಲು ಮನೆಗೇ ಒಬ್ಬರು ಬರುತ್ತಿದ್ದರು. ಅವರ ಹೆಸರು ಕೃಷ್ಣಪ್ಪಯ್ಯ. ಬಹಳ ಕಟ್ಟುನಿಟ್ಟಿನ ಮೇಷ್ಟ್ರು ಅವರು. ನನಗೋ ಆಗ ರಂಜದ ಹೂವನ್ನು ತಂದು ಪೋಣಿಸಿ ದೊಡ್ಡ ದೊಡ್ಡ ಸರಗಳನ್ನು ಮಾಡಿ ಅಮ್ಮನಿಗೆ ಮುಡಿಯುವುದಕ್ಕೆ ಕೊಡುವುದು, ನಾನು ಮುಡಿದು ಕೊಳ್ಳುವುದು ಇದರಲ್ಲೇ ಹೆಚ್ಚು ಆಸಕ್ತಿ. ಆಗ ನನಗಿನ್ನೂ ಚೌಲವಾಗಿರಲಿಲ್ಲ. ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು. ಮಗಳು ಬೇಕೆಂಬ ಅಮ್ಮನ ಆಸೆ ಪೂರೈಕೆಯಾದದ್ದು ಅವರ ಮೂರನೇ ಹೆರಿಗೆಯಲ್ಲಿ. ಅಮ್ಮ ಒಂದೊಂದು ಸಾರಿ ನನಗೆ ಹುಡುಗಿಯರ ಉಡುಪು ತೊಡಿಸಿ ಹೂವು ಮುಡಿಸುತ್ತಿದ್ದಳು. ನಾನು ರಂಜದ ಹೂವನ್ನು ಪೋಣಿಸುತ್ತಾ ಕುಳಿತಿದ್ದನ್ನು ಕಂಡರೆ ಕೃಷ್ಣಪ್ಪಯ್ಯನವರಿಗೆ ಸಿಟ್ಟು ಬರುತ್ತಿತ್ತು. ಕೃಷ್ಣಪ್ಪಯ್ಯನವರೇ ಅಧಿಕೃತವಾಗಿ ನನ್ನ ಮೊದಲ ಶಿಕ್ಷಕರು. ಕೃಷ್ಣಪ್ಪಯ್ಯ ಬರುವಾಗಲೇ ಒಂದು ಬೆತ್ತ ತಂದಿರುತ್ತಿದ್ದರು. ಪೆಟ್ಟು ತಿಂದು ಅದೇನು ಕಲಿತೆ ಎಂಬುದು ಮರೆತು ಹೋಗಿದೆ. ಆದರೆ ಕೃಷ್ಣಪ್ಪಯ್ಯ ಮಾತ್ರ ನೆನಪಿನಲ್ಲಿದ್ದಾರೆ.

ಇದಾದ ಮೇಲೆ ನಾನು ಅಮ್ಮನ ಊರು ಮೇಳಿಗೆಗೆ ಹೋಗಿ ಅಲ್ಲಿನ ಶಾಲೆಯಲ್ಲಿ ಕೆಲವು ಕಾಲ ಕಲಿತೆ. ಆರು ವರ್ಷ ಇದ್ದಿರಬಹುದು. ಅಲ್ಲಿದ್ದ ಶೇಷಗಿರಿ ಮೇಷ್ಟ್ರು ನನ್ನ ಅಮ್ಮನಿಗೂ ಶಿಕ್ಷಕರಾಗಿದ್ದವರು. ಅದು ಏಕೋಪಾಧ್ಯಾಯ ಶಾಲೆ. ಶಾಲೆಯ ಹೊರಗೂ ಧೂಳು ತುಂಬಿದ ಅಂಗಳವಿತ್ತು. ಆ ಧೂಳಿನಲ್ಲಿ ದುಂಡಗಿನ ಸಣ್ಣ ಸಣ್ಣ ಕುಳಿಗಳ ಒಳಗೆ ಇರುವ ಒಂದು ಕಪ್ಪು ಹುಳು ಇರುತ್ತಿತ್ತು. ಅದನ್ನು 'ತನ್ನಾದೇವಿ', 'ಗುಬ್ಬಿ' ಎಂದೆಲ್ಲಾ ಕರೆಯುತ್ತಾರೆ. ಅದನ್ನು ಕುಳಿಗಳಿಂದ ಎಬ್ಬಿಸಿ, 'ಕಾಶಿಗೆ ಹೋಗೋ ದಾರಿ ತೋರಿಸು, ಕಾಶಿಗೆ ಹೋಗೋ ದಾರಿ ತೋರಿಸು' ಎಂದು ಹೇಳುತ್ತ ಬೆರಳಿನಿಂದ ಸುತ್ತು ಬರುತ್ತಿದ್ದೆವು. ಆಗ ಅದು ಹಿಂದೆ ಹಿಂದೆ ಹೋಗುತ್ತಿತ್ತು. ಮೇಷ್ಟ್ರು ಗದರಿಸಿ ನಮ್ಮನ್ನು ಒಳ ಕರೆದು ಪಾಠ ಮಾಡಬೇಕಾಗುತ್ತಿತ್ತು. ನಮಗೆ ತರಗತಿಯೊಳಗೆ ಕುಳಿತುಕೊಳ್ಳುವುದಕ್ಕಿಂತ ಹೊರಗೆ ಹೋಗಿ ಆಡುವುದೇ ಪ್ರಿಯವಾದುದರಿಂದ ಹೊರಗೆ ಹೋಗುವುದಕ್ಕೆ ಉಪಾಯ ಯೋಚಿಸುತ್ತಲೇ ಇರುತ್ತಿದ್ದೆವು. ಸುಲಭದ ಉಪಾಯವೆಂದರೆ 'ಒಂದಕ್ಕೆ ಸಾರ್' ಎಂದು ಎದ್ದು ನಿಂತು ಕೇಳುವುದು. ಅವರು ಹೊರಗೆ ಹೋಗಲು ಅನುಮತಿ ಕೊಡುತ್ತಿದ್ದರು.

10th_Kannada_Reader1-5.indd 141 03-04-2019 14:08:02

ಸತತ ಮಳೆ ಸುರಿಯುತ್ತಿದ್ದ ಮಳೆಗಾಲದಲ್ಲಿ ಮನೆಯಲ್ಲಿ ಸೋರದ ಭಾಗವನ್ನು ನಾವು ಹುಡುಕಬೇಕಾಗುತ್ತಿತ್ತು. ಮಳೆಗಾಲದ ಆರಂಭಕ್ಕೆ ಮೊದಲೇ ಮನೆಯ ಕೆಲಸಕ್ಕೆ ನಮ್ಮ ಸಂಬಂಧಿಕರು, ಅಪ್ಪನ ಸ್ನೇಹಿತರು – ಒಣ ಸೌದೆ, ಅಕ್ಕಿ, ಬೇಳೆ ಜೋನಿ ಬೆಲ್ಲವನ್ನು ಸಂಗ್ರಹಿಸಲು ನೆರವಾಗುತ್ತಿದ್ದರು. ಆಗೆಲ್ಲ ಕಾಡು ಹಲಸಿನ ಹಣ್ಣು ಯಥೇಚ್ಛವಾಗಿ ಸಿಗುತ್ತಿತ್ತು. ಜೊತೆಗೆ ಅದು ಕಾಯಿಯಿಂದ ಹಣ್ಣಿನ ತನಕ ಎಲ್ಲ ಹಂತಗಳಲ್ಲೂ ಒಂದಲ್ಲ ಒಂದು ಆಹಾರ ಪದಾರ್ಥದ ತಯಾರಿಯಲ್ಲಿ ಉಪಯೋಗಕ್ಕೆ ಬರುತ್ತಿತ್ತು. ಸುರಿಯುವ ಮಳೆಯಲ್ಲಿ ನಾವು ಮಕ್ಕಳೆಲ್ಲ ಬಚ್ಚಲ ಒಲೆಯ ಬೆಂಕಿಯೆದುರು ಕುಳಿತು ಕೈಗಳನ್ನು ಮುಂಚಾಚಿ ಬೆಂಕಿ ಕಾಯಿಸುತ್ತಿದ್ದೆವು. ಆ ಜಡಿಮಳೆಯಲ್ಲಿ ಬೆಂಕಿಯ ಹಿತ ಸುಖವೆನ್ನಿಸುತ್ತಿತ್ತು. ಒಲೆಗೆ ಹಲಸಿನ ಬೀಜಗಳನ್ನು ಹಾಕಿ ಸುಟ್ಟು ತಿನ್ನುತ್ತ ನಮ್ಮ ಜೊತೆ ಇರುತ್ತಿದ್ದ ಯಾರಾದರೂ ದೊಡ್ಡವರು ಹೇಳುವ ಕತೆಗಳನ್ನು ಬಾಯಿ ಬಿಟ್ಟುಕೊಂಡು ಆಲಿಸುತ್ತಿದ್ದೆವು.

ಬೇಸಿಗೆಯಲ್ಲಿ ನಮ್ಮಮ್ಮ ಮಳೆಗಾಲದ ದಿನಗಳಿಗೆಂದು ಹಪ್ಪಳ, ಸಂಡಿಗೆಯಂತಹ ಅನೇಕ ತಿಂಡಿಗಳನ್ನು ಒಣಗಿಸಿ ಇಡುತ್ತಿದ್ದರು. ಮನೆಯ ಹಿರಿಯರಿಗೆ ಮಾತ್ರ ಗೊತ್ತಿದ್ದ ಕೆಲವು ಔಷಧೀಯ ಗುಣಗಳ ಸೊಪ್ಪುಗಳನ್ನು ಬೇಯಿಸಿ ನಿತ್ಯ ಊಟದಲ್ಲಿ ಬಳಸುತ್ತಿದ್ದರು. ಅದು ಎರಡನೇ ಮಹಾಯುದ್ಧದ ಕಾಲ. ಕೆರೆಕೊಪ್ಪದಲ್ಲಿ ಅಂಗಳದ ಆಚೆ ಮನೆಯನ್ನು ಆಕ್ರಮಿಸಲು ಹೊಂಚುತ್ತ ಇರುವ ಅರಣ್ಯವಿತ್ತು. ನಸುಕಿನಲ್ಲಿ ಎದ್ದು, ಮನೆಯೆದುರು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರವೊಂದರಿಂದ ನೆಲದ ಮೇಲೆ ಚೆಲ್ಲಿರುತ್ತಿದ್ದ ನಕ್ಷತ್ರದ ಆಕಾರದ ರಂಜದ ಹೂಗಳನ್ನು ಆರಿಸುವುದು, ದೂರ್ವೆಯನ್ನು ಹುಲ್ಲಲ್ಲಿ ಹುಡುಕಿ ಕಿತ್ತು ತರುವುದು, ಕೇದಗೆ ಅರಳಿದೆಯೇ, ಮರದ ಮೇಲಿನ ಗೂಡಲ್ಲಿ ಮೊಟ್ಟೆ ಮರಿಯಾಯಿತೇ ಎಂದು ಬಿದಿರಿನ ಸಂದಿಯಿಂದ ನಿತ್ಯ ನೋಡುವುದು ನನಗೆ ಖುಷಿಯ ಸಂಗತಿಗಳು. ದೂರ್ವೆಯನ್ನು ಅಜ್ಜಯ್ಯನಿಗೆ ಪೂಜೆಗೆ ಕೊಟ್ಟು, ಅಮ್ಮ ಕಡೆಗೋಲಿನಿಂದ ಮೊಸರು ಕಡೆಯುವಾಗ, 'ಏಳು ನಾರಾಯಣನೆ, ಏಳು ಲಕ್ಷೀರಮಣ' ಎಂಬ ಹಾಡನ್ನು ಹೇಳುವುದನ್ನು ಆಲಿಸುತ್ತ, ರಂಜದ ಹೂವನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತ, ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತ, 'ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ' ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತ ಇರುವುದೇ ನನ್ನ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.

ಕೆರೆಕೊಪ್ಪದಲ್ಲಿ ನಮಗೆಲ್ಲಾ ಚರಟದ ಕಾಫಿ. ಆದರೆ ಕೆಲವು ಸಾರಿ ಅಜ್ಜಯ್ಯನಿಗೆ, ನನ್ನ ತಂದೆ ಶಾನುಭೋಗರಿಗೆ ಮತ್ತು ಅವರ ಗೆಳೆಯರಾದ ಊರಿನ ಪಟೇಲರಿಗೆ ಮಾತ್ರ 'ಒರಿಜಿನಲ್' ಕಾಫಿಪುಡಿಯ ಕಾಫಿ. ಕಾಫಿ ಬೀಜವನ್ನು ಆಗಲೇ ಹುರಿದು, ಆಗಲೇ ಪುಡಿ ಮಾಡಿ, ಆಗಲೇ ಕುದಿಯುವ ನೀರಿಗೆ ಬೆರೆಸಿ ಮುಚ್ಚಿಟ್ಟು, ಅದರ ಗಸಿ ಇಳಿಯುವಷ್ಟು ಹೊತ್ತು ಕಾದು, ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು ಹಿಂಡಿ, ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ ಹದ ಮಾಡಿ ಕಾಫಿ ಮಾಡುವುದು ಸಾಮಾನ್ಯವಾಗಿತ್ತು. ಈ ಕಾಫಿಯನ್ನು ಫಳಫಳ ಹೊಳೆಯುವ ಒಂದು ಹಿತ್ತಾಳೆ ಲೋಟದಿಂದ ಇನ್ನೊಂದು ಲೋಟಕ್ಕೆ ನೊರೆ ಬರುವಂತೆ ಎತ್ತರದಿಂದ ಹಲವು ಸಾರಿ ಹುಯ್ದು ಕುಡಿಯಲು ಅಗತ್ಯವಾದ ಬಿಸಿಗದನ್ನು ಇಳಿಸಿ, ಸೆರಗು ಮುಚ್ಚಿದ ಕೈಯ ಮೇಲೆ ಅದನ್ನು ಇಟ್ಟುಕೊಂಡು ಹಸನ್ಮುಖಿಯಾಗಿ ಅಮ್ಮ ಕುಡಿಯಲು ಕೊಡುತ್ತಿದ್ದರು. ಮಕ್ಕಳಿಗೂ ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು. ನಿತ್ಯ ಈ ಕಾಫಿಯ ಘಮಘಮದ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಅದರ ಚರಟ ಕುದಿಸಿ ಮಾಡಿದ ಕಾಫಿಯ ಸೇವನೆ ನಮಗೆ. ಇವೆಲ್ಲದರ ತಯಾರಿಯೂ ನೆನಪಾಗುತ್ತದೆ. ಕಾಫಿ ಬೀಜವನ್ನು ಬ್ಯಾರಿಯೊಬ್ಬರು ತಿಂಗಳಿಗೊಮ್ಮೆ ನಮಗೆ ತಂದು ಕೊಡುತ್ತಿದ್ದರು. ಈ ವಿಶೇಷ ಪದಾರ್ಥಗಳೆಲ್ಲವನ್ನೂ ಕಡವಾಗಿ ನಾವು ಪಡೆಯುವುದು ವರ್ಷಕ್ಕೊಮ್ಮೆ. ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ, ಯುಗಾದಿಯಿಂದ ಇನ್ನೊಂದು ಯುಗಾದಿಗೆ, ಗೌರಿ ಹಬ್ಬದಿಂದ ಇನ್ನೊಂದು ಗೌರಿ ಹಬ್ಬದವರೆಗೆ ಈ ಕಡದ ಅವಧಿ. ನಾವು ಬೆಳೆದ ಅಡಿಕೆಯನ್ನೋ, ಭತ್ತವನ್ನೋ ಬದಲಿಗೆ ಕೊಟ್ಟು ಕಡವನ್ನು ತೀರಿಸುತ್ತಿದ್ದರು. ಜರಿ ಟೋಪಿ ತೊಟ್ಟ ಬ್ಯಾರಿ ಬಂದಾಗಲೆಲ್ಲಾ ನಮಗೆ ಸಕ್ಕರೆಯಿಂದ ಮಾಡಿದ ಮಿಠಾಯಿ ಪುಕ್ಕಟೆ ಸಿಗುತ್ತಿತ್ತು. ನನ್ನ ಭಯ ನಿವಾರಣೆಗೆಂದು ಎಂದೋ ಒಮ್ಮೆ ಕರಡಿ ಆಡಿಸುವವನು ಕರೆತಂದ ಕಡುಕಪ್ಪು ಕರಡಿ ಮೇಲೆ ನನ್ನನ್ನು ಕೂರಿಸಿ ಅಂಗಳ ಸುತ್ತಿಸಿದ್ದೂ ನೆನಪಿದೆ.

10th_Kannada_Reader1-5.indd 142 03-04-2019 14:08:02

ಕೈಯಲ್ಲಿ ಕಾಸಾಡದ ಆ ಕಾಲದಲ್ಲಿ ಹಲವು ಸಾರಿ ಮನೆಯಲ್ಲಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಇರುತ್ತಿರಲಿಲ್ಲ. ಕೆಲವೊಮ್ಮೆ ಅಮ್ಮ ಸ್ವಲ್ಪ ಕಾಫಿ ಪುಡಿಯಲ್ಲಿ ಒಂದು ಲೋಟ ಕಾಫಿ ಮಾಡಿ ಅಪ್ಪನಿಗೆ ಕೊಟ್ಟು ಆ ಕಾಫಿ ಮಾಡಿದ ಚರಟದಲ್ಲಿ ನನಗೆ, ತನಗೆ ಮತ್ತ ನನ್ನಜ್ಜನಿಗೆ ಕೊಡುತ್ತಿದ್ದರು. ಅಜ್ಜ ಮನೆಗೆ ಹಿರಿಯರಾದ್ದರಿಂದ 'ನನಗೆ ಚರಟದಲ್ಲಿ ಕಾಫಿಯೋ?' ಅಂತ ಕೇಳಿದ್ದಿದೆ.

ಮನೆಯಲ್ಲಿ ಅಜ್ಜಿಗೂ, ಅಮ್ಮನಿಗೂ ಕಿರಿಕಿರಿಯಾದಾಗ ಅಜ್ಜಯ್ಯ ಸೌದೆ ತರುವ ನೆಪ ಮಾಡಿ ಕತ್ತಿ ಹಿಡಿದು ಕಾಡಿಗೆ ನಡೆದು ಬಿಡುತ್ತಿದ್ದರು. ನಾನೂ ಹಠ ಹಿಡಿದು ಅವರ ಜೊತೆ ಹೋಗುತ್ತಿದ್ದೆ. ಅಮ್ಮನಿಗೆ ನಾನು ಹೀಗೆ ಅಜ್ಜಯ್ಯನ ಜೊತೆ ಪಟ್ಟಾಂಗ ಮಾಡುತ್ತ ಅಲೆಯುವುದು ಇಷ್ಟವಾಗುತ್ತಿರಲಿಲ್ಲ. ಅಂತಹ ಸಮಯದಲ್ಲಿ ಏನೇನೋ ನೆವ ಮಾಡಿಕೊಂಡು ನಾನು ಕಾಡುಹರಟೆಯಲ್ಲಿ ಕಾಲ ಕಳೆಯುತ್ತ ಅಕ್ಷರ ತಿದ್ದುತ್ತಿಲ್ಲವೆಂದು ಅಜ್ಜಯ್ಯನ ಎದುರೇ ಬಯ್ಯುತ್ತಿದ್ದರು.

ಕೃತಿ–ಕರ್ತೃ ಪರಿಚಯ



ಡಾ. ಯು.ಆರ್.ಅನಂತಮೂರ್ತಿ

ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳು, ಚಿಂತಕರು ಹಾಗೂ ವಿಮರ್ಶಕರೆಂದು ಪ್ರಖ್ಯಾತರಾದವರು ಡಾ. ಯು.ಆರ್. ಅನಂತಮೂರ್ತಿಯವರು. ಇವರ ಪೂರ್ಣ ಹೆಸರು ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ. ಇವರ ಕಾಲ ಕ್ರಿ.ಶ. 1937–2014. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಗ್ರಾಮದಲ್ಲಿ ಇವರು ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಎಂ.ಎ., ಪದವಿ ಪಡೆದು ಇಂಗ್ಲೆಂಡಿನ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾನಿಲಯದಿಂದ 'ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯ' ಎಂಬ ವಿಷಯದಲ್ಲಿ ಪಿಎಚ್.ಡಿ., ಪದವಿ ಪಡೆದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ, ಕೊಟ್ಟಾಯಂನಲ್ಲಿರುವ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಸಹ ಸೇವೆ ಸಲ್ಲಿಸಿದರು.

ಇವರ ಪ್ರಮುಖ ಕೃತಿಗಳು : 'ಸಂಸ್ಕಾರ', 'ಭವ', 'ಅವಸ್ಥೆ', 'ಭಾರತೀಪುರ' ಮುಂತಾದವು ಇವರ ಕಾದಂಬರಿಗಳು. 'ಆವಾಹನೆ'(ನಾಟಕ); 'ಮೌನಿ', 'ಪ್ರಶ್ನೆ', 'ಎಂದೆಂದೂ ಮುಗಿಯದ ಕಥೆ' – ಇವು ಇವರ ಕಥಾ ಸಂಕಲನಗಳು; 'ಮಿಥುನ', 'ಅಜ್ಜನ ಹೆಗಲ ಸುಕ್ಕುಗಳು' ಮುಂತಾದವು ಕವನ ಸಂಕಲನಗಳು. ಹೀಗೆ ವಿವಿಧ ಸಾಹಿತ್ಯ ಪ್ರಕಾರದಲ್ಲಿ ಹಲವಾರು ಕೃತಿಗಳನ್ನು ಇವರು ರಚಿಸಿದ್ದಾರೆ. ಇವರಿಗೆ, 'ಗೌರವ ಡಿ.ಲಿಟ್..' 'ರಾಜ್ಯೋತ್ಸವ ಪ್ರಶಸ್ತಿ', ಭಾರತ ಸರ್ಕಾರದ 'ಪದ್ಮಭೂಷಣ ಪುರಸ್ಕಾರ', 1999ರಲ್ಲಿ 'ಭಾರತೀಯ ಜ್ಞಾನಪೀಠ ಪ್ರಶಸ್ತಿ' ಮೊದಲಾದ ಪುರಸ್ಕಾರಗಳು ಲಭಿಸಿವೆ. ಇವರು 2002ರಲ್ಲಿ ತುಮಕೂರಿನಲ್ಲಿ ನಡೆದ 66ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಗದ್ಯಭಾಗವನ್ನು ಯು.ಆರ್. ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಪದಗಳ ಅರ್ಥ

ಅಂಚು–ದಡ, ತೀರ; ಆತಂಕ–ಭಯ, ಅಡ್ಡಿ; ಕಡ–ಸಾಲ; ಕಾಸು–ಹಣ, ದುಡ್ಡು; ಕೊಂಚ–ಅಲ್ಪ, ಸ್ವಲ್ಪ; ಚರಟ–ಗಸಿ, ಕಾಫಿ ಸೋಸಿದ ನಂತರದ ಉಳಿಕೆ; ಚಿಮಣಿ ದೀಪ–ಸೀಮೆಎಣ್ಣೆ ದೀಪ; ಚೌಲ–ಮುಡಿ ತೆಗೆಸು, ತಲೆಗೂದಲನ್ನು ತೆಗೆಸುವುದು; ಜೋನಿಬೆಲ್ಲ–ನೀರುಬೆಲ್ಲ; ದೂರ್ವೆ–ಗರಿಕೆ; ದೈನಿಕ–ದಿನನಿತ್ಯ, ಪ್ರತಿದಿನ; ನಸುಕು–ಮುಂಜಾನೆ, ಬೆಳಗಿನ ಸಮಯ; ನಿವಾರಣೆ–ದೂರ ಮಾಡು, ಹೋಗಲಾಡಿಸು; ನೆವ–ಕಾರಣ, ನೆಪ; ಪಟ್ಟಾಂಗ–ಹರಟೆ, ಮಾತುಕತೆ; ಯಥೇಚ್ಛ–ಬೇಕಾದಷ್ಟು, ಮನಸ್ಸಿಗೆ ಬಂದಷ್ಟು; ಸಂಗತಿ–ವಿಷಯ; ಹಸನ್ಮುಖಿ–ನಗುಮೊಗ.

10th_Kannada_Reader1-5.indd 143 03-04-2019 14:08:02

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು?
2. ಲೇಖಕರ ಮೊದಲ ವಿದ್ಯಾಗುರು ಯಾರು?
3. ಸಣ್ಣ ಕುಳಿಯೊಳಗಿನ ಕಪ್ಪು ಹುಳುವನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು?
4. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು?
5. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?
6. ಲೇಖಕರ ಅಕ್ಷರಾಭ್ಯಾಸ ಆರಂಭವಾದದ್ದು ಹೇಗೆ?
7. ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳಾವುವು?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಹುಲಿಗಳ ಭಯಕ್ಕೆ ದನಗಳು ಹೇಗೆ ಪ್ರತಿಕ್ರಿಯಿಸುತ್ತಿದ್ದವು?
2. ಲೇಖಕರು ರಂಜದ ಹೂವಿನ ಬಗ್ಗೆ ತಿಳಿಸುವ ವಿಷಯಗಳಾವುವು? ತಿಳಿಸಿ.
3. ಕೃಷ್ಣಪ್ಪಯ್ಯ ಶಿಕ್ಷಕರ ಬಗ್ಗೆ ಬರೆಯಿರಿ?
4. ಕಪ್ಪು ಹುಳುವನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು? ಅದರ ಜೊತೆಗೆ ಹುಡುಗರು ಹೇಗೆ ಆಟವಾಡುತ್ತಿದ್ದರು?
5. ಮಳೆಗಾಲಕ್ಕೂ ಮುನ್ನ ಮಲೆನಾಡನಲ್ಲಿ ಏನೆಲ್ಲಾ ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗಿತ್ತು?
6. ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳಾವುವು?
7. ವಿಶೇಷ ಪದಾರ್ಥಗಳನ್ನು ಸಾಲವಾಗಿ ಪಡೆಯುತ್ತಿದ್ದ ಹಾಗೂ ತೀರಿಸುತ್ತಿದ್ದ ಬಗೆ ಹೇಗೆ? ವಿವರಿಸಿ.



ಚಟುವಟಿಕೆ

1. ನಿಮ್ಮ ಬಾಲ್ಯದ ನೆನಪುಗಳನ್ನು ಕುರಿತು ಬರೆಯಿರಿ.
2. ಲೇಖಕರ ಆತ್ಮಕಥೆಯನ್ನು ಸಂಗ್ರಹಿಸಿ ಓದಿರಿ.
3. ಪ್ರಸಿದ್ಧ ವ್ಯಕ್ತಿಗಳ ಆತ್ಮಕಥೆಗಳನ್ನು ಸಂಗ್ರಹಿಸಿ ಓದಿರಿ.



10th_Kannada_Reader1-5.indd 144 03-04-2019 14:08:02

ವ್ಯಾಕರಣ

ಘಟಕ ವಿಳು

ಛಂದಸ್ಸು

ವ್ಯಾಕರಣ ಶಾಸ್ತ್ರವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದ ಶಾಸ್ತ್ರವಾದರೆ ಛಂದಸ್ಸು ಕೇವಲ ಪದ್ಯಗಳಿಗೆ ಮಾತ್ರ ಸಂಬಂಧಿಸಿದ ಶಾಸ್ತ್ರವಾಗಿದೆ. ಪದ್ಯಗಳು ನಾನಾ ರೀತಿಯಲ್ಲಿರುತ್ತವೆ. ಕೆಲವು ಪದ್ಯಗಳು ನಾಲ್ಕು ಸಾಲಿನವು, ಕೆಲವು ಪದ್ಯಗಳು ಆರು ಸಾಲಿನವು, ಕೆಲವು ಮೂರು ಸಾಲಿನವು. ಪದ್ಯಗಳ ಸಾಲುಗಳಲ್ಲಿ ಕೆಲವು ಸಾಲುಗಳು ಉದ್ದ, ಕೆಲವು ಸಾಲುಗಳು ಚಿಕ್ಕವು – ಇಂತಹ ಪದ್ಯಗಳ ನಿಯಮಗಳನ್ನು ತಿಳಿಸುವ ಶಾಸ್ತ್ರವೇ ಛಂದಸ್ಸು.

ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ವ್ಯಾಕರಣದಂತೆ ಛಂದಸ್ಸಿನ ಅನುಭವವನ್ನು ಮಾಡಿಕೊಳ್ಳುವುದೂ ಅಗತ್ಯವಾಗಿದೆ. ಛಂದಸ್ಸು ಎಂದರೆ ಪದ್ಯದ ನಿಯಮವನ್ನು ತಿಳಿಸುವ ಶಾಸ್ತ್ರ. ವ್ಯಾಕರಣವು ಗದ್ಯ ಪದ್ಯಗಳೆರಡರ ಭಾಷಾನಿಯಮವನ್ನು ತಿಳಿಸುವುದು. ಛಂದಸ್ಸು ಪದ್ಯಗಳ ನಿಯಮವನ್ನು ಮಾತ್ರ ತಿಳಿಸುವುದು. ಮಹತ್ತಾದ ವಿಷಯಗಳನ್ನು ಸಂಗ್ರಹಿಸಿ ಹೇಳುವುದಕ್ಕೂ ರಸವತ್ತಾದ ಅಂಶಗಳನ್ನು ಮನೋಹರವಾಗಿ ಹೇಳುವುದಕ್ಕೂ ನೆನಪಿನಲ್ಲಿಟ್ಟುಕೊಳ್ಳುವುದಕ್ಕೂ ಪದ್ಯವು ಗದ್ಯಕ್ಕಿಂತ ಸುಲಭ. ಆದುದರಿಂದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಲ್ಲಿ ಗದ್ಯಕ್ಕಿಂತ ಪದ್ಯವೇ ಅಧಿಕ. ವ್ಯಾಕರಣ, ಛಂದಸ್ಸು, ಅಲಂಕಾರಾದಿಗಳನ್ನು ತಿಳಿಸುವ ಗ್ರಂಥಗಳು ಹಿಂದಿನ ಕಾಲದಲ್ಲಿ ಪದ್ಯಮಯವಾಗಿಯೇ ರಚಿತವಾಗಿವೆ. ಆದುದರಿಂದ ಹಿಂದಿನ ಪದ್ಯಗಳನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೂ ಹೊಸದಾಗಿ ಪದ್ಯಗಳನ್ನು ಬರೆಯುವುದಕ್ಕೂ ಛಂದಸ್ಸಿನ ಅಭ್ಯಾಸವು ಅಗತ್ಯವಾಗಿದೆ.

ಛಂದಸ್ಸು ಎಂಬುದು ಮುಖ್ಯವಾಗಿ ಗುರು, ಲಘು, ಅಕ್ಷರಗಳ ವಿನ್ಯಾಸ, ಮಾತ್ರೆ, ಗಣ, ಪ್ರಾಸ, ಯತಿ ಮುಂತಾದವುಗಳನ್ನು ಒಳಗೊಂಡಿದೆ.

ಪದ್ಯ ಅಥವಾ ವೃತ್ತವು ಪಾದದಿಂದ ಕೂಡಿರುವುದು. ಪಾದಗಳು ಗಣ ಮತ್ತು ಪ್ರಾಸ ನಿಯಮವುಳ್ಳ ಶಬ್ದ ಸಂಘಟನೆಗಳು. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದಿಂದ ಬಂದಿರುವ ಛಂದಸ್ಸು ಹಾಗೂ ಅಚ್ಚಗನ್ನಡ ಛಂದಸ್ಸು ಎಂದು ಎರಡು ವಿಧಗಳಿವೆ. ಪದ್ಯಗಳ ಪಾದಗಳು ವರ್ಣಗಣ, ಮಾತ್ರಾಗಣ ಮತ್ತು ಅಂಶಗಣ ನಿಯಮಗಳಿಂದ ಕೂಡಿದವುಗಳಾಗಿರುತ್ತವೆ. ಸಂಸ್ಕೃತದಿಂದ ಬಂದಿರುವ ವೃತ್ತ ಜಾತಿಗಳು ವರ್ಣಗಣ ನಿಯಮವುಳ್ಳವು. ಕನ್ನಡದ ವೃತ್ತಗಳು ಮಾತ್ರಾಗಣ ಮತ್ತು ಅಂಶ ಗಣ ನಿಯಮದಿಂದ ಕೂಡಿದವುಗಳು.

ಮಾತ್ರೆ

ಮಾತ್ರೆಗಳಲ್ಲಿ ಲಘು, ಗುರು ಮತ್ತು ಪ್ಲುತವೆಂದು ಮೂರು ವಿಧಗಳಿವೆ.

ಲಘು : ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲ ಪರಿಮಾಣಕ್ಕೆ 'ಮಾತ್ರೆ' ಎಂದು ಹೆಸರು. ಇದಕ್ಕೆ 'ಲಘು' ಎಂದು ಸಂಜ್ಞೆ.

ಉದಾಹರಣೆ :

ಲಘುವಿಗೆ : ᑌᑌᑌ ᑌᑌ ᑌᑌ
ಹರಕೆ ವಿದಿ ಕೃಪೆ
ᑌᑌᑌ ᑌᑌ
ಧವಳ ಗಿರಿ

ಗುರು : ಒಂದು ದೀರ್ಘಾಕ್ಷರವನ್ನು ಉಚ್ಚರಿಸಲು ಎರಡು ಮಾತ್ರೆಯಷ್ಟು ಕಾಲಾವಧಿ ಬೇಕು. ಇದಕ್ಕೆ 'ಗುರು' ಎಂದು ಸಂಜ್ಞೆ.

10th_Kannada_Reader1-5.indd 145 03-04-2019 14:08:02

ಉದಾಹರಣೆ :

ಬಾ, ಇಂದಲ್ಲಾ

ರಾಜಾ ಮೀರಾ ರಾಧಾ

ಎಲ್ಲಾ ಹ್ರಸ್ವಾಕ್ಷರಗಳು ಲಘುಗಳಾಗುತ್ತವೆ. ಅವನ್ನು ಗುರುತಿಸುವುದು ಸುಲಭ. ಪ್ಲುತಾಕ್ಷರಗಳು ಪದ್ಯಗಳಲ್ಲಿ ಬರುವುದು ಬಹು ವಿರಳ. ಅವನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಒಂದು ಅಕ್ಷರವು ಈ ಕೆಳಗಿನ ಆರು ಕಾರಣಗಳಿಂದ ಗುರುವಾಗಬಹುದು.

ಉದಾಹರಣೆ : – – – – –

1. ದೀರ್ಘಸ್ವರಯುಕ್ತವಾದ ಅಕ್ಷರ : ಆಟ, ಕಾಲಾಳು, ಮೇಲಾಟ
   – – –
2. ಅನುಸ್ವಾರಯುಕ್ತವಾದ ಅಕ್ಷರ : ಅಂದು, ಇಂದು, ಚಂದ
   – –
3. ವಿಸರ್ಗದ ಹಿಂದಿನ ಅಕ್ಷರ : ದುಃಖ, ಅಂತಃಕರಣ
   – – –
4. ಸಂಯುಕ್ತಾಕ್ಷರದ ಹಿಂದಿನ ಅಕ್ಷರ : ಎಲ್ಲ ಬಲ್ಲವರಿಲ್ಲ
   – – –
5. ಸ್ವರ ರಹಿತ ವ್ಯಂಜನದ ಹಿಂದಿನ ಅಕ್ಷರ : ನಿಲ್ ಕಣ್ ಪೆಸರ್
6. ಮಾತ್ರಾಗಣ ನಿಯಮದ ಷಷ್ಟ್ಯರ್ಧದ ಕಡೆಯ ಅಕ್ಷರ ಹ್ರಸ್ವಾಕ್ಷರವಿದ್ದರೂ ಗುರುವಾಗುವುದು.

ಉದಾಹರಣೆ :

ಏನ ಕಲಿತರದೇನು ಯತ್ನದೊ
ಳೇನ ಮಾಡಿದರೇನು ಸರ್ವವು –
ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿಹುದು ॥

ಒಂದು ಅಕ್ಷರವು ಎರಡು ಕಾರಣಗಳಿಂದ ಗುರುವಾದರೂ ಅದಕ್ಕೆ ಒಂದೇ ಸಂಜ್ಞೆ ಬರುತ್ತದೆ ಎಂಬುದನ್ನೂ ಶಿಥಿಲದ್ವಿತ್ವದ ಹಿಂದಿನ ಅಕ್ಷರಕ್ಕೆ ಗುರು ಸಂಜ್ಞೆಯಿಲ್ಲವೆಂಬುದನ್ನೂ ತಿಳಿಯಿರಿ.

ಪ್ಲುತ :

ಅದೇ ದೀರ್ಘಾಕ್ಷರವನ್ನು ಇನ್ನಷ್ಟು ಎಳೆದು ಉಚ್ಚರಿಸಿದಲ್ಲಿ ಅದಕ್ಕೆ ಮೂರು ಮಾತ್ರೆಗಳ ಕಾಲಾವಧಿ ಬೇಕು. ಇದಕ್ಕೆ 'ಪ್ಲುತ' ಎಂದು ಸಂಜ್ಞೆ. ಪ್ಲುತವನ್ನು ಸೂಚಿಸಲು 'ऽ' ಎಂಬ ಸಂಜ್ಞೆಯನ್ನೂ ಉಪಯೋಗಿಸುತ್ತಾರೆ.

ಉದಾಹರಣೆ :

ಹಾ ರಾಮಾ ರಾಮಾऽ ಎಂದು ಸೀತೆ ಬಾಯಳಿದಳ್ತಳ್

ಲಘುವನ್ನು ಸೂಚಿಸಲು 'ು' ಎಂಬ ಸಂಜ್ಞೆಯನ್ನೂ; ಗುರುವನ್ನು ಸೂಚಿಸಲು '–' ಎಂಬ ಸಂಜ್ಞೆಯನ್ನೂ; ಪ್ಲುತವನ್ನು ಸೂಚಿಸಲು 'ऽ' ಎಂಬ ಸಂಜ್ಞೆಯನ್ನೂ ಉಪಯೋಗಿಸುತ್ತಾರೆ.

ಗಣಗಳು

ಗಣವೆಂದರೆ ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಅಥವಾ ಮಾತ್ರೆಗಳ ಗುಂಪು. ಇದರಲ್ಲಿ ವರ್ಣಗಣ(ಅಕ್ಷರಗಣ), ಮಾತ್ರಾಗಣ ಮತ್ತು ಅಂಶಗಣವೆಂದು ಮೂರು ವಿಧಗಳಿವೆ. ವರ್ಣಗಣ ನಿಯಮಕ್ಕೆ ಒಳಪಟ್ಟ ಪದ್ಯಗಳನ್ನು ವರ್ಣವೃತ್ತಗಳೆಂದೂ ಮಾತ್ರಾಗಣ ನಿಯಮಕ್ಕೆ ಒಳಪಟ್ಟವುಗಳನ್ನು ಮಾತ್ರಾವೃತ್ತಗಳೆಂದೂ ಅಂಶಗಣಗಳುಳ್ಳ ವೃತ್ತಗಳನ್ನು ಅಂಶಗಣ ವೃತ್ತಗಳೆಂದೂ ಕರೆಯುವರು.

10th_Kannada_Reader1-5.indd 146 03-04-2019 14:08:02

ವರ್ಣಗಣ (ಅಕ್ಷರ ಗಣ)

ವರ್ಣಗಣಗಳಿಂದ ಕೂಡಿದ ಪಾದವುಳ್ಳ ವೃತ್ತಗಳನ್ನು ಮೂರು ಮೂರು ಅಕ್ಷರಗಳ ಗುಂಪುಗಳನ್ನಾಗಿ ವಿಭಾಗಿಸುವರು. ಮೂರು ಮೂರು ಅಕ್ಷರಗಳು ಸೇರಿ ಒಂದು ಗಣವಾಗುವುದು. ಈ ವರ್ಣಗಣವನ್ನು ಮಗಣ, ನಗಣ, ಭಗಣ,ಯಗಣ, ಜಗಣ, ರಗಣ, ಸಗಣ ಮತ್ತು ತಗಣವೆಂದು ಎಂಟು ವಿಧವಾಗಿ ವಿಂಗಡಿಸಿದ್ದಾರೆ. ಅವುಗಳ ಲಕ್ಷಣವನ್ನು ಈ ಪದ್ಯದಿಂದ ತಿಳಿಯಬಹುದು.

ಗುರು ಲಘು ಮೂರಿರೆ ಮ ನ ಗಣ
ಗುರು ಲಘು ಮೊದಲಲ್ಲಿ ಬರಲು ಭ ಯ ಗಣ
ಗುರು ಲಘು ನಡುವಿರೆ ಜ ರ ಗಣ
ಗುರು ಲಘು ಕಡೆಯಲ್ಲಿ ಬರಲು ಸ ತ ಗಣಮಕ್ಕುಂ ॥

ಉದಾಹರಣೆ :

		– – –	
ಗುರು ಮೂರಿದ್ದರೆ	– – –	ಮಗಣ	ಮಾರ್ತಾಂಡಂ
		ಽಽಽ	
ಲಘು ಮೂರಿದ್ದರೆ	ಽ ಽ ಽ	ನಗಣ	ಕನಕ
		– ಽ ಽ	
ಗುರು ಮೊದಲಿದ್ದರೆ	– ಽ ಽ	ಭಗಣ	ಚಾಮರ
		ಽ – –	
ಲಘು ಮೊದಲಿದ್ದರೆ	ಽ – –	ಯಗಣ	ಸುಧಾಮಂ
		ಽ – ಽ	
ಗುರು ನಡುವಿದ್ದರೆ	ಽ – ಽ	ಜಗಣ	ಸಮಾಜ
		– ಽ –	
ಲಘು ನಡುವಿದ್ದರೆ	– ಽ –	ರಗಣ	ರಾಜಸಂ
		ಽ ಽ –	
ಗುರು ಕಡೆಯಲ್ಲಿದ್ದರೆ	ಽ ಽ –	ಸಗಣ	ವನಜಂ
		– – ಽ	
ಲಘು ಕಡೆಯಲ್ಲಿದ್ದರೆ	– – ಽ	ತಗಣ	ಸಂತೋಷ

ಇದನ್ನು ಸುಲಭವಾಗಿ ನೆನಪಿಲ್ಲಿಟ್ಟುಕೊಳ್ಳಲು **'ಯ ಮಾ ತಾ ರಾ ಜ ಭಾ ನ ಸ ಲ ಗಂ'** ಎಂಬ ಸೂತ್ರವನ್ನು ಮಾಡಿಕೊಂಡಿರುವರು. ಈ ಸೂತ್ರದಲ್ಲಿ ಮೊದಲಿನಿಂದ ಕ್ರಮವಾಗಿ ಮೂರು ಅಕ್ಷರಗಳನ್ನು ತೆಗೆದುಕೊಂಡಾಗ ಪ್ರತಿ ಗುಂಪಿನ ಮೊದಲನೆಯ ಅಕ್ಷರವು ಗಣದ ಹೆಸರನ್ನು ಸೂಚಿಸುತ್ತದೆ.

ಉದಾಹರಣೆ :

ಯ ಮಾ ತಾ	ಽ – –
ಮಾ ತಾ ರಾ	– – –
ತಾ ರಾ ಜ	– – ಽ
ರಾ ಜ ಭಾ	– ಽ –
ಜ ಭಾ ನ	ಽ – ಽ
ಭಾ ನ ಸ	– ಽ ಽ
ನ ಸ ಲ	ಽ ಽ ಽ
ಸ ಲ ಗಂ	ಽ ಽ –

10th_Kannada_Reader1-5.indd 147 03-04-2019 14:08:02

ಮಾತ್ರಾಗಣ

ನಿರ್ದಿಷ್ಟವಾದ ಮಾತ್ರೆಗಳ ಸಮೂಹವನ್ನು 'ಮಾತ್ರಾಗಣಗಳು' ಎನ್ನುತ್ತೇವೆ. ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣ ಎಂದು ಇವುಗಳಲ್ಲಿ ಮೂರು ವಿಧಗಳಿವೆ.

ಕನ್ನಡ ಛಂದೋನಿಯಮಕ್ಕೆ ಒಳಪಟ್ಟ ವೃತ್ತಗಳಲ್ಲಿ ಹೆಚ್ಚಿನವು ಮಾತ್ರಾಗಣ ನಿಯಮದಿಂದ ಕೂಡಿದವುಗಳಾಗಿವೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಕಂದಪದ್ಯ, ರಗಳೆ ಮುಂತಾದವು ಮಾತ್ರಾಗಣ ನಿಯಮಕ್ಕೆ ಒಳಪಟ್ಟವುಗಳಾಗಿವೆ. ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಮೊದಲಾದವು ಕೂಡ ಮಾತ್ರಾ ನಿಯಮದಿಂದಲೇ ಉಂಟಾದವುಗಳಲ್ಲದೆ ಅಕ್ಷರ ಗಣ ನಿಯಮವುಳ್ಳವುಗಳಲ್ಲ. ಕಂದಪದ್ಯ ಮಾತ್ರಾಗಣ ಮತ್ತು ಅಕ್ಷರಗಣ ನಿಯಮವೆಂಬ ಎರಡು ನಿಯಮಗಳ ಮಿಲನದಿಂದ ಉಂಟಾದಂತೆ ಕಂಡು ಬರುತ್ತದೆ.

ಮಾತ್ರಾಗಣಗಳಲ್ಲಿ ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣಗಳೆಂದು ಮುಖ್ಯವಾಗಿ ಮೂರು ವಿಧಗಳಿವೆ. ಇವುಗಳಲ್ಲಿ ಮೂರು ಮಾತ್ರೆಯ ಗಣಗಳಲ್ಲಿ ಮೂರು ವಿಧಗಳಿವೆ. ನಾಲ್ಕು ಮಾತ್ರೆಯ ಗಣಗಳಲ್ಲಿ ಐದು ವಿಧಗಳಿವೆ. ಐದು ಮಾತ್ರೆಯ ಗಣಗಳಲ್ಲಿ ಎಂಟು ವಿಧಗಳಿವೆ.

ಉದಾಹರಣೆ :

1. ಮೂರು ಮಾತ್ರೆಯ ಗಣಗಳು ಮೂರು ವಿಧ

ᴗ ᴗ ᴗ

– ᴗ

ᴗ –

2. ನಾಲ್ಕು ಮಾತ್ರೆಯ ಗಣಗಳು ಐದು ವಿಧ

ᴗ ᴗ ᴗ ᴗ

– –

ᴗ ᴗ –

– ᴗ ᴗ

ᴗ – ᴗ

3. ಐದು ಮಾತ್ರೆಯ ಗಣಗಳು ಎಂಟು ವಿಧ

ᴗ ᴗ ᴗ ᴗ ᴗ

– ᴗ ᴗ ᴗ

ᴗ ᴗ – ᴗ

– – ᴗ

– ᴗ –

ᴗ ᴗ ᴗ –

ᴗ – ᴗ ᴗ

ᴗ – –

ಅಂಶಗಣ

ಈ ಗಣದಲ್ಲಿ ನಿರ್ದಿಷ್ಟ ಅಂಶಗಳಿರುತ್ತವೆ. ಗಣದ ಆದಿಯಲ್ಲಿ ಬರುವ ಅಂಶವನ್ನು ಮೂಲಾಂಶವೆನ್ನುತ್ತಾರೆ. ಅಂಶಗಣವನ್ನು ಅವುಗಳ ಅಂಶಗಳಿಂದ ನಿಶ್ಚಯಿಸಬೇಕು. ಗಣದ ಆದಿಯಲ್ಲಿ ಬರುವ ಅಂಶವನ್ನು ಮೂಲಾಂಶವೆಂದು ಕರೆಯುತ್ತಾರೆ. ಇದರಲ್ಲಿ ಒಂದು ಗುರು ಅಥವಾ ಎರಡು ಲಘುಗಳು ಇರಬೇಕು. ಮುಂದೆ ಬರುವ ಒಂದು ಗುರು ಅಥವಾ ಒಂದು ಲಘುವನ್ನು ಒಂದು ಅಂಶವೆಂದು ಪರಿಗಣಿಸಲಾಗುತ್ತದೆ. ಅಂಶಗಣದಲ್ಲಿ ಬ್ರಹ್ಮಗಣ, ವಿಷ್ಣುಗಣ ಮತ್ತು ರುದ್ರಗಣವೆಂದು ಮೂರು ವಿಧಗಳಿವೆ. ಬ್ರಹ್ಮಗಣದಲ್ಲಿ ಎರಡು ಅಂಶಗಳೂ ವಿಷ್ಣುಗಣದಲ್ಲಿ ಮೂರು ಅಂಶಗಳೂ ರುದ್ರಗಣದಲ್ಲಿ ನಾಲ್ಕು ಅಂಶಗಳೂ ಇರುತ್ತವೆ. ಬ್ರಹ್ಮಗಣಗಳು ನಾಲ್ಕು ವಿಧವಾಗಿಯೂ ವಿಷ್ಣುಗಣಗಳು ಎಂಟು ವಿಧವಾಗಿಯೂ, ರುದ್ರಗಣಗಳು ಹದಿನಾರು ವಿಧವಾಗಿಯೂ ಬರುತ್ತವೆ. ಅಚ್ಚಗನ್ನಡ ಛಂದಸ್ಸುಗಳು ಅಂಶಗಣಗಳಿಂದ ರಚಿತವಾಗಿವೆ.

10th_Kannada_Reader1-5.indd 148 03-04-2019 14:08:02

ಉದಾಹರಣೆಗೆ :

ಬ್ರಹ್ಮಗಣಗಳು 4 ವಿಧವಾಗಿವೆ :

– –	ಬ್ರಹ್ಮಂ
∪ ∪ –	ಸುರಪಂ
– ∪	ಧಾತೃ
∪ ∪ ∪	ಅಜನು

ವಿಷ್ಣುಗಣಗಳು 8 ವಿಧವಾಗಿವೆ :

– – –	ಗೋವಿಂದಂ
– – ∪	ಕಂಸಾರಿ
– ∪ –	ಶ್ರೀಪತೀ
∪ ∪ ∪ –	ಪರಹಿತಂ
∪ ∪ – ∪	ತರಕಾರಿ
∪ ∪ – –	ಹೃಷಿಕೇಶಂ
– ∪ –	ಮಾಧವಂ
∪ ∪ ∪ ∪	ನರಹರಿ

ರುದ್ರಗಣಗಳು 16 ವಿಧವಾಗಿವೆ :

– – – –	ಗಂಗಾಧೀಶಂ
– – – ∪	ಕಂದರ್ಪಾರಿ
– – ∪ ∪	ಭೂತಾಗ್ರಣಿ
– ∪ ∪ ∪	ಕಾಮರಿಪು
– ∪ – –	ನೀಲಕಂಠಂ
– – ∪ –	ಕಾಮಾಂತಕಂ
∪ ∪ – – –	ಗಿರಿಜಾನಾಥಂ
∪ ∪ ∪ – –	ವೃಷಭಲಕ್ಷ್ಯಂ
– ∪ ∪ –	ಶೂಲಧರಂ
∪ ∪ ∪ ∪ –	ಪುರಮಥನಂ
∪ ∪ – – ∪	ಮದನಧ್ವಂಸಿ
– ∪ – ∪	ಚಂದ್ರಮೌಳಿ
∪ ∪ ∪ – ∪	ಭುಜಗಧಾರಿ
∪ ∪ – ∪ ∪	ತ್ರಿಜಗದ್ಗುರು
∪ ∪ ∪ ∪ ∪	ಮದನರಿಪು

ವರ್ಣ ಗಣ (ಅಕ್ಷರ ಗಣ) ವೃತ್ತಗಳು

ಕನ್ನಡದಲ್ಲಿ ಬಳಕೆಯಲ್ಲಿರುವ ವರ್ಣವೃತ್ತಗಳು ಸಂಸ್ಕೃತ ಛಂದಸ್ಸಿನಿಂದ ಬಂದವುಗಳು. ಅವುಗಳಲ್ಲಿ ಸಮ, ಅರ್ಧ ಸಮ ಮತ್ತು ವಿಷಮ ಎಂಬ ಮೂರು ಜಾತಿಯ ವೃತ್ತಗಳಿವೆ. ಇವುಗಳಿಗೆ ನಾಲ್ಕೇ ಪಾದಗಳಿರುತ್ತವೆ. ನಾಲ್ಕು ಪಾದಗಳಲ್ಲಿಯೂ ಒಂದೇ ಲಕ್ಷಣವಿರುವುದು ಸಮವೃತ್ತ. ಒಂದು ಮೂರನೆಯ ಪಾದಗಳೂ ಎರಡು ನಾಲ್ಕನೆಯ ಪಾದಗಳೂ ಸಮಾನವಾಗಿರುವುದು ಅರ್ಧ ಸಮವೃತ್ತ. ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣದಿಂದ ಕೂಡಿರುವುದು ವಿಷಮವೃತ್ತ. ಇದು ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಸಮವೃತ್ತಗಳಲ್ಲಿ ಒಂದರಿಂದ ಇಪ್ಪತ್ತಾರರವರೆಗೆ ಅಕ್ಷರಗಳಿರುವ ವೃತ್ತಗಳಿವೆ. ಕನ್ನಡಿಗರು ಸಂಸ್ಕೃತ ಛಂದಸ್ಸಿನಿಂದ ಹೆಚ್ಚಾಗಿ ಆರಿಸಿಕೊಂಡ ಛಂದಸ್ಸುಗಳೆಂದೆ ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ. ಇವುಗಳನ್ನು ಖ್ಯಾತ ಕರ್ನಾಟಕಗಳೆಂದು ಹೇಳುವರು.

ಕನ್ನಡದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಈ ಆರು ವರ್ಣ ವೃತ್ತಗಳನ್ನು ನಾಗವರ್ಮನ ಈ ಕೆಳಗಿನ ಪದ್ಯದ ಆಧಾರದಿಂದ ಗುರುತಿಸಿಕೊಳ್ಳಬಹುದು.

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತು ಸ್ರಗ್ಧರೆ, ಲಘುದ್ವಂದ್ವಂ ಗುರುದ್ವಂದ್ವಮಾ ।
ಗಿರೆ ಮತ್ತೇಭ, ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ
ಹರಿಣಾಕ್ಷೀ ಲಘು ನಾಲ್ಕು ಚಂಪಕಮಿವಾರುಂ ಖ್ಯಾತ ಕರ್ನಾಟಕಂ ॥

10th_Kannada_Reader1-5.indd 149 03-04-2019 14:08:02

1. ಶಾರ್ದೂಲ ವಿಕ್ರೀಡಿತ ವೃತ್ತ (19 ಅಕ್ಷರಗಳ ಛಂದಸ್ಸು)

ಮ	ಸ	ಜ	ಸ	ತ	ತ	ಗು
– – –	ᴗ ᴗ –	ᴗ – ᴗ	ᴗ ᴗ –	– – ᴗ	– – ᴗ	–

ಶ್ರೀದೇವೇಂ|ದ್ರ ಮುನೀಂ|ದ್ರ ವಂದಿ|ತ ಗುಣ|ವ್ರಾತಂ ಜ|ಗತ್ಸ್ವಾಮಿ|ಸಂ

ದಾದಿ ಬ್ರಹ್ಮನಗಾಧ ಬೋಧ ನಿಳಯಂ ದುರ್ವಾರ ಸಂಸಾರ ವಿ

ಚ್ಛೇದೋಪಾಯನಿಯುಕ್ತ ಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪ ಹೃ

ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀ ಸುಖಾವ್ಯಾಪ್ತಿಯಂ

ಮೇಲಿನ ಪದ್ಯವು ಶಾರ್ದೂಲ ವಿಕ್ರೀಡಿತ ವೃತ್ತವಾಗಿದೆ. ಇದು ಸಮಪಾದ ವೃತ್ತವಾಗಿದ್ದು, ನಾಲ್ಕು ಪಾದಗಳೂ ಒಂದಕ್ಕೊಂದು ಸಮಾನವಾಗಿವೆ. ಇದರ ಪ್ರತಿಪಾದದಲ್ಲಿ ಮ,ಸ,ಜ,ಸ,ತ,ತ ಎಂಬ ಆರು ಗಣಗಳೂ, ಕೊನೆಯಲ್ಲಿ ಒಂದು ಗುರುವೂ ಇದ್ದು ಒಟ್ಟು ಹತ್ತೊಂಬತ್ತು ಅಕ್ಷರಗಳಿವೆ. ಶಾರ್ದೂಲ ವಿಕ್ರೀಡಿತ ವೃತ್ತದ ಲಕ್ಷಣವನ್ನು ಸೂತ್ರ ರೂಪವಾಗಿ 'ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ' ಎನ್ನುತ್ತಾರೆ.

2. ಮತ್ತೇಭ ವಿಕ್ರೀಡಿತ ವೃತ್ತ (20 ಅಕ್ಷರಗಳ ಛಂದಸ್ಸು)

ಸ	ಭ	ರ	ನ	ಮ	ಯ	ಲಗು
ᴗ ᴗ –	– ᴗ ᴗ	– ᴗ –	ᴗ ᴗ ᴗ	– – –	ᴗ – –	ᴗ –

ಕುಲದೊಳ್|ಕೂಡರು|ಕೂಸನೀ|ಯರುನೃ|ಪರ್ ನಿಷ್ಕಾ|ರಣಂ ದಂ |ಡಿಪರ್

ಪೊಳಲೊಳ್ ಸೇರಲು ಪೋರುಗೈದು ಸತಿ ತಾಂಪೋಗಟ್ಟುವಳ್ ಸಾಲಿಗರ್

ಕಲುಗುಂಡಂ ಗಡಪೇಱುವರ್ ತೊಲಗಿರಲ್ ಲಕ್ಷ್ಮೀ ಕಟಾಕ್ಷಂ ಕ್ಷಣಂ

ನೆಲಮುಟ್ಟಲ್ ಮುನಿದಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥

ಇದು 'ಮತ್ತೇಭ ವಿಕ್ರೀಡಿತ'ವೆಂಬ ಸಮಪಾದ ವೃತ್ತವಾಗಿದೆ. ಇದರ ಪ್ರತಿಪಾದದಲ್ಲಿ ಇಪ್ಪತ್ತು ಅಕ್ಷರಗಳಿದ್ದು ಸ, ಭ, ರ, ನ, ಮ, ಯ – ಎಂಬ ಆರು ಗಣಗಳೂ, ಒಂದು ಲಘುವೂ, ಒಂದು ಗುರುವೂ ಬಂದಿವೆ. ಮತ್ತೇಭ ವಿಕ್ರೀಡಿತ ವೃತ್ತದ ಲಕ್ಷಣವನ್ನು ಸೂತ್ರ ರೂಪವಾಗಿ 'ಸ ಭ ರಂ ನಂ ಮಯಲಂಗಮುಂ ಬಗೆಗೊಳಲ್ ಮತ್ತೇಭ ವಿಕ್ರೀಡಿತಂ' ಎನ್ನುತ್ತಾರೆ.

3. ಉತ್ಪಲಮಾಲಾ ವೃತ್ತ (20 ಅಕ್ಷರಗಳ ಛಂದಸ್ಸು)

ಸ	ಭ	ರ	ನ	ಮ	ಯ	ಲಗು
– ᴗ ᴗ	– ᴗ ᴗ	ᴗ ᴗ ᴗ	– ᴗ ᴗ	– ᴗ ᴗ	– ᴗ –	ᴗ –

ಕುಲದೊಳ್| ಕೂಡರು| ಕೂಸನೀ| ಯರುನೃ| ಪರ್ ನಿಷ್ಕಾ|ರಣಂ ದಂ | ಡಿಪರ್ ॥

ಈ ಪದ್ಯವು 'ಉತ್ಪಲಮಾಲೆ'ಯೆಂಬ ವೃತ್ತವಾಗಿದೆ. ಇದರಲ್ಲಿ ಸಭರನಮಯ ಎಂಬ ಗಣಗಳೂ, ಕೊನೆಯಲ್ಲಿ ಒಂದು ಲಘುವೂ, ಇನ್ನೊಂದು ಗುರುವೂ ಬರುತ್ತದೆ.

ಮಾತ್ರಾಗಣ ವೃತ್ತಗಳು

ಕನ್ನಡ ಛಂದಸ್ಸಿನ ಪದ್ಯಗಳೆಲ್ಲ ಮಾತ್ರಾಗಣ ವೃತ್ತಗಳೇ ಆಗಿವೆ. ದ್ವಿಪದಿ, ಚೌಪದಿ, ಷಟ್ಪದಿ, ರಗಳೆ ಮೊದಲಾದವುಗಳು ಕನ್ನಡ ಭಾಷೆಯ ಛಂದಸ್ಸುಗಳಾಗಿವೆ. ಬ್ರಹ್ಮಗಣ, ವಿಷ್ಣುಗಣ, ರುದ್ರಗಣಗಳೆಂಬ ಕನ್ನಡದ ಅಂಶಗಣಗಳೇ ರೂಪಾಂತರ ಹೊಂದಿ ಈ ಮಾತ್ರಾಗಣ ನಿಯಮವನ್ನು ಪಡೆದುವು. ತ್ರಿಪದಿ, ಸಾಂಗತ್ಯ, ಪಿರಿಯಕ್ಕರ ಮೊದಲಾದವು ಅಂಶಗಣ ವೃತ್ತಗಳಾಗಿಯೇ ಉಳಿದಿವೆ. ಇವುಗಳನ್ನು ಕೂಡ ಕೆಲವರು ಮಾತ್ರಾಗಣ ನಿಯಮದ ಪದ್ಯಗಳೆಂದು ತಿಳಿಯುವರು.

10th_Kannada_Reader1-5.indd 150 03-04-2019 14:08:02

ಷಟ್ಪದಿಗಳು

ಷಟ್ಪದಿಗಳು ಆರು ಪಾದಗಳುಳ್ಳ ಮಾತ್ರಾ ವೃತ್ತಗಳು. ಇವುಗಳ ಒಂದು, ಎರಡು, ನಾಲ್ಕು, ಐದನೆಯ ಪಾದಗಳು ಒಂದು ಸಮವಾಗಿಯೂ; ಮೂರನೆಯ ಮತ್ತು ಆರನೆಯ ಪಾದಗಳು ಒಂದು ಸಮವಾಗಿಯೂ ಇರುತ್ತವೆ. ಮೂರನೆಯ ಮತ್ತು ಆರನೆಯ ಪಾದಗಳಲ್ಲಿ ಒಂದೆರಡನೆಯ ಪಾದಗಳ ಒಂದೂವರೆ ಪಾಲಷ್ಟು ಗಣಗಳೂ, ಜೊತೆಗೆ ಒಂದು ಗುರುವೂ ಇರುತ್ತವೆ. ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕಗಳೆಂದು ಆರು ವಿಧಗಳಿವೆ. ಛಂದೋಂಬುಧಿಕಾರನು ಒಂದು ಕಂದ ಪದ್ಯದಲ್ಲಿ ಈ ಆರು ಷಟ್ಪದಿಗಳ ಹೆಸರುಗಳನ್ನು ಅವುಗಳ ಪ್ರಥಮ ಪಾದದ ಮಾತ್ರೆಗಳ ಸಂಖ್ಯೆಯನ್ನೂ ನಿರೂಪಿಸಿರುವನು.

ಶರ, ಕುಸುಮ, ಭೋಗ, ಭಾಮಿನಿ
ಪರಿವರ್ಧಿನಿ, ವಾರ್ಧಕಂಗಳೆಂದಾರು ತೆರಂ
ಕರಿ, ದಶ, ರವಿ, ಮನು, ರಾಜರ್
ಬರೆ, ವಿಂಶತಿ ಮಾತ್ರೆಯಿಂದೆ ಷಟ್ಪದಿ ನಡೆಗುಂ

ನಾಗವರ್ಮನ ಪ್ರಕಾರ ಷಟ್ಪದಿಯ ಲಕ್ಷಣ ಈ ರೀತಿಯಿದೆ :

ಮಂದರ ಧರ ಗಣ
ಬಂದಿರ್ಕಾಱಂತ್ಯದೊಳ್
ಕುಂದದೆ ನೆಲಸುಗೆ ಮದನಹರಂ ॥
ಇಂದು ನಿಭಾನನೆ
ಮುಂದಣ ತೆಱನುಮೀ
ಯಂದಮೆಯಾಗಲೆ ಷಟ್ಪದಿ ಕೇಳ್ ॥

ಇದು ಅಂಶಗಣ ಸಹಿತವಾಗಿದೆ.

ಶರ ಷಟ್ಪದಿ

ನಾಲ್ಕು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಮೂರು ಮತ್ತು ಒಂದು ಗುರುವೂ ಇರಲು ಶರಷಟ್ಪದಿಯೆನಿಸುವುದು. ಇದರಲ್ಲಿ ನಡುವೆ ಎಲ್ಲೂ ಜಗಣ (– ∪ –)ವು ಬರಬಾರದು.

ಉದಾಹರಣೆ :

–∪∪ ∪∪∪∪
ಈಶನ| ಕರುಣೆಯ
–∪∪ ∪∪∪∪
ನಾಶಿಸು| ವಿನಯದಿ
–∪∪ –∪∪ –∪∪ –
ದಾಸನ| ಹಾಗೆಯೆ| ನೀ ಮನ| ವೇ ॥
ಕ್ಲೇಶದ ವಿಧ ವಿಧ
ಪಾಶವ ಹರಿದು ವಿ
ಲಾಸದಿ ಸತ್ಯವ ತಿಳಿ ಮನವೇ ॥

10th_Kannada_Reader1-5.indd 151 03-04-2019 14:08:02

ಕುಸುಮ ಷಟ್ಪದಿ

ಐದು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಐದು ಮಾತ್ರೆಯ ಗಣಗಳು ಮೂರು ಮೂರೂ ಮತ್ತು ಒಂದು ಗುರುವೂ ಇರಲು ಕುಸುಮ ಷಟ್ಪದಿಯೆನಿಸುವುದು. ಇದರಲ್ಲಿ ನಡುವೆ ಎಲ್ಲೂ ಜಗಣ(–ᴗ–) ಮತ್ತು ಯಗಣ(ᴗ – –)ಗಳು ಬರಬಾರದು.

ಉದಾಹರಣೆ :

– ᴗ ᴗ ᴗ ᴗᴗᴗ ᴗ ᴗ
ನಾಡು ಮನ| ಸಿಜನೊಲವಿ
– ᴗ ᴗ ᴗ – ᴗ –
ನಾಡುವೆಡೆ| ಸಂತತಂ
–ᴗ ᴗᴗ ᴗᴗᴗᴗᴗ ᴗ ᴗ–ᴗ –
ಬೀಡು ರತಿ| ಪತಿಗೆ ಸತ| ತ ನಿಧಾನ| ವು ॥
ನೋಡಿದನಿಮಿಷಪತಿಗೆ
ಮಾಡುವುದು ವಿನಯವನು
ನಾಡಾಡಿಯವರ್ಗೆ ಬಣ್ಣಿಸಲು ಮೊಗ್ಗೇ ॥

ಭೋಗ ಷಟ್ಪದಿ

ಮೂರು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು; ಮೂರು, ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಬರಲು ಭೋಗಷಟ್ಪದಿಯೆನಿಸುವುದು. ಇದರಲ್ಲಿ ಜಗಣ(ᴗ–) ವು ಬರಬಾರದು.

ಉದಾಹರಣೆ :

ᴗ ᴗ ᴗ – ᴗ – ᴗ – ᴗ
ಮೆರೆಯು|ತಿದ್ದ| ಭಾಗ್ಯ |ವೆಲ್ಲ
ᴗ ᴗ ᴗ – ᴗ ᴗᴗᴗ ᴗᴗᴗ
ಹಜೆದು|ಹೋಯಿ|ತೆನುತ|ತಿರುಕ
ᴗᴗᴗ –ᴗ –ᴗ –ᴗ ᴗᴗᴗ –ᴗ –
ಮರಳಿ| ನಾಚಿ| ಪೋಗು| ತಿದ್ದ| ಮರುಳ| ನಂತೆ| ಯೇ ॥
ಧರೆಯ ಭೋಗವನ್ನು ಮೆಚ್ಚಿ
ಪರವ ಮಱೆತು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವಾ ॥

ಭಾಮಿನೀ ಷಟ್ಪದಿ

ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣವು ಬರುವಂತೆ ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಈ ಗಣಗಳು ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಮೂರು ಮೂರೂ ಮತ್ತು ಒಂದು ಗುರುವೂ ಇದ್ದಲ್ಲಿ ಭಾಮಿನೀ ಷಟ್ಪದಿಯೆನಿಸುವುದು. ಇದರಲ್ಲಿ ಈ ᴗ–ᴗ ಗಣವು ಬರಬಾರದು.

10th_Kannada_Reader1-5.indd 152 03-04-2019 14:08:02

ಉದಾಹರಣೆ :

ᴗᴗᴗ ᴗᴗ– ᴗ– ᴗᴗ–
ವರುಷ| ಹದಿನಾ| ರಾಯ್ತು| ಧರಣೀ
ᴗᴗᴗ ᴗᴗᴗᴗ –ᴗ –ᴗᴗ
ಶ್ವರನ| ಹಿರಿಯ ಮ| ಗಂಗೆ| ಭೀಮಗೆ
ᴗᴗᴗ ᴗᴗ– –ᴗ ᴗᴗᴗᴗ –ᴗ ᴗᴗ– –
ವರುಷ| ಹದಿನೈ| ದರ್ಜು| ನಗೆ ಹದಿ| ನಾಲ್ಕು| ಹದಿಮೂ| ರು ॥
ಕಿರಿಯರಿಬ್ಬರಿಗೆ ನಿಬರಾ ಮುನಿ
ವರರಿನಧ್ಯಯನಾದಿ ವಿದ್ಯಾ
ನಿರತರಾದರು ಬಂದುದೊಂದು ವಸಂತಮಯ ಸಮಯ ॥

ಪರಿವರ್ಧಿನೀ ಷಟ್ಪದಿ

ಚತುರ್ಮಾತ್ರಾ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು, ಮೂರು; ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಇದ್ದಲ್ಲಿ ಅದು ಪರಿವರ್ಧಿನೀ ಷಟ್ಪದಿಯೆನಿಸುವುದು. ಇದರಲ್ಲಿ ಈ ᴗ–ᴗ ಗಣವು ಬರಬಾರದು.

ಉದಾಹರಣೆ :

ᴗᴗᴗᴗ –ᴗᴗ ᴗᴗᴗᴗ –ᴗᴗ
ದುರಿತವ|ನಂಬಿಕೆ| ವುದಕೆ ಪೊ|ಲಂ ಕೊಲೆ
ᴗᴗᴗᴗ ᴗᴗᴗᴗ –ᴗᴗ ᴗᴗ–
ಪರಕಲಿ| ಸಿದ ನವ| ದೋಹಳ| ಮನೃತಂ
ᴗᴗ– ᴗᴗᴗᴗ ᴗᴗᴗᴗ – – – – ᴗᴗ– –
ಪರಿಕಾ| ಲುದಕಮ| ದಕೆಕಳ| ವನ್ಯ| ಸ್ತ್ರೀ ಸಂ| ಗಮೆ ಗೆ| ಯ್ಮೆ ॥
ಪರಿರಕ್ಷಣೆಯತಿಕಾಂಕ್ಷೆಯದಜಿನವು
ನಿರುತಂ ಪೊರ್ದದೊಡಿಲ್ಲಂ ಸಂಸ್ಕೃತಿ
ಯುರುಕಿಲ್ಬಿಷಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ ॥

ವಾರ್ಧಕ ಷಟ್ಪದಿ

ಪಂಚಮಾತ್ರಾ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು ಮಾತ್ರೆಯ ಗಣಗಳು ಮೂರು; ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಇದ್ದಲ್ಲಿ ಅದು ವಾರ್ಧಕ ಷಟ್ಪದಿಯೆನಿಸುವುದು. ಇದರಲ್ಲಿ ಈ ᴗ–ᴗᴗ, ᴗ – – ಗಣವು ಬರಬಾರದು.

ಉದಾಹರಣೆ :

ᴗᴗ–ᴗ – ᴗ– – ᴗ ᴗ ᴗ – ᴗ –
ಜನನಾಥ| ಕೇಳ್ ಮಯೂ| ರ ಧ್ವಜ ಮ| ಹೀಶ್ವರಂ
ᴗᴗ-ᴗ ᴗ ᴗ ᴗ- ᴗ ᴗ ᴗ - - ᴗ ᴗ ᴗ
ದಿನನಾಥ| ನುದಯದೊಳ್| ವಿಮಲ ಸಂ| ಧ್ಯಾ ವಿಧಿಯ
ᴗᴗᴗᴗᴗ –ᴗ ᴗ ᴗ – ᴗ – – ᴗ– ᴗᴗ–ᴗ – ᴗᴗᴗ –
ನನುಕರಿಸಿ| ಕೃಷ್ಣನಿ| ದ್ದೆಡೆಗೆ ತಾಂ| ಪೋಗಿ ಕಂ| ಡಪೆನೆಂಬ| ಕಾರಿಯವ| ನು ॥

10th_Kannada_Reader1-5.indd 153 03-04-2019 14:08:02

ಮನದೊಳಗೆ ನಿಶ್ಚೈಸಿ ಪೊರಮೊಡುವನಾಗಿ ನಿಜ

ತನುಜನಂ ಕರೆಸಿ ಮಂತ್ರಿಗಳೆಲ್ಲರಂ ಬರಿಸಿ

ವಿನುತ ಭೂಸುರ ನೃಪಾಲ ಸ್ತೋಮ ದೊಡಗೂಡಿ ಕುಳ್ಳಿರ್ದನೋಲಗದೊಳು ॥

ದ್ವಿಪದಿ

ದ್ವಿಪದಿ ಎಂದರೆ ಎರಡು ಪಾದಗಳುಳ್ಳ ಪದ್ಯ. ದ್ವಿಪದಿ, ತ್ರಿಪದಿ, ಚೌಪದಿ, ಸಾಂಗತ್ಯ ಮೊದಲಾದವುಗಳು ಹಾಡಿನ ರೂಪದಲ್ಲಿರುವುದರಿಂದ ಇವನ್ನು ಹಾಡಿನ ವೃತ್ತಗಳು ಎನ್ನುವುದುಂಟು. ದ್ವಿಪದಿಗಳಲ್ಲಿ ಎರಡು ವಿಧಗಳಿವೆ. ಮೊದಲನೆಯ ರೀತಿಯ ದ್ವಿಪದಿಯ ಪ್ರತಿಪಾದದಲ್ಲಿ ಐದು ಮಾತ್ರೆಯ ಒಂದು ಗಣ ಇದ್ದು, ಒಟ್ಟು ಹತ್ತೊಂಬತ್ತು ಮಾತ್ರೆಗಳಿರುತ್ತವೆ.

ಉದಾಹರಣೆ :

∪∪–∪	– – ∪	∪ ∪ ∪ ∪ ∪	∪ ∪ –	
ಪರಮಾತ್ಮ|	ನಾರೆಂದು|	ಚಿರವಗೊಳಿ|	ಸುವೆಯಾ	5 X 3+4=19
∪∪∪∪∪	– ∪ –	∪∪∪∪∪	∪ ∪ –	
ಇರುವನವ|	ನೆತ್ತಲೆಂ|	ದರಿಯಲೆಳ|	ಸುವೆಯಾ ॥	5 X 3+4=19

ಎರಡನೆಯ ವಿಧದ ದ್ವಿಪದಿಯ ಪ್ರತಿಪಾದದಲ್ಲಿ 3+4+3+4+3+4+3+2 ಹಾಗೂ ಒಂದು ಗುರು ಎಂಬಂತೆ ಗಣಗಳಿದ್ದು, ಒಟ್ಟು 26 ಮಾತ್ರೆಗಳಿರುತ್ತವೆ.

ಉದಾಹರಣೆ :

∪∪∪	– –	∪∪∪	– ∪∪	– ∪	– –	– ∪	–
ಮಗನೆ|	ನೀನಿಂ|	ತಳಿಯೆ|	ಸೈರಿಪೆ|	ನೆಂತೊ|	ಪೇಳ್ಕೈ|	ಶಂಕ|	ರಾ
∪∪∪	∪∪ –	– ∪	∪∪∪∪	– ∪	– –	– ∪	–
ಸುಗುಣ|	ನಿಧಿ ನೀ|	ನೆಮ್ಮ|	ಮೊರೆಗಳ|	ನೊಮ್ಮೆ|	ಕೇಳ್ಕೈ|	ಶಂಕ|	ರಾ| ॥

ಚೌಪದಿ

ಚೌಪದಿಯೆಂದರೆ ನಾಲ್ಕು ಪಾದವುಳ್ಳ ಪದ್ಯ. ಇದರಲ್ಲಿ ನಾಲ್ಕು ವಿಧದ ಚೌಪದಿಗಳಿವೆ. ಅವು,

1. ಮೊದಲನೆಯದು : ದ್ವಿಪದಿಯ ಇಮ್ಮಡಿ ಪಾದಗಳಿದ್ದು ಪ್ರತಿಪಾದದಲ್ಲಿ ಅದರಷ್ಟೇ ಮಾತ್ರೆಗಳುಳ್ಳ ಚೌಪದಿ.

ಉದಾಹರಣೆ :

–∪∪∪	– ∪ –	– –∪	– –	
ನಾಳೆಯೆನ|	ಬೇಡ ನೀ|	ಕೇಳೆನ್ನ|	ಬಾಲಾ	5x3+4=19
– ∪ –	∪ ∪ –∪	– – ∪	– –	
ನಾಳೆಯೆಂ|	ಬುದು ಕಷ್ಟ|	ಜಾಲಾ ವಿ|	ಶಾಲಾ ॥	5x3+4=19
– ∪ –	∪ ∪ – ∪	– – ∪	– –	
ಹಾಳು ಮಾ|	ಳ್ಪುದು ನಿನ್ನ|	ನಾ ದುಷ್ಟ|	ಜಾಲಾ|	5x3+4=19
– – ∪	– ∪ –	– ∪ ∪ ∪	– –	
ಕೇಳೆನ್ನ|	ಮಾತನೀ|	ಮನ್ನಿಸು ಸು|	ಶೀಲಾ ॥	5x3+4=19
				=76

ಮೇಲಿನ ಚೌಪದಿಯ ಎಲ್ಲ ಪಾದಗಳೂ ಒಂದಕ್ಕೊಂದು ಸಮಾನವಾಗಿದೆ. ಪ್ರತಿಪಾದದಲ್ಲಿ ಐದೈದು ಮಾತ್ರೆಯ ಮೂರು ಗಣಗಳೂ, ನಾಲ್ಕು ಮಾತ್ರೆಯ ಒಂದು ಗಣವೂ ಇದ್ದು ಇಡೀ ಪದ್ಯದಲ್ಲಿ ಒಟ್ಟ 76 ಮಾತ್ರೆಗಳಿವೆ.

10th_Kannada_Reader1-5.indd 154 03-04-2019 14:08:02

2. ಚೌಪದಿಯ ಎರಡನೇ ವಿಧ (ದಾಸರ ಪದ್ಯಗಳ ಮಟ್ಟು)

ಉದಾಹರಣೆ:

– ∪ –	∪∪∪∪	∪∪∪–	∪∪ ∪∪∪	
ಕೊಂಡ ಸಾ|	ಲಗಳ ಪರಿ|	ಹರಿಸದಾ|	ತನೆ ಹೊಲೆಯ	5x4=20
–∪∪∪	∪∪∪∪∪	∪∪–∪	∪∪ –	
ಲಂಡತನ|	ದಲಿ ನಡೆವ|	ನರಭಂಡ|	ಹೊಲೆಯಾ ॥	5x3+4=19
– ∪ ∪ ∪	∪– ∪ ∪	∪– ∪	–∪∪∪	
ಉಂಡ ಮನೆ|	ಗೆರಡನ್ನು|	ಬಗೆವಾತ|	ನೇ ಹೊಲೆಯ|	5x4=20
– ∪∪∪	– ∪∪∪	∪ ∪– ∪	∪ ∪ –	
ಹೆಂಡತಿಯ|	ಇಚ್ಛೈಯವ|	ನತಿ ಹೇಡಿ|	ಹೊಲೆಯಾ ॥	5x3+4=19

ಮೇಲಿನ ಚೌಪದಿಯಲ್ಲಿ ಮೊದಲನೆಯ ಮತ್ತು ಮೂರನೆಯ ಪಾದಗಳು ಸಮಾನವಾಗಿವೆ. ಈ ಪಾದಗಳಲ್ಲಿ 5 ಮಾತ್ರೆಯ ನಾಲ್ಕು ಗಣಗಳು ಇದ್ದು 20 ಮಾತ್ರೆಗಳಿವೆ. ಎರಡನೇ ಮತ್ತು ನಾಲ್ಕನೇ ಪಾದಗಳು ಸಮಾನವಾಗಿವೆ. ಇವುಗಳಲ್ಲಿ ಐದು ಮಾತ್ರೆಯ ಮೂರು ಗಣಗಳೂ, ನಾಲ್ಕು ಮಾತ್ರೆಯ ಒಂದು ಗಣವೂ ಇದ್ದು 19 ಮಾತ್ರೆಗಳಿವೆ. ಇಡೀ ಪದ್ಯದಲ್ಲಿ ಒಟ್ಟು 78 ಮಾತ್ರೆಗಳಿವೆ. ಇದು ಅರ್ಧ ಸಮ ಚೌಪದಿ.

3. ಚೌಪದಿಯ ಮೂರನೇ ವಿಧ (ಗೋವಿನ ಕತೆಯ ಮಟ್ಟು)

ಉದಾಹರಣೆ:

– ∪	– ∪ ∪	_ ∪	– –	
ಸತ್ಯ|	ವೆಂಬುದೆ|	ತಾಯಿ|	ತಂದೇ	3+4+3+4=14
– ∪	– ∪ ∪	– ∪	∪∪∪∪	
ಸತ್ಯ|	ವೆಂಬುದೆ|	ಬಂಧು|	ಬಳಗವು ॥	3+4+3+4=14
– ∪	–∪∪	– ∪	∪∪∪∪	
ಸತ್ಯ|	ವಾಕ್ಯಕೆ|	ತಪ್ಪಿ|	ನಡೆದರೆ|	3+4+3+4=14
– ∪	– ∪ ∪	– ∪	–	
ಮೆಚ್ಚ|	ನಾ ಪರ|	ಮಾತ್ಮ|	ನೂ ॥	3+4+3+2=12

ಮೇಲಿನ ಚೌಪದಿಯಲ್ಲಿ ಒಂದು, ಎರಡು, ಮೂರನೆಯ ಪಾದಗಳಲ್ಲಿ 3+4+3+4 ಮಾತ್ರೆಯ ಗಣಗಳಿದ್ದು ಹದಿನಾಲ್ಕು ಮಾತ್ರೆಗಳಿವೆ. ನಾಲ್ಕನೆಯ ಪಾದದಲ್ಲಿ 3+4+3+2 ಮಾತ್ರೆಯ ಗಣಗಳಿದ್ದು ಹನ್ನೆರಡು ಮಾತ್ರೆಗಳಿವೆ. ಇಡೀ ಪದ್ಯದಲ್ಲಿ ಒಟ್ಟು 54 ಮಾತ್ರೆಗಳಿವೆ.

3. ಚೌಪದಿಯ ನಾಲ್ಕನೇ ವಿಧ

ಉದಾಹರಣೆ:

–∪∪∪	–∪∪∪	∪∪∪ ∪∪	∪∪ – ∪	
ಲೆಕ್ಕಗಮಿ|	ತಾಕ್ಷರರು|	ಬಳೆದು ಮೆರೆ|	ದಿಹ ನಾಡು	5x4=20
–∪∪∪	–∪∪∪	–∪∪∪	∪∪–∪	
ಜಕ್ಕಣನ|	ಶಿಲ್ಪಕಲೆ|	ಯಚ್ಚರಿಯ|	ಕರುನಾಡು ॥	5x4=20
–∪∪∪	∪∪ – ∪	∪∪∪∪∪	∪∪–∪	
ಚೊಕ್ಕಮತ|	ಗಳ ಸಾರಿ|	ದವರಿಗಿದು|	ನೆಲೆವೀಡು|	5x4=20
–∪∪∪	∪∪∪∪∪	∪∪∪∪∪	∪∪–∪	
ಬೊಕ್ಕಸದ|	ಕಣಜಜಯ|	ಸಿರಿಯು ನಲಿ|	ಯುವನಾಡು ॥	5x4=20

10th_Kannada_Reader1-5.indd 155 03-04-2019 14:08:02

ಮೇಲಿನ ಪದ್ಯದ ಎಲ್ಲ ಪಾದಗಳೂ ಸಮಾನವಾಗಿವೆ. ಪ್ರತಿ ಪಾದದಲ್ಲಿ ಐದು ಮಾತ್ರೆಯ ನಾಲ್ಕು ಗಣಗಳಿದ್ದು ಒಟ್ಟು 20 ಮಾತ್ರೆಗಳಿವೆ. ಇಡೀ ಪದ್ಯದಲ್ಲಿ ಒಟ್ಟು 80 ಮಾತ್ರೆಗಳಿವೆ.

ರಗಳೆಗಳು

ಸಮಾನವಾದ ಮಾತ್ರಾಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆಯೆನಿಸುವುದು. ಇದರಲ್ಲಿ ಪ್ರಾಸವು ಇತರ ವೃತ್ತಗಳಲ್ಲಿರುವಂತೆ ನಿಯತವಾದ ಸ್ಥಾನದಲ್ಲಿರುವುದಿಲ್ಲ. ಪಾದದ ಆದಿಯಲ್ಲಾಗಲಿ, ಮಧ್ಯದಲ್ಲಾಗಲಿ, ಅಂತ್ಯದಲ್ಲಾಗಲಿ, ಆದಿಮಧ್ಯಾಂತಗಳಲ್ಲಾಗಲಿ ಪ್ರಾಸಗಳಿರುತ್ತವೆ. ಮಂದಾನಿಲ, ಲಲಿತ ಮತ್ತು ಉತ್ಸಾಹಗಳೆಂಬ ಮೂರು ವಿಧದ ರಗಳೆಗಳು ಹಳೆಯ ಕಾವ್ಯಗಳಲ್ಲಿ ಪ್ರಸಿದ್ಧವಾಗಿವೆ.

ಮಂದಾನಿಲ ರಗಳೆ

ಉದಾಹರಣೆ:

– ∪	∪ ∪ –	– ∪ ∪	– –
ಹಾವು ಕ|	ಡಿ ಯೆ ಹಾ|	ಎಂದೆಯೊ|	ಕಂದಾ
– –	– –	– ∪ ∪	– –
ಸಾವಾ|	ಗವ್ವಾ|	ಎಂದೆಯೊ|	ಕಂದಾ ॥

ಹಾಡುವ ಬಾಯೊಳು ಸುಣ್ಣವ ಹೊಯ್ದೇ
ನೋಡುವ ಕಣ್ಣೊಳು ಸುಣ್ಣವ ಹೊಯ್ದೇ ॥

ಮಂದಾನಿಲ ರಗಳೆಯಲ್ಲಿ ನಾಲ್ಕು ನಾಲ್ಕು ಮಾತ್ರೆಗಳಿರುವ ನಾಲ್ಕು ಗಣಗಳಿದ್ದು ಒಟ್ಟು ಹದಿನಾರು ಮಾತ್ರೆಗಳಿವೆ. ಈ ಪದ್ಯದಲ್ಲಿ ಆದಿ ಮಧ್ಯಾಂತ್ಯ ಪ್ರಾಸ ನಿಯಮವನ್ನು ಮೀರಿಲ್ಲ. ಇದರಲ್ಲಿ ಇಂತಿಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ. ಪ್ರಾಸಕ್ಕಾಗಿ ಎರಡೆರಡು ಪಾದಗಳನ್ನು ಒಂದು ಅಂಶವಾಗಿ ಗಮನಿಸಲಾಗುತ್ತದೆ.

ಲಲಿತ ರಗಳೆ

ಉದಾಹರಣೆ:

∪∪ – ∪	– ∪ –	– ∪ –	∪∪–∪
ಶಿವನೂರು|	ದಂಡದಿಂ|	ದಾದ ಬಾ|	ಳೆಗಳಿಲ್ಲಿ
∪∪∪∪	∪∪–∪∪	– ∪ –	∪∪–∪
ಶಿವನಕರ|	ನಖದಿಂದ|	ಲಾದ ಕೇ|	ತಕಿಯಿಲ್ಲಿ ॥

ಹರನ ಚರಣಂಗಂಡು ಬೆಳೆದಸರಜದದಿಲ್ಲಿ
ಹರ ಕಾಂತಿಯಿಂದಾದ ವಿಮಳ ಸರಸಿಗಳಿಲ್ಲಿ ॥

ಲಲಿತ ರಗಳೆಯಲ್ಲಿಯೂ ಇಂತಿಷ್ಟೇ ಚರಣಗಳಿರಬೇಕೆಂಬ ನಿಯಮವಿಲ್ಲ. ಇದರ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳು ಇದ್ದು ಒಟ್ಟು ಇಪ್ಪತ್ತು ಮಾತ್ರೆಗಳಿರುತ್ತವೆ.

ಉತ್ಸಾಹ ರಗಳೆ

ನಾಗವರ್ಮನು ಛಂದೋಂಬುಧಿಯಲ್ಲಿ ಉತ್ಸಾಹ ರಗಳೆಗೆ ಪ್ರತಿಪಾದದಲ್ಲಿ ಮೂರು ಮಾತ್ರೆಯ ಎಂಟು ಗಣಗಳಿದ್ದು 24 ಮಾತ್ರೆಗಳಿವೆಯೆಂದು ಹೇಳಿರುವನು.

ಉದಾಹರಣೆ:

–∪	–∪	–∪	∪∪∪	–∪	–∪	∪–	∪∪∪
ಅಟ್ಟ|	ಅನ್ನ|	ವುಣ್ಣ|	ಬಿಡನು|	ಕೊಟ್ಟ|	ಸಾಲ|	ಕೇಳ|	ಬಿಡನು|
–∪	∪∪∪	– ∪	∪∪∪	–∪	∪∪∪	∪∪∪	∪∪∪
ಪೆಟ್ಟಿ|	ಯೊಳಿಹ|	ಚಿನ್ನ|	ದೊಡವೆ|	ತೊಟ್ಟೆ|	ನೆನಲು|	ಯಮನು|	ಬಿಡನು ॥

10th_Kannada_Reader1-5.indd 156 03-04-2019 14:08:02

ಆದರೆ ಇದು ಮೂರು ಮಾತ್ರೆಯ ನಾಲ್ಕು ಗಣಗಳಿರುವ ಪಾದಗಳಿಂದ ಕೂಡಿದೆಯೆಂದು ಆಧುನಿಕರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ **ಉದಾಹರಣೆ**ಯಾಗಿ ಅವರು ಈ ಕೆಳಗಿನ ಪದ್ಯವನ್ನು ಉದಾಹರಿಸುತ್ತಾರೆ.

ಉದಾಹರಣೆ:

ಲ ಲ ಲ – ಲ – ಲ – ಲ
ಕುಳಿರ್ವ| ಪೂಗೊ| ಳಂಗ| ಳಲ್ಲಿ
ಽಽಽ – ಲ – ಲ – ಲ
ತಳಿರ| ಕಾವ| ಣಂ ಗ| ಳಲ್ಲಿ ॥
ತುಂಬಿವಿಂಡಿನಂತೆ ಪಾಡಿ
ಜಕ್ಕ ವಕ್ಕಿ ಯಂತೆ ಕೂಡಿ ॥

ಸರಳ ರಗಳೆ

– – ಲ ಲಲಲಲ – – ಲ ಲಲ–ಲ
ಬಾ ಕಂದ| ಹಿರಿಗುವರ| ಬಾರೆನ್ನ| ಬಿಗಿದಪ್ಪು
– – ಲ –ಽಽಽ –ಽಽಽ ಲಲ ಽಽಽ
ಉಪ್ಪನ್ನ| ವಿತ್ತವಗೆ| ತಪ್ಪೆಣಿಸ| ದಿರು ಮಗನೆ ॥
ಹೇಡಿಯೆನೆ ಹಿಂದುಳಿಯದಿರು ರಣದಿ ಬೇಡುವೆಂ
ಚಂದ್ರವಂಶದ ಕುಡಿಯ ಕಾಪಾಡು, ತೊಟ್ಟ ಶರ
ಮಂ ಬರಳಿ ಮರೆತು ಬಿಡು, ನಿನಗಕ್ಕೆ ಮಂಗಳಂ ॥

ಇದು ಸರಳ ರಗಳೆ. ಇದರ ಪ್ರತಿಪಾದದಲ್ಲಿ ಐದೈದು ಮಾತ್ರೆಗಳ ನಾಲ್ಕು ಗಣಗಳಿವೆ. ಪಾದ ಮತ್ತು ಪ್ರಾಸದ ನಿಯಮಗಳು ಇಲ್ಲಿಲ್ಲ. ಆಧುನಿಕ ಕನ್ನಡ ಕಾವ್ಯದಲ್ಲಿ ಸರಳ ರಗಳೆ ತುಂಬ ಪ್ರಸಿದ್ಧವಾಗಿದೆ.

ಕಂದ ಪದ್ಯ

ಯಾವ ಹಳೆಯ ಕಾವ್ಯವನ್ನು ತೆಗೆದು ನೋಡಿದರೂ ಅದರಲ್ಲಿ ಕಂದಗಳ ಸಂಖ್ಯೆ ಇತರ ವೃತ್ತಗಳಿಗಿಂತ ಅಧಿಕ. ಹಾಗೆಯೇ ಅದೊಂದು ಹಾಡುಗಳ ಸಾಲಿಗೆ ಸೇರಿದ ಬಂಧ. ಇದು ಮಾತ್ರಾ ವೃತ್ತಗಳ ಮತ್ತು ವರ್ಣ ವೃತ್ತಗಳ ಮಿಲನದಿಂದಾದ ಬಂಧವಾಗಿದೆ.

ಕಂದದಲ್ಲಿ ನಾಲ್ಕು ಪಾದಗಳಿವೆ. ಚತುರ್ಮಾತ್ರಾ ಗಣವು ಒಂದು, ಮೂರನೆಯ ಪಾದಗಳಲ್ಲಿ ಮೂರು ಮೂರು(ಹನ್ನೆರಡು ಮಾತ್ರೆಗಳು); ಎರಡು, ನಾಲ್ಕನೆಯ ಪಾದಗಳಲ್ಲಿ ಐದೈದು (ಇಪ್ಪತ್ತು ಮಾತ್ರೆಗಳು) ಇರಬೇಕು. ಪೂರ್ವೋತ್ತರಾರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯೆ ಗುರುವುಳ್ಳ ಗಣಗಳು ಬರಕೂಡದು. ಆರನೆಯ ಸ್ಥಾನದಲ್ಲಿ ಜಗಣ(ಲ–ಲ)ವಾಗಲೀ ನಾಲ್ಕು ಲಘುವುಳ್ಳ ಗಣ(ಽಽಽ)ವಾಗಲೀ ಬಂದು ಮೊದಲಿನ ಹ್ರಸ್ವದ ಮುಂದೆ ಯತಿ ಇರಬೇಕು. ಎಂಟನೆಯ ಸ್ಥಾನಗಳಲ್ಲಿ ಅಂತ್ಯ ಗುರುವುಳ್ಳ ಗಣ (ಲ ಲ _)(_ _)ಗಳೇ ಬರಬೇಕು.

ಉದಾಹರಣೆ:

ಽಽಽಽ ಲ ಲ – ಲಲ –
ಪುಸಿಯೆನೆ| ರಥಮಂ| ಹರಿ ಚೋ
ಲ ಲ– ಲ ಲ – ಲ – ಲ ಲಲ– ಲಲ–
ದಿಸುವಂ| ತೆ ವೊಲಿ| ರ್ದ ದೆಂತು| ನರನಂ| ಗೆಲಿಪಂ ॥
ಽಽಽಽ ಲ– ಲ – –
ವಿಸಸನ| ದೊಳಂತೆ| ನೀ ಮುಂ
ಲ ಲ– – – ಲ – ಲ – –
ಪೆಸರಂ| ಕರ್ಣಂ| ಗೆ ಮಾಡಿ| ಗೆಲ್ಲಂ| ಗೊಳ್ಳಿಂ ॥

10th_Kannada_Reader1-5.indd 157 03-04-2019 14:08:02

ಅಂಶ ಗಣ ವೃತ್ತಗಳು

ಅಂಶ ಗಣಗಳ ಆಧಾರದಲ್ಲಿ ರಚಿತವಾದ ವೃತ್ತಗಳೇ ಅಂಶ ಗಣ ವೃತ್ತಗಳು. ಇವು ದೇಶೀ ವೃತ್ತಗಳಾಗಿವೆ. ತ್ರಿಪದಿ, ಸಾಂಗತ್ಯ, ಅಕ್ಕರ, ಮದನವತಿ, ಅಕ್ಕರಿಕೆ, ಛಂದೋವತಂಸ ಮೊದಲಾದುವು ಅಂಶಗಣ ವೃತ್ತಗಳು.

ತ್ರಿಪದಿ

ತ್ರಿಪದಿಗಳಲ್ಲಿ ಸರ್ವಜ್ಞನ ತ್ರಿಪದಿಗಳು ಪ್ರಖ್ಯಾತವಾಗಿವೆ. ತ್ರಿಪದಿಯಲ್ಲಿ ಮೂರು ಪಾದಗಳಿರುತ್ತವೆ. ಇದು ಹನ್ನೊಂದು ಅಂಶಗಣಗಳನ್ನು ಒಳಗೊಂಡ ಮೂರು ಸಾಲುಗಳ ಪದ್ಯ. ಇದರ 6ನೆಯ ಮತ್ತು 10ನೆಯ ಸ್ಥಾನಗಳಲ್ಲಿ ಬ್ರಹ್ಮಗಣಗಳೂ ಉಳಿದೆಡೆಗಳಲ್ಲಿ ವಿಷ್ಣುಗಣಗಳೂ ಇರುತ್ತವೆ. ತ್ರಿಪದಿಯ ಲಕ್ಷಣವನ್ನು ನಾಗವರ್ಮನು ಹೀಗೆ ಹೇಳಿರುವನು.

ವಿ ವಿ ವಿ ವಿ
ಬಿಸರು ಹೋ| ದ್ಭವಗಣಂ| ರಸ ದಶ| ಸ್ಥಾನದೊಳ್
ವಿ ಬ್ರ ವಿ ವಿ
ಬಿಸರುಹ| ನೇತ್ರ| ಗಣಮೇ ಬ| ರ್ಕುಳಿದುವು ॥
ವಿ ಬ್ರ ವಿ
ಬಿಸರುಹ| ನೇತ್ರ| ತ್ರಿಪದಿಗೆ ॥

ಈ ತ್ರಿಪದಿಯಲ್ಲಿ ಪ್ರಥಮ ಪಾದದಲ್ಲಿ ನಾಲ್ಕು ವಿಷ್ಣು ಗಣಗಳೂ ಎರಡನೆಯ ಪಾದದ ಎರಡನೆಯ ಸ್ಥಾನದಲ್ಲಿ ಒಂದು ಬ್ರಹ್ಮ ಗಣವೂ ಮೂರನೆಯ ಪಾದದ ಎರಡನೆಯ ಸ್ಥಾನದಲ್ಲಿ ಒಂದು ಬ್ರಹ್ಮ ಗಣವೂ ಬಂದು ಉಳಿದ ಎಲ್ಲ ಸ್ಥಾನಗಳಲ್ಲಿ ವಿಷ್ಣುಗಣಗಳೂ ಬಂದಿವೆ.

ಒಂದನೇ ಪಾದ	ವಿ	ವಿ	ವಿ	ವಿ
ಎರಡನೇ ಪಾದ	ವಿ	ಬ್ರ	ವಿ	ವಿ
ಮೂರನೇ ಪಾದ	ವಿ	ಬ್ರ	ವಿ	

ಸಾಂಗತ್ಯ

ಸಾಂಗತ್ಯವು ಅರ್ಧ ಸಮ ವೃತ್ತವಾಗಿದೆ. ಇದಕ್ಕೆ ನಾಲ್ಕು ಪಾದಗಳಿವೆ. ಪೂರ್ವಾರ್ಧವು ಉತ್ತರಾರ್ಧಕ್ಕೆ ಸಮಾನವಾಗಿದೆ. ಮೊದಲನೆಯ ಪಾದದಲ್ಲಿ 4 ಗಣಗಳೂ ಎರಡನೆಯ ಪಾದದಲ್ಲಿ 3 ಗಣಗಳೂ ಇವೆ.

ಉದಾಹರಣೆ:

ವಿ ವಿ ವಿ ವಿ
ᴗᴗᴗ– ᴗᴗᴗ– –ᴗ – – ᴗᴗ
ಕುಲಿಶ ದೇ| ಹಿಗಳು ನೀ| ವಿಬ್ಬರಿ| ನ್ನಂ ಕದ

ವಿ ವಿ ಬ್ರ
ᴗᴗ–ᴗ – –ᴗ –ᴗ
ತಲದಲ್ಲಿ| ಕಾಲಿಕ್ಕು– ವಾಗ ।

ವಿ ವಿ ವಿ ವಿ
ᴗᴗ–ᴗ ᴗᴗᴗᴗᴗ ᴗᴗ–ᴗ – ᴗ –
ಬಳೆಗಾರ– ವಸರದೊ– ಳೆರಡಾನೆ– ವೊಕ್ಕು ಹೋ

ವಿ ವಿ ಬ್ರ
ᴗᴗᴗ– ᴗ ᴗ – ᴗ ᴗᴗᴗ
ಕುಳಿಸಿದಂ| ತಹುದೆಂದ| ರವರು ॥

ಇದರ ಒಂದನೆಯ ಪಾದದಲ್ಲಿ 4 ವಿಷ್ಣುಗಣಗಳಿವೆ. ಎರಡನೆಯ ಪಾದದಲ್ಲಿ 2 ವಿಷ್ಣುಗಣಗಳೂ, 1 ಬ್ರಹ್ಮಗಣವೂ ಇವೆ. ವಿಷ್ಣುಗಣಕ್ಕೆ ಬದಲಾಗಿ ಬ್ರಹ್ಮ ಗಣವೂ ಬರಬಹುದು. ಇದು ಹಾಡಿನ ವೃತ್ತ.

10th_Kannada_Reader1-5.indd 158 03-04-2019 14:08:02

ಘಟಕ
ಎಂಟು

ನಾಡು–ನುಡಿ



ಕಾವ್ಯ ಕಣಜ	: ಕನ್ನಡಿಗರ ತಾಯಿ	– ಎಂ.ಗೋವಿಂದ ಪೈ
ಗದ್ಯ ವಿಹಾರ	: ಹೊಯ್ಸಳ	– ಆಲೂರು ವೆಂಕಟರಾಯರು
ಉಪಪತ್ಯ	: ರಾಗಿ ಮುದ್ದೆ	– ಚಾ.ಹ. ರಘುನಾಥ
ವ್ಯಾಕರಣ	: ಅಲಂಕಾರ	

10th_Kannada_Reader1-5.indd 159 03-04-2019 14:08:02

ಘಟಕ ಎಂಟು

ಕನ್ನಡಿಗರ ತಾಯಿ

– ರಾಷ್ಟ್ರಕವಿ ಎಂ. ಗೋವಿಂದ ಪೈ



ಜಗತ್ತಿನಲ್ಲಿರುವ ಎಲ್ಲಾ ಭಾಷೆಗಳಲ್ಲಿಯೂ ನಾಡು–ನುಡಿಯ ಮೇಲಿನ ಅಭಿಮಾನವು ಆಯಾಯ ಭಾಷೆಯ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅಭಿವ್ಯಕ್ತಗೊಂಡಿದೆ. ಇವು ಜನಮಾನಸದ ಅಮೃತಧಾರೆಗಳಾಗಿವೆ. ನಾಡು–ನುಡಿಯ ಆತ್ಮಾಭಿಮಾನದಿಂದ ಕೂಡಿದ ದೇಶಾಭಿಮಾನವು ನಾಡಿನ ಏಳಿಗೆಗಾಗಿ ದುಡಿಯುವಂತೆ ನಮ್ಮೆಲ್ಲರನ್ನೂ ಪ್ರೇರೇಪಿಸುತ್ತವೆ. ಭವ್ಯ ಪರಂಪರೆಯುಳ್ಳ ಕರುನಾಡು ಅನೇಕ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕಾಲದಲ್ಲಿ ಕರ್ನಾಟಕದ ಏಕೀಕರಣದ ಕನಸನ್ನು ಕಂಡವರು ಅನೇಕರು. ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಉದಯವಾಗಲಿ ಚೆಲುವ ಕನ್ನಡ ನಾಡು, ಬಾರಿಸು ಕನ್ನಡ ಡಿಂಡಿಮವ, ಹಚ್ಚೇವು ಕನ್ನಡದ ದೀಪ ಎಂದೆಲ್ಲ ಅನೇಕರು ನಾಡು ನುಡಿಯ ಶ್ರೇಷ್ಠತೆ, ಪಾವಿತ್ರ್ಯತೆಯನ್ನು ಸಾರುವ ಮೂಲಕ ನವೋದಯ ಸಾಹಿತ್ಯಕ್ಕೆ ನಾಂದಿ ಹಾಡಿದರು. ಜೊತೆಗೆ ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದರು. ಈ ನಿಟ್ಟಿನಲ್ಲಿ ಮೂಡಿ ಬಂದ ಕವನಗಳಲ್ಲಿ ಇದೂ ಒಂದಾಗಿದೆ.



10th_Kannada_Reader1-5.indd 160 03-04-2019 14:08:03

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ !
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ !
ನಮ್ಮ ತಪ್ಪನೆನಿತೊ ತಾಳ್ದೆ
ಅಕ್ಕರೆಯಿಂದೆಮ್ಮನಾಳ್ದೆ
ನೀನೆ ಕಣಾ ನಮ್ಮ ಬಾಳ್ದೆ
ನಿನ್ನ ಮರೆಯಲಮ್ಮೆವು !
ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು ‖1‖

ಹಣ್ಣಿನೀವ ಕಾಯನೀವ ಪರಿಪರಿಯ ಮರಂಗಳೊ
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ
ತೆನೆಯ ಕೆನೆಯ ಗಾಳಿಯೊ
ಖಗಮೃಗೋರಗಾಳಿಯೊ
ನದಿ ನಗರ ನಗಾಳಿಯೊ
ಇಲ್ಲಿಲ್ಲದುದಳಿದುದೆ ?
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ ? ‖2‖

ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ
ಶರ್ವ ಪಂಪ ರನ್ನರ
ಲಕ್ಷ್ಮೀಪತಿ ಜನ್ನರ
ಷಡಕ್ಷರಿ ಮುದ್ದಣ್ಣರ
ಪುರಂದರವರೇಣ್ಯರ
ತಾಯೆ, ನಿನ್ನ ಬಸಿರ ಹೊನ್ನಗನಿ ವಿದ್ಯಾರಣ್ಯರ ! ‖3‖

10th_Kannada_Reader1-5.indd 161 03-04-2019 14:08:03

ಹಳೆಯ ಬೀಡ ಬೇಲ ನಾಡ ಮಾಡಮೆನಿತೊ ಸುಂದರಂ !
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ
ಇಲ್ಲಿಲ್ಲದ ಶಿಲ್ಪಮಿಲ್ಲ
ನಿನ್ನ ಕಲ್ಲೆ ನುಡಿವುದಲ್ಲ
ಹಿಂಗತೆಯಿನಿವಾಲ ಸೊಲ್ಲ
ನೆಮ್ಮ ತೃಷೆಗೆ ದಕ್ಕಿಸು !
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು ! ‖4‖

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ !
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ
ಸುರಭಿ ಎಲ್ಲಿ ? ನೀನದನ್ನ
ನವಶಕ್ತಿಯಿನೆಬ್ಬಿಸು –
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು ! ‖5‖

ನಮ್ಮೆದೆಯಂ ತಾಯೆ ಬಲಿಸು
ಎಲ್ಲರ ಬಾಯಲ್ಲಿ ನೆಲಸು
ನಮ್ಮ ಮನಮನೊಂದೆ ಕಲಸು
ಇದನೊಂದನೆ ಕೋರುವೆ
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ ? ‖6‖

10th_Kannada_Reader1-5.indd 162 03-04-2019 14:08:03

ಕವಿ ಕಾವ್ಯ ವಿಚಾರ



ರಾಷ್ಟ್ರಕವಿ ಎಂ. ಗೋವಿಂದ ಪೈ

ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ 23.03.1883ರಲ್ಲಿ ಜನಿಸಿದರು. ತಂದೆ ಸಾಹುಕಾರ ತಿಮ್ಮಪ್ಪ ಪೈ, ತಾಯಿ ದೇವಕಿಯಮ್ಮ. ಬಿ.ಎ. ಪದವಿಯನ್ನು ಪಡೆದಿದ್ದ ಗೋವಿಂದ ಪೈ ಅವರು ದೇಶೀ ಭಾಷೆಗಳಲ್ಲಲ್ಲದೆ ವಿದೇಶೀ ಭಾಷೆಗಳ ಪಾಂಡಿತ್ಯವನ್ನುಳ್ಳವರಾಗಿದ್ದರು. ಪ್ರಾಸ ಬಿಟ್ಟು ಪದ್ಯ ರಚಿಸಿದ ಮೊದಲ ಕವಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಸಂಶೋಧಕ, ವಿಮರ್ಶಕ, ಅನುವಾದಕರಾಗಿಯೂ ಜನಪ್ರಿಯರಾದ ರಾಷ್ಟ್ರಕವಿ ಗೋವಿಂದ ಪೈ ಅವರ ಮೊದಲ ಕವಿತೆ 1900ರಲ್ಲಿ ಸುವಾಸಿನಿ ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಗಿಳಿವಿಂಡು, ನಂದಾದೀಪ ಮೊದಲಾದವು ಇವರ ಕವನ ಸಂಕಲನಗಳು. ಚಂದ್ರಸೇನರ ಬಂಗಾಳಿ ಕೃಷ್ಣ ಚರಿತೆಯ ಗದ್ಯಾನುವಾದವನ್ನು ಮಾಡಿದ್ದಾರೆ. 'ಸಿಂಗಾಲ ಸುತ್ತ' ಇವರ ಬೌದ್ಧ ಸೂತ್ರಗಳ ಕನ್ನಡ ಅನುವಾದ ಕೃತಿ. ಅಲ್ಲದೆ 35 ವೃತ್ತಗಳುಳ್ಳ ಪ್ರಾಸ ರಹಿತ ಗೊಮ್ಮಟ ಜಿನಸ್ತುತಿಯನ್ನು ರಚಿಸಿ ಪ್ರಕಟಿಸಿದ್ದಾರೆ. ರವೀಂದ್ರನಾಥ ಠಾಕೂರ್, ಅಹಮ್ಮದ್ ಇಕ್ಬಾಲ್, ಉಮರ್ ಖಯ್ಯಾಂನ ರುಬಾಯಿಗಳನ್ನು ಭಾಷಾಂತರಿಸಿದ್ದಾರೆ. ವೈಶಾಖ ಮತ್ತು ಗೊಲ್ಗೊಥಾ ಖಂಡಕಾವ್ಯಗಳನ್ನು ಪ್ರಕಟಿಸಿದ್ದಾರೆ.

ಜಪಾನಿನ ನೋ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿರುವುದಲ್ಲದೆ ಚಿತ್ರಭಾನು, ಹೆಬ್ಬೆರಳು, ಪಾರ್ಶ್ವನಾಥ ತೀರ್ಥಂಕರ ಚರಿತೆ, ಬಾಹುಬಲಿ ಗೊಮ್ಮಟೇಶ್ವರ ಚರಿತೆ, ಭಗವಾನ್ ಬುದ್ಧ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಜೀವಿತಾವಧಿಯನ್ನು ಸಂಶೋಧನೆ, ಸಾಹಿತ್ಯಕ್ಕಾಗಿ ಮೀಸಲಿಟ್ಟಿದ್ದ ಇವರಿಗೆ 1949ರಲ್ಲಿ ಮದ್ರಾಸ್ ಸರ್ಕಾರವು ರಾಷ್ಟ್ರಕವಿ ಬಿರುದು ನೀಡಿ ಗೌರವಿಸಿದೆ. ಕನ್ನಡದ ಮೊದಲ ರಾಷ್ಟ್ರಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಇವರು. ಹೊಗಳಿಕೆ ಮತ್ತು ಪ್ರಚಾರಕ್ಕೆ ಹಾತೊರೆಯದ ಇವರು 1950ರಲ್ಲಿ ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. 06.09.1963ರಲ್ಲಿ ಇವರು ದೈವಾಧೀನರಾದರು.

ಪ್ರಸ್ತುತ ಪದ್ಯವನ್ನು ಎನ್.ಎಸ್.ರಘುನಾಥ್ ಅವರು ಸಂಪಾದಿಸಿರುವ ಶತಮಾನದ ಮಕ್ಕಳ ಸಾಹಿತ್ಯ ಎನ್ನುವ ಸಂಕಲನ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಆಶಯ ಭಾವ

ಇದು ಕರ್ನಾಟಕ ಏಕೀಕರಣ ಪೂರ್ವದಲ್ಲಿ ಕನ್ನಡ ತಾಯಿಯನ್ನು ಸ್ತುತಿಸಿ ಬರೆದ ಕವನ. ಕನ್ನಡ ತಾಯಿ ತನ್ನ ಮುಖವನ್ನು ತೋರುವ ಮೂಲಕ ಕನ್ನಡದ ಮಕ್ಕಳನ್ನು ಒಂದಾಗಿಸಬೇಕೆಂಬುದು ಈ ಪದ್ಯದ ಮುಖ್ಯ ಆಶಯ. ಕನ್ನಡ ನಾಡಿನಲ್ಲಿ ಎಲ್ಲಾ ಸಂಪತ್ತೂ ಇದೆ. ತಾಯಿಯ ಮುಖವನ್ನು ಕಂಡಾಗ ಅದೆಲ್ಲವೂ ಗೋಚರವಾಗುತ್ತದೆ. ಹೀಗೆ ಗೋಚರಿಸಿದಾಗ ಮಾತ್ರ ಕನ್ನಡ ತಾಯಿಯ ಕೀರ್ತಿ ಜಗತ್ತಿನಾದ್ಯಂತ ಪಸರಿಸಲು ಸಾಧ್ಯ. ಅದಕ್ಕಾಗಿ ಕನ್ನಡ ತಾಯಿ ಎಲ್ಲರ ನಡೆ–ನುಡಿ, ಆಚಾರ ವಿಚಾರಗಳಲ್ಲಿ ನೆಲೆಯಾಗಬೇಕು. ಕನ್ನಡ ತಾಯಿ ಜನ್ಮದಾತೆಗೆ ಸಮನಾಗಿರುವುದರಿಂದ ಅವಳ ಹರಕೆ – ಹಾರೈಕೆ ನಮಗೆ ಶ್ರೀರಕ್ಷೆ. ಕನ್ನಡಿಗರಿಗೆ ಕನ್ನಡವೇ ಉಸಿರು, ಕನ್ನಡಿಗರ ಧಮನಿ ಧಮನಿಗಳಲ್ಲಿಯೂ ಕನ್ನಡವೇ ಉಸಿರಾಗಬೇಕು. ಕನ್ನಡ ನಾಡು ನುಡಿಯ ಶ್ರೇಷ್ಠತೆ, ಭವ್ಯ ಪರಂಪರೆ, ಇತಿಹಾಸ, ಪ್ರಾಕೃತ ಸಾಹಿತ್ಯ, ವಾಸ್ತುಶಿಲ್ಪಗಳ ಭವ್ಯತೆಯಿಂದ ಜಗತ್ತಿನೆಲ್ಲೆಡೆ ಹರಡಬೇಕೆಂಬುದು ಕವಿಯ ಆಶಯವಾಗಿದೆ.

ಟಿಪ್ಪಣಿ

ಖಗಮೃಗೋರಗಾಳಿ : ಖಗ–ಪಕ್ಷಿ; ಮೃಗ–ಪ್ರಾಣಿ; ಉರಗ–ಹಾವು; ಆಳಿ–ಸಮೂಹ;

ಪ್ರಾಣಿಪಕ್ಷಿಹಾವುಗಳ ಸಮೂಹ.

ಕೊಂಡಕುಂದವರ್ಯ : ಜೈನಧರ್ಮದಲ್ಲಿ ದಿಗಂಬರ–ಶ್ವೇತಾಂಬರ ಎಂಬ ಸಂಪ್ರದಾಯ ಭೇದಗಳು ಹುಟ್ಟುವ ಮೊದಲು ಜೈನ ಧರ್ಮವು

10th_Kannada_Reader1-5.indd 163 03-04-2019 14:08:03

ಅರ್ಹಂತ, ಅನೇಕಾಂತ ಎಂಬಿವೇ ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು. ವಿಕ್ರಮ ಶಕದ 136ನೆಯ ವರ್ಷದಲ್ಲಿ ಅಂದರೆ ಕ್ರಿ.ಶ. 80–81ರಲ್ಲಿ ಅದು ದಿಗಂಬರ–ಶ್ವೇತಾಂಬರ ಸಂಪ್ರದಾಯಗಳೆಂದು ಕವಲಾಗುತ್ತಲೇ ದಿಗಂಬರ ಸಂಪ್ರದಾಯಕ್ಕೆ ಮೂಲ ಸಂಘವೆಂದು ಹೆಸರಾಯಿತು. ಪದ್ಮನಂದಿ ಎಂಬ ಮೊದಲನೆಯ ಹೆಸರುಳ್ಳ ಕೊಂಡಕುಂದಾಚಾರ್ಯನು ಈ ಮೂಲ ಸಂಘದ ಮುಂದಾಳೆಂದೂ ಆ ಗಣದ ಒಡೆಯನೆಂದೂ ಕಂಡು ಬರುತ್ತದೆ.

ಹಿಂಗತೆಯಿನಿವಾಲ ಸೊಲ್ಲ : ಹಿಂಗತೆ–ಹಿನ್ನೆಲೆಯ ಕತೆ (ಬೇಲೂರು, ಹಳೇಬೀಡು ಇತ್ಯಾದಿ ಶಿಲ್ಪಕಲೆಗಳ ಹಿಂದೆ ಇರುವ ಕತೆ). ಇನಿದು–ಇನಿದಾದ, ಸವಿಯಾದ, ರುಚಿಯಾದ, ಪಾಲು–ಹಾಲು; ಸೊಲ್ಲು–ಮಾತು; ಹಿನ್ನೆಲೆಯ ಕಥೆ ಸವಿಯಾದ ಹಾಲಿನಂತಿರುವ ಮಾತುಗಳಿಂದ ಕೂಡಿದೆ.

ಎಮ್ಮ ತೃಷೆಗೆ ದಕ್ಕಿಸು : ಎಮ್ಮ–ನಮ್ಮ; ತೃಷೆ–ದಾಹ, ಬಾಯಾರಿಕೆ; ದಕ್ಕಿಸು–ನೀಡು; ಕರ್ನಾಟಕದ ಶಿಲ್ಪಕಲೆಯ ಇತಿಹಾಸವನ್ನು ತಿಳಿದುಕೊಳ್ಳಬೇಕೆಂಬ ದಾಹವುಂಟಾಗುವಂತೆ (ಬಯಕೆಯುಂಟಾಗುವಂತೆ) ಮಾಡು.

ಪದಗಳ ಅರ್ಥ

ಆಳ್ವೆ–ಆಳುವೆ; ಒಸಗೆ–ಸಂತೋಷ, ಶುಭವಾರ್ತೆ; ಕಾರಕಳ–ಕಾರ್ಕಳ(ಉಡುಪಿ ಜಿಲೆಯ ಒಂದು ತಾಲೂಕು ಕೇಂದ್ರ); ಕೆನೆ–ಸಾರ, ತಿರುಳು; ತಾಳ್ವೆ–ತಾಳಿಕೊಳ್ಳುವೆ, ಸಹಿಸುವೆ; ತೃಷೆ–ದಾಹ, ಬಾಯಾರಿಕೆ; ದಿವಂ–ಆಕಾಶ, ಸ್ವರ್ಗ; ನಗಾಳಿ–ಪರ್ವತಗಳ ಸಮೂಹ; ನಿಡುಕರು–ನಿಡಿದಾದ ಮೂರ್ತಿ, ಎತ್ತರಕ್ಕೆ ನಿಂತಿರುವ ಗೊಮ್ಮಟಮೂರ್ತಿ; ಬಸಿರು–ಗರ್ಭ, ಗರ್ಭಾಶಯ; ಬಿಳಿಯ ಕೊಳ–ಬೆಳ್ಗೊಳ, ಶ್ರವಣಬೆಳಗೊಳ; ಬೇಲನಾಡು–ಬೇಲೂರು; ಮೊಗ–ಮುಖ; ಲತೆ–ಬಳ್ಳಿ; ಶರ್ವ–ನೃಪತುಂಗನ ಮತ್ತೊಂದು ಹೆಸರು; ಸುರಭಿ–ಕಲ್ಪವೃಕ್ಷ, ಸುಗಂಧ; ಸುವಾಸನೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ನಮ್ಮನ್ನು ಆಳುವವಳು ಯಾರು ?
2. ಲತೆ ಯಾವುದನ್ನೆಲ್ಲಾ ನೀಡುತ್ತದೆ ?
3. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು ?
4. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು ?
5. ಕನ್ನಡಿಗರ ಪಾಡು ಏನು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು ?
2. ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು ?
3. ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಕವಿ ಆಶಿಸುತ್ತಾರೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ. ಏಕೆ ?
2. ಕವಿ ಕನ್ನಡ ತಾಯಿಯಲ್ಲಿ ಏನೆಂದು ಕೋರುತ್ತಾರೆ ?
3. ಗೋವಿಂದ ಪೈ ಅವರ ಪ್ರಮುಖ ಕೃತಿಗಳಾವುವು ?
4. ಕನ್ನಡಿಗರ ತಾಯಿ ಮೊಗ ತೋರಬೇಕೆಂದು ಕವಿ ಏಕೆ ಬಯಸುತ್ತಾರೆ?
5. ಕನ್ನಡ ನಾಡಿನ ಕವಿ ಹಾಗೂ ಕಲೆಯ ಮಹತ್ವವೇನು? ವಿವರಿಸಿ.

IV. ಕೆಳಗಿನ ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.

1. 'ಖಗ ಮೃಗೋರಗಾಳಿಯೋ'
2. 'ನಿನ್ನ ಕಲ್ಲೆ ನುಡಿವುದಲ್ಲ !'
3. 'ನಮ್ಮ ಮನಮನೊಂದೆ ಕಲಸು!'

10th_Kannada_Reader1-5.indd 164 03-04-2019 14:08:03

ಘಟಕ ಎಂಟು

ಹೊಯ್ಸಳ

–ಆಲೂರು ವೆಂಕಟರಾಯರು



ಶೂರರಲ್ಲಿ ಕ್ಷಾತ್ರತೇಜವು ಅವ್ಯಾಹತವಾಗಿ ಒಳಗೆ ಪ್ರಜ್ವಲಿಸುತ್ತಿದ್ದರೂ ಯಾವಾಗಲೂ ಬಹಿರಂಗವಾಗಿ ಮಿಂಚುತ್ತಿರಲಿಲ್ಲ. ಆದ ಕಾರಣ ಅನೇಕ ಕ್ಷಾತ್ರ ಶಿಖಾಮಣಿಗಳು ತಮ್ಮ ರಕ್ತದಲ್ಲಿ ಶೌರ್ಯಬಿಂದುಗಳು ಓತಪ್ರೋತವಾಗಿ ತುಂಬಿದ್ದರೂ ಅವನ್ನು ಮುಚ್ಚಿಕೊಂಡು ಅನೇಕ ಕಾಲದವರೆಗೆ ಅನ್ಯ ವ್ಯವಸಾಯದಲ್ಲಿ ತೊಡಗಿರುತ್ತಾರೆ. ಅವರಲ್ಲಿ ಅಡಗಿಕೊಂಡಿದ್ದ ತೇಜಸ್ಸು ಯಾವುದೊಂದು ಪ್ರಸಂಗದಲ್ಲಿ ಥಳಕ್ಕನೆ ಹೊರಹೊಮ್ಮಿತೆಂದರೆ, ಕೆಲವು ಗುರುಗಳು ಅವರ ರಾಜತ್ವ ಯೋಗ್ಯತೆಯನ್ನು ಕಂಡು ಹಿಡಿದು ಪ್ರೋತ್ಸಾಹಿಸಿ ಅವರಿಂದ ಹೊಸ ರಾಜ್ಯವನ್ನು ಕಟ್ಟಿಸುತ್ತಾರೆ. ಸಳನೆಂಬೊಬ್ಬ ಸಾಮಾನ್ಯ ವೀರನು ಒಂದು ಸಮಯದಲ್ಲಿ ಹೀಗೆ ಪ್ರಕಾಶಮಾನನಾಗಿ ಜಿನಮುನಿಯ ಉದ್ದೇಶದಿಂದ ಹೊಯ್ಸಳ ಕುಲಸ್ಥಾಪಕನಾದನು.



10th_Kannada_Reader1-5.indd 165 03-04-2019 14:08:03

ಮೈಸೂರು ದೇಶದ ಕಡೂರು ಜಿಲ್ಲೆಯಲ್ಲಿ 'ಅಂಗಡಿ'ಯೆಂಬುದೊಂದು ಚಿಕ್ಕ ಊರು. ಸುಮಾರು ಸಾವಿರ ವರ್ಷಗಳ ಪೂರ್ವದಲ್ಲಿ 'ಶಶಕಪುರ'ವೆಂದು ಅದಕ್ಕೆ ಹೆಸರು. ಅದರ ನೆರೆಯಲ್ಲಿ ವಾಸಂತಿಕಾ ಅಥವಾ ವಸಂತಮ್ಮನ ಗುಡಿಯುಂಟು. ಅಲ್ಲಿ ಸುದತ್ತನೆಂಬ ಜೈನ ಯತಿ ವಾಸಿಸುತ್ತಿದ್ದನು. ಅವನ ಹೃದಯದಲ್ಲಿ ಪ್ರದೀಪ್ತವಾಗಿದ್ದ ಜ್ಞಾನವು ಗಂಭೀರವಾದ ಮುಖದಲ್ಲಿ ಕಾಂತಿರೂಪವಾಗಿ ಒಡ ಮೂಡಿತ್ತು. ಆಧ್ಯಾತ್ಮದಲ್ಲಿ ಅಭಿರುಚಿಯುಳ್ಳ ಸಳನು ಆ ಸುದತ್ತ ಯತಿಯ ಶಿಷ್ಯನಾಗಿದ್ದನು. ಆತನು ಜ್ಞಾನ ಸಂಪಾದನೆಗಾಗಿ ಪ್ರತಿನಿತ್ಯವೂ ಸ್ವಾಮಿಯ ಸನ್ನಿಧಾನಕ್ಕೆ ಆತನಿಂದ ಪಾಠ ಹೇಳಿಸಿಕೊಳ್ಳುವುದಕ್ಕೆ ಬರುತ್ತಿದ್ದನು.

ಸಳನು ಸೋಮ ವಂಶಕ್ಕೆ ಸೇರಿದ ಯದು ಕುಲದವನು. ಕ್ಷಾತ್ರ ಸ್ವಭಾವಕ್ಕೆ ತಕ್ಕಂತೆ ಮೃಗಯಾ ವಿನೋದ ಮೊದಲಾದ ವೀರೋಚಿತ ಕಾರ್ಯಗಳು ಆತನಿಗೆ ತೀರ ಪ್ರಿಯವಾಗಿದ್ದವು. ಆತನು ಬೇಟೆಯಲ್ಲಿ ಒಳ್ಳೆಯ ಚಪಲನೂ ಧೀರನೂ ವೀರನೂ ಆಗಿದ್ದನು. ಒಂದು ದಿನ ಕಾನನದಲ್ಲಿ ಸಳನು ಸಿಡಿಲಂತೆ ಗರ್ಜಿಸಿ ಎರಗುವ ಸಿಂಹ ಸಮೂಹವನ್ನು ತುಡುಕಿರಿದು, ಅತಿ ರಭಸದಿಂದ ಭರ್ರನೆ ಬಂದು ಹಾಯುವ ಸೂಕರಾನೀಕವನ್ನು ತಡೆಯೊತ್ತಿ, ತೊತ್ತಳದುಳಿಯುತ್ತ ಬರುವ ಮತ್ತ ದಂತ ಸಂತತಿಯನ್ನು ಹೊಡೆದೆಳೆದು, ಭೀಕರವಾದ ಮೃಗಯಾ ವಿಹಾರದಿಂದಿರಲು ಚಿರ್ಬುಗಳು ಬೆದರಿದವು, ತೋಳಗಳು ಕದಲಿದವು, ಕರಡಿಗಳು ಹುದುಗಿದವು, ಕಾಡುಕೋಣಗಳು ಚದರಿದವು, ಎರಳೆಗಳ ಎದೆಯೊಡೆಯಿತು, ಹಕ್ಕಿಗಳು ಹೌಹಾರಿದವು. ಆ ಕೋಲಾಹಲದಿಂದ ಸಹ್ಯಾದ್ರಿಯ ಉತ್ತುಂಗ ಸಾನುಶ್ರೇಣಿಗಳು ಬಿರಿದವು. ಹೀಗೆ ಅನೇಕ ಕ್ರೂರ ಪಶುಗಳ ತೊವಲನ್ನು ಬಿಚ್ಚಿ, ಎಲುವನ್ನು ಕೊಚ್ಚಿ, ಮೃಗಯಾ ವಿಲಾಸವನ್ನು ತೀರಿಸಿಕೊಂಡು ಸಳನು ಗುರುಗಳ ಬಳಿ ಸಾರಿದನು. ದಣುವಾರಿಸಿಕೊಂಡು ಧರ್ಮಶ್ರವಣ ಮಾಡುತ್ತ ಕುಳಿತನು. ಆಗ ಅಲ್ಲಿದ್ದವರು ಅವರಿಬ್ಬರೇ. ಅಷ್ಟರಲ್ಲಿ ಒಂದು ಹೆಬ್ಬುಲಿಯು ಗುಡುಗುತ್ತ ಜಿಗಿಯುತ್ತ, ಅಡವಿಯೊಳಗಿಂದ ವಸಂತಮ್ಮನ ಗುಡಿಗೆ ಬಂದಿತು. ದೃಢಚಿತ್ತನಾದ ಸನ್ಯಾಸಿ ಬೆಚ್ಚಲಿಲ್ಲ. ಧೈರ್ಯೋದ್ಧಾಮನಾದ ಸಳನೂ ಅಳುಕಲಿಲ್ಲ. ಇಬ್ಬರೂ ಸ್ಥಿರಾಸೀನರಾಗಿದ್ದರು. ಮೈಮರೆದು ಕುಳಿತ ಅವರ ಗಂಟಲನ್ನು ಬಗೆಯಲು ಆ ಹೆಬ್ಬುಲಿಯು ತನ್ನ ಹದನಾದ ಪಂಜರವನ್ನು ಎತ್ತಿತು. ಇನ್ನೊಂದು ಕ್ಷಣದಲ್ಲಿ ಇವರ ಗಂಟಲುಗಳನ್ನು ಸೀಳಿ ಅಸುವನ್ನು ಹೀರುವುದಿತ್ತು. ಆಗ ಸುದತ್ತ ಮುನಿಯು, 'ಹೊಯ್–ಸಳ' ಎಂದು ತನ್ನ ಕೈಯಲ್ಲಿದ್ದ ಸೆಳೆ(ಬೆತ್ತ)ಯನ್ನು ಅವನತ್ತ ನೀಡಿದರು. ಸಳನು ಅದನ್ನು ತೆಗೆದುಕೊಂಡು ಆರ್ಭಟಿಸಿ ಬರುತ್ತಿರವ ಆ ಹೆಬ್ಬುಲಿಯ ಬಾಯಲ್ಲಿ ಅದನ್ನು ತಿವಿದು ತುಂಡರಿಸಿದನು. ಗುರುವಾದ ಸುದತ್ತನು ಇದಕ್ಕೆ ಮೆಚ್ಚಿದನು. ಆತ್ಮಾನಾತ್ಮ ವಿವೇಚನೆಯಲ್ಲಿ ಕಾಲ ಕಳೆಯುವುದಕ್ಕಿಂತ ಈ ಕ್ಷತ್ರಿಯ ರತ್ನವು ಶೌರ್ಯ ಸಾಹಸಗಳಿಂದ ನಿರ್ಮಿತವಾದ ರಾಜ ಸಿಂಹಾಸನದಲ್ಲಿಯೇ ಶೋಭಿಸುವುದು ಯೋಗ್ಯವೆಂದು ಸುದತ್ತನಿಗೆ ಅನ್ನಿಸಿತು. ಆತನು ಸಳನಿಗೆ ಧೈರ್ಯ ಶೌರ್ಯಗಳು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುವಂತೆಯೂ ಸ್ಫೂರ್ತಿಯುಂಟಾಗುವಂತೆಯೂ ಅಭಿಮಾನವು ಬೆಳಗುವಂತೆಯೂ ಉಪದೇಶವನ್ನಿತ್ತನು.

ಜೈನಧರ್ಮಕ್ಕೆ ಆಧಾರ ಸ್ತಂಭದಂತಿದ್ದ ಗಂಗ ವಂಶವೂ ರಾಷ್ಟ್ರಕೂಟ ವಂಶವೂ ಊರ್ಜಿತಾವಸ್ಥೆಯಲ್ಲಿದ್ದಾಗ ಆ ರಾಜರು ಚೋಳರ ಆವೇಗವನ್ನು ತಡೆದು ನಿಲ್ಲಿಸಿದ್ದರು. ಆ ಎರಡು ವಂಶಗಳ ಶೌರ್ಯದ ಗಟ್ಟಿ ಕರಗಿದ ಬಳಿಕ ಆ ವಂಶಗಳನ್ನು ಹತ್ತಿಕ್ಕಿ ಚೋಳರು ಗಂಗ ರಾಜ್ಯದಲ್ಲಿ ತಮ್ಮ ಅರಸೊತ್ತಿಗೆಯನ್ನು ಪಸರಿಸಿದ್ದರು. ರಾಷ್ಟ್ರಕೂಟ ರಾಜ್ಯವನ್ನು ಪಶ್ಚಿಮ ಚಾಲುಕ್ಯರು ತಮ್ಮ ಛತ್ರದ ನೆಳಲಿನಲ್ಲಿ ಸೇರಿಕೊಂಡಿದ್ದರು. ಅಂತೂ, ಈಗ ಸಳನ ತಾಯ್ನಾಡು ಚೋಳಾಧೀನವಾಗಿತ್ತು. ಅದರ ಸಂಕೋಲೆಯನ್ನು ಕಿತ್ತೊಗೆದು ಸ್ವರಾಜ್ಯವನ್ನು ಸ್ಥಾಪಿಸುವುದೇ ಅವನ ಮೊದಲನೆಯ ಕರ್ತವ್ಯವಾಯಿತು. ಚೋಳರ ಧ್ವಜವನ್ನು ಕೀಳುವುದು ಸಾಮಾನ್ಯ ಕಾರ್ಯವಲ್ಲ. ಸಳನು ಚೋಳರಿಗೂ ಚಾಳುಕ್ಯರಿಗೂ ಇದ್ದ ಹಗೆತನದ ಲಾಭವನ್ನು ಪಡೆಯಬಯಸಿದನು. ಚೋಳರ ಮೂಲೋತ್ಪಾಟನ ಮಾಡಬೇಕೆಂದೇ ಚಾಳುಕ್ಯರ ಉದ್ದೇಶವಿದ್ದುದರಿಂದ ಅವರು ಸಹಜವಾಗಿಯೇ ಸಳನ ಹೆಗಲ ಮೇಲೆ ಕೈಹಾಕಿದರು. ಅಮೇಲೆ ಸಳನು ಚೋಳರೊಡನೆ ಜಗಳ ಹೂಡಿದನು. ಇವನ ಸಮ್ಮುಖದಲ್ಲಿ ಚೋಳ ರಾಜನ ಸುಭಟರು ಇಟ್ಟಣಿಸಿದರು. ಹುಯ್ಲಿಗೆ ಆರಂಭವಾಯಿತು. ಮೃಗಯಾ ವಿನೋದಿಯಾದ ಸಳನು ಪರಸೈನ್ಯದಲ್ಲಿ ಮನುಷ್ಯರ ಬೇಟೆಯಾಡಿದನು. ಚೋಳ ಅರಸನು ಮುನಿಮುನಿದು ಕಾದಿದನು; ಸಳನೂ ಹುರಿಗೊಂಡು ಕೋಪಾಟೋಪದಿಂದ

10th_Kannada_Reader1-5.indd 166 03-04-2019 14:08:03

ಆತನಿಗೆ ಇದಿರಾದನು. ಚೋಳನು ಕಂಗೆಟ್ಟು ಮುಂಗಾಣದೆ ತನ್ನ ರಾಜ್ಯವನ್ನು ಸೇರಬೇಕಾಯಿತು. ಸಳನ ನಾಡಿನ ಬೇಡಿಗಳು ಕತ್ತರಿಸಿದವು. ಆತನು ಹೊಸ ರಾಜ್ಯ ಸ್ಥಾಪಕನೆಂದು ಹೊಗಳಿಸಿಕೊಂಡನು. ತನ್ನ ಸ್ವರಾಜ್ಯ ಸ್ಥಾಪನೆಗೆ ಬೀಜ ವಾಕ್ಯದಂತಿರುವ 'ಹೊಯ್–ಸಳ' ಎಂಬ ಜಿನಮುನಿವರನ ಉದ್ಗಾರವೇ ಆತನ ಉಪನಾಮವಾಯಿತು. ತನ್ನ ಶೌರ್ಯವನ್ನು ಪ್ರಕಟಗೊಳಿಸಿ ಸ್ವಾತಂತ್ರ್ಯ ಯುದ್ಧದ ಹಾದಿಗೆ ಹಚ್ಚಿದ ಆ ಹುಲಿಯೂ ಸುದತ್ತ ಗುರುವಿನ ಸೆಳೆಯೂ ಧ್ವಜಚಿಹ್ನೆಗಳಾದವು. ಹೀಗೆ, ಸಳನ ಹೆಸರು ಆತನ ಇತಿಹಾಸದ ಸ್ಮಾರಕವಾಯಿತು. ಪತಾಕೆಯು ಆತನ ಪ್ರತಾಪದ್ಯೋತಕವಾದ ಕುರುಹಾಯಿತು.

ಮುಂದೆ, ಈ ಹೊಯ್ಸಳ ವಂಶವು, ಚಾಳುಕ್ಯರು ಸೊರಗಿದ ಹೊತ್ತು ಸಾಧಿಸಿ ಅವರನ್ನು ಮುರಿದಿಕ್ಕಿ ಸಾರ್ವಭೌಮತ್ವವನ್ನು ಪಡೆದು, ಜಯಶ್ರೀಯ ವಿಲಸಿತಾವಾಸವಾಗಿಯೂ ಯಶೋವನಿತೆಯ ವಿರಾಮಸ್ಥಾನವಾಗಿಯೂ ಉದ್ಯದ್ಗುಣ ಮೌಕ್ತಿಕಗಳ ಆಗರವಾಗಿಯೂ ಶರಣಾಗತ ಧರಣೀಶ್ವರರ ಆಶ್ರಯದುರ್ಗವಾಗಿಯೂ ಕಲಾನಿಧಿಯಾಗಿಯೂ ಎರಡು–ಮೂರು ನೂರು ವರುಷಗಳವರೆಗೆ ಘನತೆಯಿಂದ ರಾಜ್ಯವನ್ನಾಳಿತು.

ಕೃತಿ ಕರ್ತೃ ಪರಿಚಯ



ಆಲೂರು ವೆಂಕಟರಾಯ

ಈ ಪಾಠವನ್ನು ಆಲೂರು ವೆಂಕಟರಾಯರು ರಚಿಸಿರುವ, 'ಕರ್ನಾಟಕದ ವೀರ ರತ್ನಗಳು' ಎನ್ನುವ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಕನ್ನಡ ನಾಡು ಮತ್ತು ನುಡಿಗಳ ಏಳಿಗೆಗಾಗಿ ಬಹುಕಾಲ ದುಡಿದ ಕನ್ನಡಾಭಿಮಾನಿ ಇವರು. ಇವರು ಮೂಲತಃ ವಿಜಾಪುರ ಜಿಲ್ಲೆಯವರಾಗಿದ್ದು, ತಮ್ಮ ಕಡೆಗಾಲವನ್ನು ಧಾರವಾಡದಲ್ಲಿ ಕಳೆದರು. ತಮ್ಮ ಬರಹಗಳಿಂದ ಕನ್ನಡಿಗರಲ್ಲಿ 'ಕನ್ನಡತನ'ವನ್ನು ಕೆರಳಿಸಿ ಅದರ ಅರಿವನ್ನುಂಟು ಮಾಡಲು ವಿಪುಲವಾಗಿ ಸೇವೆ ಸಲ್ಲಿಸಿರುತ್ತಾರೆ. ಇವರು 'ಕರ್ನಾಟಕ ಗತ ವೈಭವ', 'ಗೀತಾಪ್ರಕಾಶ', 'ಗೀತಾ ಪರಿಮಳ', 'ಗೀತಾ ಸಂದೇಶ' ಮತ್ತು 'ಗೀತಾ ಕುಸುಮ ಮಂಜರಿ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ವೀರ್ಯವತ್ತಾದ ಗದ್ಯಶೈಲಿ, ಕನ್ನಡ ಗದ್ಯಸಾಹಿತ್ಯದಲ್ಲಿ ವೈಶಿಷ್ಟ್ಯಪೂರ್ಣವಾದುದು.

ಹೊಯ್ಸಳ ರಾಜರು ತಮ್ಮ ಆಳ್ವಿಕೆಯಲ್ಲಿ ಕನ್ನಡ ನಾಡಿನ ಸಾಹಿತ್ಯ ಮತ್ತು ಶಿಲ್ಪಗಳ ಬೆಳವಣಿಗೆಗೆ ಸಲ್ಲಿಸಿದ ಸೇವೆ ಅಮೋಘವಾದುದು. ಆ ಅರಸರ ಕಲಾ ಪ್ರಿಯತೆ ಹಾಗೂ ಧರ್ಮ ಸಹಿಷ್ಣುತೆ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಅಂತಹ ಮನೆತನದ ಮೂಲ ಪುರುಷನಾದ 'ಸಳ'ನು ಹೇಗೆ ಮತ್ತು ಯಾರ ಪ್ರೇರಣೆಯಿಂದ ರಾಜ್ಯ ಸ್ಥಾಪಿಸಿದನೆಂಬುದನ್ನು ವೆಂಕಟರಾಯರು ಈ ಭಾಗದಲ್ಲಿ ತಮ್ಮದೇ ಆದ ವೀರರಸಪೂರಿತ ಶೈಲಿಯಲ್ಲಿ ಹೇಳಿದ್ದಾರೆ.

ಪದಗಳ ಅರ್ಥ

ಅವ್ಯಾಹತ–ಒಂದೇ ಸಮನೆ(ಎಡೆಬಿಡದೆ); ಪ್ರಜ್ವಲಿಸು–ಹೆಚ್ಚಾಗಿ ಬೆಳಗು, ಪ್ರಕಾಶಿಸು; ಶಿಖಾಮಣಿ–ಶ್ರೇಷ್ಠ; ಓತಪ್ರೋತವಾಗಿ – ಹಾಸುಹೊಕ್ಕಾಗಿ; ಪ್ರದೀಪ್ತ–ಹೆಚ್ಚು ಹೊಳೆಯುವ; ಸನ್ನಿಧಾನ – ಪೂಜ್ಯರ ಎದುರಿನಲ್ಲಿ, ಸಮೀಪ; ಮೃಗಯಾ ವಿನೋದ–ಬೇಟೆಯಾಡುವ ಇಚ್ಛೆ; ವೀರೋಚಿತ(ವೀರ+ಉಚಿತ) – ವೀರರಿಗೆ ಯೋಗ್ಯವಾದ; ತುಡುಕಿರಿದು(ತುಡುಕಿ+ಇರಿದು) – ಮೇಲೆ ಬಿದ್ದು ಕೊಂದು; ಸೂಕರಾನೀಕ (ಸೂಕರ+ಆನೀಕ) – ಹಂದಿಗಳ ಸಮೂಹ; ತೊತ್ತಳದುಳಿ(ತೊತ್ತಳ+ತುಳಿ)– ನುಗ್ಗುನುಗ್ಗು ಮಾಡು, ಅಸ್ತವ್ಯಸ್ತವಾಗಿ ತುಳಿ; ಮತ್ತ – ಮದವೇರಿದ; ದಂತಿ–ಆನೆ; ಚಿರ್ಬುಗಳು–ಚಿರತೆಗಳು; ಉತ್ತುಂಗ–ಎತ್ತರ; ಸಾನು–ಶಿಖರ; ಶ್ರೇಣಿ–ಸಾಲು; ಜಿಗಿ–ಹಾರು, ನೆಗೆ; ಉತ್ತರೋತ್ತರ (ಉತ್ತರ+ಉತ್ತರ)–ಹೆಚ್ಚು ಹೆಚ್ಚು, ಆನಂತರ; ಊರ್ಜಿತ–ಏಳ್ಗೆ, ಅಭಿವೃದ್ಧಿ; ಸಂಕೋಲೆ(ದ್ಭ)–ಶೃಂಖಲಾ(ಸಂ), ಬೇಡಿ; ಮೂಲೋತ್ಪಾಟನ–(ಮೂಲ+ಉತ್ಪಾಟನೆ)–ಬೇರು

10th_Kannada_Reader1-5.indd 167 03-04-2019 14:08:03

ಸಹಿತ ಕಿತ್ತು ಹಾಕುವುದು; ಸುಭಟ–ಒಳ್ಳೆಯ ಶೂರ; ಇಟ್ಟಣಿಸು–ಗುಂಪುಗೂಡು; ವಿಲಸಿತ–ಹೊಳೆಯುವ, ಅರಳಿದ; ಉದ್ಯದ್ಗುಣ(ಉದ್ಯತ್+ಗುಣ)–ಶ್ರೇಷ್ಠಗುಣ; ಮೌಕ್ತಿಕ–ಮುತ್ತು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಳನು ಯಾರ ಬಳಿ ಜ್ಞಾನ ಸಂಪಾದನೆ ಮಾಡಿದನು ?
2. ಸುದತ್ತ ಮುನಿಯು ಸಳನಿಗೆ ಎಂತಹ ಉಪದೇಶ ಮಾಡಿದರು ?
3. ಚೋಳರ ಆವೇಗವನ್ನು ತಡೆದು ನಿಲ್ಲಿಸಿದವರು ಯಾರು ?
4. ಸಳನು ಹೊಸ ರಾಜ್ಯ ಸ್ಥಾಪಕನೆಂದು ಹೇಗೆ ಹೊಗಳಿಸಿಕೊಂಡನು ?
5. ಹೊಯ್ಸಳ ವಂಶ ಎಷ್ಟು ವರ್ಷ ರಾಜ್ಯವಾಳಿತು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸಳನು ಬೇಟೆಯಾಡಿದುದನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ ?
2. ವಾಸಂತಿಕಾ ದೇವಾಲಯದಲ್ಲಿ ನಡೆದ ಘಟನೆಯನ್ನು ವಿವರಿಸಿರಿ ?
3. ಸಳನು, 'ಹೊಯ್ಸಳ' ಸಾಮ್ರಾಜ್ಯವನ್ನು ಹೇಗೆ ಸ್ಥಾಪಿಸಿದನು ?
4. 'ಹೊಯ್ಸಳ' ಮನೆತನಕ್ಕೆ ಆ ಹೆಸರು ಹೇಗೆ ಪ್ರಾಪ್ತವಾಯಿತು ?

ಭಾಷಾಭ್ಯಾಸ

1.. ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಅ. ನೀ ಹೂ ತಕ್ಕೊಂಡು ವೋಗಿ ಮಾರ್ಕೊಂಡು ಬಂದ್ಬಿಡೇ.

ಆ. ಯಾರ್ಯಾರೊ ಗೋಗರ್ದಿದ್ದಕ್ಕೆ ಒಪ್ಪಂಡವ್ಳೆ.

ಇ. ತಾಯಿ, ಅಣ್ಣನ್ ಕೇಳ್ಕೊಂಡ್ ಕರ್ಕೊಂಡೋಗು ಅನ್ತಾಳೆ.

2. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
ಶೂರ, ರಭಸ, ಅನೇಕ, ಯೋಗ್ಯ, ನಾಡಿನ, ಸ್ವಾತಂತ್ರ್ಯ

3. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**
ಜ್ಞಾನ, ಸಮೂಹ, ಮೃಗ, ಅಡವಿ, ಸ್ತಂಭ, ಧ್ವಜ, ಯುದ್ಧ.

4. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
ವೀರೋಚಿತ, ಉತ್ತರೋತ್ತರ, ಊರ್ಜಿತಾವಸ್ಥೆ, ಚೋಳಾಧೀನ, ಕೋಪಾಟೋಪ, ಧರಣೀಶ್ವರ.

5. **ಕೆಳಗಿನ ಪದಗಳಿಗೆ ವಿಗ್ರಹ ವಾಕ್ಯ ಬರೆದು ಸಮಾಸದ ಹೆಸರನ್ನು ತಿಳಿಸಿ**
ಹೆಬ್ಬುಲಿ, ಮೈಮುರಿದು, ಸ್ವರಾಜ್ಯ, ಉದ್ಗಾರ.

ಚಟುವಟಿಕೆ

1. ನಿಮಗೆ ತಿಳಿದ ಸಾಮ್ರಾಜ್ಯಗಳ ಹೆಸರುಗಳನ್ನು ಪಟ್ಟಿ ಮಾಡಿ.
2. ತರಗತಿಯಲ್ಲಿ ಆಸ್ಥಾನ ದೃಶ್ಯದ ನಾಟಕವನ್ನು ಮಾಡಿ.

10th_Kannada_Reader1-5.indd 168 03-04-2019 14:08:03

ಉಪಪಠ್ಯ

ಘಟಕ ಎಂಟು

ರಾಗಿ ಮುದ್ದೆ

–ಚ.ಹ.ರಘುನಾಥ (ಸಂಗ್ರಹ)



ಕನ್ನಡ ನಾಡಿನ ಆಹಾರ ಧಾನ್ಯಗಳ ಪೈಕಿ ರಾಗಿ ಮತ್ತು ಜೋಳ ತುಂಬಾ ಮಹತ್ವವನ್ನು ಪಡೆದಿವೆ. ಬಡವರ ಆಧಾರ ಮೂಲವಾದ ರಾಗಿಗೆ ಕರ್ನಾಟಕದ ಪರಂಪರೆಯಲ್ಲಿ ಒಂದು ಸಾಂಸ್ಕೃತಿಕ ಮಹತ್ವ ಇದೆ. ಇಷ್ಟೇ ಮಹತ್ವ ಜೋಳಕ್ಕೂ ಇದೆ. ಮನುಷ್ಯನ ಆಹಾರ ಪದ್ಧತಿ ಹದಗೆಟ್ಟು, ಕಾಯಿಲೆಗಳು ಬರತೊಡಗಿದ ಮೇಲೆ ನಮಗೆ ರಾಗಿಯ ಮಹತ್ವ ಅರ್ಥವಾಗತೊಡಗಿದೆ. ಬಡವರ ಆಹಾರ ಎಂದು ತಿರಸ್ಕಾರಕ್ಕೆ ಒಳಗಾಗಿದ್ದ ರಾಗಿ ಇಂದು ಎಲ್ಲರ ಜೀವ ಕಾಪಾಡುವ ಸಂಜೀವಿನಿ ಎನಿಸಿದೆ. ಲೇಖಕರು ತಮ್ಮ ಬಾಲ್ಯದ ಬದುಕನ್ನು ನೆನಪಿಸಿಕೊಳ್ಳುವ ಮೂಲಕ ರಾಗಿಯ ವಿಶೇಷತೆಯನ್ನು ಇಲ್ಲಿ ಮನಗಾಣಿಸುತ್ತಾರೆ...



10th_Kannada_Reader1-5.indd 169 03-04-2019 14:08:03

ಗ್ರಾಮದ ಅಧಿದೇವತೆ ನಾಗಮ್ಮನ ದೇಗುಲಕ್ಕೆ ಮಗಳ ಚೋಲಕ್ಕೆಂದು ಬಂದಿದ್ದೆವು. ಅಣ್ಣನೊಂದಿಗೆ ಬಂದಿದ್ದವನು ದೇಗುಲದ ಅಂಗಳದ ಕಟ್ಟೆಯ ಮೇಲೆ ಹೋಗಿ ಕೂತೆ. ಆಗ ನನ್ನ ಮೂಗು, ಮನಸ್ಸುಗಳನ್ನು ತಕ್ಷಣ ಆವರಿಸಿಕೊಂಡಿದ್ದು ಹಿತವಾದ ಒಂದು ಪರಿಮಳ! ಅದೇ ದೇಗುಲಕ್ಕೆ ಹೊಂದಿಕೊಂಡಿದ್ದ ಒಂದು ಕಟ್ಟಡದ ನಿರ್ಮಾಣಕ್ಕಾಗಿ ಬಂದಿದ್ದ ಶ್ರಮಿಕರ ಗುಂಪೊಂದು ಕಟ್ಟೆಯ ಮೇಲಿನ ಮರದ ನೆರಳಿನಲ್ಲಿ ಬುತ್ತಿಗೆ ಮುಗಿ ಬಿದ್ದಿತ್ತು. ಆ ಬುತ್ತಿಯಿಂದ ಮುದ್ದೆ ಹಾಗೂ ಕಿವುಚಿದ ಹುಣಸೆ ಸಾರಿನ ಸೊಗಸಾದ ಘಮ! ಮುದ್ದೆಯನ್ನು ಮುರಿಯುತ್ತಾ ತುತ್ತುಗಳನ್ನು ಸಾರಿನಲ್ಲಿ ಹೊರಳಿಸುತ್ತಾ ಅವರು ನುಂಗುತ್ತಿದ್ದರೆ ಇತ್ತ ನನ್ನ ಹಾಗೂ ಅಣ್ಣನ ನಾಲಗೆಯ ಮೇಲೆ ನೀರೊಡೆದಿತ್ತು. ಹಸಿವಿನಿಂದಾಗಿ ಜೋಂಪು ಹತ್ತಿದ ಕಣ್ಣುಗಳಲ್ಲಿ ಮುದ್ದೆಯ ಸಾಲು ಸಾಲು ಚಿತ್ರಗಳು ಮೂಡಿಕೊಂಡವು.

ನಮಗೆಲ್ಲಾ 'ರಾಗಿ ಮುದ್ದೆ!' ಎಂದ ತಕ್ಷಣ ನೆನಪಾಗುವುದು ಬಡತನ ಹಾಗೂ ಕನ್ನಡತನ. ಕನ್ನಡ ಪ್ರದೇಶದ ಆಹಾರ ಪದ್ಧತಿಗೂ, ಸಂಸ್ಕೃತಿಗೂ ಥಳುಕು ಹಾಕುವುದಾದರೆ ರಾಗಿಯನ್ನು ಬಿಡುವಂತಿಲ್ಲ. ರಾಗಿ ಮುದ್ದೆಯನ್ನು ಹೊರತು ಪಡಿಸಿ ಕನ್ನಡ ಸಂಸ್ಕೃತಿಯ ಬಗ್ಗೆ ಮಾತನಾಡುವಂತಿಲ್ಲ.

ಹಳ್ಳಿಯ ಚಿತ್ರಗಳನ್ನು ನೆನಪಿಸಿಕೊಳ್ಳಿ. ಹೊಲದ ಬದಿಯ ಬೃಹತ್ ಮರ. ಆ ಮರದ ನೆರಳಿನಲ್ಲಿ ಹೊಲಡೊಡತಿ ತಲೆಯ ಮೇಲೆ ಹೊತ್ತು ತಂದ ಬುತ್ತಿ ಬಿಚ್ಚಿದ್ದಾಳೆ. ಮಧ್ಯಾಹ್ನದ ಊಟಕ್ಕೆ ಗುಂಪುಗೂಡಿದ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ರಾಗಿ ಮುದ್ದೆ. ಮುದ್ದೆಯನ್ನು ಒಳಭಾಗಕ್ಕೆ ಅದುಮುತ್ತಾ ಅದುಮುತ್ತಾ, ಇಡೀ ಮುದ್ದೆಯನ್ನೇ ಬಟ್ಟಲಿನಾಕಾರಕ್ಕೆ ಬದಲಿಸುತ್ತಾರೆ. ಆ ಮುದ್ದೆಯ ಗುಂಡಿಯಲ್ಲಿ ಸಾರನ್ನೋ, ಗೊಜ್ಜನ್ನೋ ತುಂಬಿಸಿಕೊಂಡು, ಎಡ ಅಂಗೈ ಗುಣಿಯಲ್ಲಿ ಪವಡಿಸಿಟ್ಟು, ಮುದ್ದೆಯ ಮೇಲ್ಭಾಗದಿಂದ ತುತ್ತು ತುತ್ತಾಗಿ ಮುರಿಯುತ್ತಾ, ನುಂಗುತ್ತಾ ಇರುತ್ತಾರೆ. ಮುದ್ದೆ ಕರಗುವ ವೇಳೆಗಾಗಲೇ ಅಂಗೈಯಲ್ಲಿ ಮತ್ತೊಂದು ಮುದ್ದೆ ಪ್ರತ್ಯಕ್ಷ! ಅದೇ ಹಳ್ಳಿಯ ಬದುಕು! ಇದು ದುಡಿಯುವ ಜನರ ಬದುಕು.

ಮುದ್ದೆಗೆ ಸಂಬಂಧಿಸಿದಂತೆ ನನ್ನ ಬಾಲ್ಯದ ನೆನಪಿನಲ್ಲಿ ಅಚ್ಚೊತ್ತಿರುವ ಕರಿಯನು ನೆನಪಾಗುತ್ತಾನೆ. ಅಪ್ಪ ಮೇಷ್ಟ್ರಾಗಿದ್ದ ದಿನಗಳವು. ಊರಿನ ಹೋಟೆಲೊಂದರಲ್ಲಿ ಕರಿಯ ಕಸಮುಸುರೆ ಬಳಿಯುತ್ತಿದ್ದ. ನೋಡಲಿಕ್ಕೆ ಅವನೂ ದೊಡ್ಡದೊಂದು ರಾಗಿಮುದ್ದೆಯಂತೆಯೇ ಕಾಣುತ್ತಿದ್ದ. ಮಕ್ಕಳಾದ ನಮ್ಮ ಪಾಲಿಗವನು ಆಶ್ಚರ್ಯದ ವಸ್ತು. ಅವನ ನಿಜವಾದ ಹೆಸರು ಯಾರಿಗೆ ಗೊತ್ತು? ನೋಡಲಿಕ್ಕೆ ಕಪ್ಪಗಿದ್ದುದರಿಂದ ಕರಿಯ ಎನ್ನುತ್ತಿದ್ದೆವು. ಈ ಬಲಭೀಮ ನಮ್ಮ ಮನೆಯ ಪಕ್ಕದ ಬೋರ್‌ವೆಲ್‌ಗೆ ನೀರಿಗಾಗಿ ಬರುತ್ತಿದ್ದ. ನೀರು ಪಾತಾಳದಲ್ಲಿ ನೆಲೆ ನಿಂತ ಊರದು. ಎಷ್ಟು ಜೋರಾಗಿ ಜಗ್ಗಿದರೂ ಚಿಮ್ಮುತ್ತಿದ್ದುದು ದಾರದಷ್ಟೇ ದಪ್ಪದ ನೀರು. ಆ ಬೋರ್‌ವೆಲ್ ಬಡಿದು ಬಡಿದೇ ಅಮ್ಮನ ಹೊಟ್ಟೆ ಅಸಗೆಟ್ಟಿತ್ತು. ನಾವೆಲ್ಲಾ ನೀರಿಗಾಗಿ ಪ್ಲಾಸ್ಟಿಕ್ ಬಿಂದಿಗೆಗಳನ್ನೋ, ತಾಮ್ರದ ಕೊಡಪಾನಗಳನ್ನೋ ತಂದರೆ ಕರಿಯ ದೊಡ್ಡದೊಂದು ಬಾನಿಯನ್ನೇ ತರುತ್ತಿದ್ದ. ಬೋರ್‌ವೆಲ್ಲನ್ನು ಅವನು ಜೋರಾಗಿ ಜಗ್ಗುತ್ತಿದ್ದರೆ ಅದರ ದಡಬಡ ಸದ್ದು ಫರ್ಲಾಂಗ್ ದೂರ ಅನುರಣಿಸುತ್ತಿತ್ತು. ಇವನ ಬಲಪ್ರಯೋಗಕ್ಕೆ ಬೋರ್‌ವೆಲ್ ಎಲ್ಲಿ ಮುರಿದು ಹೋಗುತ್ತದೋ; ಮುರಿದರೆ ಮೈಲು ದೂರದಿಂದ ನೀರು ಹೊತ್ತು ತರಬೇಕಾಗುತ್ತದೋ ಎನ್ನುವ ಭಯ ನಮ್ಮದು. ಮಣ್ಣಿನ ಹರವಿ ತುಂಬಿದಾಗ ಅದನ್ನು ಸಲೀಸಾಗಿ ಭುಜದ ಮೇಲಿರಿಸಿಕೊಂಡು ಸಾಗುವ ಕರಿಯನನ್ನು ನೋಡಿದರೆ, ಎರಡು ಬೃಹತ್ ಗುಡಾಣಗಳು ಒಟ್ಟಿಗೆ ರಸ್ತೆಯಲ್ಲಿ ಸಾಗುತ್ತಿರುವಂತೆ ಭಾಸವಾಗುತ್ತಿತ್ತು. ಈ ಕರಿಯನ ಶಕ್ತಿ ಮೂಲವಾದರೂ ಯಾವುದು? ಹೋಟೆಲ್‌ನಲ್ಲಿ ಉಳಿಯುವ ಸೀಕುಬಾಕುವಿನಲ್ಲೇ ಅವನ ಹೊಟ್ಟೆ ತುಂಬುತ್ತಿತ್ತಾ? ಗೊತ್ತಿಲ್ಲ.

ರಾಗಿ ಮುದ್ದೆ ಮಾಡಿದ ನಂತರ ಮಡಕೆಯ ತಳದಲ್ಲಿ ಮುದ್ದೆಯ ಅಂಟಿನ ಸಣ್ಣದೊಂದು ಎಳೆ ಉಳಿಯುತ್ತದಲ್ಲಾ; ಅದುವೇ ಸೀಕು. ಹಳ್ಳಿಯ ಭಾಷಾ ಪರಿಸರದಲ್ಲಿ ಇದಕ್ಕೆ 'ಸೀಕುಬಾಕು' ಎನ್ನುವ ಪದ ಚಾಲ್ತಿಯಲ್ಲುಂಟು. ಸೀಕಿನ ಜವಳಿ ಬಾಕೆಂದರೇನೋ ಗೊತ್ತಿಲ್ಲ. ಸೀಕು ಮಾತ್ರ ರುಚಿಕರ. ಒಣಗಿದ ಸೀಕು ಕುರುಂ ಕುರುಂ ಹಪ್ಪಳದಂತೆ ಸ್ವಾದಿಷ್ಟ! ಬಾಲ್ಯದಲ್ಲಿ ಅಮ್ಮ ಬಿಡಿಸಿ ಒಲೆಗುಂಡಿನ ಮೇಲಿಟ್ಟ ಸೀಕನ್ನು ಚಪ್ಪರಿಸಿದ ರುಚಿ ಇನ್ನೂ ನಾಲಗೆಯಲ್ಲಿದೆ. ಹಳ್ಳಿಗಳಲ್ಲಿ ಇಂದಿಗೂ ಸೀಕು ಕಂಡಾಗ ಬಡ ಮಕ್ಕಳ ಕಣ್ಣು ಅರಳುವುದಿದೆ. ಶಾಲೆಗೆ ಹೋಗುವ ಉಳ್ಳವರ ಮಕ್ಕಳ ಜೇಬುಗಳಲ್ಲಿ ವಿವಿಧ ತಿನಿಸುಗಳಿದ್ದರೆ, ಬಡ ಮಕ್ಕಳ ಜೇಬಲ್ಲಿ ಮುದ್ದೆಯ ಮಡಿಕೆಯಿಂದ ಅಮ್ಮ

10th_Kannada_Reader1-5.indd 170 03-04-2019 14:08:03

ಬಿಡಿಸಿಕೊಟ್ಟ ಸೀಕಿರುತ್ತಿತ್ತು. ಆ ಸೀಕು ಬಡ ಮಗುವಿನ ಪಾಲಿಗೆ ಚಾಕಲೇಟು!

ಬಡತನದಿಂದ ಕನ್ನಡತನದತ್ತ ಬರೋಣ. ಇಂಗ್ಲಿಷ್‌ನಲ್ಲಿ, 'ಫಿಂಗರ್ ಮಿಲ್ಲೆಟ್' ಎಂದು ಕರೆಸಿಕೊಳ್ಳುವ ರಾಗಿಯ ಮೂಲ ಹುಡುಕಿಕೊಂಡು ಹೊರಟರೆ ಎಡತಾಕುತ್ತವೆ ಆಫ್ರಿಕಾ, ಇಥಿಯೋಫಿಯಾ. ಮೂಲದ ವಿಷಯ ಮರೆತು, ರಾಗಿಗೂ ಕನ್ನಡ ಜನಕ್ಕೂ ಇರುವ ನಂಟಿನ ವಿಷಯ ಪ್ರಾಚೀನವಾದುದು.

ಮುದ್ದೆಯನ್ನು ಕದರಿ ಕುಡಿಯುವ ಸುಖ, ಉಪ್ಪು ಮೆಣಸಿನಕಾಯಿ ಗೊಜ್ಜಿನೊಂದಿಗೆ ಮುದ್ದೆಯನ್ನು ಮೆದ್ದಿ ಮೆಲ್ಲುವ ಆನಂದವನ್ನು ಅನುಭವಿಸಿದವರೇ ಬಲ್ಲರು. ಅದು ಪದಗಳಿಗೆ ನಿಲುಕದ ರಸಾನುಭವ.

'ಮುದ್ದೆ ಮಹಿಮೆ' ಮಹಾಭಾರತದಷ್ಟಿದ್ದರೂ ಆಧುನಿಕ ಸಂದರ್ಭದಲ್ಲಿ ಮುದ್ದೆಯೆಂದರೆ ಮೋರೆ ತಿರುಗಿಸುವವರೂ, 'ಅದು ಮಧುಮೇಹಿಗಳ ಪಥ್ಯ' ಎಂದು ಮೂಗು ಮುರಿವವರೂ ಸಾಕಷ್ಟಿದ್ದಾರೆ. 'ಮುದ್ದೆಯ ಬಣ್ಣ, ಮೈ ಬಣ್ಣವನ್ನು ಕಂದಿಸುತ್ತದೆ'ಂದು ಕಂಗಾಲಾಗುವ ಕೋಮಲಾಂಗಿಯರೂ ಇದ್ದಾರೆ. ರಾಗಿ ಎಂದರೆ ಮುದ್ದೆ ಅಥವಾ ರೊಟ್ಟಿ ಎಂದಷ್ಟೇ ಹೇಳುವ ದಿನಗಳು ಈಗಿಲ್ಲ. ರಾಗಿ ದೋಸೆ, ರಾಗಿ ಇಡ್ಲಿ, ರಾಗಿ ಶಾವಿಗೆ, ರಾಗಿ ಚಕ್ಕುಲಿ, ರಾಗಿ ಹಪ್ಪಳ, ರಾಗಿ ಬಿಸ್ಕತ್ತು – ಹೀಗೆ ರಾಗಿ ಮಹಿಮೆ ದೊಡ್ಡದಾಗಿ ಬೆಳೆಯುತ್ತಲೇ ಇದೆ.

ರಾಗಿಯ ಬಗ್ಗೆ ಮಾತನಾಡುವಾಗ ಕನ್ನಡ ನಾಡಿನ ರೈತರ ನಡುವೆ, 'ರಾಗಿ ಲಕ್ಷ್ಮಣಯ್ಯ' ಎಂದೇ ಹೆಸರಾದ ಡಾ. ಸಿ.ಹೆಚ್. ಲಕ್ಷ್ಮಣಯ್ಯನವರನ್ನು ನೆನಪಿಸಿಕೊಳ್ಳಬೇಕು. ಮೈಸೂರು ತಾಲೂಕಿನ ಹಾರೋಹಳ್ಳಿಯ ಈ ರಾಗಿಮೋಹಿಯ ಗಮನ ರಾಗಿಯತ್ತ ಹರಿಯುವ ವೇಳೆಗೆ ರಾಗಿ ಥಳಿಗಳ ಕುರಿತ ಸಂಶೋಧನೆ ಸ್ಥಗಿತಗೊಂಡು ದಶಕಗಳಾಗಿದ್ದವು. ಇಳುವರಿ ಹಾಗೂ ಆರ್ಥಿಕವಾಗಿ ಅಷ್ಟೇನೂ ಲಾಭದಾಯಕವಲ್ಲದ ಸ್ಥಳೀಯ ಥಳಿಗಳನ್ನು ರೈತರು ಮೆಚ್ಚಿಕೊಂಡಿದ್ದರು. ಇಂತಹ ಸಂದರ್ಭದಲ್ಲಿ ಲಕ್ಷ್ಮಣಯ್ಯ, 'ಸಂಪರ್ಕ ಪದ್ಧತಿ' ಎನ್ನುವ ತಮ್ಮ ನೂತನ ಪರಿಕಲ್ಪನೆಯ ಮೂಲಕ ಹೊಸ ಥಳಿಗಳ ಅನ್ವೇಷಣೆಯಲ್ಲಿ ತೊಡಗಿಸಿಕೊಂಡರು. ಈ ನಿಟ್ಟಿನಲ್ಲಿ ಮೈಸೂರು ಹಾಗೂ ತಮಿಳುನಾಡಿನ ಥಳಿಗಳನ್ನು ಬಳಸಿಕೊಂಡರು. ಪರಿಣಾಮವಾಗಿ ದೊರೆತದ್ದು ಅದ್ಭುತ ಯಶಸ್ಸು. ಅದೇ ಕರ್ನಾಟಕದ ರಾಗಿ ಕ್ರಾಂತಿ!'

ಮಳೆಯನ್ನು ಅನುಸರಿಸಿ ವರ್ಷಕ್ಕೆ ಎರಡು ಸಲ ರೈತರು ರಾಗಿ ಬೆಳೆಯುತ್ತಿದ್ದುದನ್ನು ಗಮನಿಸಿದ ಲಕ್ಷ್ಮಣಯ್ಯ, ವರ್ಷದ ಎಲ್ಲಾ ಅವಧಿಯಲ್ಲೂ ಬೆಳೆಯಬಹುದಾದ ಕಡಿಮೆ ಅವಧಿ, ಕಡಿಮೆ ನೀರಿನಲ್ಲಿ ಬೆಳೆಯುವ ಹೊಸ ಥಳಿಗಳನ್ನು ಅಭಿವೃದ್ಧಿ ಪಡಿಸಿದರು.

ಅನಾರೋಗ್ಯ ಪೀಡಿತರಾದ ಸಂದರ್ಭದಲ್ಲೂ ಲಕ್ಷ್ಮಣಯ್ಯನವರು, 'ರಾಗಿ ಧ್ಯಾನ'ವನ್ನು ಮರೆಯಲಿಲ್ಲ. ಕೊನೆಯ ದಿನಗಳಲ್ಲಿ ಅತಿ ಸೂಕ್ಷ್ಮವಾದ ಶಸ್ತ್ರಚಿಕಿತ್ಸೆಯೊಂದಕ್ಕೆ ಅವರು ಒಳಪಡಬೇಕಾಯಿತು. ಆಪರೇಷನ್ ಕೊಠಡಿಗೆ ತೆರಳುವ ಮುನ್ನ, 'ಚಿಕಿತ್ಸೆಯ ನಂತರ ಚೇತರಿಸಿಕೊಂಡು ರಾಗಿ ಸಂಶೋಧನೆಯಲ್ಲಿ ಮುಂದುವರೆಯುವುದು ನನ್ನಿಂದ ಸಾಧ್ಯವೇ? ಹಾಗಿದ್ದರೆ ಮಾತ್ರ ನನ್ನನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿ. ಇಲ್ಲದಿದ್ದರೆ ನನ್ನನ್ನು ನನ್ನ ಪಾಡಿಗೆ ಸಾಯಲು ಬಿಡಿ' ಎಂದು ವೈದ್ಯರನ್ನು ಅವರು ಕೇಳಿಕೊಂಡಿದ್ದರಂತೆ. ಅಂತಹ ಮಹಾನ್ ರಾಗಿ ಪ್ರೇಮಿ ಅವರಾಗಿದ್ದರು. ದುರದೃಷ್ಟವಶಾತ್ ಅವರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಲಿಲ್ಲ. 'ಅಂತ್ಯಸಂಸ್ಕಾರಕ್ಕೆ ಮೊದಲು ನನ್ನ ದೇಹದ ಮೇಲೆ ಒಂದು ಮುಷ್ಟಿ ರಾಗಿ ಸುರಿಯಿರಿ' ಎಂಬುದು ಲಕ್ಷ್ಮಣಯ್ಯನವರು ತಮ್ಮ ಪತ್ನಿಯ ಬಳಿ ಹೇಳಿಕೊಂಡಿದ್ದ ಕೊನೆಯ ಆಸೆಯಾಗಿತ್ತು.

ಹೀಗೆ ಲಕ್ಷ್ಮಣಯ್ಯನವರ 'ಮುದ್ದೆ ವಿಲಾಸ'ದಲ್ಲಿ ಮುಳುಗಿದವನನ್ನು ತಕ್ಷಣ ಎಚ್ಚರಗೊಳಿಸಿದ್ದು ಪೂಜೆ ಮುಗಿಸಿ ಬಂದ ಅಮ್ಮನ ಮಾತು! ಜೋಂಪು ಹತ್ತಿದ ಕಣ್ಣುಗಳನ್ನು ತೆರೆದು, ಹಾಗೇ ಅರಳಿಸಿ ಹೊರಗೆ ನೋಡಿದೆ. ಪ್ರಕೃತಿ ಮಾತೆ ಹಸಿರನ್ನೇ ಉರಿಯಾಗಿಸಿ ಭೂಮಿಯನ್ನೇ ಮಡಕೆಯನ್ನಾಗಿಸಿಕೊಂಡು ಮುದ್ದೆ ಚೆಂಡುಗಳ ಕಟ್ಟಿಕಟ್ಟಿ ಬಯಲಿನಲ್ಲಿ ಜೋಡಿಸಿಟ್ಟಂತೆ ದೂರದ ಬೆಟ್ಟಗಳ ಸಾಲಿನ ಗುಡ್ಡಗಳು ಕಾಣಿಸಿದವು. ನೆತ್ತಿಯ ಮೇಲಿನ ಮುಗಿಲು ಬಯಲಿನಲ್ಲಿನ ತುಂಡು, ಓಡು ಮೋಡಗಳು ಮುದ್ದೆಗಿಟ್ಟ ಕುದಿ ಎಸರಂತೆ ಕಾಣಿಸುತ್ತಿದ್ದವು.

10th_Kannada_Reader1-5.indd 171 03-04-2019 14:08:03

ಕೃತಿ ಕರ್ತೃ ಪರಿಚಯ

'ಪ್ರಜಾವಾಣಿ' ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಸೇವೆ ಸಲ್ಲಿಸುತ್ತಿರುವ ಚ.ಹ.ರಘುನಾಥರು ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಹರಳಾಪುರದವರು. 'ಹೊಳೆಯಲ್ಲಿ ಹರಿದ ನೀರು' ಎನ್ನುವ ಕವನ ಸಂಕಲನವನ್ನೂ; 'ಹೊರಗೂ ಮಳೆ ಒಳಗೂ ಮಳೆ' ಎನ್ನುವ ಕಥಾ ಸಂಕಲನವನ್ನೂ ಪ್ರಕಟಿಸಿದ್ದಾರೆ. 'ಕಥಾ ರಂಗಂ ಪ್ರಶಸ್ತಿ', 'ವಸುದೇವ ಭೂಪಾಲಂ ದತ್ತಿ ನಿಧಿ ಬಹುಮಾನ', 'ಕೆ.ಸಾಂಬಶಿವಪ್ಪ ಸ್ಮಾರಕ ಪ್ರಶಸ್ತಿ' ಹಾಗೂ 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಪ್ರಶಸ್ತಿಗಳನ್ನು ಇವರು ಪಡೆದುಕೊಂಡಿದ್ದಾರೆ.

ಹಳ್ಳಿಯ ಬದುಕಿನಲ್ಲಿ ರಾಗಿ ಮುದ್ದೆಗಿರುವ ಮಹತ್ವವನ್ನು ಲೇಖಕರು ಇಲ್ಲಿ ತಿಳಿಸಿದ್ದಾರೆ. ಜಾನಪದ ಜಗತ್ತಿನ ಗಾದೆ ಮತ್ತು ಹಾಡುಗಳ ಮೂಲಕ ರಾಗಿಯ ಮಹತ್ವವನ್ನು ಕೊಂಡಾಡಿರುವುದನ್ನೂ, ಆಧುನಿಕ ಕೃಷಿ ಪದ್ಧತಿಯನ್ನೂ ಈ ಪ್ರಬಂಧ ಹಾಸ್ಯ ಶೈಲಿಯಲ್ಲಿ ನಿರೂಪಿಸಿದೆ.

ಪದಗಳ ಅರ್ಥ

ಚೌಲ–ದೇವರ ಹೆಸರಿನಲ್ಲಿ ಮಕ್ಕಳ ಕೂದಲು ತೆಗೆಸುವ ಪದ್ಧತಿ; ಅಸಗೆಟ್ಟಿತ್ತು–ಗಡ್ಡಿಕಟ್ಟುವುದು; ಸೀಕು–ಮುದ್ದೆಯ ತಳಭಾಗದಲ್ಲಿ ಅಂಟಿಕೊಂಡಿರುವ ತೆಳ್ಳನೆಯ ಎಳೆ; ಎಸರು–ಮುದ್ದೆ ಮಾಡಲು ಇಟ್ಟಿರುವ ಕುದಿಯುವ ನೀರು, ಸಾರು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಗ್ರಾಮದ ಅಧಿದೇವತೆ ಯಾರು ?
2. ಲೇಖಕರ ಕಣ್ಣುಗಳಲ್ಲಿ ಯಾವುದರ ಸಾಲು ಚಿತ್ರಗಳು ಮೂಡಿಕೊಂಡವು ?
3. ಹೋಟೆಲಿನಲ್ಲಿ ಕರಿಯ ಯಾವ ಕೆಲಸ ಮಾಡುತ್ತಿದ್ದ ?
4. ಊರಿನ ನೀರು ಎಲ್ಲಿ ನೆಲೆ ನಿಂತಿತ್ತು ?
5. ನೀರಿಗಾಗಿ ಕರಿಯ ಏನನ್ನು ತರುತ್ತಿದ್ದ ?
6. ಬಡ ಮಕ್ಕಳ ಪಾಲಿಗೆ ಚಾಕಲೇಟ್ ಯಾವುದು ?
7. ಡಾ. ಸಿ.ಹೆಚ್. ಲಕ್ಷ್ಮಣಯ್ಯನವರು ಶಸ್ತ್ರಚಿಕಿತ್ಸೆಗೆ ಹೋಗುವ ಮುನ್ನ ವೈದ್ಯರ ಬಳಿ ಏನು ಹೇಳಿದರು ?
8. ಡಾ. ಸಿ.ಹೆಚ್. ಲಕ್ಷ್ಮಣಯ್ಯನವರು ತಮ್ಮ ಪತ್ನಿಯ ಬಳಿ ಹೇಳಿಕೊಂಡಿದ್ದ ಅವರ ಕೊನೆಯ ಆಸೆಯೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹಳ್ಳಿಯ ಜನ ಕೈಯಲ್ಲೇ ಮುದ್ದೆ ತಿನ್ನುವ ಚಿತ್ರಣವನ್ನು ವಿವರಿಸಿ.
2. ಕರಿಯನ ಜೀವನ ಹೇಗಿತ್ತು ? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?
3. ಸೀಕುಬಾಕು ಎಂದರೇನು? ಅದನ್ನು ಕುರಿತು ಲೇಖಕರು ಹೇಳುವ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.
4. ಡಾ. ಸಿ.ಎಚ್. ಲಕ್ಷ್ಮಣಯ್ಯನವರ ರಾಗಿ ಸಂಶೋಧನೆ ಮತ್ತು ರಾಗಿಯ ಪ್ರೀತಿಯನ್ನು ವಿವರಿಸಿರಿ.

ಚಟುವಟಿಕೆ

1. ಕನಕದಾಸರ ರಾಮಧಾನ್ಯ ಚರಿತೆಯನ್ನು ಸಂಗ್ರಹಿಸಿ ಓದಿರಿ.
2. 'ಯಾರು ದೊರೆಯಾದರೂ ರಾಗಿಕಲ್ಲು ಬೀಸೋದು ತಪ್ಪೋದಿಲ್ಲ' – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

10th_Kannada_Reader1-5.indd 172 03-04-2019 14:08:03

ವ್ಯಾಕರಣ

ಘಟಕ ಎಂಟು

ಅಲಂಕಾರ

ಕಾವ್ಯಗಳಲ್ಲಿ ರಸ, ಧ್ವನಿ ಮತ್ತು ಅಲಂಕಾರಗಳು ಕಾವ್ಯಾನಂದವನ್ನು ಉಂಟು ಮಾಡುತ್ತವೆ. ಕಾವ್ಯಗಳಲ್ಲಿ ಶಬ್ದ, ಅರ್ಥ ಇವುಗಳ ವೈಚಿತ್ರ್ಯದಿಂದ ಉಂಟಾಗುವ ಸೌಂದರ್ಯಕ್ಕೆ ಅಲಂಕಾರ ಎಂದು ಹೆಸರು. ಮೊದಲು ಕಾವ್ಯಗಳು ಹುಟ್ಟಿ ಅನಂತರ ಕಾವ್ಯಗಳ ಲಕ್ಷಣಗಳನ್ನು ತಿಳಿಸುವ ಅಲಂಕಾರ ಶಾಸ್ತ್ರ ಹುಟ್ಟಿರಬೇಕು. ನಮ್ಮ ದೇಶದ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿರುವ ಪ್ರಾಚೀನ ಕಾವ್ಯಗಳಲ್ಲಿ ರಸಕ್ಕೆ ಹೆಚ್ಚಿನ ಮಹತ್ವವಿದ್ದು, ಅಲಂಕಾರಗಳ ಬಳಕೆ ಅಷ್ಟಿರಲಿಲ್ಲ. ಆದರೆ ಹತ್ತನೇ ಶತಮಾನದ ಬಳಿಕ ಕಾವ್ಯಗಳಲ್ಲಿ ಅಲಂಕಾರಗಳ ಪ್ರಾಶಸ್ತ್ಯ ಹೆಚ್ಚಾಯಿತು. ಅವುಗಳ ಸಂಖ್ಯೆ ಹೆಚ್ಚುತ್ತಾ ಹೋಗಿ, ಅವು ನೂರಕ್ಕೂ ಮಿಕ್ಕಿವೆ. ಸಂಸ್ಕೃತದ ಅಲಂಕಾರಿಕರಲ್ಲಿ ಭರತ, ದಂಡಿ, ರುದ್ರಟ, ಭಾಮಹ, ವಾಮನ, ರಾಜಶೇಖರ ಮೊದಲಾದವರು ಪ್ರಮುಖರು.

ಕನ್ನಡದಲ್ಲಿ ಬಂದಿರುವ ಅಲಂಕಾರ ಶಾಸ್ತ್ರಗ್ರಂಥಗಳಿಗೆ ಸಂಸ್ಕೃತದ ಅಲಂಕಾರ ಶಾಸ್ತ್ರ ಗ್ರಂಥಗಳೇ ಆಧಾರವೆನ್ನಬಹುದು. ಅವುಗಳಲ್ಲಿ ಶ್ರೀವಿಜಯನ (ಕ್ರಿ.ಶ.814–877) 'ಕವಿರಾಜಮಾರ್ಗ'ವೇ ಪ್ರಾಚೀನವಾದದ್ದು. ನಾಗವರ್ಮನ (ಕ್ರಿ.ಶ.1145) 'ಕಾವ್ಯಾವಲೋಕನ', ಮಾಧವನ (ಕ್ರಿ.ಶ.1500) 'ಮಾಧವಾಲಂಕಾರ', ತಿರುಮಲಾರ್ಯನ (ಕ್ರಿ.ಶ.1700) 'ಅಪ್ರತಿಮ ವೀರಚರಿತೆ' ಮುಂತಾದ ಹಲವು ಅಲಂಕಾರ ಗ್ರಂಥಗಳು ಕನ್ನಡದಲ್ಲಿ ಬಂದಿವೆ. ಅಲಂಕಾರಗಳಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬುದಾಗಿ ಎರಡು ವಿಧಗಳಿವೆ. ಶಬ್ದ ಚಮತ್ಕಾರದಿಂದ ಉಂಟಾಗುವ ಸೌಂದರ್ಯಕ್ಕೆ ಶಬ್ದಾಲಂಕಾರವೆಂದೂ, ಅರ್ಥ ಚಮತ್ಕಾರದಿಂದ ಉಂಟಾಗುವ ಸೊಬಗಿಗೆ ಅರ್ಥಾಲಂಕಾರವೆಂದೂ ಹೆಸರು. ನಾಗವರ್ಮನು ತನ್ನ 'ಕಾವ್ಯಾವಲೋಕನ'ದಲ್ಲಿ ಕಾವ್ಯವೆಂಬ ಹೆಣ್ಣಿಗೆ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳು ಎರಡು ವಿಧದ ತೊಡಿಗೆಗಳಿರುವಂತೆ ಎಂದಿದ್ದಾನೆ. ಅರ್ಥಾಲಂಕಾರಗಳು ನೈಸರ್ಗಿಕವಾದ ಸೌಂದರ್ಯವನ್ನು ಹೆಚ್ಚಿಸುವ ಬಂಗಾರದ ಆಭರಣಗಳಾದರೆ; ಶಬ್ದಾಲಂಕಾರ ಸದ್ದಿಗಾಗಿ ಕಟ್ಟಿಕೊಂಡಿರುವ ಗೆಜ್ಜೆಗಳಂತೆ ಎನ್ನಬಹುದು.

ಮನುಷ್ಯರು, ತಾವು ಸುಂದರವಾಗಿ ಕಾಣಿಸಿಕೊಳ್ಳುವುದಕ್ಕಾಗಿ ವಿವಿಧ ಬಗೆಯ ಬಟ್ಟೆ ಬರೆ ಮತ್ತು ಆಭರಣಗಳಿಂದ ಅಲಂಕಾರ ಮಾಡಿಕೊಳ್ಳುತ್ತಾರೆ. ಹಾಗೆಯೇ ಮಾತನಾಡುವಾಗ ತಾವು ಆಡುವ ಮಾತು ಕೇಳುವವರಿಗೆ ಹಿತವಾಗುವಂತೆ, ಆಕರ್ಷಕವಾಗಿ ಕಾಣುವಂತೆ, ಮನಮುಟ್ಟುವಂತಿರುವುದಕ್ಕಾಗಿ ಚಮತ್ಕಾರದಿಂದ ಹೇಳುವುದುಂಟು. **ಉದಾಹರಣೆಗೆ** : 'ಸೂರ್ಯನು ಉದಯಿಸಿದನು' ಎಂಬ ವಾಕ್ಯದ ಬದಲಿಗೆ 'ಉದಯಿಸಿದ ಸೂರ್ಯನು, ಧರೆ ಸುಮಂಗಲಿಯ ಹಣೆಯ ಕುಂಕುಮದ ಬೊಟ್ಟಿನಂತೆ' – ಎಂದು ಹೇಳುವಲ್ಲಿ ಒಂದು ರೀತಿಯ ಚಮತ್ಕಾರ ಕಾಣುತ್ತದೆ. ಹೀಗೆ ಚಮತ್ಕಾರದ ಮಾತುಗಳಿಂದ ವರ್ಣಿಸುವುದನ್ನು ಅಲಂಕಾರ ಎನ್ನಲಾಗುವುದು. ಹೀಗೆ ಕವಿಗಳು ಬರೆದ ಕಾವ್ಯಮಯ ಭಾಷೆಯಲ್ಲಿ ಬರುವ ಶಬ್ದ, ಅರ್ಥ ವೈಚಿತ್ರ್ಯದಿಂದ ಉಂಟಾಗುವ ಕಾವ್ಯ ಸೌಂದರ್ಯಕ್ಕೆ ಅಲಂಕಾರ ಎಂದು ಹೆಸರು. ಅಲಂಕಾರ, ಕಾವ್ಯ ಸೌಂದರ್ಯವನ್ನು ಹೆಚ್ಚಿಸುವಂತಹುದು.

ಅಲಂಕಾರಗಳನ್ನು ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂದು ಎರಡು ವಿಭಾಗ ಮಾಡಲಾಗಿದೆ.

10th_Kannada_Reader1-5.indd 173 03-04-2019 14:08:03

ಶಬ್ದಾಲಂಕಾರಗಳು

ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದರೆ ಅದನ್ನು ಶಬ್ದಾಲಂಕಾರ ಎಂದು ಕರೆಯುತ್ತಾರೆ. ಶಬ್ದಾಲಂಕಾರದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಅವು : 1. ಅನುಪ್ರಾಸ 2. ಯಮಕ 3. ಚಿತ್ರಕವಿತ್ವ.

1. ಅನುಪ್ರಾಸ

ಅನುಪ್ರಾಸದಲ್ಲಿ ವೃತ್ತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ಎರಡು ವಿಧಗಳಿವೆ.

ಅ) ವೃತ್ತ್ಯನುಪ್ರಾಸ : ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತಿತವಾಗಿದ್ದರೆ ಅದನ್ನು ವೃತ್ಯನುಪ್ರಾಸ ಎನ್ನುವರು.

ಉದಾಹರಣೆ 1 :

ಎಳೆಗಿಳಿಗಳ ಬಳಗಂ ಗಳ

ಗಳನಿಳಿತಂದೆಳಸಿ ಬಳಸಿ ಸುಳಿದೊಳವುಗುತಂ

ನಳನಳಿಸಿ ಬೆಳೆದು ಕಳಿಯದ

ಕಳವೆಯ ಕಳಶಂಗಳಂ ಕರಂ ಖಂಡಿಸುಗುಂ

ಈ ಪದ್ಯದಲ್ಲಿ ಗ, ಳ, ಕ ಅಕ್ಷರಗಳು ಮತ್ತೆ ಮತ್ತೆ ಪುನರಾವರ್ತಿತವಾಗಿರುವುದನ್ನು ಕಾಣಬಹುದು.

ಉದಾಹರಣೆ 2 :

'ಬಲ್ಲವನೇ ಬಲ್ಲ ಬೆಲ್ಲದ ಸವಿಯ'

ಇಲ್ಲಿ ಲ ಮತ್ತು ಬ ಅಕ್ಷರಗಳು ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಆ) ಛೇಕಾನುಪ್ರಾಸ : ಎರಡೆರಡು ವ್ಯಂಜನಾಕ್ಷರಗಳು ಜೋಡಿಯಾಗಿ ಪದ್ಯದ ಸಾಲುಗಳಲ್ಲಿ ಹಲವೆಡೆ ಪುನರಾವರ್ತಿತವಾಗಿದ್ದರೆ ಅದನ್ನು ಛೇಕಾನುಪ್ರಾಸ ಎನ್ನುವರು.

ಉದಾಹರಣೆ 1 :

ಕೆಲದೊಳ್ ಪುಳಿಂದಿಯಿರೆ ಪೆ

ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ

ಚಲದಿಂ ಕಾಡಂ ಕಾಡಂ

ಸಲೆ ಪಸಿವಂ ಮರೆದು ತಣಿದು ಬೇಡಂ ಬೇಡಂ

ಈ ಪದ್ಯದಲ್ಲಿ ನೋಡಂ ನೋಡಂ, ಕಾಡಂ ಕಾಡಂ, ಬೇಡಂ ಬೇಡಂ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಉದಾಹರಣೆ 2 :

ತರತರದ ಕಲ್ಲೋಲ ಮಾಲೆಗಳ ಲೀಲೆಗಳ

ಬೆರೆಬೆರೆವ ರಾಜ ಹಂಸಾಳಿಗಳ ಕೇಳಿಗಳ

ಪರಿಪರಿವನೇರ್ವನಿಗಳಾ ಕರದ ಶೀಕರದ ನೋರೆಯ ಬೊಬ್ಬುಳಿಯ ಸುಳಿಯ

ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿವುಗಳ

ತಿರುತಿರುಗಿ ಸುಳಿವ ಜಲಜಂತುಗಳಗೊಂತುಗಳ

ನೆರೆನೆರೆದು ಮುನಿಜಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು

ಈ ಪದ್ಯದಲ್ಲಿ ತರತರ, ಬೆರೆಬೆರೆ, ಪರಿಪರಿ, ಮೊರೆಮೊರೆ, ತಿರುತಿರುಗಿ, ನೆರೆನೆರೆದು ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ.

10th_Kannada_Reader1-5.indd 174 03-04-2019 14:08:03

ಉದಾಹರಣೆ 3 :

ಉಗುಳಿ ಉಗುಳಿ ರೋಗ

ಹಾಡಿ ಹಾಡಿ ರಾಗ

ಮಾಡಿ ಮಾಡಿ ಕೆಟ್ಟರು

ನೀಡಿ ನೀಡಿ ಕೆಟ್ಟರು

ಇಲ್ಲಿ ಉಗುಳಿ ಉಗುಳಿ, ಹಾಡಿ ಹಾಡಿ, ನೀಡಿ ನೀಡಿ, ಮಾಡಿ ಮಾಡಿ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿವೆ.

2. ಯಮಕ

ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದಗಳು ಒಂದು ಪದ್ಯದ ಆದಿ, ಮಧ್ಯ ಅಥವಾ ಅಂತ್ಯ ಸ್ಥಾನಗಳಲ್ಲಿ ನಿಯತವಾಗಿ ಮತ್ತೆ ಮತ್ತೆ ಬರುವುದನ್ನು ಯಮಕಾಲಂಕಾರ ಎನ್ನುವರು. ಯಮಕ ಎಂದರೆ ಪುನರಾವರ್ತನೆಯಾಗುವುದು ಎಂದು ಅರ್ಥ.

ಉದಾಹರಣೆ 1 :

ಅಲ್ಲಿಗಲ್ಲಿಗೆ ಬೆಳೆದ ಬೆಳಿಗಳಿಂ ಮೆಳೆಗಳಿಂ

ದಲ್ಲಿಗಲ್ಲಿಗೆ ವನಸ್ಥಲಗಳಿಂ ಕೊಳಗಳಿಂ

ದಲ್ಲಿಗಲ್ಲಿಗೆ ರನ್ನದೆರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ

ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ

ದಲ್ಲಿಗಲ್ಲಿಗೆ ನರೆದ ಶುಕಗಳಿಂ ಪಿಕಗಳಿಂ

ದಲ್ಲಿಗಲ್ಲಿಗೆ ಗವಾಸ್ವದಗಳಿಂ ನದಿಗಳಿಂದಾದೇಶಮೊಪ್ಪಿರ್ದುದು

ಈ ಪದ್ಯದಲ್ಲಿ ಪ್ರತಿಸಾಲಿನ ಆದಿಯಲ್ಲಿ 'ಅಲ್ಲಗಲ್ಲಿಗೆ' ಎಂಬ ಪದ ನಿಯತವಾಗಿ ಮತ್ತೆ ಮತ್ತೆ ಬಂದಿದೆ. ಹೀಗೆ ಒಂದು ಪದವೇ ಮತ್ತೆ ಮತ್ತೆ ಪುನರಾವರ್ತಿತವಾದರೆ ಅದನ್ನು ಯಮಕಾಲಂಕಾರ ಎಂದು ಕರೆಯಲಾಗುವುದು.

ಉದಾಹರಣೆ 2 :

ಎಳೆವಾಸೆ ತೊಡರ್ದುದೆನೆ ಮಿಸು

ಪೆಳೆವಾಸೆಯ ದೆಸೆಯೆ ನಿಂದಳಂ ಕೈವಿಡಿದೊ

ಲ್ದೆಳೆವಾಸೆಯಾಂತನಂಬುಜ

ದೆಳೆವಾಸೆಡೆಗೊಂಡ ಪುಳಿನದೆಡೆಗವನೀಶಂ

ಈ ಪದ್ಯದಲ್ಲಿ ಎಳವಾಸೆ ಎನ್ನುವ ಪದವು ನಿಯತವಾಗಿ ಮತ್ತೆ ಮತ್ತೆ ಬಂದಿರುವುದನ್ನು ಕಾಣಬಹುದು.

3. ಚಿತ್ರಕವಿತ್ವ

ಅಕ್ಷರ ಅಥವಾ ಪದಗಳ ಚಮತ್ಕಾರ ಹುಟ್ಟಿಸಿ ರಚಿಸಿದ ಪದ್ಯಗಳೇ ಚಿತ್ರಕವಿತ್ವ

ಉದಾಹರಣೆ 1 :

ನನ್ದನ ನನ್ದನ ನಿನ್ನೊ

ನ್ದನ್ದದ ಮೈ ಮುನ್ದೆ ನಿನ್ದುದೆನ್ದೆನೆ ಮುದದಿ

ನ್ದನ್ದಿನ್ದುನ್ದೆನ್ನದೆ ನೀ

ನೆನ್ದುಂ ಮನ್ಮನದೆ ನಿಮ್ಮಿನಿನ್ದೀ ಮುದಮಂ

10th_Kannada_Reader1-5.indd 175 03-04-2019 14:08:03

ಅರ್ಥಾಲಂಕಾರಗಳು

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಸೌಂದರ್ಯ ಹೆಚ್ಚಿದರೆ ಅದನ್ನು ಅರ್ಥಾಲಂಕಾರ ಎನ್ನುವರು. ಅರ್ಥಾಲಂಕಾರದಲ್ಲಿ ನೂರಕ್ಕೂ ಹೆಚ್ಚು ವಿಧಗಳಿವೆ. ಅವುಗಳಲ್ಲಿ ಪ್ರಮುಖವಾದ ಕೆಲವು ಅರ್ಥಾಲಂಕಾರಗಳನ್ನು ಇಲ್ಲಿ ಪರಿಚಯ ಮಾಡಿಕೊಳ್ಳೋಣ.

1. ಉಪಮಾಲಂಕಾರ

ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ಹೇಳುವುದಕ್ಕೆ ಉಪಮಾಲಂಕಾರ ಎಂದು ಹೆಸರು. ಹೋಲಿಸಲ್ಪಡುವ ಮತ್ತು ಹೋಲಿಸುವ ವಸ್ತುಗಳು ಸಮಾನ ಧರ್ಮವನ್ನು ಹೊಂದಿರಬೇಕು.

ಎರಡು ವಸ್ತುಗಳನ್ನು ಪರಸ್ಪರ ಹೋಲಿಸಿ ಉಪಮಾಲಂಕಾರವನ್ನು ಮಾಡುವಾಗ ಅದರಲ್ಲಿ ಈ ಸಂಗತಿಗಳಿರಬೇಕು.

ಅ. ಉಪಮೇಯ : ಯಾವ ವಸ್ತುವನ್ನು ಹೋಲಿಸುತ್ತೇವೆಯೋ ಅದು.

ಆ. ಉಪಮಾನ : ಯಾವುದಕ್ಕೆ ಹೋಲಿಸುತ್ತೇವೆಯೋ ಅದು.

ಇ. ಉಪಮಾವಾಚಕ : 'ಅಂತೆ', 'ವೋಲ್' ಮುಂತಾದ ಶಬ್ದಗಳು ಉಪಮಾನ ಮತ್ತು ಉಪಮೇಯಕ್ಕೆ ಹೋಲಿಕೆ ತರುವುದರಿಂದ ಅವು ಉಪಮಾವಾಚಕಗಳು.

ಈ. ಸಮಾನ ಧರ್ಮ : ಉಪಮಾನ – ಉಪಮೇಯಗಳಲ್ಲಿರುವ ಸಮಾನ ಗುಣಗಳು.

ಉದಾಹರಣೆ : 'ಶಕುಂತಲಳ ಮುಖ ಕಮಲದಂತೆ ಅರಳಿತು' ಎನ್ನುವಾಗ ಇಲ್ಲಿ,

ಉಪಮೇಯ : ಶಕುಂತಲಳ ಮುಖ

ಉಪಮಾನ : ಕಮಲ

ಉಪಮಾವಾಚಕ : ಅಂತೆ

ಸಮಾನ ಧರ್ಮ : ಅರಳುವುದು.

ಇಲ್ಲಿ ಉಪಯಮೇಯವಾದ ಶಕುಂತಲಳ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಲಾಗಿದೆ.

2. ರೂಪಕಾಲಂಕಾರ

ಎರಡೂ ಒಂದೆ ಎಂದು ಅಭೇದ(ಭೇದವಿಲ್ಲದೆ) ಕಲ್ಪಿಸಿ ಹೇಳಿದರೆ ಅದನ್ನು ರೂಪಕಾಲಂಕಾರ ಎನ್ನುವರು.

ಉದಾಹರಣೆ : ದ್ರೌಪದಿಯ ಮುಖ ಕಮಲ ಅರಳಿತು.

ಇಲ್ಲಿ ಮುಖ ಎಂಬುದು ಉಪಮೇಯ, ಕಮಲ ಎಂಬುದು ಉಪಮಾನ. ಮುಖವೇ ಕಮಲವಾಗಿರುವುದರಿಂದ ಅದು ಮುಖ ಕಮಲ. ಆದ್ದರಿಂದ ಇದು ರೂಪಕಾಲಂಕಾರ.

3. ಉತ್ಪ್ರೇಕ್ಷಾಲಂಕಾರ

ಒಂದು ಪದಾರ್ಥವನ್ನಾಗಲೀ ಸನ್ನಿವೇಶವನ್ನಾಗಲೀ ಮತ್ತೊಂದನ್ನಾಗಿ ಸಂಭಾವಿಸಿ(ಕಲ್ಪಿಸಿ) ವರ್ಣಿಸಿದರೆ ಅದನ್ನು ಉತ್ಪ್ರೇಕ್ಷಾಲಂಕಾರ ಎನ್ನುವರು. ಅಂದರೆ ಉಪಮೇಯವನ್ನು ಉಪಮಾನವನ್ನಾಗಿ ಕಲ್ಪಿಸಿ ವರ್ಣಿಸುವುದು.

ಉದಾಹರಣೆ :

ತ್ರೈಲೋಕ್ಯ ಸುಂದರಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಅಚ್ಛೋದ ಸರೋವರವು ಕಂಗೊಳಿಸುತ್ತಿತ್ತು.

ಉಪಮೇಯ : ಅಚ್ಛೋದ ಸರೋವರ

ಉಪಮಾನ : ರನ್ನಗನ್ನಡಿ

ಇಲ್ಲಿ ಉಪಮೇಯವಾದ ಅಚ್ಛೋದ ಸರೋವರವು ಉಪಮಾನವಾದ ರನ್ನದ ಕನ್ನಡಿ ಎಂದು ಸಂಭಾವಿಸ(ಕಲ್ಪಿಸಿ)ಲಾಗಿದೆ. ಆದುದರಿಂದ ಇದು ಉತ್ಪ್ರೇಕ್ಷಾಲಂಕಾರ.

10th_Kannada_Reader1-5.indd 176 03-04-2019 14:08:03

4. ದೃಷ್ಟತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು ದೃಷ್ಟತಾಲಂಕಾರ ಎನ್ನುವರು.

ಉದಾಹರಣೆ : 'ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ಕಾವ್ಯವನ್ನು ರಚಿಸದಿರುವನೆ ? ಕತ್ತಲೆಯ ಭಯದಿಂದ ಸೂರ್ಯನು ತನ್ನ ಕಿರಣಗಳನ್ನು ಪ್ರಸರಿಸದಿರುವನೆ ?'

ಇಲ್ಲಿ ಉಪಮಾನವಾದ ಸೂರ್ಯನು ಕತ್ತಲೆಗೆ ಹೆದರದೆ ತನ್ನ ಕಿರಣಗಳನ್ನು ಪಸರಿಸಿಯೇ ತೀರುತ್ತಾನೆಂದೂ, ಉಪಮೇಯವಾದ ಸತ್ಕವಿಯಾದವನು ದುರ್ಜನರು ತನ್ನನ್ನು ನಿಂದಿಸುವರೆಂದು ಹೆದರದೆ ಕಾವ್ಯವನ್ನು ರಚಿಸಿಯೇ ತೀರುತ್ತಾನೆಂದೂ ಹೇಳಲಾಗಿದೆ. ಉಪಮೇಯ ಉಪಮಾನಗಳಲ್ಲಿ ಬಿಂಬ ಪ್ರತಿಬಿಂಬ ಭಾವ ಇರುವುದನ್ನು ಕಾಣಬಹುದು.

5. ಅರ್ಥಾಂತರ ನ್ಯಾಸಾಲಂಕಾರ

ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದಾಗಲೀ ಅಥವಾ ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದಾಗಲೀ ಸಮರ್ಥನೆ ಮಾಡುವುದೇ ಅರ್ಥಾಂತರ ನ್ಯಾಸಾಲಂಕಾರ.

ಉದಾಹರಣೆ 1 :

ಆತ ಉಂಡ ಮನೆಗೆ ಕೇಡು ಬಗೆದ. ಕೃತಜ್ಞರು ಏನನ್ನು ತಾನೇ ಮಾಡರು ?

ಉಪಮೇಯ : (ವಿಶೇಷ ವಾಕ್ಯ) ಆತ ಉಂಡ ಮನೆಗೆ ಕೇಡು ಬಗೆದ.

ಉಪಮಾನ : (ಸಾಮಾನ್ಯ ವಾಕ್ಯ) ಕೃತಜ್ಞರು ಏನನ್ನು ತಾನೇ ಮಾಡರು ?

ಸಮರ್ಥನ : (ಸಮನ್ವಯ) ಇಲ್ಲಿ ಉಪಮಾನವಾದ 'ಕೃತಜ್ಞರು ಏನನ್ನು ತಾನೇ ಮಾಡರು' ಎಂಬ ಲೋಕ ರೂಢಿಯ ಮಾತನ್ನು ಆಧರಿಸಿ ಉಪಮೇಯವಾದ 'ಆತ ಉಂಡ ಮನೆಗೆ ಕೇಡು ಬಗೆದ' ಎಂಬ ವಿಶೇಷ ವಾಕ್ಯವನ್ನು ಸಮರ್ಥಿಸಲಾಗಿದೆ.

ಉದಾಹರಣೆ 2 :

ಪ್ರಕಾಶನು ಹನ್ನೆರಡನೇ ತರಗತಿ ಪರೀಕ್ಷೆಯಲ್ಲಿ ರಾಜ್ಯದಲ್ಲೇ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣವಾದನು. ಪ್ರತಿಭಾವಂತರಿಗೆ ಯಾವುದು ತಾನೇ ಅಸಾಧ್ಯ ?

6. ಶ್ಲೇಷಾಲಂಕಾರ

ಅನೇಕ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದನ್ನು ಶ್ಲೇಷಾಲಂಕಾರ ಎನ್ನುವರು.

ಉದಾಹರಣೆ : ಆ ವಿವಾಹ ಮಂಟಪ ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧ ಮಿಳಿತವಾಗಿತ್ತು.

ಇಲ್ಲಿ ವಿವಾಹ ಮಂಟಪವೊಂದರ ವರ್ಣನೆ ಮಾಡಲಾಗಿದೆ. ಪುರಂದರಪುರವೆಂದರೆ ದೇವೇಂದ್ರನ ಪಟ್ಟಣ ಅದು. ಎಂದರೆ ಸ್ವರ್ಗ. ರಂಭಾನ್ವಿತ ಮತ್ತು ವಿಬುಧ ಮಿಳಿತ ಎರಡು ಪದಗಳು ಉಪಮೇಯ ಉಪಮಾನಗಳಿಗೆ ಬೇರೆ ಬೇರೆ ಅರ್ಥ ನೀಡುತ್ತವೆ.

ಪದ	ವಿವಾಹ ಮಂಟಪದ ಪರವಾಗಿ	ಸ್ವರ್ಗದ ಪರವಾಗಿ
ರಂಭಾನ್ವಿತ ವಿಬುಧ ಮಿಳಿತ	ಬಾಳೆಯ ಗಿಡಗಳಿಂದ ಕೂಡಿತ್ತು ಬ್ರಾಹ್ಮಣರಿಂದ ಕೂಡಿತ್ತು	ರಂಭೆಯೆಂಬ ಅಪ್ಸರೆಯಿಂದ ಕೂಡಿತ್ತು ದೇವತೆಗಳಿಂದ ಕೂಡಿತ್ತು.

10th_Kannada_Reader1-5.indd 177 03-04-2019 14:08:03

ಘಟಕ
ಒಂಬತ್ತು

ಧರ್ಮ/ತತ್ವ/ಚಿಂತನೆ



ಕಾವ್ಯ ಕಣಜ	: ಧವಳ ಗಂಗೆಯ ಗಂಗಾಧರ	– ವಾದಿರಾಜರು
ಗದ್ಯ ವಿಹಾರ	: ಬಸವಣ್ಣನವರು ಕಟ್ಟಿ ಬಯಸಿದ ಸಮಾಜ	– ಸಿ.ಪಿ.ಕೆ
ಉಪಪಠ್ಯ	: ಮನಸೂರದಲ್ಲಿಯ ದಿನಗಳು	– ಮಲ್ಲಿಕಾರ್ಜುನ ಮನಸೂರ
ವ್ಯಾಕರಣ	: ಗಾದೆಗಳು – ಒಗಟುಗಳು – ಭಾವಾರ್ಥ	

10th_Kannada_Reader1-5.indd 178 03-04-2019 14:08:04

ಘಟಕ ಒಂಬತ್ತು

ಧವಳ ಗಂಗೆಯ ಗಂಗಾಧರ

–ವಾದಿರಾಜರು



ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಗಳು ಕನ್ನಡವು ವಿಶ್ವ ಸಾಹಿತ್ಯಕ್ಕೆ ಕೊಟ್ಟ ಮಹತ್ವದ ಕಾಣಿಕೆಗಳಾಗಿವೆ. ದಾಸರು ಭಕ್ತಿಯೇ ಮುಕ್ತಿಯ ಮಂಟಪಕ್ಕೆ ಮೆಟ್ಟಿಲೆಂಬುದಾಗಿ ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು, ಗೆಜ್ಜೆಯ ನಾದದೊಂದಿಗೆ ಹೆಜ್ಜೆ ಹಾಕುತ್ತಾ ಗಲ್ಲಿಗಲ್ಲಿಗಳಲ್ಲಿಯೂ ಹರಿಭಕ್ತಿ ಸುಧೆಯನ್ನು ಪಸರಿಸಿದ ಮಹಾನುಭಾವರು. ಈ ಕೀರ್ತನೆಯಲ್ಲಿ ಶ್ರೀ ವಾದಿರಾಜರು ಪರಶಿವನನ್ನು ಅನನ್ಯ ಭಕ್ತಿಯಿಂದ ಶ್ರೀ ಹರಿಯಲ್ಲಿ ಭಕ್ತಿ ಇರಿಸುವಂತೆ ಪ್ರಾರ್ಥಿಸಿದ್ದಾರೆ.



10th_Kannada_Reader1-5.indd 179 03-04-2019 14:08:04

ಧವಳ ಗಂಗೆಯ ಗಂಗಾಧರ ಮಹಾಲಿಂಗ ಮಾ |
ಧವನ ತೋರಿಸಯ್ಯ ಗುರು ಕುಲೋತ್ತುಂಗ ||

ಅರ್ಚಿಸಿದವರಿಗಭೀಷ್ಟೆಯ ಕೊಡುವ !
ದುಶ್ಚರಿತರನೆಲ್ಲ ದೂರದಲ್ಲಿಡುವ |
ಹೆಚ್ಚಿದ ಅಘಗಳ ಬೇಗನೆ ತರಿವ ನ !
ಮ್ಮಚ್ಯುತ ಬಲ್ಲಿದ ಅಸುರರ ಬಡಿವ||

ಮಾರನ್ನ ಗೆಲಿದ ಮನೋಹರ ಮೂರ್ತಿ !
ಸಾರಸಜ್ಜನರಿಗೆ ಸುರ ಚಕ್ರವರ್ತಿ |
ಧಾರುಣಿಯೆಲ್ಲ ತುಂಬಿತು ನಿನ್ನಯ ಕೀರ್ತಿ ಮು !
ರಾರಿಯ ತೋರಿಸೊ ನಿನಗೆ ಶರಣಾರ್ಥಿ ||

ಚೆನ್ನ ಶ್ರೀಪ್ರಸನ್ನ ಹಯವದನನ್ನ !
ಅನುದಿನ ನೆನೆವಂತೆ ಮಾಡೋ ನೀನೆನ್ನ |
ಅನ್ಯರನರಿಯೆನೊ ಗುರುವೆಂಬ ನಿನ್ನ !
ಇನ್ನಾದರೂ ಹರಿಯ ತೋರೋ ಮುಕ್ಕಣ್ಣ ||

10th_Kannada_Reader1-5.indd 180 03-04-2019 14:08:04

ಕವಿ ಕಾವ್ಯ ವಿಚಾರ



ಶ್ರೀ ವಾದಿರಾಜ

ಯತಿವರೇಣ್ಯ ಶ್ರೀ ವಾದಿರಾಜರ ಜನ್ಮ ಸ್ಥಳ ಉಡುಪಿ ಜಿಲ್ಲೆಗೆ ಸೇರಿದ ಹೂವಿನಕೆರೆ. ಇವರ ತಾಯಿ : ಗೌರೀ ದೇವಿ; ತಂದೆ : ರಾಮಭಟ್ಟ. 'ವಿದ್ಯಾನಿಧಿ ತೀರ್ಥ'ರೇ ಇವರ ಗುರುಗಳಾಗಿದ್ದವರು. ವಾದಿರಾಜರು ವಿಜಯನಗರದಲ್ಲಿ ನೆಲೆಸಿದ್ದ ವ್ಯಾಸರಾಯರ ಬಳಿ ಪ್ರೌಢ ವಿದ್ಯಾಭ್ಯಾಸವನ್ನು ಮಾಡಿದರು. ವ್ಯಾಸರಿಂದ 'ತರ್ಕತಾಂಡವ ಚಂದ್ರಿಕಾ', 'ನ್ಯಾಯ ಸುಧಾ', 'ನ್ಯಾಯಾಮೃತ'ವೆನ್ನುವ ಪ್ರೌಢ ಗ್ರಂಥಗಳನ್ನು ಅಭ್ಯಾಸ ಮಾಡಿದರು. ತೀರ್ಥ ಪ್ರಬಂಧ ಹಾಗೂ ರುಕ್ಮಿಣೀಶ ವಿಜಯ ಎನ್ನುವ ಕೃತಿಗಳನ್ನೂ ಇವರು ರಚಿಸಿದ್ದಾರೆ. ಇವರ ಪದ ಕಾವ್ಯಗಳು ಕಾವ್ಯಾಲಂಕಾರ, ಸಾಹಿತ್ಯ ಶಾಸ್ತ್ರ ಹಾಗೂ ರಸಮಯ ಅಂಶಗಳಿಂದ ಕೂಡಿರುತ್ತವೆ. ಕನ್ನಡದಲ್ಲಿ ಶ್ರೀಮದ್ ಮಹಾಭಾಗವತವನ್ನು ಪ್ರಸ್ತುತ ಪಡಿಸಿದವರಲ್ಲಿ ಶ್ರೀ ವಾದಿರಾಜರು ಪ್ರಮುಖರು. ಶ್ರೀಯುತರ 'ರುಕ್ಮಿಣೀಶ ವಿಜಯ' ಎಂಬುದು ಇವರ ಮೇರು ಕಾವ್ಯವಾಗಿದ್ದು, ಈ ಕೃತಿಯನ್ನು ಕೇವಲ ಹತ್ತೊಂಬತ್ತು ದಿನಗಳಲ್ಲಿಯೇ ಇವರು ರಚಿಸಿದರೆಂದು ಪ್ರತೀತಿ ಇದೆ. ಶ್ರೀಯುತರು ದಾಸ ಸಾಹಿತ್ಯದ ಪ್ರಮುಖ ಕೀರ್ತನಕಾರರು. ದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ಒಂದು ಪ್ರಮುಖ ಪ್ರಕಾರವಾಗಿದೆ. ಹರಿಭಕ್ತಿಯೇ ಇವರ ಪ್ರಧಾನ ದೃಷ್ಟಿಕೋನ. ವೈಷ್ಣವ ಧರ್ಮ ಪ್ರಚಾರಕ್ಕಾಗಿ ದಾಸರು ಅಪಾರ ಶ್ರಮ ವಹಿಸಿದ್ದಾರೆ. ಅವರಲ್ಲಿ ವಾದಿರಾಜರೂ ಕೂಡ ಪ್ರಮುಖರಾದವರು.

ಪದಗಳ ಅರ್ಥ

ಗಂಗಾಧರ–ಗಂಗೆಯನ್ನು ಧರಿಸಿದವನು, ಶಿವ; ಮಾಧವ–ಶ್ರೀಹರಿ, ವಿಷ್ಣು; ಅರ್ಚಿಸಿ–ಪೂಜಿಸಿ; ಅಭೀಷ್ಟ–ಕೋರಿಕೆ, ಬಯಕೆ, ಆಸೆ; ಅಘ–ಪಾಪ; ಅಸುರ–ರಾಕ್ಷಸ; ಸಜ್ಜನರು–ಒಳ್ಳೆಯ ಜನರು; ಚಕ್ರವರ್ತಿ–ಅರಸ, ರಾಜ; ಧಾರುಣಿ–ಭೂಮಿ, ಇಳೆ; ಶರಣಾರ್ಥಿ–ಶರಣಾಗಿ ಬಂದವನು; ಅನುದಿನ–ಪ್ರತಿದಿನ, ನಿತ್ಯವೂ; ಅನ್ಯರು–ಬೇರೆಯವರು, ಪರರು; ಗುರು–ಮಾರ್ಗದರ್ಶಕ, ಜ್ಞಾನಿ, ಮೇಧಾವಿ, ಶಿಕ್ಷಕ, ಪಂಡಿತ; ಮುಕ್ಕಣ್ಣ–ಮೂರು ಕಣ್ಣುಳ್ಳವನು, ಶಿವ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವಾದಿರಾಜರು ಯಾರನ್ನು ತೋರಿಸಯ್ಯ ಎಂದು ಮೊರೆಯಿಟ್ಟಿದ್ದಾರೆ ?
2. ಅರ್ಚಿಸಿದವರಿಗೆ ಅಭೀಷ್ಟಗಳನ್ನು ನೀಡುವವನು ಯಾರು ?
3. ಧಾರುಣಿಯಲ್ಲಿ ಯಾರ ಕೀರ್ತಿ ತುಂಬಿದೆ ?
4. ಹಯವದನನನ್ನು ಹೇಗೆ ನೆನೆಯಬೇಕು ?
5. ವಾದಿರಾಜರ ಹುಟ್ಟೂರು ಯಾವುದು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಶಿವನಲ್ಲಿ ವಾದಿರಾಜರು ಏನೆಂದು ಮೊರೆಯಿಟ್ಟಿದ್ದಾರೆ ?
2. ಶ್ರೀಹರಿಯನ್ನು ನಂಬಿದವರನ್ನು ಆತ ಯಾವಯಾವ ದುರಿತಗಳಿಂದ ದೂರ ಮಾಡುತ್ತಾನೆ ?
3. ಸಾಧು ಜನರಿಗೆ ಸುರ ಚಕ್ರವರ್ತಿಯಾಗಿರುವವನು ಯಾರು ?
4. ಪರಶಿವನಿಗಿರುವ ಬೇರೆ ಬೇರೆ ಹೆಸರುಗಳನ್ನು ಬರೆಯಿರಿ.
5. ಮಾಧವನಿಗಿರುವ ಇನ್ನೂ ಇತರ ಹೆಸರುಗಳನ್ನು ಬರೆಯಿರಿ.
6. ಅಚ್ಯುತ ಶಿಕ್ಷಿಸುವ ಬಗೆಗಳನ್ನು ತಿಳಿಸಿ
7. ಮುಕ್ಕಣ್ಣನಲ್ಲಿ ಕವಿಯ ಕೋರಿಕೆಗಳೇನು ?
8. ಕೀರ್ತನಕಾರರು ದೇವರನ್ನು ಹೇಗೆ ಹೊಗಳಿದ್ದಾರೆ ?
9. ವಾದಿರಾಜರ ಕೃತಿಗಳನ್ನು ಹೆಸರಿಸಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಧವಳ ಗಂಗೆಯ ಗಂಗಾಧರ ಪದ್ಯದ ಆಶಯವೇನು ?
2. ದೇವರ ಮಹಿಮೆಯನ್ನು ಕವಿ ಈ ಪದ್ಯದಲ್ಲಿ ಹೇಗೆ ಹಾಡಿ ಹೊಗಳಿದ್ದಾರೆ ?

10th_Kannada_Reader1-5.indd 181 03-04-2019 14:08:04

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**
   ಗುರು, ಧವಳ, ಅಘ, ಸುರ, ಚಕ್ರವರ್ತಿ, ಹರಿ.
2. **ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.**
   ದೂರ, ಅಸುರ, ಕೀರ್ತಿ, ಸಜ್ಜನ, ಹೆಚ್ಚು.
3. **ಕೆಳಗಿನ ಪದಗಳ ವಿಶೇಷಾರ್ಥಗಳನ್ನು ತಿಳಿಸಿ.**
   ಗಂಗಾಧರ, ಮುಕ್ಕಣ್ಣ, ಮನೋಹರ, ಸುರಚಕ್ರವರ್ತಿ.
4. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**
   ಮನೋಹರ, ಸಜ್ಜನರು, ಅನುದಿನ, ದೂರದಲ್ಲಿಡು.

ಚಟುವಟಿಕೆ

1. ಪುರಂದರ ದಾಸರು, ಕನಕದಾಸರು ಹಾಗೂ ಇತರರ ಕೀರ್ತನೆಗಳನ್ನು ಲಯಬದ್ಧವಾಗಿಯೂ, ರಾಗಬದ್ಧವಾಗಿಯೂ ಹಾಡಿರಿ.
2. ದಾಸವರೇಣ್ಯರ ಭಾವಚಿತ್ರಗಳನ್ನು ಸಂಗ್ರಹಿಸಿರಿ.









10th_Kannada_Reader1-5.indd 182 03-04-2019 14:08:04

ಘಟಕ ಒಂಬತ್ತು

ಬಸವಣ್ಣನವರು ಕಟ್ಟಿ ಬಯಸಿದ ಸಮಾಜ

–ಸಿ.ಪಿ.ಕೆ.



ಭಾರತಾಂಬೆಯ ಮಡಿಲಲ್ಲಿ ಅದೆಷ್ಟೋ ಮಂದಿ ಮಹಾಪುರುಷರು ಜನಿಸಿ ತಮ್ಮ ಉದಾತ್ತ ಧ್ಯೇಯ, ಚಿಂತನೆ, ವಿಚಾರಗಳಿಂದ ಸಮಾಜದಲ್ಲಿನ ಮೌಢ್ಯಗಳನ್ನು ದೂರೀಕರಿಸಿ ಸಕಲ ರೀತಿಯ ಶೋಷಣೆಗಳಿಂದ ಮುಕ್ತವಾದ, ಸಮಾನತೆ–ಸೌಹಾರ್ದತೆಗಳ ಭದ್ರ ಬುನಾದಿಯ ಮೇಲೆ ಸರ್ವೋದಯನಿಷ್ಠ ಸಮಾಜವನ್ನು ರೂಪಿಸಲು ಬಹುವಾಗಿ ಶ್ರಮಿಸಿದರು. ಅಂತಹ ಮಹಾಪುರುಷರಲ್ಲಿ ಭಕ್ತಿ ಭಂಡಾರಿ ಬಸವಣ್ಣನವರೂ ಒಬ್ಬರು. ಕನ್ನಡ ನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯನ್ನು ನಡೆಸಿ ಧರ್ಮದ ತಳಹದಿಯ ಮೇಲೆ ಕಟ್ಟಬಯಸಿದ ಸಮಾಜವನ್ನು ಕುರಿತಾದ ಚಿಂತನೆಯ ಕಡೆಗೆ ಈ ಲೇಖನ ಬೆಳಕು ಚೆಲ್ಲುತ್ತದೆ.



10th_Kannada_Reader1-5.indd 183 03-04-2019 14:08:04

ಮಹಾತ್ಮಾ ಬಸವಣ್ಣನವರು ಕಟ್ಟಬಯಸಿದ್ದು ಸರ್ವ ಶೋಷಣೆಗಳಿಂದಲೂ ಮುಕ್ತವಾದ ಸ್ವಾತಂತ್ರ್ಯ, ಸಮಾನತೆ ಸೌಹಾರ್ದತೆಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು. ಅವರು ಈ ನೆಲದ ಮೇಲೆ ನಡೆದಾಡಿ ಸುಮಾರು ಎಂಟುನೂರು ವರ್ಷಗಳು ಆಗಿ ಹೋದವು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ಸಮಾಜ ಇಂದಿಗೂ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿಲ್ಲವೆಂಬುದನ್ನು ಗಮನಿಸಿದಾಗ ಅಷ್ಟು ಹಿಂದೆಯೇ ಅವರು ಕಂಡ ಕನಸು ಮತ್ತು ಅದನ್ನು ನನಸು ಮಾಡಲು ನಡೆಸಿದ ಹೋರಾಟ ಎಷ್ಟು ದೊಡ್ಡದೆಂಬುದು ಅರಿವಾಗದಿರದು; ಸಮತಾವಾದ, ಸಮಾಜವಾದ, ಪ್ರಜಾಪ್ರಭುತ್ವ ಮುಂತಾದವು ಈ ಯುಗದ ಮೌಲ್ಯಗಳೆಂಬುದು ಎಲ್ಲರಿಗೂ ಗೊತ್ತು. ಆದರೆ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಈ ಮೌಲ್ಯಗಳ ಸಾಕ್ಷಾತ್ಕಾರಕ್ಕಾಗಿ ಸತತ ಶ್ರಮಿಸಿದರೆಂಬುದನ್ನು ನಾವು ಹೇಗೆ ಮರೆಯಬಹುದು? ಆ ಶ್ರಮ ಶಾಶ್ವತವಾಗಿ ಸಾರ್ಥಕವಾಗಲಿಲ್ಲವೆಂಬ ಮಾತು ಬೇರೆ. ಎಲ್ಲ ಮಹಾಪುರುಷರ ಪಾಡೂ ಅಷ್ಟೇ ತಾನೇ?

ಬಸವಣ್ಣನವರ ಕನಸಿನ ಸಮಾಜ, ಧರ್ಮದ ತಳಹದಿಯ ಮೇಲೆ ರೂಪುಗೊಂಡದ್ದು ಎಂಬುದನ್ನು ಮುಖ್ಯವಾಗಿ ಲಕ್ಷಿಸಬೇಕು. ಆದರೆ ಧರ್ಮದ ಹೆಸರಿನಲ್ಲಿ ನಡೆಯುವ ಅನೇಕ ಅನಾಹುತಗಳಿಗೆ, ಅನಾಚಾರಗಳಿಗೆ ಅನ್ಯಾಯ, ಸುಲಿಗೆ, ಶೋಷಣೆಗಳಿಗೆ ಅದರಲ್ಲಿ ಅವಕಾಶವಿಲ್ಲ. ಅಂತಹ ಅನಿಷ್ಟಗಳ ಬುಡಕ್ಕೇ ಕೊಡಲಿ ಪೆಟ್ಟು ಹಾಕುವ ಜ್ವಲಂತ ವೈಚಾರಿಕ ಪ್ರವೃತ್ತಿಯನ್ನು ಬಸವಣ್ಣನವರಲ್ಲಿ ಕಾಣುತ್ತೇವೆ.

ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಕಂಡುಕೊಂಡು, ಆ ದಿಸೆಯಲ್ಲಿ ಕೆಲಸ ಮಾಡಿದ್ದು ವಚನಕಾರರ ಅದ್ಭುತ ಸಾಧನೆ. ಜನ ಭಾಷೆಯ ಮಾಧ್ಯಮವೇ ಸರ್ವೋದಯದ ಮೂಲತತ್ವ, ಕೀಲಿಕೈ. ಈ ದೃಷ್ಟಿಯಿಂದ ಕನ್ನಡ ಮಾಧ್ಯಮ ಬಸವಾದಿ ಶರಣರ ಕಾಲದಲ್ಲೇ ಪ್ರಚುರವಾಗಿ, ಸಮಾಜ ಸುಧಾರಣೆಗೆ ಹಾಗೂ ನವಸಮಾಜ ನಿರ್ಮಾಣಕ್ಕೆ ಪ್ರಮುಖ ಸಾಧನವಾಗಿ ಪರಿಣಮಿಸಿದ್ದನ್ನು ನೋಡುತ್ತೇವೆ. ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ, ಜನ ಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮ ರಹಸ್ಯವನ್ನು ತಿಳಿಯಾದ ಅಚ್ಚಕನ್ನಡದಲ್ಲಿ ತಿಳಿಸಿ ಕೊಟ್ಟರು. ಬಸವಣ್ಣನವರು ಧರ್ಮವನ್ನು ಕನ್ನಡಿಸಿ ಹೇಳಿದ್ದು ಮಾತ್ರವಲ್ಲ, ಅದನ್ನು ಸಹಜ ಶುದ್ಧ ರೂಪದಲ್ಲಿ ಅನಾವರಣ ಮಾಡಿದ ಕೀರ್ತಿಯೂ ಅವರಿಗೇ ಸಲ್ಲಬೇಕು. ಧರ್ಮವೆಂದರೆ ಅಗ್ರಾಹ್ಯವಾದ ಅನುಸರಣೀಯವಾದ ಜಟಿಲ ಜಾಲವೂ ಅಲ್ಲ, ಅದು ಒಂದು ವರ್ಗದ ಸೊತ್ತೂ ಅಲ್ಲ; ಅದು ಎಲ್ಲರ ಆಸ್ತಿಯಾಗಬೇಕು, ಎಲ್ಲರ ಸುಖಕ್ಕೂ ಅಭ್ಯುದಯಕ್ಕೂ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು. ಅದನ್ನವರು ಅಪ್ರತಿಹತವಾದ ರೀತಿಯಲ್ಲಿ ಮುಂದೊತ್ತಿದರು.

ಬಸವಣ್ಣನವರು ಹಿಂದೂ ಧರ್ಮದ ಚೌಕಟ್ಟಿನೊಳಗಿದ್ದುಕೊಂಡೇ ಅದನ್ನು ಶುದ್ಧೀಕರಿಸುವ, ತನ್ಮೂಲಕ ಸಮಾಜವನ್ನು ಮೇಲೆತ್ತುವ ಮಹಾಕಾರ್ಯದಲ್ಲಿ ಉದ್ಯುಕ್ತರಾದರು. ಅವರ ಕಾಲದಲ್ಲಿ ಸಾಮಾನ್ಯ ಜನ ಅಜ್ಞಾನ, ಮೌಢ್ಯ, ಶೋಷಣೆಗಳಿಗೆ ಪಕ್ಕಾಗಿ ಉದ್ಧಾರ ಕಾಣದೆ ಕತ್ತಲಲ್ಲಿ ತೊಳಲಾಡುತ್ತಿದ್ದರು. ಬಸವಣ್ಣನವರು ಈ ಶೋಚನೀಯ ಪರಿಸ್ಥಿತಿಯನ್ನು ತಪ್ಪಿಸಲು ಜೀವನಪರ್ಯಂತ ಹೆಣಗಿದರು. ಧರ್ಮವನ್ನು ಅವರು ಕರ್ಮಕಾಂಡದಿಂದ ಪ್ರತ್ಯೇಕಿಸಿ ಅದರ ನೈಜವಾದ ತಿರುಳನ್ನು ಜನತೆಯ ಮುಂದಿರಿಸಿದರು. ಶಾಸ್ತ್ರಗಳನ್ನು ಹಿಂದಿಕ್ಕಿ, ಆಶ್ರೇಯವಾದ ವೇದೋಪನಿಷತ್ತುಗಳ ಶ್ರೇಯಸ್ಕರವಾದ ಸಾರವನ್ನು ಅವರು ಪರಿಗ್ರಹಿಸಿದರು; ಪುಷ್ಟಿದಾಯಕವಾದ ನಿತ್ಯಾಂಶಗಳನ್ನು ಹೀರಿಕೊಂಡು, ಬಾಹ್ಯವೂ ಬರಡೂ ಆದುದನ್ನೆಲ್ಲ ತೂರಿ ಬಿಟ್ಟರು. ಇದರಿಂದ ಸಮಾಜದಲ್ಲಿ ಅಪೂರ್ವ ಜಾಗೃತಿ ಉಂಟಾಯಿತು; ಸಾಮಾನ್ಯ ಜನರ ಜಾಡ್ಯ, ಅಜ್ಞಾನಗಳು ತೊಲಗಿ, ಸರ್ವೋದಯಕ್ಕೆ ಶಿವಪಥ ತೆರೆದುಕೊಂಡಿತು.

ಎಲ್ಲರಿಗೂ ನಿಲುಕುವಂತೆ ಸರಳ, ಸುಲಭವಾದ ಮನಕ್ಕೆ ನಾಟುವಂತಹ ಮಾತುಗಳಲ್ಲಿ ಧರ್ಮಬೋಧೆ ಮಾಡಿದ್ದರಿಂದ, ಧರ್ಮವನ್ನು ಮನೆ ಮಾತು ಮಾಡಿಕೊಟ್ಟುದರಿಂದ – ಸಮಾಜದಲ್ಲಿ ಧಾರ್ಮಿಕ ಸಮಾನತೆಗೆ ಅವಕಾಶವಾಯಿತು. ಅಂತೆಯೇ ಸಾಮಾಜಿಕ ಸಮಾನತೆಯ ಸ್ಥಾಪನೆಗೂ ಬಸವಣ್ಣನವರು ಉಗ್ರವಾಗಿ ಹೋರಾಟ ಮಾಡಿದರು. ವರ್ಣ ವ್ಯವಸ್ಥೆ, ಜಾತಿ ಪದ್ಧತಿಗಳು ಹಿಂದೂ ಧರ್ಮ ಬೆಳೆಸಿಕೊಂಡು ಬಂದ ಕರಾಳ ಪೀಡೆ, ಘೋರ ಶಾಪ. ಇದರ ಶನಿಮುಷ್ಟಿಯಿಂದ ಭಾರತೀಯ ಸಮಾಜ ಇನ್ನೂ ಮುಕ್ತವಾಗಿಲ್ಲ. ಬಸವಣ್ಣನವರು ಜಾತಿ ಪದ್ಧತಿಯ ಬೇರಿಗೇ ಬೆನ್ನೀರು ಹೊಯ್ಯಲು ಸರ್ವ

10th_Kannada_Reader1-5.indd 184 03-04-2019 14:08:04

ಪ್ರಯತ್ನಗಳನ್ನೂ ಮಾಡಿದರೆಂಬುದನ್ನು ಎಷ್ಟು ಹೊಗಳಿದರೂ ಕಡಿಮೆಯೇ. ಅವರು ಜಾತಿಗಳ ಅಡ್ಡ ಗೋಡೆಗಳನ್ನು ಕುಟ್ಟಿ ಕೆಡವಲು ತಮ್ಮ ಸರ್ವ ಶಕ್ತಿಯನ್ನೂ ವಿನಿಯೋಗಿಸಿದ ಮಹಾನುಭಾವರು.

ಅಸ್ಪೃಶ್ಯತೆ ಹಿಂದೂ ಧರ್ಮಕ್ಕಂಟಿದ ಮತ್ತೊಂದು ಲಜ್ಜಾಸ್ಪದ ಕಳಂಕ; ಅದನ್ನು ತೊಡೆದು ಹಾಕುವುದೂ ಬಸವಣ್ಣನವರ ಜೀವಿತೋದ್ದೇಶವಾಗಿತ್ತು. ಅವರು ವ್ಯಕ್ತಿಯ ಯೋಗ್ಯತೆಯನ್ನು ನೀತಿಯ ಮಾನದಂಡದಿಂದ ಅಳೆದರು, ಜಾತಿಯಿಂದಲ್ಲ. ಯಾರು ಧರ್ಮ ನಿರತರೋ, ಶಿವಭಕ್ತರೋ, ಸದಾಚಾರ ಸಂಪನ್ನರೋ ಅವರೇ ಕುಲಜರು; ತದ್ವಿರುದ್ಧ ರೀತಿಯಲ್ಲಿ ಬದುಕುವವರೇ ಕುಲಹೀನರು – ಇದು ಬಸವಣ್ಣನವರ ಪುನರ್‌ಮೌಲ್ಯಮಾಪನ.

ಸ್ತ್ರೀ, ಆಧ್ಯಾತ್ಮಿಕವಾಗಿ ಸಾಮಾಜಿಕವಾಗಿ ಮಾತ್ರವಲ್ಲದೆ ಸಾಹಿತ್ಯಕವಾಗಿಯೂ ಪುರುಷನಿಗೆ ಹೆಗಲೆಣೆ ಎಂಬುದನ್ನು ವಚನ ಸಾಹಿತ್ಯ ಉದ್ಘೋಷಿಸುತ್ತದೆ. ವಾಸ್ತವವಾಗಿ ಸ್ತ್ರೀ ಸ್ವಾತಂತ್ರ್ಯ ಚಳವಳಿ ಅಂದೇ ಆರಂಭಗೊಂಡಿತು.

ಬಸವಣ್ಣನವರ ಕಾಲದ ಸಮಾಜದಲ್ಲಿ ಪ್ರಾಣಿಬಲಿ, ರೂಢವಾಗಿತ್ತು. ಅದನ್ನೇ ಧರ್ಮಾಚರಣೆಯೆಂದು ಜನ ಭ್ರಮಿಸಿದ್ದಿರಬೇಕು. ಬಸವಣ್ಣನವರು ಅದನ್ನು ಅಲ್ಲಗಳೆದು, ಅಹಿಂಸೆ, ದಯೆಗಳ ಅವಶ್ಯಕತೆಯನ್ನು ಒತ್ತಿ ಹೇಳಬೇಕಾಯಿತು; ಧರ್ಮದ ಹೊಸ ವ್ಯಾಖ್ಯಾನವನ್ನೇ ಅವರು ನೀಡಿದರು.

ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ !
ದಯವೇ ಧರ್ಮದ ಮೂಲವಯ್ಯಾ !
ಕೂಡಲ ಸಂಗಯ್ಯನಂತಲ್ಲದೊಲ್ಲ ಕಂಡಯ್ಯಾ!

ಧರ್ಮದ ಹುರುಳನ್ನು ಹೀಗೆ ಸರಳವಾಗಿ ಸಂಕ್ಷಿಪ್ತವಾಗಿ ಸರ್ವಗ್ರಾಹ್ಯವಾಗಿ ಅವರು ಪ್ರತಿಪಾದಿಸುತ್ತಾರೆ :

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಲು ಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ !

ದೇವಲೋಕ ಮರ್ತ್ಯಲೋಕಗಳಿಗೆ ಹೊಸ ಅರ್ಥವನ್ನು ಕಲ್ಪಿಸಿದರು ಬಸವಣ್ಣನವರು. ಅವರ ದೃಷ್ಟಿಯಲ್ಲಿ ದೇವಲೋಕ ಎಲ್ಲೋ ಇರುವಂತಹುದಲ್ಲ, ಸತ್ತ ಮೇಲೆ ಗಳಿಸುವಂತಹುದೂ ಅಲ್ಲ. 'ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ'; 'ಆಚಾರವೇ ಸ್ವರ್ಗ, ಅನಾಚಾರವೇ ನರಕ' – ಬಸವಣ್ಣನವರು ಪರವನ್ನು ಮರೆಯದೆ ಇಹ ಜೀವನದ ಶುದ್ಧಿ, ಆರ್ಜವಗಳಿಗೆ ಪರಮ ಪ್ರಾಶಸ್ತ್ಯ ಕೊಡುತ್ತಾರೆ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' ಎನ್ನುತ್ತಾರೆ. ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗದೊಳಗೆ ತೂರಿಕೊಳ್ಳುವುದು ಸಾಧ್ಯವಿಲ್ಲ. ಅಂತಹ ಯಾವ ಸುಲಭೋಪಾಯವೂ ಇಲ್ಲಿಲ್ಲ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲೇ; ಅದನ್ನು ಇಲ್ಲೇ ಕಷ್ಟಪಟ್ಟು ಸಂಪಾದಿಸಿಕೊಳ್ಳಬೇಕು. ಹೀಗೆ ಇಹವನ್ನೇ ಪರವಾಗಿ ಅರಳಿಸುವ ಕ್ರಾಂತಿಕಾರಕ ಮನೋಧರ್ಮ ಮತ್ತು ಧರ್ಮ ಬಸವಣ್ಣನವರದು.

ಬಹುದೇವೋಪಾಸನೆಯನ್ನು ಅವರು ಖಂಡಿಸಿ, ಏಕದೇವೋಪಾಸನೆಯನ್ನು ವಿಧಿಸಿದರು; 'ದೇವನೊಬ್ಬ ನಾಮ ಹಲವು' ಎಂಬ ಸೂತ್ರವೇ ಈ ವಿಧಿಗೆ ತಳಹದಿ. ಮೂಢ ನಂಬಿಕೆಗಳ ಮೇಲೆ ಬಸವಣ್ಣನವರು ಗದಾಪ್ರಹಾರ ಮಾಡಿದರು; ಧರ್ಮಕ್ಕೂ ಮೂಢನಂಬಿಕೆ, ಶಕುನ ಇತ್ಯಾದಿಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಅವರು ಸ್ಪಷ್ಟಪಡಿಸಿದರು.

ದೇವಾಲಯ ನಿರ್ಮಾಣಕ್ಕೆ ಬಸವಣ್ಣನವರ ವಿರೋಧವಿದೆ; ಸ್ಥಾವರ ಲಿಂಗಪೂಜೆಗೆ ಅವರ ಸಮ್ಮತಿಯಿಲ್ಲ. ಈ ದೃಷ್ಟಿಯಿಂದ, ಬಸವಣ್ಣನವರು ಬಾಹ್ಯ ದೇವಾಲಯಗಳಿಗೆ ಬೆಲೆ ಕೊಡದೆ, ತಮ್ಮ ದೇಹವೇ ದೇವಾಲಯವೆಂದು ಪರಿಗಣಿಸುವುದು ಸಮುಚಿತವಾಗಿದೆ. ಅವರ ಪ್ರಕಾರ, 'ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯಾ!'

ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದದ್ದು. ಅವರು ಕಟ್ಟಬಯಸಿದ ನೂತನ ಸಮಾಜದ ಒಂದು ಮುಖ್ಯಾಧಾರವೆಂದರೆ ಕಾಯಕ ತತ್ವ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ದೈಹಿಕವಾದ ಕೆಲಸ ಮಾಡಬೇಕು. ಅದರಿಂದಲೇ ಜೀವನ ನಡೆಸಬೇಕು ಎಂಬುದು ಕಾಯಕ ತತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ, ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ

10th_Kannada_Reader1-5.indd 185 03-04-2019 14:08:04

ಆರ್ಥಿಕ ಸಮಸ್ಯೆಗಳಿಗೆ ರಾಮಬಾಣವಾಗಬಲ್ಲದು ಈ ಕಾಯಕ ತತ್ವ. ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ : 'ಕಾಯಕವೇ ಕೈಲಾಸ'!

ಬಸವಣ್ಣನವರು ಸಂಸಾರ ತ್ಯಾಗವನ್ನು ವಿಧಿಸುವುದಿಲ್ಲ. ಸಂಸಾರದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ.

ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ಅವರು ವಿಶೇಷವಾಗಿ ಒತ್ತಿ ಹೇಳಿದ್ದಾರೆ. ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕ ನುಡಿ, ನುಡಿಗೆ ತಕ್ಕ ನಡೆ – ಇವುಗಳನ್ನು ಅವರು ಬೋಧಿಸಿದ್ದಾರೆ. ನುಡಿಗೆ ತಕ್ಕ ನಡೆಯ ಕಂಡರೆ ಕೂಡಲ ಸಂಗಮ ತನ್ನೊಳಗಿರ್ಪನಯ್ಯಾ ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು ಬಹಿರಂಗದ ಕ್ರಿಯೆ ಎರಡಕ್ಕೂ ಅವರಲ್ಲಿ ಸಮಾನ ಪುರಸ್ಕಾರವಿದೆ.

ಪ್ರತಿಯೊಬ್ಬರೂ ಇತರರನ್ನು ತಿದ್ದಲು ಹೊರಡುವುದಕ್ಕೆ ಮುನ್ನ ತಮ್ಮನ್ನು ತಾವು ತಿದ್ದಿಕೊಳ್ಳಬೇಕೆಂಬುದು ಬಸವಣ್ಣನವರ ಆಶಯ. ಅವರು ಆಗ್ರಹಪೂರಕವಾಗಿ ಕೇಳುತ್ತಾರೆ :

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ!
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ !
ನೆರಮನೆಯ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲಸಂಗಮ ದೇವ !

'ನಾನು ಹೇಳುವಂತೆ ಮಾಡು, ನಾನು ಮಾಡುವಂತೆ ಮಾಡಬೇಡ' ಎಂಬುದೇ ಜನರ ಪ್ರವೃತ್ತಿ. ಬಸವಣ್ಣನವರು ಇಲ್ಲಿ ಅದನ್ನು ತಿದ್ದುತ್ತಾರೆ. ಅವರಂತೂ ವೈಯಕ್ತಿಕವಾದ ಡೊಂಕುಗಳನ್ನು ತಿದ್ದಿಕೊಂಡ ಮೇಲೆಯೇ ಸಾರ್ವಜನಿಕ ರಂಗದ ಉದ್ಧಾರ, ಶುದ್ಧೀಕರಣಗಳಿಗೆ ಕೈಹಾಕಿದ್ದು.

ಸಹಕಾರ ತತ್ವವನ್ನು ಬಸವಣ್ಣನವರು ಕಾಗೆ ಕೋಳಿಗಳ ನಿದರ್ಶನದ ಮೂಲಕ ಸೊಗಸಾಗಿ ತಿಳಿಯ ಹೇಳುತ್ತಾರೆ :

ಕಾಗೆಯೊಂದಗುಳ ಕಂಡರೆ
ಕರೆಯದೆ ತನ್ನ ಬಳಗವನು
ಕೋಳಿಯೊಂದು ಗುಟುಕ ಕಂಡರೆ
ಕೂಗಿ ಕರೆಯದೇ ತನ್ನ ಕುಲವೆಲ್ಲವನ್ನು
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಗಿಂತ ಕರಕಷ್ಟ
ಕೂಡಲಸಂಗಮ ದೇವ !

ಹೀಗೆ ಹಂಚಿಕೊಂಡು ತಿನ್ನುವ ಬುದ್ಧಿ ಮಾನವನಿಗೆ ಬಂದಂದೇ ಕಲ್ಯಾಣ ಸಿದ್ಧಿ. ಬಸವಣ್ಣನವರ ಕಾಲದಲ್ಲಿ ಏನೇನು ಸಮಸ್ಯೆಗಳು, ಅನಿಷ್ಟಗಳು ವಿಜೃಂಭಿಸುತ್ತಿದ್ದವೋ ಅವು ಇಂದಿಗೂ ಉಳಿದಿವೆ, ಮತ್ತೂ ಹೆಚ್ಚಿನ ಪ್ರಮಾಣದಲ್ಲೇ ಇವೆ ಎಂದ ಮೇಲೆ ಬಸವಣ್ಣನವರ ಆದರ್ಶಗಳು ಈ ಹೊತ್ತಿಗೂ ಇನ್ನು ಮುಂದೆಯೂ ದಾರಿ ದೀವಿಗೆಗಳೆಂಬುವುದರಲ್ಲಿ ತಿಲ ಮಾತ್ರವೂ ಸಂಶಯವಿಲ್ಲ. ಸತ್ಯ, ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಸಾಮಾಜಿಕ ಸಮತೆಯ ಸಾಧನೆ, ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧರಣ, ದಾರಿದ್ರ್ಯ ವಿಮೋಚನೆ, ಮೂಢ ನಂಬಿಕೆಗಳ ವರ್ಜನೆ, ದೇಶ ಭಾಷಾ ಮಾಧ್ಯಮದ ಜಾರಿ ಇವೇ ಮುಂತಾದುವೆಲ್ಲ ಇಂದಿಗೂ ಅತ್ಯವಶ್ಯವೂ ಅನಿವಾರ್ಯವೂ ಆಗಿವೆ. ಇವುಗಳನ್ನೆಲ್ಲ ಉಜ್ವಲವಾಗಿ ಪ್ರತಿಪಾದಿಸಿದ – ಅಷ್ಟೇ ಅಲ್ಲ, ಸ್ವತಃ ಬದುಕಿ ತೋರಿಸಿದ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ. ಅವರು ಭೌತಿಕವಾಗಿ ಎಂಟುನೂರು ವರ್ಷಗಳಷ್ಟು ಹಿಂದಿನವರಾದರೂ, ಬೌದ್ಧಿಕವಾಗಿ ಈ ಇಪ್ಪತ್ತನೆಯ ಶತಮಾನಕ್ಕಿಂತ ಮುಂದಿನವರಾಗಿಯೇ ಕಾಣುತ್ತಾರೆ. ಅಂತೂ ತಮ್ಮ ಕಲ್ಪನೆಯ ಸುಖೀ ಸಮಾಜವನ್ನು – ಎಲ್ಲ ಬಗೆಯ ಪಟ್ಟಭದ್ರ ಹಿತಾಸಕ್ತಿಗಳಿಂದಲೂ ಬಿಡುಗಡೆಗೊಂಡ, ಸತ್ಯ–ಶಿವ–ಸುಂದರವಾದ ಭೂತಲ ಸ್ವರ್ಗವನ್ನು ಕಟ್ಟಲು ಅವರು ಧೀಮಂತವಾದ, ಧೀರವಾದ, ನೇರವಾದ ಹೋರಾಟದಲ್ಲಿ ತೊಡಗಿ, ಅಭೂತಪೂರ್ವವಾದ ಆಂದೋಲವನ್ನು ಮಾಡಿ ತಮ್ಮ ಧ್ಯೇಯೋದ್ದೇಶಗಳಲ್ಲಿ ತತ್ಕಾಲಕ್ಕೆ ಯಶಸ್ವಿಯಾದರು.

10th_Kannada_Reader1-5.indd 186 03-04-2019 14:08:04

ಕೃತಿ ಕರ್ತೃ ಪರಿಚಯ



ಡಾ.ಸಿ.ಪಿ.ಕೃಷ್ಣಕುಮಾರ್

ಡಾ.ಸಿ.ಪಿ.ಕೃಷ್ಣಕುಮಾರ್ ಅವರು ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ 1939ರಲ್ಲಿ ಜನಿಸಿದರು. ಸಿ.ಪಿ.ಕೆ. ಎಂಬುದು ಇವರ ಕಾವ್ಯ ನಾಮ. ಇವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಅನಂತ ಪೃಥ್ವಿ, ತಾರಾಸಖ, ಸಾಹಿತ್ಯಪ್ರವೇಶ, ಕನ್ನಡ ವೇಣೀ ಸಂಹಾರ, ಕನ್ನಡ ನಾಗಾನಂದ, ಕಾವ್ಯಾರಾಧನೆ ಇವೇ ಮೊದಲಾದ ಗ್ರಂಥಗಳನ್ನು ಇವರು ರಚಿಸಿದ್ದಾರೆ. ಜೀವನ ಚರಿತ್ರೆ, ಸಂಶೋಧನೆ, ಸಂಪಾದನೆ ಮುಂತಾದ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಇವರ ಕೆಲವು ಕೃತಿಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳೂ ದೊರೆತಿವೆ.

ಪ್ರಸ್ತುತ ಲೇಖನ ಭಾಗವನ್ನು ಅವರ 'ಬಸವ ಭಾವನೆ' ಎಂಬ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಬಸವಣ್ಣನವರು ಅಂದು ಕಟ್ಟ ಬಯಸಿದ ಸಮಾಜವನ್ನು ಅವರ ವಚನಗಳ ಆಧಾರದೊಂದಿಗೆ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಪದಗಳ ಅರ್ಥ

ಮುಕ್ತವಾದ–ಬಿಡುಗಡೆ ಹೊಂದಿದ; ಸೌಹಾರ್ದ–ಅನ್ಯೋನ್ಯ; ಸಮನ್ವಯ–ಹೊಂದಾಣಿಕೆ; ನಿಕ್ಷಿಪ್ತ–ಅಡಗಿದ್ದ; ಅಗಮ್ಯ–ಗೋಚರಿಸದ, ಬುದ್ಧಿಗೆ ನಿಲುಕದ; ಅಗ್ರಾಹ್ಯ–ಗ್ರಹಿಸಲು ಸಾಧ್ಯವಿಲ್ಲದ; ಅಪ್ರತಿಹತ–ತಡೆಯಿಲ್ಲದ; ಉದ್ಯುಕ್ತ–ತೊಡಗು; ಆರ್ಷೇಯ–ಸನಾತನ, ಹಿಂದಿನಿಂದ ಬಂದಂತಹ; ಶಿವಪಥ–ಒಳ್ಳೆಯ ಮಾರ್ಗ; ಬೆನ್ನೀರು–ಬಿಸಿನೀರು; ಹೆಗಲೆಣೆ–ಸಮಾನ; ಮಿಥ್ಯ–ಸುಳ್ಳು; ಆರ್ಜವ–ಪ್ರಾಮಾಣಿಕ; ಪಟ್ಟಭದ್ರ ಹಿತಾಸಕ್ತಿ–ತಮ್ಮ ಸ್ವಾರ್ಥ ಸಾಧನೆಗಾಗಿ ಪಟ್ಟು ಬಿಡದ ಸ್ವಾರ್ಥಿಗಳು; ಕಮ್ಮಟ–ಠಂಕಸಾಲೆ, ಶಿಬಿರ; ಉಪಾಸನೆ–ಪೂಜೆ; ಸ್ಥಾವರ–ಚಲಿಸದಿರುವ, ಒಂದೆಡೆ ನೆಲೆ ನಿಂತಿರುವ; ತಿಲ–ಎಳ್ಳು; ವರ್ಜನೆ–ತಿರಸ್ಕಾರ, ಬಿಡುವಿಕೆ; ಅಭೂತಪೂರ್ವ–ಹಿಂದೆಂದೂ ಸಂಭವಿಸದಿರುವ; ಅರಿಷ್ಟ–ಕೇಡು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಸವಣ್ಣನವರು ಕಟ್ಟ ಬಯಸಿದ ಸಮಾಜ ಯಾವ ತಳಹದಿಯ ಮೇಲೆ ರೂಪುಗೊಂಡಿದೆ ?
2. ಯಾವ ಭಾಷಾ ಮಾಧ್ಯಮವು ಸರ್ವೋದಯದ ಮೂಲ ತತ್ವವಾಗಿದೆ ?
3. ಬಸವಣ್ಣನವರ ದೃಷ್ಟಿಯಲ್ಲಿ ಧರ್ಮ ಎಂದರೇನು ?
4. ಬಸವಣ್ಣನವರ ಅಭಿಪ್ರಾಯದಲ್ಲಿ ಕುಲಜರು ಎಂದರೆ ಯಾರು ?
5. ಯಾವುದನ್ನು ಬಸವಣ್ಣನವರು ಕರ್ತಾರನ ಕಮ್ಮಟ ಎಂದು ಕರೆದಿದ್ದಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಬಸವಣ್ಣನವರು ದೇವಲೋಕ ಮತ್ತು ಮರ್ತ್ಯಲೋಕಕ್ಕೆ ನೀಡಿದ ಹೊಸ ಅರ್ಥವನ್ನು ತಿಳಿಸಿ ?
2. ಅಸ್ಪೃಶ್ಯತೆಯ ಬಗ್ಗೆ ಬಸವಣ್ಣನವರ ಅಭಿಪ್ರಾಯಗಳೇನು ?
3. ದೇವಾಲಯಗಳ ನಿರ್ಮಾಣದ ಬಗೆಗೆ ಬಸವಣ್ಣನವರ ವಿಚಾರಗಳಾವುವು ?
4. ಕೂಡಲ ಸಂಗಮನನ್ನು ಒಲಿಸಿಕೊಳ್ಳುವ ಪರಿ ಯಾವುದು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಬಸವಣ್ಣನವರ ದೃಷ್ಟಿಯಲ್ಲಿ ಧರ್ಮ ಮತ್ತು ಜಾತಿ ಪದ್ಧತಿ–ವಿವರಿಸಿ.
2. ಸ್ತ್ರೀ–ಪುರುಷ ಸಮಾನತೆ ಮತ್ತು ಏಕದೇವೋಪಾಸನೆಗಳ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು ?
3. ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ 'ಕಾಯಕ ತತ್ವ' ರಾಮಬಾಣ. ಹೇಗೆ ?

10th_Kannada_Reader1-5.indd 187 03-04-2019 14:08:04

IV. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.

1. 'ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ'
2. 'ಕಾಯಕವೇ ಕೈಲಾಸ'
3. 'ನಾನು ಹೇಳುವಂತೆ ಮಾಡು, ನಾನು ಮಾಡುವಂತೆ ಮಾಡಬೇಡ'
4. 'ಹಂಚಿಕೊಂಡು ತಿನ್ನುವ ಬುದ್ಧಿ ಮಾನವರಿಗೆ ಬಂದಂದೇ ಕಲ್ಯಾಣ ಸಿದ್ಧಿ'

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಮಹಾತ್ಮ, ಸರ್ವೋದಯ, ಇನ್ನಿಬ್ಬರು, ಮುಂದೊತ್ತು, ಸದಾಚಾರ, ಏಕೈಕ, ನಿತ್ಯಾಂಶ, ಲಜ್ಜಾಸ್ಪದ, ವೇದೋಪನಿಷತ್ತು, ಮುಖ್ಯಾಧಾರ.

2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಯುಗ, ದೃಷ್ಟಿ, ಲೋಕ, ಸ್ವರ್ಗ, ವಿಧಿ.

3. ಕೆಳಗಿನ ಪದಗಳ ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.

ಕೈಹಾಕು, ಪಂಚೇಂದ್ರಿಯ, ಬೆನ್ನೀರು, ಅಡ್ಡಗೋಡೆ, ಜೀವಿತೋದ್ದೇಶ.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಕೊಡಲಿಪೆಟ್ಟು, ಶೋಚನೀಯ, ಕೀಲಿಕೈ, ಜೀವನಪರ್ಯಂತ, ಮಾನದಂಡ, ಗದಾಪ್ರಹಾರ, ರಾಮಬಾಣ, ತೂರಿಬಿಡು.

5. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ದೇವಾಲಯ, ಸತತ, ಜಗತ್ತು, ಹುಸಿ, ಸಂಶಯ.

6. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಲೌಕಿಕ, ಅನಾಚಾರ, ಅಂತರಂಗ, ಶಾಶ್ವತ, ಪೂರ್ಣ, ದಯೆ.

ಚಟುವಟಿಕೆ

1. 'ಕಾಯಕವೇ ಕೈಲಾಸ' ಈ ಮಾತನ್ನು ವಿಸ್ತರಿಸಿ ಬರೆಯಿರಿ.
2. ಬಸವಣ್ಣನವರ ಜೀವನ ಚರಿತ್ರೆಯನ್ನು ಓದಿರಿ.
3. ಅನುಭವ ಮಂಟಪವನ್ನು ಕುರಿತು ನಿಮ್ಮ ತರಗತಿಯಲ್ಲಿ ಅಣಕು ಲೋಕಸಭೆಯನ್ನು ರಚಿಸಿರಿ.



10th_Kannada_Reader1-5.indd 188 03-04-2019 14:08:04

ಉಪಪಠ್ಯ

ಘಟಕ ಒಂಬತ್ತು

ಮನಸೂರದಲ್ಲಿಯ ದಿನಗಳು

–ಮಲ್ಲಿಕಾರ್ಜುನ ಮನಸೂರ



ಧರ್ಮ, ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದ ತಮ್ಮ ಪ್ರತಿಭೆಯಿಂದ ನಾಡಿನ ಕೀರ್ತಿಯನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಕ್ಕೆ ಮುಟ್ಟಿಸಿದ ವ್ಯಕ್ತಿಗಳು, ಕವಿಗಳು, ಕಲಾವಿದರು, ಸಂಗೀತಗಾರರು ಅನೇಕರಿದ್ದಾರೆ. ಕರ್ನಾಟಕ ಇಂತಹ ಹಲವಾರು ಜನ ಕೀರ್ತಿವಂತರಿಗೆ, ಕವಿಗಳಿಗೆ, ಕಲಾವಿದರಿಗೆ, ಸಂಗೀತಗಾರರಿಗೆ ಮಾತೃಭೂಮಿಯೆನಿಸಿದೆ. ಆ ಮೂಲಕ ಕಲಾವಿದರಿಗೆ ಆಗರ ಸ್ಥಾನವಾಗಿಯೂ, ಸಂಗೀತ ಕಲಾರತ್ನಗಳಿಗೆ ತವರು ಮನೆಯಾಗಿಯೂ ಪರಿಣಮಿಸಿದೆ. ಭಾರತೀಯ ಸಂಗೀತ ಪ್ರಪಂಚಕ್ಕೆ ಅಪೂರ್ವ ಕೊಡುಗೆ ನೀಡಿದ ನಾಡಿನ ಪ್ರಮುಖ ಸಂಗೀತ ಶ್ರೇಷ್ಠರಲ್ಲಿ ಪಂಡಿತ ಮಲ್ಲಿಕಾರ್ಜುನ ಮನಸೂರರೂ ಒಬ್ಬರು. ಮನಸೂರರ ಕಲಾ ಜೀವನ, ಸಂಗೀತ ಸಾಧನೆಗಳು ಅನನ್ಯ. ಸಂಗೀತಗಾರರ ಕಲಾ ಜೀವನದ ಪ್ರೇರಣೆ, ಧೋರಣೆ, ಸಾಧನೆಗಳ ಪರಿಯನ್ನು ಪರಿಚಯಿಸಿಕೊಳ್ಳಲು, ಅವರ ಆತ್ಮಚರಿತ್ರೆಗಳು ಉತ್ತಮ ಆಕರ ಸಾಮಗ್ರಿಗಳಾಗಿರುತ್ತವೆ. ಸಂಗೀತಗಾರರು, 'ಆತ್ಮ ಚರಿತ್ರೆ' ಬರೆದಿರುವುದು ಅತ್ಯಂತ ವಿರಳ. ಮನಸೂರರ ಈ ಆತ್ಮ ಚರಿತ್ರೆ ಸಂಗೀತ ಕ್ಷೇತ್ರದ ಅಪರೂಪದ ದಾಖಲೆ ಎನಿಸಿದೆ.





10th_Kannada_Reader1-5.indd 189 03-04-2019 14:08:04

'ಮನಸೂರು', ಧಾರವಾಡದ ಪಶ್ಚಿಮಕ್ಕೆ ಐದು ಮೈಲುಗಳ ಅಂತರದಲ್ಲಿರುವ ಒಂದು ಸಣ್ಣ ಗ್ರಾಮ. ನನ್ನ ಪೂರ್ವಜರು ಸುಮಾರು ಒಂದು ಶತಮಾನದ ಹಿಂದೆ ಪಾಚ್ಚಾಪುರ ಎಂಬಲ್ಲಿಂದ ಈ ಊರಿಗೆ ವಲಸೆ ಬಂದಿದ್ದರು. ಮನಸೂರದಲ್ಲಿ ನಮ್ಮ ಮನೆತನಕ್ಕೆ ಎರಿಹೆಕ್ಕಲದವರೆಂದು ಕರೆಯುವ ರೂಢಿಯಿತ್ತು. ವರ್ಷಾನುವರ್ಷ ದುಡಿದು ಬಂದ ಫಸಲಿನಲ್ಲಿ ಅಧಿಕಾಂಶವನ್ನು ಊರಿನ ಇನಾಮದಾರರಿಗೆ ಕೊಟ್ಟು, ಉಳಿದದ್ದರಲ್ಲಿ ಬಹಳ ಕಾರ್ಪಣ್ಯದಿಂದಲೇ ನಮ್ಮ ಹಿರಿಯರು ಜೀವನ ಸಾಗಿಸಬೇಕಾಗಿತ್ತು.

ನಮ್ಮ ಮನೆ ಊರಿನಲ್ಲಿ ಕೆಳಗಿನ ಓಣಿಯಲ್ಲಿತ್ತು. ಈ ಮನೆಯಲ್ಲಿ ನಾಲ್ಕು ಭಾಗ ಮಾಡಿಕೊಂಡು, ನನ್ನ ನಾಲ್ಕು ಅಜ್ಜಂದಿರು ವಾಸಿಸುತ್ತಿದ್ದರು. ಒಬ್ಬೊಬ್ಬರ ಪಾಲಿಗೆ ಒಂದು ಅಡಿಗೆ ಮನೆ, ಒಂದು ಪಡಸಾಲೆ ಹಾಗು ಒಂದು ದನ ಕಟ್ಟುವ ಹಕ್ಕೆ. ನನ್ನ ನಾಲ್ಕೂ ಜನ ಅಜ್ಜಂದಿರ ಹೆಸರು ಹೇಳುವುದು ಅವಶ್ಯಕವೆಂದೆನಿಸುತ್ತದೆ. ಏಕೆಂದರೆ ಮುಂದಿನ ಪೀಳಿಗೆಯವರು ಈ ನಾಲ್ಕೂ ಹೆಸರುಗಳನ್ನು ಮರೆತುಬಿಡಬಾರದೆಂದು ನನ್ನ ಅಣ್ಣತಮ್ಮಂದಿರಿಗೆ ಅವನ್ನೇ ಇಡಲಾಯಿತು. ನನ್ನ ಖಾಸಾ ಅಜ್ಜನ ಹೆಸರು ಬಸಪ್ಪ, ಎರಡನೆಯವ ಕಲ್ಲಪ್ಪ, ಮೂರನೆಯ ಮಲ್ಲಪ್ಪ, ನಾಲ್ಕನೆಯವ ಲಿಂಗಪ್ಪ.

ಹಿರಿಯರ ಹರಕೆಯಾಗಿ ಬಂದ ಬೆಚ್ಚನೆಯ ಹಳೆಯ ಮನೆಯಲ್ಲಿಯೇ ನನ್ನ ತಂದೆ ಭೀಮರಾಯಪ್ಪ ಮತ್ತು ತಾಯಿ ನೀಲಮ್ಮ ತಮ್ಮ ಸಂಸಾರವನ್ನು ಹೂಡಿದರು. ಭೀಮರಾಯಪ್ಪನವರು ಮನಸೂರ ಗ್ರಾಮದ ಗೌಡರಾಗಿದ್ದು, ಗ್ರಾಮದ ಯಾವ ಮಹತ್ವದ ವ್ಯವಹಾರವೂ ಅವರಿಲ್ಲದೆ ಆಗುತ್ತಿರಲಿಲ್ಲ. ಅವರಿಗೆ ನಾಟಕ, ಸಂಗೀತ, ದೊಡ್ಡಾಟಗಳಲ್ಲಿ ಅಪಾರ ಆಸಕ್ತಿ. ಪರವೂರಿನಿಂದ ಮೇಳಗಳನ್ನು ಕರೆಯಿಸಿ, ಅವರ ಕಾರ್ಯಕ್ರಮಗಳ ಪ್ರದರ್ಶನವನ್ನು ಏರ್ಪಡಿಸುತ್ತಿದ್ದರು. ತಾಯಿಗೂ ಹಾಗೆಯೇ. ಸಂಗೀತವೆಂದರೆ ಜೀವ. ಆಕೆಗೆ ಅದೆಷ್ಟೋ ಬೀಸುವ ಹಾಡುಗಳು, ಜೋಗುಳ ಹಾಡುಗಳು, ಭಜನೆಯ ಹಾಡುಗಳು ಕಂಠಗತವಾಗಿದ್ದು, ಅವುಗಳನ್ನು ಇಂಪಾಗಿ ಹಾಡುತ್ತಿದ್ದಳು. ನೆರೆಹೊರೆಯವರಿಗೆ ಕಷ್ಟದ ಪ್ರಸಂಗದಲ್ಲಿ ಸಹಾಯ ನೀಡುವ ದಯಾಳು ಹೃದಯ ಆಕೆಯದು. ಮನೆಗೆ ಬಂದವರನ್ನು ಒಳ್ಳೆಯ ಆದರಾತಿಥ್ಯದಿಂದ ಸ್ವಾಗತಿಸಿ, ಅವರ ಸೇವೆಯನ್ನು ಮಾಡುವುದು ಆಕೆಯ ಮನೋವೃತ್ತಿ. ಪ್ರತಿನಿತ್ಯವೂ ಮನೆಯಲ್ಲಿ ದೇವರ ಪೂಜೆ ಹಾಗೂ ಜಂಗಮರ ಸೇವೆ ನಡೆಯುತ್ತಿತ್ತು.

ನಮ್ಮ ತಂದೆ–ತಾಯಿಗಳಿಗೆ ನಾವು ಒಟ್ಟು ಎಂಟು ಮಕ್ಕಳು; ಅನುಕ್ರಮವಾಗಿ, ಬಸವರಾಜ, ಪಾರ್ವತಮ್ಮ, ಮಲ್ಲಿಕಾರ್ಜುನ, ಕಲ್ಲಪ್ಪ, ಲಿಂಗಪ್ಪ, ನಾಗಮ್ಮ, ಶಂಕರಪ್ಪ, ಶಕುಂತಲಾ. ಹೀಗೆ ಐದು ಗಂಡು, ಮೂರು ಹೆಣ್ಣು. ನಾನು ಹುಟ್ಟಿದ್ದು 1911ರ ಡಿಸೆಂಬರ್ 31ರಂದು. ಅಂದು ಅಮಾವಾಸ್ಯೆಯಾಗಿತ್ತು. ನನ್ನ ಅಜ್ಜನವರು ಪಂಚಾಂಗ ನೋಡಿ ನಾನು ಹುಟ್ಟಿದ್ದು ಮೂಲಾ ನಕ್ಷತ್ರದಲ್ಲಿ ಎಂದು ತಿಳಿದಾಗ ಎಲ್ಲರಿಗೂ ಭಯವೆನಿಸಿತ್ತಂತೆ. ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಮಗುವಿನ ತಂದೆ ತಾಯಿಗಳಿಗೆ ಗಂಡಾಂತರವಿರುತ್ತದೆಂದು, ಅಂತಹ ಮಗುವನ್ನು ಬೇರೆಯವರಿಗೆ ದತ್ತಕ ಕೊಡುವ ರೂಢಿಯಿತ್ತು. ಅಂತೆಯೇ ನನ್ನನ್ನು ಮಠಕ್ಕೆ ಕೊಡಬೇಕೆಂದು ನಿರ್ಣಯಿಸಿದಾಗ ನನ್ನ ತಾಯಿಯು ಒಪ್ಪದೆ, ಒಂದೇ ಸಮನೆ ಅಳಹತ್ತಿದಳಂತೆ. ಕೊನೆಗೆ ನಮ್ಮ ಗುರುಗಳು, 'ಆಗಲಿ. ನಮ್ಮ ಮರಿಯಾಗಿ ನಿಮ್ಮಲ್ಲಿಯೇ ಇರಲಿ' ಎಂದು ಹೇಳಿದಾಗ ನನ್ನ ತಾಯಿಗೆ ಸಮಾಧಾನವಾಯಿತಂತೆ. ಅಂತೆಯೇ ನನ್ನನ್ನು ಯಥಾವಿಧಿ ಗುರುಗಳ ಉಡಿಯಲ್ಲಿಟ್ಟರೂ ನಾನು ನಮ್ಮ ಮನೆಯಲ್ಲಿಯೇ ಉಳಿದೆ. ಎಲ್ಲರೂ ನನ್ನನ್ನು ತಾತ್ಸಾರ ಮಾಡುತ್ತಿದ್ದರೂ ನಾನು ತಾಯಿಯ ತೋಳ ತೆಕ್ಕೆಯಲ್ಲಿ ಸ್ವರ್ಗದ ಸುಖವನ್ನೇ ಅನುಭವಿಸುತ್ತಿದ್ದೆ. ಯಾರಿಗೂ ಬೇಡಾದ ಹುಡುಗನ ಮೇಲೆ ತಾಯಿಯು ಹೆಚ್ಚಿನ ಪ್ರೀತಿ ತೋರುತ್ತಾಳೆ. ತಾಯಿಯ ನಿರ್ವ್ಯಾಜ, ನಿರ್ದುಷ್ಟವಾದ ಪ್ರೇಮಕ್ಕೆ ಸರಿತೂಗುವಂತಹುದು ಇನ್ನಾವುದೂ ಇಲ್ಲ, ಈ ಜಗತ್ತಿನಲ್ಲಿ. ತಾಯಿಯ ಋಣ ಎಂತಹುದೆಂದರೆ ಆದಿ ಶಂಕರಾಚಾರ್ಯರು ಸನ್ಯಾಸವನ್ನು ಸ್ವೀಕರಿಸಿದ ನಂತರ ಕೂಡ ತಾಯಿಯ ದಹನ ಕ್ರಿಯೆ ಮಾಡಲು ಹಿಂಜರಿಯಲಿಲ್ಲ. ತಾಯಿಯ ಮಹತಿಯನ್ನು ಕುರಿತಾದ 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ' ಎಂಬ ಅವರ ಉಕ್ತಿಯನ್ನು ನಾನು ಯಾವಾಗಲೂ ಸ್ಮರಿಸುತ್ತಿರುತ್ತೇನೆ.

ನನಗೆ ಸಾಧಾರಣ ಐದಾರು ವರ್ಷ ಎನ್ನುವಾಗ ಮನಸೂರದಲ್ಲಿಯ ಗಾಂವಟಿ ಶಾಲೆಗೆ ಹಾಕಿದರು. ಆ ಶಾಲೆ ಆ ಕಾಲದ ಇತರ ಶಾಲೆಗಳಂತೆಯೇ ಇತ್ತು. ಜ್ಞಾನದ ಬೆಳಕಂತಿರಲಿ, ಸೂರ್ಯನ ಬೆಳಕೂ ಒಳಗೆ ಬರುವಂತಿರಲಿಲ್ಲ. ಶಾಲೆಯ ವಾತಾವರಣ, ಗಂಭೀರ ಅಷ್ಟೇ ಅಲ್ಲ; ನಿಷ್ಠುರ ಮತ್ತು ಭಯಪ್ರದವಾಗಿರಬೇಕೆಂದು ಅಂದಿನ ಶಿಕ್ಷಣ ತಜ್ಞರ ಧೋರಣೆ ಇದ್ದಿರಬೇಕು. ಮಕ್ಕಳು ಮನಸ್ಸಿಲ್ಲದೆಯೇ ಶಾಲೆಗೆ ಹೋಗಬೇಕಾಗಿತ್ತು. ನಾನು ಪ್ರತಿದಿನ ಶಾಲೆಗೆ ಹೋಗಿ ದಿನದ ಪಾಠಗಳನ್ನು ವಿದ್ಯಾರ್ಜನೆಯ ಪ್ರೀತಿಗಿಂತ ಹೆಚ್ಚಾಗಿ ಮಾಸ್ತರರ ಭೀತಿಯಿಂದಲೇ ಮಾಡುತ್ತಿದ್ದೆ. ನಾನು ಕನ್ನಡ ಎರಡನೇ ವರ್ಗದಲ್ಲಿ ಕಲಿಯುತ್ತಿರುವಾಗ ನಮ್ಮ ತಂದೆಯವರು ನಮ್ಮೂರಿಗೆ ಅಪ್ಪಯ್ಯ ಸ್ವಾಮಿ ಎಂಬ ಸಂಗೀತಗಾರನನ್ನು ಕರೆತಂದರು. ಅಪ್ಪಯ್ಯ ಸ್ವಾಮಿಗಳು ರಬಕವಿ ಊರವರು. ತಂಜಾವೂರಿಗೆ ಹೋಗಿ ಕರ್ನಾಟಕ ಸಂಗೀತವನ್ನು ಕಲಿತು ಬಂದಿದ್ದರಂತೆ. ಅವರು ನಮ್ಮೂರಿನ ಎಳೆಯ ಮಕ್ಕಳನ್ನು ಕಲೆ ಹಾಕಿ

10th_Kannada_Reader1-5.indd 190 03-04-2019 14:08:04

ಅವರಿಗೆ 'ಸೈರಂಧ್ರಿ' ನಾಟಕ ಕಲಿಸತೊಡಗಿದರು. ಈ ನಾಟಕದಲ್ಲಿ ನನ್ನ ಅಣ್ಣ ಬಸವರಾಜನಿಗೆ ಸೈರಂಧ್ರಿಯ ಪಾತ್ರ ಕೊಡಲಾಗಿತ್ತು. ಅಣ್ಣನಿಗೆ ಪ್ರತಿದಿನ ಸಾಯಂಕಾಲ ನಾಟಕದ ಪದಗಳನ್ನು ಕಲಿಸುವಾಗ ನಾನೂ ಜೊತೆಗೆ ಹೋಗಿ ಕೂಡುತ್ತಿದ್ದೆ. ಅಪ್ಪಯ್ಯ ಸ್ವಾಮಿಗಳ ಕಂಠ ಮಧುರವಾಗಿತ್ತು. ಅವರು ಹಾಡುವಾಗ ಇದ್ದಕ್ಕಿದ್ದಂತೆ ನನ್ನ ಕಣ್ಣುಗಳು ಹನಿಗೂಡುತ್ತಿದ್ದವು. ಮನೆಗೆಲಸ ಮುಗಿಸಿ ತಾಯಿಯು ರಾತ್ರಿ ಭಜನೆಯನ್ನೋ, ಗೀತವನ್ನೋ ಹಾಡುವಾಗಲೂ ನನ್ನ ಹೃದಯದಲ್ಲಿ ಏನೋ ಒಂದು ವಿಚಿತ್ರವಾದ ಮಧುರ ವೇದನೆಯ ಅನುಭವವಾಗುತ್ತಿತ್ತು. ಕರೆವ್ವನ ಗುಡಿಯಲ್ಲಿ ಗಂಟೆ ಮೊಳಗಿದಾಗ ನನ್ನ ಅಂತರಾಳದಲ್ಲಿ ಅದು ಮಾರ್ದನಿಗೆಯ್ಯುವಂತೆನಿಸುತ್ತಿತ್ತು. ಹೀಗೆ ಬಾಲ್ಯದಲ್ಲಿಯೇ ನನ್ನ ಮನಸ್ಸಿನಲ್ಲಿ ಹೊಕ್ಕು ನೆಲೆಸಿತ್ತು ಸಂಗೀತದ ಬೀಜ.

ಕೃತಿ ಕರ್ತೃ ಪರಿಚಯ



ಮಲ್ಲಿಕಾರ್ಜುನ ಮನಸೂರ

ಸಂಗೀತ ಕಲೆ ಎಂಬುದು ಅತ್ಯಂತ ಆಕರ್ಷಕವಾದ ಹಾಗೂ ಹೃದಯಂಗಮವಾದ ಕಲೆ. ಮನಸ್ಸನ್ನು ಸೆಳೆಯುವ ಅದ್ಭುತ ಶಕ್ತಿ ಸಂಗೀತಕ್ಕಿದೆ. ಸಂಗೀತವು ನಮ್ಮನ್ನು ಮೈಮರೆಸುವಂತೆ ಮಾಡುವ ಅಪೂರ್ವ ಶಕ್ತಿಯನ್ನೂ ಹೊಂದಿದೆ. ಭಾರತೀಯ ಸಂಗೀತ ಲೋಕದಲ್ಲಿ ಹಿಂದೂಸ್ತಾನಿ ಸಂಗೀತ ಪ್ರಕಾರಕ್ಕೆ ಪ್ರತ್ಯೇಕ ಸ್ಥಾನವಿದೆ. ಹಿಂದೂಸ್ತಾನಿ ಸಂಗೀತಗಾರರಲ್ಲಿ ಮಲ್ಲಿಕಾರ್ಜುನ ಮನಸೂರರ ಹೆಸರು ಅಜರಾಮರವಾದುದು. ಮಲ್ಲಿಕಾರ್ಜುನ ಮನಸೂರ ಅವರು ಹಿಂದೂಸ್ತಾನಿ ಸಂಗೀತದ ಲೋಕವಿಖ್ಯಾತ ಸಂಗೀತಗಾರರು. ಜನ್ಮಗ್ರಾಮ – ಧಾರವಾಡ ಜಿಲ್ಲೆಯ ಮನಸೂರ. ತಂದೆ –ಭೀಮರಾಯಪ್ಪ. ತಾಯಿ – ನೀಲಮ್ಮ. ಜನನ – 1911, ಡಿಸೆಂಬರ್ 31. ಮೀರಜ್‌ನ ನೀಲಕಂಠ ಬುವಾ, ಮಂಜೀಖಾನ ಹಾಗೂ ಬುರ್ಜೀಖಾನ – ಇವರು ಮನಸೂರರಿಗೆ ಸಂಗೀತ ಕಲಿಸಿದ ಗುರುಗಳು. ಈ ಮೂಲಕ ಮನಸೂರ ಅವರು ಜೈಪುರ ಘರಾಣೆಯ ಹಿಂದೂಸ್ತಾನಿ ಸಂಗೀತದ ಸಾಮ್ರಾಟರೆನಿಸಿದರು. ಈ ಘರಾಣೆಯ ಹಲವಾರು ಹೊಸ ರಾಗ ರಚನೆ ಮಾಡಿದ ಶ್ರೇಯಸ್ಸು ಇವರದಾಗಿದೆ. ಇವರ ಸಂಗೀತದ ಆರಾಧನೆ ವೈಶಿಷ್ಟ್ಯಪೂರ್ಣವಾದುದಾಗಿತ್ತು. ಸಂಗೀತವನ್ನು ತಪಸ್ಸಿನಂತೆ ಪರಿಪಾಲಿಸಿಕೊಂಡು ಬಂದರು. ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಸೇವೆ, ಮಾಡಿದ ಸಾಧನೆ, ನೀಡಿದ ಕೊಡುಗೆಗಳೂ ಅಪಾರ. ಮನಸೂರರು 1992, ಡಿಸೆಂಬರ್ 12ರಂದು ನಿಧನರಾದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಸಂಗೀತ–ನಾಟಕ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ, ಪದ್ಮಭೂಷಣ ಪ್ರಶಸ್ತಿ, ದೇಶಿಕೋತ್ತಮ ಗೌರವ ಪದವಿ, ಕಾಳಿದಾಸ ಸಮ್ಮಾನ್, ಪ್ರೊಫೆಸರ್–ಎಮಿರಟಸ್, ಪದ್ಮವಿಭೂಷಣ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಕರ್ನಾಟಕ ವಿಶ್ವವಿದ್ಯಾಲಯವು ಇವರ ಜನ್ಮದಿನಾಚರಣೆಯನ್ನು, 'ಸಂಗೀತಜ್ಞರ ದಿನಾಚರಣೆ'ಯೆಂದು ಪ್ರತಿವರ್ಷವೂ ಆಚರಿಸುತ್ತಿದೆ.

ಪ್ರಸ್ತುತ ಗದ್ಯಭಾಗವನ್ನು ಮಲ್ಲಿಕಾರ್ಜುನ ಮನಸೂರರ 'ನನ್ನ ರಸಯಾತ್ರೆ' ಎನ್ನುವ ಆತ್ಮಚರಿತ್ರೆಯಿಂದ ಆಯ್ದುಕೊಳ್ಳಲಾಗಿದೆ.

ಪದಗಳ ಅರ್ಥ

ಎರಿಹೆಕ್ಕಲ–ಫಲವತ್ತಾದ ಕಪ್ಪುಮಣ್ಣಿನ ಭೂಮಿ; ವಲಸೆ–ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿ ನೆಲೆಸುವುದು; ಫಸಲು–ಬೆಳೆ; ಅಧಿಕಾಂಶ–ಹೆಚ್ಚಿನ ಭಾಗ(ಪಾಲು); ಇನಾಮದಾರ–ಸೇವೆಯ ಪ್ರತಿಫಲವಾಗಿ ಭೂಮಿಯನ್ನು ಅರಸರಿಂದ ಬಹುಮಾನವಾಗಿ ಪಡೆದವ; ಕಾರ್ಪಣ್ಯ–ಬಡತನ; ಪಡಸಾಲೆ–ಮನೆಯ ಮುಂದಿನ ಹಜಾರ, ಮೊಗಸಾಲೆ; ಹಕ್ಕೆ–ದನದ ಹಟ್ಟಿ, ಕೊಟ್ಟಿಗೆ; ಪೀಳಿಗೆ–ತಲೆಮಾರು; ಖಾಸಾ–ಸ್ವಂತ, ಹತ್ತಿರದ; ಮೇಳ–

10th_Kannada_Reader1-5.indd 191 03-04-2019 14:08:04

ಕಲಾವಿದರ ತಂಡ; ಕಂಠಗತ–ಬಾಯಿಪಾಠ; ಉಕ್ತಿ–ಮಾತು; ಹೂಡು–ಆರಂಭಿಸು; ಜಂಗಮ–ವೀರಶೈವ ಧರ್ಮ ಗುರು; ಗ್ರಹಿಸು–ಸ್ವೀಕರಿಸು; ಮರಿ–ಶಿಷ್ಯ; ಯಥಾವಿಧಿ–ಅದೇ ರೀತಿ; ಉಡಿ–ಆಶ್ರಯ; ತಾತ್ಸಾರ–ಉಪೇಕ್ಷೆ, ತಿರಸ್ಕಾರ; ನಿರ್ವ್ಯಾಜ–ನಿರ್ಮಲ, ನಿಷ್ಕಪಟ; ನಿರ್ದುಷ್ಟ–ಪರಿಶುದ್ಧವಾದ; ದಹನಕ್ರಿಯೆ–ಸುಡುವುದು, ಅಂತ್ಯಸಂಸ್ಕಾರ; 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ'–ದುಷ್ಟ ಮಗ ಹುಟ್ಟಬಹುದು, ಆದರೆ ದುಷ್ಟ ತಾಯಿ ಇರುವುದು ಎಂದಿಗೂ ಸಾಧ್ಯವಿಲ್ಲ; ಗಾಂವಟಿ–ಗ್ರಾಮದ ಶಾಲೆ, ಹಳ್ಳಿಯ ಶಾಲೆ; ರಬಕವಿ–ಬಾಗಲಕೋಟ ಜಿಲ್ಲೆಯ ಜಮಖಂಡಿ ಜಿಲ್ಲೆಯಲ್ಲಿರುವ ಒಂದು ಗ್ರಾಮ; ಕಲೆ ಹಾಕು–ಒಂದೆಡೆ ಸೇರಿಸು; ಸೈರಂಧ್ರಿ–ದ್ರೌಪದಿ(ಬೇರೆಯವರ ಮನೆಯಲ್ಲಿ ಕೆಲಸ ಮಾಡುವವಳು, ಪಾಂಡವರ ಅಜ್ಞಾತ ವಾಸ ಕಾಲದಲ್ಲಿ ದ್ರೌಪದಿ ವಿರಾಟ ರಾಜನ ಪತ್ನಿಯ ಬಳಿ ಸೈರಂಧ್ರಿಯಾಗಿ ಕೆಲಸ ಮಾಡುತ್ತಿದ್ದಳು); ಪದ–ಹಾಡು; ವೇದನೆ–ನೋವು, ಸಂಕಟ; ಕರೆವ್ವ–ಗ್ರಾಮದೇವತೆಯ ಹೆಸರು; ಅಂತರಾಳ–ಅಂತರಂಗ; ಮಾರ್ದನಿ–ಪ್ರತಿಧ್ವನಿ; ಹೊಗು–ಪ್ರವೇಶಿಸು; ನೆಲೆಸು–ವಾಸವಾಗಿರು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಲ್ಲಿಕಾರ್ಜುನ ಮನಸೂರ ಅವರ ಪೂರ್ವಜರು ಎಲ್ಲಿಯವರು ?
2. ಮನಸೂರರ ಮನೆತನಕ್ಕೆ ಇದ್ದ ಹೆಸರು ಯಾವುದು ?
3. ಮನಸೂರರ ತಂದೆಯವರ ಆಸಕ್ತಿಗಳು ಯಾವುವು
4. ಮಲ್ಲಿಕಾರ್ಜುನ ಮನಸೂರರ ತಂದೆ–ತಾಯಿಯರ ಹೆಸರೇನು ?
5. ಮನಸೂರರ ತಾಯಿ ಹಾಡುತ್ತಿದ್ದ ಹಾಡುಗಳು ಯಾವುವು ?
6. ಮನಸೂರ ಗ್ರಾಮದಲ್ಲಿ ಮಲ್ಲಿಕಾರ್ಜುನ ಮನಸೂರರ ಮನೆ ಎಲ್ಲಿತ್ತು ?
7. ಮನಸೂರರ ಸಂಗೀತ ಗುರುಗಳು ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಮನಸೂರರ ಹಿರಿಯರು ಸಾಗಿಸಿದ ಜೀವನದ ರೀತಿ ಎಂತಹುದು ?
2. ತಾಯಿಯ ಮಮತೆಯ ಬಗೆಗೆ ಮನಸೂರರು ವ್ಯಕ್ತ ಪಡಿಸಿರುವ ಗೌರವ ಭಾವನೆಗಳೇನು ?
3. ಮನಸೂರರ ಅಣ್ಣತಮ್ಮಂದಿರಿಗೆ ಅಜ್ಜಂದಿರ ಹೆಸರನ್ನೇ ಏಕೆ ಇಡಲಾಯಿತು?
4. ಮನಸೂರರಿಗೆ ದೊರೆತ ಕೆಲವು ಮುಖ್ಯ ಪ್ರಶಸ್ತಿಗಳನ್ನು ತಿಳಿಸಿ ?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. ಬಾಲ್ಯದಲ್ಲಿ ಮನಸೂರರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಂಗೀತ ಪರಿಸರವನ್ನು ವಿವರಿಸಿ.

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**
   ಪಶ್ಚಿಮ, ಗ್ರಾಮ, ಶತ, ಕಂಠ, ತಂದೆ, ತಾಯಿ, ಉಕ್ತಿ.
2. **ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**
   ಹಳೆ, ಆಸಕ್ತಿ, ಸ್ವರ್ಗ, ಸುಖ, ಕೆಳಗೆ, ಅವಶ್ಯಕ, ಒಳಗೆ, ಹಿಂದೆ, ಬೆಳಕು.
3. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
   ಹನಿಗೂಡು, ವಿದ್ಯಾರ್ಜನೆ, ವರ್ಷಾನುವರ್ಷ, ಅಧಿಕಾಂಶ, ಆದರಾತಿಥ್ಯ.
4. **ಕೆಳಗಿನ ಪದಗಳ ತತ್ಸಮ–ತದ್ಭವಗಳನ್ನು ಬರೆಯಿರಿ.**
   ಋಣ, ಸ್ವರ್ಗ, ವರ್ಷ, ವಿದ್ಯೆ.
5. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**
   ನೆರೆಹೊರೆ, ಸ್ವರ್ಗಸುಖ, ತೋಳತೆಕ್ಕೆ, ಕಣ್ಣು ಹನಿಗೂಡು, ಕಲೆಹಾಕು, ಸರಿದೂಗು, ತಾತ್ಸಾರ ಮಾಡು.

ಚಟುವಟಿಕೆ

1. ಮಲ್ಲಿಕಾರ್ಜುನ ಮನಸೂರರ ಧ್ವನಿಮುದ್ರಿಕೆಗಳನ್ನು ಕೇಳುವುದು.
2. ನಮ್ಮ ರಾಜ್ಯದ ಪ್ರಮುಖ ಸಂಗೀತಗಾರರ ಹೆಸರುಗಳನ್ನು ಪಟ್ಟಿ ಮಾಡಿರಿ.
3. ನಾಡಿನ ಸುಪ್ರಸಿದ್ಧ ಸಂಗೀತಗಾರರ ಭಾವಚಿತ್ರಗಳನ್ನು ಸಂಗ್ರಹಿಸಿ.
4. ಕಲಾವಿದರ 'ಆತ್ಮ ಚರಿತ್ರೆ'ಗಳನ್ನು ಓದಿರಿ.
5. ನಿಮ್ಮ ಅಜ್ಜ ಅಜ್ಜಿ, ಮುತ್ತಜ್ಜ–ಮುತ್ತಜ್ಜಿಯರ ಹೆಸರುಗಳನ್ನು ಕೇಳಿ ತಿಳಿದುಕೊಳ್ಳಿರಿ.

10th_Kannada_Reader1-5.indd 192 03-04-2019 14:08:04

ವ್ಯಾಕರಣ

ಘಟಕ ಒಂಬತ್ತು

ಗಾದೆಗಳು – ಒಗಟುಗಳು – ಭಾವಾರ್ಥ

ಗಾದೆಗಳು, ನಾಣ್ನುಡಿ, ನಾಡ ನುಡಿ, ಲೋಕೋಕ್ತಿಗಳೆಂತಲೂ ಪ್ರಸಿದ್ಧವಾಗಿವೆ. ಜನಸಾಮಾನ್ಯರ ಅನುಭವದ ಸಾರವೇ ಗಾದೆಗಳಾಗಿ ರೂಪ ತಾಳಿವೆ. ಸರಳವಾಗಿಯೂ, ಸಂಕ್ಷಿಪ್ತವಾಗಿಯೂ ಪ್ರಾಸಬದ್ಧವಾಗಿರುವ ಗಾದೆಗಳು ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವಂತಹವು. ಗಾದೆಗಳು ಮೇಲ್ನೋಟಕ್ಕೆ ಒಂದು ಅರ್ಥವನ್ನು ನೀಡಿದರೆ, ಅವುಗಳ ಅಂತರಾಳದಲ್ಲಿ ಬೇರೊಂದು ಅರ್ಥ ಅಡಗಿರುತ್ತದೆ. ಆಲೋಚಿಸಿ ಅರ್ಥ ಮಾಡಿಕೊಂಡಂತೆಲ್ಲ ಗಾದೆಗಳ ಸ್ವಾರಸ್ಯ ಹೆಚ್ಚುತ್ತದೆ, ಸಂತೋಷವಾಗುತ್ತದೆ.

ಗಾದೆಗಳನ್ನು ವೇದಕ್ಕೆ ಹೋಲಿಸುವುದಿದೆ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನಾಣ್ನುಡಿಯೂ ಇದೆ. ಆಡುಮಾತುಗಳಲ್ಲಿಯೂ, ಉಪನ್ಯಾಸಗಳಲ್ಲಿಯೂ ಲೇಖನಗಳಲ್ಲಿಯೂ ಗಾದೆಗಳ ಪ್ರಯೋಗ, ಅವುಗಳ ಸ್ವಾರಸ್ಯವನ್ನು ಹೆಚ್ಚಿಸುತ್ತದೆ.

ಗಾದೆಗಳ ಹುಟ್ಟು ಹೇಗಾಯಿತೆಂದು ನಿರ್ಧಾರ ಮಾಡಲು ಸರಿಯಾದ ಆಧಾರಗಳಿಲ್ಲ. ಜನಪದ ಸಾಹಿತ್ಯ ಸೃಷ್ಟಿಯಾದಂತೆಯೇ ಜನರ ಅನುಭವ ಈ ಬಗೆಯ ಲೋಕೋಕ್ತಿಗಳ ರೂಪದಲ್ಲಿ ಹೊರಹೊಮ್ಮಿರಬೇಕು ಎನ್ನಿಸುತ್ತದೆ.

ಬದುಕಿನ ಎಲ್ಲ ವಿಚಾರಗಳಿಗೂ ಮಾರ್ಗದರ್ಶನ ಮಾಡುವ ಅಸಂಖ್ಯಾತ ಗಾದೆಗಳಿವೆ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವುದು ಕೂಡ ಒಂದು ಗಾದೆಯೇ. ಗಾದೆಗಳು ಹೇಳದ ವಿಚಾರಗಳೇ ಇಲ್ಲ ಎನ್ನಬಹುದು. ಗಾದೆಗಳಲ್ಲಿ ನೇರವಾದ ನುಡಿಗಳುಳ್ಳವು, ಹೋಲಿಕೆಗಳುಳ್ಳವು, ಪುರಾಣ ಪ್ರಸಂಗಗಳನ್ನು ಅವಲಂಬಿಸಿರುವುಗಳು, ನೀತಿ ನಿರೂಪಿಸುವಂತಹವುಗಳು ಹೀಗೆ ಹಲವು ಬಗೆಗಳಿವೆ.

ಜನಪದರ ವೇದಗಳೆಂದೇ ಹೆಸರಾದ ಅನುಭವದ ನುಡಿಗಳು ಇವು. 'ಸಿಂಧುವನ್ನು ಬಿಂದುವಿನಲ್ಲಿ ಹಿಡಿದಿಡುವ ಮಹತ್ತರವಾದ ಕಾರ್ಯವನ್ನು ಗಾದೆಗಳು ಮಾಡುತ್ತವೆ'. ಇವು ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿರದೆ ಸಮಷ್ಟಿ ಪ್ರಜ್ಞೆಯನ್ನು ತೋರುತ್ತವೆ. ಗಾದೆಗಳ ಅರ್ಥವನ್ನು ಅರಿತು ಸಾರ್ಥಕ ಅರ್ಥವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ.

ಗಾದೆಗಳನ್ನು ವಿಸ್ತರಿಸಿ ಬರೆಯುವ ವಿಧಾನ

ಗಾದೆಗಳನ್ನು ಎರಡು ಅಥವಾ ಮೂರು ಬಾರಿ ಓದಿ ಅದರ ವಾಚ್ಯಾರ್ಥವನ್ನು ಮೊದಲು ತಿಳಿದುಕೊಳ್ಳಬೇಕು.

ವಾಚ್ಯಾರ್ಥದೊಂದಿಗೆ ಆ ಗಾದೆಯು ಬೇರೆ ಅರ್ಥವನ್ನೂ, ವಿಚಾರವನ್ನೂ ಸೂಚಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಗಾದೆಗಳನ್ನು ಓದಿ ಅರ್ಥವಾದ ವಿಷಯವನ್ನು ಸೂಕ್ತವಾದ ಪದಗಳನ್ನು ಬಳಸಿ ವಾಕ್ಯಗಳ ರೂಪದಲ್ಲಿ ವಿಸ್ತರಿಸಿ ಬರೆಯಬೇಕು. ವಿಚಾರಗಳ ಸರಿಯಾದ ವಿಸ್ತರಣೆ ಮತ್ತು ವಾಕ್ಯ ರಚನಾ ಕ್ರಮಗಳಿಗೆ ಪ್ರಾಶಸ್ತ್ಯವನ್ನೀಯಲಾಗುತ್ತದೆ.

10th_Kannada_Reader1-5.indd 193 03-04-2019 14:08:05

ಗಾದೆಗಳ ವಿಸ್ತರಣೆ

1. ತುಂಬಿದ ಕೊಡ ತುಳುಕುವುದಿಲ್ಲ

ನದಿಯಿಂದ, ಬಾವಿಯಿಂದ ಇಲ್ಲವೇ ನಲ್ಲಿಯಿಂದ ನೀರನ್ನು ಕೊಡದಲ್ಲಿ ತುಂಬಿಕೊಂಡು ತೆಗೆದುಕೊಂಡು ಬರುವಾಗ, ತಲೆಯ ಮೇಲೆ ಹೊತ್ತು ತರುವಾಗ ಈ ಹೇಳಿಕೆಯು ಅನುಭವವಾಗುತ್ತದೆ. ಕೊಡದ ತುಂಬ ನೀರಿದ್ದಾಗ ಅದು ತುಳುಕಾಡುವುದಿಲ್ಲ, ಸದ್ದು ಮಾಡುವುದಿಲ್ಲ. ಆದರೆ ಅರ್ಧ ತುಂಬಿದ ಕೊಡದಲ್ಲಿ ನೀರು ತುಳುಕಾಡುತ್ತದೆ. ಇದು ಸಹಜವಾದುದಾಗಿದೆ.

ಅದೇ ರೀತಿಯಾಗಿ ಅನುಭಾವಿಗಳು ಪಂಡಿತರು, ವಿದ್ಯಾವಂತರು, ಜ್ಞಾನಿಗಳು ಅನಗತ್ಯವಾಗಿ ಮಾತನಾಡುವುದಿಲ್ಲ. ಅಗತ್ಯವಿದ್ದಾಗ ಮಾತ್ರ ತಾವು ಹೇಳಬಯಸುವ ವಿಷಯವನ್ನು ನೇರವಾಗಿ ತಿಳಿಸುತ್ತಾರೆ. ಆದರೆ ಅಲ್ಪ ಜ್ಞಾನವುಳ್ಳವರು, ಅರ್ಧಂಬರ್ಧ ವಿಷಯ ಜ್ಞಾನವುಳ್ಳವರು ತಾವು ಎಲ್ಲವನ್ನೂ ತಿಳಿದ ಮಹಾಪಂಡಿತರೆಂದು ಗರ್ವದಿಂದ ಮೆರೆಯುತ್ತಾರೆ. ಈ ಗಾದೆ ಮಾತಿನಲ್ಲಿ ವಿದ್ಯಾವಂತರಾದವರು ಗಾಂಭೀರ್ಯದಿಂದ ನಡೆದುಕೊಳ್ಳುತ್ತಾರೆಂದೂ, ಅಲ್ಪಜ್ಞಾನಿಗಳು ಅರ್ಧ ತುಂಬಿದ ಕೊಡದಂತೆ ನಡೆದುಕೊಳ್ಳುತ್ತಾರೆಂದೂ ಹೋಲಿಸಲಾಗಿದೆ.

2. ಮನಸ್ಸಿದ್ದರೆ ಮಾರ್ಗ

ಯಾವುದೇ ಕೆಲಸವನ್ನು ಮಾಡಲು ದೃಢವಾದ ನಿರ್ಧಾರ ಬೇಕು. ಇಂತಹ ನಿರ್ಧಾರದಿಂದ ಕೆಲಸವನ್ನು ಸಫಲವಾಗಿ ಮಾಡಬಹುದೆಂದು ಈ ಗಾದೆ ಹೇಳುತ್ತದೆ. ಕೆಲಸ ಮಾಡುವಾಗ ಅದರ ಬಗ್ಗೆ ಆಸಕ್ತಿ, ನಿಷ್ಠೆ ಇದ್ದರೆ ಇನ್ನೂ ಸುಲಭವಾಗಿ ಆ ಕೆಲಸವನ್ನು ಸಾಧಿಸಬಹುದು. 'Where there is a will, there is a way' ಎಂಬ ಆಂಗ್ಲ ಗಾದೆಯೂ ಇದನ್ನೇ ಹೇಳುತ್ತದೆ. ಮನಸ್ಸಿಟ್ಟು ಕೆಲಸ ಮಾಡಿದರೆ ಬೆಟ್ಟವನ್ನೂ ಸಹ ಕುಟ್ಟಿ ಪುಡಿ ಮಾಡಬಹುದು.

3. ಶಕ್ತಿಗಿಂತ ಯುಕ್ತಿಮೇಲು

ದೈಹಿಕ ಶಕ್ತಿಗಿಂತ ಹೆಚ್ಚು ಸಮರ್ಥವಾದುದು ಬುದ್ಧಿಶಕ್ತಿ. ಬೌದ್ಧಿಕ ಸಾಮರ್ಥ್ಯದಿಂದ ಎಂತಹ ಕಷ್ಟಕರ ಸಮಸ್ಯೆಯನ್ನೂ ಸಹ ಸುಲಭವಾಗಿ ಮಾಡಿ ಮುಗಿಸಬಹುದು. ಕಥೆಯೊಂದರಲ್ಲಿ ಬರುವ ಮೊಲವು ತನ್ನ ಬುದ್ಧಿಶಕ್ತಿಯಿಂದ ಬಲಿಷ್ಠ ಸಿಂಹವನ್ನೇ ನಾಶ ಮಾಡಿತು. ಶಕ್ತಿಯಿದ್ದರೂ ಬುದ್ಧಿಯ ಪ್ರಭಾವವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಯುಕ್ತಿಗಿಂತ ಶಕ್ತಿ ಮೇಲು ಎಂಬುದು ಈ ಗಾದೆಯ ಅರ್ಥ.

ಈ ಗಾದೆಗಳನ್ನು ನಿಮ್ಮ ಮಾತುಗಳಲ್ಲಿ ವಿಸ್ತರಿಸಿ ಬರೆಯಿರಿ.

1. ಆಳಾಗ ಬಲ್ಲವನು ಅರಸಾಗ ಬಲ್ಲ
2. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು
3. ಬೆಳ್ಳಗಿರುವುದೆಲ್ಲಾ ಹಾಲಲ್ಲ
4. ಗಾಳಿ ಬಂದಾಗ ತೂರಿಕೋ
5. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ
6. ಆರೋಗ್ಯವೇ ಭಾಗ್ಯ
7. ದೂರದ ಬೆಟ್ಟ ನುಣ್ಣಗೆ
8. ಹಿತ್ತಲ ಗಿಡ ಮದ್ದಲ್ಲ
9. ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ
10. ಕೈಕೆಸರಾದರೆ ಬಾಯಿ ಮೊಸರು
11. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು
12. ಅತಿಯಾಸೆ ಗತಿಗೇಡು
13. ಆಪತ್ತಿಗಾದವನೇ ನಂಟ
14. ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
15. ಹಾಸಿಗೆ ಇದ್ದಷ್ಟು ಕಾಲು ಚಾಚು
16. ದುಡ್ಡೇ ದೊಡ್ಡಪ್ಪ, ವಿದ್ಯೆ ಅವರಪ್ಪ
17. ಕೆಟ್ಟ ಮೇಲೆ ಬುದ್ಧಿ ಬಂತು
18. ಬೆಳೆವ ಸಿರಿ ಮೊಳಕೆಯಲ್ಲಿ
19. ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?
20. ನಾಳೆಯೆಂಬುದು ಹಾಳು
21. ಮಾತು ಬೆಳ್ಳಿ, ಮೌನ ಬಂಗಾರ
22. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ
23. ಸಜ್ಜನರ ಸಂಗ ಹೆಜ್ಜೇನು ಸವಿದಂತೆ
24. ಮಾಡಿದ್ದುಣ್ಣೋ ಮಹರಾಯ

10th_Kannada_Reader1-5.indd 194 03-04-2019 14:08:05

ಒಗಟುಗಳು

ಹಿಂದೆ ಹಳ್ಳಿಗಳಲ್ಲಿ ಅನಕ್ಷರಸ್ಥರಾದವರಿಂದ ಹುಟ್ಟಿ ಪ್ರಚಾರಗೊಂಡ ಸಾಹಿತ್ಯ ಪ್ರಕಾರವೇ ಒಗಟು. ಇದೊಂದು ಜನಪದ ಸಾಹಿತ್ಯದ ಒಂದು ಭಾಗ. ಒಗಟು ಎನ್ನುವ ಪದವು ಒರ್ಕಟ್ಟು, ಒಗ್ಗಟ್ಟು ಎಂಬ ಪದಗಳಿಂದ ಆಗಿದೆ. ಒಗಟು ಎಂಬ ಪದಕ್ಕೆ ಒಗಂಟು, ಒಗಂಟೆ, ಒಗಟೆ ಎಂಬ ರೂಪಗಳೂ ಇವೆ.

ಸುಲಭವಾಗಿ ಹೇಳುವುದಾದರೆ, ಒಗಟು ಎಂದರೆ ಸರಳವಾಗಿ ಉತ್ತರಿಸಲಾಗದಂತಹ ಒಂದು ಜಾಣ ಪ್ರಶ್ನೆಯಾಗಿದೆ. ಇದರಲ್ಲಿನ ಒಂದು ತಮಾಷೆಯೇನೆಂದರೆ ಆ ಒಗಟಿನ ಅರ್ಥ ಅಥವಾ ಉತ್ತರವು ಆ ಒಗಟಿನಲ್ಲಿಯೇ ಇರುತ್ತದೆ. ಅದನ್ನು ಕಂಡು ಹಿಡಿಯುವುದು ನಮ್ಮ ಜಾಣತನವಾಗಿದೆ. ಬುದ್ಧಿ ಚುರುಕಾಗಿದ್ದವರಿಗೆ ಈ ಕ್ರಿಯೆಯು ಹೆಚ್ಚು ಸುಲಭವಾಗಿರುತ್ತದೆ.

ಜನಪದ 'ಬೆಡಗಿನ ಒಗಟು'ಗಳಲ್ಲಿ ಪ್ರಶ್ನೆಗೆ ಉತ್ತರಿಸುವ ಮತ್ತು ಪದ್ಯದಲ್ಲಿಯೇ ಎದುರಾಳಿಗೆ ಮತ್ತೊಂದು ಒಗಟನ್ನು ಒಡ್ಡುವ ಕ್ರಮ ವೈಶಿಷ್ಟ್ಯಪೂರ್ಣವಾದದ್ದು. ಕೊಟ್ಟಿರುವ **ಉದಾಹರಣೆ**ಗಳಿಂದ ಇದನ್ನು ಆಸ್ವಾದಿಸಬಹುದು.

ಒಗಟು 1:

'ಕೈಯುಂಟು ಕಾಲಿಲ್ಲ, ಶಿರ ಹರಿದ ಮುಂಡ
ಮೈಯೊಳಗೆ ನವಗಾಯ ಒಂಬತ್ತು ತುಂಡ
ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ
ರಾಯ ರಾಯರಿಗೆಲ್ಲ ತಾನೇ ಪ್ರಚಂಡ'

ಉತ್ತರ:

'ನೀನು ಹೇಳಿದ ಬೆಡಗು 'ಅಂಗಿ' ಕಾಣಣ್ಣಾ
ನಾನೊಂದ ಬೆಡಗ ಹೇಳುವೆನು ಕೇಳಣ್ಣಾ'

ಒಗಟು 2:

'ಅಂಗೈಯ ಕೊಟ್ಟರೆ ಮುಂಗೈಯ ನುಂಗುವುದು
ಸಿಂಗಳುಕನಲ್ಲ ಶಿವ ಬಲ್ಲ । ಬೆಡಗಿನ
ಜಾಣೆ ಕನ್ನಡವಾ ತಿಳಿದ್ದೇಳೆ !'

ಉತ್ತರ:

'ಕನ್ನಡವ ಹೇಳಲಿಕೆ ಇನ್ನಾವ ಸೋಜಿಗವು
ಪನ್ನಂಧರನಾ ಶಿವ ಬಲ್ಲ । ನ್ಯಾರೋರ
ಕುಪ್ಪಸಲ್ಲವೇನೇ ಹಸೆಯವಳೆ !'

ಒಗಟು 3:

'ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು
ನೀರು ತಾಕಿದರೆ ಮಟಮಾಯ । ಕನ್ನಡದ
ಬೆಡಗೀನ ಜಾಣೆ ತಿಳಿದ್ದೇಳೆ !'

ಉತ್ತರ:

'ಕನ್ನಡವ ಹೇಳಿಲಿಕೆ ಇನ್ನಾವ ಸೋಜಿಗವು
ಪನ್ನಂಧರನಾ ಶಿವ ಬಲ್ಲ । ತಿನ್ನುವ
ಉಪ್ಪಲ್ಲವೇನು ಅರಸರೆ !'

ಒಗಟು 4:

'ಹಿತ್ಲಲ್ಲಿ ಹುಟ್ಟೋದು, ಹೊತ್ತು ನೀರ ಹುಯ್ಯೋದು
ಅದು ಒಂದು ಗಿಡದ ಪರಿಕಾರ । ಎಲೆ ಬಾಲೆ
ಬಾಲೆ ನಮ್ಮರ್ಥ ಒಡೆದ್ದೇಳೆ !'

ಉತ್ತರ:

'ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ । ಮಾಶಿವನೆ
ಹಿತ್ಲವರೆ ಹೂವ ಅರಸೋರು !'

10th_Kannada_Reader1-5.indd 195 03-04-2019 14:08:05

ಒಗಟು 5: ಕೆಸರಲ್ಲಿ ಹುಟ್ಟೋದು, ಕೆಸರಲ್ಲಿ ಬೆಳೆಯೋದು
ಅದು ಒಂದು ಗಿಡದ ಪರಿಕಾರ । ಎಲೆ ಬಾಲೆ
ಬಾಲೆ ನಮ್ಮರ್ಥ ಒಡೆದ್ದೇಳೆ !'

ಉತ್ತರ: 'ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ । ಮಾಶಿವನೆ
ತಾವರೆ ಬೇರ ಅರಸೋರು !'

ಒಗಟು 6: ಬದಿನಲ್ಲಿ ಹುಟ್ಟೋದು, ಬದಿನಲ್ಲಿ ಬೆಳೆಯೋದು
ಹೋಗೋರ ಮುಂಜೆರಗ ಹಿಡಿಯೋದು । ಎಲೆ ಬಾಲೆ
ಬಾಲೆ ಇದರರ್ಥ ಒಡೆದ್ದೇಳೆ !'

ಉತ್ತರ: 'ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ । ಮಾಶಿವನೆ
ಉತ್ತರಾಣಿ ಗಿಡ ಅರಸೋರು !'

ಒಗಟು 7: ಹೊಲದಲ್ಲಿ ಹುಟ್ಟೋದು, ಹೊಲದಲ್ಲಿ ಬೆಳಿಯೋದು
ಉಳುವಾನ ಕಂಡು ನಗುವುದು । ಎಲೆ ಬಾಲೆ
ಬಾಲೆ ನಮ್ಮರ್ಥ ಒಡೆದ್ದೇಳೆ !'

ಉತ್ತರ: 'ನಿಮ್ಮ ಅರ್ಥವು ನಮ್ಮೀಗೆ ತಿಳಿಯಾವು
ನೀವಾಡಿದ ಮಾತು ಹುಸಿಯಲ್ಲ । ಮಾಶಿವನೆ
ಗರಕೇಯ ಹುಲ್ಲು ಅರಸೋರು !'

ಒಗಟು 8: 'ಕಲ್ಲುಲ್ ಕುಕ್ಕೂದಲ್ಲ ನೀರಲ್ ಸೆಳೆವುದಲ್ಲ
ಎಲ್ಲೆಲ್ಲೂ ಕಂಡ್ರೂ ಮಡಿ ವಸ್ತ್ರ । ಅಂಬಲ್ ಹಾಡು
ಜಾಣೆ ಕನ್ನಡವ ತಿಳಿದ್ದೇಳು'

ಉತ್ತರ: 'ಕನ್ನಡದ ಹಾಡನ್ನು ಹನ್ನೆಯ್ಡ ನಾಬಲ್ಲಿ
ಕನ್ನಡವ ಶಿವನ ಪದನವು । ಅಂಬಲ್ ಹಾಡು
ಕೊಕ್ಕುಕ್ಕಿ ಮೇಲೆ ಅರ್ತುಂಟಾ?'

ಒಗಟು 9: 'ತಂದಿ ಮದಿಗ್ಹೋಪ್ದಲ್ಲ ತಾಯ್ಮನಿಗೆ ಹೋಪ್ದಲ್ಲ
ಮುಂದದು ದಾರಿ ಮೂರುತಕ । ಅಂಬಲ್ ಹಾಡು
ಜಾಣೆ ಕನ್ನಡವ ತಿಳಿದ್ದೇಳು'

ಉತ್ತರ: 'ಕನ್ನಡದ ಹಾಡನ್ನು ಹನ್ನೆಯ್ಡ ನಾಬಲ್ಲಿ
ಕನ್ನಡವ ಶಿವನ ಪದನವು । ಅಂಬಲ್ ಹಾಡು
ಸಂಪ್ಗಿ ಹೂವಿನ ಮುಂದೆ ಅರ್ತುಂಟಾ?'

ಒಗಟು 10: 'ದರಿಯ ಮ್ಯಾಲ್ ಹುಟ್ಟುವುದು ದೊರಿಯಾಗಿ ಬೆಳೆವುದು
ಅರಮನೆಗುತ್ತರವ ಕೊಡುವುದು । ಅಂಬಲ್ ಹಾಡು
ಜಾಣೆ ಕನ್ನಡವ ತಿಳಿದ್ದೇಳು'

ಉತ್ತರ: 'ಕನ್ನಡದ ಹಾಡನ್ನು ಹನ್ನೆಯ್ಡ ನಾಬಲ್ಲಿ
ಕನ್ನಡವ ಶಿವನ ಪದನವು । ಅಂಬಲ್ ಹಾಡು
ಹನಿಮರನಲ್ದೆ ಅರ್ತುಂಟಾ?'

10th_Kannada_Reader1-5.indd 196 03-04-2019 14:08:05

ಒಗಟು 11: 'ಹಸಿಹಸಿಯ ಬೀಳೆ ಮಸಿಯ ಬಣ್ಣದ ಬೀಳೆ
ಬಿಸಿನೀರ ಹಾಕಿ ಸಲಗುವಿ । ಅಂಬಲ್ ಹಾಡು
ಜಾಣೆ ಕನ್ನಡವ ತಿಳಿದ್ದೇಳು'

ಉತ್ತರ: 'ಕನ್ನಡದ ಹಾಡನ್ನು ಹನ್ನೆಯ್ಡ ನಾಬಲ್ಲಿ
ಕನ್ನಡವ ಶಿವನ ಪದನವು । ಅಂಬಲ್ ಹಾಡು
ತಲೆಕುರ್ಲಲ್ದೆ ಅರ್ತುಂಟಾ?"

ಒಗಟು 12: 'ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು
ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ
ಕೈಗೆ ಹಲ್‌ಮುರ್ದು ಕೊಡುವೆನು'

ಉತ್ತರ: 'ಕನ್ನಡದ ಹಾಡನ್ನು ಹನ್ನೆಯ್ಡ ನಾಬಲ್ಲಿ
ಕನ್ನಡವ ಶಿವನ ಪದನವು । ಅಂಬಲ್ ಹಾಡು
ಬೀಸು ಕಲ್ಲಲ್ದೆ ಅರ್ತುಂಟಾ?'

ಭಾವಾರ್ಥ

ಕವಿಯ ಭಾವನೆ ಮತ್ತು ಕವನದ ಆಶಯದ ಚೌಕಟ್ಟಿನಲ್ಲಿ ಒಂದು ಪದ್ಯಕ್ಕೂ ಅಥವಾ ಪದ್ಯ ಭಾಗಕ್ಕೂ ಅರ್ಥವನ್ನು ಬರೆಯುವ ಒಂದು ಸಾಹಿತ್ಯಕ ವಿಧಾನವೇ ಭಾವಾರ್ಥ ಅಥವಾ ಸಾರಾಂಶವೆಂದು ಸಂಕ್ಷಿಪ್ತವಾಗಿ ಹೇಳಬಹುದು.

1. ಉದಾಹರಣೆ :

ಹೆಸರು ಹೆಸರೆಂಬುದೇ ಕಸುರು ಬೀಸುವ ಗಾಳಿ
ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ ?
ಶಿಶುವಾಗು ನೀಂ ಮನದಿ ಹಸುವಾಗು, ಸಸಿಯಾಗು
ಕಸಬೊರಕೆಯಾಗಿಳೆಗೆ ಮಂಕುತಿಮ್ಮ ||

ಹೆಸರು ಗಳಿಸಲು ಮಾನವನು ಹವಣಿಸುವುದು ಸಹಜ. ಆದರೆ ಹೆಸರು ಗಳಿಸಲೆಂದೇ ಜೀವಿಸುವುದು ತರವಲ್ಲ. ದಾರ್ಶನಿಕರಾದ ಡಿ.ವಿ.ಜಿ.ಯವರು ಹೆಸರೆಂಬುದು ಕಸದಿಂದ ಬೀಸುವ ದುರ್ಗಂಧದಂತೆ. ಬ್ರಹ್ಮದೇವನು ರಚಿಸಿರುವ ಈ ಲೋಕದಲ್ಲಿ ವ್ಯಕ್ತಿಗೇಕೆ ಬೇಕು ಪ್ರತ್ಯೇಕವಾದ ಗುರುತು. ಎಳೆಯ ಮಗುವಿನಂತೆಯೂ, ಮನದಲ್ಲಿ ಹಸುವಿನಂತೆಯೂ, ನೆರಳು ಕೊಡುವ ಸಸಿ ಯಾವುದೇ ಅಪೇಕ್ಷೆಯಿಲ್ಲದೆ ಹೇಗೆ ಜನತೆಗೆ ಸೇವೆ ಸಲ್ಲಿಸುತ್ತದೆಯೋ ಹಾಗೆ ನೀನು ನಿಸ್ವಾರ್ಥನಾಗಿಯೂ ಸೇವೆ ಸಲ್ಲಿಸು. ಈ ಭೂಮಿಯ ಕಸವನ್ನು ಗುಡಿಸಿ ಶುಭ್ರಗೊಳಿಸುವ ಪೊರಕೆಯಾಗು ಎಂಬುದಾಗಿ ಇಲ್ಲಿ ತಿಳಿಸಿದ್ದಾರೆ.

2. ಉದಾಹರಣೆ :

ಸುತ್ತಿ ಸುತ್ತಿ ಬಂದಡಿಲ್ಲ
ಲಕ್ಷ ಗಂಗೆಯ ಮಿಂದಡಿಲ್ಲ
ತುಟ್ಟ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ
ನಿತ್ಯ ನೇಮದಿಂದ ತನುವ ಮುಟ್ಟಿಕೊಂಡಡಿಲ್ಲ
ನಿಚ್ಚಕ್ಕೆ ನಿಚ್ಚ ನೆನೆವ ಮನವ
ಅಂದಂದಿಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲೊಡೆ
ಬಚ್ಚಬಟೆಯ ಬೆಳಗು ಗುಹೇಶ್ವರಲಿಂಗವು

10th_Kannada_Reader1-5.indd 197 03-04-2019 14:08:05

ಅನುಭವ ಮಂಟಪದ ಅಧ್ಯಕ್ಷನೂ ಶೂನ್ಯ ಸಿಂಹಾಸನಾಧೀಶನೂ ಆದ ಅಲ್ಲಮ ಪ್ರಭು ಮಹಾ ಅನುಭಾವಿ ಹಾಗೂ ವಿಚಾರವಾದಿ. ಈ ವಚನದಲ್ಲಿ ಭಗವಂತ ಹಾಗೂ ಭಕ್ತನ ನಡುವಿನ ಸಂಬಂಧವನ್ನು ವಿವರಿಸುತ್ತಾ ದೇಗುಲಗಳನ್ನು ಸುತ್ತಿ ಸುತ್ತಿ ಬಂದರೂ, ಲಕ್ಷ ಬಾರಿ ಗಂಗಾನದಿಯಲ್ಲಿ ಮಿಂದರೂ, ಮೇರು ಪರ್ವತದ ತುದಿಯಲ್ಲಿ ನಿಂತು ದೇವರನ್ನು ಮೆಚ್ಚಿ ಕೂಗಿದರೂ ಯಾವ ಪ್ರಯೋಜನವಾಗದು ಎನ್ನುತ್ತಾನೆ. ನಿತ್ಯವೂ ನಿಯಮಬದ್ಧವಾಗಿದ್ದು, ತನ್ನ ದೇಹವನ್ನು ಶುಚಿಯಾಗಿಟ್ಟು ಕೊಳ್ಳುವುದರಿಂದ ಮಾತ್ರ ಪ್ರಯೋಜನವಾಗದು. ಅಂದರೆ, ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗದು. ಯಾರು ಚಂಚಲವಾದ ಮನಸ್ಸನ್ನು ಏಕಾಗ್ರತೆಯಿಂದ ಒಂದೆಡೆ ಕೇಂದ್ರೀಕರಿಸಿ ತನ್ನ ದೃಷ್ಟಿಗೆಟುಕದ ಶಕ್ತಿಯನ್ನು ಕಾಣಲು ಅಣಿಯಾಗುತ್ತಾನೆಯೋ ಅವನೇ ನಿಜ ಭಕ್ತನು. ಅಂತಹವನ ಮನೋವಿಕಾರಗಳೆಲ್ಲವೂ ನಶಿಸಿ ಭಗವಂತನ ಸಾಕ್ಷಾತ್ಕಾರಕ್ಕೆ ಪಾತ್ರನಾಗುತ್ತಾನೆಂದು ಅಲ್ಲಮಪ್ರಭು ಇಲ್ಲಿ ತಿಳಿಸುತ್ತಾನೆ.

10th_Kannada_Reader1-5.indd 198 03-04-2019 14:08:05

ಘಟಕ
ಹತ್ತು

ಮಾನವೀಯತೆ



ಕಾವ್ಯ ಕಣಜ	: ನಾವೆಲ್ಲರೂ ಒಂದೇ ಜಾತಿ	– ಎಂ. ಗೋಪಾಲಕೃಷ್ಣ ಅಡಿಗ
ಗದ್ಯ ವಿಹಾರ	: ಬೂಟ್ ಪಾಲಿಷ್	– ಬಸವರಾಜ ಕಟ್ಟೀಮನಿ
ಉಪಪಠ್ಯ	: ತ್ಯಾಗಮಯಿ	– ಎಚ್.ಜೆ. ಲಕ್ಕಪ್ಪಗೌಡ
ವ್ಯಾಕರಣ	: ಪತ್ರಲೇಖನ – ಪ್ರಬಂಧ ರಚನೆ	

10th_Kannada_Reader1-5.indd 199 03-04-2019 14:08:05

ಘಟಕ ಹತ್ತು

ನಾವೆಲ್ಲರೂ ಒಂದೇ ಜಾತಿ

–ಎಂ. ಗೋಪಾಲಕೃಷ್ಣ ಅಡಿಗ



ಭಾರತವು ಜಾತ್ಯತೀತ ರಾಷ್ಟ್ರವಾಗಿದೆ. ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವವುಳ್ಳ ಈ ರಾಷ್ಟ್ರದಲ್ಲಿ ಹಲವಾರು ಧರ್ಮ, ಮತ, ಜಾತಿ, ಪಂಥಗಳು ನೆಲೆಯೂರಿವೆ. ಏನೇ ಇರಲಿ, ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸುವುದು ನಮ್ಮ ರಾಷ್ಟ್ರದ ಧ್ಯೇಯವಾಗಿದೆ. ಯಾವುದೇ ನಾಡು ಪ್ರಗತಿಯನ್ನು ಕಾಣಲು ಐಕ್ಯತೆ ಬಹಳ ಮುಖ್ಯ. ನಾವು ಮತೀಯ ಭಾವನೆಗಳಿಂದ ದೂರ ಸರಿದು ಉದಾತ್ತ ಚಿಂತನೆಯಿಂದ ಮಾನವೀಯತೆಯಿಂದ ಕೂಡಿ ಬಾಳಬೇಕೆಂಬುದು ಈ ಕವಿತೆಯ ಆಶಯವಾಗಿದೆ.



10th_Kannada_Reader1-5.indd 200 03-04-2019 14:08:05

1

ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ
ನಾವು ಮನುಜರು
ನರರ ನಡುವಿನಡ್ಡ ಗೋಡೆಗಳನ್ನು ಕುಟ್ಟಿ ಕೆಡಹುವೆವು
ನಾವು ವಿಲಯ ರುದ್ರರು !
ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು
ನಾವು ನವ ವಿಧಾತರು !

2

ಕ್ರಾಪು ತಲೆಯ ಈ ನವೀನ ಯುಗದ ಜಗದ ಕೇತನ
ಅದರ ಕೆಳಗೆ ತಿಂತಿಣಿಸಿದ ಯೋದ್ಧಗಣ ವಿನೂತನ
ಎಲ್ಲೆ ಕಟ್ಟನೆಲ್ಲ ಮೆಟ್ಟಿ ಮುಂದೋಡುವ ಯುವ ಜನ
'ಎಲ್ಲ ಒಂದೆ' ಎಂಬುದೊಂದೆ ನಮ್ಮ ರಣಾಕ್ರಂದನ
ಹಳೆಯ ಕೊಳೆಯ ಕಳೆವೆವು
ನವವ ಶುಭವ ಬೆಳೆವೆವು
ದಿವವನಿಲ್ಲಿ ಈ ನೆಲಕೇ ಎಳೆದು ಸೆಳೆದು ತರುವೆವು
ನಾವು ಸದಾ ತರುಣರು !

3

ತೆರೆ ಬಾಗಿಲ ಹೊರ ನೋಟವ ಹೊರೆ ಹಸುರಿನ ಹಂದರ
ನಮ್ಮ ಹೃದಯ ಮಂದಿರ
ಅಲ್ಲಿ ಎಲ್ಲ ಜನಕು ಇದೆ ಸ್ವಾಗತವು ನಿರಂತರ
ಚಿರ ಉದಾರ ಸುಂದರ !
ಬನ್ನಿರಣ್ಣ ಬನ್ನಿರೆಲ್ಲ ಬಣ್ಣದಮ್ಮ ತಮ್ಮರು

10th_Kannada_Reader1-5.indd 201 03-04-2019 14:08:05

ನಡೆಯ ನುಡಿಯ ನೂರು ಗೋಡೆ ಗೋಡೆ ನಿಮಿರಿ ನಿಂದರೂ
ನಾವೆಲ್ಲರು ಒಂದೆ ತಾಯ ಎದೆಯಾಸೆಯ ಕುಡಿಗಳು
ಒಂದೆ ಮಹಾ ಪ್ರೇಮಾಗ್ನಿಯ ಹೋಮಾಗ್ನಿಯ ಕಿಡಿಗಳು
ಭೂಮವಾವುದನ್ನೊ ಇಲ್ಲಿ ಬೆಳೆಯ ಬಂದ ಭೀಮರು.
ಪ್ರೇಮ ಸಿದ್ಧಿಗಾಗಿ ನೋನುತಿರುವ ಸತ್ಯಕಾಮರು !

ಕೈಕೈಗಳ ಕುಲುಕಿಸಿ
ಎದೆಗೆದೆಯ ಹಾಯಿಸಿ
ಭೇದವೆಲ್ಲ ಸುಟ್ಟುರಿವೊಲು ಎದೆಯೊಲವನು ಕೆರಳಿಸಿ
ತೊಳತೊಳಗುವ ನರತೆಯೆಂಬ ಬಂಗಾರವನರಳಿಸಿ
ಯುವಜನವಿದೊ ನವಜನವಿದೊ ದುಡುಕುತಿಹುದು ಮುಂದಕೆ
ಪದಪದಕೂ ಯುಗಯುಗಗಳೆ ಸರಿಯುತಿರಲು ಹಿಂದಕೆ
ಒಮ್ಮತದೊಗ್ಗಟ್ಟಿನ ಒಬ್ಬಗೆ ಬಾಳಿನ ಚಂದಕೆ !

4

ಜಾತಿ ಮತದ ಗುಹೆಗಳಿಂದ ಹೊರ ಬನ್ನಿರಿ ಬಯಲಿಗೆ
ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ
ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ದಾಳಿಗೆ
ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ
ಕೂಡಿಸಿರೆದೆ ಕೊರಲುಗಳನು ಹೊಸ ಬಾಳಿನ ಹಾಡಿಗೆ

ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ
ನಾವು ಮನುಜರು
ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು
ನಾವು ನವ ವಿಧಾತರು !

10th_Kannada_Reader1-5.indd 202 03-04-2019 14:08:05

ಕವಿ ಕಾವ್ಯ ವಿಚಾರ



ಡಾ. ಗೋಪಾಲಕೃಷ್ಣ ಅಡಿಗ

ನವ್ಯ ಸಾಹಿತ್ಯದ ಪ್ರಮುಖ ಕವಿ ಹಾಗೂ ವಿಮರ್ಶಕರೆಂದು ಗುರುತಿಸಿಕೊಂಡಿರುವ ಡಾ. ಗೋಪಾಲಕೃಷ್ಣ ಅಡಿಗರು 1918ರಲ್ಲಿ ಕುಂದಾಪುರ ತಾಲೂಕಿನ ಮೊಗೇರಿಯಲ್ಲಿ ಜನಿಸಿದರು. ಆರಂಭದಲ್ಲಿ ಅಠಾರಾ ಕಛೇರಿಯಲ್ಲಿ ಗುಮಾಸ್ತರಾಗಿ ವೃತ್ತಿ ಜೀವನವನ್ನು ಕೈಗೊಂಡು, ನಂತರ ಅಧ್ಯಾಪಕರಾದರು. ಅಡಿಗರ ಕಾವ್ಯ ಪ್ರಜ್ಞೆಯು ಅಂತರ್ಮುಖವಾದುದು. ಪ್ರಾರಂಭದ ದಿನಗಳಲ್ಲಿ ಕಡೆಂಗೋಡ್ಲು ಶಂಕರಭಟ್ಟರ ಪ್ರಭಾವದಲ್ಲಿ ಸಾಹಿತ್ಯ ರಚನಾ ಕಾರ್ಯದಲ್ಲಿ ತೊಡಗಿದರು. ನಂತರ ವರಕವಿ ಬೆಂದ್ರೆಯವರ ಪ್ರಭಾವಕ್ಕೆ ಒಳಗಾದರು. ಅವರ ಮೊದಲ ಕವನ ಸಂಕಲನ 'ಭಾವತರಂಗ' 1946ರಲ್ಲಿ ಪ್ರಕಟವಾಯಿತು. ಅನಂತರ ಬರೆದ ಕವನಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ವಸ್ತುಗಳು ಎಳೆಎಳೆಯಾಗಿ ಸೇರಿಕೊಂಡಿರುವುದನ್ನು ಗುರುತಿಸಬಹುದು. 'ಭೂಮಿಗೀತ', 'ವರ್ಧಮಾನ', 'ಕಟ್ಟುವೆವು ನಾವು', 'ಚಂಡಮದ್ದಳೆ' ಮೊದಲಾದವು ಇವರ ಪ್ರಸಿದ್ಧ ಕವನ ಸಂಕಲನಗಳಾಗಿವೆ. 'ಕನ್ನಡದ ಅಭಿಮಾನ', 'ಮಣ್ಣಿನ ವಾಸನೆ', 'ವಿಚಾರ ಪಥ', 'ನಮ್ಮ ಶಿಕ್ಷಣ ಕ್ಷೇತ್ರ' ಇವು ಅವರ ವೈಚಾರಿಕ ಲೇಖನಗಳ ಸಂಗ್ರಹವಾಗಿದೆ. 'ಆಕಾಶ ದೀಪ' ಹಾಗೂ 'ಅನಾಥೆ' ಇವು ಇವರ ಕಾದಂಬರಿಗಳು. 'ಸುವರ್ಣ ಕಿರೀಟ', 'ಹುಲ್ಲಿನ ದಳಗಳು', 'ಭೂಗರ್ಭ ಯಾತ್ರೆ', 'ರೈತರ ಹುಡುಗಿ', 'ಜನತೆಯ ಶತ್ರು', 'ದೆವ್ವದ ಕತೆಗಳು', 'ಮುಕ್ತಾಫಲ', 'ಇತಿಹಾಸ ಚಕ್ರ' – ಮುಂತಾದವು ಇವರ ಅನುವಾದಿತ ಕೃತಿಗಳು. ಇವರ 'ವರ್ಧಮಾನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ಸುವರ್ಣ ಪುತ್ಥಳಿ' ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ. ಅಡಿಗರು 1993ರಲ್ಲಿ ನಿಧನರಾದರು. ಈ ಕವನವನ್ನು ಅಡಿಗರ 'ಕಟ್ಟುವೆವು ನಾವು' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ವಿಶ್ವದಲ್ಲಿಯೇ ಬಹುದೊಡ್ಡ ಪ್ರಜಾಪ್ರಭುತ್ವವುಳ್ಳ ದೇಶವೇ ನಮ್ಮ ಭಾರತದೇಶ. ಹಲವಾರು ಜಾತಿ, ಮತ, ಧರ್ಮಗಳು ಅನಾದಿ ಕಾಲದಿಂದಲೂ ಈ ದೇಶದಲ್ಲಿ ನೆಲೆಯೂರಿವೆ. ನಮ್ಮ ದೇಶವನ್ನು ಜಾತ್ಯತೀತ ರಾಷ್ಟ್ರವೆಂದು ಹೇಳುವರಾದರೂ ಜಾತಿ ಪೋಷಕ ಆಡಳಿತ ಪಕ್ಷಗಳು ಪದೇ ಪದೇ ಗೆದ್ದು ಅಧಿಕಾರದ ಗದ್ದುಗೆಯನ್ನು ಏರುತ್ತವೆ.

ಯಾವ ದೇಶದಲ್ಲಿ ಅತಿ ಕಡಿಮೆ ಸಂಖ್ಯೆಯ ಜಾತಿಗಳು ಇರುತ್ತವೆಯೋ ಅಂತಹ ದೇಶ ಬಹುಬೇಗ ಮುಂದುವರೆಯುತ್ತದೆ. ಆದರೆ ಯಾವ ದೇಶದಲ್ಲಿ ಅಧಿಕ ಸಂಖ್ಯೆಯ ಜಾತಿಗಳು ಇರುತ್ತವೆಯೋ ಅಂತಹ ದೇಶ ಪ್ರಗತಿಯನ್ನು ಕಾಣುವುದರಲ್ಲಿ ಸ್ವಲ್ಪ ವಿಳಂಬವಾಗುತ್ತದೆ. ಈ ಕವನದಲ್ಲಿ ಅಡಿಗರ ಭಾವಲಹರಿಯೊಂದಿಗೆ ದೇಶಾಭಿಮಾನದ ಸ್ಪಂದನವನ್ನೂ ಕಾಣಬಹುದಾಗಿದೆ.

ಪದಗಳ ಅರ್ಥ

ಮನುಜರು–ಮನುಷ್ಯರು, ವಿಲಯ–ಪ್ರಳಯ; ಕೇತನ–ಧ್ವಜ; ತಿಂತಿಣಿ–ಗುಂಪು, ಸಮೂಹ; ಯೋದ್ಧ್ರಗಣ–ಯೋಧರ ಗುಂಪು, ಸೈನಿಕರ ಸಮೂಹ; ದಿವ–ಸ್ವರ್ಗ; ಎಲ್ಲೆಕಟ್ಟು–ಮಿತಿ, ಗಡಿ; ಚಿರ–ಶಾಶ್ವತ; ಭೂಮ–ಭವ್ಯವಾದ, ನೋನು–ನೋಂಪಿ, ವ್ರತ; ನರತೆ–ಮಾನವೀಯತೆ; ತಿಮಿರ–ಕತ್ತಲು, ಅಂಧಕಾರ; ನಿಮಿರು–ನೆಟ್ಟಗಾಗು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯುವ ಜನರನ್ನು ಕವಿ ಹೇಗೆ ವರ್ಣಿಸಿದ್ದಾರೆ ?
2. ನಾವು ಯಾವುದರಿಂದ ಹೊರಗೆ ಬರಬೇಕೆಂದು ಕವಿ ಬಯಸುತ್ತಾರೆ ?

10th_Kannada_Reader1-5.indd 203 03-04-2019 14:08:05

3. 'ಕೃತಕ ತಿಮಿರದಾಳ' ಈ ಪದದ ಅರ್ಥವೇನು ?
4. ಯುವ ಜನರಿಗೆ ಕವಿ ನೀಡುವ ಕರೆ ಯಾವುದು ?
5. ನಾವು ಯಾವುದರೊಂದಿಗೆ ದಾಳಿ ಮಾಡಬೇಕು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ನಾವು ಹೊಸ ತತ್ವ ಪ್ರತಿಪಾದಕರು ಎಂದು ಕವಿ ಹೇಗೆ ಹೇಳಿದ್ದಾರೆ ?
2. ಕವಿ ಅಡಿಗರು ಯಾವ ಗುಹೆಯಿಂದ ಹೊರ ಬರುವಂತೆ ಯುವಕರನ್ನು ಕೇಳಿದ್ದಾರೆ ?
3. ಯುವ ಜನಾಂಗವು ಮುಂದೆ ಬಂದರೆ ಯಾರನ್ನು ನಾವು ಈ ಭೂಮಿಗೆ ಎಳೆದು ತರಬಹುದು ?
4. ನಾವು ಎಂತಹ ಮನೋಭಾವವನ್ನು ಹೊಂದಿರಬೇಕು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. 'ನವವಿಧಾತರು' ಎಂಬ ಪದವನ್ನು ಅಡಿಗರು ಹೇಗೆ ಸಮರ್ಥಿಸಿ ಕೊಂಡಿದ್ದಾರೆ?
2. ಮಾನವೀಯತೆಯ ಬಗೆಗೆ ಕವಿ ಹೇಳುವ ವಿಚಾರಗಳೇನು ?
3. ದೇಶಾಭಿಮಾನದ ಸ್ಪಂದನವು ಈ ಕವನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

IV. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸಹಿತ ಉತ್ತರಿಸಿ.

1. 'ನರರ ನಡುವಿನಡ್ಡಗೋಡೆಗಳನು ಕುಟ್ಟಿ ಕೆಡಹುವೆವು' ?
2. 'ಎಲ್ಲ ಒಂದೆ ಎಂಬುದೊಂದೆ ನಮ್ಮ ರಣಾಕ್ರಂದನ'
3. 'ನಾವೆಲ್ಲರೂ ಒಂದೆ ತಾಯ ಎದೆಯಾಸೆಯ ಕುಡಿಗಳು'
4. 'ಜಾತಿ ಮತದ ಗುಹೆಗಳಿಂದ ಹೊರ ಬನ್ನಿರಿ ಬಯಲಿಗೆ'

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**
   ಮುಂದೋಡುವ, ದಿವವನಲ್ಲಿ, ಎದೆಯಾಸೆ, ಎದೆಯೊಲವು, ತಿಮಿರದಾಳ, ನಾವೆಲ್ಲರು.
2. **ಕೆಳಗಿನ ಪದಗಳ ವಿಗ್ರಹ ವಾಕ್ಯ ಬರೆದು ಸಮಾಸಗಳನ್ನು ಹೆಸರಿಸಿ.**
   ಪ್ರೇಮಾಗ್ನಿ, ಹೋಮಾಗ್ನಿ, ಮುನ್ನುಗ್ಗು, ಒಗ್ಗಟ್ಟು, ಒಮ್ಮತ, ಒಬ್ಬಗೆ.
3. **ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**
   ಚಿರ, ವಿಸ್ತಾರ, ಯುಗ.

ಚಟುವಟಿಕೆ

1. ಬೇರೆ ಕೆಲವು ಕವಿಗಳು ಬರೆದ ದೇಶಾಭಿಮಾನದ ಕವನಗಳನ್ನು ಓದಿರಿ.
2. ಅಡಿಗರ ಇತರ ಕವನಗಳನ್ನು ಓದಿರಿ.

10th_Kannada_Reader1-5.indd 204 03-04-2019 14:08:05

ಘಟಕ ಹತ್ತು

ಬೂಟ್ ಪಾಲಿಷ್

–ಬಸವರಾಜ ಕಟ್ಟೀಮನಿ



'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ನಾಣ್ನುಡಿಯುಂಟು. ಆದರೆ ಕಾರಣಾಂತರಗಳಿಂದ ಇಂದು ಹಲವು ಮಕ್ಕಳು ಎಳಮೆಯಲ್ಲಿಯೇ ತಮ್ಮ ಹೆತ್ತ ತಾಯಿ ತಂದೆಯರಿಂದ ದೂರವಾಗಿ, ಅನಾಥರಾಗಿ, ಕೆಲವೊಮ್ಮೆ ಇತರರ ಆರೈಕೆಯಲ್ಲಿ ಬದುಕಬೇಕಾದ ಅನಿವಾರ್ಯ ಸ್ಥಿತಿಯನ್ನು ನಾವು ನೋಡುತ್ತಿರುತ್ತೇವೆ. ಸಮಾಜದಲ್ಲಿನ ಈ ತೆರನಾದ ದುಸ್ಥಿತಿಗೆ ಒಳಗಾದ ಹುಡುಗನೊಬ್ಬನು ಧರ್ಮಶಾಲೆಯಲ್ಲಿ ಭಿಕ್ಷುಕನೊಬ್ಬನ ಆಶ್ರಯದಲ್ಲಿ ಬದುಕಿ, ಬೆಳೆದು ಆ ಮುದುಕನ ಮರಣಾ ನಂತರ ತನ್ನ ತಾಯಿಯನ್ನು ಹುಡುಕಲು ಹವಣಿಸುವ ದೃಶ್ಯ, ಆತನ ಅಸಹಾಯಕತೆಯನ್ನು ಇಲ್ಲಿ ಮನ ಮಿಡಿಯುವಂತೆ ನಿರೂಪಿಸಲಾಗಿದೆ.....



10th_Kannada_Reader1-5.indd 205 03-04-2019 14:08:06

'ಪಾಲಿಶ್... ಬೂಟ್ ಪಾಲಿಶ್...'

ರೈಲು ನಿಲ್ದಾಣ, ಮೋಟಾರು ನಿಲ್ದಾಣ, ಸಿನಿಮಾ ಮಂದಿರ, ನಾಟಕ ಗೃಹ, ಭೋಜನಾಲಯ, ಚಹದಂಗಡಿ ಮೊದಲಾದವುಗಳ ಹತ್ತಿರ ನನ್ನ ಈ ಧ್ವನಿಯನ್ನು ನೀವು ಕೇಳಿರುತ್ತೀರಿ. ನಿಮಗೆ ಬೇಸರ ಬರಿಸುವಷ್ಟು ಪರಿಚಿತವಾಗಿರಬೇಕು ನನ್ನ ಧ್ವನಿ. ಉದ್ಯಾನದಲ್ಲಿ ನಿಮ್ಮ ನೂತನ ವಧುವಿನ ಜೊತೆಗೆ ನೀವು ನಗುನಗುತ್ತ ಮಾತನಾಡುತ್ತಿದ್ದರೂ ಸರಿಯೆ, ದಿನಪತ್ರಿಕೆಯನ್ನೋದುತ್ತ ರೈಲಿಗಾಗಿ ಕಾಯುತ್ತಿದ್ದರೂ ಸರಿಯೆ, ಟಿಕೆಟ್ ಕೊಳ್ಳಲೆಂದು 'ಕ್ಯೂ'ದಲ್ಲಿ ನಿಂತಿದ್ದರೂ ಸರಿಯೆ, ಅವಸರವಸರವಾಗಿ ರೈಲಿನಿಂದ ಇಳಿದು ಬರುತ್ತಿದ್ದರೂ ಸರಿಯೆ, ಹಸಿದು ಊಟಕ್ಕೆ ಧಾವಿಸುತ್ತಿದ್ದರೂ ಸರಿಯೆ, ನಾನು ಅದಾವುದನ್ನೂ ಗಮನಿಸುವುದಿಲ್ಲ. ನನ್ನ ಉದ್ದೇಶವೊಂದೇ, ಬೂಟ್ ಪಾಲಿಶ್! ನನ್ನ ಗುರಿಯೊಂದೇ; ಒಂದಾಣೆ ಸಂಪಾದನೆ!

ನನ್ನ ಧ್ವನಿ ಕಿವಿಗೆ ಬೀಳುತ್ತಲೂ ನೀವು ಮುಖವನ್ನತ್ತ ತಿರುಗಿಸುತ್ತೀರಿ, ಹುಬ್ಬು ಏರಿಸುತ್ತೀರಿ, ದೃಷ್ಟಿಯನ್ನು ತೀಕ್ಷ್ಣಗೊಳಿಸುತ್ತೀರಿ. ಈ ದೃಷ್ಟಿಯ ಬಾಣದ ಏಟಿಗೆಲ್ಲ ಹೆದರುವವನಲ್ಲ ನಾನು. ಅದೆಲ್ಲವೂ ನನಗೆ ಅಭ್ಯಾಸವಾಗಿ ಹೋಗಿದೆ. ನೀವು ಒರಟು ಸ್ವರದಲ್ಲಿ 'ಬೇಡ'ವೆಂದರೂ ಹಿಂಜರಿಯದೆ ಕೆಳಗೆ ಕುಳಿತು ನಿಮ್ಮ ಬೂಟುಗಳಿಗೆ ಕೈ ಹಾಕುತ್ತೇನೆ. 'ಹೆಚ್ಚಿಲ್ಲ ರಾಯರೇ, ಒಂದೇ ಆಣೆ. ಚೆನ್ನಾಗಿ ಪಾಲಿಶ್ ಮಾಡುತ್ತೇನೆ. ಕನ್ನಡಿ ಹಾಗೆ ಝಳಝಳ ಮಾಡಿ ಕೊಡುತ್ತೇನೆ' ಎಂದು ವಿನಯಪೂರ್ಣ ಧ್ವನಿಯಲ್ಲಿ ಹೇಳುತ್ತೇನೆ. ನನ್ನ ಕಂಕುಳಲ್ಲಿ ನೇತಾಡುವ ಪುಟ್ಟ ಚೀಲವನ್ನು ನೆಲಕ್ಕಿಟ್ಟು, ಅದರೊಳಗಿನಿಂದ ಬ್ರಶ್ ಮತ್ತು ಪಾಲಿಶ್ ಡಬ್ಬಿಗಳನ್ನು ಹೊರ ತೆಗೆದು ಸಿದ್ಧವಾಗುತ್ತೇನೆ. ಇಂಥ ಸಂದರ್ಭದಲ್ಲಿ ಎಂಥವರಿಗಾದರೂ 'ಪಾಲಿಶ್ ಮಾಡಿಸೋಣವೇ?' ಎನಿಸದಿರುವುದಿಲ್ಲ. 'ಏನು ಮಹಾ, ಒಂದಾಣೆ ತಾನೆ. ಸರಿ' ಎಂದುಕೊಂಡು ನೀವೂ ಪಾದರಕ್ಷೆಗಳನ್ನು ಕಳಚಿ ಕೊಡುತ್ತಾರೆ. ಅಲ್ಲಿಯೇ ಕುಳಿತುಕೊಂಡು ನಾನು ನನ್ನ ಕೆಲಸವನ್ನಾರಂಭಿಸುತ್ತೇನೆ. ಮೊದಲು ಅವುಗಳ ಧೂಳನ್ನೆಲ್ಲ ಒರೆಸುವುದು, ಆಮೇಲೆ ಪಾಲಿಶ್ ಮಾಡುವುದು, ಬ್ರಶ್ಶನ್ನು ಬಲಗೈಯಲ್ಲಿ, ಪಾದರಕ್ಷೆಗಳನ್ನು ಎಡಗೈಯಲ್ಲಿ ಹಿಡಿದು ರಭಸದಿಂದ ಉಜ್ಜುವುದು... ಆಗ ನನ್ನ ಕೈಯ ಓಟವನ್ನು ನಿಲುಕಿಸುತ್ತ ನಿಂತಿರುವುದೇ ನಿಮಗೊಂದು ಮೋಜು. ಪಾದರಕ್ಷೆಯ ಮೇಲೆ ಬ್ರಶ್ ಆಡಿಸುತ್ತಾ ಹೇಗೆ ಓಡಿಯಾಡುತ್ತದೆ ನನ್ನ ಕೈ! ಎಂಥ ಕುಶಲ ಕೆಲಸಗಾರನಾದರೂ ನಾಚಬೇಕು ಅದನ್ನು ಕಂಡು. ಈ ಕೌಶಲ್ಯ ಸುಮ್ಮನೆ ಬರುತ್ತದೆಯೆ ? ಅದಕ್ಕೂ ಅನುಭವ ಬೇಕು ಸ್ವಾಮೀ, ಅನುಭವ ಬೇಕು. ಈ ವಿದ್ಯೆಯ ಒಳಗುಟ್ಟನ್ನೆಲ್ಲ ತಿಳಿದಿರಬೇಕು. ನನ್ನ ಕುಂದಿದ ಮುಖವನ್ನು, ಕೊಳಕು ಬಟ್ಟೆಗಳನ್ನು ಕಂಡು, ನನ್ನ ವಯಸ್ಸನ್ನು ಗುರುತಿಸಿ, 'ಇವನಿಗೇನು ಮಹಾ ಅನುಭವ' ಎನ್ನಬೇಡಿ. ಮತ್ತೆ ನನ್ನ ಐದನೆಯ ವಯಸ್ಸಿನಿಂದ ಇದುವರೆಗೆ, ಹತ್ತು ವರ್ಷಗಳ ಕಾಲ ಬೂಟ್ ಪಾಲಿಶ್ ಬಿಟ್ಟರೆ ಬೇರೆ ಉದ್ಯೋಗವೇ ನನಗಿಲ್ಲ. 'ಬೂಟ್ ಪಾಲಿಶ್ ಅಂದರೆ ನಾನು; ನಾನು ಅಂದರೆ ಬೂಟ್ ಪಾಲಿಶ್' ಎನ್ನುವಷ್ಟರ ಮಟ್ಟಿಗೆ ನಾನು ಅದರೊಂದಿಗೆ ಬೆರೆತುಕೊಂಡಿದ್ದೇನೆ. ನನ್ನ ಪಾಲಿಗೆ ಬೇರೆ ಪ್ರಪಂಚವೇ ಇಲ್ಲ, ಬೂಟ್ ಪಾಲಿಶ್‌ನ ಪ್ರಪಂಚವೇ ನನ್ನ ಪ್ರಪಂಚ. ಅದನ್ನು ಬಿಟ್ಟರೆ ನನಗಿನ್ನಾವ ದಿಕ್ಕೂ ಇಲ್ಲ.

ಅಚ್ಚರಿಗೊಳ್ಳುವಿರಲ್ಲವೆ ನೀವು? ಆ ಅಚ್ಚರಿಗೇನೂ ಕಾರಣವಿಲ್ಲ ಸ್ವಾಮಿ. ಈ ಪ್ರಪಂಚದಲ್ಲಿ ನನ್ನವನೆಂದರೆ ನಾನೊಬ್ಬನೇ ಒಬ್ಬ. ತಂದೆತಾಯಿಗಳ ಮುಖ ನಾನು ಕಾಣಲಿಲ್ಲ. ನನ್ನ ತಂದೆ ಯಾರು, ತಾಯಿ ಯಾರು ಎನ್ನುವುದನ್ನು ನಾನರಿಯೆ. ನನಗೆ ತಿಳಿವು ಬರುವ ವಯಸ್ಸಿಗೆ ಭಿಕ್ಷುಕನೊಬ್ಬ ನನ್ನನ್ನು ಸಾಕುತ್ತಿದ್ದ. ನನ್ನ ಹಾಗೆಯೇ ಪರದೇಶಿಗಳಾಗಿದ್ದ ಹತ್ತು ಹನ್ನೆರಡು ಹುಡುಗರು ಆತನ ಜೊತೆಗಿದ್ದರು. ನಗರದ ಹೊರಗಿನ ಹಾಳು ಧರ್ಮಶಾಲೆಯೊಂದರಲ್ಲಿ ನಾವೆಲ್ಲ ವಾಸಿಸುತ್ತಿದ್ದೆವು. ಎಲ್ಲ ಹುಡುಗರ ಕೆಲಸವೂ ಇದೇ, ಬೂಟ್ ಪಾಲಿಶ್. ಬೆಳಗಿನಿಂದ ರಾತ್ರಿಯವರೆಗೆ ನಾವೆಲ್ಲರೂ ಕೆಲಸ ಮಾಡಿ ಬಂದ ಹಣವನ್ನು ತಂದು ಆತನ ಕೈಗೆ ಕೊಡುತ್ತಿದ್ದೆವು. ಆತ ನಮಗೆಲ್ಲ ಅನ್ನ ಹಾಕುತ್ತಿದ್ದ. ಅವನ ಹೆಸರೂ ನನಗೆ ತಿಳಿಯದು. ಪಾಪ, ಮುದುಕ ಕೆಮ್ಮಿನ ರೋಗದಿಂದ ಜರ್ಜರಿತನಾಗಿ ಯಾವಾಗಲೂ ಹಾಸಿಗೆ ಹಿಡಿಸು ಬಿದ್ದಿರುತ್ತಿದ್ದ. ಅಂಥ ಸ್ಥಿತಿಯಲ್ಲೇ ಎದ್ದು, ಧರ್ಮಶಾಲೆಯ ಮೂಲೆಯೊಂದರಲ್ಲಿ ಕಲ್ಲಿನ ಒಲೆಯ ಮೇಲೆ ಅನ್ನ ಕುದಿಸಿ, ನಾವು ಬರುವ ಹೊತ್ತಿಗೆ ಊಟವನ್ನು ಅಣಿ ಮಾಡಿ ಇಟ್ಟಿರುತ್ತಿದ್ದ. ನಮ್ಮನ್ನೆಲ್ಲ ತನ್ನ ಹೊಟ್ಟೆಯ ಮಕ್ಕಳಂತೆ ನೋಡಿಕೊಂಡು ಪ್ರೀತಿಯಿಂದ ಊಟ ಮಾಡಿಸುತ್ತಿದ್ದ. ನಾವೆಲ್ಲ ಆತನನ್ನು 'ಅಜ್ಜ' ಎಂದು ಕರೆಯುತ್ತಿದ್ದೆವು. ಮುದುಕ ಒಂದು ದಿನ ಸತ್ತು ಹೋದ. ನಾವು ಮತ್ತೆ ಅನಾಥರಾದೆವು. ನಮ್ಮ ಗುಂಪು

10th_Kannada_Reader1-5.indd 206 03-04-2019 14:08:06

ಚದುರಿತು. ನಾವೆಲ್ಲ ನಮ್ಮ ನಮ್ಮ ಕಾಲ ಮೇಲೆ ನಿಂತು ಜೀವನ ಸಾಗಿಸಲು ಕಲಿತೆವು.

ಒಂದು ದಿನ... ಆ ದಿನವಿನ್ನೂ ನನಗೆ ಚೆನ್ನಾಗಿ ಜ್ಞಾಪಕವಿದೆ. ನನ್ನ ಮೈಯಲ್ಲಿ ನೆಟ್ಟಗಿರಲಿಲ್ಲ. ದೇಹ ಬಿಸಿಯಾಗಿತ್ತು. 'ಇವ್ವೊತ್ತು ಕೆಲಸಕ್ಕೆ ಹೋಗಬೇಡ ಮಗೂ. ಸುಖವಾಗಿ ಮಲಗಿಕೋ' ಎಂದು ಹೇಳಿ ಅಜ್ಜ ನನ್ನನ್ನು ಗೋಣಿ ಚೀಲವೊಂದರ ಮೇಲೆ ಮಲಗಿಸಿದ್ದ. ಇನ್ನೊಂದು ಗೋಣಿ ಚೀಲ ಹೊದೆದುಕೊಂಡು ಜ್ವರದಿಂದ ಭಾರವಾಗಿದ್ದ ಕಣ್ಣುಗಳನ್ನು ಮುಚ್ಚಿ ನಾನು ಮಲಗಿದ್ದೆ. ನನ್ನ ಪಕ್ಕದಲ್ಲಿ ಕುಳಿತುಕೊಂಡು ನನ್ನ ಹಣೆಯನ್ನು ನೇವರಿಸುತ್ತ ಮುದುಕ ಹೇಳುತ್ತಿದ್ದ : 'ಜ್ವರ ಬಂದು ನೀನಿಲ್ಲಿ ಬಿದ್ದಿದ್ದೀಯ. ಆ ನಿನ್ನ ತಾಯಿ ಈಗ ಎಲ್ಲಿರುವಳೋ? ಎಷ್ಟು ಸುಖ ಪಡುತ್ತಿರುವಳೋ...?'

ನನ್ನ ತಾಯಿ.....

ನನ್ನ ತಾಯಿ ಬದುಕಿರಬಹುದೆಂಬ ವಿಚಾರ ನನಗೆ ಗೊತ್ತಾದುದು ಅದೇ ಮೊದಲ ಬಾರಿ. ಎಲ್ಲರಿಗೂ ತಾಯಿಯೊಬ್ಬಾಕೆ ಇರುವಂತೆ ನನಗೂ ಇದ್ದಿರಲೇಬೇಕೆಂಬುದಷ್ಟೇ ನನಗೆ ಗೊತ್ತಿದ್ದುದು. ಆದರೆ ನಾನು ಹುಟ್ಟುತ್ತಲೂ ಆಕೆ ಸತ್ತು ಹೋಗಿರಬೇಕು, ನನ್ನ ತಂದೆಯೂ ಸತ್ತು ಹೋಗಿರಬೇಕು ಎಂದು ನಾನು ತಿಳಿದಿದ್ದೆ. ಆದರೆ ನನ್ನ ತಾಯಿ ಸತ್ತು ಹೋಗಿರಲಿಲ್ಲ, ಬದುಕಿದ್ದಾಳೆ. ಸುಖವಾಗಿ ಕಾಲ ತಳ್ಳುತ್ತಿದ್ದಾಳೆ ಎಂಬುದು ಗೊತ್ತಾಗುತ್ತಲೂ ನನ್ನ ಹೃದಯ ಭಯಂಕರವಾಗಿ ಕೂಗಿಕೊಳ್ಳತೊಡಗಿತು. ತಾಯಿ... ನನ್ನ ತಾಯಿ... ನಾನಾಕೆಯನ್ನು ಕಾಣಬೇಕು... ಆಕೆಯ ತೊಡೆ–ಮಡಿಲಲ್ಲಿ ಮುಖ ಮುಚ್ಚಿಕೊಂಡು ಪವಡಿಸಬೇಕು.....

'ಎಲ್ಲಿದ್ದಾಳೆ ಅಜ್ಜಾ, ನನ್ನ ತಾಯಿ?' ಎಂದು ಕೇಳಿದೆ.

ಮುದುಕ ನನ್ನ ತಲೆಗೂದಲ್ಲಿ ಬೆರಳಾಡಿಸುತ್ತ, ನನ್ನನ್ನು ಸಂತವಿಸುವ ಸ್ವರದಲ್ಲಿ ಹೇಳಿದ : 'ಎಲ್ಲಿದ್ದಾಳೋ ಯಾರಿಗೆ ಗೊತ್ತಪ್ಪ ! ಅಂತೂ ಇರಬೇಕು ಎಂಬುದಿಷ್ಟು ನಿಜ'

'ನೀನಾಕೆಯನ್ನು ನೋಡಿದ್ದೀಯಾ ಅಜ್ಜಾ?'

'ಇಲ್ಲ ಮಗು. ನೋಡಿದ್ದರೆ ನೀನೇಕೆ ಇಲ್ಲಿರುತ್ತಿದ್ದೆ? ಇಂಥ ಸ್ಥಿತಿಯಲ್ಲಿರುತ್ತಿದ್ದೆ. ಏನಾದರೂ ಬೇರೆ ವ್ಯವಸ್ಥೆಯಾಗುತ್ತಿತ್ತು'

ಮುದುಕ ಮುಂದೆ ಏನೇನೋ ಹೇಳಿದ. ಅದೆಲ್ಲವೂ ನನಗೆ ಅರ್ಥವಾಗಲಿಲ್ಲ. ನನ್ನ ತಾಯಿ ಇನ್ನೂ ಕುಮಾರಿಯಾಗಿದ್ದಾಗ..... ನಾನು ಹುಟ್ಟಿದೆ. ಆಕೆ ಸಮಾಜಕ್ಕೆ ಹೆದರಿ, ಶಿಶುವಾಗಿದ್ದ ನನ್ನನ್ನೊಯ್ದು ಹನುಮಂತ ದೇವರ ಗುಡಿಯಲ್ಲಿಟ್ಟು ಹೋದಳಂತೆ. ಅದೆಲ್ಲ ಯಾವುದೋ ಬೇರೆ ಊರಿನಲ್ಲಿ ನಡೆದದ್ದು. ಗುಡಿಗೆ ಕೊಂಚ ದೂರದಲ್ಲಿ ಬಿಡಾರ ಹೂಡಿದ್ದ ಅಜ್ಜ ನನ್ನನ್ನು ಕಂಡು ಕನಿಕರಗೊಂಡು ಸಾಕಿ ಸಲಹಿದನಂತೆ. ಆ ಭಿಕ್ಷುಕಿಯ ಮೊಲೆ ಹಾಲು ಕುಡಿದೇ ನಾನು ಬೆಳೆದದ್ದು. ಕೆಲ ದಿನ ಕಳೆದ ಬಳಿಕ ಅವಳೂ ಸತ್ತು ಹೋದಳಂತೆ.

'ನನ್ನ ತಾಯಿ ನನ್ನನ್ನು ಹಾಗೇಕೆ ಬಿಟ್ಟು ಹೋದಳು ಅಜ್ಜಾ?' ಎಂದು ಕೇಳಿದೆ.

'ಅದೆಲ್ಲಾ ನಿನಗೆ ಅರ್ಥವಾಗುವುದಿಲ್ಲ ಮಗೂ. ದೊಡ್ಡವರ ಮನೆಗಳಲ್ಲಿ ಆಗಾಗ ಹಾಗೆ ನಡೆಯುವುದುಂಟು. ಅದನ್ನೆಲ್ಲ ತಲೆಗೆ ಹಾಕಿಕೊಳ್ಳಬೇಡ. ಸುಮ್ಮನೆ ಮಲಗಿಕೊ ಕಂದ. ನಿನಗೆ ಬಹಳ ಜ್ವರ ಬಂದಿದೆ'

'ಆ ನನ್ನ ತಾಯಿ ಈಗಲೂ ಬದುಕಿರಹುದೆ ಅಜ್ಜಾ?'

'ಇರಲೇ ಬೇಕು. ಬೇರೊಬ್ಬನನ್ನ ಲಗ್ನವಾಗಿ ಎಲ್ಲಿಯಾದರೂ ಸುಖದಿಂದ ಕಾಲ ಕಳೆಯುತ್ತಿರಬಹುದು'

'ನನ್ನ ನೆನಪು ಅವಳಿಗಿರಬಹುದೇ ಅಜ್ಜಾ?'

'ಖಂಡಿತಾ ಇರಲೇ ಬೇಕು. ಅಂದು ಸಮಾಜಕ್ಕೆ ಹೆದರಿ ನಿನ್ನನ್ನಾಕೆ ಹೀಗೆ ಬಿಟ್ಟು ಹೋಗಬೇಕಾಯಿತು. ಆದರೆ, ತಾಯಿ ಕರುಳು ಕೊರಗದಿರುತ್ತದೆಯೇ ತಮ್ಮ? ಈಗಲೂ ನಿನ್ನನ್ನಾಕೆ ನೆನೆಯುತ್ತಿರಬಹುದು. ನಿನಗಾಗಿ ಕಣ್ಣೀರು ಸುರಿಸುತ್ತಿರಬಹುದು...'

ಅಜ್ಜನ ಆ ಮಾತಿನಿಂದಾಗಿ ನನಗೆ ದುಃಖ ಉಕ್ಕೇರಿ ಬಂದಿತ್ತು. ಎಂದೂ ಕಾಣದಿದ್ದ ಆ ತಾಯಿಯನ್ನು ನೆನೆದುಕೊಂಡು ಬಿಕ್ಕಿ ಬಿಕ್ಕಿ ಅತ್ತು ಬಿಟ್ಟಿದ್ದೆ. 'ನನ್ನ ತಾಯಿ... ಅಜ್ಜ, ನಾನು ನನ್ನ ತಾಯನ್ನ ನೋಡಬೇಕಪ್ಪ. ಏನಾದರೂ ಮಾಡು, ನನ್ನ ತಾಯನ್ನ ಹುಡುಕು' ಎಂದು ಗೋಗರೆದಿದ್ದೆ. ಅಜ್ಜ ಮೌನವಾಗಿ ಕುಳಿತುಕೊಂಡು ನನ್ನನ್ನು ಸಂತವಿಸುತ್ತಿದ್ದ.

ಅಂದಿನಿಂದ ಒಂದೆರಡು ವರ್ಷಗಳ ಕಾಲ ನನಗೆ ತಾಯಿಯ ಹುಚ್ಚೇ ಹಿಡಿದು ಬಿಟ್ಟಿತು. ಬೂಟ್ ಪಾಲಿಶ್ ಮಾಡುತ್ತ ಅಲ್ಲಿ ಇಲ್ಲಿ ಅಲೆಯುತ್ತಿದ್ದಾಗಲೆಲ್ಲ, ಸೀರೆಯ ಸೆರಗನ್ನು ಕಂಡೊಡನೆ ಆ ಹೆಣ್ಣು ಮಗಳ ಮುಖವನ್ನು

10th_Kannada_Reader1-5.indd 207 03-04-2019 14:08:06

ಆತುರದಿಂದ ನಿರೀಕ್ಷಿಸುತ್ತ ನಿಲ್ಲುತ್ತಿದ್ದೆ. ಪುಟ್ಟ ಮಕ್ಕಳನ್ನು ಕಂಕುಳಲ್ಲೆತ್ತಿಕೊಂಡು ರೈಲು ಹತ್ತುವ ಮುತ್ತೈದೆಯರನ್ನು ಕಂಡಾಗಲೆಲ್ಲ ನನ್ನ ಹೃದಯ ಉಮ್ಮಳಿಸಿ ಬರುತ್ತಿತ್ತು. ಅವರಲ್ಲಿ ಯಾರಾದರೊಬ್ಬಾಕೆ ನನ್ನ ತಾಯಿಯಾಗಿರಬಹುದೇ ಎಂದು ಆಸೆಯ ಕಂಗಳಿಂದ ನಿಟ್ಟಿಸುತ್ತ ನಿಲ್ಲುತ್ತಿದ್ದೆ. ರೇಶಿಮೆ ಸೀರೆ ಉಟ್ಟು ಸೊಗಸಾಗಿ ಅಲಂಕಾರ ಮಾಡಿಕೊಂಡು ಸಿನಿಮಾಕ್ಕೆ ಹೊರಟ ಸ್ತ್ರೀಯರನ್ನು ನೋಡುತ್ತ ನಿಂತ ಹಾಗೆ ಇದರಲ್ಲಿ ಯಾರಾದರೊಬ್ಬಳು ನನ್ನ ತಾಯಿಯಾಗಿರಲೂಬಹುದು ಎನ್ನಿಸುತ್ತಿತ್ತು.

ಒಂದು ದಿನ ಹೀಗೆ ನಾಟಕ ಗೃಹವೊಂದರ ತಲೆ ಬಾಗಿಲಲ್ಲಿ ನಿಂತಿದ್ದಾಗ ನಡುವಯಸ್ಸಿನ ಗಂಡ–ಹೆಂಡತಿಯರಿಬ್ಬರು ಮೋಟಾರು ಕಾರಿನಿಂದ ಇಳಿದರು. ಅವರು ಭಾರೀ ಶ್ರೀಮಂತರೆನ್ನುವುದು ಸ್ಪಷ್ಟವಾಗಿದ್ದಿತು. ಬಾಗಿಲಿನ ಮೂಲೆಯಲ್ಲಿ ನಿಂತುಕೊಂಡು ಆಶಾಪೂರ್ಣ ದೃಷ್ಟಿಯಿಂದ ನಾನು ಆ ಹೆಣ್ಣುಮಗಳನ್ನು ನೋಡುತ್ತಿದ್ದೆ. ಆಕೆಯ ದೃಷ್ಟಿಯೂ ಅಕಸ್ಮಾತ್ತಾಗಿ ನನ್ನೆಡೆಗೆ ತಿರುಗಿತ್ತು. ಆಕೆಯೂ ಯಾರನ್ನೋ ಹುಡುಕುತ್ತಿದ್ದ ಹಾಗೆ ಕಂಡು ಬಂದಿತು. ನನ್ನ ಎದೆ ಡವಡವನೆ ಬಡಿದುಕೊಳ್ಳತೊಡಗಿತು. ನನ್ನನ್ನಾಕೆ ಸೂಕ್ಷ್ಮವಾಗಿ ದಿಟ್ಟಿಸುತ್ತಿದ್ದಾಳೆ. ಗೌರವರ್ಣದ ಆ ತುಂಬು ಮೊಗದಲ್ಲಿ ಎಂಥ ಮಮತೆ. ದೊಡ್ಡ ದೊಡ್ಡ ಆ ಸುಂದರ ಕಣ್ಣುಗಳಲ್ಲಿ ಎಂಥ ಅಕ್ಕರತೆ... ಎಂದೋ ಕಳೆದುಕೊಂಡಿದ್ದ ಸ್ವಂತ ಮಗುವನ್ನು ಕಂಡೊಡನೆ ಬರಸೆಳೆದು ಎತ್ತಿಕೊಳ್ಳುವ ತಾಯಿಯ ಹಾಗೆಯೇ ನನ್ನನ್ನಾಕೆ ನಿರುಕಿಸುತ್ತಿದ್ದಾಳೆ. ಆನಂದದಿಂದ ನನ್ನ ದೇಹವೆಲ್ಲ ಕಂಪಿಸತೊಡಗಿತು. ಹೋ... ಕೊನೆಗೂ ಸಿಕ್ಕಿದಳು ನನ್ನ ತಾಯಿ.... ದೇವರು ಕೃಪೆ ಮಾಡಿದ. ನನ್ನ ತಾಯಿಯನ್ನು ನನಗೆ ಮರಳಿ ಕೊಟ್ಟ. ಅವ್ವ.... ನನ್ನ ಅವ್ವ.... ಅಯ್ಯೋ! ಎಷ್ಟು ದಿನಗಳಿಂದ ಕಾದಿದ್ದೆ ನಿನಗಾಗಿ... ನಿನ್ನ ತೋಳುಗಳಲ್ಲಿ ಕುಳಿತುಕೊಂಡು ನಿನ್ನ ಸೆರಗಿನಲ್ಲಿ ತಲೆ ಹುದುಗಿಸಲು ಹೇಗೆ ಹಾತೊರೆಯುತ್ತಿದ್ದೆ... ಅವ್ವಾ...!

ನನ್ನ ಕೊಳಕು ಬಟ್ಟೆ, ಕಂದಿದ ಮುಖ, ಜಳಕವಿಲ್ಲದ ಕೊಳೆಯಾದ ಶರೀರ, ಹೊಲಸೆದ್ದು ನಾರುವ ತಲೆಗೂದಲು, ಎಲ್ಲವನ್ನೂ ನಾನಾಗ ಮರೆತು ಬಿಟ್ಟಿದ್ದೆ. ನಾನೊಬ್ಬ ಬೂಟ್ ಪಾಲಿಶ್ ಹುಡುಗ ಎಂಬ ಅರಿವು ನನಗಾಗ ಇರಲಿಲ್ಲ. ಪ್ರೀತಿಯ ಅದ್ಭುತವಾದ ಮಾಯೆಯಲ್ಲಿ ನಾನು ಆ ಲೋಕವನ್ನೇ ಮರೆತು ಬಿಟ್ಟು ಬೇರೊಂದು ಕನಸಿನ ಲೋಕದಲ್ಲಿ ಅಲೆಯುತ್ತಿದ್ದ ಹಾಗಿದ್ದಿತು. ಕಾತರತೆಯಿಂದ ಎರಡೂ ಕೈ ಮುಂದೆ ನೀಡಿ ತಾಯಿಯನ್ನು ತಬ್ಬಿಕೊಳ್ಳಲು ಮುನ್ನಡೆದೆ.

ಆಕೆ ಒಂದು ಕ್ಷಣ ನಿಂತಲ್ಲಿಯೇ ನಿಂತಿದ್ದಳು. ನನ್ನನ್ನು ಕೌತುಕದಿಂದಲೂ, ಕನಿಕರದಿಂದಲೂ ದಿಟ್ಟಿಸಿ ನೋಡಿ ತನ್ನ ಕೈಚೀಲದಿಂದ ರೂಪಾಯಿ ನಾಣ್ಯವೊಂದನ್ನು ತೆಗೆದು ನನ್ನ ಕೈಗಿತ್ತಳು. ಪಕ್ಕದಲ್ಲಿದ್ದ ಆಕೆಯ ಪತಿ ನಾಟಕಕ್ಕೆ ಹೊತ್ತಾಯಿತು ಎಂದು ಅವಸರ ಮಾಡುತ್ತಿದ್ದ.

ಆಕೆ ಕೊನೆಯ ಸಲ ನನ್ನನ್ನು ಅಕ್ಕರೆಯಿಂದ ದಿಟ್ಟಿಸಿ ನೋಡಿ ನಿಟ್ಟುಸಿರೊಂದನ್ನು ಬಿಟ್ಟು ಮೆಲ್ಲಗೆ ನಡೆದು ಹೋದಳು.

ಕನಸಿನ ಲೋಕದಿಂದ ನಾನು ದೊಪ್ಪನೆ ಕೆಳಕ್ಕೆ ಬಿದ್ದಂತಾಯಿತು. ನನ್ನ ಹೃದಯಕ್ಕೆ ಬಲವಾದ ಆಘಾತವಾಗಿತ್ತು. ನನ್ನ ತಾಯಿಯನ್ನು ತೋರಿಸಿದ ಹಾಗೆ ಮಾಡಿ, ಅವಳಿಗಾಗಿ ಅತ್ಯಂತ ಆಸೆಯಿಂದ ನಾನು ಕಾಯುವ ಹಾಗೆ ಮಾಡಿ, ಇನ್ನೇನು ಸಿಕ್ಕಳು ಎನ್ನುವಷ್ಟರಲ್ಲೇ ಮತ್ತೆ ಅವಳನ್ನು ನನ್ನಿಂದ ದೂರಗೊಳಿಸಿ, ವಿಧಿ ನನ್ನನ್ನು ಹಾಸ್ಯ ಮಾಡಿ ಅಣಕಿಸಿತ್ತು. ಅಂದು ನನಗೆ ಜೀವನವೇ ಬೇಡವೆನ್ನಿಸಿತ್ತು. ಆ ಹೆಣ್ಣುಮಗಳು ಕೊಟ್ಟ ರೂಪಾಯಿಯನ್ನು ಚರಂಡಿಗೆಸೆದು ಥಿಯೇಟರಿನ ಎದುರಿಗಿದ್ದ ಚಹದಂಗಡಿಯ ಕಟ್ಟೆಯ ಮೇಲೆ ಅಳುತ್ತ ಬಿದ್ದುಕೊಂಡಿದ್ದೆ. ಎಲ್ಲರಿಗೂ ಒಬ್ಬ ತಾಯಿ ಇರುತ್ತಾಳೆ. ನನಗೂ ಇದ್ದಾಳೆ. ಆದರೆ ನಾನಾಕೆಯನ್ನು ನೋಡುವಂತಿಲ್ಲ. ಆಕೆಯೊಂದಿಗೆ ಕೂಡಿ ಇರುವಂತಿಲ್ಲ. ಅಯ್ಯೋ... ಎಂದು ನರಳುತ್ತಿದ್ದೆ.

ನಾಟಕ ಮುಗಿದ ಮೇಲೆ ಮನೆಗೆ ಹೋಗುವಾಗಲಾದರೂ ಆಕೆಗೆ ದಯೆ ಬಂದು ನನ್ನನ್ನು ಗುರುತಿಸಿ, ಕರೆದುಕೊಂಡು ಹೋಗಬಹುದೇನೋ ಎಂಬ ದೂರದ ಆಸೆಯೊಂದು ಉಳಿದಿತ್ತು. ರಾತ್ರಿ ಮೂರು ಗಂಟೆಯವರೆಗೂ ತಲೆಬಾಗಿಲಲ್ಲಿ ಕಾದು ನಿಂತಿದ್ದೆ. ಆದರೆ ಆಕೆ ನನ್ನ ಕಡೆ ದೃಷ್ಟಿಯನ್ನೂ ಕೂಡ ಹೊರಳಿಸಲಿಲ್ಲ. ಪತಿಯ ಕೈಯಲ್ಲಿ ಕೈ ಹಾಕಿಕೊಂಡು ನಸುನಗುತ್ತ ಬಂದವಳು ಸಿದ್ಧವಾಗಿ ನಿಂತಿದ್ದ ಮೋಟಾರು ಗಾಡಿಯನ್ನೇರಿ ಹೋಗಿ ಬಿಟ್ಟಳು.

ಆ ರಾತ್ರಿಯೆಲ್ಲ ನನಗೆ ನಿದ್ದೆ ಬರಲಿಲ್ಲ. ಬರುವಂತಿರಲಿಲ್ಲ. ಕಣ್ಣೀರು ಸುರಿಸುತ್ತ ಹುಚ್ಚನಂತೆ ನಗರದ ಬೀದಿ ಬೀದಿ ಸುತ್ತುತ್ತಿದ್ದೆ. ಸುತ್ತಿ ಸುತ್ತಿ ಕಾಲು

10th_Kannada_Reader1-5.indd 208 03-04-2019 14:08:06

ಸೋತಾಗ ರೈಲ್ವೆನಿಲ್ದಾಣಕ್ಕೆ ಹೋಗಿ ಮೂಲೆಯೊಂದರಲ್ಲಿ ಬಿದ್ದುಕೊಂಡೆ.

ಈಗಲೂ ಆ ಹುಚ್ಚು ಹೋಗಿಲ್ಲ ನನಗೆ. ನಡುವಯಸ್ಸಿನ ಮಹಿಳೆಯರನ್ನು ಕಂಡಾಗಲೆಲ್ಲ ಅವರಲ್ಲೊಬ್ಬಳು ನನ್ನ ತಾಯಿಯಾಗಿರಬಹುದೇ ಎಂದು ಹಲುಬುತ್ತಿರುತ್ತೇನೆ. ನನ್ನ ಪಾಲಿಗೆ ತಾಯಿಯಿದ್ದರೂ ಇಲ್ಲದಂತೆ, ಆಕೆಯನ್ನು ನೆನೆದು ಅಳುವುದರಿಂದ ಉಪಯೋಗವಿಲ್ಲ. ನಾನು ಆಕೆಯನ್ನು ಕಾಣುವುದು ಸಾಧ್ಯವಿಲ್ಲ. ನನ್ನನ್ನು ಕಂಡರೂ ನಾನು ತನ್ನ ಮಗನೆಂದು ಆಕೆ ಗುರುತಿಸಲಾರಳು. ನಾನು ಇದುವರೆಗೆ ನೋಡಿದ ಸಾವಿರಾರು ಮಹಿಳೆಯರಲ್ಲಿ ನನ್ನನ್ನು ಹೆತ್ತಾಕೆಯೂ ಇದ್ದಿರಬಹುದೋ ಏನೋ, ಆದರೆ ಆಕೆ ಇಂಥವಳೇ ಎಂದು ಗೊತ್ತಾಗುವುದು ಹೇಗೆ ಸಾಧ್ಯ?

ತಿಳಿಯಿತೆ ? ನನಗಾರೂ ಇಲ್ಲ ಈ ಪ್ರಪಂಚದಲ್ಲಿ. ನನ್ನ ಹೆಸರೇನೆಂಬುದೂ ನನಗೆ ತಿಳಿಯದು. ನನ್ನನ್ನು ಕೂಗಬೇಕಾದರೆ ಜನರು, 'ಏ ಬೂಟ್ ಪಾಲಿಶ್' ಎಂದೇ ಕರೆಯುತ್ತಾರೆ. ಆ ಹೆಸರೇ ನನಗೂ ರೂಢಿಯಾಗಿದೆ. ಹೇಳಿ ಕೇಳಿ ಪರದೇಶಿಯದವನಿಗೆ ಯಾವ ಹೆಸರಾದರೇನಂತೆ! ತಾಯಿ ಇದ್ದರೂ ಇಲ್ಲದ ಹಾಗೆ. ತಂದೆ ಯಾರೆಂಬುದು ಗೊತ್ತಿಲ್ಲ. ಎಲ್ಲರೂ ಇರಬಹುದಾದರೂ ಈ ವಿಲಕ್ಷಣ ಲೋಕದಲ್ಲಿ ನಾನು ಮಾತ್ರ ಪರದೇಶಿ. ನನ್ನನ್ನು ಹುಟ್ಟಿಸಿದ ತಂದೆ ಆ ವಿಷಯವನ್ನೊಪ್ಪಿಕೊಳ್ಳಲು ಸಿದ್ಧವಾಗಿಲ್ಲ. ಈ ಲೋಕದಲ್ಲಿ ನಾನು, ನನ್ನಂಥ ಬೇರೆ ಪರದೇಶಿಗಳು... ನಮ್ಮ ಬಾಳು ಬಲು ವಿಚಿತ್ರ ಬಾಳು... ನಾಯಿಗಳ ಬಾಳು ಬೇಕು, ನಮ್ಮದು ಬೇಡ. ನಾಯಿ ಕುನ್ನಿಗಳು ತಮ್ಮ ತಂದೆ ತಾಯಿಗಳ ಜೊತೆಗಾದರೂ ಇರುತ್ತವೆ. ನಮಗೆ ಆ ಯೋಗವೂ ಇಲ್ಲ. ಯಾವ ಪಾಪಕ್ಕಾಗಿ ನಮಗೆ ಈ ಶಿಕ್ಷೆ? ನಾವು ಮಾಡಿದ ಪಾಪವಾದರೂ ಏನು ? ನಾವು ಬದುಕುವುದಾದರೂ ಏತಕ್ಕಾಗಿ ? ಅಂತೂ ಬದುಕುತ್ತಿದ್ದೇನೆ. ಬದುಕಲು ಈ ಬೂಟ್ ಪಾಲಿಶ್. ಅಂತೆಯೇ ಅದೇ ನನ್ನ ಸರ್ವಸ್ವ. ಅದನ್ನು ಬಿಟ್ಟರೆ ನನಗೆ ಬೇರೇನೂ ಇಲ್ಲ. ಯಾವ ಆಸೆಯೂ ಇಲ್ಲ. ಯಾವ ಆಕಾಂಕ್ಷೆಯೂ ಇಲ್ಲ.

'ಪಾಲಿಶ್... ಬೂಟ್ ಪಾಲಿಶ್... ಬರೀ ಒಂದಾಣೆ ಸಾರ್, ಹೆಚ್ಚಿಗಿಲ್ಲ. ಪಾಲಿಶ್... ಬೂಟ್ ಪಾಲಿಶ್....'

ಕೃತಿ–ಕರ್ತೃ ಪರಿಚಯ

ಬಸವರಾಜ ಕಟ್ಟೀಮನಿಯವರು ಬೆಳಗಾಂ ಜಿಲ್ಲೆಯವರು. ಗೋಕಾಕ್ ತಾಲೂಕಿನ ಮಲಾಮರಡಿಯಲ್ಲಿ 5.10.1919ರಲ್ಲಿ ಜನಿಸಿದರು. ಇವರು ಕಲಿತದ್ದು ಮೆಟ್ರಿಕ್‌ವರೆಗೆ ಮಾತ್ರ. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಸೆರೆಮನೆಗೂ ಹೋಗಬೇಕಾಯ್ತು. 1968ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿಗೆ ನಾಮಕರಣ. ಸುಮಾರು ಮುವತ್ತೈದಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿರುವ ಕಟ್ಟೀಮನಿಯವರು ಕನ್ನಡದ ಪ್ರಗತಿಶೀಲ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಟ್ಟೀಮನಿಯವರು ಒಂದೆರಡು ನಾಟಕಗಳನ್ನೂ, ಮತ್ತು ಜೀವನಚರಿತ್ರೆಗಳನ್ನು ಬರೆದಿದ್ದಾರೆ. ಇವರ ಆತ್ಮಕಥೆ, 'ಕಾದಂಬರಿಕಾರನ ಬದುಕು'. ಇವರ 'ಜ್ವಾಲಾಮುಖಿಯ ಮೇಲೆ' ಕಾದಂಬರಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸಿ ಬಂದಿದೆ. 1980ರಲ್ಲಿ ಬೆಳಗಾವಿಯಲ್ಲಿ ನಡೆದ 52ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕಾರವಾನ್, ಗುಲಾಬಿ ಹೂ. ಆಗಸ್ಟ್ ಒಂಬತ್ತು, ಸೆರೆಯಿಂದ ಹೊರಗೆ, ಜೋಳದ ಬೆಳೆಯ ನಡುವೆ, ಸುಂಟರಗಾಳಿ, ಇವು ಇವರ ಕಥಾ ಸಂಕಲನಗಳು. ಜ್ವಾಲಾಮುಖಿಯ ಮೇಲೆ, ಬೀದಿಯಲ್ಲಿ ಬಿದ್ದವಳು, ನೀನನ್ನ ಮುಟ್ಟಬೇಟ ಮೊದಲಾದವು ಇವರ ಕಾದಂಬರಿಗಳು. 'ಮಣ್ಣು ಮತ್ತು ಹೆಣ್ಣು' ಕೃತಿಗೆ ಮುಂಬಯಿ ಸರ್ಕಾರದ ಪ್ರಶಸ್ತಿ ದೊರಕಿದೆ.

ಪ್ರಸ್ತುತ ಕಥೆ – ಇವರ ಶಕ್ತಿಯುತವಾದ ಶೈಲಿ, ತೆರೆದ ಮನಸ್ಸಿನ ಚಿತ್ರಣವನ್ನು ನೀಡುತ್ತದೆ.

ಪದಗಳ ಅರ್ಥ

ನಿರುಕಿಸು–ನಿರೀಕ್ಷಿಸು, ನೋಡು; ಜರ್ಜರಿತ–ಚೂರುಚೂರಾದ; ಅಣಿಮಾಡು–ಸಿದ್ಧ ಮಾಡು; ನೆಟ್ಟಗಿರಲಿಲ್ಲ–ಆರೋಗ್ಯವಿರಲಿಲ್ಲ; ಪವಡಿಸು–ಮಲಗು; ಸಂತವಿಸು–ಸಮಾಧಾನ ಮಾಡು; ಉಕ್ಕೇರು–ಹೆಚ್ಚಾಗು; ಗೋಗರೆ–ಅಂಗಲಾಚು; ಜಳಕ–ಸ್ನಾನ, ಕೌತುಕ–ಕುತೂಹಲ; ಆಘಾತ–ಪೆಟ್ಟು; ಹಲುಬು–ಕೊರಗು.

10th_Kannada_Reader1-5.indd 209 03-04-2019 14:08:06

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬೂಟ್ ಪಾಲಿಶ್ ಹುಡುಗನ ಗುರಿ ಏನು ?
2. ಬೂಟ್ ಪಾಲಿಶ್ ಹುಡುಗ ಎಲ್ಲಿ ವಾಸಿಸುತ್ತಿದ್ದ?
3. ಹುಡುಗನಿಗೆ ಯಾವ ಹುಚ್ಚು ಹಿಡಿಯಿತು?
4. ಹುಡುಗನು ತಾಯಿಯನ್ನು ತಬ್ಬಿಕೊಳ್ಳಲು ಹೋದಾಗ ಆಕೆ ಏನು ಮಾಡಿದಳು?
5. 'ತಾಯಿ' ಕೊಟ್ಟ ರೂಪಾಯಿಯನ್ನು ಹುಡುಗ ಏನು ಮಾಡಿದ ?
6. ಹುಡುಗನು ನಾಟಕದ ಥಿಯೇಟರಿನ ಮುಂದೆ ರಾತ್ರಿ ಮೂರು ಗಂಟೆಯವರೆಗೆ ಕಾದು ನಿಂತದ್ದು ಏಕೆ ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಬೂಟ್ ಪಾಲಿಶ್ ಹುಡುಗ ಮುದುಕನ ಆಶ್ರಯ ಪಡೆಯಲು ಕಾರಣವೇನು?
2. ನಾಟಕ ಗೃಹದ ಬಳಿ ನಡೆದ ಘಟನೆ ಏನು ?
3. ನಡುವಯಸ್ಸಿನ ಮಹಿಳೆಯನ್ನು ಕಂಡಾಗ ಹುಡುಗನ ಮನಸ್ಸಿನಲ್ಲಿ ಮೂಡಿದ ಭಾವನೆಗಳಾವುವು ?
4. ನಿರಾಶನಾದ ಹುಡುಗನ ಮನಸ್ಸಿನಲ್ಲಿ ಉಂಟಾದ ಭಾವನೆಗಳೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಅಜ್ಜ ಮತ್ತು ಬೂಟ್ ಪಾಲಿಶ್ ಹುಡುಗನ ಸಂಬಂಧವನ್ನು ವಿವರಿಸಿ.
2. ಬೂಟ್ ಪಾಲಿಶ್ ಹುಡುಗನು 'ತಾಯಿ'ಯನ್ನು ಕಾಣಲು ಹಲುಬಿದ ರೀತಿಯನ್ನು ಅದರ ಪರಿಣಾಮವನ್ನು ಕುರಿತು ಬರೆಯಿರಿ ?

IV. ಕೆಳಗಿನ ವಾಕ್ಯಗಳ ಸಂದರ್ಭ ಹಾಗೂ ಸ್ವಾರಸ್ಯವನ್ನು ಬರೆಯಿರಿ.

1. 'ಬೂಟ್ ಪಾಲಿಶ್ ಪ್ರಪಂಚವೇ ನನ್ನ ಪ್ರಪಂಚ'
2. 'ನನ್ನ ತಾಯಿ..... ನಾನಾಕೆಯನ್ನು ಕಾಣಬೇಕು'
3. 'ಅಂದು ನನಗೆ ಜೀವವೇ ಬೇಡವೆನ್ನಿಸಿತು'
4. 'ನನಗಾರೂ ಇಲ್ಲ ಈ ಪ್ರಪಂಚದಲ್ಲಿ'

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ವಿಗ್ರಹ ವಾಕ್ಯ ಬರೆದು ಸಮಾಸದ ಹೆಸರನ್ನು ತಿಳಿಸಿ.**
   ಕೈಹಾಕು, ತಂದೆತಾಯಿ, ಧರ್ಮಶಾಲೆ, ತಲೆಗೂದಲು, ನಿಟ್ಟುಸಿರು.
2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
   ಭೋಜನಾಲಯ, ಒಂದಾಣೆ, ನಾವೆಲ್ಲ, ಮೈಯಲ್ಲಿ, ಚೀಲವನ್ನು.
3. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
   ಧ್ವನಿ, ಮುಖ, ಸ್ವರ, ಅಚ್ಚರಿ, ಧರ್ಮ, ಕುಮಾರಿ, ಶಿಶು, ವರ್ಷ, ಸೀರೆ, ಕ್ಷಣಬೀದಿ.
4. ನಗುನಗುತ್ತ, ಅವಸರವಸರವಾಗಿ – ಈ ಪದಗಳನ್ನು ದ್ವಿರುಕ್ತಿಗಳೆನ್ನುವರು. ಕ್ರಿಯೆಯ ತೀವ್ರತೆಯನ್ನು ಸೂಚಿಸಲು ಒಂದು ಪದವನ್ನು ಒಟ್ಟಿಗೆ ಎರಡು ಸಲ ಬಳಸಿದರೆ ಅದನ್ನು ದ್ವಿರುಕ್ತಿಯೆನ್ನುವರು. ಇದೇ ರೀತಿ ಇತರ ಐದು ದ್ವಿರುಕ್ತಿಗಳನ್ನು ಬರೆದು ಅವುಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಚಟುವಟಿಕೆ

1. ನೀವು ಕಂಡ ಘಟನೆ ಅಥವಾ ನಿಮ್ಮ ಜೀವನದಲ್ಲಿ ನಡೆದ ಘಟನೆಯನ್ನು
   ಒಂದು ಪುಟ್ಟ ಕಥೆಯ ರೂಪದಲ್ಲಿ ಬರೆಯಿರಿ.
2. ಬಸವರಾಜ ಕಟ್ಟೀಮನಿಯವರ 'ಮಾಡಿ ಮಡಿದವರು', 'ಜ್ವಾಲಾಮುಖಿಯ ಮೇಲೆ' ಮುಂತಾದ ಕಾದಂಬರಿಗಳನ್ನು ಓದಿರಿ.
3. ಮಾನವೀಯತೆಯಿಂದ ಬದುಕಿದ ಮಹನೀಯರನ್ನು ಕುರಿತು ತರಗತಿಯಲ್ಲಿ ಚರ್ಚಾಸ್ಪರ್ಧೆಯನ್ನು ಏರ್ಪಡಿಸಿ.

10th_Kannada_Reader1-5.indd 210 03-04-2019 14:08:06

ಉಪಪಠ್ಯ

ಘಟಕ ಹತ್ತು

ತ್ಯಾಗಮಯಿ

–ಎಚ್.ಜೆ. ಲಕ್ಕಪ್ಪಗೌಡ



ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಣ್ಣ ಕಥೆಗಳಿಗೆ ವಿಶೇಷ ಸ್ಥಾನವಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದರ ವೈವಿಧ್ಯ ಮಹತ್ವವಾದುದು. ಗ್ರಾಮೀಣ ಬದುಕಿನ ಚಿತ್ರಣ ಕಥಾ ಪ್ರಕಾರಕ್ಕೆ ಮಾದರಿ ಹಾಗೂ ಹಿನ್ನೆಲೆ. ಅದರ ಮೂಲಕ ಸಾಂಸ್ಕೃತಿಕ ನಡವಳಿಕೆಯನ್ನು ಬಿಂಬಿಸುವ ಅರ್ಥವತ್ತಾದ ಪರಂಪರೆ ಬೆಳೆದು ಬಂದಿದೆ.

ತ್ಯಾಗ ಮೌಲಿಕ ಪರಿಕಲ್ಪನೆ. ಸ್ವಾರ್ಥವನ್ನು ಮರೆತು ಪರರ ಉಪಕಾರಕ್ಕೆ ಮುಂದಾಗಬೇಕು. ಶರೀರ ಸಾರ್ಥಕವಾಗುವುದು ಪರೋಪಕಾರದಿಂದಲೇ ಎಂಬ ತತ್ವ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿದೆ. ಮನುಷ್ಯ ಪ್ರಜ್ಞಾಪೂರ್ವಕವಾಗಿ ಚಟುವಟಿಕೆಗಳನ್ನು ರೂಢಿಸಿಕೊಳ್ಳುತ್ತಾನೆ. ಆದರೆ ಮುಗ್ಧ ಪ್ರಾಣಿಗಳೂ ಆದರ್ಶವಾಗಿ ಬಾಳಿ ಜೀವನವನ್ನು ಸಾರ್ಥಕಗೊಳಿಸಿದ ಸಂದರ್ಭಗಳು ಗಣನೀಯ. ಇಂತಹ ಸಾಂಸ್ಕೃತಿಕ ಮೌಲಿಕ ಪ್ರಸಂಗಗಳು ಸಾಹಿತ್ಯ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುವುವು. ತ್ಯಾಗಮಯಿ ಇದಕ್ಕೊಂದು ನೈಜ ದೃಷ್ಟಾಂತ.



10th_Kannada_Reader1-5.indd 211 03-04-2019 14:08:06

.....ಗೌರಿ ಭೂಮಿಗೆ ಇಳಿದೇ ಇಳಿದಳು. ನಮ್ಮ ಮನೆಯಲ್ಲಿ ಬೆಳಕು ಮೂಡಿತು. ಸಂತೋಷ ಚಿಮ್ಮಿತು. ಅದೃಷ್ಟ ಖುಲಾಯಿಸಿತು. ಹಾಲು, ಮೊಸರು, ಬೆಣ್ಣೆ ತಿಂದು ಕೆಂಪ ದುಂಡು ದುಂಡಾಗಿ ಬೆಳೆದ. ಅದರ ದುಡ್ಡಿನಲ್ಲೇ ಈ ಮನೆ ಕಟ್ಟಿದ ಜಾಗ ಕೊಂಡುಕೊಂಡೆ. ಗೌರಿ ಪುಣ್ಯವಂತೆ. ತಾನು ಹುಟ್ಟಿದ ಒಂದೂವರೆ ವರ್ಷಕ್ಕೆ ಒಬ್ಬ ತಮ್ಮನನ್ನೂ ಕರೆದುಕೊಂಡಳು. ಅವನನ್ನು ಮಾರಿ ಒಂದು ಜೊತೆ ಗಿಡ್ಡಗಳನ್ನು ಕೊಂಡು ಅವರಿವರ ಹೊಲ ವಾರಕ್ಕೆ ಸಾಗು ಮಾಡಿದೆ. ಗೌರಿಯ ಗೊಬ್ಬರ ಹಾಕಿದ ಯಾವ ನೆಲವೂ ಹುಸಿಯುತ್ತಿರಲಿಲ್ಲ. ಅವಳ ಕೃಪೆಯಿಂದ ಹೊಟ್ಟೆ ಬಟ್ಟೆಗೆ ಸಾಕಾಗುವಷ್ಟು ನೆಮ್ಮದಿಯ ಕುಳವಾದೆ. ಗೌರಿಯ ತಾಯಿ ಮತ್ತೊಮ್ಮೆ ಮಗನನ್ನು ಹೆತ್ತು ಮೇಯಲು ಹೋಗಿದ್ದವಳು ಗರೇಗುಡ್ಡದಲ್ಲಿ ಕಿರುಬನ ಬಾಯಿಗೆ ತುತ್ತಾದಳು..... ಸಿದ್ಧಪ್ಪನ ಕಣ್ಣಿನಿಂದ ನೀರು ಜಾರಿ ಎಸರಿನೊಳಕ್ಕೆ ಬಿತ್ತು.

'ಅದ್ಯಾಕಜ್ಜಾ ಅಳ್ತಿ..... ಉಣ್ಣಾಕಿಲ್ವಾ..... ಹಿಟ್ಟಾರಿ ಹೋಯ್ತದೆ..... ಉಣ್ಣು'..... ಪಕ್ಕದಲ್ಲಿದ್ದ ಮೂರು ವರ್ಷದ ಮೊಮ್ಮಗ ಹೇಳಿದ.

'ನಾನುಣ್ತೀನಿ ನೀನುಣ್ಣು ಮೊಗ..... ಕಣ್ಣಲ್ಲಿ ಏನೋ ಕಸ ಬಿಳ್ತು ಕಂತೆ' ಎಡಗೈಯಿಂದ ಕಣ್ಣುಜ್ಜುತ್ತಾ ಹೇಳಿದ ಸಿದ್ಧಪ್ಪ.

'ನಾನೂ ಅಷ್ಟೊತ್ನಿಂದ ನೋಡ್ತಾ ಇವ್ನಿ..... ಒಂದ್ ತುತ್ತೂ ಉಣ್ದೆ ಗುಕ್ ಕೈಲಿ ಹಿಡ್ಕೊಂಡು ಹಂಗೆ ಏನೋ ಯೋಚ್ನೆ ಮಾಡ್ತಾ ಕೂತಿದ್ದೀರಿ.....' ಸೊಸೆ ಒಳಗಿನಿಂದ ಹೇಳಿದಳು.

ನಾಯಿ 'ಅಗಲ' ಕಡೆಗೇ ನೋಡುತ್ತಿತ್ತು. ಕೈಲಿದ್ದ ತುತ್ತನ್ನು ನಾಯಿಗೆ ಎಸೆದ. ಈ ಪ್ರಾಣಿಗಳಿಗೆ ದೇವರು ಅದೆಂಥ ಮನಸ್ಸು ಕೊಟ್ಟವನೆ. ಹೊಟ್ಟೆಗೆ ಹಾಕಲಿ, ಹಾಕದೆ ಇರಲಿ, ಹೊಡೀಲಿ, ಬಡೀಲಿ ತಮ್ಮನ್ನು ನಂಬಿದವರನ್ನು ಎಂಥಾ ಕಾಲದಲ್ಲೂ ಕೈಬಿಟ್ಟು ದೂರ ಹೋಗೋದಿಲ್ಲ. ಆದರೆ ಮನುಷ್ಯ ? ಸ್ವಲ್ಪವೂ ಕರುಣೆಯಿಲ್ಲದೆ ತನಗೆ ಆದೋರು, ಹೋದೋರು ಎಲ್ಲರನ್ನೂ ಮರೆತು ತನ್ನ ಜೀವ ಉಳಿಸಿಕೊಳ್ಳೋದೇ ಎಲ್ಲದಕ್ಕಿಂತ ದೊಡ್ಡದು ಅಂತಾನೆ. ಹಂಗಾದರೆ ಈ ಮೂಕ ಪ್ರಾಣಿಗಳಿಗಿಂತ ಮನುಷ್ಯ ಯಾವ ಲೆಕ್ಕದಲ್ಲಿ ದೊಡ್ಡೋನು? ಗೌರಿ.....

ಗೌರಿ.....

ನನಗೆ ತಾಯಿ ತಂದೆ ದೇವರು ಎಲ್ಲಾ ಆಗಿದ್ದಳು. ಅವಳು ಜೊತೇಲಿದ್ದರೆ ನಾಕಾಳಿನ ಬಲ.

ಒಂದು ಸಲ, ಹೊತ್ತಾರೆ ಹೊತ್ತು. ಗೌರಿಯನ್ನು ಕರೆದುಕೊಂಡು ಹೊಲದ ಹತ್ತಿರ ಹೋದೆ. ಕಬ್ಬಿನಂತೆ ಬೆಳೆದು ನಿಂತ ಎಳೆ ಮೊಗರು ಹುಲ್ಲಿನ ಬದುವಿನಲ್ಲಿ ಅವಳನ್ನು ಕಟ್ಟಿ ಹಾಕಿ ಕೆರೆ ಕಡೆ ಹೋಗಿ ಬರುತ್ತಾ ಇದ್ದೆ. ಎದುರಿಗೆ ರಾಚಪ್ಪ ಕೊಡಲಿ ಹೆಗಲ ಮೇಲಿಟ್ಟುಕೊಂಡು ಬರುತ್ತಾ ಇದ್ದ. ಹಿಂದಿನ ದಿನ ನಾನು ಗುತ್ತಿಗೆಗೆ ಮಾಡಿದ್ದ ತೋಟದಲ್ಲಿ ಎಳನೀರು ಕೀಳ್ತಾ ಇದ್ದನಂತೆ. ಅದನ್ನು ಕಂಡು 'ಸಾಕಿ' ಬೈದರೆ ಅವಳನ್ನೇ ಹೀನಾಮಾನವಾಗಿ ಬೈದು ಹೊಡೆಯೋಕೂ ಬಂದಿದ್ನಂತೆ. ಇವನ ಸೊಕ್ಕು ಎಷ್ಟಾಯಿತು? ಅದನ್ನೇ ಈಗ ಕೇಳಿದೆ.....

'ಏನೋ ರಾಚಪ್ಪ, ನಮ್ಮ ಮರದಲ್ಲೇ ಎಳನೀರು ಕಿತ್ತು ನನ್ ಹೆಂಡ್ತೀನೇ ಹೊಡೆಯೋಕೆ ಬಂದಿದ್ದೆಯಂತೆ. ಏನು ಹೇಳೋರ್ ಕೇಳೋರ್ ಯಾರೂ ಇಲ್ವೋ?' ಎದೆಗೆ ಒದ್ದಂತೆ ಅವನು ಉತ್ತರ ಕೊಟ್ಟ.....

'ಏನ್ಲಾ ಸಿದ್ಧ, ತಲೆ ಗಿಲೆ ತಿರಗ್ತಾ ಅದ್ಲ? ತಿರುಕನಿಗೆ ಐಸಿರಿ ಬಂದ್ರೆ ಅರ್ಧ ರಾತ್ರೀಲಿ ಕೊಡೆ ಹಿಡಿಸ್ಕೊಂಡ್ನಂತೆ. ಎಂಜಲ ಹಿಟ್ಟು ಎತ್ಕೊಂಡು ಬಿದ್ದಿದ್ದೋನ್ಗೆ ಏಟ್ಲಾ ದವಲತ್ತು?'

ಯಾವ ಮಾತಿಗೆ ಯಾವ ಮಾತು? ನನಗೆ ಭಯಂಕರ ಸಿಟ್ಟು ಬಂದಿತ್ತು. ಹಿಂದೆ ಮುಂದೆ ನೋಡದೆ ಕೂಡಲೇ ನುಗ್ಗಿ ಅವನ ಜುಟ್ಟು ಹಿಡಿದು ಬಗ್ಗಿಸಿ ಕುತ್ತಿಗೆ ಮೇಲೆ ದಬದಬನೆ ನಾಲ್ಕು ಗುದ್ದು ಇಡಿದು, ಹಿಂದಕ್ಕೆ ನೂಕಿದೆ. ಅಷ್ಟು ದೂರ ಹೋಗಿ ಬಿದ್ದವನು ಕೊಸರಿಕೊಂಡು ಎದ್ದು ಕೊಡಲಿ ಎತ್ತಿಕೊಂಡು ಹಲ್ಲು ಕಡೀತಾ ನುಗ್ಗಿ ಬಂದ. ಕೊಡಲಿ ಕಂಡು ನನಗೆ ಗಾಬರಿಯಾಯಿತು. ಹಿಂದೆ ಹಿಂದೆ ಸರಿದೆ. ಅವನು ಮುಂದೆ ಮುಂದೆ ಬಂದ. ಹಿಂದುಗಡೆ ಇದ್ದ ಹುತ್ತ ಎಡವಿ ಕೆಳಕ್ಕೆ ಬಿದ್ದು, 'ಅಯ್ಯೋ!' ಎಂದು ಚೀರಿದೆ. ಕಣ್ಣಿಗೆ ಕತ್ತಲುಗಟ್ಟಿತು. ಮರುಚಣದಲ್ಲೇ ಅವನೂ 'ಅಯ್ಯೋ!' ಎಂದು ಚೀರಿದ. ನಾನು ಹೊರಳಿ ಎದ್ದು ನೋಡುವಷ್ಟರಲ್ಲಿ ಅವನು ಕೆಳಗೆ ಬಿದ್ದಿದ್ದ. ಗೌರಿ ಬುಸುಗುಡುತ್ತಾ ತನ್ನ ಚೂಪಾದ ಕೊಂಬುಗಳನ್ನು ಅವನ ಹೊಟ್ಟೆಗೆ ಗುರಿಯಿಟ್ಟು ನಿಂತಿದ್ದಳು. ಆ ವೇಳೆಗೆ ಸುತ್ತಮುತ್ತಲಿದ್ದವರು ಓಡಿ ಬಂದು ಬಿಡಿಸಿದರು. ಆ ದಿನ ಗೌರಿ ಇಲ್ಲದಿದ್ದರೆ ನಾನು ಏನಾಗುತ್ತಿದ್ದೆನೋ.....

10th_Kannada_Reader1-5.indd 212 03-04-2019 14:08:06

ಇನ್ನೊಂದು ಸಲ. ಹೊಲದ ಹಲಸಿನ ಮರದಡಿ ಮಲಗಿದ್ದಾಗ ತಲೆಯ ಹತ್ತಿರ ಹೆಡೆ ಬಿಚ್ಚಿ ನಿಂತಿದ್ದ ನಾಗರಹಾವನ್ನು ಕೊಂಬಿನಲ್ಲಿ ತಿವಿದು ಕಾಲಲ್ಲಿ ತುಳಿದು ಕೊಂದು, ತಾನೂ ಕಡಿಸಿಕೊಂಡು ನನಗೆ ಜೀವದಾನ ಮಾಡಿದ್ದಳು. ನಂಜಾಗಿ ಏನೇನೋ ಔಷಧಿ ಕಷಾಯ ಮಾಡಿದ ಮಾಲೆ ದೇವರ ದಯೆಯಿಂದ ಉಳಿದುಕೊಂಡಿದ್ದಳು.

ಗೌರಿ ಹೊಲ ಉತ್ತಳು. ಹೊರೆ ಹೊತ್ತಳು. ಗಾಡಿ ಎಳೆದಳು. ಅವಳು ಹೆಜ್ಜೆ ಹಾಕಿದ ನೆಲದಲ್ಲಿ ಹೊನ್ನು ಬೆಳೆಯಿತು. ಒಂದೇ..... ಎರಡೇ..... ಗೌರಿ ನನಗೆ ಮಾಡಿದ ಉಪಕಾರದ ಹೊರೆ ಒಂದು ಜನ್ಮದಲ್ಲಿ ತೀರಿಸುವಂಥದ್ದಲ್ಲ. ವರ್ಷಕ್ಕೊಂದರಂತೆ ತಪ್ಪದೆ ಆರು ಹೋರಿ ಕರುಗಳನ್ನು ಈದು ಗೌರಿ ನಮಗೆ ಒಪ್ಪಿಸಿದಳು. ಒಂದೂ ಕಳಪೆಯದಲ್ಲ. ಅವಳ ಮೈಯಂತೆಯೇ ರೂಪದಲ್ಲಿ, ಆಳ್ತನದಲ್ಲಿ. ಲಕ್ಷಣದಲ್ಲಿ ಅವಳ ಕರುಗಳೂ ಒಂದೊಂದು ರತ್ನ. ನಮ್ಮ ಮನೆಯ ದೀಪವಾಗಿದ್ದ ಜೀವದ ಜೀವವಾಗಿದ್ದ ಗೌರಿಯನ್ನು ಸಾವಿರದ ಇನ್ನೂರು ರೂಪಾಯಿಗಳವರೆಗೂ ಪಟೇಲರು ಪಿಂಡಾಡಿಸಿದ್ದುಂಟು. ಅವಳನ್ನು ನೋಡುವುದಕ್ಕೆ ಎರಡು ಕಣ್ಣು ಸಾಲದು. ಥೇಟ್ ಹಿಮಗಿರಿಯ ಗೌರಿಯೇ.....

ಈ ನಾಲ್ಕು ವರ್ಷದಿಂದ ಮಳೆ ಧರೆಗೆ ಹನಿತಿಲ್ಲ. ಕುಡಿಯಲು ನೀರಿಲ್ಲ; ಕೆರೆಕುಂಟೆಗಳೆಲ್ಲ ಬೀತು ಬಾಯಿ ಬಿಟ್ಟಿವೆ. ತಿನ್ನಲು ಅನ್ನವಿಲ್ಲ. ಅದೇ ವರ್ಷ ಬಂದ ಕಾಲರಾದಲ್ಲಿ ನನ್ನ 'ಸಾಕಿ' ಕಣ್ಣು ಮುಚ್ಚಿಕೊಂಡಳು. ಆಗಲೇ ನಾನೂ ಹೊಂಟೋಗಿದ್ದರೆ ಇದನ್ನೆಲ್ಲಾ ಈ ಪಾಪಿ ಕಣ್ಣಲ್ಲಿ ನೋಡಬೇಕಾಗಿರಲಿಲ್ಲ. ಆಗ ಮೂರು ದಿನ ನನ್ನ ಗೌರಿ, ವಯಸ್ಸದ ಅಜ್ಜಿಯಾಗಿದ್ದ ನನ್ನ ಗೌರಿ – ಹುಲ್ಲು ನೀರು ಮುಟ್ಟದೆ ಕಣ್ಣೀರು ಸುರಿಸಿದಳು.

ಎಷ್ಟೋ ಜನ ಊರು ಬಿಟ್ಟು ಹೊರಟು ಹೋದರು. ದನ, ಕರು, ಗಂಗಳ, ಚೊಂಬು, ಚಿನ್ನ–ಚಿಗುರು ಎಲ್ಲಾ.... ನನ್ನ 'ಸಾಕಿ', ನನ್ನ 'ಗೌರಿ' ಸಂಪಾದಿಸಿದ್ದೆಲ್ಲಾ ಮುಗಿದು ಹೋಯಿತು. ಗೋಣಿಸೊಪ್ಪು, ತಾರಿಸೊಪ್ಪು, ಕತ್ತರಿಸಿ ದನಗಳಿಗೆ ಹಾಕಿದ್ದಾಯಿತು. ಈಗ ಅದೂ ಇಲ್ಲ. ಮರಗಿಡಗಳೆಲ್ಲಾ ಹುಲಿ ತಿಂದು ಬಿಟ್ಟ ದನಗಳ ಮೂಳೆ ಪಂಜರದಂತೆ ಆಗಿದ್ದವು. ನಾವೂ ಸೊಪ್ಪು ಸದೆ ತಿಂದು ಇಲ್ಲಿಯವರೆಗೆ ಕಾಲ ಹಾಕಿದ್ದಾಯಿತು. ಸಾಲದ್ದಕ್ಕೆ ಒಂದರ ಹಿಂದೆ ಮೂರು ಮಕ್ಕಳು ಮಗನಿಗೆ, ದುರ್ಭಿಕ್ಷದಲ್ಲಿ ಅಧಿಕ ಮಾಸ ಅನ್ನೋ ಹಾಗೆ. ಹೊಟ್ಟೆಗಿಲ್ಲದೆ ಅವೂ ಸವೆದು ಹಂಚಿಕಡ್ಡಿಯ ಹಂಗವೆ.....

ಮೊನ್ನೆ ಮಗನಿಗೂ ನನಗೂ ನಡೆದ ಮಾತು.... ಅಂಜುತ್ತಂಜುತ್ತಾ ಮಗ ಕೇಳಿದ್ದ: 'ಅಪ್ಪಾ..... ಮಕ್ಕಳೆಲ್ಲಾ ಹೊಟ್ಟೆಗಿಲ್ದೆ ಸಾಯ್ತಾ ಅವೆ. ಗೌರಿ ಹಸು ಹ್ಯಾಂಗೂ ಮುದುಕಿ ಆಗೋದ್ಲು. ಅವಳಿಗೂ ಸರಿಯಾಗಿ ಹುಲ್ಲೂ ನೀರೂ ಇಲ್ಲ. ಅದು ಈಟ್ದಿನಗಂಟ ಬದುಕಿದ್ದೇ ಹೆಚ್ಚು. ಮಾರಿದರೆ ಒಂದ್ಹತ್ತು ರೂಪಾಯಾದ್ರೂ ಬತ್ತದೆ. ಮಕ್ಕಳು ಒಂದೆರಡು ದಿನ ಹಾಯಾಗಿ ಗಂಜೀನಾದ್ರೂ ಕುಡೀಬಹ್ದು.....'

'ಏನಂದೇ.....' ನನ್ನ ಕರುಳನ್ನೇ ಯಾರೋ ಕಿತ್ತು ಎಳೆದಂತಾಗಿ ಹುಚ್ಚು ಕೋಪದಿಂದ ಅಬ್ಬರಿಸಿದ್ದೆ.

'ನನಗೆ ನಿನಗೆ ಪ್ರಾಣ ಕೊಟ್ಟ ದೇವತೆ ಕನೋ ಕೆಂಪ ಇವಳು. ಇಲ್ಲೀಗಂಟ ನಮ್ಮ ಸಲುವಾಗಿ ದುಡ್ದೂ ದುಡ್ದೂ ತನ್ನ ಪ್ರಾಣ ತೇದು ನಮ್ಮ ಬದುಕಿಸವಳೇ ಕನೋ ಈ ಪುಣ್ಯವಂತೆ. ಅದೃಷ್ಟ ಚೆಂದಾಗಿದ್ರೆ ಇವಳ್ನ ನಮ್ಮ ಹೊಲದಲ್ಲಿ ಹೂಣಿಸಿ ಮ್ಯಾಲೊಂದು ಮಂಟಪ ಕಟ್ಟಿಸಬೇಕು ಅಂತಿದ್ದೆ. ಆ ಪುಣ್ಯ ನನ್ನ ಹಣೇಲಿ ಬರೀನಿಲ್ಲ. ಈಗ ಇವಳು ಸಾಯೋ ಕಾಲದಲ್ಲಿ ಕಟುಕನಿಗೆ ಮಾರಿ ಆ ಅನ್ನ ತಿಂದ್ರೆ ನಮ್ಮ ಬಾಯ್ಲಿ ಹುಳಾ ಬೀಳಾಕಿಲ್ವೇನೋ.....?'

ಎಂದೂ ಎದುರು ಮಾತನಾಡದ ಮಗ ಹೇಳಿದ್ದ : 'ಕಟುಕನಿಗೆ ಕೊಡೋದು ಪಾಪ, ಸರೀ ಕನಪ್ಪ. ಆದ್ರೆ ಹುಲ್ಲೂ ನೀರೂ ಕೊಡದೆ ಸಾಯಿಸೋದು ಪಾಪ ಅಲ್ವಾ? ಅದರಿಂದ ನಮಗೆ ಉಪಕಾರಾನೂ ಇಲ್ಲ. ನಮಗೆ ಅದನ್ನ ಸಾಕೋ ಶಕ್ತೀನೂ ಇಲ್ಲ. ಹಿಂಗಿರೋವಾಗ ಸುಮ್ನೆ ಅದನ್ನ ಕಟ್ಟಾಕಿಕೊಂಡು ಏನು ಫಲ.....?'

'ನಿಜ ಕನೋ, ನನ್ನಿಂದಲೂ ನಿನಗೆ ಏನೂ ಉಪ್ಕಾರ ಇಲ್ಲ. ನನ್ಗೂ ಒಂದು ತೊಟ್ಟು ಪಾಷಾಣ ಕೊಟ್ಟುಡು. ಆಮ್ಯಾಲೆ ನಿನಗೆ ಇಷ್ಟ ಬಂದ್ಹಂಗೆ ಮಾಡು'

ಮಗ ಮುಂದೆ ಮಾತಾಡಿರಲಿಲ್ಲ. ಆ ರಾತ್ರಿಯೆಲ್ಲಾ ಗೊಂತಿನಲ್ಲಿ ಅವಳ ಕೊರಳು ತಬ್ಬಿ ಕಣ್ಣೀರು ಸುರಿಸಿದ್ದೆ.

ಆದರೆ ಈ ದಿನ. ಮಗನ ಆರು ತಿಂಗಳ ಚಿಕ್ಕ ಮಗು ಕೆಂಡದಂಥ ಜ್ವರದಿಂದ ಬೇಯುತ್ತಿತ್ತು. ಹಾಗೆಯೇ ಬಿಟ್ಟರೆ ಉಳಿಯುವಂತಿರಲಿಲ್ಲ. ಅದರ

10th_Kannada_Reader1-5.indd 213 03-04-2019 14:08:06

ಮುಖ ನೋಡಿದಾಗ ಗೌರಿ ಮುಖ ನೆನಪಿಗೆ ಬಂತು. ಒಂದು ಬೆಳೆಯೋ ಚಿಗುರು; ಒಂದು ಉದುರೋ ಹಣ್ಣೆಲೆ. ಚಿಗುರೆಲೆಗೆ ದಾರಿ ಮಾಡಿ ಕೊಟ್ಟು ಹಣ್ಣೆಲೆ ಉದುರಬೇಕು. ಇದು ಪ್ರಕೃತಿ ಧರ್ಮ. ಹೇಗೂ ಉದುರಲೇ ಬೇಕಾದ್ದು, ಒಂದು ದಿನ ಮುಂಚಿತವಾಗಿ ಉದುರಿದರೆ ತಪ್ಪೇನು.....? ಗಟ್ಟಿ ಮನಸ್ಸು ಮಾಡಿ ಮಗನಿಗೆ ಹೇಳಿದ್ದೆ.

'ಮೊಗಾ..... ಗೌರಿ ಹೊಡ್ಕೊಂಡು ಹೋಗು. ಕೊಣ್ಣೂರು ಸಂತೇಲಿ ಹೋದಷ್ಟಕ್ಕೆ ಮಾರಿ ಮಗೀಗೆ ಔಸ್ತಿ ತಕ್ಕೊಂಬಾ'

ಮನೆ ಬಿಟ್ಟು ಹೋಗಲಾರದೆ ಹೋದ ಗೌರಿಯನ್ನು, ನನ್ನ ಬಾಳಿನ ಭಾಗ್ಯಲಕ್ಷ್ಮಿಯನ್ನು ಮನಸ್ಸಿಲ್ಲದ ಮನಸ್ಸಿನಿಂದ ಸಂತೆಯಲ್ಲಿ ಆರು ರೂಪಾಯಿಗೆ ಮಾರಿ ಮಗುವಿಗೆ ಔಷಧಿಯನ್ನೂ ಹೊಟ್ಟೆಗೆ ಜೋಳವನ್ನೂ ತಂದಿದ್ದ ಮಗ. ಅದೇ ಗೌರಿ.... ಸಾಯುವಾಗಲೂ ಪರೋಪಕಾರಕ್ಕಾಗಿಯೇ ಸತ್ತ ನನ್ನ ಗೌರಿ.... ಮುದಿ ಮಾಂಸದ ಮುದ್ದೆ ನನ್ನ ಕಣ್ಣ ಮುಂದೆ.... ಇದೇ ಅವಳ ಸೇವೆಗೆ ನಾನು ಕೊಟ್ಟ ಉಡುಗೊರೆ.

ತುತ್ತು ಕೈಯಿಂದ ಜಾರಿ ಬಿದ್ದಿತು..... ಎಲ್ಲಿಂದಲೋ ಬಂದ ಮಗ..... 'ಯಾಕಪ್ಪಾ ತುತ್ತು ಹಿಡ್ಕೊಂಡು ಹಂಗೇ ಕೂತಿದ್ದೀಯಾ.....?' ಅಂದ.

'ಯಾಕೂ ಇಲ್ಲ. ನಂಗೆ ಹಸಿವಿಲ್ಲಪ್ಪ.....' ಎಂದು ಎದ್ದು ಕೈ ತೊಳೆದುಕೊಳ್ಳಲು ಹೋದ ಸಿದ್ಧಪ್ಪ.

ಮಕ್ಕಳು ಅಜ್ಜನ ಎಡೆಗೆ ಕೈ ಹಾಕಿದವು.

ಕೃತಿ–ಕರ್ತೃ ಪರಿಚಯ



ಎಚ್.ಜೆ. ಲಕ್ಕಪ್ಪಗೌಡ

ಎಚ್.ಜೆ. ಲಕ್ಕಪ್ಪಗೌಡರು (1939) ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಹಂಪಾಪುರದವರು. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕ, ಕುಲಸಚಿವರಾಗಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. 'ಶ್ರೀ ರಾಮಾಯಣ ದರ್ಶನಂ – ಒಂದು ವಿಮರ್ಶಾತ್ಮಕ ಅಧ್ಯಯನ' ಗ್ರಂಥಕ್ಕೆ ಪಿಎಚ್.ಡಿ., ಪದವಿ ಪಡೆದಿದ್ದಾರೆ. ವಸಂತ ಗೀತಿ, ಊರ ಮುಂದಿನ ಬಾವಿ ಇವು ಇವರ ಕವನ ಸಂಕಲನಗಳು. ದಲಿತ ಸೂರ್ಯ, ಸಿದ್ಧರಾಮ ಜೀವನ ಚರಿತ್ರೆಗಳು, ಸಂಗಮ, ಅಂತರಂಗ ವಿಮರ್ಶಾ ಕೃತಿಗಳು, ಜನಪದ ಕಥಾವಳಿ, ಇಬ್ಬನಿ, ಒಗಟು ಮುಂತಾದ ಜಾನಪದ ಕೃತಿಗಳನ್ನು ರಚಿಸಿದ್ದಾರೆ. ಪದ್ದುಹದ್ದು, ದೀನಬಂಧು – ಇವು ಇವರ ಮಕ್ಕಳ ಕೃತಿಗಳು. ಲಕ್ಕಪ್ಪಗೌಡ ಅವರು ದೇವರಾಜ ಬಹದ್ದೂರ್ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಗ್ರಾಮೀಣ ಬದುಕಿನ ಚಿತ್ರಣದೊಂದಿಗೆ ಪರೋಪಕಾರದಿಂದ ತನ್ನ ಬದುಕಿನ ಸಾರ್ಥಕ್ಯವನ್ನು ಕಂಡುಕೊಂಡ ಮುಗ್ಧ ಜೀವಿಯ ಮನೋಜ್ಞ ಆದರ್ಶ ಚಿತ್ರಣವಿದು. ಇಲ್ಲಿ ಗೌರಿ ಸಾಂಸ್ಕೃತಿಕ ಅನನ್ಯತೆಯ ದ್ಯೋತಕ, ಅಲ್ಲದೆ ಸುಶೀಲ ಪರಂಪರೆಯ ರೂವಾರಿ.

ಪ್ರಸ್ತುತ 'ತ್ಯಾಗಮಯಿ' ಕಥೆಯನ್ನು ಲಕ್ಕಪ್ಪಗೌಡರ ಹೊನ್ನಾರು' ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

10th_Kannada_Reader1-5.indd 214 03-04-2019 14:08:06

ಪದಗಳ ಅರ್ಥ

ಖಿಲಾಯಿಸು–ಒಲಿ, ಒಲಿದು ಬರು; ಸಾಗು–ಸಾಗುವಳಿ, ಬೇಸಾಯ, ಕೃಷಿ; ಕುಳ–ಜಮೀನುದಾರ; ಎಸರು–ಸಾರು; ಆಳು–ಮನುಷ್ಯ; ಅಗಲ–ಊಟದ ತಟ್ಟೆ, ತಾಟು; ಹೊತ್ತಾರೆ–ಮುಂಜಾನೆ, ಬೆಳಗಿನ ಜಾವ; ಮೊಗರು–ಚಿಗುರು; ದವಲತ್ತು–ಸೊಕ್ಕು; ಕೊಸರಿಕೊಂಡು–ಬಿಡಿಸಿಕೊಂಡು; ಚಣ(ದ್ಭ)–ಕ್ಷಣ(ಸಂ); ಕಣ್ಣಿಗೆ ಕತ್ತುಲು ಕಟ್ಟು–ದಿಕ್ಕು ತೋಚದಾಗು; ಹೊರಳಿ ನೋಡು–ಹಿಂದಿರುಗಿ ನೋಡು; ಪಿಂಡಾಡಿಸು–ಪೀಡಿಸು; ಬೀತು–ಒಣಗಿ; ಉಡುಗೊರೆ–ಪುರಸ್ಕಾರ, ಕಾಣಿಕೆ.

ಟಿಪ್ಪಣಿ

ಗಂಗಾಳ: ಊಟ ಮಾಡುವ ಕಂಚಿನ ತಟ್ಟೆ

ಗೊಂತು: ಹಸುಗಳೀಗೆ ಮೇವು ಹಾಕಲು ನಿಗದಿ ಮಾಡಿರುವ ಕಟ್ಟೆಯಾಕಾರದ ಜಾಗ.

ವಾರ: ವ್ಯವಸಾಯದ ಅನುಕೂಲತೆಗೆ ಮಾಡಿಕೊಂಡ ಹಂಚಿಕೆ ಕೃಷಿ.

ಬದುವು: ಕೃಷಿ ವೇಳೆಯಲ್ಲಿ ಕುಷ್ಕಿ/ತರಿಭೂಮಿಯಲ್ಲಿ ಓಡಾಡಲು ಅನುವಾಗುವಂತೆ ಬಿಟ್ಟಿರುವ ಜಾಗ.

ಗೋಣಿ ಸೊಪ್ಪು: ಅರಳಿ ಮರದ ಜಾತಿಗೆ ಸೇರಿದ ಮರದ ಸೊಪ್ಪು, ಬೋಧಿವೃಕ್ಷ, ಪಿಪ್ಪಾಲ ಮರ, Ficus Religiosa.

ತಾರಿ ಸೊಪ್ಪು: ತಾರೆ ಮರದ ಸೊಪ್ಪು, ಶಾಂತಿ ಮರ, Terminalia Bellirica.

ಹಂಚಿಕಡ್ಡಿ: ಒಂದು ಜಾತಿಯ ಹುಲ್ಲು, ಹಂಚಿಹುಲ್ಲಿನ ಕಡ್ಡಿ.

ಎಡೆ: ಊಟದ ಎಲೆ, ಊಟದ ಬಟ್ಟಲು.

ದುರ್ಭಿಕ್ಷದಲ್ಲಿ ಅಧಿಕ ಮಾಸ: ವರ್ಷಕ್ಕೆ ಹನ್ನೆರಡು ಮಾಸಗಳು(ತಿಂಗಳು). ಚಾಂದ್ರಮಾನ ಪದ್ಧತಿಯ ಪ್ರಕಾರ ಚೈತ್ರಾದಿ ಫಾಲ್ಗುಣ ಮಾಸಗಳಲ್ಲಿ ಕೆಲವೊಮ್ಮೆ ಯಾವುದಾದರೊಂದು ಮಾಸ ಒಂದು ವರ್ಷದಲ್ಲಿ ಎರಡು ಬಾರಿ ಬರುತ್ತದೆ. ಅವುಗಳಲ್ಲಿ ಒಂದು ನಿಜ. ಇನ್ನೊಂದು ಅಧಿಕವೆಂದು ಕರೆಯಲ್ಪಡುತ್ತದೆ. ಉಣ್ಣಲು ತಿನ್ನಲು ಸಾಕಷ್ಟು ಇಲ್ಲದಾಗ ಇಂತಹ ಹೆಚ್ಚುವರಿ ತಿಂಗಳು ಬಂದರೆ ಇನ್ನೂ ಕಷ್ಟ ಎಂಬುದು ಇದರ ಅರ್ಥ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಿದ್ಧಪ್ಪನ ಕಣ್ಣಿನಿಂದ ನೀರು ಜಾರಿ ಎಸರಿನೊಳಕ್ಕೆ ಬಿದ್ದದ್ದು ಏಕೆ ?
2. ಗೌರಿ ಸಿದ್ಧಪ್ಪನನ್ನು ನಾಗರ ಹಾವಿನಿಂದ ಹೇಗೆ ರಕ್ಷಿಸಿದಳು ?
3. ಮಕ್ಕಳು ಅಜ್ಜನ ಎಡೆಗೆ ಕೈ ಹಾಕಿದ್ದು ಯಾವಾಗ ?
4. ತ್ಯಾಗಮಯಿ ಪಾಠದ ಕರ್ತೃ ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಸಿದ್ಧೇಗೌಡರಿಗೆ ರಾಚಪ್ಪ ಕೋಪದಲ್ಲಿ ಏನು ಮಾಡಿದ ?
2. ಸಿದ್ಧೇಗೌಡರಿಗೆ ಮಗನ ಬಗೆಗೆ ಕೋಪ ಬಂದ ಸಂದರ್ಭವನ್ನು ವಿವರಿಸಿ.

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಗೌರಿ ಸಿದ್ಧೇಗೌಡರ ಜೀವ ಉಳಿಸಿದ ಎರಡು ಪ್ರಸಂಗಗಳನ್ನು ವಿವರಿಸಿ ?
2. ಗೌರಿ ತ್ಯಾಗಮಯಿ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

ಚಟುವಟಿಕೆ

1. ನೀತಿಕತೆಗಳನ್ನು ಸಂಗ್ರಹಿಸಿ ಓದಿರಿ.

10th_Kannada_Reader1-5.indd 215 03-04-2019 14:08:06

ವ್ಯಾಕರಣ

ಘಟಕ ಹತ್ತು

ಪತ್ರಲೇಖನ – ಪ್ರಬಂಧ ರಚನೆ

ನಮ್ಮ ಬಂಧುಗಳು, ಸ್ನೇಹಿತರೊಂದಿಗೆ ಮಾತುಗಳ/ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರದ ಸ್ಥಳಗಳಲ್ಲಿರುವವರೊಂದಿಗೆ, ಅನ್ಯದೇಶದಲ್ಲಿ ನೆಲೆಸಿರುವವರೊಂದಿಗೆ ಈ ಕಾರ್ಯ ಅಸಾಧ್ಯ. ಇದಕ್ಕಾಗಿಯೇ ಲಿಪಿ ಇರುವ ಭಾಷೆಯಲ್ಲಿ ಪತ್ರಲೇಖನ ಆರಂಭವಾಯಿತು. ಈ ಮೂಲಕ ದೂರದಲ್ಲಿರುವವರೊಂದಿಗೆ ಸಂಪರ್ಕ ಸಾಧ್ಯವಾಯಿತು.

ಒಬ್ಬರು ಮತ್ತೊಬ್ಬರೊಂದಿಗೆ ಬರಹದ ಮೂಲಕ ಕುಶಲೋಪರಿ ಅಥವಾ ವ್ಯವಹಾರಕ್ಕಾಗಿ ಸಂಪರ್ಕ ಮಾಡುವುದನ್ನು ಪತ್ರಲೇಖನ ಎನ್ನುತ್ತೇವೆ. ಇದೊಂದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಬರಹದ ಪದ್ಧತಿಯಾಗಿದೆ. ಪ್ರಾಚೀನ ಕಾಲದಲ್ಲಿ ಎಲೆಯ(ಪತ್ರದ) ಮೇಲೆ, ಬಟ್ಟೆಯ ಮೇಲೆ, ತಾಳೆಗರಿಗಳ ಮೇಲೆ ಪತ್ರಗಳನ್ನು ಬರೆದು ಕಳಿಸುತ್ತಿದ್ದರು. ಈಗ ಕಾಗದದ ಮೇಲೆ ಬರೆಯುತ್ತಿದ್ದರೂ ಪತ್ರ ಬರೆಯುವ ಅದೇ ಪದ್ಧತಿ ಮುಂದುವರೆಯುತ್ತಿದೆ. ಇಂದು ದೂರವಾಣಿ, ಮೊಬೈಲ್‌ಫೋನ್, ಕಂಪ್ಯೂಟರ್ ಮುಂತಾದ ಸಂಪರ್ಕ ಮಾಧ್ಯಮಗಳು ಪ್ರಚಾರದಲ್ಲಿವೆ. ಇವುಗಳ ಮೂಲಕ ಎಸ್.ಎಂ.ಎಸ್, ಇ–ಮೆಯಿಲ್, ಮುಂತಾದವುಗಳ ಮೂಲಕ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಕ್ಷಣ ಮಾತ್ರದಲ್ಲಿ ಯಾರನ್ನು ಬೇಕಾದರೂ ಸಂಪರ್ಕಿಸಬಹುದು. ಹಾಗಿದ್ದೂ ಸಹ ಪತ್ರಗಳು ಮನುಷ್ಯನು ಅಕ್ಷರ ಜ್ಞಾನ ಪಡೆದಂದಿನಿಂದಲೂ ಮಹತ್ವವನ್ನು ಪಡೆದುಕೊಂಡು ಬಂದಿದೆ. ಅವು ಸಾರ್ವಕಾಲಿಕ ದಾಖಲೆಗಳು. ಪತ್ರಗಳಿಗೆ ಅದರದ್ದೇ ಆದ ವಿಶಿಷ್ಟತೆ ಇದೆ.

ಪತ್ರಲೇಖನದ ಇತಿಹಾಸ ಪ್ರಾಚೀನವಾದುದು. ಹಿಂದೆ ಅರಸರು, ಅಧಿಕಾರಿಗಳು ಪತ್ರ ವ್ಯವಹಾರಗಳನ್ನು ಕುದುರೆ ಸವಾರರ ಮೂಲಕ, ಪಾರಿವಾಳಗಳ ಮೂಕಲ ನಡೆಸುತ್ತಿದ್ದರು. ಬ್ರಿಟೀಷರ ಆಡಳಿತದ ಅವಧಿಯಲ್ಲಿ ಅಂಚೆ ಇಲಾಖೆ ಆರಂಭವಾಯಿತು. ಸುಲಭ ಬೆಲೆಯಲ್ಲಿ ಪತ್ರ ವ್ಯವಹಾರ ಸಾಧ್ಯವಾಯಿತು. ಈಗ ಇದಕ್ಕೆ ಪರ್ಯಾಯವಾಗಿ ಖಾಸಗಿಯವರ ಕೊರಿಯರ್ ಸಂಸ್ಥೆಗಳೂ ಸೇವೆ ಒದಗಿಸುತ್ತಿವೆ.

ವಿಜ್ಞಾನ, ತಂತ್ರಜ್ಞಾನದ ಮುನ್ನಡೆಯಿಂದ ಇಂದು ದೂರವಾಣಿ, ಮೊಬೈಲ್ ಫೋನ್, ಗಣಕಯಂತ್ರಗಳು ಬಂದ ಮೇಲೆ ಪತ್ರ ವ್ಯವಹಾರಗಳು ಕಡಿಮೆಯಾಗಿವೆ. ಜಗತ್ತಿನ ಯಾವುದೇ ಮೂಲೆಯಲ್ಲಿರುವವರೊಂದಿಗೆ ದೂರವಾಣಿ, ಎಸ್.ಎಂ.ಎಸ್., ಇ–ಮೆಯಿಲ್‌ಗಳ ಮೂಲಕ ಸಂಪರ್ಕಿಸುವ ಸಾಧ್ಯತೆ ಹೆಚ್ಚಾಗುತ್ತಿದೆ. ಆದರೆ ಇದು ತಾತ್ಕಾಲಿಕವಾಗಿ ವ್ಯವಹಾರಕ್ಕೆ ಸೀಮಿತವಾಗಿದೆ. ಹಿರಿಯರ, ಮಹಾನ್ ವ್ಯಕ್ತಿಗಳ, ಆತ್ಮೀಯರ, ಬುದ್ಧಿಜೀವಿಗಳ ಪ್ರಸಿದ್ಧ ವ್ಯಕ್ತಿಗಳ ಪತ್ರಗಳನ್ನು ಓದುವಾಗ ಲಭಿಸುವ ಆನಂದ, ಪ್ರೋತ್ಸಾಹ, ಉಲ್ಲಾಸ–ಉತ್ಸಾಹಗಳು ಇತರ ಮಾಧ್ಯಮಗಳಿಂದ ದೊರೆಯಲಾರದು. ಸುಪ್ರಸಿದ್ಧ ವ್ಯಕ್ತಿಗಳ ಪತ್ರ ಸಂಗ್ರಹಗಳು ಹಲವರಿಗೆ ಮಾರ್ಗದರ್ಶಿಯಾಗಿವೆ. **ಉದಾಹರಣೆಗೆ** : ಮಹಾತ್ಮಗಾಂಧಿಯವರ ಪತ್ರಗಳು, ಪಂಡಿತ ಜವಹರಲಾಲ್ ನೆಹರೂರವರು ತಮ್ಮ ಮಗಳಾದ ಶ್ರೀಮತಿ ಇಂದಿರಾಗಾಂಧಿಯವರಿಗೆ ಬರೆದಿರುವ ಪತ್ರಗಳು.

10th_Kannada_Reader1-5.indd 216 03-04-2019 14:08:06

ಪತ್ರ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾದುದು ಅನಿವಾರ್ಯ ಹಾಗೂ ಅಗತ್ಯವಾಗಿದೆ.

ಪತ್ರಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಅವು,

1. ವೈಯಕ್ತಿಕ ಪತ್ರ ಅಥವಾ ಖಾಸಗಿ ಪತ್ರಗಳು
2. ವ್ಯಾವಹಾರಿಕ ಪತ್ರ ಅಥವಾ ಅನೌಪಚಾರಿಕ ಪತ್ರಗಳು.

1. ವೈಯಕ್ತಿಕ ಪತ್ರ ಅಥವಾ ಖಾಸಗಿ ಪತ್ರಗಳು

ತಂದೆ–ತಾಯಿಗಳು, ಮಕ್ಕಳು, ಬಂಧು–ಮಿತ್ರರು ಪರಸ್ಪರ ಬರೆಯುವ ಪತ್ರಗಳನ್ನು ವೈಯಕ್ತಿಕ ಪತ್ರಗಳೆಂದು ಕರೆಯಲಾಗುವುದು.

2. ವ್ಯಾವಹಾರಿಕ ಪತ್ರ ಅಥವಾ ಅನೌಪಚಾರಿಕ ಪತ್ರಗಳು

ಬೇರೆ ಬೇರೆ ವ್ಯಾವಹಾರಿಕ ಕಾರಣಗಳಿಗಾಗಿ ವ್ಯಕ್ತಿಯು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಬರೆಯುವ ಪತ್ರಗಳನ್ನು ವ್ಯಾವಹಾರಿಕ ಪತ್ರಗಳೆಂದು ಕರೆಯುವರು.

ಪತ್ರಲೇಖನದಲ್ಲಿ ಮುಖ್ಯವಾಗಿ ಕೆಲವು ಅಂಶಗಳನ್ನು ತಿಳಿದು ಕೊಳ್ಳಬೇಕು. ಪತ್ರದ ಪ್ರಾರಂಭ, ಸಂಬೋಧನೆ, ವಿಷಯ ನಿರೂಪಣೆ, ಅಂತ್ಯ ಇತ್ಯಾದಿ. ಈ ಅಂಶಗಳೊಂದಿಗೆ ವೈಯಕ್ತಿಕ ಹಾಗು ವ್ಯವಹಾರಿಕ ಪತ್ರಗಳ ನಡುವೆ ಇರುವ ವ್ಯತ್ಯಾಸವನ್ನೂ ಅರಿತುಕೊಳ್ಳಬೇಕು.

ಪತ್ರದ ಅಂಗಗಳು/ಪತ್ರದಲ್ಲಿರಬೇಕಾದ ಅಂಶಗಳು :

1. ಪತ್ರದ ಪ್ರಾರಂಭ (ವಿಳಾಸ ಮತ್ತು ದಿನಾಂಕ)

ಪತ್ರವನ್ನು ಬರೆಯುವವರ ವಿಳಾಸ, ದೂರವಾಣಿ ಸಂಖ್ಯೆ, ಸ್ಥಳ ಮತ್ತು ದಿನಾಂಕವನ್ನು ಪತ್ರದ ಬಲಭಾಗದ ಮೇಲಿನ ಮೂಲೆಯಲ್ಲಿ ಒಂದರ ಕೆಳಗೊಂದರಂತೆ ಬರೆಯಬೇಕು. ಎಡಬದಿಯ ಮೇಲ್ಭಾಗದಲ್ಲಿ ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸವನ್ನು ಕ್ರಮವಾಗಿ ಬರೆಯಬೇಕು. ನಂತರ ಯಾರಿಗೆ ಪತ್ರ ಬರೆಯುತ್ತಿದ್ದೇವೆಯೋ ಅವರನ್ನು ಗೌರವಯುತವಾಗಿ ಸಂಬೋಧಿಸಿ, ನಂತರ ವಿಷಯವನ್ನು ವಿವರಿಸಬೇಕು.

2. ಆರಂಭದ ಸಂಬೋಧನೆ

ಪತ್ರವನ್ನು ಆರಂಭಿಸುವ ಮುನ್ನ ನಾವು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರನ್ನು ಉಚಿತ ಪದಗಳಿಂದ ಸಂಬೋಧಿಸಬೇಕು. ಯಾರನ್ನು ಹೇಗೆ ಸಂಬೋಧಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ:

ತಂದೆಗೆ – ತೀರ್ಥರೂಪರಿಗೆ, ಪ್ರೀತಿಯ ಅಪ್ಪನಿಗೆ, ಪೂಜ್ಯ ತಂದೆಯವರಿಗೆ ಸಾಷ್ಟಾಂಗ ನಮಸ್ಕಾರಗಳು.

ತಾಯಿಗೆ – ಮಾತೃಶ್ರೀ, ಪೂಜ್ಯ ತಾಯಿಗೆ, ಪ್ರೀತಿಯ ಅಮ್ಮನಿಗೆ.

ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಣ್ಣ ಇತ್ಯಾದಿ ಹಿರಿಯ ಪುರುಷರಿಗೆ–ತೀರ್ಥರೂಪು ಸಮಾನರಾದ(ತಂದೆಯ ಸಮಾನರಾದ ಎಂದು ಅರ್ಥ);

ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ ಇತ್ಯಾದಿ ಹಿರಿಯ ಮಹಿಳೆಯರಿಗೆ–ಮಾತೃಶ್ರೀ ಸಮಾನರಾದ(ತಾಯಿಯ ಸಮಾನರಾದ ಎಂದು ಅರ್ಥ);

10th_Kannada_Reader1-5.indd 217 03-04-2019 14:08:06

ತಂಗಿ ಮತ್ತು ಇತರ ಕಿರಿಯ ಸ್ತ್ರೀಯರಿಗೆ – ಚಿರಂಜೀವಿ ಸೌಭಾಗ್ಯವತಿ;

ತಮ್ಮ ಮತ್ತು ಇತರ ಕಿರಿಯ ಪುರುಷರಿಗೆ – ಚಿರಂಜೀವಿ;

ಗೆಳೆಯ/ಗೆಳತಿಯರನ್ನು – ಪ್ರೀತಿಯ, ನಲ್ಮೆಯ, ಆತ್ಮೀಯ, ಒಲವಿನ, ನಚ್ಚಿನ... ಇತ್ಯಾದಿ;

ಅಧಿಕಾರಿಗಳನ್ನು – ಮಾನ್ಯರೇ ಅಥವಾ ಸ್ವಾಮೀ... ಇತ್ಯಾದಿ.

ಹೀಗೆ ಪತ್ರದ ಆರಂಭದಲ್ಲಿ ಯಾರಿಗೆ ಬರೆಯುತ್ತಿದ್ದೇವೆಯೋ ಅವರನ್ನು ಸಂಬೋಧಿಸಬೇಕು. ಗೌರವ ಸೂಚಕವಾಗಿ ಹಿರಿಯರಿಗಾದಲ್ಲಿ 'ಬೇಡುವ ಆಶೀರ್ವಾದಗಳು' ಎಂದೂ; ಕಿರಿಯರಿಗಾದಲ್ಲಿ, 'ಆಶೀರ್ವಾದಗಳು' ಎಂದೂ; ಸ್ನೇಹಿತರಿಗೆ, ಅಧಿಕಾರಿಗಳಿಗೆ–'ವಂದನೆಗಳು' ಎಂದೂ ಬರೆಯಬೇಕು.

3. ಪತ್ರದ ವಿಷಯ

ಪತ್ರದ ಅತ್ಯಂತ ಮಹತ್ವದ ಭಾಗವೆಂದರೆ ಪತ್ರದ ಆಂತರಿಕ ವಿಷಯವಾಗಿದೆ. ಪತ್ರ ಬರೆಯಲು ಕಾರಣವೇನು, ಏನಾಗಬೇಕಾಗಿದೆ ಅಥವಾ ಏನಾಗಿದೆ ಎನ್ನುವುದನ್ನು ಇಲ್ಲಿ ವಿವರಿಸಬೇಕು. ವಿಷಯಕ್ಕೆ ತಕ್ಕಂತೆ ವಾಕ್ಯಗಳಿರಬೇಕು. ಸ್ಪಷ್ಟವಾಗಿರಬೇಕು. ಪತ್ರ ಲೇಖನದ ಉದ್ದೇಶವನ್ನು ನಿರೂಪಣೆ ಮಾಡಬೇಕು. ಪತ್ರವನ್ನು ಓದುವವರಿಗೆ ಸುಲಭವಾಗಿ ಬರೆದವರ ಮನದ ಅಭಿಪ್ರಾಯ ತಿಳಿಯುವಂತಿರಬೇಕು. ಬಳಿಕ ಒಕ್ಕಣೆಯನ್ನು ಸ್ಪಷ್ಟವಾಗಿ ಸಮಾಪ್ತಿಗೊಳಿಸಬೇಕು.

4. ಮುಕ್ತಾಯ

ವಿಷಯವನ್ನು ವಿವರಿಸಿದ ನಂತರ, ಪತ್ರದ ಮುಕ್ತಾಯದಲ್ಲೂ, ಸಂಬೋಧನೆಯ ಸಂದರ್ಭದಲ್ಲಿ ಬಳಸಿರುವಂತೆಯೇ ಗೌರವ ಸೂಚಿಸಬೇಕು.

ತಂದೆ–ತಾಯಿ, ಹಿರಿಯರಿಗೆ – 'ಇತಿ ಸಾಷ್ಟಾಂಗ ನಮಸ್ಕಾರಗಳು', 'ಇತಿ ಪ್ರಣಾಮಗಳು' ಎಂದೂ; ಅಧಿಕಾರಿಗಳಿಗೆ – 'ಇತಿ ತಮ್ಮ ವಿಶ್ವಾಸಿ' ಎಂದೂ ಗೌರವಪೂರ್ವಕ ಪದಗಳನ್ನು ಬಳಸಿ ಪತ್ರವನ್ನು ಮುಕ್ತಾಯ ಮಾಡಬೇಕು.

5. ಸಹಿ

ಗೌರವಪೂರ್ವಕ/ವಂದನಾಪೂರ್ವಕ ಮುಕ್ತಾಯದ ನಂತರ ಅದರ ಕೆಳಗೆ ಬಲಭಾಗದಲ್ಲಿ ಸಹಿ ಹಾಕಬೇಕು. ಸಹಿಯ ಕೆಳಗೆ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು.

ಹೀಗೆ ಪತ್ರವನ್ನು ಕ್ರಮಬದ್ಧವಾಗಿ ಬರೆಯಬೇಕು. ಕೆಲವು ಮಾದರಿ ಪತ್ರಗಳನ್ನು ಇನ್ನು ಮುಂದೆ ನೋಡೋಣ.

* * * *

10th_Kannada_Reader1-5.indd 218 03-04-2019 14:08:06

ವೈಯಕ್ತಿಕ ಪತ್ರದ ಮಾದರಿ

ವ್ಯಾಸಂಗವನ್ನು ಕುರಿತು ತಂದೆಯವರಿಗೆ ಪತ್ರ

ದಿನಾಂಕ : 01.01.2019
ಬೆಂಗಳೂರು.

ರಾಘವೇಂದ್ರ
ಮನೆ ಸಂಖ್ಯೆ 41/1
ಮೊದಲನೇ ಮುಖ್ಯ ರಸ್ತೆ
ನಾಲ್ಕನೇ ಅಡ್ಡರಸ್ತೆ, ಬಾಪೂಜಿ ನಗರ
ಮೈಸೂರು 560 021.

ತೀರ್ಥರೂಪರಿಗೆ,

ನಿಮ್ಮ ಮಗನಾದ ರಾ. ಚಂದ್ರಶೇಖರನ ಅನಂತ ವಂದನೆಗಳು. ನಾನು ಇಲ್ಲಿ ದೇವರ ಹಾಗೂ ನಿಮ್ಮ ಆಶೀರ್ವಾದಗಳಿಂದ ಕ್ಷೇಮವಾಗಿದ್ದೇನೆ. ನಿಮ್ಮ ಕ್ಷೇಮ ಸಮಾಚಾರವನ್ನು ತಿಳಿಸಿ. ನಾನು ಈಗ ತಿಳಿಯ ಪಡಿಸುವ ಸಂಗತಿಯೆಂದರೆ ಪ್ರತಿದಿನ ತಪ್ಪದೆ ನಾನು ಎಲ್ಲಾ ತರಗತಿಗಳಿಗೂ ಹಾಜರಾಗುತ್ತಿದ್ದೇನೆ. ತರಗತಿಯಲ್ಲಿ ನಡೆಯುವ ಎಲ್ಲಾ ವಿಷಯಗಳ ಬೋಧನೆಯನ್ನು ಆಸಕ್ತಿಯಿಂದ ಆಲಿಸುತ್ತಿದ್ದೇನೆ. ತರಗತಿಯಲ್ಲಿ ನಡೆಯುವ ಎಲ್ಲಾ ಪರೀಕ್ಷೆಗಳಲ್ಲಿಯೂ ಹೆಚ್ಚಿನ ಅಂಕಗಳನ್ನು ಗಳಿಸಿ ನನ್ನ ಗುರುಗಳ ಪ್ರೀತಿ ವಾತ್ಸಲ್ಯಕ್ಕೆ ಪಾತ್ರನಾಗಿರುತ್ತೇನೆ.

ಮುಂದಿನ ಬೇಸಿಗೆಯ ರಜೆಯಲ್ಲಿ ನಾನು ಊರಿಗೆ ಬರುತ್ತೇನೆ. ನನ್ನ ಮಾತೃಶ್ರೀಯವರಿಗೆ ನನ್ನ ವಂದನೆಗಳನ್ನು ತಿಳಿಸಿ. ಅಣ್ಣನನ್ನೂ, ಪ್ರೀತಿಯ ತಂಗಿಯನ್ನೂ ಕೇಳಿದೆನೆಂದು ತಿಳಿಸಿ.

ವಂದನೆಗಳೊಂದಿಗೆ

ನಿಮ್ಮ ಪ್ರೀತಿಯ ಮಗ
ರಾ. ಚಂದ್ರಶೇಖರ

10th_Kannada_Reader1-5.indd 219 03-04-2019 14:08:06

ಶಾಲಾ ವಾರ್ಷಿಕೋತ್ಸವ ನಡೆದ ಬಗ್ಗೆ ಗೆಳೆಯನಿಗೊಂದು ಪತ್ರ

ದಿನಾಂಕ : 01.02.2018

ಇಂದ

ಭಾನುಪ್ರಕಾಶ್
11ನೇ ತರಗತಿ, ಎ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ತಾಳವಾಡಿ, ತಮಿಳುನಾಡು.

ಪ್ರೀತಿಯ ಗೆಳೆಯ ಸುಧಾಕರನಿಗೆ,

ನಿನ್ನ ಗೆಳೆಯನ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನಿನ್ನ ಕ್ಷೇಮ ಸಮಾಚಾರಕ್ಕೆ ಪತ್ರ ಬರೆ.

ಕಾಗದ ಬರೆದ ವಿಷಯವೇನೆಂದರೆ ಕಳೆದ ತಿಂಗಳು ನಿನಗೆ ಪತ್ರ ಬರೆದಿದ್ದಾಗ ನಿನಗೆ ನಮ್ಮ ಶಾಲಾ ವಾರ್ಷಿಕೋತ್ಸವ ನಡೆಯುವ ಬಗ್ಗೆ ತಿಳಿಸಿದ್ದೆ. ಈಗ ಅದು ನಡೆದ ಬಗ್ಗೆ ನಿನಗೆ ತಿಳಿಸೋಣವೆಂದು ಈ ಪತ್ರ ಬರೆಯುತ್ತಿದ್ದೇನೆ. ದಿನಾಂಕ 20.01.2018ರಂದು ನಮ್ಮ ಶಾಲೆಯ ವಾರ್ಷಿಕೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಮಾನ್ಯ ಶಿಕ್ಷಣ ಸಚಿವರು ಮುಖ್ಯ ಅತಿಥಿಗಳಾಗಿ ನಮ್ಮ ಕಾಲೇಜಿಗೆ ಆಗಮಿಸಿದ್ದರು. ಅವರೊಂದಿಗೆ ಹೆಸರಾಂತ ಕವಿಗಳಾದ ಶ್ರೀ.ಶಿವಲಿಂಗಯ್ಯನವರೂ ಮತ್ತೊಬ್ಬ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮ ಆರಂಭವಾದ ಕೂಡಲೇ ಕುಮಾರಿ ಕೌಶಲ್ಯರವರು ತಮ್ಮ ಮಧುರ ಕಂಠದಿಂದ ಸೊಗಸಾಗಿ ಪ್ರಾರ್ಥನೆಯನ್ನು ಹಾಡಿದರು. ನಂತರ ಮುಖ್ಯೋಪಾಧ್ಯಾಯರು ಸ್ವಾಗತ ಭಾಷಣದೊಂದಿಗೆ ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಹಿಂದಿನ ವರ್ಷ 12ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ನಮ್ಮ ಶಾಲೆಯು ಸಾಧಿಸಿರುವ ಪ್ರಗತಿಯ ಬಗ್ಗೆ ಬಹಳ ಕೊಂಡಾಡಿದರು. ವಾರ್ಷಿಕ ಸಾಹಿತ್ಯ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನವನ್ನು ವಿತರಿಸಿದರು. ಆಶುಭಾಷಣ ಸ್ಪರ್ಧೆಯಲ್ಲಿ ನನಗೆ ಮೊದಲ ಬಹುಮಾನ ದೊರಕಿತು. ನಮ್ಮ ಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಮೂಹಿಕ ಗಾಯನ, ನೃತ್ಯ, ಕಿರುನಾಟಕ ಮುಂತಾದ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಅದ್ಭುತವಾಗಿ ಮೂಡಿ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಹಿರಿಯ ಉಪಾಧ್ಯಾಯರು ವಂದನಾರ್ಪಣೆಯನ್ನು ಸಲ್ಲಿಸಿದರು. ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮ ಮುಕ್ತಾಯವಾಯಿತು. ಒಟ್ಟಿನಲ್ಲಿ ನಮ್ಮ ಶಾಲೆಯ ವಾರ್ಷಿಕೋತ್ಸವ ನಾನು ಮರೆಯಲಾಗದ ಸಮಾರಂಭವಾಗಿದ್ದು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವಂತಿತ್ತು. ನೀನೂ ನಿಮ್ಮ ಶಾಲೆಯ ವಾರ್ಷಿಕೋತ್ಸವವನ್ನು ಹೇಗೆ ಆಚರಿಸಿದಿರಿ ಎಂಬುದನ್ನು ಪತ್ರದಲ್ಲಿ ಬರೆದು ತಿಳಿಸು.

ಮನೆಯಲ್ಲಿ ಎಲ್ಲರೂ ಕ್ಷೇಮವೇ? ನಿನ್ನ ತಂದೆತಾಯಿಗಳಿಗೆ ನನ್ನ ನಮಸ್ಕಾರಗಳನ್ನು ತಿಳಿಸು.

ವಂದನೆಗಳೊಂದಿಗೆ

ಇಂತಿ ನಿನ್ನ ಗೆಳೆಯ
ಭಾನುಪ್ರಕಾಶ್

ಗೆ,

ಸುಧಾಕರ
ಹನ್ನೊಂದನೇ ತರಗತಿ, ಬಿ ವಿಭಾಗ

10th_Kannada_Reader1-5.indd 220 03-04-2019 14:08:06

ಸರ್ಕಾರಿ ಹಿರಿಯ ಪ್ರೌಢಶಾಲೆ
ಹೊಸೂರು.

ವ್ಯಾವಹಾರಿಕ ಪತ್ರದ ಮಾದರಿ

ನಿಮ್ಮ ಊರಿಗೆ ರಸ್ತೆ ಸೌಕರ್ಯವನ್ನು ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಬರೆಯಿರಿ :

ದಿನಾಂಕ : 25.01.2019

ಇಂದ

ಮಂಜುನಾಥ. ನಾ
ತಂ/ಹೆ : ನಾರಾಯಣ ಸ್ವಾಮಿ
ಮನೆ ಸಂಖ್ಯೆ. 87, ನೇತಾಜಿ ರಸ್ತೆ
ಮದಗೊಂಡ ಹಳ್ಳಿ, ಡೆಂಕಣಿಕೋಟೆ ತಾಲೂಕು
ಕೃಷ್ಣಗಿರಿ ಜಿಲ್ಲೆ 635 114.

ಇವರಿಗೆ

ಜಿಲ್ಲಾಧಿಕಾರಿಗಳು
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಕೃಷ್ಣಗಿರಿ.

ಮಾನ್ಯರೇ,

ವಿಷಯ : ನಮ್ಮ ಗ್ರಾಮಕ್ಕೆ ರಸ್ತೆ ಸೌಕರ್ಯವನ್ನು ಒದಗಿಸುವಂತೆ ಕೋರಿ – ಮನವಿ.

ನಾವು ಮದಗೊಂಡಹಳ್ಳಿಯ ಗ್ರಾಮಸ್ಥರು. ನಮ್ಮ ಗ್ರಾಮದಲ್ಲಿ ಸುಮಾರು ಸಾವಿರ ಮನೆಗಳಿದ್ದು ಐದು ಸಾವಿರದಷ್ಟು ಜನ ಸಂಖ್ಯೆಯನ್ನು ಹೊಂದಿದೆ. ನಮ್ಮ ಗ್ರಾಮಕ್ಕೆ ಸರಿಯದ ರಸ್ತೆ ಸೌಕರ್ಯವಿಲ್ಲದೆ ಹಲವು ರೀತಿಯ ತೊಂದರೆಗೆ ಒಳಗಾಗುತ್ತಿದ್ದೇವೆ. ಮಳೆಗಾಲದಲ್ಲಂತೂ ರಸ್ತೆಗಳ ಗುಂಡಿಗಳಲ್ಲಿ ನೀರು ನಿಂತು ಸಾರ್ವಜನಿಕರು ಮುಖ್ಯವಾಗಿ ಶಾಲಾ ವಿದ್ಯಾರ್ಥಿಗಳಿಗೆ ಹೆಚ್ಚಿನ ತೊಂದರೆಯಾಗುತ್ತಿದೆ.

ಆದುದರಿಂದ ತಾವು ದಯವಿಟ್ಟು ನಮ್ಮ ಗ್ರಾಮಕ್ಕೆ ಖುದ್ದಾಗಿ ಭೇಟಿ ನೀಡಿ, ಸಮಸ್ಯೆಯನ್ನು ಪರಿಶೀಲಿಸಿ ಆದಷ್ಟು ಬೇಗ ರಸ್ತೆಗಳನ್ನು ದುರಸ್ತಿಗೊಳಿಸಿ ಸಹಕರಿಸಬೇಕಾಗಿ ತಮ್ಮಲ್ಲಿ ನಮ್ಮ ಗ್ರಾಮಸ್ಥರ ಪರವಾಗಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಮಂಜುನಾಥ. ನಾ

10th_Kannada_Reader1-5.indd 221 03-04-2019 14:08:06

ರಜೆ ಕೋರಿ ತರಗತಿಯ ಅಧ್ಯಾಪಕರಿಗೊಂದು ಪತ್ರ

ದಿನಾಂಕ : 17.02.2019
ಹೊಸೂರು

ಇಂದ,

ಎಸ್.ಆರ್.ಮಾನ್ಯ.
11ನೇ ತರಗತಿ, ಸಿ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ಹೊಸೂರು, ತಮಿಳುನಾಡು.

ಗೆ,

ತರಗತಿಯ ಅಧ್ಯಾಪಕರು
11ನೇ ತರಗತಿ, ಸಿ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ಹೊಸೂರು, ತಮಿಳುನಾಡು.

ಮಾನ್ಯರೇ,

ನಿಮ್ಮ ಶಾಲೆಯಲ್ಲಿ 11ನೇ ತರಗತಿಯ ಸಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಆರ್.ಮಾನ್ಯ ಎಂಬ ನಾನು, ಈ ಪತ್ರದ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, 18.02.2019ರಂದು ನನ್ನ ಅಕ್ಕನ ವಿವಾಹ ನಿಶ್ಚಿತಾರ್ಥ ಕಾರ್ಯಕ್ರಮವಿರುವ ಕಾರಣದಿಂದ ನಾನು ಶಾಲೆಗೆ ಬರಲಾಗುವುದಿಲ್ಲ.

ಆದುದರಿಂದ ತಾವು ದಯವಿಟ್ಟು ನನಗೆ ಒಂದು ದಿನದ ರಜೆಯನ್ನು ನೀಡಬೇಕೆಂದು ತಮ್ಮಲ್ಲಿ ಸವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ಇಂತಿ ತಮ್ಮ ವಿಧೇಯ ವಿದ್ಯಾರ್ಥಿನಿ
ಎಸ್.ಆರ್.ಮಾನ್ಯ

ರಾಜಣ್ಣ (ತಂದೆ)
ಪೋಷಕರ ಸಹಿ

10th_Kannada_Reader1-5.indd 222 03-04-2019 14:08:06

ಪ್ರಬಂಧ ರಚನೆ

ಅರ್ಥಪೂರ್ಣವಾದ ಖಚಿತ ವಾಕ್ಯಗಳ ಮೂಲಕ ವ್ಯಕ್ತಿಯ ಆಲೋಚನೆಗಳನ್ನು ಲಿಖಿತವಾಗಿ ಅಭಿವ್ಯಕ್ತಗೊಳಿಸುವ ಹಾಗೂ ನಿರ್ದಿಷ್ಟವಾದ ವಿಷಯವನ್ನು ಕ್ರಮಬದ್ಧ ರೀತಿಯಲ್ಲಿ ಸಮರ್ಪಕವಾಗಿ ನಿರೂಪಿಸುವ ಪರಿಯೇ ಪ್ರಬಂಧ ರಚನೆ. ಈ ಕ್ರಿಯೆಯು ಸಾಮಾನ್ಯವಾಗಿ ಲೇಖಕನ ವ್ಯಕ್ತಿತ್ವದ ವೈಶಿಷ್ಟ್ಯದಿಂದ ಕೂಡಿದ ಸ್ವತಂತ್ರ ಹಾಗೂ ನಿರ್ದಿಷ್ಟ ಲಘು ಬರವಣಿಗೆ. ವ್ಯಕ್ತಿಯ ವೈಚಾರಿಕ ಆಲೋಚನೆಗಳನ್ನು ಸಹೃದಯರಿಗೆ ಗದ್ಯಾತ್ಮಕ ಕಾವ್ಯ ಶೈಲಿಯಲ್ಲಿ, ಮನಮೋಹಕ ರೀತಿಯಲ್ಲಿ ವಿಷಯ ಪ್ರಸ್ತಾಪ ಮಾಡುವ ಬಗೆಯಿದು. ಪ್ರಬಂಧವೆಂಬುದು, ಸರಳವಾದ ಭಾವ ಪ್ರಧಾನ ಶೈಲಿಯಲ್ಲಿ ಗಾಢವಾದ ಆಲೋಚನಾ ಲಹರಿಯನ್ನು ಸ್ವತಂತ್ರ ಹಾಗೂ ವಿವೇಚನಾ ಪ್ರಕ್ರಿಯೆಯಲ್ಲಿ ಸೃಜನ ಶೀಲತೆಗೆ ಎಡೆ ಮಾಡಿ ಕೊಡುವ ಭಾಷಾ ಸಾಹಿತ್ಯಕ ಕ್ರಿಯೆ. ಸೃಜನಶೀಲ ಬರವಣಿಗೆಯ ಸಿದ್ಧಿ ಎಂದರೂ ಸರಿಯೇ.

ಸಾಮಾನ್ಯವಾಗಿ ಪ್ರಬಂಧಗಳಲ್ಲಿ ವಿಚಾರದ ಏಕತೆ, ವಿಷಯ ಸಂಗ್ರಹ, ಕ್ರಮಬದ್ಧತೆ, ವಿಷಯ ವಿಸ್ತಾರ, ವೈವಿಧ್ಯತೆ, ಸರಳ ಶೈಲಿ, ಸಂಕ್ಷಿಪ್ತತೆ, ವೈಯಕ್ತಿಕತೆ, ಸೂಕ್ತವಾದ ವಿಷಯ ನಿರೂಪಣೆ, ಸುಸಂಬದ್ಧತೆ, ಸಮತೋಲನ ವಿಷಯದ ತಾರ್ಕಿಕ ಜೋಡಣೆ ಹಾಗೂ ಪರಿಣಾಮಕಾರಿಯಾದ ಶುದ್ಧ ಹಾಗೂ ಸುಲಭ ಸಂವಹನ ಭಾಷಾ ಶೈಲಿ ಇರಬೇಕು. ಹೇಳಲು ಹೊರಟಿರುವ ವಿಷಯ ಸರಳವಾಗಿ ಅರ್ಥವಾಗುವಂತೆ ಸುಲಭವಾದ ಪದಗಳನ್ನು ಬಳಸಿ ಬರೆಯಬೇಕು. ಇದೇ ಉತ್ತಮ ಪ್ರಬಂಧದ ಲಕ್ಷಣಗಳಾಗಿವೆ.

ಆಧುನಿಕ ಸಾಹಿತ್ಯದ ಒಂದು ಪ್ರಕಾರವಾಗಿರುವ ಪ್ರಬಂಧವು ಭಾಷೆಯ ರಚನೆ ಮತ್ತು ಪ್ರಯೋಗ ಸಾಮರ್ಥ್ಯ ಬೆಳೆಸುವ ಬಹುಮುಖ್ಯ ಸಾಧನವಾಗಿದೆ. ಪ್ರಬಂಧಗಳ ವಾಚನ ಮತ್ತು ಬರಹಗಳ ಮೂಲಕ ಭಾಷೆ, ವಿಷಯಜ್ಞಾನ ಮತ್ತು ಸಾಹಿತ್ಯಾಭಿರುಚಿ ಬೆಳೆಸಲು ಸಾಧ್ಯ. ಪ್ರಬಂಧಗಳ ರಚನೆ ಮತ್ತು ಓದುವಿಕೆಯಿಂದ ಭಾಷಾ ಸಾಮರ್ಥ್ಯ ಮತ್ತು ವಿಷಯ ಜ್ಞಾನ ಏಕಕಾಲದಲ್ಲಿ ಲಭ್ಯವಾಗುತ್ತದೆ.

ಪ್ರಬಂಧದ ಅರ್ಥ ಮತ್ತು ಸ್ವರೂಪ

ಒಂದು ವಿಷಯ ಅಥವಾ ಆಲೋಚನೆಯ ಬಗ್ಗೆ ಸುಸಂಬದ್ಧ, ತರ್ಕಬದ್ಧ ವಾಕ್ಯಗಳು ಮತ್ತು ವಾಕ್ಯವೃಂದಗಳಲ್ಲಿ ಕ್ರಮಬದ್ಧವಾಗಿ ಮತ್ತು ಅರ್ಥಪೂರ್ಣವಾಗಿ ಬರೆದಿರುವ ಪಠ್ಯವನ್ನು ಪ್ರಬಂಧ ಎನ್ನುತ್ತಾರೆ.

ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಪ್ರಕಾರ, 'ಯಾವುದೇ ಒಂದು ವಿಶಿಷ್ಟ ವಸ್ತುವಿನ ಮೇಲಿನ ಸಾಧಾರಣ ಅಳತೆಯ ಬರವಣಿಗೆಯೇ ಪ್ರಬಂಧ'. ಒಂದು ವಸ್ತು ವಿಷಯದ ಬಗೆಗೆ ಸರಳವಾಗಿ ಸುಸಂಬದ್ಧತೆ ಮತ್ತು ಅರ್ಥಬದ್ಧವಾಗಿ ಬರೆದಿರುವ ಪಠ್ಯವೇ ಪ್ರಬಂಧ.

ಪ್ರಬಂಧವು ಗದ್ಯ ಸಾಹಿತ್ಯವಾಗಿದ್ದು, ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ವಿವರಣಾತ್ಮಕವಾಗಿ, ನಿರೂಪಣಾತ್ಮಕವಾಗಿ ಕಲ್ಪನಾತ್ಮಕವಾಗಿ ಅಥವಾ ಚಿಂತನಾತ್ಮಕವಾಗಿ, ಕ್ರಮಬದ್ಧವಾಗಿ, ಸುಸಂಬದ್ಧವಾಗಿ ಬರೆದಿರುವ ಬರವಣಿಗೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಮಾಹಿತಿಯನ್ನು ಸಂಗ್ರಹಿಸಿ ಅಥವಾ ತನ್ನ ಅನುಭವದಿಂದ ಕಲ್ಪನೆಯಿಂದ ವಿಷಯವನ್ನು ರೂಪಿಸಿ ಸಂಘಟಿಸಿ ಸುಸಂಬದ್ಧವಾಗಿ, ಶುದ್ಧ ಭಾಷೆಯಲ್ಲಿ ಬರೆಯಲಾಗಿರುತ್ತದೆ. ಪ್ರಬಂಧದಲ್ಲಿ ಒಂದು ನಿರ್ದಿಷ್ಟ ವಿಷಯ, ಆ ವಿಷಯದ ಕ್ರಮಬದ್ಧ ಜೋಡಣೆ ಇರುತ್ತದೆ. ವಿಷಯವೊಂದರ ಬಗ್ಗೆ ಅರ್ಥ ಮತ್ತು ಸುಸಂಬದ್ಧ ವಾಕ್ಯಗಳು. ವಾಕ್ಯ ವೃಂದಗಳನ್ನು ಒಂದು ಚೌಕಟ್ಟಿನಲ್ಲಿ ಬರೆಯಲಾಗುತ್ತದೆ. ಓದುಗರಿಗೆ ವಿಷಯದ ಸಮಗ್ರ ಚಿತ್ರಣವನ್ನು ಆಕರ್ಷಕವಾಗಿ ಸುಲಭವಾಗಿ ನೇರವಾಗಿ ಸಂವಹಿಸಲು ಅನುಕೂಲವಾಗುವಂತೆ ಪ್ರಬಂಧ ರಚಿಸಲಾಗುತ್ತದೆ.

ಪ್ರಬಂಧ ರಚನಾ ನಿರೂಪಣೆಯಲ್ಲಿ ವಿಷಯದ ಆಯ್ಕೆ, ವಿಷಯ ವಿಶ್ಲೇಷಣೆ, ಕ್ರೋಢೀಕರನ, ಕರಡು ರಚನೆ, ಪುನರಾವರ್ತನೆ, ವಿನ್ಯಾಸ, ತೀರ್ಮಾನ ಹಾಗೂ ಅಂತಿಮ ಪ್ರತಿ ಬಹುಮುಖ್ಯವಾದುದು. ಇವು ಪ್ರಬಂಧದ ಮೌಲ್ಯವನ್ನು ಹೆಚ್ಚಿಸುವ ಮಾರ್ಗೋಪಾಯಗಳಾಗಿವೆ.

ಪ್ರಬಂಧದ ಭೌತಿಕ ಸ್ವರೂಪ ಸಾಮಾನ್ಯವಾಗಿ ಪ್ರಸ್ತಾವನೆ/ಪೀಠಿಕೆ, ವಿಷಯ ನಿರೂಪಣೆ ಮತ್ತು ವಿಷಯ ಸಮಾಪ್ತಿ/ಉಪಸಂಹಾರ ಎಂಬ ಮೂರು ಪ್ರಧಾನ ಹಂತಗಳಿರುತ್ತವೆ. ಪ್ರಸ್ತಾವನೆ ಆಕರ್ಷಕವಾಗಿಯೂ, ಸಂಕ್ಷಿಪ್ತವಾಗಿಯೂ ಇರಬೇಕು. ಗುರಿ ಹಾಗೂ ವಿಷಯ ಖಚಿತತೆಯನ್ನು ಸ್ಪಷ್ಟಪಡಿಸಬೇಕು. ವಿಷಯ ನಿರೂಪಣೆಯ ಭಾಗವೇ ಪ್ರಬಂಧದ ಜೀವಾಳ.

10th_Kannada_Reader1-5.indd 223 03-04-2019 14:08:06

ಪ್ರಬಂಧದ ಬಗೆಗಳು

ಪ್ರಬಂಧಗಳ ರಚನೆ, ವಸ್ತು, ಉದ್ದೇಶ ಹಾಗೂ ತಾರ್ಕಿಕ ಸಂಯೋಜನೆಯನ್ನು ವಸ್ತುನಿಷ್ಠವಾಗಿ ಆಧರಿಸಿ ಪ್ರಬಂಧಗಳನ್ನು ಚಿಂತನಾತ್ಮಕ, ವೈಚಾರಿಕ, ಕಥನಾತ್ಮಕ, ಆತ್ಮಕಥನಾತ್ಮಕ, ಸಂಶೋಧನಾತ್ಮಕ, ವಿಮರ್ಶನಾತ್ಮಕ, ವಿವರಣಾತ್ಮಕ, ವರ್ಣನಾತ್ಮಕ, ನಿರೂಪಣಾತ್ಮಕ, ಚರ್ಚಾತ್ಮಕ, ಪ್ರತಿಪಾದನಾತ್ಮಕ, ಚಿತ್ರಾತ್ಮಕ, ವಾದಾತ್ಮಕ, ಹಾಸ್ಯಾತ್ಮಕ, ಆತ್ಮೀಯ, ಕಾಲ್ಪನಿಕ, ವ್ಯಕ್ತಿಚಿತ್ರ, ಹರಟೆ, ಪತ್ರಪ್ರಬಂಧ ಮುಂತಾಗಿ ವರ್ಗೀಕರಿಸಬಹುದು.

ಪ್ರಬಂಧ ರಚನೆ ಮತ್ತು ಅಧ್ಯಯನದ ಪ್ರಾಮುಖ್ಯತೆ

ಭಾಷಾ ಕೌಶಲಗಳ ರಚನೆ ಮತ್ತು ಪ್ರಯೋಗ ಸಾಮರ್ಥ್ಯ ಬೆಳೆಸಿಕೊಳ್ಳಲು ಪ್ರಬಂಧ ರಚನೆಯು ಸರಳ ಮತ್ತು ಉಪಯುಕ್ತ ಸಾಧನ. ಭಾಷೆ, ವಿಷಯ ಸಾಹಿತ್ಯ ಹಾಗೂ ಒಟ್ಟಾರೆ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಪ್ರಬಂಧ ಸಾಹಿತ್ಯವು ಒಂದು ಉತ್ತಮ ಸಾಧನ.

1. ಸುಸಂಬದ್ಧ ವಾಕ್ಯಗಳು, ವಾಕ್ಯ ವೃಂದಗಳ ರಚನೆಯ ಸಾಮರ್ಥ್ಯ ಗಳಿಸಿಕೊಳ್ಳಲು
2. ಸ್ವಯಂ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಗಳಿಸಿಕೊಳ್ಳಲು
3. ಓದುಗಾರಿಕೆಯ ಹವ್ಯಾಸ ಮತ್ತು ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಲು
4. ಒಂದು ವಿಷಯದ ಬಗ್ಗೆ ಸ್ವತಂತ್ರವಾಗಿ ಯೋಚನೆ ಮಾಡಲು
5. ವಿಷಯವನ್ನು ಒಂದು ಚೌಕಟ್ಟಿನೊಳಗಿಟ್ಟು ಬರೆಯುವ ಸಾಮರ್ಥ್ಯ ಗಳಿಸಲು
6. ತರ್ಕಬದ್ಧ ಬರವಣಿಗೆಯ ಕೌಶಲಗಳಲ್ಲಿ ಸಾಮರ್ಥ್ಯ ಗಳಿಸಲು.
7. ಸೃಜನ ಶೀಲ ಚಿಂತನೆ ಹಾಗೂ ಅಭಿವ್ಯಕ್ತಿ ಕೌಶಲ ಬೆಳೆಸಿಕೊಳ್ಳಲು
8. ವಿಷಯ ಗ್ರಹಿಕೆ ಮತ್ತು ಜ್ಞಾನಾರ್ಜನೆ ಬೆಳೆಸಿಕೊಳ್ಳಲು
9. ಮಾನವೀಯ ಮೌಲ್ಯಗಳೊಂದಿಗೆ ವ್ಯಕ್ತಿತ್ವ ವಿಕಾಸಕ್ಕೆ
10. ವಿಷಯ ಸಂಗ್ರಹ ಮತ್ತು ವಿವರಣಾತ್ಮಕ ಕೌಶಲ ಬೆಳೆಸಿಕೊಳ್ಳಲು – ಪ್ರಬಂಧ ರಚನೆ ಸಹಕಾರಿಯಾಗಿರುತ್ತದೆ.

ಪ್ರಬಂಧಗಳು ಬಹಳ ಸ್ವಾರಸ್ಯವಾಗಿರಬೇಕು. ಇಲ್ಲದಿದ್ದರೆ ಅವು ಓದುಗರಿಗೆ ಬೇಸರ ತರುತ್ತವೆ. ಪ್ರಬಂಧದ ವಸ್ತು ಯಾವುದೇ ಆಗಬಹುದು. ವಿಷಯ ನಿರೂಪಣೆ, ಭಾಷೆಯ ನಿಯಂತ್ರಣ ಇಷ್ಟಿದ್ದರೆ ಸಾಕು. ಒಳ್ಳೆಯ ಪ್ರಬಂಧ ಸೃಷ್ಟಿಯಾಗುತ್ತದೆ.

ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ, ಕ್ರೀಡೆ, ಪ್ರಚಲಿತ ವಿದ್ಯಮಾನಗಳು ಹೀಗೆ ಯಾವುದೇ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯುವಂತೆ ಕೇಳಬಹುದು. **ಉದಾಹರಣೆಗೆ**, ಕೆಳಗಿನ ವಿಷಯಗಳನ್ನು ಗಮನಿಸಿ:

1.ನನ್ನ ಮೆಚ್ಚಿನ ಕವಿ, 2.ವೃತ್ತಪತ್ರಿಕೆಗಳು, 3.ಪರಿಸರ ಮಾಲಿನ್ಯ, 4.ಸಿನಿಮಾ, 5.ವಾಯುಮಾಲಿನ್ಯ, 6.ಮೈಸೂರು ದಸರಾ, 7.ನದಿಗಳ ರಾಷ್ಟ್ರೀಕರಣ ಇತ್ಯಾದಿ.

ಹೀಗೆ ಜಗತ್ತಿನ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಯಾವುದೇ ವಿಷಯವನ್ನಾದರೂ ನೀಡಿ ಅದರ ಬಗ್ಗೆ ಪ್ರಬಂಧ ಬರೆಯಲು ಕೇಳಬಹುದು. ಯಾವ ವಿಷಯದ ಬಗ್ಗೆ ಕೇಳಿದರೂ ಪ್ರಬಂಧ ಬರೆಯಬೇಕಾದರೆ ಆ ವಿಷಯದ ಬಗ್ಗೆ ತಿಳುವಳಿಕೆ ಇರಬೇಕು. ಅದಕ್ಕಾಗಿ ಪ್ರತಿನಿತ್ಯ ದಿನಪತ್ರಿಕೆಗಳನ್ನು ಓದಿ ಅಂದಂದಿನ ವಿದ್ಯಮಾನಗಳನ್ನು ಅರಿತುಕೊಳ್ಳಬೇಕು. ಲೋಕಜ್ಞಾನವನ್ನು ವಿಸ್ತರಿಸುವಂತಹ ಹಲವಾರು ಪುಸ್ತಕಗಳನ್ನು ಆಗಾಗ ಓದುತ್ತಿರಬೇಕು.

ಸಾಮಾನ್ಯವಾಗಿ ಪ್ರಬಂಧ ಬರೆಯುವಾಗ ಮುಖ್ಯವಾಗಿ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು: ಅದನ್ನು ಪ್ರಾರಂಭಿಸುವ ವಿಧಾನ ಅಥವಾ ಪೀಠಿಕೆ; ಎರಡು: ವಿಷಯದ ವಿವರಣೆ; ಮೂರು: ಮುಕ್ತಾಯ.

ಯಾವುದೇ ಪ್ರಬಂಧವನ್ನಾದರೂ ಪ್ರಾರಂಭಿಸುವುದಕ್ಕೆ ಮುನ್ನ ಆ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ವ ಪೀಠಿಕೆಯನ್ನು ಬರೆಯಬೇಕು. ಇದು ತುಂಬ ಮುಖ್ಯವಾದ ಅಂಶ. ವಿಷಯ ವಿವರಣೆಯಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ನಿರೂಪಿಸಬೇಕು. ಅಗತ್ಯವಿದ್ದಲ್ಲಿ ಕೊಟ್ಟಿರುವ ವಿಷಯದ ಸಾಧಕ–ಬಾಧಕಗಳನ್ನು ಚರ್ಚಿಸಬೇಕು. ವಿಷಯವನ್ನು ವೈಚಾರಿಕವಾಗಿ ವಿಶ್ಲೇಷಿಸಬೇಕಾದ್ದು ಅಗತ್ಯ. ಪ್ರಬಂಧದ ಕಡೆಯಲ್ಲಿ ಮೇಲೆ ಹೇಳಿದ ವಿಷಯಗಳೆಲ್ಲವನ್ನೂ ಕ್ರೋಡೀಕರಿಸಿ ಮುಕ್ತಾಯದ ಮಾತುಗಳನ್ನು ಹೇಳಬೇಕು. ಇಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಬೇಕು.

10th_Kannada_Reader1-5.indd 224 03-04-2019 14:08:06

ಪ್ರಬಂಧವು ಸರಳವಾದ ಗ್ರಾಂಥಿಕ ಭಾಷೆಯಲ್ಲಿರಬೇಕು. ಪದಗಳ ರಚನೆ ಹಾಗೂ ಭಾಷಾಪ್ರಯೋಗದ ಕಡೆ ಗಮನವಿರಬೇಕು. ಅಂದವಾಗಿ ತಪ್ಪಿಲ್ಲದಂತೆ ಬರೆಯಬೇಕಾದ್ದು ಮುಖ್ಯ.

* * * *

ಕಂಪ್ಯೂಟರ್

ಮಾದರಿ:

1. ಕಂಪ್ಯೂಟರ್ ನಡೆದು ಬಂದ ದಾರಿ
2. ವಿಜ್ಞಾನ ವಿಸ್ಮಯ
3. ಕಂಪ್ಯೂಟರ್ ಬಳಕೆ
4. ಉಪಯೋಗಗಳು
5. ಉಪಸಂಹಾರ.

ಆಧುನಿಕ ಯುಗದ ವೈಜ್ಞಾನಿಕ ವಿಸ್ಮಯಗಳಲ್ಲಿ ಕಂಪ್ಯೂಟರ್ ಒಂದಾಗಿದೆ. ಇದು ಹಲವಾರು ವಿಧಗಳಲ್ಲಿ ಮಾನವನಿಗೆ ಸಹಾಯಕ. **ಉದಾಹರಣೆಗೆ,** ಆಕಾಶದಲ್ಲಿ ಧಾವಿಸುವ ರಾಕೆಟ್ಟಿನ ದಿಕ್ಕು ಮತ್ತು ದೂರಗಳ ನಿಖರತೆ ಕಂಪ್ಯೂಟರಿನಿಂದ ಗೊತ್ತಾಗುತ್ತದೆ. ರಾಕೆಟ್ ಯಾವ ದಾರಿಯಲ್ಲಿ ಸಾಗಬೇಕು ಎಂಬ ಸ್ಪಷ್ಟತೆ ಕಂಪ್ಯೂಟರಿನ ನೆನಪಿನಲ್ಲಿರುತ್ತದೆ. ರಾಕೆಟ್ಟಿಗೆ ಕಂಪ್ಯೂಟರ್‌ನಿಂದ ಸೂಚನೆಗಳು ಸಾಗುತ್ತವೆ. ಈ ಸೂಚನೆಗಳಿಗೆ ಅನುಸಾರವಾಗಿ ರಾಕೆಟ್ಟಿನ ನಿಯಂತ್ರಣ ವ್ಯವಸ್ಥೆ ಇರುತ್ತದೆ. ತನಗೆ ಒದಗುವ ದತ್ತಾಂಶಗಳ ಆಧಾರದ ಮೇಲೆ ಗಣಿತದ ಕೆಲಸಗಳನ್ನು ತಾನೇ ತಾನಾಗಿ ನಡೆಸುವ ಯಂತ್ರ ಕಂಪ್ಯೂಟರ್. ಮೊದಲಿಗೆ ವಸ್ತು ಮತ್ತು ಘಟನೆಗಳನ್ನು ಎಣಿಸಲು ಮಾನವ ಕೈ ಬೆರಳುಗಳನ್ನು ಎಣಿಸುತ್ತಿದ್ದ. ಮುಂದೆ ಮರಳಿನಲ್ಲಿ ಸಾಲಾಗಿ ಕಲ್ಲುಗಳನ್ನು ಜೋಡಿಸಿ, ತಂತಿಗಳ ಮೇಲೆ ಮಣಿಗಳನ್ನು ತೂರಿಸಿದ ಮಣಿ ಚೌಕಟ್ಟು ಬಳಸಿ ಎಣಿಕೆ ಮಾಡುತ್ತಿದ್ದ. ಸಂಖ್ಯೆಗಳನ್ನು ಫ್ರಾನ್ಸಿನ ಬ್ಲೇಸ್ ಪಾಸ್ಕಲ್ (1623–62) ತುಂಬಾ ಯೋಚಿಸಿ ಯಂತ್ರವೊಂದನ್ನು ರಚಿಸಿದ. ಅನಂತರ ಜರ್ಮನಿಯ ಲೀಬ್ನಿಜ್ (1647–1716) ಉತ್ತಮ ತರದ ಗಣಕಯಂತ್ರ ರಚಿಸಿದ. ಅನಂತರ ಇಂಗ್ಲೆಂಡಿನ ಚಾರ್ಲ್ಸ್ ಜಾಬ್ಬೇಜ್ (1792–1871) ಎಂಬಾತ ಇಂದಿನ ಕಂಪ್ಯೂಟರನ್ನು ಹೋಲುವ ಗಣಕಯಂತ್ರ ರಚಿಸಿದ. 20ನೇ ಶತಮಾನದಲ್ಲಿ ಎಲೆಕ್ಟ್ರಾನಿಕ್ ವಿಧಾನಗಳಿಂದ ಅತಿ ಶೀಘ್ರ ಲೆಕ್ಕಾಚಾರ ಮಾಡುವ ಗಣಕಯಂತ್ರಗಳ ಕಂಪ್ಯೂಟರ್‌ಗಳ ನಿರ್ಮಾಣವಾಯಿತು. ಕಂಪ್ಯೂಟರ್‌ಗಳಲ್ಲಿ ಎರಡು ಬಗೆ : ಅಂಕಗಳ ಕಂಪ್ಯೂಟರ್ ಮತ್ತು ಸಾದೃಶ ಕಂಪ್ಯೂಟರ್. ಅಂಕಗಳ ಕಂಪ್ಯೂಟರ್, ಸಂಖ್ಯೆ ಅಥವಾ ಅಕ್ಷರಗಳ ಸಹಾಯದಿಂದ ಪ್ರಶ್ನೆಗೆ ಉತ್ತರ ಕಂಡು ಹಿಡಿಯುತ್ತದೆ. ಸಾದೃಶ ಕಂಪ್ಯೂಟರ್ ವಿದ್ಯುತ್ ವಿಭವ, ಬಲ ಇತ್ಯಾದಿ ಬಳಕೆಗೆ ಸಿಲುಕದ ಪರಿಮಾಣಗಳಿಂದ ಕೆಲಸ ಮಾಡುತ್ತದೆ.

ಕಾರು, ಸ್ಕೂಟರ್ ಮುಂತಾದ ವಾಹನಗಳ ವೇಗವನ್ನು ಸೂಚಿಸಲು ಮಾಪಕಗಳಿರುತ್ತವೆ. ಚಕ್ರ ತಿರುಗುವ ವೇಗಕ್ಕೆ ಅನುಗುಣವಾಗಿ ಮಾಪಕದಲ್ಲಿ ಕಾಂತ ಕ್ಷೇತ್ರದ ತೀವ್ರತೆ ಹೆಚ್ಚು–ಕಡಿಮೆ ಆಗುತ್ತದೆ. ಅಂಕಗಳ ವಿಧಾನದಲ್ಲಿ ಬಿಡಿಬಿಡಿ ಅಂಶಗಳು ಲೆಕ್ಕಾಚಾರದಲ್ಲಿ ಬಂದರೆ ಸಾದೃಶ ವಿಧಾನದಲ್ಲಿ ಗಣನೆಗೆ ಬರುವ ಅಂಶಗಳು ಅವಿಚ್ಛಿನ್ನವಾಗಿರುತ್ತವೆ. ಸಾದೃಶ ಕಂಪ್ಯೂಟರುಗಳು ಅಂಕಗಳ ಕಂಪ್ಯೂಟರುಗಳಿಗಿಂತ ಸರಳ. ಆದರೆ ಅಂಕಗಳ ಕಂಪ್ಯೂಟರುಗಳು ಹೆಚ್ಚು ನಿಖರವಾದವು.

ಕಂಪ್ಯೂಟರುಗಳು ಕೆಲಸ ಮಾಡಲು ವಿದ್ಯುತ್ ಬೇಕು. ಈ ವಿದ್ಯುತ್ ಬೇಕೆಂದಾಗ ಸ್ವಲ್ಪ ಕಾಲ ನಿಲ್ಲುತ್ತದೆ. ಮತ್ತೊಂದು ಕ್ಷಣದಲ್ಲಿ ಹರಿಯುತ್ತದೆ. ಈ ಎರಡು ಸ್ಥಿತಿಗಳನ್ನೇ ಸಂಖ್ಯಾಂಕಗಳಿಂದ ಲೆಕ್ಕಾಚಾರ ಮಾಡುವುದನ್ನು 'ದ್ವಿಮಾನ ಪದ್ಧತಿ' ಎನ್ನುವರು. ಕಂಪ್ಯೂಟರ್ 1.0 ರೂಪದ ದ್ವಿಮಾನ ಸಂಕೇತಗಳನ್ನು ಫಿ ಜ ರೀತಿಯ ಬೀಜಗಣಿತದ ನಿರೂಪಣೆಯನ್ನಾಗಿ ಗ್ರಹಿಸುತ್ತದೆ. ಅದು ನೀಡುವ ಉತ್ತರ ಫಿ ಜ ಗಳನ್ನು ಒಳಗೊಂಡ ಬೀಜಗಣಿತದ ರೀತಿಯಲ್ಲೇ ಇರುತ್ತದೆ. ಲಿಪಿಯಲ್ಲಿರುವ ಬರವಣಿಗೆ ಕಂಪ್ಯೂಟರಿನ ದ್ವಿಮಾನ ಪದ್ಧತಿಯ ಭಾಷೆಯಾಗಿ ರೂಪಾಂತರ ಹೊಂದುತ್ತದೆ.

ಕಂಪ್ಯೂಟರ್‌ಗಳ ಬಳಕೆ ಅತ್ಯಂತ ಉಪಯುಕ್ತವಾಗುವುದಕ್ಕೆ ಕಾರಣವೆಂದರೆ ಲೆಕ್ಕಾಚಾರದಲ್ಲಿ ಅದರ ಶೀಘ್ರಗತಿ. ಒಬ್ಬ ಮನುಷ್ಯನ ಮೆದುಳು 3 ವರ್ಷ ಸತತವಾಗಿ ಲೆಕ್ಕಾಚಾರ ಮಾಡಿ ಪಡೆಯುವ ಉತ್ತರವನ್ನು ಕಂಪ್ಯೂಟರು ಒಂದು ನಿಮಿಷದಲ್ಲಿ ನೀಡಬಲ್ಲದು. ಆಕಾಶಯಾನ, ವೈದ್ಯಕೀಯ, ಸ್ಫಟಿಕದ ರಚನೆ, ಉತ್ಪಾದಿಸಲಾದ ವಸ್ತುಗಳ ಎಣಿಕೆ ಮುಂತಾದ ಬಗೆಬಗೆಯ ಕ್ಷೇತ್ರಗಳನ್ನು ಕಂಪ್ಯೂಟರ್ ಜಾಲಗಳು ಆವರಿಸಿವೆ.

* * * *

10th_Kannada_Reader1-5.indd 225 03-04-2019 14:08:06

Kannada Reader - Class X
Text Book Development Team

Reviewer
Dr. TAMIL SELVI
Professor and Head
Department of Kannada
University of Madras,
Chennai – 600 005.

Co-ordinator
Mr. K. CHANDRASEKARAN
Lecturer, DIET, Chennai - 600 005.

Authors
Mr. K. KUMAR ACHAR
P.G. Asst. in Kannada
Karnataka Sangha Hr. Sec. School
T.Nagar, Chennai - 600 017.

Mr. C. SADASHIVA MURTHY
P.G. Asst. in Kannada
Govt. Hr. Sec. School
Thalavadi, Erode Dt. 638 461.

Mr. N.BASAVARAJU
B.T. Asst. in Kannada
Govt. Hr. Sec. School
Thalavadi, Erode Dt. 638 461

Mr. JOHNSON SUKUMAR
B.T. Asst. in Kannada
Govt. Hr. Sec. School
Panaka Halli
Thalavadi, Erode Dt. 638 461

Mr. T.R. KANNAN
B.T. Asst. in Kannada
Govt. Hr. Sec. School
Madhagondapalli, Krishnagiri Dt. 635 114

Mr. K. ANTHONY MUTHU
B.T. Asst. in Kannada
Govt. Hr. Sec. School
Thalavadi, Erode Dt. 638 461.

Art and Design Team

Layout
Prasanth
Adison Raj
Arun Kamaraj Palanisamy

Wrapper Design
Kathir Arumugam

In-QC
Jerald Wilson
Rajesh Thangappan

Co-ordination
Ramesh Munisamy

This book has been printed on 80 G.S.M.
Elegant Maplitho paper.

Printed by offset at:

10th_Kannada_Reader1-5.indd 226 03-04-2019 14:08:07

NOTES

10th_Kannada_Reader1-5.indd 227 03-04-2019 14:08:07

NOTES

10th_Kannada_Reader1-5.indd 228 03-04-2019 14:08:07